



ಬದುಕಿನ ಇನ್ನೊಂದು ಹಾದಿ

ಭಾರತೀಯ ಸಾಧುಗಳು, ಯೋಗ ಮತ್ತು ಮನೋಚಿಕಿತ್ಸೆ

ಮೂಲ: ಆರ್.ಎಲ್. ಕಪೂರ್

ಕನ್ನಡಕ್ಕೆ: ಡಾ. ಆರ್. ಲಕ್ಷ್ಮೀನಾರಾಯಣ್



ರವಿ ಎಲ್. ಕಪೂರ (1938–2006)

National Institute of Advanced Studiesನಲ್ಲಿ ಪ್ರಾಧ್ಯಾಪರಾಗಿ ಸೇವೆ ಸಲ್ಲಿಸಿದ್ದರು. ನಾಲ್ಕು ವರ್ಷಗಳ ಕಾಲ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಮಾನಸಿಕ ವಿಘಟನೆಯ ಮಾದರಿಗಳನ್ನು ಅಭ್ಯಾಸಿಸಿದ್ದಾರೆ. ಈ ವಿಷಯವಾಗಿ The Great Universe of Kota ಎನ್ನುವ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದು 'ಕೋಟ ಮಹಾಜಗತ್ತು' ಎನ್ನುವ ಹೆಸರಿನಲ್ಲಿ ಶಿವರಾಮ ಕಾರಂತರಿಂದ ಕನ್ನಡಕ್ಕೆ ಅನುವಾದಿತವಾಗಿದೆ. ಕಪೂರರು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಫುಲ್ ಬ್ರೈಟ್ ಸ್ಕಾಲರ್ ಇನ್ ರೆಸಿಡೆಂಟ್ ಆಗಿದ್ದವರು. ಮಾನಸಿಕ ಆರೋಗ್ಯದ ವಿಷಯವಾಗಿ ಕೆಲಸ ಮಾಡುತ್ತಿರುವ ಜಗತ್ತಿನ ಹಲವು ಸಂಸ್ಥೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ತೊಡಗಿಕೊಂಡಿದ್ದವರು. ಇವುಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಒಂದು.

ಪರಸ್ಪರ

ಬದುಕಿನ ಇನ್ನೊಂದು ಹಾದಿ

ಭಾರತೀಯ ಸಾಧುಗಳು, ಯೋಗ ಮತ್ತು ಮನೋಚಿಕಿತ್ಸೆ

ಇಂಗ್ಲಿಷ್ ಮೂಲ

ಆರ್.ಎಲ್. ಕಪೂರ

ಸಂಪಾದಕರು

ಮಾಳವಿಕಾ ಕಪೂರ

ಡೋರೋಥಿ ಬ್ಯೂಗ್ಲಸ್

ಕನ್ನಡಕ್ಕೆ

ಆರ್. ಲಕ್ಷ್ಮೀನಾರಾಯಣ

ಪರಸ್ಪರ

ಚಿಕ್ಕನಹಳ್ಳಿ, ಸೂಲಿಕೆರೆ ಅಂಚೆ, ಬೆಂಗಳೂರು 560 060

BADUKINA ENNONDU HADI : Yoga Bharathiya Shadhu Santharu Manochikithsthe, Traslation of R.L. Kapur's Another Way to Live : A Psychiatrist Among Indian Ascetics, Traslated by R. Lakshmi Narayan, Published by **Paraspara Prakashana**, Chikkanahalli, Sulikere Post, Bangalore - 560 060. Mob: 9880910113, Email : parasparapublication@gmail.com.

Size : Demy 1/8

Paper Used : 70 GSM NS Bookprint

First Edition : 2017

Pages : 252+8

Price : 260/-

Copies : 1000

Coverpage : Arunkumar G.

ಮಾರಾಟದ ಹಕ್ಕು : ಪ್ರಕಾಶಕರದು

ಪರಸ್ಪರ ಬಳಗ
ಡಾ. ಮಹೇಶ್‌ಕುಮಾರ್ ಸಿ.ಎಸ್.
ಗುಂಡೀಗೆರೆ ವಿಶ್ವನಾಥ್ ಜಿ.ಎಸ್.
ಡಾ. ಪುರುಷೋತ್ತಮ ಡಿ.
ರವಿಕುಮಾರ್ ಎಲ್.
ರಮೇಶ್ ನಿಂಬೆಮರದಳ್ಳಿ

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

ನನ್ನ ಅಜ್ಜಿಯ ಅಕ್ಕರೆಯ ಸವಿ ನೆನಪಿಗೆ

– ಆರ್. ಲಕ್ಷ್ಮೀನಾರಾಯಣ್

ಮುನ್ನುಡಿ

ರವಿ ಕಪೂರರು ತಮ್ಮ ವೃತ್ತಿಯ ಭದ್ರಕೋಟೆಯಲ್ಲಿ ಬಂಧಿತರಾಗುಳಿಯಲಿಚ್ಛಿಸದ ವಿರಳ ಮನೋಚಿಕಿತ್ಸಕರ ವರ್ಗಕ್ಕೆ ಸೇರಿದವರು. ರವಿಯವರ ಜ್ಞಾನಶಿಸ್ತಾದ ಮನೋಚಿಕಿತ್ಸೆಯು ತನ್ನ ಲೋಕ ದೃಷ್ಟಿಯಲ್ಲಿ ಮತ್ತು ವಿಧಾನದ ದೃಷ್ಟಿಯಲ್ಲಿ ಪಾಶ್ಚಾತ್ಯ ಪಾಸಿಟಿವಿಸ್ಟ್[1] (Positivist). ದೃಷ್ಟಿಕೋನಕ್ಕೆ ಸೇರಿದ್ದು, ಆದರೂ, ಅದನ್ನು ಪ್ರಶ್ನಿಸುವ ಮನೋವೃತ್ತಿ ಮತ್ತು ಶೋಧಕ ಪ್ರವೃತ್ತಿಯನ್ನು ವರವಾಗಿ ಪಡೆದುಕೊಂಡಿದ್ದ ರವಿಯವರು ತಮ್ಮ ಈ ಜ್ಞಾನಶಿಸ್ತಿನಿಂದ ತಾವು ಕಲಿತದ್ದನ್ನೂ ಮೀರಿಹೋಗುವ ಸಾಹಸಕ್ಕೆಳಸುವುದು ತೀರಾ ಅನಿವಾರ್ಯವೇ ಆಗಿತ್ತು. ರವಿ ಅವರ ಸೃಜನಾತ್ಮಕ ತಳಮಳ ನಮ್ಮ ಪಾಲಿನ ಲಾಭವೇ ಸರಿ. ಇಂದು ಜಗತ್ತಿನೆಲ್ಲೆಡೆ ಹೆಚ್ಚು ಹೆಚ್ಚು ಜನರು ಭಾವನಾತ್ಮಕ ಬೇಗುದಿಯಿಲ್ಲದಿರುವ ಸ್ಥಿತಿಯ ಕಡೆಗೆ ನೋಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ರವಿ ಅವರು, ಸುದೀರ್ಘ ಕಾಲದಿಂದಲೂ 'ಕ್ಷೇಮದ' ಅಷ್ಟೇ ಏಕೆ 'ಆನಂದದ' ಸ್ಥಿತಿಯ ಭರವಸೆಯನ್ನು ಜನತೆಗೆ ನೀಡುತ್ತ ಬಂದಿರುವ ನಮ್ಮದೇ ಆದ ಭಾರತೀಯ ಪರಂಪರೆಗಳತ್ತ ದೃಷ್ಟಿಹಾಯಿಸುವ ಕೆಚ್ಚು ಮತ್ತು ಕಾಣ್ಕೆಯನ್ನು ತೋರಿದರು.

"ಬದುಕಿನ ಇನ್ನೊಂದು ಹಾದಿ" ಕೃತಿಯು ಅವರ ಅಕಾಲಿಕ ಮರಣದ ಕಾಲಕ್ಕೆ ಅಪೂರ್ಣವಾಗಿತ್ತು. ರವಿ ಅವರ ಈ ಕೃತಿ ವಿಶಿಷ್ಟವೆನಿಸುವುದು ಶೈಕ್ಷಣಿಕ ಅರ್ಥದಲ್ಲಿ ಇದು ಸಂಶೋಧನೆಯ ಫಲಶ್ರುತಿಯಾಗಿ ಬಂದದ್ದು ಎಂಬ ಕಾರಣಕ್ಕಲ್ಲ; ಬದಲಿಗೆ ಅದು ರವಿ ಅವರ ವೈಯಕ್ತಿಕ ಅನುಭವ ಮತ್ತು ಬದ್ಧತೆಗಳ ಜೀವಂತಿಕೆಯಿಂದ ಕೂಡಿದ ಸಂಶೋಧನ ಕೃತಿ ಎಂಬ ಕಾರಣಕ್ಕೆ ಹಾಗೂ ಅದು ಅವರ ಹಲವಾರು ವರ್ಷಗಳ ಯೋಗಾಭ್ಯಾಸ ಮತ್ತು ಹಿಮಾಲಯದ ಸಾಧುಗಳೊಂದಿಗಿನ ನೂರಾರು ಚರ್ಚೆಗಳ

---

1. ಪಾಸಿಟಿವಿಸಮ್ ಎಂಬುವುದು ವಿಜ್ಞಾನದ ಒಂದು ಚಿಂತನಾ ಪಂಥವನ್ನು ಸೂಚಿಸುತ್ತದೆ. ಈ ಪಂಥದ ಪ್ರಕಾರ ವಿಜ್ಞಾನವು ಇಂದ್ರಿಯ ಗ್ರಾಹ್ಯ ಸಂಗತಿಗಳನ್ನು ಮಾತ್ರ ಪರಿಗಣಿಸಬೇಕು. ವಿಜ್ಞಾನವು ಪ್ರಾಯೋಗಿಕ ವಿಧಾನದ ಮೇಲೆ ಅವಲಂಬಿತವಾಗಿರಬೇಕಾಗುತ್ತದೆ. ಇದಕ್ಕಾಗಿ ನೈಸರ್ಗಿಕ ವಿಜ್ಞಾನಗಳ ಅಧ್ಯಾಯನ ವಿಧಾನವೇ ಜ್ಞಾನ ಮಾರ್ಗದ ಶ್ರೇಷ್ಟ ಮಾರ್ಗ ಎಂದು ಈ ಪಂಥ ಪ್ರತಿಪಾದಿಸುತ್ತದೆ.

ಫಲಿತವೆಂಬ ಕಾರಣಕ್ಕೆ. ಅದರಿಂದಾಗಿಯೇ ಅದು ಎಲ್ಲರನ್ನೂ ಪ್ರಭಾವಿತಗೊಳಿಸುವ ಕಥನದ ರೂಪವನ್ನು ಪಡೆದುಕೊಂಡಿದೆ. ಅನ್ವೇಷಕನ ಆದರ್ಶವಾದ ಮತ್ತು ವಿಜ್ಞಾನಿಯ ಸಂದೇಹವಾದಗಳ ನಡುವೆ ಹಾಗೂ ತಮ್ಮದೇ ಸ್ವಭಾವದ ವೈಚಾರಿಕ ಮತ್ತು ಭಾವನಾತ್ಮಕ ಅಂಶಗಳ ನಡುವೆ ಸುಂದರ ಸಮತೋಲನವನ್ನು ಸಾಧಿಸುವಲ್ಲಿ ರವಿ ಅವರು ಯಶಸ್ಸನ್ನು ಸಾಧಿಸಿದ್ದಾರೆ. ಆಧ್ಯಾತ್ಮ ಮತ್ತು ಮನೋವಿಜ್ಞಾನಗಳಿಗಿರುವ ಸಂಬಂಧವನ್ನು ಕುರಿತ ಅವರ ಆಲೋಚನೆಗಳು ಅತ್ಯಂತ ಮೌಲ್ಯಯುತವಾದವು. ಆ ಚರ್ಚೆಯಲ್ಲಿ ಭಾರತೀಯ ಮನೋಚಿಕಿತ್ಸಕರು, ಮನೋವಿಜ್ಞಾನಿಗಳು ಮತ್ತು ದಾರ್ಶನಿಕರು ಮುನ್ನೆಲೆಯಲ್ಲಿದ್ದಾರೆ. ರವಿಯವರ ಅಪೂರ್ಣ ಕಾರ್ಯವನ್ನು ಪೂರ್ಣಗೊಳಿಸಿದ್ದಕ್ಕಾಗಿ ಹಾಗೂ ನಮಗೆ ಲಭ್ಯವಾಗಿರುವ ಕಾಲಾವಧಿಯಲ್ಲಿ ನಮ್ಮ ಜೀವನವನ್ನು ಬಾಳಬಹುದಾದ ಹಲವಾರು ರೀತಿಗಳ ಕಡೆಗೆ ನಮ್ಮ ಮನಸ್ಸನ್ನು ಸೆಳೆದದ್ದಕ್ಕಾಗಿ ನಾವೆಲ್ಲರೂ ಮಾಲವಿಕಾ ಅವರಿಗೆ ಮತ್ತು ಡೋರೋಥಿ ಬ್ಯುಗ್ಲಸ್ ಅವರಿಗೆ ಕೃತಜ್ಞರಾಗಿರಬೇಕು.

ಸುಧೀರ್ ಕಾಕರ್

ಸಂಪಾದಕರ ಮಾತು-1

2006ರ ನವೆಂಬರ್ 24 ರಂದು ತಮ್ಮ ಇಹಲೋಕಯಾತ್ರೆ ಮುಗಿಸಿದ ನನ್ನ ಪತಿ ಡಾ. ರವಿ ಕಪೂರರ ಬದುಕಿನ ಸಾರ್ಥಕ್ಯದ ಸಲುವಾಗಿ ನಾನು ಮಾಡಲೇಬೇಕಾಗಿದ್ದ ಕಾರ್ಯ ಈ ಪುಸ್ತಕದ ಪ್ರಕಟಣೆ. ಇಲ್ಲಿ ನಾನು ಈ ಪುಸ್ತಕದ ರಚನೆಗೆ ಸಂಬಂಧಿಸಿದ ವಿಚಾರಗಳನ್ನಷ್ಟೇ ಪ್ರಸ್ತಾಪಿಸಲಿಚ್ಛಿಸುತ್ತೇನೆ. ಅದು ನನ್ನ ಮತ್ತು ಅವರ ಬದುಕಿನ ಸಹಯಾತ್ರೆಯ ಒಂದು ಅಂಶವನ್ನು ಪ್ರತಿಬಿಂಬಿಸುವಂಥದೂ ಹೌದು. ನಮ್ಮಿಬ್ಬರಿಗೂ ಪ್ರವಾಸವೆಂದರೆ, ಅದರಲ್ಲೂ ಚಾರಣ ಮಾಡುತ್ತ ಶಿಬಿರದಲ್ಲಿ ತಂಗುತ್ತ ಹೊರ ಜಗತ್ತನ್ನು ಅನ್ವೇಷಿಸುತ್ತ ಸಂಚರಿಸುವುದೆಂದರೆ ಎಲ್ಲಿಲ್ಲದ ಪ್ರೀತಿ. ಹಿಮಾಲಯದ ಪರ್ವತ ಶ್ರೇಣಿಗಳ ಅದ್ಭುತ ಸೌಂದರ್ಯವೆಂದರೆ ನಮಗೆ ಎಲ್ಲಿಲ್ಲದ ಆಕರ್ಷಣೆ. ಗಹನತಮ ಸತ್ಯದ ಬಗೆಗಿನ ರವಿಕಪೂರರ ಅನ್ವೇಷಣೆ ಪ್ರಾಯಶಃ ಅವರ ಯೌವನದ ದಿನಗಳಲ್ಲೇ ಪ್ರಾರಂಭವಾಗಿತ್ತು. 1982ರಲ್ಲಿ ಅವರು ಯೋಗವನ್ನು, ಅದರಲ್ಲೂ ವಿಶೇಷವಾಗಿ ಪತಂಜಲಿಯ ಯೋಗಸೂತ್ರಗಳನ್ನು ಅಧ್ಯಯನ ಮಾಡಲು ಒಂದು ವರ್ಷದ ಅಧ್ಯಯನ ಮತ್ತು ಪ್ರವಾಸದ ರಜೆ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದಾಗ ಅದಕ್ಕೊಂದು ಸುನಿಶ್ಚಿತ ರೂಪ ಸಿಕ್ಕಿತು. ಸುರಕ್ಷಿತವಾದ ಉದ್ಯೋಗವನ್ನು ಬಿಟ್ಟು ಅನಿಶ್ಚಿತವಾದ ಭವಿಷ್ಯದ ಕಡೆಗೆ ಸಾಗಲು ಧೈರ್ಯ ಮತ್ತು ತೀವ್ರವಾದ ಅಂತರ್ನಿರೀಕ್ಷೆ ಬೇಕಾಗುತ್ತದೆ. ಅವರ ಈ ಶೋಧ ಅದರೆಲ್ಲ ನ್ಯೂನತೆಗಳ ಹೊರತಾಗಿಯೂ ಅವರನ್ನು ಅವರ ಹೊರಗಿನ ಆಧ್ಯಾತ್ಮ ಪ್ರಪಂಚಕ್ಕೆ, ಅದರಲ್ಲೂ ವಿಶೇಷವಾಗಿ ಭಾರತದ ಸಾಧಕರು ಮತ್ತು ಸನ್ಯಾಸಿಗಳ ಜಗತ್ತಿಗೆ ಕೊಂಡೊಯ್ದಿತು.

ಗಂಗೋತ್ರಿ ಮತ್ತು ತಪೋವನದೆಡೆಗಿನ ನಮ್ಮ ಮೊದಲ ಚಾರಣದೊಂದಿಗೆ ಈ ಪಯಣ ಆರಂಭವಾಯಿತು. ಹಿಮಾಲಯ ಪರ್ವತ ಶ್ರೇಣಿಯ ಮತ್ತು ಗಂಗೆಯ ಬಗೆಗಿನ ಸೆಳೆತ ನಮ್ಮನ್ನು ಸೆರೆಹಿಡಿದುಬಿಟ್ಟಿತು. ಮನುಷ್ಯನ ಭೌತಿಕ ಕಾಳಜಿಗಳನ್ನೆಲ್ಲ ಬದಿಗೆ ಸರಿಸಿ ಅವನನ್ನು ಆಧ್ಯಾತ್ಮ ಜೀವಿಯನ್ನಾಗಿ ಪರಿವರ್ತಿತಗೊಳಿಸಿಬಿಡುವಂಥ ಸ್ಥಳವೆಂದರೆ ಅದು ಹಿಮಾಲಯ. ನಾಸ್ತಿಕರಾಗಿದ್ದ ರವಿಕಪೂರರು ಅಲ್ಲಿ ಅಜ್ಞೇಯತಾವಾದಿ ಯಾದರು. ನಂಬಿಕೆಯ ವಿಷಯಕ್ಕೆ ಸಂಬಂಧಿಸಿದಂತೆ ಅವರಿನ್ನೂ ಅಪರಿಚಿತ ಕ್ಷೇತ್ರದಲ್ಲಿದ್ದರೆಂದೇ ಹೇಳಬೇಕು. ಅದನ್ನು ಅವರು ಬೆನ್ನಟ್ಟಿ ಹೋಗಬೇಕೆಂದಿದ್ದರು. ಅದು ಎಂದಾದರೂ ತನಗೆ ದೊರೆತೀತೇ ಎಂದು ಅನೇಕ ವೇಳೆ ವಿಸ್ಮಿತರಾಗುತ್ತಿದ್ದರು. ಹಿಮಾಲಯದ

ಆಶ್ರಮಗಳಿಗೆ ಅವರು ಕೈಗೊಳ್ಳುತ್ತಿದ್ದ ವಾರ್ಷಿಕ ತೀರ್ಥಯಾತ್ರೆಗಳು ಮತ್ತು ಸಾಧುಗಳೊಂದಿಗಿನ ಭೇಟಿಯ ಸಂದರ್ಭದಲ್ಲಿ ಅವರಿಗೆ ನಿಶ್ಚಿತವಾಗಿಯೂ ಆಧ್ಯಾತ್ಮದ ಸತ್ವ ಅನುಭವಕ್ಕೆ ಬಂದಿತು. ಅದು ಅವರ ಜೀವನದ ಕೊನೆಯವರೆಗೂ ಮುಂದುವರಿದಿತ್ತು. ತಮ್ಮ ಸಂಶೋಧನೆಗೆ ಅವರು ಸಹಾಯಕರನ್ನು ನೇಮಿಸಿಕೊಳ್ಳಬಹುದಿತ್ತು. ಆದರೆ ಈ ಅನ್ವೇಷಣೆ ಅವರ ಹೃದಯಕ್ಕೆ ಅದೆಷ್ಟು ಪ್ರಿಯವಾದದ್ದಾಗಿತ್ತೆಂದರೆ ತಮ್ಮಷ್ಟೇ ಪರಿಶ್ರಮ ಪೂರ್ವಕವಾಗಿ ಮತ್ತು ಪಕ್ಷಪಾತರಹಿತವಾಗಿ ಬೇರೆಯವರು ಅದನ್ನು ಅನುಸರಿಸುತ್ತಾರೆಂದು ಅವರಿಗೆ ನಂಬಲಾಗುತ್ತಿರಲಿಲ್ಲ. ಇದರಲ್ಲಿ ನನ್ನ ಪಾತ್ರವೇನಿದ್ದರೂ ಅವರ ಯಾತ್ರೆಯಲ್ಲಿ ಅವರಿಗೆ ಅನುಕೂಲಕರಳಾದ ಸಹಯಾತ್ರಿಯದು. ನಿಜ; ನಾನು ವೀಕ್ಷಕಳೂ ಆಗಿದ್ದು ಚಿತ್ರಗಳನ್ನು ತೆಗೆಯುವ, ಟಿಪ್ಪಣಿಗಳನ್ನು ಮಾಡಿಕೊಳ್ಳುವ ಮತ್ತು ಸಾಧು ಸಂನ್ಯಾಸಿಗಳೊಂದಿಗಿನ ಸಂದರ್ಶನದ ವಿಡಿಯೋ ಚಿತ್ರೀಕರಣ ಮಾಡಿಕೊಳ್ಳುವ ಕೆಲಸ ಮಾಡುತ್ತಿದ್ದೆ. ಹಲವು ಬಾರಿ ನಾನು ದೂರವೇ ನಿಲ್ಲುತ್ತಿದ್ದೆ. ಹೆಣ್ಣೊಬ್ಬಳ ಉಪಸ್ಥಿತಿ ಸಾಧುಗಳಿಗೆ ಅನುಕೂಲಕರವೆನಿಸದಿದ್ದ ಸಂದರ್ಭಗಳಲ್ಲಿ ಅನೇಕ ವೇಳೆ ನಾನು ಗೈರುಹಾಜರಾಗುತ್ತಿದ್ದೆ. ಆದರೆ ಅವರ ಪ್ರತಿಯೊಂದು ಅನುಭವದ, ಅವರ ರೋಗಿಗಳ, ಸ್ನೇಹಿತರ ಮತ್ತು ಸಾಮಾನ್ಯರ ಪರಿಚಯ ನನಗಿತ್ತು. ತಮ್ಮ ಅನುಭವ ಕಥನಗಳಲ್ಲಿ ಅವರು ಸದಾ ಮುಚ್ಚುಮರೆಯಿಲ್ಲದೆ ಪಾರದರ್ಶಕವಾಗಿರುತ್ತಿದ್ದರು ಮತ್ತು ನಂಬಲರ್ಹವಾದ ಯಥಾರ್ಥ ಅನುಭವಗಳ ಅನ್ವೇಷಕರಾಗಿದ್ದರು. ಬಹುಶಃ ಅದು ಈ ಪುಸ್ತಕದಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ.

ರಂಗ ಚಟುವಟಿಕೆಗಳ ಬಗೆಗಿನ ರವಿಯವರ ತೀವ್ರವಾದ ಅನುರಕ್ತಿ ಬೇರೆಯವರ ಅಂತರಂಗವನ್ನು ಪ್ರವೇಶಿಸಲು ಮತ್ತು ಅವರೊಂದಿಗೆ ಸಂವಾದಕ್ಕೆ ತೊಡಗಲು ನೆರವಾಯಿತು. ಅವರ ಶಕ್ತಿ ಇರುವುದು ಎಲ್ಲ ವಯಸ್ಸಿನ ಮತ್ತು ಹಿನ್ನೆಲೆಯ ಜನರೊಂದಿಗೆ ಮಾತುಕತೆಯಾಡುವಲ್ಲಿ ಹಾಗೂ ಅವರೊಂದಿಗೆ ತಾದಾತ್ಮ್ಯ ಹೊಂದುವಲ್ಲಿ ಅವರಿಗಿರುವ ಸಾಮರ್ಥ್ಯದಲ್ಲಿ. ಜನರಿಗೆ ಹತ್ತಿರವಾಗುವಲ್ಲಿಯೂ ಅವರಿಗೆ ಇದು ಅನುವಾಗಿದೆ. ಜನರೊಂದಿಗಿನ ಅವರ ಗಾಢ ಸಂಬಂಧಗಳು ಮತ್ತು ಇದರಿಂದ ಅವರಿಗಾಗುತ್ತಿದ್ದ ನೋವಿನಿಂದಾಗಿ ಕೆಲವೊಮ್ಮೆ ಜನರೊಂದಿಗೆ ಸ್ವಲ್ಪ ಮಟ್ಟಿನ ದೂರವನ್ನು ಕಾಯ್ದುಕೊಳ್ಳಬೇಕೆಂದು ನಾನು ಅವರನ್ನು ಎಚ್ಚರಿಸಬೇಕಾಗುತ್ತಿತ್ತು. ಆ ರೀತಿ ಮಾಡಿದಲ್ಲಿ ತಮ್ಮ ಮನೋಚಿಕಿತ್ಸೆಯು ಪರಿಣಾಮಕಾರಿ ಯಾಗುವುದಿಲ್ಲವೆಂದು ಹೇಳಿ ಅವರ ಬಗೆಗಿನ ನನ್ನ ಕಾಳಜಿಯನ್ನು ನಿರುತ್ಸಾಹಗೊಳಿಸಿದರು. ಅನೇಕ ಮನೋಚಿಕಿತ್ಸಕರಿಗೆ ಈ ವಿಷಯದಲ್ಲಿ ಅವರದು ತಪ್ಪು ಎನಿಸುತ್ತಿತ್ತು. ಆದರೆ ಅವರ ದೃಷ್ಟಿಯಲ್ಲಿ ಅವರು ಸರಿ. ತಮ್ಮ ರೋಗಿಗಳ ವಿಷಯದಲ್ಲಿ ನಿಜವಾದ ಕಾಳಜಿ ವಹಿಸುತ್ತಿದ್ದ ಕಾರಣದಿಂದಾಗಿ ಅವರೊಬ್ಬ ಶ್ರೇಷ್ಠ ಮನೋಚಿಕಿತ್ಸಕರಾಗಿದ್ದರು. ಕಳೆದ ಕೆಲವು ವರ್ಷಗಳಿಂದ ಅವರು ಅನುಭವಗಳನ್ನು

ವ್ಯಾಖ್ಯಾನಿಸುವಲ್ಲಿ ನಂಬಿಕೆ ಕಳೆದುಕೊಂಡಿದ್ದರು. ವೀಕ್ಷಕರ ವ್ಯಾಖ್ಯಾನಗಳ ಬಣ್ಣ ಬೆರೆಸದೆ ಬೇರೆಯವರ ಅನುಭವಗಳನ್ನು ನಿರೂಪಿಸಬೇಕೆಂಬುದು ಅವರ ಇಚ್ಛೆಯಾಗಿತ್ತು. ಬೇರೆಯವರ ವ್ಯವಹಾರಗಳನ್ನು, ನಡವಳಿಕೆಗಳನ್ನು ವ್ಯಾಖ್ಯಾನಿಸುವುದೇ ಉದ್ಯೋಗವಾದ ಮನೋಚಿಕಿತ್ಸಕರಿಗೆ ಇದು ಪಾಲಿಸಲು ಅತ್ಯಂತ ಕಷ್ಟದಾಯಕವಾದ ಸೂತ್ರ ಎಂದು ನನ್ನ ಎಣಿಕೆ. ಈ ಪುಸ್ತಕದಲ್ಲಿ ಅವರು ಯಶಸ್ವಿಯಾಗಿದ್ದಾರೆಂದು ನಾನು ಭಾವಿಸಿದ್ದೇನೆ.

ಹಲವು ದಶಕಗಳ ಕಾಲ ವ್ಯಕ್ತಿಯೊಬ್ಬನಿಗೆ ನೆರವು ಮತ್ತು ಒತ್ತಾಸೆ ನೀಡಿದವರಿಗೆ ಕೃತಜ್ಞತೆಗಳನ್ನು ಹೇಳುವುದು ಯಾವಾಗಲೂ ಅಪೂರ್ಣವಾಗಿಯೇ ಉಳಿಯುತ್ತದೆ. ಅದರಲ್ಲೂ ನಲವತ್ತಮೂರು ವರ್ಷಗಳ ಕಾಲ ರವಿ ಕಪೂರರ ಜೀವನ ಸಂಗಾತಿಯಾಗಿದ್ದ ನನಗೆ, ಕೃತಜ್ಞತೆ ಸಲ್ಲಿಸ ಬೇಕಾದವರಿಗೆ ಸಲ್ಲಿಸುವುದು ನಿಜಕ್ಕೂ ಕಷ್ಟವೇ. ಎಲ್ಲರಿಗಿಂತ ಮೊದಲು ರವಿ ಅವರ ಮೂರು ಜನ ಗುರುಗಳಾದ ಪ್ರೊ. ಎನ್. ಸಿ. ಸೂರ್ಯ, ಪ್ರೊ. ಎರ್ನಾ ಹೋಚ್ ಮತ್ತು ಪ್ರೊ. ಜೆ. ಎಸ್. ನೇಕಿ ಅವರುಗಳನ್ನು ನೆನೆಯುತ್ತೇನೆ. ಇವರುಗಳು ಮನೋಚಿಕಿತ್ಸೆಯೊಂದಿಗೆ ಆಧ್ಯಾತ್ಮವನ್ನು ಬೆಸೆಯುವಲ್ಲಿ ಮೇಲ್ಪಂಕ್ತಿಯಾಗಿದ್ದವರು ಹಾಗೂ ರವಿ ಅವರಿಗೆ ಅವರ ಅನ್ವೇಷಣೆಯಲ್ಲಿ ಸವಾಲು ಒಡ್ಡುತ್ತ ಬೆಂಬಲ ನೀಡಿದವರು. ಇವರಲ್ಲದೆ ಮುಖ್ಯರಾದ ಇನ್ನೂ ಅನೇಕರು ಇದ್ದಾರೆ. ಇಲ್ಲಿ ಹೆಸರಿಸಲಾದ ಈ ಎಲ್ಲರಿಗೆ ನನ್ನ ಆಭಾರ ಮನ್ನಣೆ ಸಲ್ಲುತ್ತದೆ.

ಎಡಿನ್ ಬರ್ಗ್‌ನಲ್ಲಿ ಅವರ ಮಾರ್ಗದರ್ಶಕ ಗುರುಗಳಾದ ಪ್ರೊ. ಜಿ. ಎಂ. ಕಾರ್ ಸ್ಟೇಸ್ ಮತ್ತು ನಾರ್ಮನ್ ಕ್ರೈಟ್‌ಮನ್. ಇವರಿಬ್ಬರೂ ಅವರ ಸಂಶೋಧನ ಬುದ್ಧಿಯನ್ನು ಹರಿತಗೊಳಿಸುವಲ್ಲಿ ಮುಖ್ಯರಾದವರು. ಹಾಗೂ ಅವರ ಸಾಮುದಾಯಿಕ ಮಾನಸಿಕ ಆರೋಗ್ಯ ಸೇವೆಗೆ ವೈಜ್ಞಾನಿಕ ತೀವ್ರತೆಯನ್ನು ತರುವ ಸಾಮರ್ಥ್ಯ ತಂದುಕೊಟ್ಟವರು.

ಎರಡು ವಿಭಿನ್ನ ಕ್ಷೇತ್ರಗಳಾದ ಇವನ್ನು ಸಂಯೋಜಿಸುವುದು ತುಂಬ ಕಷ್ಟ.

ನಮ್ಮ ಮಕ್ಕಳಾದ ಸ್ವಪ್ನ ಮತ್ತು ಶರದ ಹಾಗೂ ರವಿ ಅವರ ಜೀವನವನ್ನು ಶ್ರೀಮಂತ ಗೊಳಿಸಿದ್ದಕ್ಕಾಗಿ, ಅವರು ಪ್ರೀತಿಸುತಿದ್ದ ಎಲ್ಲ ಮೊಮ್ಮಕ್ಕಳಿಗೆ.

ರವಿ ಅವರು ವಿದ್ಯಾರ್ಥಿಗಳನ್ನು ಹೇಗೆ ಪ್ರೀತಿಸುತ್ತಿದ್ದರೋ ಹಾಗೂ ಸವಾಲು ಹಾಕುತ್ತಿದ್ದರೋ ಅದೇ ರೀತಿ ರವಿಯನ್ನು ಪ್ರೀತಿಸಿದ ಮತ್ತು ಅವರಿಗೆ ಸವಾಲು ಹಾಕುತ್ತಿದ್ದ ಅವರೆಲ್ಲ ವಿದ್ಯಾರ್ಥಿಗಳಿಗೆ, ರವಿ ಅಪಾರವಾಗಿ ಪ್ರೀತಿಸುತ್ತಿದ್ದ ಅವರ ಸೋದರಿಯರಾದ ನಿಶಿ, ಕುಶಾಲ್, ಶೀತಲ್ ಮತ್ತು ರಮಲ್ ಅವರುಗಳಿಗೆ.

ವರ್ಮಾ ದಂಪತಿ ಮತ್ತು ಅವರೆಲ್ಲ ಸ್ನೇಹಿತರಿಗೆ.

ಅವರಿಗೆ ಧನಸಹಾಯ ನೀಡಿದ ಭಾರತದ ಮತ್ತು ಕೆನಡಾದ ಸಂಸ್ಥೆಗಳಿಗೆ ಮತ್ತು ಸಂಶೋಧನೆಯಲ್ಲಿ ಅವರ ಜೊತೆಯಿದ್ದ ಹಾಗೂ ಸಂಶೋಧನೆಯಿಂದಾಚೆಗೂ ಸಂಬಂಧದ ಎಳೆಯನ್ನು ಸ್ಥಾಪಿಸಿಕೊಂಡ ಸಹ ಸಂಶೋಧಕರಾದ ಡಾ. ಎಲ್ಲೆನ್ ಕೊರಾನ್ ಮತ್ತು ಗಿಲ್ಲೆಸ್ ಬಿಬೋ ಅವರಿಗೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ(ನಿಮ್ಹಾನ್ಸ್) ಮತ್ತು ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ(ನಿಯಾಸ್)ಗಳಿಗೆ. ಅವುಗಳ ನಿರ್ಮಾಣದಲ್ಲಿ ರವಿ ತಮ್ಮನ್ನು ಹೃತ್ಪೂರ್ವಕವಾಗಿ ತೊಡಗಿಸಿಕೊಂಡರು.

ಅವರ ಇನ್ನೊಂದು ಆಸಕ್ತಿಯ ಕ್ಷೇತ್ರದಲ್ಲಿ ಅವರಿಗಾಗಿ ತಮ್ಮ ಆಶ್ರಮಗಳನ್ನು ಹೃದಯಗಳನ್ನು ತೆರೆದಿರಿಸಿದ್ದ ಹಾಗೂ ಭೇದಿಸಲಾಗದ ಹಲವು ದ್ವಾರಗಳನ್ನು ಅವರಿಗೆ ತೆರೆದಿಟ್ಟ 'ಬಿಹಾರ್ ಸ್ಕೂಲ್ ಆಫ್ ಯೋಗ'ದ ಗುರುಗಳು, ಸ್ವಾಮಿ ರಾಮದೇವ ಪಾಠಿ ಮತ್ತು ಸ್ವಾಮಿ ದಯಾನಂದ ಸರಸ್ವತಿ ಇವರಿಗೆ. ಅವರಿಬ್ಬರೂ ತಮ್ಮ ಆಶ್ರಮದ ಮತ್ತು ಹೃದಯಗಳ ಬಾಗಿಲನ್ನು ಮತ್ತು ಒಳಹೊಗಲಾರದ ಅನೇಕ ಬಾಗಿಲುಗಳನ್ನು ರವಿ ಅವರಿಗಾಗಿ ತೆರೆದಿಟ್ಟರು.

ತಮ್ಮ ಜೀವನದ ಅನುಭವಗಳನ್ನು ರವಿ ಅವರೊಂದಿಗೆ ಹಂಚಿಕೊಂಡ ಮತ್ತು ಅವರ ಜೀವನವನ್ನು ಶ್ರೀಮಂತಗೊಳಿಸಿದ ಎಲ್ಲ ಸಾಧುಗಳಿಗೆ. ಅವರಲ್ಲಿ ಎಲ್ಲರೂ ಅಲ್ಲದಿದ್ದರೂ ಕೆಲವರು ಅವರ ಈ ಪುಸ್ತಕದಲ್ಲಿ ಪ್ರಸ್ತಾಪಿತವಾಗಿದ್ದಾರೆ.

ಬೆಲ್ಲಾಜಿಯೋದಲ್ಲಿರುವ ರಾಕ್ ಫೆಲರ್ ಅಧ್ಯಯನ ಮತ್ತು ಅಧಿವೇಶನ ಕೇಂದ್ರಕ್ಕೆ; ಅದರಲ್ಲೂ ವಿಶೇಷವಾಗಿ ಪಿಲಾರ್ ಪೆಲಾಶಿಯೋ ಮತ್ತು ಅಲ್ಲಿಯ ಸನಿವಾಸಿ ವಿದ್ವಾಂಸರಿಗೆ. ಲೇಕ್ ಕೊಮೋ ಲೆಕೋ ಮತ್ತು ಆಲ್ಪ್ಸ್ ನಲ್ಲಿರುವ ವಿಲ್ಲಾ ಸೆರೆಬೆಲ್ಲೋನಿಯಲ್ಲಿ ನಾವು ಇದ್ದಾಗ ಈ ವಿದ್ವಾಂಸರು ಅವರಿಗೆ ನೀಡಿದ ಸನ್ಮಾನಕ್ಕಾಗಿ ಹಾಗೂ ರವಿ ಅವರು ನಿಧನರಾಗುವುದಕ್ಕೆ ಮುನ್ನ ಮತ್ತು ನಿಧನದ ನಂತರದಲ್ಲಿ ನನಗೆ ನೀಡಿದ ಬೆಂಬಲಕ್ಕಾಗಿ.

ಪ್ರಿಯ ಮಿತ್ರರಾದ ಪ್ರೊ. ಸುಧೀರ್ ಕಾಕರ್ ಅವರಿಗೆ.

ಅತ್ಯಂತ ಕಷ್ಟಕರವಾದ ಈ ಪುಸ್ತಕ ಪ್ರಕಟಣೆಯ ಕಾರ್ಯವನ್ನು ನಾನು ಸಾಧ್ಯವಾಗಿಸಲು ಕಾರಣರಾದ ರವಿಸಿಂಗ್, ಆರ್. ಶಿವಪ್ರಿಯ ಮತ್ತು ಪಲೋಮಾ ದತ್ತ (ಪೆಂಗ್ವಿನ್ ಬುಕ್ಸ್, ಇಂಡಿಯಾ, ಪ್ರೈವೇಟ್, ಲಿಮಿಟೆಡ್) ಅವರುಗಳಿಗೆ.

ಈ ಪುಸ್ತಕದ ಹಸ್ತ ಪ್ರತಿಯನ್ನು ಓದುವ ಶ್ರಮ ತೆಗೆದುಕೊಂಡ ಪ್ರೊ. ಅಜಿತ ಭಿಡೆ, ಮಾಧವ್ ಸಾಠೆ (ಸಂಸ್ಕೃತ ವಿದ್ವಾಂಸರು), ಡಾ. ಸೀತಾರಾಮ್ ಮತ್ತು ಪ್ಯಾಟ ಡುಗಾರ್ಡ್ ಅವರುಗಳಿಗೆ.

ಎಲ್ಲಕ್ಕಿಂತ ಮುಖ್ಯವಾದ್ದು ಡೋರೋಥಿ ಬ್ಯೂಗ್ಲಸ್ ಅವರ ಕೊಡುಗೆ. ಅವರ ನೆರವಿಲ್ಲದಿದ್ದರೆ ನೋವುಂಟುಮಾಡುವಂಥದಾದರೂ ಮಾಯಿಸುವ ಗುಣಹೊಂದಿರುವ ಈ ಪುಸ್ತಕವನ್ನು ಸಂಯೋಜಿಸುವ ಕೆಲಸವನ್ನು ನಾನು ಪೂರ್ಣಗೊಳಿಸಲಾಗುತ್ತಿರಲಿಲ್ಲ. ಅದಕ್ಕಾಗಿ ಅವರಿಗೆ.

ಈ ಪುಸ್ತಕವು ನನ್ನ ಮಾತೃಭಾಷೆಯಾದ ಕನ್ನಡದಲ್ಲಿ ಪ್ರಕಟವಾಗುತ್ತಿರುವುದು ನನಗೆ ಬಹಳ ಸಂತೋಷವನ್ನುಂಟು ಮಾಡಿದೆ. ಇದಕ್ಕೆ ಕಾರಣರಾದ ಎಲ್ಲರಿಗೂ ಗೌರವ ಸೂಚಿಸುವುದು ನನ್ನ ಕರ್ತವ್ಯ. ಈ ಪುಸ್ತಕ ಕನ್ನಡದಲ್ಲಿ ಪ್ರಕಟವಾಗಬೇಕೆಂದು ಸೂಚಿಸಿ

ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿದ ಶ್ರೀಯುತ ಕೆ. ಸತ್ಯನಾರಾಯಣ ಅವರಿಗೆ ಮೊದಲಿಗೆ ವಂದನೆಗಳು. ಈ ಪುಸ್ತಕದ ಅನುವಾದವನ್ನು ಅತ್ಯಂತ ಶ್ರದ್ಧೆ ಮತ್ತು ಉತ್ಸಾಹದಿಂದ ಕೈಗೆತ್ತಿಕೊಂಡು, ಉತ್ತಮವಾಗಿ ಪೂರೈಸಿಕೊಟ್ಟ ವಿದ್ವಾಂಸರಾದ ಶ್ರೀಯುತ ಪ್ರೊ. ಆರ್. ಲಕ್ಷ್ಮೀನಾರಾಯಣ್‌ರವರಿಗೆ ಅಭಾರಿಯಾಗಿದ್ದೇನೆ. ಈ ಪುಸ್ತಕ ಕರಡನ್ನು ತಿದ್ದುವ ಮತ್ತು ಸಂಪಾದನೆಯ ಕೆಲಸದಲ್ಲಿ ನನ್ನ ಬೆಂಬಲಕ್ಕೆ ನಿಂತವರು ಶ್ರೀಮತಿ ರಾಜಲಕ್ಷ್ಮಿಗೋಪಾಲ್‌ರಾವ್, ಅವರ ಕಾಳಜಿಗೆ ನನ್ನ ವಂದನೆಗಳು. ಈ ಪುಸ್ತಕದ ಪ್ರಕಟಣೆ ಮಾಡುತ್ತಿರುವ ಪರಸ್ಪರ ಪ್ರಕಾಶನದಶ್ರೀ ಮಹೇಶ್‌ಕುಮಾರ್ ಮತ್ತು ಅವರ ಗೆಳೆಯರ ಬಳಗಕ್ಕೆ ಅಭಿನಂದನೆಗಳು. ಪುಸ್ತಕವನ್ನು ಅಂದವಾಗಿ ಮುದ್ರಿಸಿರುವ ಸ್ವಾನ್ ಪ್ರೀಂಟರ್ಸ್‌ನ ಕೃಷ್ಣಮೂರ್ತಿಯವರಿಗೆ ಮತ್ತು ಕಲಾವಿದರಾದ ಅರುಣ್‌ಕುಮಾರ್ ಜಿ ಇವರಿಗೆ ವಂದನೆಗಳು.

ಮಾಲವಿಕಾ ಕಪೂರ

ಮಾಳವಿಕ ಕಪೂರ

ಬೆಂಗಳೂರಿನ National Institute of Advanced Studiesನ ಗೌರವ ಪ್ರಾಧ್ಯಾಪಕರು. ಬೆಂಗಳೂರು ವಿವಿಯಿಂದ ಕ್ಲಿನಿಕಲ್ ಮನಃಶಾಸ್ತ್ರದಲ್ಲಿ ಪಿಎಚ್.ಡಿ ಪಡೆದಿದ್ದಾರೆ. ಅನೇಕ ಪುಸ್ತಕ ಮತ್ತು ಸಂಶೋಧನಾ ಲೇಖನಗಳು ಇವರಿಂದರಚಿತವಾಗಿವೆ.

ಸಂಪಾದಕರ ಮಾತು – 2

ರವಿ ಅವರನ್ನು ನಾನು ಮೊದಲು ಭೇಟಿಮಾಡಿದ್ದು ವೈದ್ಯಕೀಯ ಸಂಶೋಧನಾ ಸಮಿತಿಯಲ್ಲಿ ಸಾಮಾಜಿಕ ಸಂಶೋಧಕಿಯಾಗಿ ಕೆಲಸ ಮಾಡಲು 1966 ರಲ್ಲಿ ಎಡಿನ್ ಬರ್ಗ್‌ಗೆ ಬಂದಕೂಡಲೇ. ನಮ್ಮ ಘಟಕದ ಮೊದಲ ಸಭೆಯಲ್ಲಿ ಪ್ರೊ. ಜಿ.ಎಂ. ಕಾರ್‌ಸ್ಟೇಸ್ ಅವರು ಕಾಮನ್ ವೆಲ್ತ್ ವಿದ್ಯಾರ್ಥಿ ವೇತನದ ಮೇಲೆ ಭಾರತದಿಂದ ಬಂದಿದ್ದ ಇಬ್ಬರು ಹೊಸ ವೈದ್ಯರನ್ನು ಪರಿಚಯಿಸಿದರು. ಅವರಲ್ಲೊಬ್ಬರು ರವಿ ಕಪೂರರು. ಮುಂದಿನ ನಲವತ್ತು ವರ್ಷಗಳಲ್ಲಿ ನಾವಿಬ್ಬರೂ ಸ್ನೇಹಿತರಾಗಿ ಮತ್ತು ಸಹೋದ್ಯೋಗಿಗಳಾಗಿದ್ದುಕೊಂಡು ಎಲ್ಲ ಬಗೆಯ ವಿಷಯಗಳಿಗೆ ಸಂಬಂಧಿಸಿದಂತೆ ಕೊನೆಯಿಲ್ಲದ ಚರ್ಚೆಗಳು ಮತ್ತು ವಾಗ್ವಾದಗಳನ್ನು ನಡೆಸಿದ್ದೇವೆ. ಹಿಮಾಲಯದ ಪರ್ವತ ಶ್ರೇಣಿಗಳಲ್ಲಿ ಅವರು ಮಾಡಿದ ಹಲವು ವರ್ಷಗಳ ಕೆಲಸದ ಬಗ್ಗೆ ಕೇಳಿದ್ದೆ. ಹಿಮಾಲಯದ ಸಾಧುಗಳನ್ನು ಕುರಿತ ಕಥೆ ಅತ್ಯಂತ ಆಕರ್ಷಕವಾಗಿ ಕಂಡಿದೆ. 2006ರ ಸೆಪ್ಟೆಂಬರ್‌ನಲ್ಲಿ ಉತ್ತರ ಅಮೆರಿಕಾದಿಂದ ತಾಯ್ನಾಡಾದ ಭಾರತಕ್ಕೆ ಹೋಗುವ ಮಾರ್ಗದಲ್ಲಿ ಎಡಿನ್‌ಬರ್ಗ್ ಮೂಲಕವೇ ಹೋದರು. ಇಟಲಿಯ ಅಕೆಡೆಮಿಕ್ ಕೇಂದ್ರವೊಂದರಲ್ಲಿದ್ದುಕೊಂಡು "ಬದುಕಿನ ಇನ್ನೊಂದು ಹಾದಿ" ಗ್ರಂಥವನ್ನು ಬರೆಯಬೇಕೆಂಬ ನಿರೀಕ್ಷೆಯಿಂದಿದ್ದರು. ಆಧ್ಯಾತ್ಮ ಮತ್ತು ಮನೋಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಅವರೊಂದಿಗೆ ನಾನು ಪತ್ರವ್ಯವಹಾರವನ್ನು ಮುಂದುವರಿಸಿದ್ದೆ. ಈ ಪುಸ್ತಕದ ಹಸ್ತಪ್ರತಿಯನ್ನು ಕುರಿತಂತೆ ನನ್ನ ಅಭಿಪ್ರಾಯ ವ್ಯಕ್ತಪಡಿಸಲು ಕಾತರದಿಂದ ಕಾಯುತ್ತಿದ್ದೆ..

ಇನ್ನೂ ಮೂರು ತಿಂಗಳು ಕೂಡ ಕಳೆದಿರಲಿಲ್ಲ. ಅಷ್ಟರಲ್ಲಿ ಅವರು ಇಟಲಿಗೆ ಬಂದ ಕೆಲವೇ ದಿನಗಳಲ್ಲಿ ಇದ್ದಕ್ಕಿದ್ದಂತೆ ತೀರಿಕೊಂಡರೆಂಬ ಸುದ್ದಿ ಕೇಳಿ ಭಾರೀ ಆಘಾತವುಂಟಾಯಿತು. ಏನೇ ಆಗಲಿ ಅವರ ಪುಸ್ತಕ ಪೂರ್ಣಗೊಂಡು ಪ್ರಕಟಗೊಳ್ಳಲೇಬೇಕೆಂಬ ವಿಷಯದಲ್ಲಿ ಅವರ ಪತ್ನಿ ಮಾಲವಿಕಾ ಅವರ ನಿರ್ಧಾರ ಖಚಿತವಾಗಿತ್ತು. ಹಾಗಾಗಿ ನಮ್ಮ ಪಾಲಿಗೆ ಉಳಿದಿದ್ದ ಕಾರ್ಯವೆಂದರೆ ಒಂದು ವೇಳೆ ರವಿ ಬದುಕಿದ್ದರೆ ಅವರು ಬರೆದು ಮುಗಿಸುತ್ತಿದ್ದ ರೀತಿಯಲ್ಲಿ ಪುಸ್ತಕವನ್ನು ಹೊರತರುವುದು. ನಮಗೆ ಮಾರ್ಗದರ್ಶಿ ಸೂತ್ರಗಳಿದ್ದುವು. ಅದುವರೆಗಾಗಲೇ ಅವರು ಇದರ ರೂಪು-ರೇಖೆಗಳನ್ನು ಇಟಲಿಯ ಕೇಂದ್ರದಲ್ಲಿದ್ದ ತನ್ನ ಸಹೋದ್ಯೋಗಿಗಳ ಮುಂದೆ ಪ್ರಸ್ತುತ ಪಡಿಸಿದ್ದರು. ಪತಂಜಲಿಯ ಯೋಗಸೂತ್ರಗಳನ್ನು ಅಧ್ಯಯನ ಮಾಡಿದಾಗ ಅವರಿಗಾದ

ಅನುಭವಗಳ ವಿವರಗಳು ಹಾಗೂ ಸಾಧು ಸಂನ್ಯಾಸಿಗಳೊಂದಿಗೆ ನಡೆಸಿದ ಸಂದರ್ಶನಕ್ಕೆ ಸಂಬಂಧಿಸಿದ ಅಪಾರ ಸಾಮಗ್ರಿ ಎಲ್ಲವೂ ಇದ್ದೇ ಇತ್ತು. ಅವರ ಸಂಶೋಧನ ಲೇಖನಗಳು ಮತ್ತು ನೀಡಿದ ಉಪನ್ಯಾಸಗಳು ಕೂಡ ಇದ್ದುವು. ಮಾಲವಿಕಾ ಅವರು ಏನೆಲ್ಲ ಸಾಮಗ್ರಿಗಳನ್ನು ಕಳಿಸಿಕೊಡಲು ಸಾಧ್ಯವೋ ಅದೆಲ್ಲವನ್ನೂ ಕಳಿಸಿಕೊಟ್ಟರು. ಇನ್ನು ಓದುಗರಿಗೆ ಹಿಡಿಸುವಂತೆ ಆಸಕ್ತಿಪೂರ್ಣವಾಗಿ ಅದಕ್ಕೊಂದು ಆಕಾರವನ್ನು ನೀಡುವ ಕೆಲಸ ನನ್ನದಾಗಿತ್ತು. ಒಂದು ಭಾರೀ ವಿದ್ವತ್ ಪೂರ್ಣ ಗ್ರಂಥವನ್ನಾಗಿ ಇದನ್ನು ಹೊರತರಬೇಕೆಂಬುದು ರವಿ ಅವರ ಇಚ್ಛೆಯಾಗಿರಲಿಲ್ಲ ಎಂದು ನಮಗೆ ತಿಳಿದಿತ್ತು. ಸಾಮಾನ್ಯ ಜನರು ಓದಿ ಅರ್ಥಮಾಡಿಕೊಳ್ಳುವಂತಿರಬೇಕೆಂದು ಮತ್ತು ಸಾಧು ಸಂನ್ಯಾಸಿಗಳು ತಮ್ಮ ಕಥೆಯನ್ನು ತಾವೇ ಹೇಳಿದಂತಿರಬೇಕೆಂದು ಅವರು ಆಶಿಸಿದ್ದರು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ನಾನು ರವಿ ಅವರ ಮಾತುಗಳನ್ನೇ ಬಳಸಿದ್ದೇನೆ. ಆದರೆ ನಾನು ಸಂಪಾದಕಳಾಗಿ ಕೆಲಸ ನಿರ್ವಹಿಸಬೇಕಾಗಿತ್ತು. ಬೇರೆ ಬೇರೆ ಭಾಗಗಳ ನಡುವೆ ಸಂಬಂಧ ಕಲ್ಪಿಸಬೇಕಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಆಯ್ಕೆ ಮಾಡಬೇಕಿತ್ತು. ಮೊದಲ ಭಾಗವಾದ– 'ನನ್ನ ಗುರುವಿನ ಪದತಲದಲ್ಲಿ' ಭಾಗಕ್ಕೆ ಇದು ಹೆಚ್ಚಾಗಿ ಅನ್ವಯಿಸುತ್ತದೆ. ಇದು ರವಿ ಅವರು ಬಹಳ ವರ್ಷಗಳ ಹಿಂದೆ ಸಂಶೋಧನೆಗೆ ಧನ ಸಹಾಯ ನೀಡುವ ಸಂಸ್ಥೆಗಳಿಗಾಗಿ ಬರೆದು ಸಿದ್ಧಪಡಿಸಿದ ವಿವರವಾದ ನೀರಸ ವರದಿಯ ರೂಪದಲ್ಲಿತ್ತು. ಅಗತ್ಯವಾದವುಗಳು ಯಾವುವು? ಸ್ವತಃ ಯೋಗ ಸಾಧಕರಲ್ಲದ ಸಾಮಾನ್ಯರಿಗೆ ಅವನ್ನು ಗ್ರಾಹ್ಯವಾಗುವಂತೆ ಮಾಡಲು ಸಾಧ್ಯವೆ? ಜೊತೆಗೆ ಸಾಧುಗಳೊಂದಿಗೆ ನಡೆಸಿದ ಸಂದರ್ಶನಗಳನ್ನು ಓದಿ ಅರಗಿಸಿಕೊಂಡು ಅವುಗಳಲ್ಲಿನ ಸಾಮಾನ್ಯ ವಿಷಯಗಳಿಗೆ ಅನುಗುಣವಾಗಿ ಸಂಪಾದಿಸಬೇಕಿತ್ತು. ಇದನ್ನು ಇನ್ನಷ್ಟು ವ್ಯವಸ್ಥಿತವಾಗಿ ಸಂಪಾದಿಸಿಕೊಟ್ಟದ್ದಕ್ಕಾಗಿ ಪೆಂಗ್ವಿನ್‌ನ ಸಿಬ್ಬಂದಿ ವರ್ಗಕ್ಕೆ ನಾವು ಆಭಾರಿಯಾಗಿದ್ದೇವೆ.

ಲೇಖಕ ಬದುಕಿಲ್ಲದಿರುವ ಸಂದರ್ಭದಲ್ಲಿ ಆ ಲೇಖಕನ ಪುಸ್ತಕದ ಸಂಯೋಜಕನ ಪಾತ್ರವನ್ನು ಪುಸ್ತಕದ ವಿಮರ್ಶಕನಾದವನು ವಹಿಸಿಕೊಳ್ಳುವುದು ಕಠಿಣವಾದ ಮತ್ತು ದುಃಖಕರವಾದ ಕೆಲಸ. ರವಿ ಅವರು ಬರೆಯಬಹುದಾಗಿದ್ದ ಗ್ರಂಥ ಇದೇನೆ? ಕೆಲವೊಂದು ವಿಷಯಗಳಿಗೆ ಸಂಬಂಧಿಸಿದಂತೆ ಹೇಳಬೇಕೆಂದರೆ ಸ್ಪಷ್ಟವಾಗಿ 'ಅಲ್ಲ.' ಅವರು ಈ ಪುಸ್ತಕದ ಐತಿಹಾಸಿಕ ಹಿನ್ನೆಲೆಯನ್ನು ಮತ್ತು ಯೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಇನ್ನಷ್ಟು ವಿಸ್ತಾರವಾಗಿ ಬರೆಯುತ್ತಿದ್ದರೆಂದು ನನ್ನ ಎಣಿಕೆ. ನಮಗೆ ಲಭ್ಯವಿಲ್ಲದಿರುವ ಆದರೆ ಅವರ ನೆನಪಿನಲ್ಲಿದ್ದಿರಬಹುದಾದ ಜನರು ಮತ್ತು ಸಂದರ್ಭಗಳನ್ನು ಕುರಿತು ಬರೆಯುತ್ತಿದ್ದರು. ರವಿ ಅವರು ಈ ಪುಸ್ತಕನ್ನು ಒಪ್ಪಿಕೊಳ್ಳುತ್ತಿದ್ದರೆ? ಒಪ್ಪಿಕೊಳ್ಳುತ್ತಿದ್ದರೆಂದು ನಮಗೆ ವಿಶ್ವಾಸವಿದೆ. ಅವರು ಬಿಟ್ಟಲ್ಲಿಂದ ನಾವು ಮುಂದುವರಿಸಿದ್ದೇವೆಂದು ನಮಗೆ ಭರವಸೆಯಿದೆ.

ಡೋರೋಥಿ ಬ್ಲೂಗ್ಲಸ್

ಡೋರೋಥಿ ಬಗ್ಲಾಸ್

ಸಮಾಜ ವಿಜ್ಞಾನಿಯಾದ ಇವರು, ವೃತ್ತಿಯಿಂದ ನಿವೃತ್ತರಾಗಿ ಸ್ಕಾಟ್‌ಲಾಂಡಿನಲ್ಲಿದ್ದಾರೆ.

ಅನುವಾದಕರ ಮಾತು

ಸುಮಾರು ಒಂದು ವರ್ಷದ ಹಿಂದೆ ನನ್ನ ಪ್ರೀತಿಯ ಶಿಷ್ಯಮಿತ್ರ ಡಾ. ಮಹೇಶ್ ಕುಮಾರ್ ಅಂತರ ರಾಷ್ಟ್ರೀಯ ಖ್ಯಾತಿಯ ಮನೋಚಿಕಿತ್ಸಕ ದಿವಂಗತ ಡಾ. ರವಿ ಕಪೂರರ Another Way To Live ಪುಸ್ತಕವನ್ನು ನನ್ನ ಮುಂದಿಟ್ಟು ಇದನ್ನು ನಾನು ಕನ್ನಡಕ್ಕೆ ಅನುವಾದಿಸಬೇಕೆಂದು ಪ್ರೀತಿಪೂರ್ವಕವಾಗಿ ಒತ್ತಾಯಿಸಿದ್ದಲ್ಲದೆ ಅದನ್ನು ತಮ್ಮ 'ಪರಸ್ಪರ ಪ್ರಕಾಶನ'ದ ವತಿಯಿಂದ ಪ್ರಕಟಿಸುವ ಅಪೇಕ್ಷೆ ಇರುವುದಾಗಿ ಹೇಳಿದರು. ಅಲ್ಲದೆ ಇದು ಕನ್ನಡಕ್ಕೆ ಬರಬೇಕೆಂಬುದು ಖ್ಯಾತ ಕಥೆಗಾರ ಮತ್ತು ಪ್ರಬಂಧಕಾರ ಡಾ. ಸತ್ಯನಾರಾಯಣ ಅವರ ಅಪೇಕ್ಷೆ ಕೂಡ ಆಗಿದೆಯೆಂದೂ ನಾನು ಅದನ್ನು ಅನುವಾದಿಸಿದರೆ ಒಳ್ಳೆಯದೆಂದು ಅವರು ಸೂಚಿಸಿದ್ದಾರೆಂದೂ ಹೇಳಿದರು. ಆ ಸಂದರ್ಭದಲ್ಲಿ ನಾನು ಬೇರೆ ಒಂದು ಕೆಲಸದಲ್ಲಿ ತೊಡಗಿದ್ದು ತಕ್ಷಣ ಒಪ್ಪಿಕೊಳ್ಳುವುದು ಕಷ್ಟವೆನಿಸಿದರೂ ಮಹೇಶ್ ಕುಮಾರ್ ಮತ್ತು ಸತ್ಯನಾರಾಯಣ ಅವರ ಈ ಮಾತುಗಳನ್ನು ನಾನು ಕಡೆಗಣಿಸಲು ಸಾಧ್ಯವೇ ಇರಲಿಲ್ಲವಾದ್ದರಿಂದ ಒಪ್ಪಿ ಅನುವಾದಿಸಿದ ಪರಿಣಾಮವೇ ಈ ಕನ್ನಡ ಅವತರಣಿಕೆ. ನನ್ನಿಂದ ಈ ಕಾರ್ಯವನ್ನು ಆಗುಮಾಡಿಸಿದ್ದಕ್ಕಾಗಿ ಡಾ. ಮಹೇಶ್ ಕುಮಾರ್ ಅವರಿಗೆ ಮತ್ತು ಡಾ. ಕೆ. ಸತ್ಯನಾರಾಯಣ ಅವರಿಗೆ ಮತ್ತು ಇದನ್ನು ಪ್ರಕಟಿಸುತ್ತಿರುವ ಪರಸ್ಪರ ಪ್ರಕಾಶನದ ಗೆಳೆಯರಿಗೆ ನಾನು ಕೃತಜ್ಞನಾಗಿದ್ದೇನೆ. ಇದನ್ನು ಒಪ್ಪಿಕೊಳ್ಳಲು ಮತ್ತೊಂದು ಮುಖ್ಯ ಕಾರಣ ಇದರ ಸಂಪಾದಕರಲ್ಲೊಬ್ಬರೂ ಡಾ. ರವಿ ಕಪೂರರ ಶ್ರೀಮತಿಯವರೂ ಆದ ಡಾ. ಮಾಲವಿಕಾ ಕಪೂರ್ ಅವರು ನನ್ನ ಅತ್ಯಂತ ಗೌರವದ ಮತ್ತು ಇಷ್ಟದ ಸಾಹಿತಿ ಡಾ. ಶಿವರಾಮ ಕಾರಂತರ ಪುತ್ರಿ ಎಂಬುದು.

ಅನುವಾದ ಮಾಡುವ ಸಂದರ್ಭದಲ್ಲಿ ಸ್ವತಃ ಮನೋಚಿಕಿತ್ಸಕರಾದ ಡಾ. ಮಾಲವಿಕಾ ಅವರು ಅನೇಕ ಸಲಹೆಗಳನ್ನು ನೀಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಡಾ. ಮಾಲವಿಕಾ ಅವರ ಗೆಳತಿ ಶ್ರೀಮತಿ ರಾಜಲಕ್ಷ್ಮಿ ಗೋಪಾಲರಾವ್ ಅವರು ಅನೇಕ ಉಪಯುಕ್ತ ಸಲಹೆಗಳನ್ನು ನೀಡಿರುವುದಷ್ಟೇ ಅಲ್ಲದೆ ಈ ಪುಸ್ತಕದ ಸಾಲು ಸಾಲನ್ನೂ ಓದಿ ಅಪಾರ ಶ್ರಮವಹಿಸಿ ಇದರ ಕರಡು ತಿದ್ದುವ ಕೆಲಸವನ್ನೂ ಮಾಡಿದ್ದಾರೆ. ಜೊತೆಗೆ ಇಬ್ಬರೂ ನನ್ನ ಅನುವಾದದ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಆ ಕಾರಣಕ್ಕಾಗಿ ಡಾ. ಮಾಲವಿಕಾ ಕಪೂರ್

ಮತ್ತು ಶ್ರೀಮತಿ ರಾಜಲಕ್ಷ್ಮಿ ಗೋಪಾಲರಾವ್ ಈ ಇಬ್ಬರಿಗೂ ನಾನು ಅತ್ಯಂತ ಆಭಾರಿಯಾಗಿದ್ದೇನೆ.

ಒಂದು ವಿಶಿಷ್ಟ ಬಗೆಯ ಪುಸ್ತಕವಾಗಿ ಇದು ನನ್ನನ್ನು ತುಂಬ ಆಕರ್ಷಿಸಿದೆ. ಪ್ರಸ್ತುತ ಗ್ರಂಥದ ಲೇಖಕರಾದ ಡಾ ರವಿ ಕಪೂರರು ಒಬ್ಬ ಮನೋವೈದ್ಯರಾಗಿದ್ದು, ಮನೋದೇಹಿಯಾದ ಮಾನವನ ಮನಸ್ಸು ಮತ್ತು ದೇಹದ ಮೇಲೆ ಯೋಗ ಯಾವ ಬಗೆಯ ಪರಿಣಾಮವನ್ನುಂಟುಮಾಡುತ್ತದೆ ಎಂಬುದನ್ನು ಅನ್ವೇಷಿಸಲು ಪತಂಜಲಿಯ 'ಯೋಗ ಸೂತ್ರಗಳು' ಗ್ರಂಥವನ್ನು ಅಧ್ಯಯನ ಮಾಡುತ್ತ ಸ್ವತಃ ತಮ್ಮನ್ನೇ ಒಂದು ವರ್ಷದ ಯೋಗ ತರಬೇತಿಗೆ ಒಳಪಡಿಸಿಕೊಂಡು, ಆ ಬಗ್ಗೆ ತಮ್ಮ ಪ್ರಾಮಾಣಿಕವಾದ ಅನುಭವಗಳನ್ನು ಈ ಗ್ರಂಥದಲ್ಲಿ ದಾಖಲು ಮಾಡಿದ್ದಾರೆ. ಜೊತೆಗೆ ಆಧ್ಯಾತ್ಮ ಸಾಧಕರಾದ ಬಹಳಷ್ಟು ಸಾಧು ಸಂತರು ತಮ್ಮ ಬದುಕಿನ ಬಹಳಷ್ಟು ಸಮಯ ಅತ್ಯುನ್ನತ ಮಾನಸಿಕ ಸ್ಥಿತಿಯಾದ ಆನಂದದಲ್ಲಿರುತ್ತಾರೆ ಎಂದು ಹೇಳಲಾದ ಮಾತಿನ ಯಥಾರ್ಥತೆಯನ್ನು ತಿಳಿಯಲು ಹಾಗೂ ನಮ್ಮ ದೇಶದ ಬಹಳಷ್ಟು ಜನರು ತಮ್ಮ ಭಾವನಾತ್ಮಕ ಸಮಸ್ಯೆಗಳ ಪರಿಹಾರಕ್ಕೆ ಮನೋಚಿಕಿತ್ಸಕರ ಬಳಿಗೆ ಧಾವಿಸುವುದಕ್ಕಿಂತ ಹೆಚ್ಚಾಗಿ ಸಾಧುಸಂತರಲ್ಲಿಗೆ ಧಾವಿಸುವುದರ ಹಿಂದಿನ ಮರ್ಮವಾದರೂ ಏನು, ತಾನು ಇನ್ನಷ್ಟು ಉತ್ತಮ ಚಿಕಿತ್ಸಕನಾಗಲು ಸಾಧು ಸನ್ಯಾಸಿಗಳಿಂದ ಕಲಿಯುವಂಥದು ಏನಾದರೂ ಇದೆಯೆ, ಸನ್ಯಾಸವು ಸ್ಕಿಜೋಫ್ರೇನಿಯಾ ರೋಗಿಗಳಿಗೆ ಒಂದು ಸುರಕ್ಷಿತ ನೆಲೆ ಒದಗಿಸುತ್ತದೆಯೆ ಎಂಬುದನ್ನೆಲ್ಲ ಕಂಡುಕೊಳ್ಳಲು ಎರಡು ದಶಕಗಳಿಗೂ ಮೀರಿ ಪ್ರತಿವರ್ಷ ಹಿಮಾಲಯದ ಯಾತ್ರೆಯನ್ನು ಕೈಗೊಂಡು ಸಾಧುಸನ್ಯಾಸಿಗಳನ್ನು ಸಂದರ್ಶಿಸುತ್ತ ಸಾಕ್ಷಿ ಪ್ರಜ್ಞೆಯ ರೂಪದಲ್ಲಿ ಅವರ ಬದುಕಿನ ಚಿತ್ರಗಳನ್ನು ದಾಖಲಿಸಿ ಅದನ್ನು ತೀವ್ರ ವಿಶ್ಲೇಷಣೆಗೆ ಒಳಗುಮಾಡುವ ಅವರ ಈ ಕ್ರಮ ನನಗೆ ಅತ್ಯಂತ ಅಪರೂಪದ್ದೆನಿಸಿದೆ. ಅಲ್ಲದೆ ನನ್ನ ಹೈಸ್ಕೂಲ್ ದಿನಗಳಿಂದಲೂ ರಾಮಕೃಷ್ಣ, ವಿವೇಕಾನಂದರ ಜೀವನ ಚರಿತ್ರೆ, 'ರಾಮಕೃಷ್ಣ ವಚನ ವೇದ'ವೇ ಮೊದಲಾದ ಗ್ರಂಥಗಳು, ಆನಂತರದಲ್ಲಿ 'ಯೋಗಿಯ ಆತ್ಮಕಥೆ', 'ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ' ಅರವಿಂದ, ರಮಣ ಮಹರ್ಷಿ ಮುಂತಾದ ಆಧ್ಯಾತ್ಮ ಸಾಧಕರನ್ನು ಕುರಿತ ಸಾಹಿತ್ಯವನ್ನು ಓದಿದ್ದ ನನಗೆ ಆಧ್ಯಾತ್ಮದ ಬಗ್ಗೆ ಮೊದಲಿನಿಂದಲೂ ಒಂದು ವಿಧವಾದ ಸೆಳೆತ ಇದ್ದದ್ದರ ಜೊತೆಗೆ ಯೋಗಾಭ್ಯಾಸದ ಸ್ವಲ್ಪಮಟ್ಟಿನ ಅನುಭವವೂ ಇದ್ದ ಕಾರಣ ಇದರತ್ತ ಆಕರ್ಷಿತನಾದೆ. ಕನ್ನಡ ಓದುಗರಿಗೂ ಬಹುಶಃ ಇದು ಚೆನ್ನಾಗಿ ರುಚಿಸಬಹುದೆಂದು ಭಾವಿಸುತ್ತೇನೆ.

ಆರ್. ಲಕ್ಷ್ಮೀನಾರಾಯಣ

ಬದುಕಿನ ಇನ್ನೊಂದು ಹಾದಿಯೊಳಗೆ.....

ಪ್ರವೇಶ

ಈ ಪುಸ್ತಕ ಜೀವನ ಪರ್ಯಂತದ ಅನ್ವೇಷಣೆಯಿಂದ ಹೊಮ್ಮಿರುವಂಥದು. ಆ ಅನ್ವೇಷಣೆಯಲ್ಲಿ ಕೆಲವು ಹಿಮಾಲಯ ಪರ್ವತ ಪ್ರದೇಶದ ಚಾರಣವನ್ನೂ ಒಳಗೊಂಡಂತೆ ಭೌಗೋಳಿಕವಾದವು. ಇನ್ನು ಕೆಲವು ನನ್ನನ್ನು ನಾನು ಅರ್ಥಮಾಡಿಕೊಳ್ಳುವ ಪ್ರಯತ್ನದ ಸಲುವಾಗಿ ಕೈಗೊಂಡ ಆಂತರಿಕ ಪಯಣ. ಈ ಎಲ್ಲವುಗಳ ಮೂಲಕ ನಾನು ಮಾಡಿರುವುದು ಕ್ಲಿಷ್ಟವಾದ ಆಧ್ಯಾತ್ಮ ವಿಷಯದೆಡೆಗಿನ ವೈಜ್ಞಾನಿಕ ಮತ್ತು ವೈಚಾರಿಕ ನಡಿಗೆ.

ಮನುಷ್ಯನು ಭೂಮಿಯಲ್ಲಿ ಕಾಣಿಸಿಕೊಂಡಾಗಿನಿಂದ ಅವನು ಎರಡು ಬಹು ಮುಖ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾನೆ. ಅವುಗಳಲ್ಲಿ ಮೊದಲನೆಯದು ಬಾಹ್ಯ ಪ್ರಪಂಚವನ್ನು ಅರ್ಥಮಾಡಿಕೊಳ್ಳುವುದು. ಅದರ ಉದ್ದೇಶ ಈ ಗ್ರಹದಲ್ಲಿ ತನ್ನ ಸ್ಥಾನ ಸುಭದ್ರವೂ ಹೆಚ್ಚು ಅನುಕೂಲಕರವೂ ಆಗಿದ್ದು ನಿಸರ್ಗದ ಖಯಾಲಿಗಳಿಗೆ ಕಡಿಮೆ ತೆರೆದುಕೊಳ್ಳುವಂತಿರಬೇಕೆಂಬುದು. ಎರಡನೆಯದು ಮನುಷ್ಯನ ಆವಿರ್ಭಾವ ಹೇಗಾಯಿತು? ಅವನ ಅಂತ್ಯ ಹೇಗೆ? ಬದುಕಿನ ಉದ್ದೇಶವೇನು? ಸುಖ ಮತ್ತು ಸಂತೃಪ್ತಿಯನ್ನು ಕಂಡುಕೊಳ್ಳುವುದು ಎಂತು? ಎಂಬಿವೇ ಮೊದಲಾದ ಅಸ್ತಿತ್ವಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಸಲುವಾಗಿ ಆಲೋಚನೆಗಳ, ಭಾವನೆಗಳ ಮತ್ತು ಪ್ರಜ್ಞೆಯ ಪ್ರಪಂಚವಾದ ಆಂತರಿಕ ಪ್ರಪಂಚವನ್ನು ಪರೀಕ್ಷೆಗೊಳಪಡಿಸುವುದು. ಭಾರತೀಯ ನಾಗರಿಕತೆಗಳು ಈ ಎರಡೂ ಪ್ರಪಂಚದ ಕಡೆಗೆ ಗಮನ ಹರಿಸಿವೆಯಾದರೂ ಆಂತರಿಕ ಪ್ರಪಂಚದ ಅನ್ವೇಷಣೆಗೆ ಸಂಬಂಧಿಸಿದಂತೆ ಹೆಚ್ಚು ಮೇಲ್ಮೆಯನ್ನು ಸಾಧಿಸಿವೆ. ಈ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನದಲ್ಲಿ ಕೆಲವು ಮಹತ್ವದ ಮನೋವೈಜ್ಞಾನಿಕ ಒಳನೋಟಗಳು ಹೊರಹೊಮ್ಮಿವೆ. ಭಾರತೀಯ ಚಿಂತನೆಯು ಸಾವಿರಾರು ವರ್ಷಗಳ ಹಿಂದೆಯೇ ಇದೇ ಪ್ರಶ್ನೆಗಳನ್ನು ಮುಂದಿಟ್ಟಿತ್ತೆಂಬ ವಸ್ತು ಸಂಗತಿಯು ಒಬ್ಬ ಗಂಭೀರ ಮನೋಚಿಕಿತ್ಸಕನನ್ನು ಪ್ರಭಾವಿತಗೊಳಿಸದೆ ಇರಲಾರದು ಎಂಬುದನ್ನು ಖ್ಯಾತ ಮನೋವಿಜ್ಞಾನಿ ಸಿ. ಜೆ ಯೂಂಗ್ ಕಂಡುಕೊಂಡಿದ್ದನು. ಭಾರತೀಯ ಪರಂಪರೆಗಳು ಮನಸ್ಸಿನ ಅತಿ ಗಹನ ಅನ್ವೇಷಣೆಯ ಜೊತೆಜೊತೆಗೆ ಮನಸ್ಸನ್ನು ಸಂಸ್ಕರಿಸುವ ವಿಧಾನಗಳನ್ನೂ ಸೂಚಿಸಿವೆ. ಕಳೆದ ನೂರು ವರ್ಷಗಳಲ್ಲಿ ಮನೋಚಿಕಿತ್ಸಾ ವೃತ್ತಿಯು ಮಾನಸಿಕ ರೋಗಗಳನ್ನು ಗುಣಪಡಿಸುವಲ್ಲಿ ಭಾರಿ ಪ್ರಗತಿಯನ್ನು ಸಾಧಿಸಿದೆ. ಆದರೆ ಸಕಾರಾತ್ಮಕ ಮಾನಸಿಕ ಸ್ವಾಸ್ಥ್ಯವನ್ನು ಸಾಧಿಸುವ ಬಗ್ಗೆ ಹಾಗೂ ಅತಿ ವಿರಳ ಕ್ಷಣಗಳಲ್ಲಿ ನಾವೆಲ್ಲರೂ ಅನುಭವಕ್ಕೆ ತಂದುಕೊಂಡಿರುವ

ಮಾನಸಿಕ ಸಂತಸದ ಆ ಸ್ಥಿತಿಯ ಬಗ್ಗೆ ಅದಕ್ಕೆ ಹೇಳುವಂಥದೇನೂ ಇಲ್ಲ. ಭಾರತೀಯ ಧರ್ಮ ಗ್ರಂಥಗಳು ಮಾನಸಿಕ ಸ್ವಾಸ್ಥ್ಯದ ಅತ್ಯುನ್ನತ ಸ್ಥಿತಿಯ (ಆನಂದದ) ಬಗ್ಗೆ ಅತ್ಯಂತ ಸ್ಪಷ್ಟವಾಗಿ ಮತ್ತು ದೃಢ ವಿಶ್ವಾಸದಿಂದ ವಿವರಿಸುವುದಷ್ಟೇ ಅಲ್ಲದೆ ಈ ಸ್ಥಿತಿಯನ್ನು ತಲುಪುವುದು ಹೇಗೆಂದು ಹಾಗೂ ನಮ್ಮ ಇಚ್ಛಾನುಸಾರ ಅದನ್ನು ಧಾರಣೆ ಮಾಡಿಕೊಳ್ಳುವ ಬಗೆ ಹೇಗೆಂದು ತಿಳಿಸಿಕೊಡುತ್ತವೆಂದು ಸಾಧಿಸಲಾಗುತ್ತದೆ. ನಾನು ಅನ್ವೇಷಿಸಬೇಕೆಂದಿದ್ದ ಮೊದಲ ಪ್ರಶ್ನೆಯೇ ಭಾರತೀಯ ಗ್ರಂಥಗಳ ಈ ಪ್ರತಿಪಾದನೆ ನಿಜಕ್ಕೂ ವಾಸ್ತವವಾದದ್ದೆ ಎಂಬುದು. ಮೂರು ಜನ ಗುರುಗಳು ನನ್ನ ಮೇಲೆ ಪ್ರಭಾವ ಬೀರಿದ್ದೇ ಅಲ್ಲದೆ ಭಾರತೀಯ ಪರಂಪರೆಗಳನ್ನು ಮನೋಚಿಕಿತ್ಸಾ ತಂತ್ರಗಳೊಂದಿಗೆ ಸಾಪೇಕ್ಷವಾಗಿ ಪರಿಗಣಿಸುವತ್ತ ದಿಗ್ದರ್ಶಿಸಿದರು. ಅವರುಗಳೆಂದರೆ ಡಾ. ಜೆ. ನೇಕಿ, ಡಾ. ಎನ್.ಸಿ. ಸೂರ್ಯ ಮತ್ತು ಡಾ. ಎರ್ನ ಎಂ. ಹೋಖ. ನಾನು ಅವರ ಬಳಿ ಮನೋಚಿಕಿತ್ಸಕನಾಗಿ ತರಬೇತಿ ಪಡೆಯುತ್ತಿದ್ದಾಗ ಅವರುಗಳ ಕಾರ್ಯ ಮತ್ತು ಆಪ್ತವಾದ ಮಾರ್ಗದರ್ಶನ ಎರಡೂ ಅತ್ಯಂತ ಮಹತ್ವದವಾಗಿದ್ದುವು.

ಅಮೃತಸರದ ಗ್ಲಾನ್ಸಿ ಮೆಡಿಕಲ್ ಕಾಲೇಜಿನಲ್ಲಿ ನನ್ನ ವೈದ್ಯಕೀಯ ತರಬೇತಿಯನ್ನು ಮುಗಿಸಿದೆ. ಶೈಕ್ಷಣಿಕವಾಗಿ ನಾನು ಉತ್ತಮ ಸಾಧನೆ ಮಾಡಿದ್ದರೂ ಆ ಕೆಲಸದಲ್ಲಿ ನನಗೆ ಮನಸ್ಸಿರಲಿಲ್ಲ. ತರಬೇತಿಯ ಅವಧಿಯಲ್ಲಿ ನಾನು ನೇಕಿಯವರನ್ನು ಭೇಟಿಮಾಡಿದೆ. ಅವರೊಬ್ಬ ಮನೋಚಿಕಿತ್ಸಕ, ಕವಿ ಹಾಗೂ ಸಿಖ್ ಮತ್ತು ಇತರೆ ಧರ್ಮಗಳ ಬಗ್ಗೆ ಗಹನವಾಗಿ ಚಿಂತಿಸುವ ಚಿಂತಕರು. ಆವರು ತಾವೂ ಒಮ್ಮೆ ವಿದ್ಯಾರ್ಥಿಯಾಗಿದ್ದ ಬೆಂಗಳೂರಿನ ಒಂದು ಸಂಸ್ಥೆಯಲ್ಲಿ ತರಬೇತಿ ಪಡೆದುಕೊಳ್ಳಲು ನನಗೆ ಪ್ರೋತ್ಸಾಹಿಸಿದರು. ಇದ್ದಕ್ಕಿದ್ದಂತೆ ನಾನೊಬ್ಬ ವೈದ್ಯ ಹಾಗೂ ಮನೋಚಿಕಿತ್ಸಕನಾಗಬೇಕೆಂದು ಬಯಸಿದ್ದೇನೆಂದು ಗೊತ್ತಾಯಿತು. ನೇಕಿ ಅವರನ್ನು ಭೇಟಿಯಾಗುವುದಕ್ಕೆ ಮೊದಲು ನನಗೆ ಥಿಯೇಟರ್, ಸಂಗೀತ ಮತ್ತು ಸಾಹಿತ್ಯ ಬಿಟ್ಟರೆ ಬೇರೇನೂ ಬೇಕಿರಲಿಲ್ಲ. ಮನೋಚಿಕಿತ್ಸೆಯಲ್ಲಿ ಇವೆಲ್ಲವೂ ಸೊಗಸಾಗಿ ಮಿಳಿತಗೊಳ್ಳಲು ಸಾಧ್ಯ ಎಂಬುದನ್ನು ಕಂಡುಕೊಂಡೆ. ನನ್ನ ವೃತ್ತಿ ಯಾವುದಾಗಬೇಕೆಂಬುದನ್ನು ನಾನು ಕಂಡುಕೊಂಡಿದ್ದೆ.

ನನಗೆ ಅಸ್ತಿತ್ವವಾದದ ಪರಿಚಯ ಮಾಡಿಕೊಟ್ಟ ಮತ್ತು ನನ್ನನ್ನು ರೂಪಿಸಿದ ಅಧ್ಯಾಪಕರೆಂದರೆ ಡಾ. ಹೋಖ. ಆಧ್ಯಾತ್ಮದ ಮೂಲಕ ನಿಜವಾದ ಅಸ್ತಿತ್ವ ಕುರಿತ ನನ್ನ ಅನ್ವೇಷಣೆಯಲ್ಲಿ ನನ್ನ ಕಲ್ಪನೆಗೆ ಗರಿಮೂಡಿಸಿದವರು ಆಕೆ. ಮೆಡಾರ್ಡ್ ಬಾಸ್ ಮತ್ತು ಲುಡ್‌ವಿಗ್ ಅಸ್ತಿತ್ವವಾದಿ ವಿಚಾರಧಾರೆಯ ಡೇಸಿಯನ್ ವಿಶ್ಲೇಷಣೆಯನ್ನು ಅಳವಡಿಸಿಕೊಂಡು ನನ್ನ ವೈಯಕ್ತಿಕ ವಿಶ್ಲೇಷಣೆಯನ್ನು ಕೂಡ ಅವರು ಮಾಡಿದರು. ಆಕೆ ಸ್ವಿಟ್ಸರ್‌ಲೆಂಡ್‌ನ ಕ್ರಿಶ್ಚಿಯನ್ ಮಿಷನರಿ ಹಿನ್ನೆಲೆಯಿಂದ ಬಂದಿದ್ದರೂ ಲಕ್ನೋ, ಶ್ರೀನಗರ ಮತ್ತು ಅಲ್ಮೋರಾಗಳಲ್ಲಿ ಮನೋಚಿಕಿತ್ಸಕರಾಗಿ ತಮ್ಮ ವೃತ್ತಿ ಜೀವನದ ಬಹುಭಾಗವನ್ನು ಕಳೆದಿದ್ದಾರೆ. ಸಾಂಪ್ರದಾಯಿಕ ವೈದ್ಯ ಮತ್ತು ರೋಗಿ ಇಬ್ಬರ ಬಗ್ಗೆಯೂ ವಿವರಿಸುವ 'ತುರ್ತು ಚಿಕಿತ್ಸಾ ಪ್ರಕ್ರಿಯೆ' ಎಂಬ ವಿಷಯದ ಬಗ್ಗೆ ಕೆಲಸ ಮಾಡಿದ್ದರು.

ಜೊತೆಗೆ ಭಾರತೀಯ ಚಿಂತನ ಪರಂಪರೆಯ ಬಗೆಗಿನ ಪರಾಮರ್ಶನ ಗ್ರಂಥವಾದ 'sources and resources' ಎಂಬಿವೇ ಮೊದಲಾದ ಗ್ರಂಥಗಳನ್ನೂ ಬರೆದಿದ್ದರು.

1975ರಲ್ಲಿ ಪ್ರಕಟವಾದ ಇನ್ನೊಂದು ಪುಸ್ತಕ ಅತ್ಯಂತ ಗೌರವಾನ್ವಿತ ಮಂತ್ರವಾದಿಗಳು (spiritual healer) ಮತ್ತು ಪವಾಡಗಳನ್ನು ಮಾಡುತ್ತಾರೆಂದು ಹೆಸರಿದ್ದ ಇಬ್ಬರು ಆಕ್ರಮಣಮಾರಿ ಸೈಕೋಟಿಕ್‌ಗಳ ವ್ಯಕ್ತಿ-ಅಧ್ಯಯನವನ್ನೊಳಗೊಂಡಿರುವಂಥದು. ಅವರು ಇವನ್ನು ಪಾಶ್ಚಾತ್ಯ ಮನೋವೈದ್ಯ ನಿದಾನದ ಪ್ರಕಾರ ಮನೋವಿಕಾರ ಅಥವಾ ಮನೋರೋಗ ಎಂದು ಗುರುತಿಸುವ ಬದಲು ಸ್ಥಳೀಯ ಶಬ್ದ 'ದೀವಾನಾ' ದಿಂದ ಗುರುತಿಸುತ್ತಾರೆ. ನಾನು ವೈದ್ಯನಾಗಿ ರೂಪುಗೊಳ್ಳುತ್ತಿದ್ದ ನನ್ನ ಪ್ರಾರಂಭದ ವರ್ಷಗಳಲ್ಲಿ ಅವರೊಂದಿಗೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದೆ. ಕೆಲವು ವರ್ಷಗಳ ಹಿಂದೆ ಭಾರತದಿಂದ ಸ್ವಿಟ್ಸರ್‌ಲೆಂಡಿಗೆ ಹೋದರು. 2004ರಲ್ಲಿ ಅವರು ತೀರಿಕೊಳ್ಳುವವರೆಗೂ ಅವರೊಂದಿಗಿನ ನನ್ನ ಸ್ನೇಹ ಮತ್ತು ಮಾತು-ಕತೆ ಮುಂದುವರಿದಿತ್ತು.

ಎನ್. ಸಿ. ಸೂರ್ಯ ಅವರು ಮನೋಚಿಕಿತ್ಸೆಯ ಅಧ್ಯಾಪಕರು ಮತ್ತು ನಾನು ನನ್ನ ಮೂಲ ತರಬೇತಿಯನ್ನು ಪಡೆದುಕೊಂಡ ಅಖಿಲಭಾರತ ಮಾನಸಿಕ ಆರೋಗ್ಯ ಸಂಸ್ಥೆಯ ನಿರ್ದೇಶಕರಾಗಿದ್ದರು. ಅವರು ಬ್ರಿಟನ್ನಿನ ಮನೋಚಿಕಿತ್ಸೆಯ ಒಬ್ಬ ಮಹಾನ್ ಗುರು ಆಗಿದ್ದ ಆಬ್ರಿ ಲೂಯಿಸ್ ಅವರಿಂದ ತರಬೇತಿ ಪಡೆದಿದ್ದರು. ಪಾಶ್ಚಾತ್ಯ ಮನೋಚಿಕಿತ್ಸೆಯಲ್ಲಿ ಆಳವಾದ ಜ್ಞಾನಹೊಂದಿದ್ದ ಅತ್ಯಂತ ಪ್ರತಿಭಾವಂತ ಅಧ್ಯಾಪಕರಾಗಿದ್ದರು. ನರವ್ಯೂಹಶಾಸ್ತ್ರ ಕುರಿತ ರಷ್ಯನ್ ಅಧ್ಯಯನದಲ್ಲಿ ಮತ್ತು ಪ್ರಾಚೀನ ಭಾರತೀಯ ಚಿಂತನೆಯಲ್ಲಿ ಅಷ್ಟೇ ಸಮಾನವಾದ ಪರಿಣತಿ ಹೊಂದಿದ್ದರು. ಪರಸ್ಪರ ಸಾದೃಶ್ಯವಿಲ್ಲದ ಈ ಮೂರು ವಿಭಿನ್ನ ಚಿಂತನ ಧಾರೆಗಳಲ್ಲಿ ಅವರೊಂದು ಅಗ್ನಿದಿವ್ಯದಂತಿದ್ದರೂ ಅವರು ಅತ್ಯಂತ ವಾಸ್ತವ(ವ್ಯಾವಹಾರಿಕ) ವ್ಯಕ್ತಿಯಾಗಿದ್ದರು. ಪ್ರಾರಂಭದಲ್ಲಿ ಅವರು ವಿಪರೀತ ಮದ್ಯಪಾನ ಮಾಡುವ ಸೇನಾ ಮನೋಚಿಕಿತ್ಸಕರಾಗಿದ್ದರು. ಚಂಚಲ ಪ್ರವೃತ್ತಿಯ, ದುಮ್ಮಾನದಿಂದ ಕೂಡಿದ ಒರಟೆನ್ನುವಷ್ಟು ಪ್ರಾಮಾಣಿಕ ವ್ಯಕ್ತಿ; ಆದರೆ ಅತ್ಯಂತ ಬುದ್ಧಿವಂತ, ಬಹುಶಃ ಶತಮಾನದ ಅತ್ಯುತ್ತಮ ಮೇಧಾವಿ ವ್ಯಕ್ತಿ ಅವರಾಗಿದ್ದರು. 70ರ ದಶಕದಲ್ಲಿ ಇದ್ದಕ್ಕಿದ್ದಂತೆ ಅವರು ಆ ಪ್ರಧಾನ ಮಾನಸಿಕ ಆರೋಗ್ಯ ಸಂಸ್ಥೆಯ ನಿರ್ದೇಶಕ ಸ್ಥಾನವನ್ನು ತ್ಯಜಿಸಿಬಿಡಲು ತೀರ್ಮಾನಿಸಿದರು. ಅಷ್ಟೇ ಅಲ್ಲ; ಎಲ್ಲವನ್ನೂ ತ್ಯಾಗಮಾಡಿ ಪಾಂಡಿಚೆರಿಯ ಅರವಿಂದಾಶ್ರಮವನ್ನು ಸೇರಿಕೊಂಡರು.

ತರಬೇತಿ ಪಡೆಯುವ ವೈದ್ಯನಾಗಿ ಮನೋವೈದ್ಯ ಮತ್ತು ಮಾನಸಿಕ ಚಿಕಿತ್ಸೆಗಳಲ್ಲಿ ಅವರಿಂದ ತರಬೇತಿ ಪಡೆಯುವ ಸದವಕಾಶ ನನ್ನದಾಗಿತ್ತು. ಅನುಭೂತಿ ಮತ್ತು ಆಧ್ಯಾತ್ಮವನ್ನು ಕುರಿತಂತೆ ಪ್ರತಿಯೊಬ್ಬರೂ ವೈಯಕ್ತಿಕ ಅನುಭವ ಹೊಂದಬೇಕು ಮತ್ತು ಮನುಷ್ಯ ತನ್ನ 'ಅಹಂ'ನ ಆದೇಶಗಳನ್ನು ಗೆಲ್ಲಬೇಕು ಎಂಬ ಅವರ ಹರಿತವಾದ ಚಿಂತನದಿಂದ ಹಾಗೂ ನಂಬಿಕೆಯಿಂದ ನಾನು ಅತ್ಯಂತ ಪ್ರಭಾವಿತನಾದೆ. ಆದರೆ 60ರ ದಶಕದಲ್ಲಿ ಈ ಚಿಂತನೆಗಳ

ಮಹತ್ವವನ್ನು ಅರ್ಥಮಾಡಿಕೊಳ್ಳುವ ಪ್ರೌಢಿಮೆ ನನಗಿರಲಿಲ್ಲ. ಇಪ್ಪತ್ತು ವರ್ಷಗಳ ಕಾಲ ಸಂಶೋಧನೆಯಲ್ಲಿ ಮತ್ತು ಸಾಮುದಾಯಿಕ ಮಾನಸಿಕ ಆರೋಗ್ಯ ಸೇವೆಯಲ್ಲಿ ತೊಡಗಿಸಿಕೊಂಡ ನಂತರವಷ್ಟೇ ನನ್ನ ಗುರುಗಳಿಬ್ಬರ ಆಶೀರ್ವಾದ ಪಡೆದು ಮತ್ತೆ ನನ್ನ ಆಧ್ಯಾತ್ಮಿಕ ಅನ್ವೇಷಣೆಗೆ ವಾಪಸಾದೆ. ಸೂರ್ಯ ಅವರು ಮಾನವರನ್ನು ಇನ್ನಷ್ಟು ಉತ್ತಮರನ್ನಾಗಿ ಪರಿವರ್ತಿಸುವ ಮಾರ್ಗಗಳನ್ನು ಹುಡುಕುವುದರಲ್ಲೇ ತನ್ನ ಜೀವನ ಕಳೆದರು. ಒಬ್ಬ ಪ್ರಾಮಾಣಿಕ ಸಾಧಕರಾದ ಅವರು ಯವಾಗಲೂ ವ್ಯಂಗ್ಯವಾಗಿ ಹೇಳುತ್ತಿದ್ದುದು-"ಎಲ್ಲ ಸಾಧಕರೂ ಮಂದ ಬುದ್ಧಿಯವರಾಗಿರುತ್ತಾರೆ" ಎಂದು.

ಜನ ಉತ್ತಮರಾಗಿ ಬದಲಾಗುತ್ತಾರೆಯೆ ಎಂದು ನಾನು ಯಾವಾಗಲೂ ವಿಸ್ಮಯ ಪಡುತ್ತಿದ್ದೆ. ಸೂರ್ಯ ಅವರು ತಮ್ಮ ಸ್ವಂತ ಬದುಕಿನ ಮೂಲಕ ಇದಕ್ಕೆ ಉತ್ತರ ಕೊಟ್ಟರು. ತಮ್ಮ ಕಠಿಣ ಪರಿಶ್ರಮ, ಸತತ ಪ್ರಯತ್ನ ಮತ್ತು ಅರವಿಂದಾಶ್ರಮದ ನೇತಾರರಾದ ಶ್ರೀ ಮಾತಾ ಅವರಲ್ಲಿನ ಪೂರ್ಣ ಶ್ರದ್ಧೆಯಿಂದ ಅವರು ತಾವು ಏನನ್ನು ಸಾಧಿಸಬೇಕೆಂದಿದ್ದರೋ ಅದನ್ನು ಸಾಧಿಸಿದರು. ಸುಮಾರು ಒಂದು ದಶಕದ ಹಿಂದೆ ಅವರು ಆಶ್ರಮದಲ್ಲಿ ತೀರಿಕೊಂಡರು.

ನಾನು ಅನ್ವೇಷಿಸಬೇಕೆಂದಿದ್ದ ಎರಡನೇ ಪ್ರಶ್ನೆಯೆಂದರೆ ಆಧ್ಯಾತ್ಮಿಕತೆಯು ಶ್ರೀಸಾಮಾನ್ಯರಿಗೆ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ನೆರವಾಗುತ್ತದೆಯೆ? ಎಂಬುದು. ನಿಜ, ಕೆಲವರು ಆಧ್ಯಾತ್ಮವು ಅಪ್ರಸ್ತುತ ಎಂದು ಪರಿಗಣಿಸುತ್ತಾರೆಂದು ನನಗೆ ಅರಿವಿತ್ತು. ಫ್ರಾಯ್ಡ್ 'ಧರ್ಮ' ಎನ್ನುವುದು ಖಂಡಿತವಾಗಿಯೂ ಒಂದು ಭ್ರಮೆ ಎಂದು ಭಾವಿಸಿದ್ದನು. ಅವನು ಮತ್ತು ಕ್ಲಾಸಿಕಲ್ (ಅಭಿಜಾತ) ಮನೋವಿಶ್ಲೇಷಣ ಪಂಥಕ್ಕೆ ಸೇರಿದ ಇನ್ನಿತರರು ಧರ್ಮ ಮತ್ತು ಆಧ್ಯಾತ್ಮವನ್ನು ರಹಸ್ಯ ಅನುಭಾವದಿಂದ ಬೇರ್ಪಡಿಸುವ ಪ್ರಯತ್ನ ಮಾಡಿ ಅದನ್ನು ಮನೋವಿಕಾರದ ಒಂದು ಅಭಿವ್ಯಕ್ತಿ ಎಂದು ಪರಿಗಣಿಸುತ್ತಾರೆ. ಸುಧೀರ್ ಕಾಕರ್ ಅವರು ಕ್ಲಾಸಿಕಲ್ ದೃಷ್ಟಿಕೋನಕ್ಕಿಂತ ಭಿನ್ನವಾದ ನಿಲುವನ್ನು ತಳೆದಿದ್ದಾಗ್ಯೂ ರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರಂಥ ಅತ್ಯುನ್ನತ ಆಧ್ಯಾತ್ಮಿಕ ವ್ಯಕ್ತಿಗಳಲ್ಲಿ ಕೂಡ ಕಂಡು ಬಂದ ಇದನ್ನು ವಿಗತಿಯ ಅಥವಾ ಹಿಂಜರಿಕೆಯ ವಿದ್ಯಮಾನ ಎಂದು ಪರಿಗಣಿಸಿದರು. ಇವರ ಅಭಿಪ್ರಾಯ ಇದಾದರೆ, ಅತ್ತ ಹೋಲ್ಬ್ ಅವರು ಆಧ್ಯಾತ್ಮಿಕ ಆಯಾಮವನ್ನು ಪರಿಗಣನೆಗೆ ತೆಗೆದುಕೊಳ್ಳುವಲ್ಲಿ ಮನೋಚಿಕಿತ್ಸೆಗೆ ಸಂಬಂಧಿಸಿದ ಪಾರಿಭಾಷಿಕಗಳು ಸಾಕಾಗುವುದಿಲ್ಲವೆಂದು ಅಭಿಪ್ರಾಯಿಸುತ್ತಾರೆ. ಅಲ್ಲದೆ ವ್ಯಾಪಕವಾಗಿ ಅಂಗೀಕರಿಸಲಾದ ಮತ್ತು ಸಂಸ್ಕೃತಿಯಲ್ಲಿ ಸೇರಿಹೋಗಿರುವ ಒಂದು ವರ್ತನೆ ನಮ್ಮ ಮುಂದಿದ್ದಾಗ ಮನೋಚಿಕಿತ್ಸೆಯ ದೃಷ್ಟಿಯಿಂದ ಅದರ ನಿದಾನ ಮಾಡಲು ಹೋಗಬಾರದು. ಆಧುನಿಕ ಮನೋವಿಶ್ಲೇಷಕರಾದ ಅಲನ್ ರೋಲ್ಯಾಂಡ್ ಅವರು ಆಧ್ಯಾತ್ಮಿಕತೆ ಮತ್ತು ಮನೋವಿಕಾರಗಳು ಸ್ವತಂತ್ರ ಆಯಾಮಗಳು, ಮತ್ತು ರೋಗಿಯೊಬ್ಬನಲ್ಲಿ ಎಲ್ಲೋ ಒಮ್ಮೊಮ್ಮೆ ಜೊತೆಗೂಡಿ ಇರಬಲ್ಲವು ಎಂದು ಸೂಚಿಸುತ್ತಾರೆ.

ನಾನು ಈ ಪ್ರಶ್ನೆಗಳನ್ನು ಕಾರ್ಯಸಾಧ್ಯವಾದ ರೀತಿಯಲ್ಲಿ ಕೈಗೆತ್ತಿಕೊಂಡೆ. ಬೇರೆಯವರ ವರ್ತನೆಯ ಬಗ್ಗೆ ತೀರ್ಪು ನೀಡುವುದಕ್ಕೆ ಮೊದಲು ಈ ಸಂಗತಿ ಅಥವಾ ವಿದ್ಯಮಾನವನ್ನು ಸ್ವತಃ ನಾನೇ ಅನುಭವಕ್ಕೆ ತಂದುಕೊಳ್ಳಬೇಕೆಂದು ಆಲೋಚಿಸಿದೆ. ನಾನು ನನ್ನ ಕೆಲಸದಿಂದ ಒಂದು ವರ್ಷದ ಅಧ್ಯಯನ ರಜೆಯನ್ನು ಪಡೆದುಕೊಂಡು ಒಂದು ವರ್ಷ ಪೂರ್ತಿ ಒಬ್ಬ ಗುರುವಿನ ಮಾರ್ಗದರ್ಶನದಲ್ಲಿ ಯೋಗ ಕಲಿಯುವುದರಲ್ಲಿ ವಿನಿಯೋಗಿಸಿದೆ. ನನ್ನ ಅನುಭವಗಳನ್ನು ದಿನಚರಿಯ ರೂಪದಲ್ಲಿ ದಿನವೂ ಬರೆದಿಟ್ಟೆ. ವರ್ಷದ ಕೊನೆಯಲ್ಲಿ ಅಲ್ಲಿಂದ ವಾಪಸ್ ಬಂದು ದಿನಚರಿಯಲ್ಲಿನ ನನ್ನ ಈ ಅನುಭವಗಳು ಮತ್ತು ಗಮನಿಕೆಗಳು ಸುಸಂಗತ ಮಾದರಿಗಳನ್ನೇನಾದರೂ ಹೊರಗೆಡಹುತ್ತವೆಯೋ ಹೇಗೆ ಎಂದು ಪರಿಶೀಲಿಸಿದೆ.

ಸರಿಸುಮಾರು ಅದೇ ಸಮಯದಲ್ಲಿ ಸದಾ ಕಾಲ ಅಲ್ಲದಿದ್ದರೂ ತಮ್ಮ ಬದುಕಿನ ಬಹಳಷ್ಟು ಸಮಯ ಆನಂದದ ಸ್ಥಿತಿಯಲ್ಲಿರುತ್ತಾರೆ ಎಂದು ಹೇಳಲಾದ ಹಾಗೂ ಪೂಜ್ಯ ವ್ಯಕ್ತಿಗಳೆಂದು ಹೆಸರಾದ ಭಾರತದ ಸಾಧು ಸನ್ಯಾಸಿಗಳು ನಿಜಕ್ಕೂ ಅಂಥ ಸ್ಥಿತಿಯಲ್ಲಿರುತ್ತಾರೆಯೆ? ಎಂದು ತಿಳಿಯಲಪೇಕ್ಷಿಸಿದೆ. ಯಾವುದನ್ನೂ ಸಂಬದ ವ್ಯಕ್ತಿಯ ಹಾಗೆ ವೈಜ್ಞಾನಿಕ ಮತ್ತು ವೈಚಾರಿಕ ವಿಧಾನದಲ್ಲಿ, ಆದರೆ ಅರ್ಥಶೋಧದ ಬಗ್ಗೆ ಹೆಚ್ಚಿನದನ್ನು ಕಂಡುಹಿಡಿಯಬೇಕೆಂಬ ಮನುಷ್ಯನ ಉತ್ಕಟ ಪ್ರೀತಿಯಿಂದ ಈ ಪ್ರಶ್ನೆಯನ್ನು ನಾನು ಎದುರಿಸಿದೆ.

ಸಂನ್ಯಾಸಿಗಳ ಬಗೆಗಿನ ನನ್ನ ಆಸಕ್ತಿ ಇನ್ನೊಂದು ದಿಕ್ಕಿನಿಂದಲೂ– ಅಂದರೆ 'ಸ್ಕಿಜೋಫ್ರೇನಿಯಾ' (ಛಿದ್ರ ಮನಸ್ಸು)ದಿಂದಲೂ ಹುಟ್ಟಿಕೊಂಡಿತು. 'ಸ್ಕಿಜೋಫ್ರೇನಿಯಾ' ಒಂದು ಅತ್ಯಂತ ಗಂಭೀರ ಮನೋವಿಕಾರ. ಆದರೆ ದುರ್ದೈವವಶಾತ್ ಅದರ ಬಗ್ಗೆ ತಿಳಿದುಬಂದಿರುವುದು ತುಂಬಾ ಕಡಿಮೆ. ಈ ಮಾನಸಿಕ ದುರವಸ್ಥೆಯ ಬಗೆಗಿನ ಒಂದು ಸಿದ್ಧಾಂತವೆಂದರೆ ತೀವ್ರ ಸ್ಕಿಜೋಫ್ರೆನಿಕ್ ರೋಗಿಗಳ 'ಅಹಂ' ನ ಎಲ್ಲೆಯ ಗೆರೆಗಳು ಅತ್ಯಂತ ತೆಳುವಾಗಿರುತ್ತವೆ ಎನ್ನುವುದು. ಇದು ನನಗೂ ಹಿಡಿಸುವಂಥದು. ಒತ್ತಡದ ಸಂದರ್ಭಗಳಲ್ಲಿ ಈ ಎಲ್ಲೆಗೆರೆಗಳು ಇನ್ನಷ್ಟು ದುರ್ಬಲಗೊಳ್ಳುತ್ತವೆ. ಆಗ ಈ ವ್ಯಕ್ತಿಗಳು 'ಅಹಂ' ಮತ್ತು 'ಅಹಂ' ಅಲ್ಲದ್ದರ ನಡುವಿನ ವ್ಯತ್ಯಾಸವನ್ನು ಗುರುತಿಸಲು ಅಸಮರ್ಥರಾಗುತ್ತಾರೆ. ಆ ಕಾರಣದಿಂದ ಅವರಲ್ಲಿ– ಆಲೋಚನೆಗಳಲ್ಲಿ ಅಡಚಣೆಗಳು, ವಿಭ್ರಮೆ ಮತ್ತು ಭ್ರಾಂತಿಯೇ ಮೊದಲಾದ ಸೈಕೋಟಿಕ್ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಎಲ್ಲೆನ್ ಕೊರಾನ್ ಮತ್ತು ಲೌಜಾನ್ ಅವರುಗಳು ಅಂಥ ಸೂಕ್ಷ್ಮ ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ಇತರರೊಂದಿಗೆ ಸಾಮಾಜಿಕ ಸಂಪರ್ಕ ಮತ್ತು ಸಂವಾದವನ್ನು ತಿರಸ್ಕರಿಸುವ ಮೂಲಕ ಸಕಾರಾತ್ಮಕವಾಗಿ ಹಿಂದೆ ಸರಿಯುವುದನ್ನು ರೂಢಿಸಿಕೊಳ್ಳಬಹುದು, ಎಂದು ಅಭಿಪ್ರಾಯ ಪಡುತ್ತಾರೆ. ವೈರಾಗ್ಯ ಮತ್ತು ಎಲ್ಲದರಿಂದ ಹಿಂದೆ ಸರಿಯುವಿಕೆಯ ಸಂನ್ಯಾಸ ಜೀವನವು ತೀವ್ರ ಸ್ಕಿಜೋಫ್ರೆನಿಕ್ಸ್ ರೋಗಿಗಳಿಗೆ ಸುರಕ್ಷಿತವಾದ ತಾಣವನ್ನೊದಗಿಸುವ ತಂತ್ರವಾಗಿರಬಹುದೆ ಎಂದು ನಾನು ಆಶ್ಚರ್ಯಪಟ್ಟಿದ್ದೇನೆ.

ಈ ಪರಿಶೋಧನೆಯಲ್ಲಿ ನಾನು ತೊಡಗಿಸಿಕೊಳ್ಳಲು ಇತರೆ ಕಾರಣಗಳೂ ಇದ್ದುವು. ನನಗೆ ಆನುಭಾವಿಕ ಅನುಭವಗಳನ್ನು ಅಧ್ಯಯನ ಮಾಡಬೇಕೆಂಬ ಆಸಕ್ತಿ ಇತ್ತು. ಈ ಬಗ್ಗೆ ನಾನು ಅನೇಕ ಕಥನಗಳನ್ನು ಓದಿದ್ದೆ.

ಅಂಥ ಅನುಭಾವದ ಅನುಭವಗಳನ್ನು ಉಂಟುಮಾಡುವ ಅನೇಕ ಅನುಷ್ಠಾನಗಳನ್ನು ಸಂನ್ಯಾಸಿಗಳು ಆಚರಿಸುತ್ತಾರೆಂದು ನನಗೆ ತಿಳಿದಿತ್ತು. ಅವರಿಂದಲೇ ಈ ಎಲ್ಲ ವಿವರಗಳನ್ನು ಕೇಳಿ ಪಡೆಯಬೇಕೆಂದು ಹಾಗೂ ಆ ಅನುಭವಗಳನ್ನು ಹೊಂದಲು ಅವರು ಬಳಸುವ ವಿಧಾನಗಳ ಬಗ್ಗೆ ತಿಳಿದುಕೊಳ್ಳಬೇಕೆಂದು ಬಯಸಿದ್ದೆ.

ಯೋಗಸೂತ್ರಗಳು ಸಿದ್ಧಿಗಳ ಬಗ್ಗೆ ಹೇಳುತ್ತವೆ. ಈ ವಿಶೇಷ ಶಕ್ತಿಗಳು ಹಾರುವ ಸಾಮರ್ಥ್ಯ, ಕಣ್ಣಿಗೆ ಕಾಣಿಸದಿರುವುದು ಅಥವಾ ಆನೆಯಷ್ಟು ಬಲವನ್ನು ಹೊಂದುವುದು ಇವೇ ಮೊದಲಾದುವು. ಹೇಳಬೇಕೆಂದರೆ ಪತಂಜಲಿಯ 196 ಕಾರಿಕೆಗಳಲ್ಲಿ ಐವತ್ತೈದು ಈ ವಿಶೇಷ ಶಕ್ತಿಗಳಿಗೆ ಮೀಸಲಾಗಿವೆ. ಕೆಲವು ಸಂನ್ಯಾಸಿಗಳು ಈ ವಿಶೇಷ ಸಿದ್ಧಿಗಳನ್ನು ಹೊಂದಿರುತ್ತಾರೆಂಬ ವದಂತಿಯಂತೂ ಸಾಮಾನ್ಯ. ಈಗ ನಮಗೆ ತಿಳಿದಿರುವ ಭೌತ ಶಾಸ್ತ್ರದ ನಿಯಮಗಳನ್ನು ಮೀರಿ ಹೋಗುವಂಥವರು ನಿಜಕ್ಕೂ ಇದ್ದಾರೆಯೋ ಹೇಗೆ ಎಂದು ತಿಳಿದುಕೊಳ್ಳ ಬೇಕೆಂಬುದು ನನ್ನ ಆಸಕ್ತಿ.

ಸಾಧುಗಳ ಬಗೆಗಿನ ನನ್ನ ಆಸಕ್ತಿಯ ಕೊನೆಯ ಕಾರಣ ಮನೋಚಿಕಿತ್ಸಕನಾದ ನನ್ನ ವೃತ್ತಿಗೆ ಸಂಬಂಧಿಸಿದೆ. ಬಹಳಷ್ಟು ಜನರು ತಮ್ಮ ಭಾವನಾತ್ಮಕ ಸಮಸ್ಯೆಗಳ ಪರಿಹಾರಕ್ಕೆ ವೃತ್ತಿನಿರತ ಮನೋಚಿಕಿತ್ಸಕರ ಬಳಿಗೆ ಹೋಗುವುದಕ್ಕಿಂತ ಹೆಚ್ಚಾಗಿ ಸಾಧು ಸಂನ್ಯಾಸಿಗಳ ಬಳಿಗೆ ಧಾವಿಸುವುದೇ ಹೆಚ್ಚು ಎಂದು ಭಾರತದಲ್ಲಿ ಹುಟ್ಟಿ ಬೆಳೆದ ನನಗೆ ಗೊತ್ತು. ನನ್ನನ್ನೂ ಒಳಗೊಂಡಂತೆ ಇತರೆಲ್ಲ ಚಿಕಿತ್ಸಕರಿಗೆ ಇನ್ನಷ್ಟು ಉತ್ತಮ ಚಿಕಿತ್ಸಕರಾಗಲು ನೆರವಾಗುವಂಥದೇನಾದರೂ ಸಾಧು ಸಂನ್ಯಾಸಿಗಳಿಂದ ಕಲಿಯುವಂಥದು ಇದ್ದಿರಬಹುದೆ ಎಂದು ನಾನು ವಿಸ್ಮಯ ಪಟ್ಟಿದ್ದೇನೆ.

ಇದೊಂದು ಅತ್ಯಂತ ಮಹತ್ವಾಕಾಂಕ್ಷೆಯ ಕಾರ್ಯಸೂಚಿ. ನನ್ನ ಗುರುವಿನ ಮಾರ್ಗದರ್ಶನದಲ್ಲಿ ಒಂದು ವರ್ಷದವರೆಗೆ ಯೋಗವನ್ನು ಅಭ್ಯಾಸ ಮಾಡಿದ ಮೇಲೆ ಪ್ರತಿ ವರ್ಷವೂ ಸಂನ್ಯಾಸಿಗಳನ್ನು ಸಂದರ್ಶಿಸಲು ಹಿಮಾಲಯದಲ್ಲಿ ಒಂದು ತಿಂಗಳು ಕಳೆಯುವ ನಿರ್ಧಾರ ಮಾಡಿ ಇಪ್ಪತ್ತೈದು ವರ್ಷಗಳ ವರೆಗೆ ಇದನ್ನು ಮುಂದುವರಿಸಿದೆ. ಬೇರೆ ಯಾವ ಅಡಚಣೆಯೂ ಇಲ್ಲದೆ ನಿರ್ವಿಘ್ನವಾಗಿ ತಮ್ಮ ಸಾಧನೆಗಳನ್ನು ಮುಂದುವರಿಸಿಕೊಂಡು ಹೋಗುವ ಸಲುವಾಗಿಯೇ ಕೆಲವು ಸಂನ್ಯಾಸಿಗಳು ಹಿಮಾಲಯದ ಅತಿ ಎತ್ತರದ ದುರ್ಗಮ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಎತ್ತರದ ಪರ್ವತ ಪ್ರದೇಶಗಳಲ್ಲಿ ಚಾರಣ ಮಾಡುವ ನನ್ನ ಹವ್ಯಾಸವು ಈ ಕಾರ್ಯವನ್ನು ಕೈಗೊಳ್ಳುವಲ್ಲಿ ನನಗೆ ತುಂಬ ಸಹಾಯಕವಾಯಿತು.

ರವಿ ಕಪೂರ

ಭಾಗ–1

ನನ್ನ ಗುರುವಿನ ಪದತಲದಲ್ಲಿ

ಮೊದಲ ಮೆಟ್ಟಿಲು

ಭಾರತೀಯ ತತ್ತ್ವಶಾಸ್ತ್ರದ ಎಲ್ಲ ಸಾಂಪ್ರದಾಯಿಕ ಸಿದ್ಧಾಂತಗಳ ಗುರಿ ಒಂದೇ. ಅದೆಂದರೆ ಪರಿಪೂರ್ಣತೆಯ ಮೂಲಕ ಆತ್ಮದ ಮುಕ್ತಿಯನ್ನು ಸಾಧಿಸುವುದು. ಅದು ಯೋಗದವಿಧಾನದಿಂದ.

– ವಿವೇಕಾನಂದ

ನಾನು ಉತ್ತರಿಸಲು ಸಾಧ್ಯವಾಗದಂಥ ಪ್ರಶ್ನೆಗಳನ್ನು ನನ್ನ ವೃತ್ತಿ ನನ್ನ ಮುಂದೆ ಸವಾಲಿನ ರೂಪದಲ್ಲಿ ಒಡ್ಡಿದ ಕಾರಣವಾಗಿ ನಾನು ಕೈಕೊಂಡ ಸಂಶೋಧನಾ ಅಧ್ಯಯನದ ಕಥನವೇ ಪ್ರಸ್ತುತ ಬರಹ. ವೃತ್ತಿಯಿಂದ ನಾನೊಬ್ಬ ಮನೋರೋಗ ಚಿಕಿತ್ಸಕ. ಮನೋವ್ಯಾಧಿಯಿಂದ ಉಂಟಾಗುವ ವ್ಯಥೆಯನ್ನು ಕಡಿಮೆ ಮಾಡುವಲ್ಲಿ ಮನೋರೋಗ ಚಿಕಿತ್ಸೆಯು ಬಹುಮಟ್ಟಿಗೆ ಯಶಸ್ವಿಯೆನಿಸಿದೆ. ಆದರೂ ಕೆಲವೊಮ್ಮೆ 'ಸಕಾರಾತ್ಮಕ ಮಾನಸಿಕ ಸ್ವಾಸ್ಥ್ಯ' ವೆಂದು ಹೇಳಲಾಗುವ ಆ ಒಂದು ಸ್ಥಿತಿಗೆ ಒತ್ತಾಸೆ ನೀಡುವಲ್ಲಿ ಅದಕ್ಕೆ ಸಿಕ್ಕಿರುವ ಯಶಸ್ಸು ಕಡಿಮೆಯೇ ಎಂಬುದನ್ನು ನನ್ನ ಸಹೋದ್ಯೋಗಿಗಳಂತೆ ನಾನೂ ಗಮನಿಸಿದ್ದೆ. ಬದುಕಿನ ಒತ್ತಡಗಳನ್ನು ನಿರ್ವಹಿಸುವ ಸಾಮರ್ಥ್ಯ, ಹೆಚ್ಚಿನ ಚೈತನ್ಯದ ಅನುಭವ ಮತ್ತು ಆ ಚೈತನ್ಯವನ್ನು ಸಂತಸ, ಕರುಣೆ ಹಾಗೂ ಸೃಜನಶೀಲತೆಯಾಗಿ ಪರಿವರ್ತಿಸುವುದನ್ನು ಈ ಸ್ಥಿತಿ ಒಳಗೊಂಡಿದೆ. ಯೋಗದ ವಿಧಾನಗಳಿಂದ ಈ ಫಲಿತಾಂಶಗಳನ್ನು ಪಡೆದುಕೊಳ್ಳಬಹುದೆಂದು ಯೋಗಾಭ್ಯಾಸಿಗಳು ಹೇಳಿಕೊಳ್ಳುತ್ತಾರೆ. ಅವರು ಹೇಳುವಂತೆ ಇದು ನಿಜವೆ ಮತ್ತು ಮನೋರೋಗ ಚಿಕಿತ್ಸೆಯಲ್ಲಿ ಈ ವಿಧಾನಗಳು ಪ್ರಯೋಜನಕಾರಿ ಆಗಬಹುದೆ ಎಂಬುದನ್ನು ನಾನು ಕಂಡುಕೊಳ್ಳ ಬಯಸಿದೆ.

ಮನುಷ್ಯನ ದೇಹದ ಮೇಲೆ ಯೋಗದ ಪರಿಣಾಮಗಳನ್ನು ಕುರಿತಂತೆ ಅನೇಕ ಅಧ್ಯಯನಗಳು ನಡೆದಿವೆ. ಉದಾಹರಣೆಗೆ ನರವ್ಯೂಹಶಾಸ್ತ್ರ(Neurophysiological), ಜೀವದ್ರವ್ಯ ಪರಿಣಾಮ(metabolic) ಹಾಗೂ ಅಂತಃಸ್ರಾವಗಳ (Hormones) ಕಾರ್ಯಗಳಿಗೆ ಸಂಬಂಧಿಸಿದ ಅಧ್ಯಯನಗಳು. ಆದರೆ ವ್ಯಕ್ತಿಗತ ಅನುಭವ ಅಥವಾ ಸ್ವಂತ ಅನುಭವಗಳಿಗೆ ಸಂಬಂಧಿಸಿದಂತೆ ಯಾವ ಅಧ್ಯಯನವೂ ನಡೆದಿಲ್ಲ. ಆ ಕಾರಣದಿಂದ ಯೋಗವು, ಆಂತರಿಕ ಮನಸ್ಥಿತಿಯನ್ನು ಮತ್ತು ಒತ್ತಡಕ್ಕೆ ಸಂಬಂಧಿಸಿದ ಪ್ರತಿಕ್ರಿಯೆಗಳನ್ನು ಪ್ರಭಾವಿಸಬಲ್ಲುದೋ ಹೇಗೆ ಎಂಬುದು ಮಾನಸಿಕ ಆರೋಗ್ಯ ತಜ್ಞರ ಮುಂದಿರುವ ಬಹು ಮಹತ್ವದ ಪ್ರಶ್ನೆ. ಈ ಕ್ಷೇತ್ರದಲ್ಲಿ ಸಂಶೋಧನ ಸಾಮಗ್ರಿಯ ಅಭಾವವಿದೆ. ಅದಕ್ಕಿರುವ ಒಂದು ಕಾರಣವೆಂದರೆ ಭಾವಾವೇಶದ ಪ್ರತಿಕ್ರಿಯೆಗಳನ್ನು ವಸ್ತುನಿಷ್ಠವಾಗಿ ಅಧ್ಯಯನ

ಮಾಡಬೇಕಾದ ಕಷ್ಟ. ಈ ಹಿಂದೆ ವಿಜ್ಞಾನಿಗಳು ವಿಜ್ಞಾನದಲ್ಲಿ ಕೆಲವೊಮ್ಮೆ ಹೊಸ ನೆಲೆಗಳನ್ನು ತೆರೆದು ತೋರುವ ಸಲುವಾಗಿ ತಮ್ಮನ್ನೇ ಪ್ರಯೋಗಕ್ಕೆ ವ್ಯಕ್ತಿಗಳಾಗಿ ಒಡ್ಡಿಕೊಂಡಿದ್ದಾರೆ. ಅನಂತರದಲ್ಲಿ ಇನ್ನೂ ಹೆಚ್ಚಿನ ಪ್ರಮಾಣಬದ್ಧ ರೀತಿಗಳಲ್ಲಿ ಪರೀಕ್ಷಿಸುವ ಸಲುವಾಗಿ ಅವರುಗಳು ಫಲಿತಾಂಶಗಳನ್ನು ಎಚ್ಚರಿಕೆಯಿಂದ ದಾಖಲಿಸಿದರು. ನನ್ನ ಆಸಕ್ತಿಯನ್ನು ಇನ್ನಷ್ಟು ಮುಂದಕ್ಕೆ ಒಯ್ಯಬೇಕಾದಲ್ಲಿ ನನ್ನನ್ನೇ ನಾನು ಪ್ರಯೋಗಕ್ಕೆ ಒಬ್ಬ ವ್ಯಕ್ತಿಯಾಗಿ ಹಾಗೂ ಪರಿಶೋಧಕನಾಗಿ ಬಳಸಬೇಕಾಗುತ್ತದೆಂಬ ನಿರ್ಧಾರಕ್ಕೆ ಕೂಡಲೇ ಬಂದೆ. ಸಹಾಯಧನಕ್ಕಾಗಿ ಭಾರತದ ವೈದ್ಯಕೀಯ ಸಂಶೋಧನಾ ಮಂಡಳಿಗೆ ಅರ್ಜಿ ಸಲ್ಲಿಸಿದೆ. ಹಾಗೂ 1981–82ರ ವರೆಗೆ ಒಂದು ವರ್ಷಕಾಲ ಅದರಿಂದ ಸಹಾಯಧನ ಪಡೆದೆ. ಇದಕ್ಕೆ ಪ್ರತಿಯಾಗಿ ನಾನು ಮಾಡಬೇಕಾಗಿದ್ದದ್ದು, ಪತಂಜಲಿಯ ಯೋಗಸೂತ್ರಗಳಲ್ಲಿ ತಿಳಿಸಿರುವ ಪ್ರಕಾರ ನನಗೆ ಯೋಗವನ್ನು ಕಲಿಸಿಕೊಡುವ ಗುರುವೊಬ್ಬನನ್ನು ಹುಡುಕಿ ನನ್ನ ಶಾರೀರಿಕ ಮತ್ತು ಭಾವನಾತ್ಮಕ ಪ್ರತಿಕ್ರಿಯೆಗಳನ್ನು ವ್ಯವಸ್ಥಿತ ರೀತಿಯಲ್ಲಿ ದಾಖಲುಗೊಳಿಸುವುದು.

ಅಧ್ಯಯನದ ವಿವರಗಳಿಗೆ ಹೋಗುವುದಕ್ಕೆ ಮುನ್ನ ಈ ಪ್ರಯೋಗಕ್ಕೆ ಒಳಗಾಗುವ ವ್ಯಕ್ತಿ ಮತ್ತು ಪರಿಶೋಧಕ ಇಬ್ಬರೂ ಒಬ್ಬನೇ ಆಗಿರುವ ನನ್ನ ಆತ್ಮವೃತ್ತಾಂತಕ್ಕೆ ಸಂಬಂಧಿಸಿದ ವಿವರಗಳನ್ನು ಓದುಗನಿಗೆ ಮೊದಲು ನೀಡುವೆ. ನನ್ನ ವೈಯಕ್ತಿಕ ಸಂಗತಿಗಳ ಯಾವ ಅಂಶಗಳು ಯೋಗದಲ್ಲಿ ನನ್ನ ಆಸಕ್ತಿ ಬೆಳೆಯುತ್ತ ಹೋದದ್ದಕ್ಕೆ ಅತ್ಯಂತ ಹೆಚ್ಚು ಸಂಗತವೆನಿಸುತ್ತವೆಯೋ ಅಷ್ಟಕ್ಕೆ ಮಾತ್ರ ಈ ವಿವರಗಳನ್ನು ಸೀಮಿತಗೊಳಿಸುತ್ತೇನೆ.

ಎಂ.ಬಿ.ಬಿ.ಎಸ್. ಕೋರ್ಸಿನ ಮೊದಲ ವರ್ಷದಲ್ಲಿ ಅಂಗರಚನಾಶಾಸ್ತ್ರವನ್ನು (Anatomy) ಕಲಿಯುವುದರಲ್ಲಿ ನನಗೆ ಸಂತೋಷ ಉಂಟಾಗುತ್ತಿರಲಿಲ್ಲ. ಇದನ್ನು ನಾನು ಕಂಡುಕೊಂಡಾಗ ಆಧ್ಯಾತ್ಮ ವಿಷಯಗಳಲ್ಲಿ ನನ್ನ ಆಸಕ್ತಿ ಶುರುವಾಯಿತು. ಹೆಣವನ್ನು ಕೊಯ್ಯುವ ಸಂದರ್ಭ ನನ್ನಲ್ಲಿ ಅತ್ಯಂತ ಜುಗುಪ್ಸೆ ಮೂಡಿಸಿತು ಮತ್ತು ಆ ವಿಷಯವನ್ನು ಕಲಿಯಲು ಅಗತ್ಯವಾದ, ಯಾಂತ್ರಿಕವಾಗಿ ಉರುಹೊಡೆಯುವಿಕೆ ನನಗೆ ಅತ್ಯಂತ ಕಿರಿಕಿರಿಯೆನಿಸಿತು. ನಾನು ತೀರ ನಿರುತ್ಸಾಹಗೊಂಡು ಹೆಚ್ಚು ಕಡಿಮೆ ಎಂ. ಬಿ. ಬಿ. ಎಸ್. ಕೋರ್ಸನ್ನೇ ಬಿಟ್ಟುಬಿಡಬೇಕೆಂದು ನಿರ್ಧರಿಸಿದೆ. ಆದರೆ ವೈದ್ಯರಾದ ನನ್ನ ತಂದೆಯವರು ಕೋರ್ಸನ್ನು ಮುಂದುವರಿಸುವಂತೆ ನನ್ನ ಮನವೊಲಿಸಿದರು. ಈ ಒಂದು ಬೇಗುದಿಯ ಸಮಯದಲ್ಲಿ ನಾನು ಭಗವದ್ಗೀತೆಯನ್ನು ಓದಲಾರಂಭಿಸಿದೆ. ಇದಕ್ಕೆ ಮುಂಚೆ ನಾನಾಗಲಿ, ನನ್ನ ಕುಟುಂಬವಾಗಲಿ ಧಾರ್ಮಿಕ ಮನೋವೃತ್ತಿಯದಾಗಿರಲಿಲ್ಲ. ನನ್ನ ವೃತ್ತಿ ತರಬೇತಿಯ ಮೂರನೇ ವರ್ಷದಲ್ಲಿ ಮನೋರೋಗ ಚಿಕಿತ್ಸಕರಾದ ಪ್ರೊ. ನೇಕಿಯವರ ಉಪನ್ಯಾಸಗಳು ನನ್ನ ನಿರುತ್ಸಾಹವನ್ನು ಅಲ್ಲಾಡಿಸಿಬಿಟ್ಟವು. ನಾನು ಮನೋರೋಗ ಚಿಕಿತ್ಸಕನಾಗಬೇಕೆಂದು ನಿರ್ಧರಿಸಿದೆ. ಈ ನಿರ್ಧಾರವು ನನಗೊಂದು ಗುರಿಯನ್ನು ನೀಡಿದ್ದಷ್ಟೇ ಅಲ್ಲದೆ ಮನೋರೋಗಶಾಸ್ತ್ರದ ಅಧ್ಯಯನದಲ್ಲಿ ಹೆಚ್ಚು ಸಮಯವನ್ನು ವಿನಿಯೋಗಿಸುವುದನ್ನು ಖಚಿತಪಡಿಸಿತು. ವೈದ್ಯಶಾಸ್ತ್ರ ಕಲಿಕೆಯಲ್ಲಿನ ನನ್ನ ಆಸಕ್ತಿ ಕೂಡ ಹೆಚ್ಚಾಯಿತು. ಆಧ್ಯಾತ್ಮ

ಹಾಗೂ ತತ್ತ್ವಶಾಸ್ತ್ರದಲ್ಲಿನ ನನ್ನ ಆಸಕ್ತಿ ಎಂದಿನಂತೆ ಮುಂದುವರಿಯಿತು. ಅಲ್ಲದೆ ಎಂ.ಬಿ.ಬಿ.ಎಸ್. ಮುಗಿಸುವ ಹೊತ್ತಿಗೆ ಪಾಶಾತ್ಯ ಅಸ್ತಿತ್ವವಾದಕ್ಕೆ ಸಂಬಂಧಿಸಿದ ಮತ್ತು ಭಾರತೀಯ ವೇದಾಂತಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಬಹಳವಾಗಿ ಓದಿಕೊಂಡಿದ್ದೆ.

ಎಂ.ಬಿ.ಬಿ.ಎಸ್. ಕೋರ್ಸ್ ಮುಗಿಸಿದ ಮೇಲೆ ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆಯಿಂದ ಮನೋ ವೈದ್ಯಶಾಸ್ತ್ರದಲ್ಲಿ ಡಿಪ್ಲೊಮಾ (DPM) ಮಾಡಿದೆ. ಇಲ್ಲಿ ಪ್ರೊ. ಎಸ್.ಕೆ. ರಾಮಚಂದ್ರರಾಯರ ಪ್ರಭಾವದಿಂದಾಗಿ ಬೌದ್ಧಸಾಹಿತ್ಯದ ತಾರ್ಕಿಕ ಸರಳತೆಯ ಪರಿಚಯ ನನಗಾಯಿತು.

ಮನೋರೋಗ ಶಾಸ್ತ್ರದಲ್ಲಿ ನನಗೆ ಗುರುಗಳಾಗಿದ್ದ ಪ್ರೊ. ಎರ್ನಾಹೋಬ್ ಕೂಡ ಆಧ್ಯಾತ್ಮದ ಒಲವುಳ್ಳ ಮನೋರೋಗ ತಜ್ಞರೆನಿಸಿದ ಯೂಂಗ್ ಮತ್ತು ಮೆಡಾರ್ಡ್ ಬಾಸ್ ಅವರುಗಳ ಬರಹಗಳ ಕುರಿತಾದ ನನ್ನ ಆಸಕ್ತಿಯನ್ನು ಪ್ರೋತ್ಸಾಹಿಸಿದರು. ನನ್ನ ಮೇಲೆ ಅತಿ ಹೆಚ್ಚಿನ ಪ್ರಭಾವ ಬೀರಿದವರೆಂದರೆ ಬಹುಶಃ ಮನೋರೋಗಶಾಸ್ತ್ರದ ನನ್ನ ಇನ್ನೊಬ್ಬ ಗುರುಗಳಾದ ಪ್ರೊ. ಎಸ್.ಸಿ. ಸೂರ್ಯ ಅವರು. ಮನೋರೋಗಶಾಸ್ತ್ರ ಮತ್ತು ಆಧ್ಯಾತ್ಮ ಈ ಎರಡೂ ವಿಷಯಗಳಲ್ಲಿ ಅವರೊಂದಿಗೆ ನನ್ನ ವಾಗ್ಯುದ್ಧ ನಡೆದೇ ಇತ್ತು. ವ್ಯಕ್ತಿಗತ ಅನುಭವದಿಂದ ಮಾತ್ರವೇ ಆಧ್ಯಾತ್ಮಿಕ ಜ್ಞಾನ ಸಾಧ್ಯವಾಗುವಂಥದೆಂದು ಅವರು ಒತ್ತಿ ಹೇಳುತ್ತಿದ್ದುದೇ ಈ ವಾಗ್ಯುದ್ಧಗಳಿಗೆ ಕಾರಣವೆಂದು ಆಮೇಲೆ ಚೆನ್ನಾಗಿ ಯೋಚಿಸಿದಾಗ ನನಗೆ ಅರ್ಥವಾಯಿತು. ಅಂಥ ಜ್ಞಾನದ ಸಲುವಾಗಿ ನನ್ನ ಜೀವನ ಶೈಲಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವುದನ್ನು ಒಪ್ಪಲು ನಾನು ಸಿದ್ಧನಿರಲಿಲ್ಲ.

ಮನೋವೈದ್ಯಶಾಸ್ತ್ರದಲ್ಲಿನ ಡಿಪ್ಲೊಮಾ (DPM) ಮುಗಿಸಿದ ಮೇಲೆ ನಾನು ಮದುವೆಯಾದೆ. ಒಂದು ವರ್ಷದೊಳಗೆ ಪ್ರೊ. ಕಾರ್‌ಸ್ಟೇಸ್ (Carstairs) ಅವರಲ್ಲಿ ಅಧ್ಯಯನ ಮಾಡಲು ಎಡಿನ್ ಬರ್ಗ್‌ಗೆ ತೆರಳಿದೆ. ವಾಸ್ತವಾಂಶಗಳಿಗೆ ಕಟ್ಟುಬಿದ್ದ, ನೆಲದ ಮೇಲೆ ಕಾಲೂರಿದ್ದ ಈ ನನ್ನ ಗುರುಗಳು ನನ್ನ ಮನಸ್ಸಿನ ಮೇಲೆ ಅಸಾಧಾರಣವಾದ ಹಾಗೂ ಶಾಶ್ವತವಾದ ಪ್ರಭಾವ ಬೀರಿದರು. ಹಾಗಾಗಿ ನಾನು ಸಾಂಕ್ರಾಮಿಕ ಮನೋರೋಗ ಶಾಸ್ತ್ರದ (Psychiatric Epidemology) ಅಧ್ಯಯನದಲ್ಲಿ ಆಳವಾಗಿ ತೊಡಗಿಸಿ ಕೊಂಡುಬಿಟ್ಟೆ. ಇದಂತೂ ನನ್ನ ಈ ಮೊದಲಿನ ಆಧ್ಯಾತ್ಮಿಕ ಆಸಕ್ತಿಗಳಿಂದ ತೀರ ಹೊರತಾಗಿದ್ದ ವಿಷಯವಾಗಿತ್ತು.

ಬೆಂಗಳೂರಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆಯಲ್ಲಿ (NIMHANS) ಸಾಮುದಾಯಿಕ ಮನೋರೋಗ ಶಾಸ್ತ್ರದಲ್ಲಿ ಪ್ರಾಧ್ಯಾಪಕನಾಗಿ ನೇಮಕ ಹೊಂದಿದಾಗ ಮತ್ತೆ ನಾನು ನನ್ನ ಹಿಂದಿನ ಆಧ್ಯಾತ್ಮಿಕ ಆಸಕ್ತಿಗಳಿಗೆ ವಾಪಸಾದೆ. ಇಷ್ಟು ಹೊತ್ತಿಗೆ ನಾನು ಸಾಂಕ್ರಾಮಿಕ ರೋಗಶಾಸ್ತ್ರದಲ್ಲಿ ಮತ್ತು ಸಾಮಾಜಿಕ ಮನೋರೋಗಶಾಸ್ತ್ರದ ಕ್ಷೇತ್ರದಲ್ಲಿ ಕೆಲಮಟ್ಟಿನ ಮಾನ್ಯತೆ ಗಳಿಸಿದ್ದೆ. ಯಾವೊಂದು ಸಮಾಜವೇ ಆದರೂ ಯಾವೊತ್ತೂ ಒತ್ತಡದಿಂದ ಮುಕ್ತವಾದದ್ದೇ ಇಲ್ಲ ಹಾಗೂ ಎಂದಿಗೂ ಆಗುವುದಿಲ್ಲ ಎಂಬ ಒಂದು

ಭಾವನೆ ನನಗೆ ಬರತೊಡಗಿತು. ಒಂದು ಬಗೆಯ ಒತ್ತಡವನ್ನು ನಾವು ನಿರ್ಮೂಲ ಮಾಡಿದರೆ ಇನ್ನೊಂದು ಬಗೆಯ ಒತ್ತಡ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ ಬಡತನ ಅಸಂತೋಷವನ್ನುಂಟುಮಾಡುತ್ತದೆ; ಆದರೆ ಶ್ರೀಮಂತಿಕೆ ಕೂಡ ಅದರದೇ ಆದ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಮನೋರೋಗಶಾಸ್ತ್ರದ ಮುಂದಿರುವ ದೊಡ್ಡ ಸವಾಲೆಂದರೆ ಪರಿಸರದ ಒತ್ತಡವನ್ನು ದೂರಮಾಡುವುದಕ್ಕಿಂತ ಒತ್ತಡವನ್ನು ತಾಳಿಕೊಳ್ಳುವ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸುವ ವಿಧಾನಗಳನ್ನು ಕಂಡುಕೊಳ್ಳುವುದು. ಮಾನಸಿಕ ಒತ್ತಡವನ್ನು ತಾಳಿಕೊಳ್ಳುವ ಸಾಮರ್ಥ್ಯತೆ ಹೆಚ್ಚಿಸುವುದಾಗಿ ಹಕ್ಕುಸಾಧಿಸುವ ಒಂದು ಆಧ್ಯಾತ್ಮಿಕ ಪರಂಪರೆಯೆಂದರೆ ಯೋಗ.

ಯೋಗ ಶಿಕ್ಷಕರ ಬಳಿಗೆ ಹೋಗಲಾರಂಭಿಸಿದೆ. ಅಂತರರಾಷ್ಟ್ರೀಯ ಖ್ಯಾತಿಯ ಯೋಗಶಿಕ್ಷಕರೊಂದಿಗಿನ ಈ ಮುಂಚಿನ ನನ್ನ ಅನುಭವ ನೋವಿನಿಂದ ಕೂಡಿತ್ತು. ಸಂದೇಹ ಮತ್ತು ದುರಾಸೆಗಳಿಂದ ಅವರೂ ಪೀಡಿತರಾಗಿದ್ದರೆಂದು ನನಗೆ ಅನಿಸಿದ್ದರಿಂದ ನಾನು ಅವರಿಂದ ಹಿಂದೆ ಸರಿದೆ. ಆನಂತರ ಯೋಚಿಸಿದಾಗ ಇದು ನನ್ನದೇ ಒಂದು ಕೊರತೆ ಎನಿಸಿತು. ಅದು ಬಹುಶಃ ಯೋಗದ ತ್ರಾಸದಾಯಕ ಮಾರ್ಗದಿಂದ ದೂರ ಉಳಿಯುವುದಕ್ಕೊಂದು ನೆಪ.

1980ರ ಹೊತ್ತಿಗೆ ನನ್ನ ವೈಯಕ್ತಿಕ ಸಂದೇಹಗಳನ್ನು ಪರಿಹರಿಸಿಕೊಳ್ಳುವ ಹಾಗೂ ಮನೋರೋಗ ಚಿಕಿತ್ಸೆಯ ಸಂಶೋಧನೆಯಲ್ಲಿ ಹೊಸದೊಂದು ಮಾರ್ಗವನ್ನು ಅನ್ವೇಷಿಸುವ ಸಲುವಾಗಿ ಯೋಗದ ಗಂಭೀರ ಅಧ್ಯಯನವನ್ನು ಕೈಗೊಳ್ಳಲು ನಾನು ಸಿದ್ಧನಾಗಿರುವೆನೆಂದು ಅನ್ನಿಸಿತು. ಮನೋರೋಗ ಚಿಕಿತ್ಸೆಗೆ ಸಂಬಂಧಿಸಿದಂತೆ ಯೋಗಸಾಹಿತ್ಯದ ನನ್ನ ಓದು ನನಗೆ ತೃಪ್ತಿಕರವೆನಿಸಲಿಲ್ಲ. ಬಹಳಷ್ಟು ಸಂಶೋಧಕರಿಗೆ ಯೋಗ ಅಧ್ಯಯನ ಶಿಸ್ತಿನ ನೇರ ತಿಳಿವಳಿಕೆ ಇದ್ದಂತೆ ಕಾಣಲಿಲ್ಲ. ಆ ಕಾರಣದಿಂದ ಅವರ ಪ್ರಯೋಗಗಳು, ಯೋಗವನ್ನು ಆತಂಕ ಕಡಿಮೆ ಮಾಡಲು ನೆರವಾಗುವ ಒಂದು ವಿಧಾನವಾಗಿ ಅಥವಾ ಗ್ರಹಿಕೆಯ ಕ್ರಿಯೆಗೆ ಸಂಬಂಧಿಸಿದಂಥ ಏಕಾಗ್ರತೆ ಮತ್ತು ಸ್ಮರಣಶಕ್ತಿಗಳನ್ನು ಅಭಿವೃದ್ಧಿಪಡಿಸುವುದನ್ನು ಪರೀಕ್ಷಿಸುವಷ್ಟಕ್ಕೆ ಸೀಮಿತಗೊಂಡಿದ್ದವು. ಯೋಗವು ಇದಕ್ಕಿಂತ ಹೆಚ್ಚಿನದನ್ನು ನೀಡುವುದಾಗಿ ಹೇಳಿಕೊಳ್ಳುತ್ತಿತ್ತು. ಅದೆಂದರೆ ವ್ಯಕ್ತಿಯ ಜೀವನ ಕೌಶಲಗಳನ್ನು ಅನಿರೀಕ್ಷಿತವಾದ ಹಾಗೂ ಪರಿಣಾಮಕಾರಿಯಾದ ರೀತಿಯಲ್ಲಿ ಉತ್ತಮಪಡಿಸುವುದು. ಇದು ನಿಜವೆ ಎಂದು ಕಂಡುಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಆ ಅನುಭವವನ್ನು ಸ್ವತಃ ಪಡೆದುಕೊಳ್ಳುವುದು ಎಂದು ನನಗೆ ಅರ್ಥವಾಯಿತು.

* * *

ಮಾನ್ಯಮಾಡಲ್ಪಟ್ಟ ಗುರುವಿನ ಮಾರ್ಗದರ್ಶನದಲ್ಲಿ ಯೋಗ ತರಬೇತಿಯನ್ನು ಪಡೆದುಕೊಳ್ಳುವುದು ಮತ್ತು ಪೂರ್ಣ ಬದ್ಧತೆಯಿಂದ ಅವರ ಬೋಧನೆಗಳನ್ನು ಅನುಸರಿಸುವುದು ನನ್ನ ಯೋಜನೆಯಾಗಿತ್ತು. ಹಾಗಿದ್ದರೂ ಅದರ ಪರಿಣಾಮಗಳನ್ನು ನನ್ನದೇ ಅನುಭವಗಳಿಂದ ನಾನೇ ವಿಶ್ಲೇಷಿಸುವುದೆಂದಾಗಿತ್ತು. ಯೋಗವನ್ನು ನಿರೂಪಿಸುವ

ವಿವಿಧ ಗ್ರಂಥಗಳಲ್ಲಿ ನಾನು ಪತಂಜಲಿಯ "ಯೋಗಸೂತ್ರಗಳು" ಗ್ರಂಥವನ್ನು ಅನುಸರಿಸಲು ತೀರ್ಮಾನಿಸಿದೆ. ಅತ್ಯಂತ ಸ್ಪಷ್ಟವಾಗಿ ರಚಿತವಾಗಿರುವ ಕಾರಣಕ್ಕಾಗಿ ನಾನು ಈ ಗ್ರಂಥವನ್ನು ಆರಿಸಿಕೊಂಡೆ. ಅದು, ಪ್ರಚಲಿತ ವೈಜ್ಞಾನಿಕ ಅಗತ್ಯಗಳಿಗನುಸಾರವಾಗಿ ಸಿದ್ಧಪಡಿಸಿದ ಯಾವುದೇ ಸಂಶೋಧನಾ ಯೋಜನೆಯಷ್ಟೇ ಖಚಿತತೆ ಮತ್ತು ಸ್ಪಷ್ಟತೆಯಿಂದ ಕೂಡಿದೆ. ಈ ಗ್ರಂಥವು ಒಂದು ಸಾಮಾನ್ಯ ಉದ್ದೇಶ, ವಿಶಿಷ್ಟ ಉದ್ದೇಶಗಳು, ನಿರ್ದೇಶನಾತ್ಮಕ ಆಧಾರ ಕಲ್ಪನೆಗಳ (hypotheses) ಒಂದು ಶ್ರೇಣಿಯನ್ನು ಹಾಗೂ ವಿಧಾನದ ಸ್ಪಷ್ಟ ಪ್ರತಿಪಾದನೆಯನ್ನು ವಿವರಿಸುತ್ತದೆ. ವಿವರಿಸಲಾದ ವಿಧಾನಗಳನ್ನು ಅನುಸರಿಸುವುದರಿಂದ ಈ ಮುಂಚೆ ತಾನು ಗೊತ್ತುಪಡಿಸಿಕೊಂಡ ಗುರಿಗಳನ್ನು ಸಾಧಿಸಿದ್ದೇನೆಯೆ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ನಂಬಿಕೆಯ ಮೇಲೆ ಕೈಗೊಳ್ಳುವ ಅವಶ್ಯಕತೆ ಇರುವಂಥ ಒಂದೇ ಒಂದು ಗ್ರಹಿಕೆಯೂ ಇಲ್ಲ. ವಿಧಾನವನ್ನು ನಿಷ್ಠೆಯಿಂದ ಅನುಸರಿಸುವುದಷ್ಟೇ ನಾವು ಮಾಡಬೇಕಾದ್ದು.

ಈ ಯೋಜನೆಯ ಅತ್ಯಂತ ಕ್ಲಿಷ್ಟಕರವಾದ ಅಂಶವೆಂದರೆ ಫಲಿತಾಂಶಗಳನ್ನು ದಾಖಲಿಸುವ ನಂಬಲರ್ಹವಾದ ಮಾರ್ಗವನ್ನು ಕಂಡುಕೊಳ್ಳುವುದಾಗಿತ್ತು. ನನ್ನ ಅನುಭವಗಳನ್ನು ನನ್ನ ದಿನಚರಿಯಲ್ಲಿ ದಾಖಲಿಸಬೇಕೆಂದು ತೀರ್ಮಾನಿಸಿದೆ. ಪ್ರಶ್ನೆ ಕೇಳಿ ತಿಳಿದುಕೊಳ್ಳುವ ಅಧ್ಯಯನ ಕ್ಷೇತ್ರವು ಪ್ರಾರಂಭಿಕ ಹಂತದಲ್ಲಿದ್ದಾಗ ವಿವರಣೆಯು ಒಂದು ಮೌಲ್ಯಯುತವಾದ ಉಪಕರಣವಾಗಬಹುದು. ಅಧ್ಯಯನದ ಅಂತ್ಯದಲ್ಲಿ ದಿನಚರಿಯ ದಾಖಲೆಯಲ್ಲಿ ಅಡಕಗೊಂಡಿರುವ ವಿಷಯಗಳನ್ನು ಸರಳ ವಿಶ್ಲೇಷಣೆಗೆ ಒಳಪಡಿಸುತ್ತಿದ್ದೆ. ಪರಿಶೋಧನೆಯ ಸಮಯದಲ್ಲಿನ ನನ್ನ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿ ಕೊನೆಯಲ್ಲಿ ತನ್ನ ಮನಸ್ಸಿನ ಅನಿಸಿಕೆಗಳನ್ನು ಹೇಳಬೇಕೆಂದು ವೃತ್ತಿಯಿಂದ ಚಿಕಿತ್ಸಾ ಮನೋವಿಜ್ಞಾನಿ (clinical Psychologist) ಆಗಿರುವ ನನ್ನ ಪತ್ನಿಯನ್ನು ಕೇಳಬೇಕೆಂದು ಕೂಡ ತೀರ್ಮಾನಿಸಿದೆ. ಈ ಬಗೆಯ ವ್ಯಕ್ತಿನಿಷ್ಠ ವಿವರಣೆಗಳು ಯಾವಾಗಲೂ ಪಕ್ಷಪಾತದ ಆಪಾದನೆಗೆ ಒಳಗಾಗಬಹುದಾದಂಥವು. ನಮ್ಮ ವೃತ್ತಿ ತರಬೇತಿಯು ಅಂಥ ಪ್ರವೃತ್ತಿಗಳನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸುತ್ತದೆಂಬ ಭರವಸೆ ಇತ್ತು.

ನನ್ನ ಅನುಭವಗಳನ್ನು ಯೋಗಾಭ್ಯಾಸಿಗಳ ಅನುಭವಗಳೊಂದಿಗೆ ಹೋಲಿಸುವ ಸಲುವಾಗಿ ಪ್ರಾರಂಭದಲ್ಲಿ ನಾನು ಹತ್ತು ಜನ ಯೋಗಾಭ್ಯಾಸಿಗಳನ್ನು ಸಂದರ್ಶಿಸ ಬಯಸಿದೆ. ಇಷ್ಟಾದರೂ ನನ್ನ ಗುರುಗಳ ಸಲಹೆಯ ಮೇರೆಗೆ ಇದನ್ನು ನಾನು ಕೈಬಿಟ್ಟೆ. ನುರಿತ ಯೋಗಾಭ್ಯಾಸಿಗಳ ಅನುಭವವು ಸಾಮಾನ್ಯ ಜನರಿಗೆ ಸಿಗದೆ ಇರುವ ವ್ಯಕ್ತಿನಿಷ್ಠ ಆಯಾಮವಾದ ಕಾರಣ ಹೊಸ ಅಭ್ಯಾಸಿಗಳು ಅದನ್ನು ಸಂಪೂರ್ಣವಾಗಿ ಅರ್ಥಮಾಡಿ ಕೊಳ್ಳಲಾರರೆಂಬುದು ನನ್ನ ಗುರುಗಳ ಅಭಿಪ್ರಾಯವಾಗಿತ್ತು ಅದೂ ಅಲ್ಲದೆ ಅದು ನನ್ನದೇ ಅನುಭವವನ್ನು ಕುರಿತ ನನ್ನ ವ್ಯಾಖ್ಯಾನವನ್ನು ಪೂರ್ವಗ್ರಹ ಪೀಡಿತಗೊಳಿಸುತ್ತದೆ.

* * *

ಗುರುವಿನ ಮಾರ್ಗದರ್ಶನದಲ್ಲಿ ಯೋಗಾಭ್ಯಾಸಮಾಡಿ, ನನ್ನ ಮಾನಸಿಕ ಸ್ಥಿತಿಗತಿಯ ಮೇಲೆ ಈ ಅಭ್ಯಾಸದ ಫಲಿತಗಳೇನೆಂಬುದನ್ನು ದಾಖಲಿಸುವುದೇ ಸಂಶೋಧನೆಯ ಒಟ್ಟಾರೆ ಉದ್ದೇಶವಾಗಿತ್ತು. ಅನುಸರಿಸಿದ ವಿಧಾನವು ಐದು ಮುಖ್ಯ ಘಟಕಗಳನ್ನೊಳಗೊಂಡಿತ್ತು: ಪತಂಜಲಿಯ 'ಯೋಗಸೂತ್ರಗಳ' ಕ್ರಮಬದ್ಧ ಅಧ್ಯಯನವನ್ನು ಕೈಗೊಳ್ಳುವುದು; ಯೋಗಸೂತ್ರಗಳ ವಿಚಾರದಲ್ಲಿ ನುರಿತ ಗುರುವೊಬ್ಬರನ್ನು ಹುಡುಕಿ ಒಂದು ವರ್ಷ ಕಾಲ ಅವರ ಮಾರ್ಗದರ್ಶನದಲ್ಲಿ ಯೋಗ ತರಬೇತಿಯಲ್ಲಿ ತೊಡಗಿಸಿಕೊಳ್ಳುವುದು. (ಅಧ್ಯಯನ ಮತ್ತು ಪ್ರವಾಸಕ್ಕಾಗಿ ನೀಡಲಾದ ಬಿಡುವಿನ ಅವಧಿ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಗುರುವನ್ನು ಹುಡುಕಿಕೊಂಡ ಅದೃಷ್ಟವಂತ ನಾನಾಗಿದ್ದೆ. 'ಯೋಗಸೂತ್ರಗಳು' ಗ್ರಂಥವನ್ನು ಹೊರತುಪಡಿಸಿ ಯೋಗಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಓದುವುದರಲ್ಲಿ ಕಾಲವನ್ನು ಕಳೆಯದೆ ಅಧ್ಯಯನಕ್ಕಾಗಿ ನಿಗದಿತವಾಗಿದ್ದ ಬಿಡುವಿನ ಅವಧಿಯ ಪ್ರಾರಂಭದಲ್ಲೇ ತರಬೇತಿಯನ್ನು ಪಡೆದುಕೊಳ್ಳಬೇಕೆಂದು ನನ್ನ ಗುರು ಸಲಹೆ ನೀಡಿದರು. ಇದಕ್ಕೆ ಕಾರಣ ಅಂಥದೊಂದು ಓದು ನನ್ನ ಸ್ವಂತ ಅನುಭವದ ಅರ್ಥೈಸುವಿಕೆಯನ್ನು ಪೂರ್ವಗ್ರಹ ಪೀಡೆಗೊಳಗಾಗಿಸುತ್ತದೆಂಬುದು. ಈ ಸಲಹೆ ಸಕಾರಣವೆಂದು ತೋರಿದ್ದರಿಂದ ಅದನ್ನೇ ಅನುಸರಿಸಲಾಯಿತು); ನನ್ನ ವೈಯಕ್ತಿಕ ಅನುಭವಗಳ ದಿನವಹಿ ದಿನಚರಿ ಇಡುವುದು; ನನ್ನ ವರ್ತನೆ ಮತ್ತು ಮನೋಧರ್ಮಗಳನ್ನು ಸೂಕ್ಷ್ಮವಾಗಿ ಗಮನಿಸಿ ನನ್ನ ಹೆಂಡತಿ ನೀಡುವ ಅಭಿಪ್ರಾಯವನ್ನು ಪಡೆದುಕೊಳ್ಳುವುದು; ಮತ್ತು ನನ್ನ ಅರ್ಥಮಾಡಿಕೊಳ್ಳುವ ಸಾಮರ್ಥ್ಯಗಳು, ಭಾವುಕ ಸ್ಥಿತಿಗಳು, ಮನೋಧರ್ಮ ಮತ್ತು ವರ್ತನೆಗಳಲ್ಲಿ ಒಂದು ವೇಳೆ ಏನಾದರೂ ಬದಲಾವಣೆಗಳಾಗಿದ್ದಲ್ಲಿ ಅಂಥ ಬದಲಾವಣೆಗಳ ಮೌಲ್ಯಮಾಪನ ಮಾಡುವ ಸಲುವಾಗಿ ನನ್ನ ದಾಖಲೆಗಳನ್ನು ವಿಷಯ ವಿಶ್ಲೇಷಣೆಗೆ ಗುರಿಪಡಿಸುವುದು.

ಒಂದು ವರ್ಷ ಕಾಲಾವಧಿಯ ಅಧ್ಯಯನವನ್ನು ಕೈಗೊಳ್ಳಲಾಯಿತು. ವರ್ಷದ ಕೊನೆಯಲ್ಲಿ ಅದರ ಮುಂದುವರಿಕೆಗೆ ನಾನು ಅರ್ಜಿ ಸಲ್ಲಿಸಲಿಲ್ಲ. ಕಾರಣ, ವರ್ಷದ ಕೊನೆಗೆ ಯೋಗದ ವಿಷಯದಲ್ಲಿ ನಾನು ಕೆಲವು ಒಳನೋಟಗಳನ್ನು ಪಡೆದುಕೊಂಡಿರುವೆನೆಂದು ಅನ್ನಿಸಿತು. ಜೊತೆಗೆ ಎಷ್ಟೊಂದು ತೀವ್ರವಾದ ಆಸಕ್ತಿಯನ್ನು ಬೆಳೆಸಿಕೊಂಡಿದ್ದೆನೆಂದರೆ ಅದನ್ನು ಇನ್ನೂ ಅನೇಕ ವರ್ಷಗಳವರೆಗೆ ಮುಂದುವರಿಸಿಕೊಂಡು ಹೋಗಲು ಇಚ್ಛಿಸುವೆನೆಂದು ನನಗೆ ಅನ್ನಿಸಿತು.

□□

ಯೋಗ : ತತ್ತ್ವ ಮತ್ತು ಅಭ್ಯಾಸ

ಮಾನವ ಚಿಂತನೆಯ ಚರಿತ್ರೆಯುದ್ದಕ್ಕೂ ಸಾಮಾನ್ಯವಾಗಿ ನಮಗೆ ಜೀವನದ ಮೇಲ್ಪದರದ ಅಂದರೆ ವೈವಿಧ್ಯಗಳ ಜಗತ್ತಿನ ಅರಿವು ಮಾತ್ರ ಇರುತ್ತದೆ ಎಂದು ಬೋಧಿಸಿದವರಿದ್ದಾರೆ; ಆದರೆ ಈ ವೈವಿಧ್ಯಗಳನ್ನೆಲ್ಲ ಒಂದುಗೂಡಿಸುವ ಇದಕ್ಕಿಂತ ಆಳವಾದ, ಸರ್ವವ್ಯಾಪಿಯಾದೊಂದು ಒಳಹಂತವೂ ಇದೆ. ಬದಲಾಗುತ್ತಿರುವ ಸಾಪೇಕ್ಷ ಜಗತ್ತೆಲ್ಲವೂ ಈ ಬದಲಾಗದ ಪರಿಪೂರ್ಣ ಹಂತದ ಅಭಿವ್ಯಕ್ತಿಯೇ ಆಗಿದೆ. ಸಾಪೇಕ್ಷ ಅಥವಾ ಪರಿಪೂರ್ಣ ಯಾವುದೇ ಆದರೂ ಅದು ಇರುವಂತೆಯೇ ಅದನ್ನು ಪರಿಗಣಿಸುವುದು ಬದುಕಿನ ಒಂದು ಮುಖದ ನೋಟವಾಗುತ್ತದೆ; ಎರಡನ್ನೂ ಒಟ್ಟಾಗಿಯೇ ಬದುಕುವುದರಿಂದ ಮಾತ್ರ ಬದುಕಿನ ಪೂರ್ಣತೆ ಸಿದ್ಧಿಸುತ್ತದೆ.

ಎ. ಪಿರರ್ ಮತ್ತು ಪಿ. ರಸೆಲ್

ಯೋಗ ಸಿದ್ಧಾಂತ ಮತ್ತು ಅದರ ಅಭ್ಯಾಸಕ್ಕೆ ಸುದೀರ್ಘ ಇತಿಹಾಸವಿದೆ. ಹಾಗೂ ಅವುಗಳು ಶತಶತಮಾನಗಳ ಕಾಲಾವಧಿಯಲ್ಲಿ ಬೆಳೆದುಬಂದ ಸಂಕೀರ್ಣ ಲೋಕದೃಷ್ಟಿಯ ಆಧಾರದ ಮೇಲೆ ನೆಲೆಗೊಂಡಿವೆ. ಕೆಲವೊಮ್ಮೆ ಈ ಲೋಕದೃಷ್ಟಿ ನಮ್ಮದೇ ಲೋಕದೃಷ್ಟಿಯನ್ನು ಹೋಲುತ್ತದಾದರೆ ಇನ್ನು ಕೆಲವೊಮ್ಮೆ ಆಧುನಿಕ ಚಿಂತನೆಗೆ ವಿರುದ್ಧವಾಗಿದೆ.

ಕೆಲವು ಯೋಗಾಭ್ಯಾಸಗಳು ಅತ್ಯಂತ ಪ್ರಾಚೀನವಾದವು, ಬ್ರಾಹ್ಮಣ ಪೂರ್ವ ಮತ್ತು ಆರ್ಯ ಪೂರ್ವದವು ಎನಿಸುತ್ತವೆ. ಯೋಗಾಸನದ ಭಂಗಿಗಳೆಂಬಂತಿರುವವುಗಳಲ್ಲಿ ಕುಳಿತಿರುವಂತೆ ಕಾಣುವ ಜನರ ಮಣ್ಣಿನ ಆಕೃತಿಗಳು ಮೊಹೆಂಜೋದಾರೋ ಉತ್ಖನನಗಳಲ್ಲಿ ಕಂಡುಬಂದಿವೆ. 'ಯೋಗ' ಎಂಬ ಶಬ್ದ ಋಗ್ವೇದದಲ್ಲಿ ಬಲಿಕ್ರಿಯೆಯ ಆಚರಣೆಯನ್ನು ವರ್ಣಿಸುವಾಗ ಹಲವು ಬಾರಿ ಕಾಣಿಸಿಕೊಳ್ಳುತ್ತದೆ. ಆದರೆ 'ನೊಗಹೂಡುವುದು', 'ಸೇರುವುದು' ಎಂಬ ಅದರ ಪದಶಃ ಅರ್ಥಗಳಲ್ಲಿ ಮಾತ್ರ, ಉಪನಿಷತ್ತುಗಳಲ್ಲಿ ಈ ಶಬ್ದ ಆಧ್ಯಾತ್ಮಿಕ ಅರ್ಥವನ್ನು ಪಡೆದುಕೊಳ್ಳುತ್ತದೆ.

ಕಠೋಪನಿಷತ್ತಿನಲ್ಲಿ ಯೋಗವೆಂದರೆ 'ಇಂದ್ರಿಯಗಳ ಕಟ್ಟುನಿಟ್ಟಾದ ಹತೋಟಿ (ನಿಗ್ರಹ)' ಎಂದು ವರ್ಣಿಸಲಾಗಿದೆ.

ಪತಂಜಲಿಯು ವರ್ಣಿಸಿರುವ ಯೋಗದ ಕೆಲವು ಘಟಕಗಳು ಇತರೆ ಉಪನಿಷತ್ತುಗಳಲ್ಲಿ ಕಂಡುಬರುತ್ತವೆ. ಭಗವದ್ಗೀತೆಯಲ್ಲಿ 'ಯೋಗ' ಶಬ್ದವನ್ನು ಹೇಳಲಾಗಿದೆ. ಅದರಲ್ಲಿ ಇಂದ್ರಿಯ ನಿಗ್ರಹಕ್ಕೆ ಪರಮಾತ್ಮನೊಂದಿಗೆ ಸಂಯೋಗ ಎಂಬ ತಿಳಿವಳಿಕೆಯು

ಅತ್ಯಗತ್ಯ ಅಂಶವಾಗಿದೆ. ಪರಮಾತ್ಮನೊಂದಿಗಿನ ಈ ಸಂಯೋಗದಲ್ಲಿ ಯೋಗಿಯು ಸಕಲ ವಸ್ತುಗಳಲ್ಲಿ ತನ್ನನ್ನು ಹಾಗೂ ಸಕಲವಸ್ತುಗಳನ್ನು ತನ್ನಲ್ಲಿ ಕಾಣುತ್ತಾನೆ. ಯೋಗದ ತಂತ್ರಗಳು ಬೌದ್ಧ ಆಚರಣೆಗಳ ಭಾಗವೇ ಆಗಿವೆ. ಏನನ್ನು ಮಾಡಬೇಕು ಮತ್ತು ಏನನ್ನು ಮಾಡಬಾರದು ಎಂಬ ಯೋಗದ ಆಚರಣೆಯ ನೀತಿನಿಯಮಗಳು ಬೌದ್ಧಧರ್ಮದ ನೀತಿ ನಿಯಮಗಳನ್ನು ಹೋಲುತ್ತವೆ. ಬೌದ್ಧ ಧರ್ಮದ ಧ್ಯಾನದ ಅಭ್ಯಾಸಮಾರ್ಗವಾದ 'ಸತ್ತಿಪಠನ'ವು ದೈಹಿಕ ಮತ್ತು ಮಾನಸಿಕ ತಂತ್ರ . ಇದು ಯೋಗದ ಅದರ ಸಂವಾದಿಗಳಿಗಿಂತ ಬೇರೆಯಲ್ಲ. ಹಾಗಾಗಿ ಪತಂಜಲಿಯ 'ಯೋಗಸೂತ್ರಗಳು' ಮೌಲಿಕ ಪ್ರತಿಪಾದನೆಯಾಗಿರದೆ ಅದುವರೆಗಾಗಲೇ ಚೆನ್ನಾಗಿ ತಿಳಿದಿದ್ದ ಯೋಗ ತತ್ತ್ವಗಳ ಚಿಕ್ಕಟ್ಟಾದ ಶೈಲಿಯ, ಸಂಗ್ರಹ ರೂಪದ, ಬಹುತೇಕ ಕಾವ್ಯಾತ್ಮಕವೆನ್ನುವಂಥ ನಿರೂಪಣೆಗಳು.

ಪತಂಜಲಿಯ ಹೆಸರಿನಲ್ಲಿರುವ ಈ ಸೂತ್ರಗಳನ್ನು ಯಾವಾಗ ಸಂಕಲಿಸಲಾಯಿತೆಂಬುದು ಅನಿಶ್ಚಿತ. ವಿದ್ವಾಂಸರು ಸೂಚಿಸಿರುವ ಕಾಲಾವಧಿಯ ವ್ಯಾಪ್ತಿ ಕ್ರಿ. ಪೂ. 400 ರಿಂದ ಕ್ರಿ. ಶ. ನಾಲ್ಕು ಅಥವಾ ಐದನೇ ಶತಮಾನದವರೆಗೂ ಇದೆ.

* * *

ಭಾರತೀಯ ಮೂಲದ ತತ್ತ್ವಶಾಸ್ತ್ರ ಪರಂಪರೆಗಳಲ್ಲಿ ಮೋಕ್ಷವು ಒಂದು ಶಾಶ್ವತ ವಿಷಯ. ಯೋಗವು ಈ ಸ್ಥಿತಿಯನ್ನು ಸಾಧಿಸಲು ಇರುವ ಸೋಪಾನಗಳ ಒಂದು ಖಚಿತ ವ್ಯವಸ್ಥೆ. ಈ ಸಂದರ್ಭದಲ್ಲಿ ಮೋಕ್ಷವೆಂದರೆ ತನ್ನ ನಿಜವಾದ ಆತ್ಮವು ನಿರ್ಗುಣವಾದದ್ದು, ಬದಲಾಗದಂಥದು ಮತ್ತು ಗುರಿಯಿಲ್ಲದ್ದು ಎಂಬುದನ್ನು ನಮ್ಮ ಸಾಮಾನ್ಯ ಅಸ್ತಿತ್ವವನ್ನು ಸೀಮಿತಗೊಳಿಸುವ ಬಂಧನಗಳಿಂದ ಮುಕ್ತವಾದ ಪೂರ್ಣ ಅರಿವಿನಿಂದ ಅನುಭವಕ್ಕೆ ತಂದುಕೊಳ್ಳುವುದು. ಯೋಗವು ಗೊತ್ತುಪಡಿಸುವ ಸೋಪಾನಗಳು ಕೆಲವೊಂದು ದೈಹಿಕ ಮತ್ತು ಮಾನಸಿಕ ಅಭ್ಯಾಸಗಳನ್ನು ಒಳಗೊಂಡಿವೆ. ಅವುಗಳೆಂದರೆ ಸಹಜ ಪ್ರವೃತ್ತಿಯ ಅಪೇಕ್ಷೆಗಳನ್ನು ಕ್ರಮವಾಗಿ ಮತ್ತು ನಿಧಾನವಾಗಿ ನಿಗ್ರಹಿಸುವುದು, ಉನ್ನತ ವಸ್ತುವಿಗೆ ತನ್ನನ್ನು ತಾನೇ ಸಮರ್ಪಿಸಿಕೊಳ್ಳುವುದು ಮತ್ತು ಇವುಗಳ ಆಧಾರದ ಮೇಲೆ ಬಾಹ್ಯ ಪ್ರಪಂಚದೊಂದಿಗಿನ ತನ್ನ ಸಂಬಂಧವನ್ನು ಪುನರ್ ವ್ಯವಸ್ಥೆಗೊಳಿಸುವುದು.

ಯೋಗವು ಒಂದು ವಿಧಾನವೇ ಹೊರತು ಅದೇ ಗುರಿಯಲ್ಲ. ಅದೊಂದು ತಂತ್ರಜ್ಞಾನ, ಸ್ವತಂತ್ರವಾದ ತತ್ತ್ವಶಾಸ್ತ್ರ ಪರಂಪರೆಯಲ್ಲ. ಸಾಂಖ್ಯ ತತ್ತ್ವದಲ್ಲಿ ಬೇರೂರಿದ್ದಾದರೂ ಇನ್ನಿತರೆ ಆಧ್ಯಾತ್ಮಿಕ ಪರಂಪರೆಗಳೊಂದಿಗೆ ಚೆನ್ನಾಗಿ ಸಂಯೋಜನೆಗೊಂಡಿದೆ, ಅದು ಅತ್ಯಂತ ಆಸ್ತಿಕ ಗ್ರಂಥವಾದ ಭಗವದ್ಗೀತೆಯ ಒಂದು ಭಾಗವೇ ಆಗಿದೆ. ಅಷ್ಟೇ ಅಲ್ಲ, ವೇದಾಂತದ ಬೌದ್ಧಿಕ ಅಧ್ಯಯನ ಶಿಸ್ತಿನ ಹಾಗೂ ಬೌದ್ಧ ಧರ್ಮದ ಅಜ್ಞೇಯತಾ ದರ್ಶನದ ಭಾಗವೂ ಆಗಿದೆ.

ಯೋಗದಲ್ಲಿ ಹಲವು ವಿಧಗಳಿವೆ. ಪ್ರತಿಯೊಂದೂ ಯಾವುದೋ ಒಂದು ನಿರ್ದಿಷ್ಟ ಅಂಶಕ್ಕೆ ಒತ್ತುಕೊಡುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಜನಪ್ರಿಯವಾಗಿರುವ ಹಠಯೋಗವು ದೈಹಿಕ ವ್ಯಾಯಾಮಕ್ಕೆ ಹೆಚ್ಚು ಗಮನಕೊಡುತ್ತದೆ. ಮಂತ್ರಯೋಗದಲ್ಲಿ ಅರ್ಥವಿಲ್ಲದ ಅಕ್ಷರ, ಶಬ್ದ ಅಥವಾ ವಾಕ್ಯವನ್ನು ಮನಸ್ಸಿನಲ್ಲಿಯೇ ಗುಣುಗುಣಿಸುವುದು ಇರುತ್ತದೆ.

ಕರ್ಮಯೋಗವು ಫಲಾಪೇಕ್ಷೆಯಿಲ್ಲದೆ ಕರ್ಮ ಮಾಡುವುದಕ್ಕೆ(ನಿಷ್ಕಾಮಕರ್ಮ) ಮಹತ್ವ ನೀಡುತ್ತದೆ. ಕ್ರಿಯಾಯೋಗವು ಕೆಲವೊಂದು ಕಟ್ಟುನಿಟ್ಟುಗಳಿಗೆ ಮತ್ತು ದೇವರಿಗೆ ಶರಣಾಗುವುದಕ್ಕೆ ಒತ್ತುಕೊಡುತ್ತದೆ.

ಕುಂಡಲಿನಿ ಯೋಗವು ಪ್ರಾಣಶಕ್ತಿಯ ಹರಿವನ್ನು ಪ್ರಭಾವಿಸುವಂಥ ದೈಹಿಕ ವ್ಯಾಯಾಮವನ್ನು ನಿಗದಿಪಡಿಸುತ್ತದೆ. ('ಪ್ರಾಣವು' ಎಲ್ಲ ರೀತಿಯ ಶಕ್ತಿಗಳಿಗಿಂತ ವಿಭಿನ್ನವಾದದ್ದು ಮತ್ತು ಎಲ್ಲ ಶಕ್ತಿಗಳಿಗೆ ಆಧಾರವೆಂದು ಪರಿಗಣಿಸಲಾಗಿದೆ.) ಭಕ್ತಿಯೋಗದಲ್ಲಿ ದೇವರ ಬಗೆಗಿನ ಭಕ್ತಿ ಮತ್ತು ಪೂಜೆಯಿಂದ ಮೋಕ್ಷ ಅಥವಾ ಮುಕ್ತಿಯನ್ನು ಸಾಧಿಸಲಾಗುತ್ತದೆ.

ಪತಂಜಲಿಯ ಯೋಗಸೂತ್ರವು ರಾಜಯೋಗವೆಂಬ ದೈಹಿಕ ಮತ್ತು ಮಾನಸಿಕ ಅಭ್ಯಾಸಗಳ ಸರಣಿಯ ಮೇಲೆ ಹೆಚ್ಚು ಒತ್ತುಕೊಡುತ್ತದೆ. ಯೋಗದ ಇತರೆ ಬಗೆಗಳಲ್ಲಿ ವಿವರಿಸಲಾಗಿರುವ ಎಲ್ಲ ಅಂಶಗಳನ್ನೂ ಅದು ಒಳಗೊಳ್ಳುತ್ತದೆ.

ಪತಂಜಲಿಯ 'ಯೋಗಸೂತ್ರಗಳು' 196 ಸೂತ್ರಗಳನ್ನು ಒಳಗೊಂಡಿದೆ. ಅವನ್ನು ನಾಲ್ಕು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಈ ಸೂತ್ರಗಳು ಸಂಕ್ಷಿಪ್ತ ರೂಪದಲ್ಲಿವೆ. ಮುದ್ರಣ ಸೌಕರ್ಯವಿಲ್ಲದೆ ಇದ್ದ ಮತ್ತು ಮೌಖಿಕ ಸಂಪ್ರದಾಯ ಬಹಳ ಪ್ರಬಲವಾಗಿದ್ದ ಕಾಲದಲ್ಲಿ ಬಾಯಿಪಾಠದ ಮೂಲಕ ನೆನಪಿಟ್ಟುಕೊಳ್ಳಲು ರಚಿಸಿದಂಥವು ಈ ಸೂತ್ರಗಳು.

ಮೊದಲನೇ ಅಧ್ಯಾಯವಾದ 'ಸಮಾಧಿ ಪಾದ'ವು ಯೋಗದ ಲಕ್ಷಣ ಮತ್ತು ಉದ್ದೇಶಕ್ಕೆ ಸಂಬಂಧಿಸಿದೆ. ಅದರ ಸಾಮಾನ್ಯ ಗುರಿ ಮತ್ತು ಧ್ಯೇಯಗಳನ್ನು ವಿವರಿಸುತ್ತದೆ. ಯೋಗಕ್ಕಿರುವ ಅಡೆತಡೆಗಳನ್ನು ವಿವರಿಸುವುದೇ ಅಲ್ಲದೆ ಅವುಗಳನ್ನು ಹೇಗೆ ನಿವಾರಿಸಿಕೊಳ್ಳಬೇಕೆಂಬುದನ್ನೂ ತಿಳಿಸುತ್ತದೆ.

ಎರಡನೇ ಅಧ್ಯಾಯವಾದ 'ಸಾಧನಾ ಪಾದ'ವು ದುಃಖ ಮತ್ತು ಯಾತನೆಗಳ ಹುಟ್ಟನ್ನು ವಿಶದವಾಗಿ ತಿಳಿಸುವುದೇ ಅಲ್ಲದೆ ಅವನ್ನು ನಿವಾರಿಸಲು ಅಗತ್ಯವಿರುವ ಕಾರ್ಯ ಸಾಧ್ಯವಾದ ಕ್ರಮಗಳನ್ನು ತಿಳಿಸುತ್ತದೆ.

'ವಿಭೂತಿ ಪಾದ' ಎಂಬ ಮೂರನೇ ಅಧ್ಯಾಯವು ದೈಹಿಕ ಮತ್ತು ಮನಶ್ಶಾಸ್ತ್ರೀಯ ತಂತ್ರಗಳನ್ನು ವಿವರಿಸುತ್ತದೆ. ಜೊತೆಗೆ ಈ ಅಭ್ಯಾಸಗಳನ್ನು (ಅನುಷ್ಠಾನಗಳನ್ನು) ಯಶಸ್ವಿಯಾಗಿ ಕಾರ್ಯಗತಗೊಳಿಸಿದ ವ್ಯಕ್ತಿಗೆ ಪ್ರಾಪ್ತವಾಗುವ ವಿಶಿಷ್ಟ ಶಕ್ತಿಗಳು ಮತ್ತು ಅವುಗಳ ವಿಶಿಷ್ಟ ಪರಿಣಾಮಗಳನ್ನು ವಿವರಿಸುತ್ತದೆ.

ನಾಲ್ಕನೇ 'ಅಧ್ಯಾಯವಾದ ಕೈವಲ್ಯ ಪಾದ'ವು ಯೋಗ ಸಿದ್ಧಾಂತವನ್ನು ಮತ್ತು ಈ ತತ್ತ್ವ, ಸಿದ್ಧಾಂತಗಳಿಗೆ ಪ್ರತಿಯಾಗಿ ಬರಬಹುದಾದ ಆಕ್ಷೇಪಣೆಗಳನ್ನು ವಿಸ್ತಾರವಾಗಿ ಚರ್ಚಿಸುತ್ತದೆ. ಯೋಗದ ಕೊನೆಯ ಹಂತವಾದ ಕೈವಲ್ಯದ ವಿವರಣೆಯೊಂದಿಗೆ ಈ ಅಧ್ಯಾಯ ಕೊನೆಗೊಳ್ಳುತ್ತದೆ.

ಪತಂಜಲಿಯ 'ಯೋಗಸೂತ್ರಗಳು' ಗ್ರಂಥಕ್ಕೆ ಆಧಾರಭೂತವಾದ ತತ್ತ್ವವೆಂದರೆ ಕಪಿಲನು ಮುಂದಿಟ್ಟ ಮತ್ತು ಕ್ರಿ. ಶ. ಎರಡನೇ ಶತಮಾನದಲ್ಲಿ ಈಶ್ವರ ಕೃಷ್ಣನು ಬರಹ ರೂಪಕ್ಕೆ ಅಳವಡಿಸಿದ ಸಾಂಖ್ಯ ದರ್ಶನ ಸಿದ್ಧಾಂತ. ಸಾಂಖ್ಯಕ್ಕೂ ಪತಂಜಲಿಯ ಯೋಗಸೂತ್ರಗಳಿಗೂ ಇರುವ ವ್ಯತ್ಯಾಸವೆಂದರೆ ಸಾಂಖ್ಯ ದರ್ಶನವು ದೇವರ ಪರಿಕಲ್ಪನೆಯ ಪ್ರಸ್ತಾಪವನ್ನೇ ಮಾಡುವುದಿಲ್ಲ. ಆದರೆ ಅದೇ 'ಯೋಗಸೂತ್ರಗಳು' ಆಸ್ತಿಕವಾದಕ್ಕೆ ತೀರ ನಿಕಟವಾಗಿದೆ. ಯಥಾರ್ಥ ಅಥವಾ ಸತ್ಯವು 'ಪ್ರಕೃತಿ' ಮತ್ತು 'ಪುರುಷ' ಎಂಬ ಎರಡು ಪರಸ್ಪರ ವಿರುದ್ಧವಾದ ಆದರೆ ಸಮತೋಲನದಲ್ಲಿರುವ ತತ್ತ್ವಗಳನ್ನು ಒಳಗೊಂಡಿದೆ ಎಂಬುದೇ ಸಾಂಖ್ಯ ದರ್ಶನದ ಸಾರ.

ಬದಲಾಗುವಂಥದೂ ಅಶಾಶ್ವತವೂ ಕ್ರಿಯಾಶೀಲವೂ ಆದದ್ದೆಲ್ಲವೂ ಪ್ರಕೃತಿ. ಈ ಭೌತಿಕ ಜಗತ್ತೆಲ್ಲವನ್ನೂ ಒಳಗೊಳ್ಳುವುದರ ಜೊತೆಗೆ ಬುದ್ಧಿ, ವ್ಯಕ್ತಿತ್ವ ಮತ್ತು ಮನಸ್ಸನ್ನೂ ಒಳಗೊಳ್ಳುತ್ತದೆ. ಪುರುಷವು ಪ್ರಕೃತಿಗೆ ವಿರುದ್ಧವಾದದ್ದು ಮತ್ತು ಅದು ಶುದ್ಧ, ಕಾಲಾತೀತ, ನಿರ್ಗುಣ ಪ್ರಜ್ಞೆಯಿಂದ ಕೂಡಿದೆ.

ಪುರುಷವು ಕ್ರಿಯಾಶೀಲವಲ್ಲದ್ದು. ಈ ಜಗತ್ತಿನ ಆಗುಹೋಗುಗಳಿಗೆ ಅದು ಕಾರಣವಲ್ಲ. ಆದರೆ ಈ ಎಲ್ಲ ಆಗುಹೋಗುಗಳಿಗೆ ನಿರಂತರವಾಗಿ ಸಾಕ್ಷೀಭೂತವಾಗಿರುವಂಥದು. ಪುರುಷನಿಂದ 'ಬೆಳಕು' ಪಡೆದು ಪ್ರಕೃತಿಯ ಆಗಹೋಗುಗಳು ಅರ್ಥವನ್ನು ಪಡೆದುಕೊಳ್ಳುತ್ತವೆ. ಪುರುಷವು ಮನಸ್ಸಿಗೆ ಸಮನೆಂದು ಪರಿಗಣಿಸುವಂತಿಲ್ಲ. ಕಾರಣ ಮನಸ್ಸು ಪ್ರಕೃತಿಯ ಒಂದು ಭಾಗ.

ಮುಂಡಕೋಪನಿಷತ್ತು ಪುರುಷವನ್ನು ಹೀಗೆ ವರ್ಣಿಸುತ್ತದೆ:

ಪುರುಷನು ಪ್ರಕಾಶಿಸುತ್ತಿದ್ದಾನೆ
ಆದರೂ ಅವನು ನಿರಾಕಾರವಾದ ವಿಶ್ವ ಚೈತನ್ಯ
ಇಡೀ ಬ್ರಹ್ಮಾಂಡದ ಆತ್ಮ
ಅವನು ಎಲ್ಲದರ ಅಂತರಂಗದಲ್ಲೂ ಇದ್ದಾನೆ,
ಹುಟ್ಟು ಇಲ್ಲದವನು
ಪ್ರಾಣ ಇಲ್ಲವೆ ಮನಸ್ಸಿನ ಸೋಂಕು ಇಲ್ಲದವನು

ಯೋಗದ ಅಭ್ಯಾಸದಿಂದ ಪ್ರಕೃತಿಯು ನಿಲುಗಡೆಗೆ ಬರುತ್ತದೆ. ಅಭ್ಯಾಸಿಯಲ್ಲಿರುವ ಪುರುಷವು ಅರಿವಿಗೆ ಬರುತ್ತಾನೆ.

* * *

ಯೋಗಸೂತ್ರಗಳು ದೇವರ ಬಗ್ಗೆ ಏನನ್ನೂ ಹೇಳುವುದಿಲ್ಲ. ಅವು ಪುರುಷವು ಅತ್ಯುನ್ನತ ರೂಪವಾದ ಈಶ್ವರನ ಬಗ್ಗೆ ಹೇಳುತ್ತವೆ. ಅವನು ಅತ್ಯಂತ ಆರಂಭ ಕಾಲದಿಂದಲೂ ಅಂದರೆ ಅನಾದಿ ಕಾಲದಿಂದಲೂ ಸಚ್ಚಾರಿತ್ರ್ಯದ ಮತ್ತು ತತ್ತ್ವ ಬೋಧನೆಯ ಗುರು. ಈಶ್ವರನ ಪರಿಕಲ್ಪನೆಯು ಯೋಗದ ಗುರಿಯಾದ ಮುಕ್ತಿಗೆ ಸಂಬಂಧಿಸಿದ್ದಾಗಿದೆ. ಹಾಗಾಗಿ ಅದು ಆತ್ಮ ಶರಣಾಗತಿಯ(ಆತ್ಮಸಮರ್ಪಣೆಯ) ಗುರಿಯಾಗಬಹುದಾಗಿದೆ. ಮನಸ್ಸಿನ ಚಾಂಚಲ್ಯವನ್ನು, ತೂಗುಯ್ಯಾಲೆಯನ್ನು ತಡೆಯುವುದೇ ಯೋಗದ ಗುರಿ. ಚಾಂಚಲ್ಯವನ್ನು ನಿಗ್ರಹಿಸಿದಾಗ ನೋಟಕನಾದ(ದ್ರಷ್ಟಾರನಾದ) ಪುರುಷವು ತನ್ನ ಸಾರಭೂತವೂ ಮೂಲಭೂತವೂ ಆದ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಆ ಮೂಲಸ್ವರೂಪವು ಉದ್ದೇಶರಹಿತ ಪ್ರಜ್ಞಾವಂತಿಕೆ(ಎಚ್ಚರ).

ಸ್ವಾಮಿ ವಿವೇಕಾನಂದರು ಹೀಗೆ ಬರೆದಿದ್ದರು:

ಸರೋವರದ ತಳವನ್ನು ನಾವು ನೋಡಲಾಗುವುದಿಲ್ಲ. ಕಾರಣ ಅದರ ಮೇಲ್ಪದರವು ಸಣ್ಣ ಅಲೆಗಳಿಂದ ಆವರಿಸಲ್ಪಟ್ಟಿರುತ್ತದೆ. ಸಣ್ಣ ಅಲೆಗಳು ಏಳುವುದು ನಿಂತಮೇಲೆ, ನೀರು ಸ್ತಬ್ಧವಾಗಿದ್ದಾಗ ಮಾತ್ರ ತಳದ ಒಂದು ನಸು ನೋಟವನ್ನು ನಾವು ಕಾಣಲು ಸಾಧ್ಯ. ನೀರು ಸದಾ ತಿಳಿಯಾಗಿಲ್ಲದೆ ಕೆಸರಿನಿಂದ ಕೂಡಿರುವಾಗ ಅಥವಾ ಕದಡಿರುವಾಗ ತಳವು ಕಾಣಿಸುವುದಿಲ್ಲ. ಅದು ಸ್ವಚ್ಛವಾಗಿ ತಿಳಿಯಾಗಿದ್ದು ಅಲೆಗಳು ಇಲ್ಲದಿದ್ದರೆ ನಮಗೆ ತಳ ಕಾಣುತ್ತದೆ. ಸರೋವರದ ತಳ ನಮ್ಮದೇ ಸ್ವಂತ ಆತ್ಮ; ಸರೋವರ ನಮ್ಮ ಚಿತ್ತ (ಮನಸ್ಸು) ಮತ್ತು ವೃತ್ತಿಗಳೇ ಅಲೆಗಳು. (ಅಕ್ಷರಶಃ ಸುಳಿ. ಆದರೆ ಸಾಮಾನ್ಯವಾಗಿ ಹೊರಗಿನ ಕಾರಣಗಳಿಂದ ಉಂಟಾಗುವ ಪ್ರಕ್ಷುಬ್ಧತೆ ಎಂದು ಅರ್ಥ).

ಇದನ್ನು ಸಾಧಿಸಲು ಇರುವ ಬಹುಮುಖ್ಯ ಷರತ್ತುಗಳೆಂದರೆ ಸತತವಾದ ಪ್ರಯತ್ನ ಮತ್ತು– ಆಸೆಗಳು ಅಥವಾ ಬಯಕೆಗಳಿಂದ ನಿರ್ಲಿಪ್ತವಾಗಿರುವುದು. ಸಾಧನೆಯ ಶಿಖರ ಅಥವಾ ತುತ್ತ ತುದಿಯೇ ಸಮಾಧಿ. ಕೆಲವರಿಗೆ ಹುಟ್ಟಿನಿಂದಲೇ ಸಮಾಧಿಯನ್ನು ಸಾಧಿಸುವುದು ಸುಲಭವೆನಿಸುತ್ತದೆ. ಇತರರಿಗೆ ನಂಬಿಕೆ, ಶಕ್ತಿ, ಒಳ್ಳೆಯ ಜ್ಞಾಪಕಶಕ್ತಿ ಮತ್ತು ಉನ್ನತ ಬುದ್ಧಿಶಕ್ತಿ ಬೇಕಾಗುತ್ತದೆ. ಆದರೆ ಯಾರಿಗೆ ಸಮಾಧಿಯ ಬಯಕೆ ತೀವ್ರವಾಗಿದೆಯೋ ಅವರು ಅದನ್ನು ಗಳಿಸುವ ಸಾಧ್ಯತೆ ಹೆಚ್ಚು.

ಈ ಅಂತಿಮ ಸ್ಥಿತಿಗೆ ತಲುಪಲು ಇರುವ ಇನ್ನೊಂದು ದಾರಿಯೆಂದರೆ ಈಶ್ವರನಿಗೆ ಸಂಪೂರ್ಣವಾಗಿ ತಮ್ಮನ್ನು ತಾವು ಸಮರ್ಪಿಸಿಕೊಳ್ಳುವುದು. ಆತ್ಮ ಸಮರ್ಪಣೆ ಎಂದರೆ ಆಗುವುದೆಲ್ಲವನ್ನೂ ಅಂಗೀಕರಿಸುವುದು. ಇದರ ಅರ್ಥ ಅನ್ಯಾಯ ಮತ್ತು ಸ್ವಯಂನಾಶದಂಥ ಋಣಾತ್ಮಕ ಸಂಗತಿಗಳನ್ನೂ ಅಂಗೀಕರಿಸಬೇಕೆಂದೆ ಎಂದು ಆಶ್ಚರ್ಯವಾಗಬಹುದು. ಯಾರು ನಿಜಕ್ಕೂ ತಮ್ಮನ್ನು ತಾವು ಸಮಪರ್ಪಿಸಿಕೊಂಡಿದ್ದಾರೋ ಅವರಿಗೆ ಈ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಹೇಗೆ ಕಂಡುಕೊಳ್ಳುವುದೆಂಬುದು ತನಗೆ ತಾನೇ ತಿಳಿಯುತ್ತದೆ.

ಯೋಗದ ಮಾರ್ಗವು ಸುಲಭವಲ್ಲ. ಆ ಹಾದಿಯಲ್ಲಿ ಅನೇಕ ಅಡೆತಡೆಗಳು ಎದುರಾಗುವ ಸಾಧ್ಯತೆ ಇದೆ. ಪತಂಜಲಿಯು ಕಾಯಿಲೆ, ಮಂಕುತನ, ತಾತ್ಸಾರ, ಸೋಮಾರಿತನ, ವಸ್ತುಗಳನ್ನು ಹೊಂದುವ ಆಸೆ, ತಪ್ಪು ತೀರ್ಮಾನಗಳು, ಈಗಾಗಲೇ ಸಾಧಿಸಿರುವ ಯೋಗದ ಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಅಸಮರ್ಥತೆ, ಮಾನಸಿಕ ಚಾಂಚಲ್ಯ, ದಿನ ನಿತ್ಯದ ಬದುಕಿನ ಸಂತೋಷಗಳಿಂದ ಮನಸ್ಸು ಬೇರೆ ಕಡೆಗೆ ಹೊರಳುವುದು ಈ ಮೊದಲಾದುವನ್ನು ಪಟ್ಟಿಮಾಡುತ್ತಾನೆ. ಬೇಗುದಿ, ಹತಾಶೆ, ಅಧೈರ್ಯ ಮತ್ತು ಏದುಸಿರಿನ ರೂಪದಲ್ಲಿ ಇವು ಕಾಣಿಸಿಕೊಳ್ಳುತ್ತವೆ. ಅವುಗಳನ್ನು ನಿವಾರಿಸಿಕೊಳ್ಳಬೇಕು. ಮನೋಧರ್ಮದಲ್ಲಿ ಬದಲಾವಣೆ ಮಾಡಿಕೊಳ್ಳುವ ಮೂಲಕ, ಸ್ನೇಹಭಾವ, ಸಹಾನುಭೂತಿ ಅಥವಾ ದಯೆ ಮತ್ತು ಸಂತೋಷ ಇವುಗಳನ್ನು ರೂಢಿಸಿಕೊಳ್ಳುವ ಮೂಲಕ ಇದನ್ನು ಸಾಧಿಸಬಹುದು. ಸಂತೋಷ ಮತ್ತು ದುಃಖದ ಭಾವಗಳಿಗೆ, ಗುಣ ಮತ್ತು ದೋಷಗಳ ವಿಚಾರಕ್ಕೆ ನಿರ್ಲಕ್ಷ್ಯಭಾವ ತಾಳುವುದೂ ಅಗತ್ಯ.

* * *

ಯೋಗಿಗೆ ತರಬೇತಿ ನೀಡುವ ಯೋಗಮಾರ್ಗವು ಎಂಟು ಹಂತಗಳನ್ನು ಹೊಂದಿದೆ(ಅಷ್ಟಾಂಗ ಯೋಗ). ಮೊದಲ ಐದಕ್ಕೆ ಬಾಹ್ಯ ಅಂಗಗಳೆಂದು ಹೇಳಲಾಗುತ್ತದೆ. ಅವು ಶರೀರದ ಹತೋಟಿ ಮತ್ತು ವರ್ತನೆ ಅಥವಾ ನಡವಳಿಕೆಯ ಹತೋಟಿಗೆ ಸಂಬಂಧಿಸಿವೆ. ಕೊನೆಯ ಮೂರಕ್ಕೆ ಆಂತರಿಕ ಅಂಗಗಳೆಂದು ಹೇಳಲಾಗುತ್ತದೆ. ಹಾಗೂ ಸ್ಥೂಲವಾಗಿ ಅವು 'ಧ್ಯಾನ' ಶಬ್ದದ ತದ್ವತ್ ಅಲ್ಲದಿದ್ದರೂ ಅದಕ್ಕೆ ಸಂವಾದಿಯಾಗಿವೆ.

ಮೊದಲ ಎರಡು ಬಾಹ್ಯ ಅಂಗಗಳು 'ಯಮ' ಗಳನ್ನು(ಆತ್ಮ ನಿಗ್ರಹ, ಉಪದೇಶ) ಮತ್ತು 'ನಿಯಮ'ಗಳನ್ನು (ಆಚರಣೆ, ದಿನನಿತ್ಯದ ಅಭ್ಯಾಸಗಳು) ಒಳಗೊಂಡಿವೆ. ಯಮಗಳು ಐದು ನೈತಿಕ ನಿಯಮಗಳನ್ನು ಆಚರಿಸುವುದನ್ನು ಗೊತ್ತುಪಡಿಸುತ್ತದೆ. ಅವುಗಳೆಂದರೆ ಕದಿಯದಿರುವುದು(ಅಸ್ತೇಯ), ಅಹಿಂಸೆ; ಸತ್ಯ, ಪರಿಶುದ್ಧತೆ(ಬ್ರಹ್ಮಚರ್ಯೆ), ಮತ್ತು ದುರಾಸೆಯ ನಿವಾರಣೆ. ನಿಯಮಗಳು ಐದು ನೈತಿಕ ನಿಯಮಗಳನ್ನು ತಪ್ಪದೆ ಸಂಪೂರ್ಣವಾಗಿ ಆಚರಿಸಬೇಕೆಂದು ಒತ್ತಾಯಿಸುತ್ತವೆ. ಇವು ಸ್ವಲ್ಪ ಮಟ್ಟಿಗೆ ಮೊದಲಿನವುಗಳ ಕಡೆಗೂ ಚಾಚಿಕೊಂಡಿವೆ. ಅವುಗಳೆಂದರೆ ಪರಿಶುದ್ಧತೆ(ನೈರ್ಮಲ್ಯ), ಸಂತೃಪ್ತಿ, ಸಂಯಮ, ಸ್ವಾಧ್ಯಾಯ ಮತ್ತು ಈಶ್ವರನಿಗೆ ಆತ್ಮ ಸಮರ್ಪಣೆ.

ಯಮ ನಿಯಮಗಳನ್ನು ಕ್ರಿಯೆಯ ವಿಧಿ (ಮಾಡ ಬೇಕಾದವು) ಮತ್ತು ನಿಷೇಧ (ಮಾಡಬಾರದವು)ಗಳೆಂದು ಪರಿಗಣಿಸಬಹುದು. ಅವು ಅತ್ಯಂತ ಕಷ್ಟಕರವಾದವು. ಇಷ್ಟಾದರೂ ಒಮ್ಮೆ ಅವನ್ನು ಸಾಧಿಸಿಬಿಟ್ಟರೆ ವ್ಯಕ್ತಿಯು ತನ್ನ ಆಂತರಿಕ ಹೋರಾಟದಿಂದ ಬಿಡುಗಡೆಹೊಂದುತ್ತಾನೆ ಮತ್ತು ತನ್ನ ಅಗತ್ಯಗಳ ಮೇಲೆ ಹತೋಟಿ ಸಾಧಿಸುತ್ತಾನೆ. ಅದರ ಪರಿಣಾಮವಾಗಿ ಹಿಡಿತಕ್ಕೆ ಸಿಕ್ಕದಿರುವ ಯೋಚನೆಗಳಿಂದ ಬಿಡುಗಡೆ ಹೊಂದಿ

ಮನಸ್ಸು ತಿಳಿಯಾಗುತ್ತದೆ. ಅದು ವ್ಯಕ್ತಿಯನ್ನು ಸಮಾಧಿಯ ಹಾದಿಗೆ ಕೊಂಡೊಯ್ಯುತ್ತದೆ. ಜೀವನ ಎಂಥದೇ ಸಂದರ್ಭಗಳನ್ನು ಸೃಷ್ಟಿಸಿದಾಗಲೂ ಸಂತೃಪ್ತಿಯಿಂದಾಗಿ ಸಂತೋಷ ಹುಟ್ಟುತ್ತದೆ. ಈ ನೈತಿಕ ನಿಯಮಗಳು ಪ್ರಶ್ನಾತೀತವಾದ ಮೌಲ್ಯಗಳು ಎಂಬುದರ ಬಗ್ಗೆ, ಹಾಗೂ ಅವು ದೇಶ ಕಾಲಗಳಿಗೆ ಅಧೀನವಾಗಿಲ್ಲ ಎಂಬ ಬಗ್ಗೆ ಪತಂಜಲಿಗೆ ತೀರಾ ಸ್ಪಷ್ಟತೆ ಇದೆ.

ಇತರೆ ಮೂರು ಬಾಹ್ಯ ಅಂಗಗಳೆಂದರೆ ಆಸನ, ಪ್ರಾಣಾಯಾಮ (ಉಸಿರಾಟದ ಮೇಲಿನ ಹತೋಟಿ) ಮತ್ತು ಪ್ರತ್ಯಾಹಾರ (ಸಂಯಮ).

ಹಠಯೋಗ ಅಥವಾ ಆಸನದ ಜಟಿಲವಾದ ದೈಹಿಕ ವ್ಯಾಯಾಮಗಳಿಗೆ ವಿರುದ್ಧವಾಗಿ, ಪತಂಜಲಿಯು ಅಭ್ಯಾಸಿಯು ಸ್ಥಿರವಾದ, ಸುಖಕರವಾದ, ಆರಾಮವಾದ ಆಸನದಲ್ಲಿ ಕುಳಿತು ಅಪರಿಮಿತದ ಬಗ್ಗೆ ಅಥವಾ ಅನಂತದ ಬಗ್ಗೆ ಮನಸ್ಸನ್ನು ಕೇಂದ್ರೀಕರಿಸಲು ಹೇಳುತ್ತಾನೆ. ಸ್ವಲ್ಪ ಅಭ್ಯಾಸವಾದ ನಂತರದಲ್ಲಿ ಬಾಹ್ಯ ಪರಿಸ್ಥಿತಿಗಳು ಏನೇ ಇದ್ದರೂ ವ್ಯಕ್ತಿಯು ಈ ಆಸನವನ್ನು ಅನಿರ್ದಿಷ್ಟ ಕಾಲಾವಧಿಯವರೆಗೆ ಅಳವಡಿಸಿಕೊಳ್ಳುವ ಸ್ಥಿತಿಯಲ್ಲಿರಬೇಕು. ಹೀಗೆ ಅತಿ ಉಷ್ಣ ಮತ್ತು ಶೀತಗಳನ್ನು ನಿರ್ಲಕ್ಷಿಸಲು ದೇಹಕ್ಕೆ ತರಬೇತಿ ಸಿಕ್ಕಂತಾಗುತ್ತದೆ. ಸರಿಯಾಗಿ ಆಸನ ಹಾಕುವುದು ಮತ್ತು ಯಮ–ನಿಯಮಗಳ ಸರಿಯಾದ ಅನುಷ್ಠಾನ ಇವೆರಡೂ ಜೊತೆಗೂಡಿದರೆ ಗಮನ ಬೇರೆ ಕಡೆಗೆ ಹೋಗಿಬಿಡಬಹುದಾದ ಮನಸ್ಸಿನ ಪ್ರವೃತ್ತಿಗೆ ಕಡಿವಾಣ ಹಾಕಿದಂತಾಗುತ್ತದೆ. ಈ ರೀತಿಯಲ್ಲಿ ಸಮಾಧಿಯನ್ನು ಸಿದ್ಧಿಸಿಕೊಳ್ಳಲು ಮನಸ್ಸನ್ನು ಸಿದ್ಧಗೊಳಿಸಲಾಗುತ್ತದೆ.

ಪ್ರಾಣಾಯಾಮ ಕೂಡ ಸಮಾಧಿ ಪ್ರಾಪ್ತಿಮಾಡಿಕೊಳ್ಳಲು ನಡೆಸುವ ಒಂದು ಸಿದ್ಧತೆ. ಅದು ಬೆಳಕಿನ ಆವರಣವನ್ನು ಕಳಚಿಹಾಕುತ್ತದೆ. ಇದೊಂದು ಕುತೂಹಲದ ವಿಚಾರವೇ ಸರಿ. ಕಾರಣ ಸಾಮಾನ್ಯವಾಗಿ ನಾವು ಕತ್ತಲೆಯನ್ನು ಹೊರದೂಡುವ ಬಗ್ಗೆ ಕೇಳಿದ್ದೇವೆ. ಸ್ಪಷ್ಟವಾದ ಮಾತುಗಳಲ್ಲಿ ಹೇಳಬೇಕೆಂದರೆ ಬೆಳಕಿನ ಆವರಣವನ್ನು ತೆಗೆದು ಹಾಕುವುದೆಂದರೆ, ಕತ್ತಲೆಯ ಅನುಭೂತಿ ಎನ್ನುವ ಅರ್ಥ ಹೊರಡುತ್ತದೆ. ಪತಂಜಲಿಯ ಪ್ರಕಾರ ಅದು ಮನಸ್ಸನ್ನು ಒಂದು ಬಿಂದುವಿನತ್ತ ಕೇಂದ್ರೀಕರಿಸುವುದಕ್ಕೆ ಸಿದ್ಧಪಡಿಸುತ್ತದೆ.

ಪ್ರತ್ಯಾಹಾರದಲ್ಲಿ ಇಂದ್ರಿಯಗಳು ಅವುಗಳ ಗ್ರಹಿಕೆಯನ್ನು ಲಕ್ಷ್ಯಕ್ಕೆ ತಂದುಕೊಳ್ಳದಿರುವುದನ್ನು ಅಭ್ಯಾಸಮಾಡಿಸಲಾಗುತ್ತದೆ. ನನ್ನ ಮಾತಿನ ಅರ್ಥ ಇಂದ್ರಿಯಗಳ ಸಂವೇದನೆ ಇರುತ್ತದಾದರೂ ಹಿಂದಿನ ನೆನಪುಗಳು ಮತ್ತು ಯೋಚನೆಗಳಿಗೆ ಸಂಬಂಧಿಸಿದಂತೆ ಅದಕ್ಕೆ ಅರ್ಥವಿರುವುದಿಲ್ಲ ಎಂದು. ಹಾಗಾಗಿ ವ್ಯಕ್ತಿಯೊಬ್ಬನು ಈ ಸಾಮಗ್ರಿಯಲ್ಲಿ ಅಡಕವಾಗಿರುವ ತಿರುಳನ್ನು ನಿಜವಾಗಿಯೂ ನೋಡದೆಯೆ ನೋಡುತ್ತಾನೆ ಮತ್ತು ನಿಜವಾಗಿಯೂ ಕೇಳದೆಯೆ ಕೇಳುತ್ತಾನೆ. ಪ್ರತ್ಯಾಹಾರದ ನೆರವಿನಿಂದ ಇಂದ್ರಿಯಗಳ ಮೇಲೆ ಸಂಪೂರ್ಣ ಪ್ರಭುತ್ವವನ್ನು ಹೊಂದಬಹುದು ಎಂದು ಪತಂಜಲಿಯ ಹೇಳಿಕೆ.

ಸಾಧಾರಣವಾದ ಬದುಕು ಸಾಗಿಸುತ್ತಿರುವ ವ್ಯಕ್ತಿಯೂ ಯಮ–ನಿಯಮ, ಆಸನಗಳ ಪ್ರಭಾವವನ್ನು ಅರ್ಥಮಾಡಿಕೊಳ್ಳಬಹುದು. ಹಾಗಿದ್ದರೂ ಸ್ವಲ್ಪಮಟ್ಟಿನ ಶಿಸ್ತು ಮತ್ತು ಅನುಭವವಿಲ್ಲದೆ ಇದ್ದರೆ ಪ್ರಾಣಾಯಾಮ ಮತ್ತು ಪ್ರತ್ಯಾಹಾರಗಳ ಅರ್ಥವನ್ನು ಗ್ರಹಿಸುವುದು ಕಷ್ಟ

* * *

ಯೋಗತರಬೇತಿಯ(ಶಿಕ್ಷಣದ) ಮೂರು ಆಂತರಿಕ ಅಂಗಗಳೆಂದರೆ ಧಾರಣ (ಮನಸ್ಸನ್ನು ಸ್ಥಿರೀಕರಿಸುವುದು, ನೆಲೆಗೊಳಿಸುವುದು), ಧ್ಯಾನ, ಮತ್ತು ಸಮಾಧಿ(ಗಾಢವಾದ ಧ್ಯಾನ, ಅತ್ಯುನ್ನತ ಪ್ರಜ್ಞೆ)

ಮೂಗಿನ ತುದಿ, ನಾಭಿ(ಹೊಕ್ಕುಳು), ಒಂದು ಮೂರ್ತಿ ಅಥವಾ ಪವಿತ್ರ ಸಂಕೇತದಂಥ ಒಂದು ವಸ್ತುವಿನ ಮೇಲೆ ಮನಸ್ಸನ್ನು ಸ್ಥಿರಗೊಳಿಸುವುದು ಅಥವಾ ನೆಲೆಗೊಳಿಸುವುದೇ ಧಾರಣ.

ಬೇರೆ ಆಲೋಚನೆಗಳು, ಭಾವನೆಗಳು ಅಥವಾ ಗ್ರಹಿಕೆಗಳ ಕಡೆಗೆ ಗಮನವನ್ನು ಹೋಗಗೊಡದೆ ಒಂದೇ ವಸ್ತುವಿನ ಮೇಲೆ ಒಂದೇ ಸಮನೆ ಧಾರಣವನ್ನು ಮಾಡಲು ಸಾಧ್ಯವಾದರೆ ಆಗ ಅದು ಧ್ಯಾನವೆನಿಸುತ್ತದೆ. ಯಾವುದರ ಮೇಲೆ ಮನಸ್ಸನ್ನು ಕೇಂದ್ರೀಕರಿಸಲಾಗಿರುತ್ತದೆಯೋ ಆ ವಸ್ತುವೇ ಮನಸ್ಸನ್ನೆಲ್ಲಾ ಇಡಿಯಾಗಿ ತುಂಬಿಕೊಂಡುಬಿಡುತ್ತದೆ.

ಇಡೀ ವ್ಯಕ್ತಿತ್ವ ತಾತ್ಕಾಲಿಕವಾಗಿ ಸಂಪೂರ್ಣವಾಗಿ ಕರಗಿ ಹೋದಾಗ (ವಿಲೀನವಾದಾಗ) ಸಮಾಧಿ ಉಂಟಾಗುತ್ತದೆ. 'ನಾನು' ಎಂಬ 'ಅಹಂ' ನ ಅಸ್ತಿತ್ವದ ಯಾವುದೇ ಅರಿವಿಲ್ಲದೆ ಧ್ಯಾನದ ಕೇಂದ್ರ ವಸ್ತುವನ್ನು ಕುರಿತಾದ ಅರಿವು ಮಾತ್ರ ಇರುವ ಸ್ಥಿತಿಗೆ ವ್ಯಕ್ತಿ ತಲುಪುತ್ತಾನೆ.

ಶುದ್ಧ ಅರಿವನ್ನು(ಪ್ರಜ್ಞೆ) ಗಳಿಸುವ ಮಾರ್ಗಗಳನ್ನು ವಿಸ್ತಾರವಾಗಿ ಹೇಳುತ್ತ ಪತಂಜಲಿಯು ಕಟ್ಟ ಕಡೆಗೆ ಸಮಾಧಿಯ ಮೂರು ಹಂತಗಳನ್ನು ವಿವರಿಸುತ್ತಾನೆ. ಅಷ್ಟಾಂಗ ಯೋಗವನ್ನು ಕ್ರಮವಾಗಿ ಅಭ್ಯಾಸ ಮಾಡುತ್ತ ದೀರ್ಘ ಅವಧಿಯವರೆಗೆ ಸಮಾಧಿಯನ್ನು ಕಾಪಾಡಿಕೊಳ್ಳಲು (ಧಾರಣ ಮಾಡಿಕೊಳ್ಳಲು) ಸಾಧ್ಯವಾಗುವುದಾದರೆ ಯೋಗಿಯೊಬ್ಬ 'ವಿಭೂತಿಗಳು' ಎಂಬ ವಿಶೇಷ ಶಕ್ತಿಗಳನ್ನು(ಸಿದ್ಧಿಗಳನ್ನು) ಗಳಿಸುತ್ತಾನೆ. ಈ ಶಕ್ತಿಗಳೆಂದರೆ ಭೂತ, ಭವಿಷ್ಯ ಮತ್ತು ಪೂರ್ವ ಜನ್ಮಗಳ ಜ್ಞಾನ ಮನೋವ್ಯಾಪಾರಗಳನ್ನು ತಿಳಿಯುವ ಶಕ್ತಿ, ಕಣ್ಣಿಗೆ ಕಾಣಿಸದಿರುವ ಶಕ್ತಿ ಮತ್ತು ಇನ್ನಿತರೆ ವಿಶೇಷ ಶಕ್ತಿಗಳು. ಈ ಶಕ್ತಿಗಳು ಪ್ರಕೃತಿಯ ನಿಯಮಗಳನ್ನು ವಿರೋಧಿಸುವಂಥವಲ್ಲವೆಂದು ತಿಳಿಯಲಾಗಿದೆ. ಅದು ಮಾಡುವುದೇನಿದ್ದರೂ ಈ ಶಕ್ತಿಗಳಿಗೆ ಇರುವ ಅಡೆತಡೆಗಳನ್ನು ತೆಗೆದುಹಾಕುವುದು. ಅದು ರೈತನು ಗದ್ದೆಗೆ ನೀರು ಹರಿಸುವ ಕಾಲುವೆಗೆ ಹಾಕಿರುವ ಕಟ್ಟೆಯನ್ನು ತೆಗೆದುಹಾಕಿದ ಕೂಡಲೇ ನೀರು ಸರಾಗವಾಗಿ ಹರಿದು ಹೋಗುವ ರೀತಿ. ಪತಂಜಲಿ ಈ ಶಕ್ತಿಗಳ

ವಿಷಯಕ್ಕೆ ವಿಶೇಷ ಮೋಹತಾಳುವ ಬಗೆಗೆ ಎಚ್ಚರಿಸುತ್ತಾನೆ. ಕಾರಣ ಅಂಥ ಮೋಹ ಹಾನಿಕಾರಕವಾಗಬಹುದು.

ಈ ಶಕ್ತಿಗಳನ್ನು ತ್ಯಜಿಸುವುದು ಸಾಧ್ಯವಾದರೆ ಅದು ಯೋಗಿಯನ್ನು ಕೈವಲ್ಯದತ್ತ ಕೊಂಡೊಯ್ಯುತ್ತದೆ. ಕೈವಲ್ಯವೆಂದರೆ ಸಂಪೂರ್ಣ ವಿವಿಕ್ತತೆ. ಅದರ ಮೇಲೆ ವಾಸ್ತವದ ಅರಿವು ಉಂಟಾಗುತ್ತದೆ. ಈ ಎಚ್ಚರ ಇಡೀ ಪ್ರಕೃತಿಯನ್ನು, ಎಲ್ಲ ಬಗೆಯ ವೈವಿಧ್ಯಗಳಿಂದ ಕೂಡಿರುವ ಭೌತವಸ್ತುವನ್ನು ಮೀರುತ್ತದೆ. ಎಲ್ಲವುಗಳ ಆಚೆ ಇರುತ್ತದೆ. ಹಾಗೆ ಮಾಡುವ ಸಂದರ್ಭದಲ್ಲಿ ಅದು ಏಕ ಕಾಲದಲ್ಲಿ ಭೂತ, ಭವಿಷ್ಯತ್, ವರ್ತಮಾನಗಳ ಎಲ್ಲ ವಸ್ತು ಮತ್ತು ಕಾರ್ಯಗತಿಗಳ ತಿಳಿವನ್ನು ನೀಡುತ್ತದೆ. ಯೋಗಿಯೊಬ್ಬನು ಈ ಹಂತದ ಜ್ಞಾನೋದಯದ ಆನಂದದಿಂದಲೂ ನಿರ್ಲಿಪ್ತನಾಗಿರಬಲ್ಲನಾದರೆ ಅವನು ಸಮಾಧಿಯ ಅತ್ಯುನ್ನತ ಹಂತದಲ್ಲಿದ್ದಾನೆಂದೇ ಅರ್ಥ.

ಕೈವಲ್ಯದ ಈ ಹಂತದಲ್ಲಿ ಪುರುಷವು ತನ್ನ ನಿಜ ಸ್ವರೂಪದಲ್ಲಿ ಅರ್ಥಾತ್ ಶುದ್ಧ ಜ್ಞಾನಸ್ವರೂಪದಲ್ಲಿ ಪ್ರಕಟಗೊಳ್ಳುತ್ತದೆ.

* * *

ಸಾಂಖ್ಯಶಾಸ್ತ್ರಗಳು ಮತ್ತು ಯೋಗಸೂತ್ರಗಳು ಚೆನ್ನಾಗಿ ಬೆಳವಣಿಗೆಯಾದ ಬ್ರಹ್ಮಾಂಡಸ್ವರೂಪದ ಸಿದ್ಧಾಂತ ಹಾಗೂ ಅದರಲ್ಲಿ ಮನುಷ್ಯನ ಸ್ಥಾನದ ಮೇಲೆ ರಚಿತವಾಗಿವೆ. ಇಲ್ಲಿ ವಿಶದಪಡಿಲಾಗದಷ್ಟು ಅವು ಸಂಕೀರ್ಣವಾಗಿವೆ. ಕೆಲವೊಮ್ಮೆ ಪತಂಜಲಿಯು ಆಧುನಿಕ ಮನಶ್ಶಾಸ್ತ್ರಜ್ಞರ ಮನಸ್ಸನ್ನಾಕ್ರಮಿಸಿಕೊಂಡಿರುವ ವಿಷಯಗಳನ್ನು ಪ್ರಸ್ತಾಪಿಸುವಂತೆ ಕಂಡುಬರುತ್ತದೆ. ಅದರಲ್ಲಿ ಒಂದು ಮನುಷ್ಯನ ಯಾತನೆ(ನೋವು). ಆ ವಿಷಯಕ್ಕೆ ನಾವು ಮತ್ತೆ ಬರೋಣ. ನರವ್ಯಾಧಿಯನ್ನು (neurosis) ವಿವರಿಸಲು ಆಧುನಿಕ ಮನಶ್ಶಾಸ್ತ್ರಜ್ಞರು ಅನೇಕ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ಅಸಂತೋಷ, ಕ್ಲೇಶ (ನೋವು), ಮತ್ತು ಇತರೆ ನರವ್ಯಾಧಿಗಳಿಗೆ ಅಪ್ರಜ್ಞಾಪೂರ್ವಕವಾದ ಸಂಘರ್ಷ(ಒಳತೋಟಿ)ಗಳು ಕಾರಣ ಎಂದು ಫ್ರಾಯ್ಡ್, ಮತ್ತು ಅವನ ಅನುಯಾಯಿಗಳು ವಾದಿಸುತ್ತಾರೆ. ಜೆ. ಬಿ. ವಾಟ್ಸನ್, ಬಿ. ಎಫ್. ಸ್ಕಿನ್ನರ್ ಮತ್ತು ಅವರ ಅನುಯಾಯಿಗಳು ನರವ್ಯಾಧಿಗಳು ತಪ್ಪು ಕಲಿಕೆಯಿಂದ(ಶಿಕ್ಷಣದಿಂದ) ಉಂಟಾಗುತ್ತವೆಂದು ಭಾವಿಸಿದ್ದರು. ಕೆಲವರು ತಮ್ಮ ವಂಶವಾಹಿಯ(ಜನನ) ಪೂರ್ವ ವ್ಯಾಧಿಗಳಿಂದ ತೊಂದರೆಗೊಳಗಾಗುತ್ತಾರೆಂದು ಒಪ್ಪುತ್ತಾರಾದರೂ ಎರಡೂ ಪಂಥಗಳವರು ವ್ಯಕ್ತಿಯ ಈಗಿನ ಬದುಕಿಗೆ ಸಂಬಂಧಪಟ್ಟ ಘಟನೆಗಳನ್ನೇ ಕುರಿತು ವಿಚಾರಮಾಡುತ್ತಾರೆ. ಪತಂಜಲಿಯು ಕ್ಲೇಶಗಳೆಂದು ಕರೆಯುವ ಈ ಯಾತನೆಗಳನ್ನು ವಿವರಿಸಲು 'ಯೋಗಸೂತ್ರಗಳು' ತನ್ನದೇ ಆದ ಸಿದ್ಧಾಂತವನ್ನು ಹೊಂದಿದೆ. ಈ ಸಿದ್ಧಾಂತದ ಪ್ರಕಾರ ನಮ್ಮ ಕ್ಲೇಶಗಳ ಮೂಲಕಾರಣ ನಮ್ಮ ಹಿಂದಿನ ಜನ್ಮಗಳಲ್ಲಿ ಇರುತ್ತದೆ ಹಾಗೂ ಅದೇ ನಮ್ಮ ಮುಂದಿನ ಜನ್ಮಗಳಿಗೂ ಮುಂದುವರಿಯುತ್ತದೆ. ನಮ್ಮ ವ್ಯಕ್ತಿತ್ವ ಕೂಡ ಈ ಹಿಂದಿನ ಅನುಭವಗಳಿಂದ ನಿರ್ಧಾರಿತವಾಗುತ್ತದೆ.

ಕ್ಲೇಶಗಳು ಐದು ವಿಧ. ಅವುಗಳೆಂದರೆ ಅಜ್ಞಾನ, ಅಹಂಕಾರ, ಆಕರ್ಷಣೆಗಳು, ವಿಕರ್ಷಣೆಗಳು(ಜುಗುಪ್ಸೆ) ಹಾಗೂ ದೀರ್ಘಕಾಲ ಬದುಕಬೇಕೆಂಬ ಬಯಕೆ. ಇದರ ಆಧಾರಭೂತ ಸಿದ್ಧಾಂತವನ್ನು ಒಪ್ಪದಿದ್ದವರೂ ನಮ್ಮ ಅಹಂಕಾರ, ಮೋಹಗಳು, ಮತ್ತು ವಿಕರ್ಷಣೆಗಳು ಮತ್ತು ಸಾವನ್ನು ಕುರಿತಾದ ನಮ್ಮ ಭಯ ಇವೆಲ್ಲ ನರರೋಗ ಸಂಬಂಧವಾದ ನಮ್ಮ ವರ್ತನೆಗಳಿಗೆ ತಳಹದಿ ಎಂಬುದನ್ನು ಒಪ್ಪಲೇ ಬೇಕು. ನರವ್ಯಾಧಿಯಲ್ಲಿ ಅಂತರ್ಗತವಾಗಿರುವ ಸಂಘರ್ಷಗಳನ್ನು ಪತಂಜಲಿ ಅದೆಷ್ಟು ಸರಳವಾಗಿ ವರ್ಗೀಕರಿಸುತ್ತಾನೆಂಬುದು ಅತ್ಯಂತ ಪರಿಣಾಮಕಾರಿಯಾದುದು.

ಪ್ರತಿಯೊಬ್ಬ ವ್ಯಕ್ತಿಯ ಕರ್ಮಗಳಿಂದ ಕ್ಲೇಶಗಳು ಉಂಟಾಗುತ್ತವೆ ಮತ್ತು ಕರ್ಮಗಳೇ ಕ್ಲೇಶಗಳನ್ನು ನಿಯಂತ್ರಿಸುತ್ತವೆ. ಪ್ರತಿಯೊಂದು ಕರ್ಮವೂ ಅದರ ಫಲವನ್ನು ನೀಡಲೇ ಬೇಕು. ಆದರೆ ಅದಕ್ಕೆ ಒಂದು ಅಪವಾದವಿದೆ. ಮುಂದೆ ಕ್ಲೇಶವನ್ನು ಯೋಗದ ಮೂಲಕ ತಡೆಗಟ್ಟಬಹುದು. ಯೋಗಿಯಾದವನು ಅಷ್ಟೇನೂ ಅಂಗೀಕಾರಾರ್ಹವಲ್ಲದ ತನ್ನ ವ್ಯಕ್ತಿತ್ವದ ಸ್ವಭಾವ ಲಕ್ಷಣಗಳನ್ನು ಕ್ರಮೇಣ ತ್ಯಜಿಸುತ್ತಾನೆ. ಅದರಿಂದಾಗಿ ಕಟ್ಟಕಡೆಯಲ್ಲಿ ಸಾತ್ವಿಕ ಅಂಶಗಳು ಮೇಲುಗೈಯಾಗುತ್ತವೆ. ಅಂತಿಮವಾಗಿ ಅವನು ಮೇಲೆ ವಿವರಿಸಲಾದ ಉದ್ದೇಶರಹಿತ ಅರಿವನ್ನು (ಪ್ರಜ್ಞೆಯನ್ನು) ಪಡೆಯುತ್ತಾನೆ.

ಸಾಮಾನ್ಯ ಮರ್ತ್ಯ ಜೀವಿಯೊಬ್ಬನಿಗೆ ಆ ಅನುಭವವನ್ನು ಕಲ್ಪಿಸಿಕೊಳ್ಳವುದು ಅಸಾಧ್ಯ. ಆದಾಗ್ಯೂ ಒಳ್ಳೆಯ ಮತ್ತು ಗುಣಶಾಲಿಯಾದ ಸಾತ್ವಿಕ ವ್ಯಕ್ತಿತ್ವದೊಂದಿಗೆ ಭಾವ ತಾದಾತ್ಮ್ಯ ಹೊಂದಬಹುದು. ಹಾಗೂ ಅದನ್ನು ಯೋಗಸೂತ್ರಗಳಲ್ಲಿ ವರ್ಣಿಸಲಾಗಿರುವ ಆದರ್ಶ ಮಾನಸಿಕ ಆರೋಗ್ಯದ ಕಾಣ್ಕೆ(ದರ್ಶನ) ಎಂದು ಅಂಗೀಕರಿಸಬಹುದು.

ಯಮ-ನಿಯಮಗಳು ಸಾತ್ವಿಕ ವ್ಯಕ್ತಿತ್ವವೊಂದರ ಮಾದರಿಯನ್ನು ನಮಗೆ ನೀಡುತ್ತವೆ. ಅಷ್ಟಾಂಗ ಯೋಗವು ಅಪೇಕ್ಷಿಸುವ ಅಗತ್ಯಗಳನ್ನು ಪೂರೈಸಬಲ್ಲ ಯೋಗಿಯು ಗುರುತಿಸ ಬಹುದಾದ ವ್ಯಕ್ತಿತ್ವದ ಗುಣವಿಶೇಷಗಳನ್ನು ವೃದ್ಧಿಪಡಿಸಿಕೊಳ್ಳುತ್ತಾನೆ. ಅವನು ಆಲೋಚನೆಯಲ್ಲಿ ಮತ್ತು ಕ್ರಿಯೆಯಲ್ಲಿ ಹಿಂಸೆಯಿಂದ ಮುಕ್ತನಾಗಿರುತ್ತಾನೆ, ಸುಳ್ಳಿನಿಂದ, ಆಸ್ತಿ, ಐಶ್ವರ್ಯಗಳನ್ನು ಗಳಿಸಬೇಕೆಂಬ ಬಯಕೆಯಿಂದ, ಹಾಗೂ ಬೇರೆಯವರಿಗೆ ಸೇರಿದ ವಸ್ತುಗಳನ್ನು ಅಪಹರಿಸಬೇಕೆಂಬ ಅಗತ್ಯತೆಯಿಂದ ಮುಕ್ತನಾಗಿರುತ್ತಾನೆ. ತನ್ನ ಲೈಂಗಿಕ ಪ್ರವೃತ್ತಿಗಳ ಮೇಲೆ ಹತೋಟಿ ಹೊಂದಿರುತ್ತಾನೆ. ಶರೀರದಿಂದ ಮತ್ತು ಮನಸ್ಸಿನಿಂದ ಅವನು ಪರಿಶುದ್ಧನಾಗಿರುತ್ತಾನೆ ಮತ್ತು ತನ್ನಲ್ಲಿ ಸಂತೃಪ್ತಿ ಹೊಂದಿರುತ್ತಾನೆ, ಅದೇ ಸಮಯದಲ್ಲಿ ಉನ್ನತ ಹಂತದ ಬದುಕಿಗೆ ಮತ್ತೂ ಹಾರೈಸುತ್ತಲೇ ಇರುತ್ತಾನೆ. ಅವನಿಗೆ ದೃಢವಾದ ಮನಸ್ಸಿರುತ್ತದೆ. ತನ್ನ ಪ್ರವೃತ್ತಿ ಸಹಜವಾದ ಬಯಕೆಗಳನ್ನು ಹತ್ತಿಕ್ಕಲು ಕಠಿಣ ವ್ರತಗಳನ್ನು ಕೈಗೊಳ್ಳಲು ಸಿದ್ಧನಿರುತ್ತಾನೆ. ಅವನು ಸದಾ ಆತ್ಮ ಪರೀಕ್ಷೆಯಲ್ಲಿ ತೊಡಗಿಕೊಂಡಿರುತ್ತಾನೆ.

ಇದು ಸಾಧಕನಿಂದ ಹೆಚ್ಚಿನದನ್ನು ಬಯಸುವ ಕಾರ್ಯ ಯೋಜನೆ. ಹಾಗಾಗಿ ಇದರ ಪ್ರತಿಯೊಂದನ್ನೂ ಯಾರೇ ಆದರೂ ಮಾಡಲು ಸಾಧ್ಯವಿಲ್ಲ. ಇದೊಂದು ಎಲ್ಲರೂ ಸಾಧಿಸಲು ಶ್ರಮಿಸಬೇಕಾದ ಆದರ್ಶ ಅಷ್ಟೆ. ಆದರೆ ಸಾಧಾರಣ ವ್ಯಕ್ತಿಗೆ ಸಾಧ್ಯವಾಗುವಂಥದಲ್ಲ. ಆದಾಗ್ಯೂ ಕರ್ಮದ ಪರಿಣಾಮಗಳನ್ನು ಮೀರಲು ಸಾಧ್ಯವೆಂದು 'ಯೋಗಸೂತ್ರಗಳು' ಸ್ಪಷ್ಟವಾಗಿ ಸಾರುತ್ತವೆ. ಬಲವಾದ ಸಂಕಲ್ಪಶಕ್ತಿಯಿಂದ ಮಾತ್ರ ಈ ಮೀರುವಿಕೆ ಸಾಧ್ಯವಾಗುವುದು. ಅಗತ್ಯವಿರುವ ಆತ್ಮ ನಿಗ್ರಹದ ಮಟ್ಟವನ್ನು ವೃದ್ಧಿಸಿಕೊಳ್ಳಲು ಅಷ್ಟಾಂಗ ಯೋಗದಲ್ಲಿ ತೊಡಗಿಸಿಕೊಳ್ಳುವ ಬದ್ಧತೆ ಮತ್ತು ತ್ಯಾಗಕ್ಕೆ ಎಲ್ಲ ವಿಧವಾದ ನೆರವು ಬೇಕಾಗುತ್ತದೆ.

□□

ಸಂಶೋಧನೆಯ ಹಾದಿಯಲ್ಲಿ

ನಾನು ನನ್ನ ಯೋಗ ಸಂಶೋಧನೆಗೊಂದು ಯೋಜನೆ ತಯಾರಿಸಿದ್ದೆ. ಆದರೆ ಅದನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ ನನಗೆ ಯೋಗವನ್ನು ಕಲಿಸುವ ಒಬ್ಬ ಗುರುವನ್ನು ಹುಡುಕಿಕೊಳ್ಳಬೇಕಿತ್ತು.

ನಾನು ನನ್ನ ಗುರುವನ್ನು ಮೊಟ್ಟ ಮೊದಲು ಸಂಧಿಸಿದ್ದು ನನ್ನ ಸಂಶೋಧನೆ ಆರಂಭವಾಗುವುದಕ್ಕೆ ಸುಮಾರು ಒಂದು ತಿಂಗಳು ಮುಂಚೆ. ಅವರ ಆಶ್ರಮದಲ್ಲಿ ಕಳೆದ ಎರಡು ವರ್ಷಗಳಿಂದ ಯೋಗಸಾಧನೆ ಮಾಡುತ್ತಿದ್ದ ನನ್ನ ಕಿರಿಯ ಸಹೋದ್ಯೋಗಿ ಯೊಬ್ಬರಿಂದ ಅವರ ಬಗ್ಗೆ ಕೇಳಿದ್ದೆ. ಅವರು ಏನನ್ನು ಕಲಿಸುತ್ತಿದ್ದರು ಮತ್ತು ಹೇಗೆ ಕಲಿಸುತ್ತಿದ್ದರು ಎಂಬ ಬಗ್ಗೆ ಕೇಳಿದಾಗಲೆಲ್ಲ ಅವರ ಬಗೆಗಿನ ನನ್ನ ಗೌರವ ಹೆಚ್ಚಾಗುತ್ತಿತ್ತು. ಅವರು ನಡೆಸುತ್ತಿದ್ದ ಸತ್ಸಂಗ ಸಭೆಗಳಲ್ಲೊಂದಕ್ಕೆ ಹಿಂಜರಿಯುತ್ತಲೇ ಹಾಜರಾಗಿದ್ದೆ. ಅವರ ತೀರ ಸನಿಹಕ್ಕೆ ಹೋಗುವ ಪ್ರಯತ್ನ ಮಾಡದೆ ದೂರದಿಂದಲೇ ಅವರನ್ನು ಗಮನಿಸಿದ್ದೆ.

ನನ್ನ ಸಂಶೋಧನೆ ಪ್ರಾರಂಭವಾಗುವುದಕ್ಕೆ ಒಂದು ತಿಂಗಳು ಮುಂಚೆ ನನ್ನನ್ನು ಅವರ ಬಳಿಗೆ ಕರೆದುಕೊಂಡು ಹೋಗಬೇಕೆಂದು ನನ್ನ ಸಹೋದ್ಯೋಗಿಯನ್ನು ಕೇಳಿಕೊಂಡೆ. ನನಗಿದ್ದ ಸಂಶಯಗಳ ಬಗ್ಗೆ, ಯೋಗದಲ್ಲಿ ನನಗಿದ್ದ ಆಸಕ್ತಿಯ ಬಗ್ಗೆ ಮತ್ತು ಹೇಗೆ ನನ್ನ ಸ್ವಂತ ಅನುಭವದಿಂದ ಅದನ್ನು ಕಲಿತುಕೊಳ್ಳಲು ನಾನು ಇಚ್ಛಿಸಿದ್ದೇನೆ ಎಂಬ ಬಗ್ಗೆಯೆಲ್ಲಾ ಅವರಲ್ಲಿ ಹೇಳಿದೆ. ನನ್ನ ಬಗ್ಗೆಯೇ ಒಂದು ಗಂಟೆಯ ಕಾಲ ಅವರಿಗೆ ತಿಳಿಸಿದ ಮೇಲೆ ನನಗೆ ಅವರು ಯೋಗವನ್ನು ಹೇಳಿಕೊಡುತ್ತಾರೆಯೋ ಹೇಗೆ ಎಂದು ಕೇಳಿದೆ. ಅವರು ಸ್ವಲ್ಪ ಹೊತ್ತು ಧ್ಯಾನಸ್ಥರಾಗಿದ್ದು ಆಮೇಲೆ ಅವರನ್ನು ಸಂಪರ್ಕಿಸಬೇಕೆಂದು ಹೇಳಿದರು.

ಸಂಶೋಧನೆಗಾಗಿ 'ಅಧ್ಯಯನ ಮತ್ತು ಪ್ರವಾಸಕ್ಕಾಗಿ ಬಿಡುವಿನ ಮಂಜೂರಾತಿ" ನನಗೆ ದೊರೆತಾಗ ಅವರ ಬಳಿ ಹೋಗಿ ನನ್ನ ಕೋರಿಕೆಯನ್ನು ಮತ್ತೆ ಮುಂದಿಟ್ಟೆ.

'ನೀವು ಯೋಗವನ್ನು ಏಕೆ ಕಲಿಯಬೇಕೆಂದಿದ್ದೀರಿ?' ಎಂದು ಕೇಳಿದರು. ಇದು ಅತ್ಯಂತ ಸಹಜವಾದ ಪ್ರಶ್ನೆ. ಇದಕ್ಕೆ ನನ್ನ ಉತ್ತರ ಸಿದ್ಧವಾಗಿರಬೇಕಾಗಿತ್ತು. ನನಗೆ ಅದು ಸರಿಯಾದ ಉತ್ತರವೋ ಅಲ್ಲವೋ ಎಂಬುದು ಖಚಿತವಿರಲಿಲ್ಲ. ಆದರೂ ನನ್ನ ಮನಸ್ಸಿಗೆ ಮೊದಲು ಬಂದದ್ದನ್ನು ಹೇಳಿದೆ:

"ಬದುಕು ತನ್ನ ಒಡ್ಡೊಡ್ಡಾದ, ತಡವರಿಸುವ ಹಾಗೂ ಆಡಂಬರದ ರೀತಿಯಲ್ಲಿ ಕಲಿಸುವುದಕ್ಕಿಂತಲೂ ಹೆಚ್ಚು ಶೀಘ್ರವಾಗಿ ಪರಿಪಕ್ವತೆಯನ್ನು ಗಳಿಸುವ ಸಲುವಾಗಿ" – (ಇದನ್ನು ನಾನು ಶ್ರೀ ಅರವಿಂದರ ಉಪದೇಶಗಳಿಂದ ಎತ್ತಿಕೊಂಡಿದ್ದೆ.).

ಅವರು ನನ್ನತ್ತ ಮುಗುಳ್ನಗೆ ಬೀರುತ್ತ "ಅದಷ್ಟೇನೆ?" ಎಂದರು.

ನಾನು ಅವರಿಗೆ ನನ್ನ ಸಂಶೋಧನೆಯ ಒಪ್ಪಂದದ ಕರಡು ಪತ್ರವನ್ನು ತೋರಿಸಿದೆ. ಅವರು ಅದನ್ನು ಗಟ್ಟಿಯಾಗಿ ಓದಿ ಜೋರಾಗಿ ನಕ್ಕರು: "ಅಂದರೆ ನೀವು ಹತ್ತು ವರ್ಷಗಳ ಕಾಲ ಯೋಗಾಭ್ಯಾಸ ಮಾಡಿರುವ ಯೋಗಿಗಳ ಆಂತರಿಕ ಅನುಭವವನ್ನು ಕಂಡುಕೊಳ್ಳಬೇಕೆಂದಿದ್ದೀರಿ ! ಅವರು ಅದನ್ನು ನಿಮಗೆ ಯಾತಕ್ಕೆ ಹೇಳಬೇಕು? ಹಾಗೆ ಅವರು ಹೇಳಿದರೂ ನಿಮಗೆ ಅದು ಅರ್ಥವಾಗುತ್ತದೆಯೆ?"

ಅವರು ಹೇಳಿದ್ದು ಸರಿಯಾಗೇ ಇತ್ತು. ಯೋಗಿಯೊಬ್ಬನು ತನ್ನ ಅನುಭವದ ಬಗ್ಗೆ ನನಗೆ ಯಾಕೆ ಹೇಳಬೇಕು? ನಾನು ಅವರ ಸಹ ಅನ್ವೇಷಕನೆ? ನಾನು ಮೊದಲು ಅಂಥವನಾಗಬೇಕು.

"ಹಾಗಾದರೆ ನೀವೇಕೆ ಯೋಗ ಕಲಿಯಬೇಕೆಂದಿದ್ದೀರಿ?" ಎಂದು ಅವರು ಮತ್ತೆ ಕೇಳಿದರು.

ಆಗ ನನಗೆ ತಡೆದುಕೊಳ್ಳಲಾಗಲಿಲ್ಲ. "ಸ್ವಾಮೀಜಿ, ತುಂಬ ಚಿಕ್ಕ ವಯಸ್ಸಿನಲ್ಲಿಯೇ ಶಿಕ್ಷಣ ಮತ್ತು ಉದ್ಯೋಗದಲ್ಲಿ ಯಶಸ್ಸು ಸಾಧಿಸಿದ್ದರೂ ನನಗೆ ಏನೋ ಒಂದು ರೀತಿಯ ಯಾತನೆಗೆ ಒಳಗಾದ ಹಾಗೆ ಅನ್ನಿಸುತ್ತಾ ಇದೆ ಹಾಗೂ ವಿಪರೀತ ಸಂದೇಹಗಳಿವೆ. ಕಡಿಮೆ ಯಾತನೆ ಉಂಟುಮಾಡುವಂಥ, ಬದುಕಲು ಇನ್ನೊಂದು ದಾರಿಯೇನಾದರೂ ಇದ್ದರೆ ಅದನ್ನು ಕಲಿಯಬೇಕೆಂದಿದ್ದೇನೆ" –ಎಂದು ಹೇಳಿದೆ.

ಅದಕ್ಕೆ ಉತ್ತರವಾಗಿ ಸ್ವಾಮೀಜಿ, ಜನರು ಯೋಗವನ್ನು ಏಕೆ ಅಧ್ಯಯನ ಮಾಡುತ್ತಾರೆಂದು ವಿಧವಿಧವಾದ ಹಲವರು ಕಾರಣಗಳನ್ನು ನೀಡಿದರು: ಅವುಗಳೆಂದರೆ– ಪರಿಪಕ್ವತೆಯನ್ನು ಸಾಧಿಸುವುದು; ಮನಸ್ಸಿನ ನೆಮ್ಮದಿ ಸಂಪಾದಿಸುವುದು; ಆತ್ಮದ ಮುಕ್ತಿಯನ್ನು ಗಳಿಸುವುದು; ದೇವರನ್ನು ತಲುಪುವುದು.

"ಗುರಿಗೆ ತಕ್ಕಂತೆ ಸಾಧನೆ ಬೇರೆಯಾಗುತ್ತದೆ."

"ಸಾಗುವ ಹಾದಿ ರೇಖಾತ್ಮಕವಾಗಿರುವುದಿಲ್ಲವೆ? ಮೊದಲು ಅತ್ಯಂತ ಸಾಧಾರಣವಾದದ್ದನ್ನು ಸಾಧಿಸಿ ಅನಂತರ ಉನ್ನತ ಹಂತಕ್ಕೆ ಹೋಗಬೇಕಲ್ಲವೆ?"– ಎಂದು ನಾನು ಕೇಳಿದೆ.

ಅವರು ಮುಗುಳ್ನಕ್ಕು ಹೇಳಿದರು– "ಸಾಧನೆಯ ಮಾರ್ಗ ಯಾತ್ತೂ ನೇರವಲ್ಲ."

ಆಮೇಲೆ ಅವರೊಂದು ವಿಚಿತ್ರ ಪ್ರಶ್ನೆ ಕೇಳಿದರು:

"ನಿಮ್ಮೊಳಗಿರುವ ಯಾರು ಯೋಗವನ್ನು ಕಲಿಯಬೇಕೆಂದಿರುವವರು?". ನಾನು ದಿಕ್ಕು ತೋಚದಂತಾದೆ. ಹಾಗಾಗಿ ಅವರೇ – "ಅದು ನಿಮ್ಮ ನಿಜ ಆತ್ಮವೋ ಅಥವಾ ನಿಮ್ಮೊಳಗಿನ ಅಹಮ್ಮೋ? ಸಾಧನೆಯ ಉದ್ದೇಶ ನಿಮ್ಮ ಆತ್ಮವನ್ನು ತಲುಪುವುದು, ಆದರೆ ಅಹಂ ಅಂತೂ ಯಾವತ್ತೂ ಇರುತ್ತದೆ. ಆತ್ಮವನ್ನು ಕಂಡುಕೊಳ್ಳಬೇಕೆಂಬ ಅಪೇಕ್ಷೆ ಕೂಡ ಅಹಂ ನಿಂದಲೇ ಹುಟ್ಟುವಂಥದು. ನಾವು ಸದಾ ನಮ್ಮ ಆತ್ಮಗಳ ಮೇಲೆಯೇ ಮುಗ್ಗರಿಸುತ್ತಿರುತ್ತೇವೆ; ಆದರೆ ಅದನ್ನು ನೋಡುವುದಿಲ್ಲ. ಆತ್ಮವನ್ನು ನಿಮ್ಮಿಂದ ಬೇರ್ಪಡಿಸುವ ಜೇಡರ ಬಲೆಗಳಿಂದ ಬಿಡಿಸಿಕೊಳ್ಳಲು ಸಾಧನೆಯು ನಿಮಗೆ ನೆರವಾಗುತ್ತದೆ."

ನಾನು ಹಲವಾರು ಬಾರಿ ನನ್ನದೇ ಹಾಗೂ ಅನ್ಯರ ಜಾಣ್ಮೆಯ ಶಬ್ದಗಳಿಂದ ಮೋಸಹೋಗಿದ್ದೇನೆ; ಎಷ್ಟರಮಟ್ಟಿಗೆ ಎಂದರೆ ಶಬ್ದಗಳೆಂದರೆ ನನಗೀಗ ತುಂಬ ಹೆದರಿಕೆ ಎಂದು ಸ್ವಾಮೀಜಿಯವರಿಗೆ ಹೇಳಬೇಕೆಂದುಕೊಂಡೆ. ಯಾವುದೇ ತಾತ್ವಿಕ ವಾಗ್ವಾದಗಳಲ್ಲಿ ತೊಡಗಿಕೊಳ್ಳುವುದು ನನಗೆ ಬೇಕಿರಲಿಲ್ಲ. ಅಲ್ಲದೆ ಆತ್ಮವೆಂದರೇನೆಂದಾಗಲಿ, ಮೋಕ್ಷ ಅಥವಾ ದೇವರು ಎಂಬ ಶಬ್ದಗಳ ನಿಜವಾದ ಅರ್ಥದ ಬಗ್ಗೆಯಾಗಲಿ ನನಗೇನೂ ತಿಳಿದಿರಲಿಲ್ಲ.

ಸ್ವಾಮೀಜಿಗೆ ನನ್ನ ಯೋಚನೆಗಳೇನೆಂದು ಅರ್ಥವಾಗಿರಬೇಕು. ಅಂತೆಯೇ– "ದೇವರು ಎಂದರೇನೆಂದು ನಿಮಗೆ ತಿಳಿದಿಲ್ಲದೆ ಇದ್ದರೂ ಅವನನ್ನು ಹುಡುಕಲು ಪ್ರಾರಂಭಿಸುವುದಕ್ಕೆ ಮುಂಚೆ ದೇವರನ್ನು ಕುರಿತ ಯಾವುದಾದರೂ ಪರಿಕಲ್ಪನೆಯ ಬಗೆಗೆ ನೀವು ಅಪೇಕ್ಷೆ ಹೊಂದಿರುವುದು ಅಗತ್ಯ" ಎಂದು ಹೇಳಿದರು. ಏನೇ ಆಗಲಿ, ಪರಿಕಲ್ಪನೆಗಳ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ಭಯಗಳನ್ನು ಕೂಡ ಬಹುಶಃ ಅರಿತಿರುವರೋ ಎಂಬಂತೆ ದೇವರ ಬಗೆಗಿನ ನನ್ನ ದೃಷ್ಟಿಕೋನದ ಬಗ್ಗೆ ಕೇಳಲಿಲ್ಲ. ಹೆಚ್ಚು ಕಡಿಮೆ ತೀರಾ ಸೂಕ್ಷ್ಮವಾಗಿ ಗಂಭೀರರಾಗಿಬಿಟ್ಟರು ಮತ್ತು ಪ್ರಕೃತ ವಿಷಯಕ್ಕೆ ಬಂದರು.

"ಮೊತ್ತಮೊದಲಿಗೆ ನೀವು ಮಾಡಬೇಕಾದ್ದೆಂದರೆ ನಿಮ್ಮ ಮನಸ್ಸನ್ನು ಸ್ಥಿರ ಮತ್ತು ಶಾಂತಗೊಳಿಸಲು ಕೆಲವೊಂದು ಸಾಧನೆಗಳನ್ನು ನೀವು ಕೈಗೊಳ್ಳುವುದು. ಈ ವಿಷಯದಲ್ಲಿ ನಾನು ನಿಮಗೆ ಮಾರ್ಗದರ್ಶನ ಮಾಡಬೇಕೆಂದರೆ ಯಾವ ಪ್ರಶ್ನೆಗಳನ್ನೂ ಹಾಕದೆ ಏನನ್ನೂ ವ್ಯಾಖ್ಯಾನಿಸದೆ ನನ್ನ ಸೂಚನೆಗಳನ್ನು ನೀವು ಅಕ್ಷರಶಃ ಅನುಸರಿಸಬೇಕಾಗುತ್ತದೆ."

ನನಗೂ ಇದೇ ಬೇಕಾಗಿದ್ದದ್ದು.

"ಯಾವ ಥರದ ಸಾಧನೆಗಳು?" –ನಾನು ಕೇಳಿದೆ.

ಅವರೆಂದರು– "ಮೊದಲ ಹೆಜ್ಜೆ ಎಂದರೆ ನೀವು ನಿಮ್ಮ ಸುತ್ತಲೇ ಒಂದು ರೀತಿಯ ಕ್ರಮವನ್ನು ಏರ್ಪಡಿಸಿಕೊಳ್ಳುವುದು. ಕ್ರಮಕ್ಕಾಗಿ ಕ್ರಮವಲ್ಲ. ಆದರೆ ನೀವು ಸಂಗತಿಗಳನ್ನು ಹೇಗೆ ಏರ್ಪಾಟು ಮಾಡಬೇಕೆಂದರೆ ನೀವು ಅವುಗಳನ್ನು ಯಾವಾಗ ಬೇಕೆಂದರೆ ಆಗ ಬಿಟ್ಟುಹೋಗಿಬಿಡಬಹುದು. ಕ್ರಮವು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತದೆ."

"ಎಂಥ ಸುಂದರವಾದ ವಿಚಾರ" ಎಂದು ಅನ್ನಿಸಿತು. ಸ್ವಾತಂತ್ರ್ಯದ ಬಗೆಗಿನ ಜನಪ್ರಿಯ ಪರಿಕಲ್ಪನೆ ಕುರಿತಂತೆ ನನಗೆ ಆಶ್ಚರ್ಯವೆನಿಸತೊಡಗಿತು. ಅವರ ಮಾತುಗಳು ನನ್ನ ಆಲೋಚನೆಯನ್ನು ಹರಿಗಡಿದುವು.

"ಸಹಜತೆ ಎನ್ನುವುದೆಲ್ಲಾ ಅವ್ಯವಸ್ಥೆ. ನಿಜವಾದ ಸಹಜತೆ ಬರುವುದು ಏನಿದ್ದರೂ ಒಂದು ವ್ಯವಸ್ಥೆ(ಕ್ರಮ) ಏರ್ಪಟ್ಟಾಗ. ನಿಮ್ಮ ಕೊಠಡಿ ವ್ಯವಸ್ಥಿತವಾಗಿರಬೇಕು. ನಿಮ್ಮ ಪುಸ್ತಕಗಳು ವ್ಯವಸ್ಥಿತವಾಗಿರಬೇಕು. ನಿಮ್ಮ ಕೆಲಸ ಕೂಡ ವ್ಯವಸ್ಥಿತವಾಗಿರಬೇಕು. ನಿಮ್ಮ ಆಹಾರದ ಮತ್ತು ನಿದ್ರೆಯ ಅಭ್ಯಾಸಗಳನ್ನು ವ್ಯವಸ್ಥಿತಗೊಳಿಸಿಕೊಳ್ಳಬೇಕು."

ಈ ರೀತಿಯ ಸರಳ ಸೂಚನೆಯಿಂದ ನನ್ನ ತರಬೇತಿ ಪ್ರಾರಂಭವಾಯಿತು. ದಿನಗಳು ಉರುಳಿದಂತೆ ಈ ಮೊದಲ ಹೆಜ್ಜೆಯನ್ನು ಅನುಸರಿಸುವುದೇ ಎಷ್ಟು ಕಷ್ಟವೆಂಬುದು ನನಗೆ ಸ್ಪಷ್ಟವಾಯಿತು. ನಾನು ಅವರಿಗೆ ಹಲವಾರು ಪ್ರಶ್ನೆಗಳನ್ನು ಕೇಳಿದೆ:

"ಅತಿಥಿಗಳು ನನ್ನಲ್ಲಿಗೆ ಬಂದಾಗ ನಾನೇನು ಮಾಡಬೇಕು? ಅವರಿಗೆ ಹೊರಟುಹೋಗಲು ಹೇಳಿ ನಾನು ಗೊತ್ತುಪಡಿಸಿಕೊಂಡ ವೇಳೆಗೇ ಊಟಮಾಡಬೇಕೆ? ರೋಗಿಗಳ ವಿಚಾರದಲ್ಲಿ ಹೇಗೆ? ಅವರಿಗೆ ನನ್ನ ಅಗತ್ಯ ಬಿದ್ದಾಗ ಅವರನ್ನು ನೋಡುವುದನ್ನು ನಿಲ್ಲಿಸಬೇಕೆ?"

ಅವರು ಸರಳವಾಗಿ ಹೀಗೆ ಹೇಳಿದರು:

"ಕ್ರಮ(ವ್ಯವಸ್ಥೆ) ಎಂಬುದು ಸ್ಥಿರವಾದದ್ದೇ ಹೊರತು ನಿಷ್ಠುರವಾದದ್ದಲ್ಲ. ಹಾಗೆ ನೋಡಿದರೆ ಕ್ರಮ ಮತ್ತು ಹೊಂದಾಣಿಕೆ ಪರಸ್ಪರ ಪೂರಕವಾದವು. ಸ್ನೇಹಿತರು ಬಂದಾಗ ಅವಶ್ಯಕವಾಗಿ ಆದರಾತಿಥ್ಯ ಮಾಡಿ. ಆದಾಗ್ಯೂ ನೀವು ತುಂಬಾ ಕಡಿಮೆ ಪತ್ರಗಳನ್ನು ಬರೆಯುತ್ತ ಇದ್ದರೆ ನಿಮಗೆ ಬರುವ ಪ್ರತ್ಯುತ್ತರಗಳೂ ಕಡಿಮೆಯೇ. ನೀವು ಜನಗಳನ್ನು ವಿರಳವಾಗಿ ಭೇಟಿ ಮಾಡುತ್ತಾ ಇದ್ದರೆ ನಿಮ್ಮನ್ನು ಭೇಟಿಮಾಡಲು ಬರುವ ಜನರೂ ಕಡಿಮೆಯೇ ಇರುತ್ತಾರೆ. ನೀವು ನಿಮ್ಮ ಸಾಮಾಜಿಕ ಬದುಕನ್ನು ಸಂಪೂರ್ಣವಾಗಿ ಕಡಿದುಕೊಳ್ಳಬೇಕು ಎಂದು ನಾನು ಬಯಸುವುದಿಲ್ಲ. ಆದರೆ ಅನಗತ್ಯವಾದದ್ದನ್ನು ಕಡಿದುಕೊಳ್ಳಿ. ಯಾವುದು ಅಗತ್ಯವಾದ್ದು ಎಂದು ನಿಮಗೆ ಗೊತ್ತು."

* * *

ಒಂದು ಗೊತ್ತಾದ ದಿನಚರಿಯನ್ನು ಅನುಸರಿಸುವ ಹಂತಕ್ಕೆ ಬರಲು ನನಗೆ ಸುಮಾರು ಒಂದು ತಿಂಗಳ ಸಮಯ ಹಿಡಿಯಿತು. ದಿನಚರಿಯನ್ನು ತಪ್ಪಿಸಿದ್ದಕ್ಕೆ ದಿನವೂ ನಾನು ಏನೇನೋ ನೆಪಗಳನ್ನು ಹೇಳುತ್ತಿದ್ದೆ. ಆದರೆ ನನ್ನ ಗುರುಗಳು ಮತ್ತು ಕಲಿಕೆಯಲ್ಲಿನ ನನ್ನ ಅಪೇಕ್ಷೆ ಎಲ್ಲವನ್ನೂ ಮತ್ತೆ ಕ್ರಮಬದ್ಧಗೊಳಿಸಿಕೊಳ್ಳಲು ಪ್ರೋತ್ಸಾಹಿಸುತ್ತಿದ್ದವು. ಬೆಳಗಿನ

ಜಾವ 4 ಗಂಟೆಗೇ ಏಳುವುದನ್ನು, ಮಧ್ಯಾಹ್ನ 12ಕ್ಕೆ ಮುಂಚೆ ಲಘು ಉಪಾಹಾರ ಸೇವಿಸುವುದನ್ನು, ಸಂಜೆಯ ಊಟವನ್ನು ಏಳು ಗಂಟೆಗೆ ಮುನ್ನ ಮುಗಿಸುವುದನ್ನು ಹಾಗೂ 9-30ಕ್ಕಿಂತ ಮುಂಚೆ ಮಲಗುವುದನ್ನು ಅಭ್ಯಾಸಮಾಡಿಕೊಂಡೆ. ಕ್ರಮೇಣ ನನ್ನ ಮನಸ್ಸನ್ನು ಶಾಂತಗೊಳಿಸಲು ಕೆಲವು ವಿಶಿಷ್ಟ ಆಸನಗಳನ್ನು ಕಲಿತೆ . ಅಲ್ಲದೆ ನಾಲ್ಕು ತಿಂಗಳು ಮುಗಿಯುವ ಹೊತ್ತಿಗೆ ವರ್ಷದ ಉಳಿದ ಅವಧಿಯಲ್ಲಿ ನಾನೇನು ಅಭ್ಯಾಸ ಮಾಡಬೇಕೆಂಬುದರ ಖಚಿತ ಆಲೋಚನೆ ನನಗೆ ಬಂದಿತು.

ಈ ಅಭ್ಯಾಸಗಳ ಜೊತೆಗೆ ನನ್ನ ಅನುಭವಗಳನ್ನು ವಿವರವಾಗಿ ದಾಖಲಿಸುವ ದಿನಚರಿಯನ್ನು ಇಡಬೇಕೆಂದು ನನ್ನ ಗುರುಗಳು ಹೇಳಿದರು. ಒಬ್ಬರ ಕನಸುಗಳಿಂದ ಹೆಚ್ಚಿನ ಒಳನೋಟಗಳನ್ನು ಪಡೆದುಕೊಳ್ಳಲು ಸಾಧ್ಯ ಎಂಬ ಕಾರಣಕ್ಕೆ ನನಗೆ ಬೀಳುವ ಕನಸುಗಳ ಬಗೆಗೂ ಒಂದು ದಿನಚರಿಯನ್ನು ಬರೆದಿಡುವಂತೆ ಅವರು ತಿಳಿಸಿದರು. ಪತಂಜಲಿಯ 'ಯೋಗಸೂತ್ರಗಳು' ಗ್ರಂಥ ಮತ್ತು ಅದರ ಮೇಲಿನ ವ್ಯಾಖ್ಯಾನಗಳನ್ನು ದಿನವೂ ಓದುತ್ತಿದ್ದೆ. ಕೆಲವೊಮ್ಮೆ ನಾನೇ ಸ್ವಂತವಾಗಿ ಓದಿಕೊಳ್ಳುತ್ತಿದ್ದೆ. ಇನ್ನು ಕೆಲವೊಮ್ಮೆ ಸಂಸ್ಕೃತದಲ್ಲಿ ಮತ್ತು ಯೋಗ ಪರಂಪರೆಯಲ್ಲಿ ವಿದ್ವಾಂಸರೆನಿಸಿದ್ದ ಸ್ನೇಹಿತರ ಸಹಾಯದಿಂದ ಓದುತ್ತಿದ್ದೆ. ಈ ಅವಧಿಯಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮಗಳಿಗಿರುವ ಸಂಬಂಧ ಕುರಿತ ಪುಸ್ತಕಗಳು, ವಿಜ್ಞಾನದ ವಿಧಾನಶಾಸ್ತ್ರ (scientific methodology) ಕುರಿತ ಪುಸ್ತಕಗಳು, ವಿಜ್ಞಾನದ ತಾತ್ವಿಕತೆಗೆ ಸಂಬಂಧಿಸಿದ ಪುಸ್ತಕಗಳು ಹಾಗೂ ನಾನು ಅಧ್ಯಯನ ಮಾಡುತ್ತಿದ್ದ ಆಶ್ರಮ ಪ್ರಕಟಿಸಿದ್ದ ಪುಸ್ತಕಗಳು ಇಂಥ ಹಲವಾರು ಪುಸ್ತಕಗಳನ್ನು ನಾನು ಓದಿದೆ. ದಿನವೂ ವಾಕಿಂಗ್ ಹೋಗುತ್ತಿದ್ದೆ ಮತ್ತು ವಾರಕ್ಕೆ ಒಂದು ಬಾರಿ ಅಥವಾ ಎರಡು ಬಾರಿ ಈಜಲು ಹೋಗುತ್ತಿದ್ದೆ. ಮೊದಲಿನಂತೆಯೇ ನನ್ನ ಕುಟುಂಬವನ್ನು ನೋಡಿಕೊಳ್ಳುವುದು ಹಾಗೂ ಮಾಮೂಲಿ ಗೃಹಕೃತ್ಯಗಳನ್ನು ಮಾಡುವುದನ್ನು ಮುಂದುವರಿಸಿದೆ. ಸರಾಸರಿಯಂತೆ ವಾರದಲ್ಲಿ ಮೂರು ಅರ್ಧ ದಿನದ ಅಧಿವೇಶನಗಳನ್ನು ರೋಗಿಗಳನ್ನು ನೋಡುವುದರಲ್ಲಿ, ವಿದ್ಯಾರ್ಥಿಗಳನ್ನು ಭೇಟಿಮಾಡುವುದರಲ್ಲಿ, ಮತ್ತು ಗ್ರಂಥಾಲಯಕ್ಕೆ ಭೇಟಿನೀಡುವುದರಲ್ಲಿ ನಿಮ್ಹಾನ್ಸ್ (NIMHANS) ನಲ್ಲಿ ಕಳೆಯುತ್ತಿದ್ದೆ. ಕ್ರಮೇಣ ನನ್ನ ಆಹಾರ ಸಸ್ಯಾಹಾರಕ್ಕೆ ತಿರುಗಿತು. ನನ್ನ ಮದ್ಯಪಾನ ಮತ್ತು ಧೂಮಪಾನ ತೀರಾ ಕಮ್ಮಿಯಾಯಿತು. (ಅದನ್ನು ನಾನು ಸಂಪೂರ್ಣವಾಗಿ ಬಿಟ್ಟುಬಿಡಲು ಆಗಲಿಲ್ಲ). ಹಾಗೆ ನೋಡಿದರೆ ನನ್ನ ಗುರುಗಳು ನಾನು ಪ್ರತ್ಯೇಕವಾಗಿ ಇಂಥದನ್ನೇ ಬಿಟ್ಟುಬಿಡಬೇಕೆಂದೇನೂ ಹೇಳಲಿಲ್ಲ. ನನ್ನ ಸಾಧನೆ ಮುಂದುವರಿದಂತೆ ಅನಪೇಕ್ಷಿತ ಚಟುವಟಿಕೆಗಳು ತಮಗೆ ತಾವೇ ಹೊರಟುಹೋಗುತ್ತವೆ ಎಂಬುದು ಅವರಿಗೆ ಮನವರಿಕೆಯಾಗಿತ್ತು. ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಏನನ್ನಾದರೂ ಮಾಡಬೇಕೆಂದು ಅವರು ಹೇಳಲಿಲ್ಲ. ಆದರೆ ನಿಧಾನವಾಗಿ ಮತ್ತು ನಿಶ್ಚಯಪೂರ್ವಕವಾಗಿ ನಾನು ಮಾಡಲೇ ಬೇಕೆಂದು ಬದ್ಧನಾಗಿದ್ದ ಕ್ರಿಯೆಯ ಕಡೆಗೆ ನನ್ನ ಮನಸ್ಸನ್ನು ನಾನು ತಿರುಗಿಸಬೇಕೆಂದು ಆಶಿಸಿದ್ದರು.

ನನ್ನ ಗುರುಗಳು ದಿನ ನಿತ್ಯದ ದಿನಚರಿಯನ್ನು ಮತ್ತು ಕನಸಿನ ದಿನಚರಿಯನ್ನು ವಾರಕ್ಕೊಮ್ಮೆ ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು (ಟಿಪ್ಪಣಿ) ಮಾರ್ಜಿನ್ನಿನ್ನಲ್ಲಿ ಬರೆಯುತ್ತಿದ್ದರು. ನಾನು ವಾರಕ್ಕೊಮ್ಮೆ ಅವರೊಂದಿಗೆ ಮಾತನಾಡುತ್ತ ಎರಡು ಗಂಟೆಗಳ ಹೊತ್ತು ಕಳೆಯುತ್ತಿದ್ದೆ. ನನ್ನ ಇತರೆ ಜವಾಬ್ದಾರಿಗಳ ಸಂಬಂಧದಲ್ಲಿ ದೆಹಲಿ ಮತ್ತು ಬೆಂಗಳೂರುಗಳಲ್ಲಿಯ ಸಭೆಗಳಲ್ಲಿ ಹಾಜರಿರಬೇಕಾಗಿ ಬರುತ್ತಿದ್ದುದರಿಂದ ನನ್ನ ವಾಡಿಕೆಯ ಕಾರ್ಯ ಕಲಾಪಕ್ಕೆ ಆಗೊಮ್ಮೆ ಈಗೊಮ್ಮೆ ಅಡಚಣೆ ಉಂಟಾಗುತ್ತಿತ್ತು. ನನ್ನ ಈ ಹೊಣೆಗಾರಿಕೆಗಳನ್ನು ನಿರ್ವಹಿಸಿಕೊಂಡು ಹೋಗುವಂತೆ ಗುರುಗಳು ಹೇಳಿದರು. ನನ್ನ ಬೆನ್ನುನೋವು(ಒಂದು ಅಪಘಾತದ ನಂತರ ಇಲ್ಲಿಗೆ ಬರುವುದಕ್ಕೆ ಹತ್ತು ವರ್ಷ ಮುಂಚೆಯೇ ಅದು ಪ್ರಾರಂಭವಾಗಿತ್ತು), ಮನಃಸ್ಥಿತಿ, ಮತ್ತು ನನಗಿದ್ದ ಅನುಮಾನಗಳಿಂದಾಗಿ ನನ್ನ ವಾಡಿಕೆಯ ಕಾರ್ಯ ಕಲಾಪದಲ್ಲಿ ಲೋಪಗಳಾಗುತ್ತಿದ್ದುವು.

* * *

ಮೂರು ತಿಂಗಳ ನಂತರ ನನ್ನ ದಿನ ನಿತ್ಯದ ವಾಡಿಕೆಯ ಕಲಾಪ:

4.00 ಬೆಳಿಗ್ಗೆ	ಏಳುವುದು, ನಿತ್ಯ ಕರ್ಮಗಳು, ಜಲನೇತಿಯ ಅಭ್ಯಾಸ
4.30.	ಕನಸಿನ ದಿನಚರಿ ಬರೆಯುವುದು
500.–6.00.	ಆಸನಗಳು/ಪ್ರಾಣಾಯಾಮ/ಧ್ಯಾನ
6.00–6.15.	ಉಪಾಹಾರ(ಸಾಮಾನ್ಯವಾಗಿ ಒಂದು ಕಪ್ ಹಾಲು)
6.15–8.00.	ಯೋಗಕ್ಕೆ ಸಂಬಂಧಿಸಿದ ಅಧ್ಯಯನ
8.00–9.00	ಕುಟುಂಬದೊಂದಿಗೆ ಕಳೆಯುವುದು
9.00–11.30	ಮನೋರೋಗ ಶಾಸ್ತ್ರಕ್ಕೆ ಸಂಬಂಧಿಸಿದ ಅಧ್ಯಯನ/ ಸಂಸ್ಥೆಗೆ ಭೇಟಿ
11.30–1.00	ಮಧ್ಯಾಹ್ನದ ಊಟ ಮತ್ತು ವಿಶ್ರಾಂತಿ
1.00–2.00	ಯೋಗನಿದ್ರಾ
2.00–4.00	ಮಧ್ಯಾಹ್ನದ ನಿದ್ರೆ ಮತ್ತು ಓದುವುದು
4.00–5.00	ಕುಟುಂಬದೊಂದಿಗೆ
5.00–6.00	ಆಸನಗಳು/ಪ್ರಾಣಾಯಾಮ/ ಧ್ಯಾನ
6.00–7.30	ರಾತ್ರಿ ಊಟ/ಕುಟುಂಬದೊಂದಿಗೆ
7.30–8.30	ದಿನನಿತ್ಯದ ದಿನಚರಿ
8.30–9.30	ಯೋಗನಿದ್ರೆ
9.30. ರಾತ್ರಿ	ನಿದ್ರೆ

ಪ್ರಾರಂಭದಲ್ಲಿ ನಾನು ಯೋಗಕ್ಕೆ ಸಂಬಂಧಿಸಿದ ಅಭ್ಯಾಸಗಳಲ್ಲಿ ಸುಮಾರು ಒಂದು ಗಂಟೆ ಕಳೆಯುತ್ತಿದ್ದೆ. ಕ್ರಮವಾಗಿ ಅದು ಎರಡು ಗಂಟೆಗಳ ವರೆಗೂ ಮುಂದುವರಿಯಿತು. ಅಂತಿಮವಾಗಿ ನಾನು ಅದಕ್ಕಾಗಿ ನಾಲ್ಕು ಗಂಟೆ ಮೀಸಲಿಡಲು ಸಾಧ್ಯವಾಯಿತು.

* * *

ನನ್ನ ಗುರುಗಳ ಸೂಚನೆಗಳನ್ನು ಅನುಸರಿಸುತ್ತ ಸ್ವಲ್ಪ ಕಾಲಾಂತರದಲ್ಲಿ ನಾನು ಯೋಗವನ್ನು ಕಲಿತೆ. ಇಲ್ಲಿ ಕೆಲವೊಂದು ಯೋಗಾಭ್ಯಾಸಗಳು, ಅವುಗಳನ್ನು ಮಾಡುವ ವಿಧಾನ, ನಾನು ಕಂಡುಕೊಂಡಂತೆ ನನ್ನ ಮಾನಸಿಕ ಸ್ಥಿತಿಯ ಮೇಲೆ ಅವುಗಳು ಬೀರಿದ ಪರಿಣಾಮ – ಇವುಗಳನ್ನು ಸಂಕ್ಷಿಪ್ತವಾಗಿ ತಿಳಿಸಿದ್ದೇನೆ.

ಯೋಗನಿದ್ರಾ

ನಾನು ಅಧ್ಯಯನ ಮಾಡುತ್ತಿದ್ದ ಆಶ್ರಮದಲ್ಲಿ ವಿಶಿಷ್ಟ ರೀತಿಯಲ್ಲಿ ಇದನ್ನು ಕಲಿಸಲಾಗುತ್ತದೆ. ಇದೊಂದು ಇಂದ್ರಿಯಗಳನ್ನು ನಿಗ್ರಹಿಸಿ ಸ್ವಾಧೀನದಲ್ಲಿಟ್ಟುಕೊಳ್ಳುವ ತಂತ್ರ. ಇದಕ್ಕೆ ಸಂಸ್ಕೃತದಲ್ಲಿ ಪ್ರತ್ಯಾಹಾರ ಎಂದು ಹೆಸರು. ಮೂಲತಃ ಇದನ್ನು ತಂತ್ರಶಾಸ್ತ್ರಗಳಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ಈ ಕಾಲದ ಅಭ್ಯಾಸಿಗಳ ಸಲುವಾಗಿ ಸ್ವಾಮಿ ಸತ್ಯಾನಂದರು ಇದನ್ನು ಸರಳೀಕರಿಸಿದ್ದಾರೆ. ಹಾಗೂ Bihar School of Yoga ಸಂಸ್ಥೆಯವರು ಪ್ರಕಟಿಸಿರುವ ಅವರ ಪುಸ್ತಕ 'ಯೋಗನಿದ್ರಾ' ದಲ್ಲಿ ಇದನ್ನು ವಿವರವಾಗಿ ತಿಳಿಸಿದ್ದಾರೆ. ಅಭ್ಯಾಸಿಯು ಅಂಗಾತನಾಗಿ ಮಲಗಿಕೊಂಡು ಸಹಜವಾಗಿ ಉಸಿರಾಡುತ್ತಿರುವ ಸ್ಥಿತಿಯಲ್ಲಿರುತ್ತಾನೆ. ತನ್ನ ಶರೀರದ ಮಾಂಸ ಖಂಡಗಳನ್ನು ಸಡಿಲಗೊಳಿಸಿಕೊಂಡು ಆರಾಮವಾಗುವ ಸಲುವಾಗಿ ಗುರು ಅಥವಾ ತರಬೇತಿದಾರರು ನೀಡುವ ಸೂಚನೆಗಳಿಗೆ ತಕ್ಕಂತೆ ಮೊದಲಿಗೆ ತನ್ನ ಶರೀರದ ಒಂದೊಂದೂ ಅಂಗಗಳ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸುತ್ತ ಅನಂತರ ಉಸಿರಾಟದ ಮೇಲೆ ನಿಗಾ ಇಡುತ್ತ ಹೋಗುತ್ತಾನೆ. ವಿಶ್ರಾಂತ ಸ್ಥಿತಿಯಲ್ಲಿ ಅವನು ಮನಸ್ಸಿನಲ್ಲಿ ನಿರ್ಧಾರವೊಂದನ್ನು ತೆಗೆದುಕೊಳ್ಳುತ್ತಾನೆ. ತನ್ನ ಗಮನವನ್ನು ಕೇಂದ್ರೀಕರಿಸುವ ಹಂತದಲ್ಲಿ ಆ ನಿರ್ಧಾರವನ್ನು ಮನಸ್ಸಿನಲ್ಲಿಯೇ ಮತ್ತೆ ಹೇಳಿಕೊಳ್ಳುತ್ತಾನೆ. ಕೊನೆಯಲ್ಲಿ ಅಭ್ಯಾಸಿಯು ತನ್ನ ಮನಸ್ಸಿನಲ್ಲಿ ನಾನಾ ಚಿತ್ರಗಳನ್ನು ಮೂಡಿಸಿಕೊಳ್ಳುತ್ತ ಹೋಗುತ್ತಾನೆ. ಅನಂತರ ತನ್ನ ಮನಸ್ಸು ಶರೀರದ ಬೇರೆಬೇರೆ ಅಂಗಗಳ ಮೇಲೆ ಗಮನವನ್ನು ಹರಿಸುವಂತೆ ಮಾಡುತ್ತಾನೆ. ಶರೀರವನ್ನು ಇಡಿಯಾಗಿ ಚಾಚುತ್ತಾನೆ. ಆಮೇಲೆ ಎದ್ದು ಕುಳಿತುಕೊಳ್ಳುತ್ತಾನೆ. ಕಣ್ಣುಗಳು ಮುಚ್ಚಿಯೇ ಇರುತ್ತವೆ. ಮೂರು ಬಾರಿ 'ಓಂ' ಎಂದು ಉಚ್ಚರಿಸುತ್ತಾನೆ. ಅನಂತರ ಕಣ್ಣುಗಳನ್ನು ತೆರೆಯುತ್ತಾನೆ.

ಪ್ರಾರಂಭದಲ್ಲಿ ನನಗೆ ಇದನ್ನು ಇತರ ಅಭ್ಯಾಸಿಗಳ ಜೊತೆ ಗುಂಪಿನಲ್ಲಿ ಹೇಳಿಕೊಡಲಾಯಿತು. ಆಮೇಲೆ ಇದರ ಧ್ವನಿಮುದ್ರಿಕೆಯೊಂದನ್ನು ನನಗೆ ನೀಡಿದರು. ನಾನು ಅಂಗಾತನಾಗಿ ಮಲಗಿದ ಸ್ಥಿತಿಯಲ್ಲಿ ಇರುವಾಗ ಸೂಚನೆಗಳನ್ನು ಗಟ್ಟಿಯಾಗಿ

ಕೇಳಿಸಲಾಯಿತು. ಅದರ ಪರಿಣಾಮವಾಗಿ ಸೂಚನೆಗಳನ್ನೆಲ್ಲ ನಾನು ನೆನಪಿನಲ್ಲಿಟ್ಟುಕೊಂಡು ನನ್ನಷ್ಟಕ್ಕೆ ನಾನೇ ಸ್ವತಂತ್ರವಾಗಿ ಇಡೀ ಅಭ್ಯಾಸವನ್ನು ಮುಂದುವರಿಸಿದೆ.

ಯೋಗನಿದ್ರೆಯ ಅವಧಿಯಲ್ಲಿ ತೆಗೆದುಕೊಂಡ ನಿರ್ಧಾರವು ವ್ಯಕ್ತಿಯ ಆಳ ಪ್ರಜ್ಞೆಯನ್ನು ಪ್ರಭಾವಿಸುವುದರಿಂದಾಗಿ ಆ ನಿರ್ಧಾರವನ್ನು ಕಾರ್ಯಗತಗೊಳಿಸುವ ಸಾಧ್ಯತೆ ಹೆಚ್ಚು. ನಿರ್ಧಾರವು ಸ್ಪಷ್ಟವೂ ಸರಳವೂ ಆಗಿರಬೇಕು. ನಾನು ತೆಗೆದುಕೊಂಡದ್ದು ಒಂದೇ ಒಂದು ನಿರ್ಧಾರ. ಮತ್ತು ನನ್ನ ಪ್ರಯೋಗದ ಅವಧಿಯ ಉದ್ದಕ್ಕೂ ಅದಕ್ಕೆ ಬದ್ಧನಾಗಿರಲು ಪ್ರಯತ್ನಿಸಿದೆ. ಆ ನಿರ್ಧಾರವೆಂದರೆ– "ನನ್ನ ಗುರು ತಿಳಿಸಿಕೊಟ್ಟ ರೀತಿಯಲ್ಲೇ ನಾನು ನನ್ನ ಸಾಧನೆಯನ್ನು ಮುಂದುವರಿಸತಕ್ಕದ್ದು".

ಯೋಗನಿದ್ರೆಯಲ್ಲಿನ ಪ್ರಾರಂಭಿಕ ಹೆಜ್ಜೆಗಳಾದ– ಮಾಂಸಖಂಡಗಳನ್ನು ಬಿಗಿಗೊಳಿಸುವ ಮತ್ತು ಸಡಿಲಗೊಳಿಸುವ ತಂತ್ರವು ಆಧುನಿಕ ವರ್ತನ ಮನಶ್ಶಾಸ್ತ್ರಜ್ಞರು (=behaviourial Psychologists) ಅನುಸರಿಸುವ ವಿಶ್ರಾಂತಿ (ಸಡಿಲಗೊಳಿಸುವ) ತಂತ್ರಗಳಿಗೆ ಸಮನಾಗಿದೆ. ದೇಹದ ವಿವಿಧ ಭಾಗಗಳಿಗೆ ಮತ್ತೆ ಮತ್ತೆ ಗಮನವನ್ನು ಹರಿಸುವುದರಿಂದ ಮನಸ್ಸಿಗೆ ಉಸಿರಾಟವನ್ನು ಗಮನಿಸುವುದು ಹೆಚ್ಚು ಸುಗಮವಾಗುತ್ತದೆ. ಇಂದ್ರಿಯ ವರ್ಗಕ್ಕೆ ಉದ್ದೇಶಪೂರ್ವಕವಾಗಿ ಗಮನವನ್ನು ಹರಿಸುವ ಪ್ರಕ್ರಿಯೆಯು ಇಂದ್ರಿಯ ನಿಗ್ರಹವನ್ನು ಪರಿಣಾಮಕಾರಿಯಾಗಿ ಸಾಧಿಸಲು ನೆರವಾಗುತ್ತದೆ. ಇದು ಉಷ್ಣದ ಮತ್ತು ಶೀತದ ಮತ್ತು ಅಂತಿಮವಾಗಿ ಮೂರ್ತಿಗಳ ಬಗೆಗಿನ (ಪ್ರತಿಮಾ ವಿನ್ಯಾಸ?) ಸಂವೇದನೆಯ ನಿಗ್ರಹದತ್ತ ಕೊಂಡೊಯ್ಯುತ್ತದೆ. ಅದರ ಫಲಿತಾಂಶ ಎಚ್ಚರದ ಶಾಂತ, ಆಲೋಚನೆಗಳಿಂದ ಮುಕ್ತ, ಪ್ರತಿಮಾಮುಕ್ತ ಅರಿವು ಉಂಟಾಗುವುದು. ಇದು ನಿದ್ರೆಯಲ್ಲ. ಹೇಳಬೇಕೆಂದರೆ ಎಂದಿಗಿಂತ ಹೆಚ್ಚು ಎಚ್ಚರದಿಂದಿರುತ್ತಾನೆ. ಇದು ಪ್ರಜ್ಞೆಯನ್ನು ಸಂಕುಚಿತಗೊಳಿಸುತ್ತ ಹೋಗುವ ಸಂಮೋಹನದ ವಶ್ಯಸುಪ್ತಿ ಕೂಡ ಅಲ್ಲ. ಇಲ್ಲಿ ವಿಸ್ತಾರವಾದ ಕ್ಷೇತ್ರದ ಮೇಲೆ ಪ್ರಜ್ಞೆಯು ವಿಸ್ತಾರಗೊಳ್ಳುತ್ತ ಹೋಗುತ್ತದೆ.

ಮನಸ್ಸಿನ ಒಂದು ಆಯಾಸಗೊಳಿಸುವ ಚಟುವಟಿಕೆಯೆಂದರೆ ಆಂತರಿಕ ಸಂವಾದ. ಅನೇಕರಿಗೆ ಇದರ ಅನುಭವವಾಗುತ್ತದೆ. ಸುಮಾರು ನಲವತ್ತೈದು ನಿಮಿಷಗಳ ಕಾಲಾವಧಿಯವರೆಗೆ ಸಾಗುವ ಯೋಗನಿದ್ರೆಯ ಪ್ರಕ್ರಿಯೆಯು ಈ ಆಂತರಿಕ ಸಂವಾದಕ್ಕೆ ಒಂದು ನಿಮಿಷವೂ ಉಳಿದಿರುವುದಿಲ್ಲವೆಂಬುದನ್ನು ಖಚಿತಪಡಿಸುತ್ತದೆ. ನಲವತ್ತೈದು ನಿಮಿಷಗಳ ಈ ಶಬ್ದರಹಿತ ಎಚ್ಚರವೆಂಬುದು (ಮಾತಿಲ್ಲದ ಅರಿವು) ಆನಂದಕರವೂ, ಶಾಂತವೂ ಉಲ್ಲಾಸಕರವೂ ಹಗುರಾಗಿಸುವಂಥದೂ ಆದ ಅನುಭವ. ಒಂದು ಗಂಟೆಯ ಅವಧಿಯ ಯೋಗನಿದ್ರೆಯು ನಾಲ್ಕು ಗಂಟೆಗಳ ನಿದ್ರೆಗೆ ಸಮ ಎಂದು ಹೇಳಲಾಗುತ್ತದೆ. ತರಬೇತಿಯ ಅವಧಿಯಲ್ಲಿ ನನ್ನ ನಿದ್ರೆಯ ಅಗತ್ಯವು ಒಂದು ರಾತ್ರಿಗೆ ಎಂಟು ಗಂಟೆಗಳಿಂದ ಸುಮಾರು ಆರು ಗಂಟೆಗಳಿಗೆ ಇಳಿಯಿತು.

ಯೋಗನಿದ್ರೆಯ ಅನಂತರದ ಪರಿಣಾಮಗಳು ಕೂಡ ಪರಿಗಣನೆಗೆ ಅರ್ಹವಾದವು. ಶಬ್ದರಹಿತ ಎಚ್ಚರದ ಸ್ಥಿತಿಯು ಆ ಅಭ್ಯಾಸದ ಪ್ರಕ್ರಿಯೆಯು ಮುಗಿದ ಸಾಕಷ್ಟು ಸಮಯದವರೆಗೂ ಮುಂದುವರಿಯುತ್ತದೆ. ವ್ಯಕ್ತಿ ಹೆಚ್ಚು ಗಮನಕೊಟ್ಟು ಕೇಳುತ್ತಾನೆ ಮತ್ತು ಅವನ ಗ್ರಹಣ ಶಕ್ತಿ ಕೂಡ ಹೆಚ್ಚಾಗುತ್ತದೆ. ನಿದರ್ಶನಕ್ಕೆ ನಾನು ವಾಕಿಂಗ್ ಹೋಗುವಾಗ ಕಟ್ಟಡಗಳು, ಮರಗಳು ಮತ್ತು ಜನರ ಮುಂದಿನಿಂದ ಸಾಗುತ್ತಿರುವಾಗ ಅವುಗಳ ಬಗ್ಗೆ ನನಗೆ ಆಂಶಿಕವಾಗಿ ಮಾತ್ರ ಅರಿವಿರುತ್ತದೆ. ನನ್ನ ಬಹಳಷ್ಟು ಗಮನ ನನ್ನ ಆಲೋಚನೆಗಳು, ನನ್ನೊಂದಿಗೇ ನಾನು ನಡೆಸುತ್ತಿರುವ ಆಂತರಿಕ ಸಂವಾದಗಳು ಇವುಗಳತ್ತ ತಿರುಗಿರುತ್ತದೆ. ಯೋಗನಿದ್ರೆಯ ಅವಧಿಯ ನಂತರ ವಾಕಿಂಗ್ ಹೋಗುವಾಗಿನ ಅನುಭವ ಬೇರೆ ರೀತಿಯದು. ಆಗ ವ್ಯಕ್ತಿಯು ತನ್ನ ಸುತ್ತಣ ಪರಿಸರವನ್ನು ತೀವ್ರ ಗಮನವಿಟ್ಟು ನೋಡುತ್ತಾನೆ, ಯಾವುದೊಂದರ ಬಗೆಗೂ ತೀರ್ಮಾನ ನೀಡುವುದು ಕಡಿಮೆ, ಮತ್ತು ಮನಸ್ಸಿನಲ್ಲಿ ಅವುಗಳ ಬಗ್ಗೆ ಯಾವುದೇ ಬಗೆಯ ಟೀಕಾ ಟಿಪ್ಪಣಿ ಮಾಡುವುದು ಇರುವುದಿಲ್ಲ. ಬೇರೊಬ್ಬರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಹಾಗೂ ಅವರು ಏನಾದರೂ ಹೇಳಿದಾಗ ಇದೇ ರೀತಿ ಅನ್ವಯಿಸುತ್ತದೆ. ಹೆಚ್ಚು ನೋಡುವ ಮತ್ತು ಆಲಿಸುವ ಸಾಮರ್ಥ್ಯ ಬರುತ್ತದೆ. ಪ್ರಜ್ಞೆಯ ವಿಸ್ತಾರದ ಬಗೆಗೆ ಅನುಭಾವಿಗಳು ಹೇಳಿದಾಗ ಅವರ ಮಾತಿನ ಅರ್ಥ ಏನೆಂದು ಈಗ ನನಗೆ ಅರಿವಾಗಿದೆ. ಆಂತರಿಕ ಸಂವಾದ, ಗಮನಿಸಿದ ವಸ್ತು–ಸಂಗತಿಗಳ ಬಗೆಗಿನ ವ್ಯಾಖ್ಯಾನ ಹಾಗೂ ತೀರ್ಮಾನಗಳು ಅತ್ಯಂತ ಕನಿಷ್ಠವಿರುವಂಥ ಮತ್ತು ಅದರ ಫಲವಾಗಿ ಇಂದ್ರಿಯಗಳ ಸೂಚನೆಗಳತ್ತ ಚೆನ್ನಾಗಿ ಗಮನ ನೀಡಲು ಸಾಧ್ಯವಾಗುವಂಥ ಒಂದು ಸ್ಥಿತಿ ಎಂದು ನಾನು ಇದನ್ನು ವಿವರಿಸುತ್ತೇನೆ. ಮಿದುಳು ತನ್ನದೇ ನೆನಪಿನ ಭಂಡಾರದಿಂದ ಹೊರಹೊಮ್ಮಿದ ಮಾಹಿತಿಗಳನ್ನಷ್ಟೇ ಸ್ವೀಕರಿಸಿ ನಿರ್ವಹಿಸುವ ಬದಲು ಬಾಹ್ಯ ಜಗತ್ತಿನಿಂದ ಹೊಚ್ಚ ಹೊಸ ಮಾಹಿತಿಗಳನ್ನು ಸ್ವೀಕರಿಸಿ ಅವುಗಳನ್ನು ನಿರ್ವಹಿಸುತ್ತದೆ.

ಜಲನೇತಿ

ಜಲನೇತಿಯ ಅಭ್ಯಾಸದಲ್ಲಿ ಮೂಗಿನ ಹೊಳ್ಳೆಗಳ ಮೂಲಕ ನೀರನ್ನು ಹಾಯಿಸಿ ಅದನ್ನು ಶುದ್ಧೀಕರಿಸಲಾಗುತ್ತದೆ. ಈ ವಿಧಾನದಿಂದ ಕುಂಡಲಿನಿಯನ್ನು ಅಥವಾ ಸರ್ಪ ಶಕ್ತಿಯನ್ನು ಜಾಗ್ರತಗೊಳಿಸಲು ಸಾಧ್ಯವೆಂದು ತಿಳಿಯಲಾಗಿದೆ.

ಜಲನೇತಿಯನ್ನು ಮಾಡುವುದಕ್ಕಾಗಿಯೇ ಒಂದು ವಿಶೇಷ ಪಾತ್ರೆ ಇರುತ್ತದೆ. ನೀರು ಹರಿದು ಹೊರಬರಲು ಸಾಧ್ಯವಾಗುವಂತೆ ಕಾಫಿ ಕೆಟಲ್‌ಗೆ ಅಳವಡಿಸಿರುವ ಹಾಗೆ ಒಂದು ಕೊಳವೆಯನ್ನು ಜೋಡಿಸಿರುತ್ತಾರೆ. ಇದರಲ್ಲಿ ಉಗುರುಬೆಚ್ಚಗಿನ ನೀರು ತುಂಬಿ ಅರ್ಧ ಚಮಚೆ ಉಪ್ಪನ್ನು ಮಿಶ್ರ ಮಾಡಲಾಗುತ್ತದೆ. ಈ ಅಭ್ಯಾಸದಲ್ಲಿ ವ್ಯಕ್ತಿ ತಲೆಯನ್ನು ಒಂದು ಪಕ್ಕಕ್ಕೆ ಬಾಗಿಸಿ ಒಂದು ಮೂಗಿನ ಹೊಳ್ಳೆಗೆ ನೀರನ್ನು ಬಿಟ್ಟುಕೊಳ್ಳುತ್ತಾನೆ. ಇದರಲ್ಲಿ ಕುತ್ತಿಗೆಯ ಮಾಂಸಖಂಡಗಳನ್ನು ಚಲಿಸದೆ ಪಕ್ಕಕ್ಕೆ ಹೊರಳಿಸುವಲ್ಲಿ ಎಚ್ಚರಿಕೆ ವಹಿಸಿದರೆ ನೀರು ತನಗೆ ತಾನೆ ಸಲೀಸಾಗಿ ಇನ್ನೊಂದು ಹೊಳ್ಳೆಯಿಂದ ಹೊರಬರುತ್ತದೆ.

ಅನಂತರ ತಲೆಯನ್ನು ಇನ್ನೊಂದು ಪಕ್ಕಕ್ಕೆ ಬಾಗಿಸಿ ಮೂಗಿನ ಇನ್ನೊಂದು ಹೊಳ್ಳೆಯಲ್ಲಿ ನೀರನ್ನು ಬಿಟ್ಟುಕೊಂಡು ಇದೇ ಕ್ರಿಯೆಯನ್ನು ಪುನರಾವರ್ತಿಸಲಾಗುತ್ತದೆ. ಎರಡೂ ಮೂಗಿನ ಹೊಳ್ಳೆಗಳ ಮೂಲಕ ನೀರನ್ನು ಬಿಟ್ಟುಕೊಂಡಾದ ಮೇಲೆ ನೀರಿನ ಹನಿಗಳು ತುಂಬಿರುವ ನಾಸಾ ದ್ವಾರವನ್ನು ಸ್ವಚ್ಛಗೊಳಿಸಬೇಕು. ಅದಕ್ಕಾಗಿ ಕಾಲುಗಳನ್ನು ಅಗಲಿಸಿಕೊಂಡು ಸೊಂಟವನ್ನು ಬಾಗಿಸಿ ಒಂದು ಮೂಗಿನ ಹೊಳ್ಳೆಯನ್ನು ಮೊದಲು ಹೆಬ್ಬೆರಳಿನಿಂದ ಮುಚ್ಚಿಕೊಂಡು ಇನ್ನೊಂದು ಮೂಗಿನ ಹೊಳ್ಳೆಯಿಂದ ಸೀನುತ್ತಾ ಬಲವಾಗಿ ಗಾಳಿಯನ್ನು ಹೊರಗೆ ತಳ್ಳಬೇಕು. ಇದನ್ನು ಮೂವತ್ತು ಸಲ ಮಾಡಬೇಕು. ಇದೇ ಕ್ರಿಯೆಯನ್ನು ಬೇರೊಂದು ಮೂಗಿನ ಹೊಳ್ಳೆಯಿಂದ ಮಾಡಬೇಕು. ಅನಂತರ ಅಷ್ಟೇ ಸಲ ಎರಡೂ ಹೊಳ್ಳೆಗಳಿಂದ ಒಟ್ಟಿಗೇ ಮಾಡಬೇಕು. ಇನ್ನೂ ಏನಾದರೂ ನೀರು ಉಳಿದಿದ್ದಲ್ಲಿ ತಲೆಯನ್ನು ಕೆಳಕ್ಕೆ ಬಾಗಿಸಬೇಕು. (ಹೀಗೆ ಮಾಡದಿದ್ದಲ್ಲಿ ನೀರು ಅಸ್ಥಿ ರಂಧ್ರ ಅಥವಾ ಸೈನಸ್‌ಗೆ ನುಗ್ಗಿಬಿಡಬಹುದು). ಈ ಕ್ರಿಯೆಯನ್ನು ಸ್ವಾಮಿ ಸತ್ಯಾನಂದರ "ಆಸನ, ಪ್ರಾಣಾಯಾಮ, ಮುದ್ರಾ ಮತ್ತು ಬಂಧ" ಎಂಬ ಶೀರ್ಷಿಕೆಯ ಪುಸ್ತಕದಲ್ಲಿ ಅತ್ಯಂತ ವಿವರವಾಗಿ ನಿರೂಪಿಸಲಾಗಿದೆ.

ನನ್ನ ಅನುಭವದಲ್ಲಿ ಹೇಳಬೇಕೆಂದರೆ ಈ ಕ್ರಿಯೆ ಖಂಡಿತವಾಗಿಯೂ ಗಾಳಿ ಸಂಚರಿಸುವ ಮಾರ್ಗವಾದ ನಾಸಾ ದ್ವಾರವನ್ನು ಸ್ವಚ್ಛಗೊಳಿಸುತ್ತದೆ. ಗಾಳಿ ಸಲೀಸಾಗಿ ಸಂಚರಿಸುವುದರಿಂದ ಒಂದು ಚೈತನ್ಯದಾಯಕ ಅನುಭವವಾಗುತ್ತದೆ. ಜಲನೇತಿ ಮಾಡಿದ ನಂತರ ಪ್ರಾಣಾಯಾಮದ ಅಭ್ಯಾಸ ಮಾಡುವುದು ಹೆಚ್ಚು ಸುಲಭವಾಗುತ್ತದೆ. ಜೊತೆಗೆ ವ್ಯಕ್ತಿಗೆ ಹೆಚ್ಚು ಚುರುಕುತನದ ಅನುಭವವುಂಟಾಗುತ್ತದೆ.

ನನ್ನ ಒಂದು ವರ್ಷದ ತರಬೇತಿಯ ಅವಧಿಯಲ್ಲಿ ಕುಂಡಲಿನಿ ಜಾಗೃತವಾಯಿತೆಂದು ಹೇಳುವಂಥ ಯಾವ ಅನುಭವವೂ ನನಗಾಗಲಿಲ್ಲ.

ಪ್ರಾಣ, ಪ್ರಾಣ ಕೇಂದ್ರಗಳು ಮತ್ತು ಕುಂಡಲಿನಿ

ಯೋಗಾಭ್ಯಾಸಗಳನ್ನು ವಿವರಿಸುವ ಸಂದರ್ಭದಲ್ಲಿ ಈ ಮೂರೂ ಶಬ್ದಗಳು ಮತ್ತೆ ಮತ್ತೆ ಬರುತ್ತವೆ. ಇವುಗಳ ವಿವರಗಳು ಯೋಗಾಸನಗಳನ್ನು ವಿವರಿಸುವ ಸ್ವಾಮಿ ಸತ್ಯಾನಂದರ 'ಪ್ರಾಣವಿದ್ಯಾ'ದಂಥ ಪುಸ್ತಕಗಳಲ್ಲಿ ದೊರೆಯುತ್ತವೆ. ಈ ಪುಸ್ತಕದ ಮುಂದಿನ ಭಾಗಗಳಲ್ಲಿ ಬರುವ ಚರ್ಚೆಯನ್ನು ಅರ್ಥಮಾಡಿಕೊಳ್ಳಲು ಓದುಗರಿಗೆ ನೆರವಾಗಲೆಂಬ ಉದ್ದೇಶದಿಂದ ಇವುಗಳನ್ನು ಕುರಿತಂತೆ ಸಂಕ್ಷೇಪವಾಗಿ ಇಲ್ಲಿ ವಿವರಿಸಲಾಗಿದೆ.

'ಪ್ರಾಣ' ಎಂಬುದು ಪ್ರಕೃತಿಯೊಂದಿಗೆ ಒಡಗೂಡಿರುವ ವಿಶ್ವ ಶಕ್ತಿ. ಈ ಮೊದಲು 'ಪದಾರ್ಥ'ದ ರೂಪದಲ್ಲಿ ಅದನ್ನು ವಿವರಿಸಲಾಗಿದೆ. ಅದು ಎಲ್ಲ ಜೀವರೂಪಗಳಲ್ಲಿ ಮಾತ್ರವಲ್ಲ, ನಿರ್ಜೀವ ಪದಾರ್ಥಗಳೊಳಗೂ ವ್ಯಾಪಿಸಿದೆ. ಅದು ತಿಳಿದಿರುವ ಎಲ್ಲ ಶಕ್ತಿರೂಪಗಳ ಮೂಲ ಆಕರ.

ಮಾನವ ಶರೀರದಲ್ಲಿ ಪ್ರಾಣವು 'ನಾಡಿ'ಗಳೆಂದು ಕರೆಯಲ್ಪಡುವ ಮನೋಮಾರ್ಗಗಳಲ್ಲಿ ಪ್ರವಹಿಸುತ್ತದೆ. 'ನಾಡಿ' ಎಂಬ ಶಬ್ದದ ಅರ್ಥವೇ ಹರಿಯುವುದು (ನಲಿಕೆ). ಪರಂಪರೆಯ ಪ್ರಕಾರ ಮಾನವ ಶರೀರದಲ್ಲಿ ಸಾವಿರಾರು ನಾಡಿಗಳಿವೆ. ಆದರೆ ಅವುಗಳಲ್ಲಿ ಮೂರು ವಿಶೇಷ ಮಹತ್ವದವು. ಅದರಲ್ಲೂ ಬೆನ್ನುಮೂಳೆಯ ಗುಂಟ ಪ್ರವಹಿಸುವ 'ಸುಷುಮ್ನಾ' ನಾಡಿಯ ಬಗ್ಗೆ ಹೆಚ್ಚು ಪ್ರಸ್ತಾಪಿಸಲಾಗುತ್ತದೆ. ಇದು ಸಾಗುವ ಮಾರ್ಗದಲ್ಲಿ ಎಂಟು ಚಕ್ರಗಳು ಅಥವಾ ಬಿಂದುಗಳು ಎದುರಾಗುತ್ತವೆ. ಇವು ಪ್ರಾಣದ ಹರಿವನ್ನು ಚೈತನ್ಯಯುತವನ್ನಾಗಿ ಮಾಡುವ ಉದ್ದೀಪಕ ಬಿಂದುಗಳು. ನಾಡಿಗಳ ಮೂಲಕ ಪ್ರವಹಿಸುವ ಪ್ರಾಣದ ಹರಿವನ್ನು ಸರಿಪಡಿಸಿ ವ್ಯಕ್ತಿಯು ಕುಂಡಲಿನಿಯನ್ನು ಜಾಗ್ರತಗೊಳಿಸಬಹುದು. ಬೆನ್ನು ಮೂಳೆಯ ತಳದಲ್ಲಿ ಇರುವ ಮೂಲಾಧಾರ ಚಕ್ರದಿಂದ ಇದು ಪ್ರಾರಂಭವಾಗುತ್ತದೆ. ವಿಭಿನ್ನ ಕೇಂದ್ರಗಳನ್ನು ಉದ್ದೀಪನಗೊಳಿಸುವ ಅಭ್ಯಾಸಗಳಿಂದ ಕುಂಡಲಿನಿ ಶಕ್ತಿಯು ಮೇಲಕ್ಕೆ ಚಲಿಸುತ್ತದೆ(ಊರ್ಧ್ವಗಾಮಿಯಾಗುತ್ತದೆ). ಹಾಗೆ ಅದು ಮೇಲು ಮೇಲಕ್ಕೇರಿದಂತೆಲ್ಲ ವ್ಯಕ್ತಿಗೆ ನಾನಾ ರೀತಿಯ ಶಾರೀರಿಕ ಮತ್ತು ಮಾನಸಿಕ ಸಂವೇದನೆಗಳ ಅನುಭವವಾಗುತ್ತದೆ. ಜೊತೆಗೆ ಆತನು ವಿಶಿಷ್ಟ ಶಕ್ತಿಗಳನ್ನೂ ಗಳಿಸುತ್ತಾನೆ. ಕುಂಡಲಿನಿಯು ಶಿರಸ್ಸಿನ ಉಚ್ಚ ಭಾಗ ಅಂದರೆ ಸಹಸ್ರಾರವನ್ನು ತಲುಪಿದಾಗ ವ್ಯಕ್ತಿಯು ಪೂರ್ಣ ಪ್ರಜ್ಞೆಯ(=ಪೂರ್ಣ ಅರಿವಿನ) ಸ್ಥಿತಿಯನ್ನು ಪಡೆದುಕೊಳ್ಳುತ್ತಾನೆ.

ಕುಂಡಲಿನಿ ಯೋಗವೂ ಸೇರಿದಂತೆ ಯೋಗದ ಎಲ್ಲ ಪ್ರಕಾರಗಳೂ ಸಾಂಖ್ಯ ಶಾಸ್ತ್ರಗಳ ಸೈದ್ಧಾಂತಿಕ ಚೌಕಟ್ಟನ್ನೇ ಬಳಸಿಕೊಂಡು ಪ್ರಜ್ಞೆಯ (ಅರಿವಿನ) ಮೂಲಕ ಮೋಕ್ಷದತ್ತ ಮುನ್ನಡೆಯುತ್ತವೆಂಬುದನ್ನು ನೆನಪಿನಲ್ಲಿಡಬೇಕು.

ಆಸನಗಳು

ಶಾರೀರಿಕ ಭಂಗಿಗಳೇ ಆಸನಗಳು. ಬೇರೆ ಬೇರೆ ಭಂಗಿಗಳ ಸ್ಥಿತಿಯನ್ನು ಸಾಧಿಸಲು ಶರೀರದ ಮಾಂಸಖಂಡಗಳನ್ನು ನಾನಾ ರೀತಿಯ ಕಸರತ್ತಿಗೆ ಒಳಪಡಿಸಲಾಗುತ್ತದೆ. ಪತಂಜಲಿ ಮಹರ್ಷಿಯ ಸೂಚನೆಯೆಂದರೆ ಸ್ಥಿರವೂ ಸುಖಕರವೂ ಆದ ಆಸನವನ್ನು ಆಯ್ಕೆಮಾಡಿಕೊಳ್ಳಬೇಕೆಂಬುದು.(ಸ್ಥಿರಂ ಸುಖಂ ಆಸನಂ). ಹಠಯೋಗ ಸಾಧಕರು ಬೇರೆ ರೀತಿಯ ಆಸನಗಳನ್ನು ಅಭ್ಯಾಸ ಮಾಡುತ್ತಾರೆ. ಅಲ್ಲದೆ ಸಾಧಕನು ಪ್ರಜ್ಞೆಯ ಉನ್ನತ ನೆಲೆಯಾದ ಕೈವಲ್ಯದ ಹಂತವನ್ನು ತಲುಪಲು ಈ ಸಾಧನೆಗಳು ಪರ್ಯಾಪ್ತವೆಂದು ಅವರು ಪ್ರತಿಪಾದಿಸುತ್ತಾರೆ. ಆಸನಗಳು ದೈಹಿಕ ವ್ಯಾಯಾಮಗಳೂ ಆಗಿರುವುದರಿಂದ ಮಾಂಸಖಂಡಗಳನ್ನು ಬಲಪಡಿಸುತ್ತವೆ. ಯೋಗಿಯ ಮಾಂಸಖಂಡಗಳು ನಮ್ಯವಾಗಿದ್ದು (ಬಾಗುವ ಗುಣದಿಂದ ಕೂಡಿದ್ದು) ಶಕ್ತಿಯುತವಾಗಿರುತ್ತವೆ. ಆದರೆ ಮಾಂಸಖಂಡಗಳನ್ನು ವರ್ಧಿಸುವ ಆಧುನಿಕ ವ್ಯಾಯಾಮಗಳಲ್ಲಿ ಆಗುವಂತೆ ಮಾಂಸಖಂಡಗಳು ಎಂದಿಗೂ ಮಿತಿಮೀರಿ ಉಬ್ಬಿಕೊಂಡಿರುವುದಿಲ್ಲ.

ನನ್ನ ಗುರುಗಳಿಗೆ ನನ್ನ ಹಳೆಯ ಬೆನ್ನುನೋವಿನ ತೊಂದರೆಯ ಸಂಗತಿ ತಿಳಿದಿತ್ತು. ಹಾಗಾಗಿ ನನಗೆ ಬೆನ್ನಿನ ಮಾಂಸಖಂಡಗಳನ್ನು ಬಲಪಡಿಸುವಂಥ ಆಸನಗಳನ್ನೇ ಮಾಡಲು ಸಲಹೆಮಾಡಿದರು. ಅದರಿಂದ ಪ್ರಾಣಾಯಾಮ ಮಾಡಲು ಮತ್ತು ಧ್ಯಾನ ಮಾಡುವಾಗ ಹೆಚ್ಚು ಹೊತ್ತು ಕುಳಿತುಕೊಳ್ಳಲು ಸಾಧ್ಯವಾಗುತ್ತದೆ ಎಂಬುದೇ ಅದರ ಹಿಂದಿನ ಉದ್ದೇಶ. ಸಿದ್ಧಾಸನ ಎಂಬ ಆಸನವನ್ನು ಕುರಿತು ವಿಶೇಷವಾಗಿ ಹೇಳಬೇಕಾಗಿದೆ. ಕಾರಣ ಇತರೆ ಆಸನಗಳನ್ನು ಮಾಡಲು ಈ ಆಸನವನ್ನು ಅನೇಕ ವೇಳೆ ಪೂರ್ವಭಾವಿ ಆಸನವಾಗಿ ಬಳಸಿಕೊಳ್ಳಲಾಗುತ್ತದೆ. ಸಿದ್ಧಾಸನದಲ್ಲಿ ವ್ಯಕ್ತಿಯು ನೆಲದ ಮೇಲೆ ಬೆನ್ನುಮೂಳೆ ನೇರವಾಗಿರುವಂತೆ, ಕಾಲುಗಳನ್ನು ಮಡಿಚಿಕೊಂಡು ಮಂಡಿಗಳು ನೆಲದ ಮೇಲಿರುವಂತೆ ಕುಳಿತುಕೊಳ್ಳುತ್ತಾನೆ. ಬಲಗಾಲಿನ ಹಿಮ್ಮಡಿ ನೇರವಾಗಿ ಎಡಗಾಲಿನ ಹಿಮ್ಮಡಿಯ ಮೇಲೆ ಇರುವಂತೆ ಇರಬೇಕು.

ಆಸನಗಳನ್ನು ವ್ಯಾಯಾಮವೆನ್ನುವುದಕ್ಕಿಂತ ಹೆಚ್ಚಾಗಿ ಭಂಗಿಗಳೆದು ಪರಿಗಣಿಸಬೇಕು. ಇಲ್ಲೊಂದು ಮುಖ್ಯ ಸಲಹೆ: ಅನೇಕ ವೇಳೆ ಅದರ ಬಗ್ಗೆ ಒತ್ತುಕೊಟ್ಟು ಹೇಳವುದಿಲ್ಲ. ಅದೆಂದರೆ ಮಾಂಸಖಂಡಗಳು ಹೊಸದೊಂದು ಆಸನದ ಭಂಗಿಯನ್ನು ಮಾಡಲು ಉದ್ಯುಕ್ತವಾಗಿ ಆ ಭಂಗಿಯನ್ನು ಅಳವಡಿಸಿಕೊಂಡಾದ ಮೇಲೆ ಮನಸ್ಸು ಆ ಕ್ರಿಯೆಯನ್ನು ಗಮನಿಸುವುದರಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳಬೇಕು. ಇದಕ್ಕೆ ಅನುಕೂಲವಾಗುವಂತೆ ಅಂಗಾಂಗಳ ಚಲನೆಯನ್ನು ಸಾಧ್ಯವಾದಷ್ಟೂ ಸಾವಧಾನವಾಗಿ ಮತ್ತು ನಿಧಾನವಾಗಿ ಮಾಡಬೇಕು. ಇದರಿಂದ ಎರಡು ಲಾಭಗಳಾಗುತ್ತವೆ. ಒಂದು ಕಡೆ ಅದು ನಿಮಗೆ ವಿಶ್ರಾಂತಿಯ ಅನುಭವವನ್ನು ಉಂಟುಮಾಡಿದರೆ ಇನ್ನೊಂದು ಕಡೆ ಯೋಗ ನಿದ್ರೆಯಲ್ಲಾಗುವಂತೆ ಶಬ್ದರಹಿತ(ಮಾತಿಲ್ಲದ) ಅರಿವಿನ (ಪ್ರಜ್ಞೆಯ) ಅನುಭವವನ್ನು ತಂದುಕೊಡುತ್ತದೆ. ಎಷ್ಟು ದೀರ್ಘ ಸಮಯದ ವರೆಗೆ ಒಂದು ಆಸನವನ್ನು ಮಾಡುತ್ತಿರುತ್ತೇವೋ ಅಷ್ಟು ದೀರ್ಘ ಸಮಯದವರೆಗೆ ಶಬ್ದ ರಹಿತ ಅರಿವಿನ ಅನುಭವ ಇರುತ್ತದೆ. ನಿಸ್ಸಂದೇಹವಾಗಿಯೇ ಈ ಕಾಲಾವಧಿಯನ್ನು ಅನಗತ್ಯವಾಗಿ ಹೆಚ್ಚಿಸಬಾರದು ಮತ್ತು ಸುಖಕರವಾಗಿ ಎಷ್ಟು ಸಮಯುದವರೆಗೆ ಮಾಡಬಹುದೋ ಅಷ್ಟಕ್ಕೆ ಸೀಮಿತಗೊಳಿಸಬೇಕು.

ಈ ಸ್ಥಿತಿಯಲ್ಲಿರುವ ಆನಂದವನ್ನು ಅನುಭವಿಸುತ್ತಿದ್ದಾಗ ನನಗಾದ ಇನ್ನೊಂದು ಅನುಭವವನ್ನು ಕುರಿತು ಹೇಳಲೇ ಬೇಕು. ಮಗುವೊಂದು ನಡೆಯಲು ಪ್ರಾರಂಭಿಸಿದಾಗ ಈ ಹೊಸ ಕೌಶಲವನ್ನು ಕಲಿಯಲು ಅದು ಪ್ರಯತ್ನ ಮಾಡಬೇಕಾಗುತ್ತದೆ. ಈ ಕಾರಣದಿಂದ ಅದರ ಜಾಗೃತ ಮನಸ್ಸು ಈ ಚಟುವಟಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ತಲ್ಲೀನವಾಗಿಬಿಟ್ಟಿರುತ್ತದೆ. ವರ್ಷಗಳು ಕಳೆದ ಮೇಲೆ ನಾವು ಹೆಚ್ಚು ಕುಶಲಿಗಳಾದ ಮೇಲೆ ನಡಿಗೆಯ ಕ್ರಿಯೆಯನ್ನು ಪ್ರಜ್ಞಾಪೂರ್ವಕವಾಗಿ ಅನುಭವಿಸುವುದಿಲ್ಲ. ಈ ನಡಿಗೆಯ ಕ್ರಿಯೆಗೆ ಯಾವೆಲ್ಲ ಮಾಂಸಖಂಡಗಳು ಬಳಕೆಯಾಗುತ್ತಿವೆ ಎಂಬುದರ ಅರಿವಿರುವುದಿಲ್ಲ.

ಆಸನಗಳನ್ನು ಒಂದುವೇಳೆ ಸರಿಯಾಗಿ ಮಾಡಿದ್ದೇ ಆದರೆ ಆ ಆಸನಗಳನ್ನು ಮಾಡುವಲ್ಲಿ ಬಳಕೆಯಾಗುತ್ತಿರುವ ಮಾಂಸಖಂಡಗಳು ಮತ್ತು ಅವುಗಳ ಚಲನೆ ನಮ್ಮ ಅರಿವಿಗೆ ಬರುತ್ತದೆ. ಅದೂ ಅಲ್ಲದೆ ನಾವು ಈ ಹಿಂದೆ ಎಂದೂ ಮಾಡಿರದ ಮಾಂಸಖಂಡಗಳ ಚಲನೆಯ ಹೊಸ ಸಂಯೋಜನೆಯನ್ನು ಆಸನಗಳು ನಮಗೆ ಪರಿಚಯಿಸುತ್ತವೆ. ಆಸನಗಳು ನಿಜಕ್ಕೂ ನಮ್ಮ ಶರೀರ ಮತ್ತು ಸ್ಥಳಾವಕಾಶದಲ್ಲಿ ಅದರ ಸ್ಥಿತಿಯ ಬಗ್ಗೆ ನಮಗೆ ತಿಳಿವು ನೀಡುತ್ತವೆ. ಈ ತಿಳಿವು ನಮ್ಮ ಮನಸ್ಸು ಅತ್ಯಂತ ಸುಸ್ಥಿರವಾಗಿ ಸ್ಥಾಪಿತಗೊಂಡಿದೆಯೇನೋ ಎಂಬ ಭಾವವನ್ನು ಉಂಟು ಮಾಡುವಷ್ಟರ ಮಟ್ಟಿಗೆ ಮನಸ್ಸನ್ನು ಶಾಂತಗೊಳಿಸುತ್ತದೆ ಹಾಗೂ ಶರೀರವು ಸ್ಥಳಾವಕಾಶದಲ್ಲಿ ಸ್ಪಷ್ಟ ರೀತಿಯಲ್ಲಿ ನಿರ್ದಿಷ್ಟಗೊಂಡಿದೆ ಎಂದು ಅನಿಸುವಂತೆ ಮಾಡುತ್ತದೆ. ಮನಸ್ಸು ಅತ್ತ ಇತ್ತ ಓಡುವುದಿಲ್ಲ. ಇದರ ಪರಿಣಾಮವಾಗಿ ಆಸನಗಳ ಒಂದು ಸರಣಿಯನ್ನು ಮುಗಿಸಿದ ನಂತರದಲ್ಲೂ ಸಾಕಷ್ಟು ದೀರ್ಘ ಕಾಲದ ವರೆಗೆ ವ್ಯಕ್ತಿಯೊಬ್ಬನ ವಿಚಾರಗಳು ನಿಧಾನ ಗತಿಯವಾಗಿ ಬಿಡುತ್ತವೆ.

ಪ್ರಾಣಾಯಾಮ

ಯೋಗದಲ್ಲಿ ಪ್ರಾಣಾಯಾಮದ ಅಭ್ಯಾಸವು ವಸ್ತುತಃ ಪ್ರಜ್ಞಾಪೂರ್ವಕ ಮತ್ತು ನಿಯಂತ್ರಿತ ಉಸಿರಾಟ. ಸಾಮಾನ್ಯವಾಗಿ ನಾವು ನಮ್ಮ ಉಸಿರಾಟದ ಬಗ್ಗೆ ಪ್ರಜ್ಞಾ ಪೂರ್ವಕವಾಗಿರುವುದಿಲ್ಲ. ನಮ್ಮ ಉಸಿರಾಟವು ಹ್ರಸ್ವವಾದಾಗ (ಅಂದರೆ ಉಚ್ಛ್ವಾಸವು ನಿಶ್ವಾಸಕ್ಕಿಂತ ದೀರ್ಘವಾದಾಗ) ಮತ್ತು ಅತಿಯಾದ ವ್ಯಾಯಮದಿಂದ ಅಥವಾ ಹೆಚ್ಚು ಚಿಂತೆ-ಭಯಗಳಿಂಗ ಅನಿಯಮಿತವಾದಾಗ ಅದರ ಬಗ್ಗೆ ಜಾಗ್ರತರಾಗುತ್ತೇವೆ. ಉಸಿರಾಟ ಹ್ರಸ್ವವೂ, ಅನಿಯಮಿತವೂ ಆದಾಗ ಅದರೊಡನೆ ದೈಹಿಕ ಮತ್ತು ಮಾನಸಿಕ ತೊಂದರೆಗಳಿಗೆ ಸಂಬಂಧ ಕಲ್ಪಿಸುತ್ತೇವೆ. ಇದಕ್ಕೆ ಪ್ರತಿಯಾಗಿ....

ಯೋಗ ಸಿದ್ಧಾಂತದ ಪ್ರಕಾರ, ಪ್ರಾಣಾಯಾಮವು ನಿಮಗೆ ಶಾಂತತೆ ಮತ್ತು ಸುಖದ ಭಾವಗಳನ್ನು ತಂದುಕೊಡುವುದಕ್ಕಿಂತ ಹೆಚ್ಚಿನದನ್ನು ಉಂಟುಮಾಡುತ್ತದೆ. ಉಸಿರಾಟದ ನಿಯಂತ್ರಣವು ಪ್ರಾಣ ಶಕ್ತಿಯು ಸುಲಲಿತವಾಗಿ ಹರಿಯಲು ನೆರವಾಗುತ್ತದೆ. ನನ್ನ ಅಧ್ಯಯನದ ಅವಧಿಯಲ್ಲಿ ಪ್ರಾಣಾಯಾಮದ ಹಲವು ಬಗೆಯ ತಂತ್ರಗಳನ್ನು ಕಲಿಸಲಾಯಿತು.

ಶಾಂತಿಯನ್ನುಂಟುಮಾಡುವುದರ ಜೊತೆಗೆ ಪ್ರಾಣಾಯಾಮವು ಚುರುಕುತನವನ್ನು ಹೆಚ್ಚಿಸುತ್ತದೆ. ವ್ಯಕ್ತಿಯು ಪೂರ್ಣ ರೀತಿಯ ಜಾಗೃತಿ ಮತ್ತು ಮನಸ್ಸು ಪ್ರಸನ್ನಗೊಂಡ ಭಾವವನ್ನು ಅನುಭವಿಸುತ್ತಾನೆ. ಹಗುರಗೊಂಡ ಭಾವ ಉಂಟಾಗುತ್ತದೆ. ಹೆಚ್ಚು ಮಾಡಿದಾಗ ಇಲ್ಲವೆ ಬೇಗ ಬೇಗ ಮಾಡಿದಾಗ ಪ್ರಾಣಾಯಾಮವು ಚುರುಕುತನದೊಂದಿಗೆ ಸ್ವಲ್ಪಮಟ್ಟಿನ ಅಶಾಂತಿಯ ಅಥವಾ ತಳಮಳದ ಭಾವವನ್ನುಂಟು ಮಾಡಬಹುದು. ಅದೇ ಪ್ರಾಣಾಯಾಮವನ್ನು ಸರಿಯಾಗಿ ಮಾಡಿದ್ದೇ ಆದರೆ ಚುರುಕುತನದೊಂದಿಗೆ ಏನನ್ನೇ ಮಾಡಿದರೂ ಅದರಲ್ಲಿ ಹೆಚ್ಚು ಗಮನವನ್ನು ಕೇಂದ್ರೀಕರಿಸುವ ಸಾಮರ್ಥ್ಯ ಬರುತ್ತದೆ.

ಪ್ರಾಣಾಯಾಮದ ಅಭ್ಯಾಸವು ಪ್ರಾಣದ ಹರಿವನ್ನು ಪ್ರಭಾವಿಸುತ್ತದೆಂದು ತಿಳಿಯಲಾಗಿದೆ. ಪ್ರಾಣ ಎಂದರೇನು ಅಥವಾ ಅದರ ಹರಿವು ಎಂದರೇನು ಎಂಬುದನ್ನು ತೋರಿಸುವಂಥ ಯಾವ ಅಸಾಧಾರಣವಾದ ಅನುಭವವೂ ನನಗಾಗಲಿಲ್ಲ. ಪ್ರಾಣದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ವ್ಯಕ್ತಿಗೆ ಬಹುಶಃ ಹೆಚ್ಚಿನ ಕಾಲಾವಧಿಯ ಅಭ್ಯಾಸ ಬೇಕಾಗುತ್ತದೆ.

ತ್ರಾಟಕ

ಧ್ಯಾನದ ಏಕಾಗ್ರತೆಯನ್ನು ಹೆಚ್ಚಿಸುವ ತಂತ್ರವಾಗಿ ತ್ರಾಟಕವನ್ನು ಕಲಿಸಲಾಯಿತು. ತ್ರಾಟಕಕ್ಕೆ ಸಂಬಂಧಿಸಿದಂತೆ ನೀಡಲಾದ ಸೂಚನೆಗಳು ಹೀಗಿವೆ.

ಮೊದಲು ಒಂದು ಮೇಣದ ಬತ್ತಿಯನ್ನು ಹಚ್ಚಬೇಕು. ಅದನ್ನು ನಿಮ್ಮ ಎದುರಿಗೆ ಕೈಯಳತೆಯ ದೂರದಲ್ಲಿ ಇಟ್ಟುಕೊಳ್ಳಬೇಕು. ಅದರ ಬೆಳಕು ನಿಮ್ಮ ಕಣ್ಣಿನ ಮಟ್ಟಕ್ಕೆ ಇರುವಂತೆ ಮೇಣದ ಬತ್ತಿಯನ್ನು ಇರಿಸಿಕೊಳ್ಳಬೇಕು. ಆಮೇಲೆ ಸಿದ್ಧಾಸನದಲ್ಲಿ ಕುಳಿತುಕೊಂಡು– ಅಂದರೆ ಮಂಡಿಗಳನ್ನು ಮಡಿಸಿಕೊಂಡು ಹಿಮ್ಮಡಿಗಳನ್ನು ಒಂದರ ಮೇಲೊಂದು ಬರುವಂತೆ ಇರಿಸಿಕೊಂಡು, ಬೆನ್ನು ಮೂಳೆಯನ್ನು ನೇರವಾಗಿ ಇಟ್ಟುಕೊಂಡು– ಎಷ್ಟುಹೊತ್ತು ಸಾಧ್ಯವೋ ಅಷ್ಟುಹೊತ್ತು ಕಣ್ಣಿನ ರೆಪ್ಪೆಗಳನ್ನು ಮಿಟುಕಿಸದೆ ಬೆಳಕಿನ ಜ್ವಾಲೆಯನ್ನು ನೋಡುತ್ತಿರಬೇಕು. ಕಣ್ಣಿನಲ್ಲಿ ನೀರು ಬಂದರೂ ಜ್ವಾಲೆಯನ್ನು ನೋಡುವುದನ್ನು ಮುಂದುವರಿಸಬೇಕು.

ಇದರ ನಂತರ ಕಣ್ಣುಗಳನ್ನು ಮುಚ್ಚಿಕೊಂಡು ಎರಡೂ ಹುಬ್ಬುಗಳ ನಡುವೆ(ಭ್ರೂ ಮಧ್ಯೆ) ಬೆಳಕಿನ ಜ್ವಾಲೆಯ ಕಲ್ಪನೆ ಮಾಡಿಕೊಳ್ಳಬೇಕು. ಆ ಜ್ವಾಲೆಯ ಬಿಂಬ ಕಾಣಿಸದೆ ಇರುವವರೆಗೂ (ಮರೆಯಾಗುವವರೆಗೂ) ಕಣ್ಣುಗಳನ್ನು ಮುಚ್ಚಿಕೊಂಡೇ ಇರಬೇಕು. ಆ ನಂತರ ಕಣ್ಣುಗಳನ್ನು ತೆರೆದು ಜ್ವಾಲೆಯ ಕಡೆ ನೋಡಬೇಕು. ಈ ಕ್ರಿಯೆಯನ್ನು ಮೂರು ಸಲ ಪುನರಾವರ್ತಿಸುವುದು. ಸುಮಾರು ಮೂರು ತಿಂಗಳವರೆಗೂ ಈ ಅಭ್ಯಾಸವನ್ನು ಮುಂದುವರಿಸುವುದು.

ಈ ಅಭ್ಯಾಸವನ್ನು ಮುಂದುವರಿಸುತ್ತ ಹೋದಂತೆ ನಿಮ್ಮ ಮನಸ್ಸಿನಲ್ಲಿ ಹುಬ್ಬುಗಳ ನಡುವೆ ಜ್ವಾಲೆಯನ್ನು ಹೆಚ್ಚುಹೊತ್ತು ನೋಡುವುದು ನಿಮಗೆ ಸಾಧ್ಯವಾಗುತ್ತದೆ. ನಾನು ಈ ಹಿಂದೆ ಎಲ್ಲ ಅಭ್ಯಾಸಗಳ ಸಂದರ್ಭದಲ್ಲಿ ಹೇಳಿದಂತೆ ಆಂತರಿಕ ಸಂವಾದವು ನಿಲ್ಲುತ್ತದೆ.

ಎಲ್ಲ ಅಭ್ಯಾಸಗಳ ಜೊತೆ ಜೊತೆಯಲ್ಲಿ ತ್ರಾಟಕವನ್ನು ಮಾಡುತ್ತಿದ್ದುದರಿಂದ ಇತರೆ ಅಭ್ಯಾಸಗಳು ಉಂಟುಮಾಡಿದ್ದಕ್ಕಿಂತ ವಿಭಿನ್ನವಾಗಿ ನನ್ನ ಏಕಾಗ್ರತೆಯ ಮೇಲೆ ವಿಶಿಷ್ಟವಾದ ಪರಿಣಾಮವನ್ನು ಇದು ಉಂಟುಮಾಡಿತೋ ಹೇಗೆ ಎಂದು ನಾನು ಹೇಳಲಾರೆ.

ಧ್ಯಾನ (Meditation)

ಯೋಗನಿದ್ರೆಯನ್ನು ಕಲಿತ ಮೇಲೆ ನನ್ನ ಗುರುಗಳು ನನಗೆ ಧ್ಯಾನಮಾಡುವುದು ಹೇಗೆ ಎಂಬುದನ್ನು ಹೇಳಿಕೊಡಲಾರಂಭಿಸಿದರು. ಇತರೆ ಅಭ್ಯಾಸಿಗಳ ಜೊತೆಯಲ್ಲಿ ಒಂದು ಸಮೂಹದಲ್ಲಿ ಈ ತಂತ್ರವನ್ನು ನನಗೆ ಹೇಳಿಕೊಟ್ಟರು. ಹಾಗಾಗಿ ಇದರ ಸೂಚನೆಗಳನ್ನು ಸರಾಗವಾಗಿ ಪಾಲಿಸಲು ನನಗೆ ಇಪ್ಪತ್ತು ದಿನಗಳು ಹಿಡಿಯಿತು.

ಧ್ಯಾನದ ಕಲಿಕೆಯ ಹಲವು ಪ್ರಾಯೋಗಿಕ ವಿಧಗಳಿವೆ. ನನಗೆ ನನ್ನ ಗುರುಗಳು ಕಲಿಸಿದ ತಂತ್ರವು ಪ್ರಸಿದ್ಧ ತಂತ್ರಗಳ ಸಮ್ಮಿಶ್ರಣವಾಗಿತ್ತು. ಈ ಎಲ್ಲ ಯುಕ್ತಿಗಳೂ ಪತಂಜಲಿಯ ತತ್ತ್ವಗಳನ್ನೇ ಆಧರಿಸಿವೆ ಎಂಬುದನ್ನು ಗಮನಿಸಬೇಕು.

ನನ್ನ ಗುರುಗಳು ನನಗೆ ಕಲಿಸಿದ ತಂತ್ರ ಈ ಕೆಳಕಂಡಂತಿದೆ.

- ಸಿದ್ಧಾಸನದಲ್ಲಿ ಕುಳಿತುಕೊಳ್ಳಿ.
- ನಿಮ್ಮ ಮನಸ್ಸಿಗೆ ಆಯಾಸವೆನಿಸಿ ಅದು ಒಳಗಿನತ್ತ ತಿರುಗುವವರೆಗೆ ಸುತ್ತಲಿನ ಎಲ್ಲ ಶಬ್ದ(ಸದ್ದು)ಗಳನ್ನು ಕೇಳಿಸಿಕೊಳ್ಳಿ.
- ಮಾನಸಿಕವಾಗಿ ನಿಮ್ಮ ಶರೀರದತ್ತ ನೋಡಿಕೊಳ್ಳಿ. ದೈಹಿಕವಾಗಿ ನೀವೊಂದು ಬಂಡೆಯಂತೆ, ಪರ್ವತದಂತೆ ಚಲನೆಯಿಲ್ಲದೆ ಸ್ಥಿರವಾಗಿರುವಿರಿ. ನಿಮ್ಮ ಅಭ್ಯಾಸ ಪೂರ್ತಿಯಾಗಿ ಮುಗಿಯುವವರೆಗೂ ಯಾವುದೂ ನಿಮ್ಮನ್ನು ಚಲಿಸಲಾರದು ಎಂದು ಭಾವಿಸಿ. ಈ ಸಂಕಲ್ಪ ಮಾಡುವುದಕ್ಕೆ ಮುಂಚೆ ಸುಖಕರವಾಗಿ ಸ್ಥಿರವಾಗಿ ಸ್ಥಾಪಿಸಿಕೊಳ್ಳಿ.
- ನಿಮ್ಮ ಮೂಗಿನ ಹೊಳ್ಳೆಗಳ ಒಳಕ್ಕೆ ಪ್ರವೇಶಿಸುತ್ತಿರುವ ಮತ್ತು ಅವುಗಳಿಂದ ಹೊರಬರುತ್ತಿರುವ ಉಸಿರಿನ ಮೇಲೆ ನಿಮ್ಮ ಗಮನವನ್ನು ಕೇಂದ್ರೀಕರಿಸಿ. ಮಾಮೂಲಿನಂತೆ ಉಸಿರಾಡಿ. ನಿಮ್ಮ ಮನಸ್ಸಿನಲ್ಲಿ ಏಳುತ್ತಿರುವ ಆಲೋಚನೆಗಳು ನಿಮ್ಮ ಏಕಾಗ್ರತೆಯ ಮೇಲೆ ಆಘಾತವಮಾಡುತ್ತಲೇ ಇರುತ್ತವೆ. ಆಲೋಚನೆಗಳೊಂದಿಗೆ ಹೋರಾಡಬೇಡಿ. ಕೊಠಡಿಯಲ್ಲಿರುವ ಒಂದು ಕಿಟಕಿಯಿಂದ ಸುಳಿಗಾಳಿಯು ಪ್ರವೇಶಿಸಿ ಇನ್ನೊಂದು ಕಿಟಕಿಯಿಂದ ಹೊರಗೆ ಹೋಗುವ ರೀತಿಯಲ್ಲಿ ಅವು ಬಂದು ಹೋಗುತ್ತಿರಲಿ. ಕೆಲವೊಮ್ಮೆ ಮನಸ್ಸು ಅವುಗಳಿಂದ ಮರವೆಗೆ ಒಳಗಾಗಿ ನೀವು ಉಸಿರಾಡುವುದನ್ನು ಮರೆಯಬಹುದು. ನೀವು ಇದನ್ನು ಗಮನಿಸುತ್ತಿದ್ದಂತೆ ನಿಧಾನವಾಗಿ ನಿಮ್ಮ ಮನಸ್ಸನ್ನು ಉಸಿರಿನ ಕಡೆಗೆ ತನ್ನಿ.
- ನಿಮ್ಮ ಉಸಿರಿನ ಮೇಲೆ ಐದು ನಿಮಿಷಗಳ ಕಾಲ ನಿಮ್ಮ ಗಮನವನ್ನು ಕೇಂದ್ರೀಕರಿಸುವವರೆಗೂ ಇದನ್ನು ಮುಂದುವರಿಸಿ.
- ಅನಂತರ– ಉಸಿರನ್ನು ಒಳಕ್ಕೆ ತೆಗೆದುಕೊಳ್ಳುತ್ತಿದ್ದಂತೆ – ಉಸಿರು ನಿಮ್ಮ

ನಾಭಿಯಿಂದ ಹೊರಟು ಗಂಟಲನ್ನು ತಲುಪುತ್ತಿದೆ ಎಂದು ಹಾಗೂ ಉಸಿರನ್ನು ಹೊರಗೆ ಬಿಡುತ್ತಿದ್ದಂತೆಯೇ ಅದು ಗಂಟಲಿನಿಂದ ಹೊರಟು ಕೆಳಗಡೆ ನಾಭಿಯನ್ನು ತಲುಪುತ್ತಿದೆ ಎಂದು ಕಲ್ಪಿಸಿಕೊಳ್ಳಿ. ಈಗ ನೀವು ನಿಮ್ಮ ಗಮನವನ್ನು ಮೂಗಿನ ಹೊಳ್ಳೆಗಳ ಮೇಲಿನಿಂದ ಗಂಟಲಿನಿಂದ ನಾಭಿಯವರೆಗೂ ಸಾಗಿ ಹೋಗಿರುವ ಒಂದು ಕಲ್ಪಿತ ನಾಳ ಮಾರ್ಗದ ಕಡೆಗೆ ಕೊಂಡೊಯ್ಯಿರಿ. ಈಗ ಕಲ್ಪಿತ ನಾಳಮಾರ್ಗದ ಮೂಲಕ ಉಸಿರು ಹಾದು ಹೋಗುತ್ತಿರುವಾಗ ಅದರ ಮೇಲೆ ನಿಮ್ಮ ಗಮನವನ್ನು ಕೇಂದ್ರೀಕರಿಸಿ.

- ಒಮ್ಮೆ ಈ ಮಾರ್ಗದ ಮೇಲೆ ನಿಮ್ಮ ಉಸಿರು ಸುಸ್ಥಿರವಾದಾಗ ನಿಮ್ಮ ಮನಸ್ಸಿನಲ್ಲಿ ಒಳತೆಗೆದುಕೊಳ್ಳುವ ಉಸಿರಿನೊಂದಿಗೆ 'ಸೋ' ಎಂಬ ಧ್ವನಿಯನ್ನು ಹಾಗೂ ಹೊರಹೋಗುವ ಉಸಿರಿನೊಂದಿಗೆ 'ಹಂ' ಎಂಬ ಧ್ವನಿಯನ್ನು ಜೋಡಿಸಿ. ಹೇಗೆಂದರೆ ಉಸಿರು ನಾಭಿಯಿಂದ ಗಂಟಲಿನ ಕಡೆಗೆ ಚಲಿಸುವಾಗ 'ಸೋ' ಎಂದು ಹೇಳುವುದು ಮತ್ತು ಗಂಟಲಿನಿಂದ ನಾಭಿಯ ಕಡೆಗೆ ಸಾಗುವಾಗ 'ಹಂ" ಎಂದು ಹೇಳುವುದು.
- ಎರಡೂ ಧ್ವನಿಗಳನ್ನು ಇದ್ದಕ್ಕಿದ್ದಂತೆ ನಿಲ್ಲಿಸಬೇಡಿ. 'ಸೋ' ಧ್ವನಿ 'ಹಂ' ಧ್ವನಿಯೊಂದಿಗೆ ಕೂಡಿಕೊಂಡಿದೆ ಮತ್ತು 'ಹಂ' ಧ್ವನಿ 'ಸೋ' ಧ್ವನಿಯೊಂದಿಗೆ ಕೂಡಿಕೊಂಡಿದೆ. ಹಾಗಾಗಿ ಇವೆರಡರ ನಡುವೆ ಒಂದು ಬಿಡುತೆ (gap) ಇದ್ದಾಗ್ಯೂ ಇವೆರಡೂ ಒಳಗಿನ ಶ್ವಾಸ(ಉಚ್ಛ್ವಾಸ)ವನ್ನು ಹೊರಗಿನ ಶ್ವಾಸ(ನಿಶ್ವಾಸ)ದೊಂದಿಗೆ ಸೇರಿಸುತ್ತವೆ.
- ಒಮ್ಮೆ ಈ ಸ್ಥಿತಿಯಲ್ಲಿ ನೀವು ಸ್ಥಿರವಾದ ಮೇಲೆ ಉಸಿರು ಗಂಟಲನ್ನು ತಲುಪುತ್ತಿದ್ದಂತೆ ಒಂದು ಊದಾ ಬಣ್ಣದ / ನೇರಳೆಬಣ್ಣ ಕಮಲವು (purple lotus) ಅರಳುತ್ತಿದೆಯೆಂದು ಕಲ್ಪಿಸಿಕೊಳ್ಳಿ. ಅದೇ ರೀತಿ ಉಸಿರು ಗಂಟಲಿನಿಂದ ಹೊರಡುತ್ತಿದ್ದಂತೆಯೇ ಆ ಕಮಲವು ಮುದುಡುತ್ತಿದೆಯೆಂದು ಕಲ್ಪಿಸಿಕೊಳ್ಳಿ. ಉಸಿರು ನಾಭಿಯನ್ನು ತಲುಪುತ್ತಿದ್ದಂತೆ ಹಳದಿ ಕಮಲವೊಂದು ಅರಳುತ್ತಿದೆಯೆಂದು ಹಾಗೂ ಆ ಉಸಿರು ನಾಭಿಯನ್ನು ಬಿಡುತ್ತಿದ್ದಂತೆ ಆ ಹಳದಿ ಕಮಲವು ಮುದುಡುತ್ತಿದೆಯೆಂದು ಕಲ್ಪಿಸಿಕೊಳ್ಳಿ.
- ಆಲೋಚನೆಗಳು ಬರುತ್ತಿರುತ್ತವೆ ಮತ್ತು ಹೋಗುತ್ತಿರುತ್ತವೆ. ಅವುಗಳೊಂದಿಗೆ ಸೆಣಸಬೇಡಿ. ಅವಷ್ಟಕ್ಕೆ ಅವೇ ಕ್ಷೀಣಗೊಳ್ಳುತ್ತವೆ.
- ಒಮ್ಮೆ ಈ ಸ್ಥಿತಿಯಲ್ಲಿ ಸ್ಥಿರವಾದಿರೆಂದರೆ, ನಿಮ್ಮ ಮನಸ್ಸಿನಲ್ಲಿ ಏನೂ ಆಲೋಚನೆಗಳೇ ಇಲ್ಲದಿರುವ ಕ್ಷಣಗಳು ಉಂಟಾಗುತ್ತವೆ. ಆಗ ಇರುವುದೆಲ್ಲ 'ಸೋ,' 'ಹಂ' ಧ್ವನಿಗಳ, ಹೂವುಗಳ ಮತ್ತು ಕಲ್ಪಿತ ನಾಳ ಇವುಗಳ ಮಾನಸಿಕ ಗಮನಿಕೆ ಮಾತ್ರ.

- ಈ ಸ್ಥಿತಿಯಲ್ಲಿ ಸ್ವಲ್ಪ ಕಾಲ ಕಳೆದಾದ ಮೇಲೆ ನಿಮ್ಮ ಎರಡೂ ಹುಬ್ಬುಗಳ ಮಧ್ಯೆ ಇರುವ ಒಂದು ಮಾನಸಿಕ ಬಿಂಬದ ಮೇಲೆ ನಿಮ್ಮ ಗಮನವನ್ನು ಕೇಂದ್ರೀಕರಿಸಿ. (ನಾನು ಮೇಣದ ಬತ್ತಿಯ ಉರಿಯನ್ನು ಬಿಂಬವಾಗಿ ಆರಿಸಿಕೊಂಡಿದ್ದೆ)
- ತ್ರಾಟಕದ ಅಭ್ಯಾಸದಲ್ಲಿ ಉಸಿರನ್ನು ಒಳಕ್ಕೆ ಎಳೆದುಕೊಳ್ಳುವಾಗ ಮತ್ತು ಉಸಿರನ್ನು ಹೊರಕ್ಕೆ ಬಿಡುವಾಗ ಈ ಬಿಂಬವನ್ನು ಬಳಸಿಕೊಳ್ಳಿರಿ. ಇಷ್ಟುಹೊತ್ತಿಗೆ ನಿಮ್ಮ ಉಸಿರು ದೀರ್ಘವೂ, ಸ್ಥಿರವೂ ಮೃದುವೂ ಆಗಿರುತ್ತದೆ.
- ಈ ಸ್ಥಿತಿಯಲ್ಲಿ ಒಮ್ಮೆ ನೀವು ಸ್ಥಿರವಾದ ಮೇಲೆ ನಿಮ್ಮ 'ಮಂತ್ರ'ದ ಬಗ್ಗೆ ಯೋಚಿಸಿ. ಮೇಣದ ಬತ್ತಿಯ ಜ್ವಾಲೆಯ ಮೇಲೆ ಮನಸ್ಸು ಕೇಂದ್ರಿತವಾಗಿದ್ದಾಗ, ಮನಸ್ಸಿನಲ್ಲೇ ಮಂತ್ರವನ್ನು ಪುರಶ್ಚರಣೆ ಮಾಡಿ. ಈಗ ನಿಮ್ಮ ಗಮನ ಉಸಿರಿನ ಮೇಲಿನಿಂದ ದೂರಕ್ಕೆ ಸರಿದಿರುತ್ತದೆ. (ಅತೀಂದ್ರಿಯ ಧ್ಯಾನ ಹೇಳಿಕೊಟ್ಟ ಶಿಕ್ಷಕರೊಬ್ಬರು ನನಗೊಂದು 'ಮಂತ್ರ'ವನ್ನು ನೀಡಿದ್ದರು. ನನ್ನ ಈಗಿನ ಗುರುಗಳು ಅದನ್ನು ಬದಲಾಯಿಸಲು ಹೇಳಲಿಲ್ಲ.)
- ನಿಮ್ಮ ಧ್ಯಾನದ ಅವಧಿಯ ಅಂತ್ಯದವರೆಗೂ ಮಂತ್ರವನ್ನು ಪುರಶ್ಚರಿಸುವುದನ್ನು ಮುಂದುವರಿಸಿ.
- ನಿಧಾನವಾಗಿ ನಿಮ್ಮ ಮನಸ್ಸನ್ನು ಕಲ್ಪಿತ ನಾಳದ ಮೂಲಕ ಉಸಿರಿನ ಕಡೆಗೆ ತನ್ನಿ. ಆನಂತರ ಉಸಿರು ನಿಮ್ಮ ಶರೀರದ ಒಳಕ್ಕೆ ಹೋಗುತ್ತಿರುವಾಗ ಮತ್ತು ಶರೀರದಿಂದ ಹೊರಕ್ಕೆ ಹೋಗುತ್ತಿರುವಾಗ ಮೂಗಿನ ಹೊಳ್ಳೆಗಳ ಕಡೆಗೆ ನಿಮ್ಮ ಗಮನವನ್ನು ತಂದುಕೊಳ್ಳಿ. ಅಂತಿಮವಾಗಿ ನಿಧಾನವಾಗಿ ಕಣ್ಣುಗಳನ್ನು ತೆರೆಯಿರಿ.
- ಕಣ್ಣುಗಳನ್ನು ತೆರೆಯುವುದಕ್ಕೆ ಮುಂಚೆ ಮೂರು ಬಾರಿ ಗಟ್ಟಿಯಾಗಿ 'ಓಂ' ಎಂದು ಉಚ್ಚರಿಸಿ. 'ಓಂ'ಕಾರವನ್ನು ಉಚ್ಚರಿಸುವುದಕ್ಕೆ ಮುಂಚೆ ಪೂರ್ಣವಾಗಿ ಉಸಿರನ್ನು ಒಳಕ್ಕೆ ತೆಗೆದುಕೊಂಡಿರಬೇಕು. ಉಸಿರನ್ನು ಹೊರಬಿಡುತ್ತ ಅದು ಮುಗಿಯುವ ತನಕ 'ಓಂಕಾರ' ವನ್ನು ಉಚ್ಚರಿಸಬೇಕು.

ಸಿದ್ಧಾಸನದಲ್ಲಿ ಸ್ಥಿರವಾಗಿ ಕುಳಿತುಕೊಳ್ಳುವುದನ್ನು ಕಲಿಯಲೇ ನನಗೆ ಸಾಕಷ್ಟು ಸಮಯ ಹಿಡಿಯಿತು. ಶರೀರಕ್ಕಾಗುತ್ತಿದ್ದ ಅಸೌಖ್ಯದಿಂದ ನನ್ನ ಮನಸ್ಸು ವಿಚಲಿತವಾಗಿಬಿಡುತ್ತಿತ್ತು. ಮೂರು-ನಾಲ್ಕು ದಿನಗಳು ಕಳೆದ ಬಳಿಕವಷ್ಟೇ ನನಗೆ ಆರಾಮವಾಗಿ ಕುಳಿತುಕೊಳ್ಳಲು ಸಾಧ್ಯವಾಯಿತು. ಮೂಗಿನ ಹೊಳ್ಳೆಗಳ ಹತ್ತಿರ ನನ್ನ ಉಸಿರಾಟವನ್ನು ಕಂಡುಕೊಳ್ಳಲು ನನಗೆ ಇನ್ನೊಂದೆರಡು ದಿನ ಬೇಕಾಯಿತು. ನನ್ನ ಆಲೋಚನೆಗಳು ನನ್ನ ಮಾನಸಿಕ ಪರದೆಯ ಮೇಲೆ ಬಿರುಸಾಗಿ ಬಂದು ಬೀಳುತ್ತಿದ್ದವು. ಹಾಗಾಗಿ ಅವುಗಳು ನನಗೆ ನನ್ನ ಉಸಿರನ್ನು ಅವಲೋಕಿಸಲು ಬಿಡುತ್ತಿರಲಿಲ್ಲ. ಆದರೆ ಅಭ್ಯಾಸ

ಮುಂದುವರಿದಂತೆಲ್ಲ ದಿನಕ್ರಮೇಣ ಅವು ಸ್ಥಿರಗೊಂಡವು. ಅದರಿಂದ ನನಗೆ ಮುಂದಿನ ಹಂತಗಳಿಗೆ ಹೋಗಲು ಸಾಧ್ಯವಾಯಿತು.

ಸುಮಾರು ಇಪ್ಪತ್ತು ದಿನಗಳ ನಂತರ ನಾನೇನು ಮಾಡಬೇಕೆಂಬುದು ಅರ್ಥವಾಯಿತು. ಆಲೋಚನೆಗಳಿಂದ ನಾನಿನ್ನೂ ಬಿಡುಗಡೆ ಹೊಂದಿರಲಿಲ್ಲ. ಆಲೋಚನೆಗಳನ್ನು ಇಲ್ಲವಾಗಿಸಿಕೊಳ್ಳುವುದು ಎಂದರೇನೆಂದು ಅರಿವಾಯಿತು. ಒಂದು ತಿಂಗಳ ನಂತರ ಸುಮಾರು ಅರ್ಧ ಗಂಟೆಯ ಹೊತ್ತು ಧ್ಯಾನದಲ್ಲಿ ಕುಳಿತಿರುವುದು ನನಗೆ ಸಾಧ್ಯವಾಯಿತು. ನನ್ನ ತರಬೇತಿಯ ಅವಧಿಯಲ್ಲಿ ಗರಿಷ್ಠ ನಲವತ್ತೈದು ನಿಮಿಷಗಳವರೆಗೆ ನಾನು ಧ್ಯಾನಮಾಡುತ್ತಿದ್ದೆ.

ಪ್ರಾರಂಭದಲ್ಲಿ ಆರಂಭಿಕ ಹಂತಗಳಲ್ಲೇ ಹೆಚ್ಚು ಸಮಯ ಕಳೆಯುತ್ತಿದ್ದೆ. ಆದರೆ ಮುಂದುವರಿದಂತೆಲ್ಲ, ಕೇವಲ ಹತ್ತು ನಿಮಿಷಗಳಲ್ಲೇ ನಿರಾಯಾಸವಾಗಿ ಅವುಗಳನ್ನು ದಾಟಿ ಬಿಡುತ್ತಿದ್ದೆ. ಆಮೇಲೆ ಮನಸ್ಸಿನಲ್ಲಿ ಬೆಳಕಿನ ಬಿಂಬವನ್ನು ಅವಲೋಕಿಸುತ್ತ ಮನಸ್ಸಿನಲ್ಲೇ ಮಂತ್ರೋಚ್ಚಾರಣೆ ಮಾಡುವ ಅಂತಿಮ ಹಂತಕ್ಕೆ ಮುಂದುವರಿದು ಬಿಡುತ್ತಿದ್ದೆ.

ಅಂತಿಮ ಹಂತಕ್ಕೆ ತಲುಪುವ ಈ ನನ್ನ ಸಾಮರ್ಥ್ಯ ದಿನನಿತ್ಯದ ಕ್ರಮವಾಗಿತ್ತು ಎಂದು ಹೇಳಿದರೆ ಅದು ಅಸತ್ಯವಾಗುತ್ತದೆ. ಇದನ್ನು ತಲುಪಲು ನಾನು ದೀರ್ಘ ಸಮಯ ತೆಗೆದುಕೊಂಡ ದಿನಗಳೂ ಇದ್ದವು. ಅವುಗಳೆಂದರೆ ನನಗೆ ಬೆನ್ನು ನೋವು ಇದ್ದಾಗ ಅಥವಾ ಮನಸ್ಸು ಕ್ಷುಬ್ಧಗೊಂಡಿದ್ದಾಗ. ಏನೇ ಆದರೂ ಕಾಲ ಕಳೆಯುತ್ತಿದ್ದಂತೆ ಅಂಥ ಸಂದರ್ಭಗಳ ಪುನರಾವೃತ್ತಿ ಕಡಿಮೆಯಾಯಿತು.

ನನ್ನ ಆಲೋಚನೆಗಳನ್ನು ತೊಲಗಿಸುವಲ್ಲಿ ನನಗೆ ಸಿಕ್ಕ ಯಶಸ್ಸೂ ಸ್ಥಿರವಾಗಿರಲಿಲ್ಲ. ನನ್ನ ತರಬೇತಿಯ ಅವಧಿಯ ಕೊನೆ ಕೊನೆಗೂ ಧ್ಯಾನ ಚೆನ್ನಾಗಿ ಆಗುತ್ತಿದ್ದ ದಿನಗಳ ಜೊತೆಗೆ ಧ್ಯಾನ ಚೆನ್ನಾಗಿ ಆಗದಿದ್ದ ದಿನಗಳೂ ಇದ್ದವು. ಧ್ಯಾನ ಚೆನ್ನಾಗಿ ಆಗದಿದ್ದಕ್ಕೆ ಚಿಂತೆ ಮಾಡುವುದಾಗಲಿ ಚೆನ್ನಾಗಿ ಆಗಿದ್ದಕ್ಕೆ ಅತ್ಯುತ್ಸಾಹ ತಾಳುವುದಾಗಲಿ ಕೂಡದೆಂದು ನನ್ನ ಗುರುಗಳು ದೃಢವಾಗಿ ಹೇಳಿದರು. ಈ ರೀತಿ ಯೋಚಿಸಲೇ ಕೂಡದೆಂದು ವಸ್ತುಶಃ ನನಗೆ ಅವರು ತಾಕೀತು ಮಾಡಿದರು. ಅವರ ಸೂಚನೆಗಳನ್ನು ಪಾಲಿಸುವುದು ಅಷ್ಟು ಸುಲಭವಿರಲಿಲ್ಲ. ಆದರೂ ಅವುಗಳನ್ನು ಪಾಲಿಸಲು ನಾನು ಪ್ರಯತ್ನಿಸಿದೆ.

ಇನ್ನೊಂದು ನಾನು ಗಮನಿಸಿದ್ದೆಂದರೆ, ಒಳ್ಳೆಯ ಪ್ರಾಣಾಯಾಮದ ಅಭ್ಯಾಸದ ಅಧಿವೇಶನದ ನಂತರ ನಾನು ಧ್ಯಾನ ಮಾಡಿದ ಸಂದರ್ಭದಲ್ಲಿ ನನ್ನ ಧ್ಯಾನ ಆಲೋಚನೆಗಳಿಂದ ಮುಕ್ತವಾಗಿರುತ್ತಿತ್ತು. ಯಾವುದಾದರೊಂದು ಕಾರಣದಿಂದ ಉದಾಹರಣೆಗೆ ಪ್ರಯಾಣ ಮಾಡುತ್ತಿದ್ದಾಗ , ನನ್ನ ಮಾಮೂಲಿ ಸ್ಥಳದಲ್ಲಿ ಮತ್ತು ಸಮಯದಲ್ಲಿ ಧ್ಯಾನ ಮಾಡಲು ಸಾಧ್ಯವಾಗದಿದ್ದಲ್ಲಿ ಮನಸ್ಸಿನ ಏಕಾಗ್ರತೆ ಸಾಧಿಸುವುದು ತುಂಬ ಕಷ್ಟವಾಗುತ್ತಿತ್ತು.

ನನ್ನ ಧ್ಯಾನದ ಅಭ್ಯಾಸವನ್ನು ಹೀಗೆ ಸಂಕ್ಷಿಪ್ತಗೊಳಿಸಬಹುದು. ಧ್ಯಾನದ ಗುರಿ ಆಲೋಚನೆಗಳಿಂದ ಮನಸ್ಸನ್ನು ಮುಕ್ತಗೊಳಿಸುವುದು. ಆದರೆ ಅದು ಅವುಗಳೊಂದಿಗೆ ಸೆಣಸುವ ಮೂಲಕ ಅಲ್ಲ; ಬದಲಿಗೆ ಅವುಗಳು ತಮಗೆ ತಾವೇ ನಿಧಾನವಾಗಿ ಮರೆಯಾಗಲು ಅಥವಾ ಇಲ್ಲವಾಗಲು ಬಿಡುವ ಮೂಲಕ. ಮನಸ್ಸನ್ನು ಏಕಕಾಲದಲ್ಲಿ ದೃಶ್ಯ ಪ್ರತೀಕವಾದ ಮೇಣದ ಬತ್ತಿಯ ಜ್ಯೋತಿಯ ಮೇಲೆ ಹಾಗೂ ಶ್ರವ್ಯ ಪ್ರತೀಕವಾದ ಮಂತ್ರದ ಮೇಲೆ ಸ್ಥಿರವಾಗಿ ಕೇಂದ್ರೀಕರಿಸುತ್ತ ಆಲೋಚನೆಗಳನ್ನು ಮನಸ್ಸಿನಿಂದ ಮುಕ್ತಗೊಳಿಸುವುದನ್ನು ಸಾಧಿಸಲಾಗುತ್ತದೆ. ಏಕಾಗ್ರತೆಯ ಈ ಅವಸ್ಥೆಯನ್ನು ಕ್ರಮ ಕ್ರಮವಾಗಿ ಸಾಧಿಸಲಾಗುತ್ತದೆ. ಮೊದಲಿಗೆ ಶರೀರದ ಸಂವೇದನೆಗಳನ್ನು, ಅನಂತರ ಉಸಿರಾಟದ ಸಂವೇದನೆಯನ್ನು ಪರೀಕ್ಷಿಸುವ ಮತ್ತು ಬಿಡುವ ಮೂಲಕ ಸಾಧಿಸಲಾಗುತ್ತದೆ. ಇದರ ನಂತರದಲ್ಲಿ ನಾಭಿಯಿಂದ ಕಂಠದವರೆಗೆ ಒಂದು ಕಲ್ಪಿತ ನಾಳವನ್ನು ಕಣ್ಮುಂದೆ ತಂದುಕೊಳ್ಳುವುದು, 'ಸೋ-ಹಂ'ಅನ್ನು ಶ್ರವ್ಯಾತ್ಮಕವಾಗಿ ಗಮನಕ್ಕೆ ತಂದುಕೊಳ್ಳುವುದು, ಹಾಗೂ ಕಂಠ ಮತ್ತು ನಾಭಿಯ ಮೇಲೆ ಕಮಲದ ಹೂವುಗಳ ದೃಶ್ಯ ಕಣ್ಮುಂದೆ ತಂದುಕೊಳ್ಳುವುದು ಮತ್ತು ಸ್ಥಿರವಾದ ಏಕಾಗ್ರತೆ ಇವೆಲ್ಲ ಸ್ಥಿತಿಗಳು ಬರುತ್ತವೆ. ಸ್ಥಿರ ರೂಪದಲ್ಲಿ ಉಸಿರಾಡುವ ಪ್ರಕ್ರಿಯೆಯು ಉದ್ವೇಗಗಳನ್ನು ಶಾಂತಗೊಳಿಸಲು ಮತ್ತು ನಿಧಾನಗೊಳಿಸಲು ನೆರವಾಗುತ್ತದಲ್ಲದೆ ಆಲೋಚನಾ ಪ್ರಕ್ರಿಯೆಯನ್ನೇ ಕೊನೆಗೊಳಿಸಲು ನೆರವಾಗುತ್ತದೆ.

ಈ ಮುಂಚೆ ವಿವರಿಸಲಾದ ಇತರೆ ಅಭ್ಯಾಸಗಳೊಂದಿಗೆ ಧ್ಯಾನದ ಅಭ್ಯಾಸವನ್ನು ಹೋಲಿಸುವುದು ಕುತೂಹಲಕಾರಿಯಾದದ್ದು. ಯೋಗನಿದ್ರೆಯಲ್ಲಿ ಆಗುವಂತೆ ಧ್ಯಾನದಲ್ಲಿಯೂ ಮನಸ್ಸಿನಲ್ಲಿ ಬರುವ ಉದ್ದೀಪಕಗಳನ್ನು ಉದ್ದೇಶ ಪೂರ್ವಕವಾಗಿಯೇ ಪರೀಕ್ಷೆಗೊಳಪಡಿಸಲಾಗುವುದು. ಮನಸ್ಸನ್ನು ಉದ್ದೀಪಕಗಳಿಂದ ತುಂಬಿ ಅನಂತರ ಅವುಗಳಿಂದ ಸುಲಲಿತವಾಗಿ ದೂರ ಹೋಗಿಬಿಡಲು ಮನಸ್ಸಿಗೆ ನೆರವಾಗುವ ಪ್ರಕ್ರಿಯೆ ಇದು. ಪ್ರಾಣಾಯಾಮದಲ್ಲಿ ಆಗುವಂತೆ ಬದಲಾಗದ ಲಯಬದ್ಧವಾದ ಉಸಿರಾಟವಾಗುತ್ತಿದೆಯೆ ಎಂದು ಪರೀಕ್ಷಿಸಿಕೊಳ್ಳುವುದು ಮನಸ್ಸನ್ನು ಶಾಂತಗೊಳಿಸುತ್ತದೆ. ಆದಾಗ್ಯೂ ಯೋಗನಿದ್ರೆ , ಆಸನಗಳು ಮತ್ತು ಪ್ರಾಣಾಯಾಮಗಳು ಉದ್ದೇಶಪೂರ್ವಕವಾದ ದೈಹಿಕ ಮತ್ತು ಮಾನಸಿಕ ಅಭ್ಯಾಸಗಳ ಮೂಲಕ ಆಲೋಚನೆಯ ಪ್ರಕ್ರಿಯೆಯನ್ನು ನಿಗ್ರಹಿಸುತ್ತವೆ. ಆದರೆ ಅದೇ ಧ್ಯಾನದಲ್ಲಿ ಈ ಪ್ರಕ್ರಿಯೆಯು ಹೆಚ್ಚು ಮೃದು(ಸೌಮ್ಯ) ವಾಗಿರುತ್ತದೆ. ಇದರಲ್ಲಿ ಒಂದು ಕಡೆ ಧ್ಯಾನದ ಕೇಂದ್ರದಿಂದ ಆಲೋಚನೆಗಳನ್ನು ದೂರಕ್ಕೆ ಅಟ್ಟುವ ಕ್ರಿಯೆ ನಡೆದರೆ ಇನ್ನೊಂದು ಕಡೆ ದೃಶ್ಯ ಮತ್ತು ಶ್ರವ್ಯ ಪ್ರತೀಕಗಳ ಮೇಲೆ ಮನಸ್ಸನ್ನು ಸ್ಥಿರವಾಗಿ ಕೇಂದ್ರೀಕರಿಸುವ ಕ್ರಿಯೆ ನಡೆಯುತ್ತಿರುತ್ತದೆ. ಧ್ಯಾನಮಾಡುವಾಗ ಮನಸ್ಸಿನ ಮುಂದೆ ದೊಡ್ಡ ಸವಾಲು ಇರುತ್ತದೆ. ಕಾರಣ ನಿಯಂತ್ರಣಗಳು ಕಡಿಮೆ ಇರುತ್ತವೆ. ಈ ಸ್ಥಿತಿಯು ಸಂತೋಷದ, ಅಷ್ಟೇ ಅಲ್ಲ, ಆನಂದದ ಸ್ಥಿತಿ. ಈ ಆನಂದದ ಜೊತೆ ಜೊತೆಗೇ 'ಅಹಂ' ನ ಎಲ್ಲೆಗಳ ನಾಶದ ಭಾವನೆಯೂ ಸೇರಿಕೊಳ್ಳುತ್ತದೆ. ಈ

ಸ್ಥಿತಿಯಲ್ಲಿ ನೀವು ನೀವಷ್ಟೇ ಇರುವುದಿಲ್ಲ; ನಿಮ್ಮ ಸುತ್ತಣ ಪರಿಸರದ ನಿರಂತರತೆಯೊಂದಿಗೆ ನೀವು ಇರುತ್ತೀರಿ. ನೀವು ಮೊದಲು ಏನಾಗಿದ್ದಿರಿ ಈಗ ಅದರ ವಿಸ್ತಾರವಾಗಿರುವಿರಿ.

ಒಮ್ಮೆ ನೀವು ಧ್ಯಾನದ ಸ್ಥಿತಿಯಿಂದ ಹೊರಕ್ಕೆ ಬಂದ ಮೇಲೆ, ಈ ವಿಸ್ತೃತ ಪ್ರಜ್ಞೆಯ ಸ್ಥಿತಿ ನಿಮ್ಮೊಂದಿಗೆ ಸ್ವಲ್ಪ ಹೊತ್ತು ಉಳಿದಿರುತ್ತದೆ. ನಿಮ್ಮ ಸುತ್ತಣ ಜನರೊಂದಿಗೆ ನೀವು ಒಂದೇ ಶ್ರುತಿಯಲ್ಲಿರುವಂಥ ಅನುಭವ ನಿಮ್ಮ ಮನಸ್ಸಿಗೆ ಉಂಟಾಗುತ್ತದೆ. ಇತರರೊಂದಿಗೆ ನೀವು ತಾದಾತ್ಮ್ಯದ ಅನುಭವವನ್ನು ಹೊಂದುತ್ತೀರಿ. ಹಾಗೂ ಬೇರೆಯವರ ವಿಷಯಕ್ಕೆ ಹೆಚ್ಚು ಸಹಾನುಭೂತಿಪರರಾಗುತ್ತೀರಿ. ನಿಮ್ಮೊಂದಿಗೆ ಬಹುಕಾಲ ಮುಂದುವರಿಯುವ ಸಂತೋಷ ಮತ್ತು ಆನಂದವು ನಿಮಗೆ ಹೆಚ್ಚಿನ ಚೈತನ್ಯದ ಅನುಭವವನ್ನು ಉಂಟುಮಾಡುತ್ತದೆ. ಕೆಲಸ ಮಾಡುವ ಸಾಮರ್ಥ್ಯ ಮತ್ತು ಮನಸ್ಸನ್ನು ಏಕಾಗ್ರಗೊಳಿಸುವ ಸಾಮರ್ಥ್ಯ ಎರಡೂ ಹೆಚ್ಚುತ್ತದೆ. ನಿದರ್ಶನಕ್ಕೆ ನೀವು ಒಂದು ಪುಸ್ತಕವನ್ನು ಓದುತ್ತಿದ್ದೀರಿ ಎಂದಾದರೆ, ನೀವು ಓದಿದ್ದರ ಕುರಿತಂತೆ ಯಾವುದೇ ಬಗೆಯ ಮಾನಸಿಕ ವಿಶ್ಲೇಷಣೆ ನಡೆಸದೆಯೆ ಹೆಚ್ಚು ಶೀಘ್ರವಾಗಿ ಅರ್ಥವನ್ನು ಗ್ರಹಿಸುವುದು ಸಾಧ್ಯವಾಗುತ್ತದೆ. ಇದು ಹೀಗೇಕಾಗುತ್ತದೆಂದರೆ, ನೀವು ಏನೇ ಮಾಡುತ್ತಿದ್ದರೂ ಅದರಲ್ಲಿ ಹೊರಗಿನ ಆಲೋಚನೆಗಳು ಮಧ್ಯೆ ಪ್ರವೇಶಿಸುವುದು ಕಡಿಮೆಯಾಗುತ್ತದೆ.

ಇನ್ನೊಂದು ಮಹತ್ವದ ಪರಿಣಾಮವೆಂದರೆ, ನಿಮ್ಮ ಮನಸ್ಸಿನಿಂದ ಭೂತಕಾಲದ ಮತ್ತು ಭವಿಷ್ಯದ ಆಲೋಚನೆಗಳು ದೂರವಾಗುತ್ತವೆ. ಆಲೋಚನೆಗಳ ಸಂಖ್ಯೆ ಕಡಿಮೆಯಾಗುವುದಷ್ಟೇ ಅಲ್ಲದೆ, ಅವು ಸಾಮಾನ್ಯವಾಗಿ ಮಾಡುವಂತೆ ನಿಮ್ಮ ಹಳೆಯ ನೆನಪುಗಳನ್ನು ಇಲ್ಲವೆ ಭವಿಷ್ಯದ ನಿರೀಕ್ಷೆಗಳನ್ನು ಪ್ರಚೋದಿಸುವ ಕೆಲಸ ಮಾಡುವುದಿಲ್ಲ.

ನಾನು ಇದುವರೆಗೆ ವಿವರಿಸಿರುವುದೆಲ್ಲವೂ ನೀವು ಧ್ಯಾನವನ್ನು ಚೆನ್ನಾಗಿ ಮಾಡಿದಾಗ ಅನುಭವಕ್ಕೆ ಬರುತ್ತದೆ. ಕೆಲವೊಮ್ಮೆ ನಿಮ್ಮ ಮನಸ್ಸು ಕ್ಷುಬ್ಧಗೊಂಡಿದ್ದರೆ ನಿಮ್ಮ ಆಲೋಚನೆಗಳೊಂದಿಗೆ ಸೆಣಸುತ್ತೀರಿ. ಹತಾಶೆ, ಖಿನ್ನತೆ ಮತ್ತು ಸಿಟ್ಟು, ಸೆಡವು ಮುಂತಾದ ಭಾವನಾತ್ಮಕ ಪ್ರತಿಕ್ರಿಯೆಗಳು ಹಿಂಬಾಲಿಸಿ ಬರುತ್ತವೆ. ಅಂಥ ಸಂದರ್ಭಗಳಲ್ಲಿ ಧ್ಯಾನವನ್ನು ಬಿಟ್ಟುಕೊಡುವುದು ಒಳ್ಳೆಯದು. ಅದರ ಬದಲಿಗೆ ಯೋಗನಿದ್ರೆಯಂಥ ಒಂದು ನಿರ್ದೇಶಿತ ಕ್ರಿಯೆಯಲ್ಲಿ ತೊಡಗಿಕೊಳ್ಳುವುದು ಹೆಚ್ಚು ಫಲಪ್ರದವೆನಿಸುತ್ತದೆ.

ಯೋಗಾಭ್ಯಾಸದಿಂದ ಮನೋವೈಜ್ಞಾನಿಕ ಪ್ರಯೋಜನಗಳು ಸಾಧ್ಯವೆಂಬ ನಿರ್ಣಯಕ್ಕೆ ನಾನು ತಲುಪಿದೆ. ಅವುಗಳನ್ನು ಕುರಿತಾದ ಚರ್ಚೆಯನ್ನು ಅನಂತರ ಕೈಗೆತ್ತಿಕೊಳ್ಳುವೆ.

□□

ಪಯಣ: ಯೋಗದ ಬಗೆಗಿನ ನನ್ನ ಅನುಭವಗಳನ್ನು ಕುರಿತ ಮರುಚಿಂತನೆಗಳು

ಹಿಂದಿನ ಅಧ್ಯಾಯದಲ್ಲಿ ಯೋಗದ ಕೆಲವು ವಿಶಿಷ್ಟ ಅಭ್ಯಾಸಗಳು ನನ್ನ ಮನಸ್ಸಿನ ಮೇಲೆ ಮಾಡಿದ ಪರಿಣಾಮದ ಬಗ್ಗೆ ಚರ್ಚಿಸಿದ್ದೇನೆ. ನನ್ನ ಯೋಗಾಭ್ಯಾಸದ ಒಂದು ವರ್ಷದ ಅವಧಿಯಲ್ಲಿ ದಿನನಿತ್ಯದ ಕಾರ್ಯ ಕಲಾಪಗಳೊಂದಿಗೆ ಜನರನ್ನು ಭೇಟಿಮಾಡುವುದು, ನನ್ನ ಸಹೋದ್ಯೋಗಿಗಳೊಂದಿಗೆ ಮಾತು-ಕತೆ, ರೋಗಿಗಳನ್ನು ನೋಡುವುದು, ಗೃಹಕೃತ್ಯಗಳ ನಿರ್ವಹಣೆ ಇವೆಲ್ಲ ನಡೆದೇ ಇತ್ತು. ಯೋಗಾಭ್ಯಾಸವು ನನ್ನ ದೈನಂದಿನ ಜೀವನವನ್ನು ಎಷ್ಟರ ಮಟ್ಟಿಗೆ ಪ್ರಭಾವಿಸಿತು? ಇತರರೊಂದಿಗೆ ವ್ಯವಹರಿಸುವಲ್ಲಿನ ನನ್ನ ಕೌಶಲವನ್ನು ಇವು ಇನ್ನಷ್ಟು ಉತ್ತಮಪಡಿಸಿದುವೆ? ಇವುಗಳಿಂದಾಗಿ ನನ್ನ ವ್ಯಕ್ತಿತ್ವದಲ್ಲಿ ದೀರ್ಘಕಾಲಿಕ ಬದಲಾವಣೆಗಳೇನಾದರೂ ಉಂಟಾದುವೆ? ಈ ಮುಂಚೆ ಇದ್ದವೆಂದು ನನಗೆ ಗೊತ್ತಿರದ ಆಯಾಮಗಳು ನನ್ನ ಅರಿವಿಗೆ ಬಂದವೆ? ಎಲ್ಲಕ್ಕಿಂತ ಮುಖ್ಯವಾಗಿ ಗುರುಗಳೊಂದಿಗಿನ ನನ್ನ ಸಂಬಂಧದ ಸ್ವರೂಪ ಯಾವ ರೀತಿ ಇತ್ತು?

ಈ ಪ್ರಶೆಗಳಿಗೆ ಇಲ್ಲಿ ಉತ್ತರಿಸುವ ಪ್ರಯತ್ನ ಮಾಡುತ್ತೇನೆ. ಈ ವಿಷಯದಲ್ಲಿ ನನ್ನ ದಿನಚರಿಯ (Diary) ಪುಸ್ತಕ, ನನ್ನ ಕನಸುಗಳ ದಿನಚರಿ, ನನ್ನ ಪತ್ನಿ ನನ್ನ ಬಗ್ಗೆ ಗಮನಿಸಿ ಬರೆದಿಟ್ಟಿರುವ 'ಗಮನಿಕೆಯ ಟಿಪ್ಪಣಿ', ನನ್ನ ದಿನಚರಿಯಲ್ಲಿ ನಾನು ಮಾಡಿರುವ ನಮೂದು (ದಾಖಲೆ)ಗಳ ಬಗ್ಗೆ ನನ್ನ ಗುರುಗಳು ಮಾಡಿರುವ ಟಿಪ್ಪಣಿ- ಇವೆಲ್ಲವೂ ನನ್ನ ಮಾಹಿತಿಯ ಮೂಲಗಳು.

ನನ್ನನ್ನು ನಾನೇ ಕಂಡುಕೊಂಡಂತೆ

ಯೋಗದಿಂದ ಮನಶ್ಶಾಂತಿ ಉಂಟಾಗುತ್ತದೆಂಬುದು ಒಂದು ಸಾಮಾನ್ಯ ಗ್ರಹಿಕೆ. ಪ್ರಾರಂಭಿಕ ಹಂತದಲ್ಲಿ ಯೋಗಾಭ್ಯಾಸವು ಆಂತರಿಕ ತಳಮಳವನ್ನು ಹೆಚ್ಚಿಸುತ್ತದೆಂದು ಖಡಾಖಂಡಿತವಾಗಿ ಹೇಳಲಿಚ್ಛಿಸುತ್ತೇನೆ.

ಯೋಗವು ಸ್ವಯಂ ಜಾಗೃತಿಯನ್ನುಂಟು ಮಾಡುವಲ್ಲಿ (ತನ್ನನ್ನು ತಾನು ಅರಿತುಕೊಳ್ಳುವಲ್ಲಿ) ನೆರವಾಗುತ್ತದೆಂದು ಈಗಾಗಲೇ ಹೇಳಿದ್ದೇನೆ. ಇದು ವ್ಯಕ್ತಿತ್ವದ ನಕಾರಾತ್ಮಕ ಅಂಶಗಳಿಗೂ ಅನ್ವಯಿಸುತ್ತದೆ. ಹೀಗೆ ತನ್ನಲ್ಲಿನ ನಕಾರಾತ್ಮಕ ಅಂಶಗಳ ಬಗ್ಗೆ ತಿಳಿಯುವುದು ಸಾಕಷ್ಟು ಕ್ಷೋಭೆಯನ್ನುಂಟುಮಾಡುವಂಥ ಮತ್ತು ದುಃಖದಾಯಕವಾದ ಸಂಗತಿ.

ಯೋಗ ಸೂತ್ರದ ಭಾಷೆಯಲ್ಲಿ ಹೇಳುವುದಾದರೆ ವ್ಯಕ್ತಿಗೆ ವಿಕ್ಷೇಪಗಳ ಬಗ್ಗೆ ಅಂದರೆ ಯೋಗಸಾಧನೆಗೆ ಇರುವ ಅಡಚಣೆಗಳ ಬಗ್ಗೆ ಅರಿವಾಗುತ್ತದೆ. ನನ್ನ ವಿಷಯದಲ್ಲಿ ಹೇಳಬೇಕೆಂದರೆ ಅನೇಕ ಅಡಚಣೆಗಳ ಬಗ್ಗೆ ನನಗೆ ಅರಿವಾಯಿತು.

ನಾನು ಬೆನ್ನು ನೋವಿನಿಂದ ದೀರ್ಘ ಕಾಲದಿಂದ ಬಳಲುತ್ತಿದ್ದೇನೆ. ಯೋಗಾಭ್ಯಾಸದ ಪ್ರಾರಂಭಿಕ ತಿಂಗಳುಗಳಲ್ಲಿ ನನ್ನ ಬೆನ್ನುನೋವು ಉಲ್ಬಣಿಸಿತು ಮತ್ತು ಯಾವಾಗಲೂ ಈ ನೋವಿನ ನೆನಪಾಗುತ್ತಿತ್ತು. ನಿದ್ರೆ ಮಾಡುತ್ತಿದ್ದಾಗಲೂ ಇದರ ತೊಂದರೆ ಇರುತ್ತಿತ್ತು. ಅಷ್ಟೇ ಅಲ್ಲ, ಧ್ಯಾನ ಮಾಡುತ್ತಿರುವಾಗಲೂ ನನ್ನ ಮನಸ್ಸಿನಲ್ಲೆಲ್ಲಾ ಇದರ ನೋವೇ ಕವಿದಿರುತ್ತಿತ್ತು. ಧ್ಯಾನ ಮಾಡುವಾಗ ಆಲೋಚನೆಗಳ ವಿಷಯಕ್ಕೆ ಹೇಗೆ ಮಾಡುತ್ತಿದ್ದೆನೋ ಈ ನೋವಿನ ವಿಷಯಕ್ಕೂ ಹಾಗೆಯೇ ಮಾಡಬೇಕೆಂದು ಹೇಳಿದರು: ಅಂದರೆ ಅದನ್ನು ಗಮನಿಸಬೇಕು ಹಾಗೂ ನನ್ನ ಪ್ರಜ್ಞೆಯಿಂದ ಜಾರಿಹೋಗಲು ಬಿಡಬೇಕು. ಏನೇ ಆದರೂ ಈ ಬೆನ್ನು ನೋವು ಕೆಲವೊಮ್ಮೆ ನನ್ನನ್ನು- "ನಾನು ಶಾಶ್ವತವಾಗಿ ಅಂಗ ವಿಕಲನಾಗಿಬಿಡುವೆನೆ? ನಾನು ಅಂಗವಿಕಲನಾವುದರಿಂದ ಸಂಪಾದನೆ ಮಾಡಲಾಗದಿದ್ದರೆ ನನ್ನ ಕುಟುಂಬದ ಗತಿಯೇನು, ಅದು ಹೇಗೆ ತಾನೆ ಬಾಳ್ವೆ ನಡೆಸಲು ಸಾಧ್ಯ" ಎಂದೆಲ್ಲ ಕಂಗಾಲು ಮಾಡಿಬಿಡುತ್ತಿತ್ತು. ನನ್ನ ವಿಕೃತ ಆಲೋಚನೆಗಳು ವಿಲಕ್ಷಣದ ಅತಿಗೆ ಹೋಗಿಬಿಡುತ್ತಿದ್ದವು.

ನಾನು ಬೇರೆಯವರನ್ನು ಬಹು ಸುಲಭದಲ್ಲಿ ನಂಬಿಬಿಡುತ್ತೇನೆ. ಆದರೆ ನನ್ನದೇ ತೀರ್ಮಾನಗಳನ್ನು ಮತ್ತು ಕ್ರಿಯೆಗಳನ್ನು ತೀವ್ರವಾದ ವಿಶ್ಲೇಷಣೆಗೆ ಒಳಪಡಿಸುವ ಅಭ್ಯಾಸ ನನಗಿದೆ. ಯೋಗಾಭ್ಯಾಸದ ಆರಂಭದ ತಿಂಗಳುಗಳಲ್ಲಿ ಈ ಆತ್ಮವಿಶ್ಲೇಷಣೆ ನೋವುಂಟು ಮಾಡುವಷ್ಟು ಎದ್ದುಕಾಣುತ್ತಿತ್ತು. ಯೋಗನಿದ್ರೆಯ ಅಭ್ಯಾಸ ಶುರುಮಾಡಿದ ಮೂರನೇ ದಿವಸವೇ ನನ್ನ ದಿನಚರಿಯಲ್ಲಿ ಹೀಗೆ ದಾಖಲಿಸಿದೆ: "ನಾನೇನು ಆಟವಾಡುತ್ತಿದ್ದೇನೆಯೆ? ಈ ಸಂಶೋಧನೆ ಏನಾದರೂ ಉಪಯೋಗಕ್ಕೆ ಬರುತ್ತದೆಂದು ನಾನು ನಿಜಕ್ಕೂ ನಂಬುತ್ತೇನೆಯೆ? ಇದರಿಂದ ಏನೊಂದು ಚೂರೂ ಪ್ರಯೋಜನವಾಗದಿದ್ದಲ್ಲಿ ನನ್ನ ಸಹೋದ್ಯೋಗಿಗಳನ್ನು ಹೇಗೆ ತಾನೆ ಎದುರಿಸಬಲ್ಲೆ?"

ಯೋಗವು ನನ್ನ ಅತಿಯಾದ ಅಸೂಯಾ ಸ್ವಭಾವದ ಬಗ್ಗೆ ನನಗೆ ಅರಿವುಂಟುಮಾಡಿತು. ಇದು ನನಗೆ ಭಾರೀ ಆಶ್ಚರ್ಯವನ್ನುಂಟುಮಾಡಿತು. ಇದಕ್ಕೆ ಮುಂಚೆ ನನಗೆ ಈ ನನ್ನ 'ವಿಕ್ಷೇಪದ'(ಸ್ವಭಾವದ) ಬಗ್ಗೆ ಅರಿವಿರಲಿಲ್ಲ. ನನ್ನ ಸಹೋದ್ಯೋಗಿಯೊಬ್ಬರು ಒಂದು ಬಹಳ ಮುಖ್ಯವಾದ ಸಭೆಗೆ ಹೋದಾಗ ನನಗೆ ಅಸೂಯೆಯಾಯಿತು. (ನಾನು ಯಾವುದೇ ಸಭೆಗೆ ಹಾಜರಾಗುವ ಅಗತ್ಯವಿಲ್ಲ ಎನ್ನುವ ಕಾರಣಕ್ಕಾಗಿಯೇ ನನಗೆ ಒಂದು ವರ್ಷ ರಜೆ ನೀಡಿದ್ದಾಗ್ಯೂ). ಅಭ್ಯಾಸದ ತರಗತಿಗಳಲ್ಲಿ ಗುರುಗಳು ನನ್ನ ಸಹ ಅಭ್ಯಾಸಿಗಳ ಬಗ್ಗೆ ಹೆಚ್ಚು ಗಮನ ನೀಡುತ್ತಿರುವಂತೆ ಕಂಡುಬಂದಾಗಲೂ ಆ ಸಹ ಅಭ್ಯಾಸಿಗಳ ಬಗ್ಗೆ ನಾನು ಅಸೂಯಾಪರನಾದೆ.

ನನ್ನ ನ್ಯಾಯ ಪ್ರಜ್ಞೆಯ ಬಗೆಗೆ ಯಾವಾಗಲೂ ಹೆಮ್ಮೆಪಡುತ್ತಿದ್ದೆ. ತರಬೇತಿಯ ಈ ಅವಧಿಯಲ್ಲಿ ಅನ್ಯಾಯದೊಂದಿಗೆ ಪ್ರಭಾವಪೂರ್ಣವಾಗಿ ವ್ಯವಹರಿಸುವಲ್ಲಿ ನನ್ನ ನ್ಯಾಯದ ಅಗತ್ಯವು ನನಗೆ ಯಾವುದೇ ಬಗೆಯ ನೆರವು ನೀಡದೆ ಇದ್ದರೂ ನನ್ನ ಮನಸ್ಸಿನ ಶಾಂತಿಯನ್ನು ಹಾಳುಮಾಡುತ್ತಿದೆ ಎಂದು ನನಗೆ ಅರಿವಾಯಿತು. ನನ್ನ ಜೀವನದಲ್ಲಿ ಆಗುತ್ತಿದ್ದ ಅನ್ಯಾಯಗಳ ವಿರುದ್ಧ ನಾನು ಬಂಡಾಯವೇಳಬೇಕೆಂಬ ಭಾವನೆ ಉಂಟಾದ ಅನೇಕ ಘಟನೆಗಳು ಇದ್ದುವು. ನನ್ನ ದಿನಚರಿಯಲ್ಲಿನ ಪ್ರಾರಂಭದ ಟಿಪ್ಪಣಿಗಳು ಇಂಥ ಕಾಳಜಿಗಳಿಂದಲೇ ತುಂಬಿವೆ. ನನ್ನ ಕನಸಿನ ದಿನಚರಿ ಕೂಡ ಇದೇ ಅನಾರೋಗ್ಯಕರವಾದ ಪ್ರವೃತ್ತಿಯಿಂದ ಕೂಡಿದೆ. ನಿದರ್ಶನಕ್ಕೆ ಯೋಗಾಭ್ಯಾಸವನ್ನು ಪ್ರಾರಂಭಿಸಿದ ಮೊದಲ ತಿಂಗಳಿನಲ್ಲೇ ನನಗೆ ಬಿದ್ದ ಒಂದು ಕನಸನ್ನು ಉಲ್ಲೇಖಿಸುತ್ತೇನೆ:

ನನ್ನ ಮಿತ್ರರೊಂದಿಗೆ ರಸ್ತೆಯಲ್ಲಿ ವಾಕಿಂಗ್ ಹೋಗುತ್ತಿದ್ದೇನೆ. ನಾಲ್ಕು ಜನರು ರಸ್ತೆಯಲ್ಲಿ ನಡೆದುಹೋಗುತ್ತಿದ್ದವರನ್ನು ಹಿಡಿದುಕೊಂಡು ನಿರ್ದಯವಾಗಿ ಗಾಜಿನ ಚೂರುಗಳಿಂದ ಕತ್ತರಿಸುತ್ತಿದ್ದಾರೆ. ದೇಹಗಳ ಭಾಗಗಳು ಮತ್ತು ಚೂರುಗಳು ಎಲ್ಲ ಕಡೆ ಚೆದುರಿಬಿದ್ದಿವೆ. ರಸ್ತೆಯ ಮೇಲಿದ್ದ ಇತರರು ಅದನ್ನು ಸುಮ್ಮನೆ ನೋಡಿ ಹೊರಟುಹೋಗುತ್ತಿದ್ದಾರೆ. ಇದನ್ನು ನೋಡಿ ನಾನು ಚೀರಲು ಪ್ರಯತ್ನಿಸಿದೆ. ಆದರೆ ನನ್ನ ಸ್ನೇಹಿತರು ಚೀರುವುದರಿಂದೇನೂ ಉಪಯೋಗವಿಲ್ಲವೆಂದು ಹೇಳಿ ತಡೆದರು. ಈಗ ಏನು ನಡೆಯಿತೋ ಅದು ಅತ್ಯಂತ ಭಯಂಕರವಾದ್ದು; ಕೊಲೆಗಡುಕರಿಗೆ ಶಿಕ್ಷೆಯಾಗಬೇಕೆಂದು ನಾನು ಅವರ ಗಮನ ಸೆಳೆದೆ. ಈ ಸಣ್ಣ ವಿಷಯಕ್ಕೆ ಅತಿ ಪ್ರಾಧಾನ್ಯ ಕೊಡುವ ಅಗತ್ಯವಿಲ್ಲ; ಕಾರಣ ಈಗಿನ ದಿನಗಳಲ್ಲಿ ಯಾರೂ ಇದನ್ನು ಗಮನಕ್ಕೇ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ನಾನು ಏನಾದರೂ ಹೇಳಿದರೆ ಮುಂದಿನ ಬಲಿಪಶು ನಾನೇ ಆಗುವ ಭಯವೂ ಇತ್ತು. ಕೊಲೆಗಡುಕರು ಮುಗುಳ್ನಗುತ್ತಾರೆ–ಅಟ್ಟಹಾಸದ ನಗೆ ಬೀರುತ್ತಾರೆ–ನಾನು ಷಂಡ ಕೋಪದಿಂದ ಚೀರುತ್ತೇನೆ.

ನನ್ನ ಮನಸ್ಸನ್ನು ಈ ಮೊದಲೇ ಆಕ್ರಮಿಸಿಕೊಂಡಿದ್ದ ಇಂಥ ಭಾವನೆಗಳು ಮತ್ತು ದೈಹಿಕ ವೇದನೆಗಳು ನನ್ನನ್ನು ಅತ್ಯಂತ ಖಿನ್ನನನ್ನಾಗಿ ಮತ್ತು ಹತಾಶನನ್ನಾಗಿ ಮಾಡಿಬಿಟ್ಟವು. ನನ್ನ ಕೆಲವು ವಿಕ್ಷೇಪಗಳ ಬಗ್ಗೆ ನನಗಾಗಲೇ ಅರಿವಾಗಿತ್ತು. ಈಗ ಅವು ಬಹು ದೊಡ್ಡವಾದಂತೆ ಕಂಡುಬರುತ್ತಿದ್ದವು ಮತ್ತು ಸದಾ ನನ್ನ ಪ್ರಜ್ಞೆಯ ಮೇಲೆ ಆಘಾತವುಂಟುಮಾಡತೊಡಗಿದವು.

ಕಾಲ ಸರಿದಂತೆ, ಯೋಗಾಭ್ಯಾಸದಿಂದ ದೊರಕಿದ ವಿಶ್ರಾಂತಿ, ಈಶ್ವರ ಪ್ರಣಿಧಾನದ ವಿಷಯಕ್ಕೆ ಮಾಡಿದ ಅತ್ಯುಚ್ಚ ಪ್ರಯತ್ನಗಳಿಂದ (ಉನ್ನತ ಶಕ್ತಿಗೆ ತನ್ನನ್ನು ತಾನು ಅರ್ಪಿಸಿಕೊಳ್ಳುವುದು) ಹಾಗೂ ನನ್ನ ಗುರುಗಳ ಮಾರ್ಗದರ್ಶನದಿಂದ ನಿಧಾನವಾಗಿ ಈ ವಿಕ್ಷೇಪಗಳಿಂದ ನಾನು ಪಾರಾದೆ. ಅವುಗಳೊಂದಿಗೆ ವ್ಯವಹರಿಸುವ ಏಕೈಕ ಮಾರ್ಗವೆಂದರೆ ಮೊದಲಿಗೆ ಅವು ಇರುವುದನ್ನು ಒಪ್ಪಿಕೊಂಡುಬಿಟ್ಟು ಅನಂತರ ಅವುಗಳನ್ನು ನೇರವಾಗಿ ಎದುರಿಸುವುದು.

ಪ್ರಾರಂಭಿಕ ಹಂತದಲ್ಲಿ ಕೆಲವು ಇನ್ನಿತರೆ ಅಸಾಧಾರಣ ಅನುಭವಗಳಾದವು. ಅನೇಕ ದಿನಗಳವರೆಗೆ ನನಗೆ ವಿಪರೀತ ಹಸಿವೆ ಎನಿಸುತ್ತಿತ್ತು. ಇನ್ನು ಕೆಲವೊಮ್ಮೆ ಈ ಹಸಿವೆಯೇ ಆಗುತ್ತಿರಲಿಲ್ಲ. ಹಸಿವೆ ಎನ್ನಿಸಿದಾಗ ಮನಸ್ಸು ಖಿನ್ನವೇ ಆಗಿರುತ್ತಿತ್ತು. ಕೆಲವು ದಿನ ತೀವ್ರವಾದ ಲೈಂಗಿಕ ಬಯಕೆಗಳ ಅನುಭವವೂ ಆಗುತ್ತಿತ್ತು.

ಮನಸ್ಸಿನ ಈ ತೀವ್ರತರವಾದ ಸ್ಥಿತಿಗಳ ಬಗ್ಗೆ ಹಾಗೂ ಶಾರೀರಿಕ ಅಗತ್ಯಗಳ ಬಗ್ಗೆ ಗುರುಗಳೊಂದಿಗೆ ನಾನು ಚರ್ಚಿಸಿದೆ. ಯೋಗಾಭ್ಯಾಸದ ಪ್ರಾರಂಭದ ದಿನಗಳಲ್ಲಿ ಇದೆಲ್ಲವೂ ತೀರ ಸಹಜ ಎಂದು ಅವರು ತಿಳಿಸಿದರು ಈ ಕಾರಣಕ್ಕಾಗಿಯೇ ಯೋಗ ಮಾಡಲು ಪ್ರಾರಂಭಿಸಿದ ಅನೇಕರು ಬಹಳ ಬೇಗ ಅದನ್ನು ಬಿಟ್ಟುಬಿಡುತ್ತಿದ್ದರು. ಯೋಗದಿಂದ ಹಾರ್ಮೋನ್ ಸಂಬಂಧಿಯಾದ ಬದಲಾವಣೆ ಏನಾದರೂ ಆಗುತ್ತದೆಯೋ ಹೇಗೆ? ಎಂದು ನಾನು ಆಶ್ಚರ್ಯಪಟ್ಟೆ. ಇದನ್ನು ವಸ್ತುನಿಷ್ಠವಾಗಿ ಪರೀಕ್ಷಿಸಬಹುದೆ? ಎಂದು ಕೂಡ ಯೋಚಿಸಿದೆ.

ಯೋಗದಲ್ಲಿ ನಾನು ಪ್ರಗತಿ ಸಾಧಿಸುತ್ತ ಹೋದಂತೆಲ್ಲ ವಿಕ್ಷೇಪಗಳ ಬಗೆಗಿನ ನನ್ನ ವ್ಯಸ್ತತೆ ಮನಸ್ಸಿನ ಏರಿಳಿತಗಳು ಎಲ್ಲವೂ ಕ್ರಮೇಣ ಸ್ತಿಮಿತಕ್ಕೆ ಬಂದವು. ನಾನು ಶಾಂತ ಸ್ಥಿತಿಗೆ ಬಂದೆ. ಇದರ ನಂತರ ಒಂದು ಚೈತನ್ಯಶಾಲಿಯಾದ ದೃಢ ಸ್ಥಿತಿಯೂ ಬಂದಿತು.

ಮುಂದಿನ ಹಂತವನ್ನು ಸರಿಯಾಗಿ ಹೇಳಬೇಕೆಂದರೆ 'ನಡೆದುಕೊಂಡು ಹೋಗಲಿ ಬಿಡು' ಎಂದು ಹೇಳಬಹುದಾದ ಹಂತವೆಂದು ಹೇಳಬಹುದು. ಕಾರಣ ಕ್ರಮೇಣ ನನ್ನ ಸುತ್ತ ಮುತ್ತಲಿನ ಭಾವನೆಗಳು ಮತ್ತು ಆಗುಹೋಗುಗಳ ಬಗೆಗೆ ಯಾವುದೇ ಬಗೆಯ ಪ್ರತಿಕ್ರಿಯೆ ತೋರದೆ ಅವುಗಳನ್ನು ಎಚ್ಚರಿಕೆಯಿಂದ ಗಮನಿಸುವುದರಲ್ಲಿ ಹೆಚ್ಚು ಯಶಸ್ವಿಯಾದೆ. ನನ್ನ ಗುರುಗಳು ಇದನ್ನು ಒಂದು ರೀತಿಯ 'ಸಾಕ್ಷಿ ಮನೋಧರ್ಮವನ್ನು ಅಳವಡಿಸಿಕೊಳ್ಳುವುದು' ಎಂದು ವರ್ಣಿಸಿದರು. ಈ ಹಂತದಲ್ಲಿ ನನ್ನ ಆಲೋಚನೆಗಳು ಸಾಮಾನ್ಯವಾಗಿ ನಿಧಾನ ಗತಿಯವಾಗಿದ್ದವು. ನನ್ನ ಮಾತಾಡುವ , ತಿನ್ನುವ, ಅಥವಾ ನಿದ್ರೆಯ ಅಗತ್ಯಗಳು ಕಡಿಮೆಯಾಗಿದ್ದವು. ನನ್ನ ಸಹಿಷ್ಣುತೆ ಹೆಚ್ಚಿತು. ಬೇರೆಯವರ ವಿಷಯಕ್ಕೆ ನನ್ನ ಸಹಾನುಭೂತಿ ವೃದ್ಧಿಸಿತು. ನನ್ನ ಶಕ್ತಿ ಸಾಮರ್ಥ್ಯಗಳು ಹೆಚ್ಚಿದವು. ಆಯಾಸದ ಅನುಭವ ಕಡಮೆಯಾಯಿತು. ಇದರ ಜೊತೆಗೆ ಒಂದು ಸಂದರ್ಭದ ಹಿಂದು ಮುಂದುಗಳನ್ನೆಲ್ಲ ಚೆನ್ನಾಗಿ ಪರಿಶಿಲಿಸುವವರೆಗೂ ತೀರ್ಮಾನಗಳನ್ನು ತೆಗೆದುಕೊಳ್ಳುವುದನ್ನು ಮುಂದೂಡಲು ಸಿದ್ಧನಿರುತ್ತಿದ್ದೆ. ಆದರೆ ಒಮ್ಮೆ ತೀರ್ಮಾನ ತೆಗೆದುಕೊಂಡಾದ ಮೇಲೆ ಅದರ ಬಗ್ಗೆ ಪ್ರಶ್ನಿಸುವ ಗೊಡವೆಗೆ ಹೋಗುತ್ತಿರಲಿಲ್ಲ. 'ಒಂದು ವೇಳೆ ನಾನು ತಪ್ಪು ನಿರ್ಣಯ ಕೈಗೊಂಡಿದ್ದರೆ ತಾನೆ ಏನಂತೆ' ಎಂದು ನನಗೆ ನಾನೇ ಹೇಳಿಕೊಳ್ಳಬಲ್ಲವನಾಗಿದ್ದೆ. ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಬೇರೊಬ್ಬರೊಂದಿಗೆ ಸಮಾಲೋಚಿಸುವ ಅಗತ್ಯ ಕಡಿಮೆಯಾಯಿತು. ನಾನು ತೆಗೆದುಕೊಂಡ ಕ್ರಮಗಳ ಬಗ್ಗೆ ಇತರರಿಗೆ ವಿವರಿಸುವುದು ಮುಖ್ಯ ಎಂದು ನನಗನಿಸುತ್ತಿರಲಿಲ್ಲ. ಅಥವಾ ನನ್ನ ಕ್ರಮ

ಬೇರೆಯವರಿಗೆ ನೋವುಂಟು ಮಾಡಿರಬಹುದಾದ್ದರ ಬಗ್ಗೆಯೂ ಕ್ಷಮೆ ಯಾಚಿಸುವುದು ಮುಖ್ಯ ಎಂದೂ ನನಗನಿಸಲಿಲ್ಲ. ನನ್ನ ಭಾವುಕತೆ ಕಡಿಮೆಯಾಯಿತು ಮತ್ತು ನಾನು ಹೆಚ್ಚು ಹೆಚ್ಚು ಸ್ವೀಕರಿಸುವ ಪ್ರವೃತ್ತಿಯವನಾದೆ.

ನನ್ನ ಡೈರಿಯು (ದಿನಚರಿ ಪುಸ್ತಕವು) ನನ್ನಲ್ಲಿ ಉಂಟಾದ ಈ ಬಗೆಯ ಬೆಳವಣಿಗೆಯನ್ನು ನಿದರ್ಶಿಸುವ ಘಟನೆಗಳಿಂದ ತುಂಬಿಹೋಗಿದೆ. ಇಲ್ಲಿ ಅದರಿಂದ ಆಯ್ದ ಕೆಲವು ಘಟನೆಗಳನ್ನು ಹೇಳಿದೆ:

ನನ್ನ ಒಬ್ಬ ಗೆಳೆಯನ ಆಹ್ವಾನದ ಮೇರೆಗೆ ಅವನನ್ನು ನೋಡಲು ಹೋಗಿದ್ದೆ. ನನ್ನ ಸ್ನೇಹಿತ ಇರುತ್ತಿದ್ದ ಜಾಗಕ್ಕೆ (ಅದೊಂದು ಅತಿಥಿ ಗೃಹ) ಹೋದಾಗ ಅವನು ಇನ್ಯಾರೊಂದಿಗೋ ಮಾತುಕತೆಯಾಡುವುದರಲ್ಲಿ ನಿರತನಾಗಿದ್ದ. ಪಕ್ಕದ ಕೊಠಡಿಯಲ್ಲಿ ಕಾಯುವಂತೆ ನನಗೆ ತಿಳಿಸಿದ. ಹತ್ತು ನಿಮಿಷಗಳು ಕಳೆದ ನಂತರವೂ ಅವನು ಬರದೆ ಇದ್ದಾಗ ನಾನು ನನ್ನೊಂದಿಗೆ ಕೊಂಡೊಯ್ದಿದ್ದ ದಿನಚರಿಯ ಪುಸ್ತಕ ತೆರೆದು ಬರೆಯತೊಡಗಿದೆ. ಎರಡು ಗಂಟೆ ಕಳೆದ ಮೇಲೆ ಸ್ನೇಹಿತನು ಕಾಣಿಸಿಕೊಂಡು ತಾನೊಂದು ಅತ್ಯಂತ ಬಿಕ್ಕಟ್ಟಿನ ಸಮಸ್ಯೆಯನ್ನು ನಿರ್ವಹಿಸುತ್ತಿದ್ದುದಾಗಿ ತಿಳಿಸಿದನು. ನನ್ನ ಸ್ನೇಹಿತನ ವಿಷಯಕ್ಕೆ ನನ್ನ ಮನಸ್ಸಿನಲ್ಲಿ ಕಹಿ ಭಾವನೆ ಉಂಟಾಗಲಿಲ್ಲ. ನಾವು ಅಲ್ಲಿಂದ ಮುಂದೆ ಹೊರಟೆವು.

ಮೊದಲಾಗಿದ್ದರೆ ನಾನು ತುಂಬಾ ಚಡಪಡಿಸುತ್ತಿದ್ದೆ, ಘಾಸಿಗೊಳ್ಳುತ್ತಿದ್ದೆ ಮತ್ತು ಸಿಟ್ಟಾಗುತ್ತಿದ್ದೆ; ಬಹುಶಃ ಅಲ್ಲಿಂದ ಹೊರಟುಬಿಡುತ್ತಿದ್ದೆ.

ನನ್ನ ಹೆಂಡತಿಯೊಂದಿಗೆ ಏನೋ ವಾದಮಾಡುತ್ತಿದ್ದೆ. ಆಕೆ ವಿಪರೀತ ನೊಂದುಕೊಂಡಳು ಮತ್ತು ತನ್ನ ಮೌನದ ಹೊದಿಕೆಯೊಳಗೆ ಹುದುಗಿಕೊಂಡಳು. ನಾನು ಏನೂ ಆಗಿಯೇ ಇಲ್ಲವೇನೋ ಎಂಬಂತೆ ನಡೆದುಕೊಂಡೆ ಹಾಗೂ ಇದರ ಬಗ್ಗೆ ವಿವರಿಸಬೇಕೆಂಬ ಮತ್ತು ಕ್ಷಮೆ ಕೋರಬೇಕೆಂಬ ಅನಿವಾರ್ಯತೆ ಇದೆಯೆಂದು ನನಗೆ ಅನಿಸಲಿಲ್ಲ.(ಮೊದಲಂತೂ ನಿಶ್ಚಿತವಾಗಿ ಇದು ಇದ್ದೇ ಇರುತ್ತಿತ್ತು).

ವಾಸ್ತವವಾಗಿ ಈ ರೀತಿಯ ಮನೋವೃತ್ತಿಯನ್ನು ಅಳವಡಿಸಿಕೊಂಡದ್ದರಿಂದ ಮೊದಲಿಗಿಂತ ನನಗೆ ಬೇಗ ನೆಮ್ಮದಿ ದೊರೆಯಿತು.

ನನಗೊಬ್ಬ ಅಂತರ ರಾಷ್ಟ್ರೀಯ ಖ್ಯಾತಿಯ ವಿಜ್ಞಾನಿ ಆಪ್ತಮಿತ್ರನಿದ್ದಾನೆ. ಅವನೊಮ್ಮೆ ಫೋನ್ ಮಾಡಿ–ತಾನೊಬ್ಬ ಜ್ಯೋತಿಷಿಯನ್ನು ಭೇಟಿಮಾಡಿದ್ದು, ಆ ಜ್ಯೋತಿಷಿ ಮುಂದಾಗುವ ಗಂಡಾಂತರವನ್ನು ತಡೆಗಟ್ಟಲು ಆರು ತೆಂಗಿನ ಕಾಯಿಗಳನ್ನು ಹರಿಯುವ ನೀರಿನಲ್ಲಿ ತೇಲಿಬಿಡಬೇಕೆಂದು ಸಲಹೆ ನೀಡಿದ್ದಾನೆಂದು ತಿಳಿಸಿದನು! ಮೊದಲಾಗಿದ್ದರೆ ನಾನು ಸಿಟ್ಟಾಗಿ ಒಬ್ಬ ಗೌರವಾನ್ವಿತ ವಿಜ್ಞಾನಿಯಾಗಿದ್ದೂ ಜ್ಯೋತಿಷಿಯ ಭವಿಷ್ಯವಾಣಿಯಲ್ಲಿ ನಂಬಿಕೆ ಇರಿಸಿದ್ದಕ್ಕೆ ಆ ಮಿತ್ರನನ್ನು ತರಾಟೆಗೆ ತೆಗೆದುಕೊಂಡು ಬೈಯುತ್ತಿದ್ದೆ. ಆದರೆ ಈಗ ಹಾಗೆ ಮಾಡದೆ ಐವತ್ತು ಕಿಲೋಮೀಟರ್ ದೂರದಲ್ಲಿದ್ದ ಒಂದು ಹೊಳೆಗೆ ಪ್ರವಾಸದ ಯೋಜನೆ ಹಾಕಿದೆವು. ಬೆಳಗಿನ

ಝಾವ ನಾಲ್ಕು ಗಂಟೆಗೇ ಮನೆಬಿಟ್ಟು ಹೊರಟು ಆರು ಗಂಟೆಯ ಹೊತ್ತಿಗೆ ತೆಂಗಿನ ಕಾಯಿಗಳನ್ನು ತೇಲಿಬಿಟ್ಟೆವು. ಆದರೆ ತೆಂಗಿನ ಕಾಯಿಗಳು ಮುಂದೆ ಸಾಗದೆ ಕೆಸರಿನಲ್ಲಿ ಸಿಕ್ಕಿಕೊಂಡದ್ದರಿಂದ ಶಾಲೆಗೆ ಹೋಗುವ ಹೆಣ್ಣು ಮಕ್ಕಳಂತೆ ನಾವು ಕಿಲಕಿಲ ನಗಲಾರಂಭಿಸಿದೆವು. ಮನೆಯಿಂದ ಐವತ್ತು ಕಿಲೊಮೀಟರ್ ದೂರದಲ್ಲಿ ಜನರು ತಮ್ಮ ಪ್ರಾತರ್ವಿಧಿಗಳನ್ನು ತೀರಿಸುತ್ತಿದ್ದುದನ್ನು ನಾವು ನೋಡುತ್ತ ಇರಬೇಕಾಯಿತು!

ನಾನು ಕಂಡ ಎರಡು ಕನಸುಗಳು ಕೂಡ ಎಲ್ಲವನ್ನೂ ಸ್ವೀಕಾರ ಮನೋಭಾವದಿಂದ ನೋಡುವ ಈ ನನ್ನ ಪ್ರವೃತ್ತಿಯನ್ನೇ ನಿದರ್ಶಿಸುತ್ತಿವೆ:

ಒಂದು ಪಾರ್ಟಿ ನಡೆದಿದೆ. ಹಲವಾರು ಮಕ್ಕಳು ಆಟವಾಡುತ್ತಿದ್ದಾರೆ. ಅತ್ತಿತ್ತ ಓಡುತ್ತಿದ್ದಾರೆ. ಒಬ್ಬರನ್ನು ಒಬ್ಬರು ತಳ್ಳಾಡುತ್ತಿದ್ದಾರೆ. ನಾನು ಕೂಡ ಆಡುತ್ತಾ ಇದ್ದೀನಿ. ಇದ್ದಕ್ಕಿದ್ದಂತೆ ನನ್ನ ನಾಯಿ ಆಕರ್ಷಕವಾಗಿ ಡ್ಯಾನ್ಸ್ ಮಾಡುತ್ತಾ ಇರುವುದನ್ನು ನೋಡಿದೆ.

ಮತ್ತು,

ಆಗ ತಾನೆ ಕಡಿದು ಬೀಳಿಸಿದ ಮರವೊಂದನ್ನು ಕೆಲವರು ಟ್ರಕ್‌ಗೆ ಹೇರುತ್ತಿದ್ದುದನ್ನು ನೋಡಿದೆ. ನನ್ನ ಹೃದಯ ಹಿಂಡಿದಂತಾಯಿತು. ಇದ್ದಕ್ಕಿದ್ದಂತೆ ನನ್ನ ಮುಂದೆಯೇ ಟ್ರಕ್ ನಿಂದ ಹುಲಿಯೊಂದು ಕೆಳಕ್ಕೆ ಹಾರಿತು. ಚಲಿಸುತ್ತಿರುವ ವಾಹನಗಳ ದಟ್ಟಣೆಯಿಂದ ಭಯಭೀತಗೊಂಡಿತು. ಅದು ನನ್ನ ಮೇಲೆ ಆಕ್ರಮಣ ಮಾಡಬಹುದೆಂಬುದಕ್ಕಿಂತ ಅದು ಕೆಳಗೆ ಬಿದ್ದು ಎಲ್ಲಿ ವಾಹನ ಅದರ ಮೇಲೆ ಹರಿದುಬಿಡುತ್ತದೋ ಎಂಬ ಚಿಂತೆಯೇ ಹೆಚ್ಚು ಕಾಡತೊಡಗಿತು. ನಾನು ಅದನ್ನು ಮುದ್ದುಮಾಡಿ ರಸ್ತೆ ದಾಟಿಸಿ ರಕ್ಷಿಸುತ್ತೇನೆ.

'ನಡೆದುಕೊಂಡು ಹೋಗಲಿ ಬಿಡು' ಹಂತದಲ್ಲಿ ಆಲೋಚನೆಗಳು ಬರುತ್ತಿದ್ದವು. ಯಾವ ರೀತಿ ಬರುತ್ತಿದ್ದವೆಂದರೆ ಭೂತಕಾಲದ ನೆನಪುಗಳೊಂದಿಗಾಗಲಿ, ಭವಿಷ್ಯದ ನಿರೀಕ್ಷೆಗಳೊಂದಿಗಾಗಲಿ ಅವುಗಳನ್ನು ಜೋಡಿಸುವ ಆಲೋಚನೆಗಳ ಸರಪಳಿಯ ಹಂಗಿಲ್ಲದೆ ನನ್ನ ಮನಸ್ಸಿನ ತೆರೆಯ ಮೇಲಕ್ಕೆ ಹೊಚ್ಚ ಹೊಸದಾಗಿ ಹಾರಿ ಬರುತ್ತಿದ್ದುವೆಂಬಂತೆ. ಈ ಹಂತದ ಒಂದು ವೈಶಿಷ್ಟ್ಯವೆಂದರೆ ನನ್ನ ಆಂತರಿಕ ಸಂವಾದ ತುಂಬಾ ನಿಧಾನಗೊಂಡಿತ್ತು. ಪರಸ್ಪರ ಸಂಬಂಧವಿಲ್ಲದ ಈ ಕೆಳಗಿನ ಕೆಲವು ವಿಚಾರಗಳು ಅನೇಕ ವೇಳೆ ಬಹಳ ಗಾಢವಾದವು ಎಂದು ತೋರಿದುವು. ಅವುಗಳನ್ನು ನಾನು ಒಳನೋಟಗಳೆಂದು ಹೇಳುತ್ತೇನೆ. ನನ್ನ ವಿಕ್ಷೇಪಗಳನ್ನು ನಿಭಾಯಿಸುವಲ್ಲಿ ಈ ಒಳನೋಟಗಳು(ಹೊಳಹುಗಳು) ನನಗೆ ಬಹಳಷ್ಟು ನೆರವಾದುವು. ಅವುಗಳ ಉದಾಹರಣೆಗಳು ಹೀಗಿವೆ:

- ನನ್ನ ಸಂತೋಷವು ಬೇರೆಯವರ ಕಾರ್ಯಗಳನ್ನು ಅವಲಂಬಿಸುವುದು ನನಗೆ ಅಪಮಾನವೆನಿಸುತ್ತದೆ. ಇಲ್ಲಿಂದ ಮುಂದಕ್ಕೆ ನನ್ನ ಮಾನಸಿಕ ಸ್ಥಿತಿಯನ್ನು ನಾನೇ ನಿರ್ಧರಿಸುತ್ತೇನೆ.

- ಬೇರೆಯವರ ಅನುಮೋದನೆ ಅಥವಾ ಒಪ್ಪಿಗೆಯನ್ನು ಪಡೆಯುವ ಸಲುವಾಗಿ ಅನೇಕ ವೇಳೆ ನಾವು ತ್ಯಾಗಗಳನ್ನು ಮಾಡುತ್ತೇವೆ. ಅಂಥ ತ್ಯಾಗಗಳು ಆಳವಿಲ್ಲದವು. ಬೇರೆಯವರ ಮೆಚ್ಚುಗೆ ಅಥವಾ ಒಪ್ಪಿಗೆಯ ನಿರ್ಬಂಧದ ಅಗತ್ಯವನ್ನು ನಾನು ತ್ಯಜಿಸುತ್ತೇನೆ.
- ಜನ ನಿಮ್ಮತ್ತ ಕೆಸರೆರಚಿದರೂ ನಿಮಗೆ ನಿಮ್ಮ ಬಗ್ಗೆ ಗೌರವವಿರಬೇಕು
- ಸೋಲಿನ ಅರಿವು ಹಾನಿಕರವಾಗಬೇಕೆಂದೇನಿಲ್ಲ. ಕಾರಣ, ಅದು ನಿಮ್ಮನ್ನು ಆತ್ಮಸಮರ್ಪಣೆಯತ್ತ ಕೊಂಡೊಯ್ಯುತ್ತದೆ. ಆತ್ಮಸಮರ್ಪಣೆ ಸೋಲಿನ ಭಾವವನ್ನು ನಿರರ್ಥಕಗೊಳಿಸುತ್ತದೆ.
- ಯೋಗದ ವಿಭಿನ್ನ ಅಂಗಗಳು ಒಂದಕ್ಕೊಂದು ಪೂರಕ. ಯಮ ಮತ್ತು ನಿಯಮಗಳನ್ನು ನೀವು ಅಭ್ಯಾಸ ಮಾಡಿದರೆ ಮನೋದೈಹಿಕ ಅಭ್ಯಾಸಗಳನ್ನು ಮಾಡುವ ಶಿಸ್ತು ನಿಮಗೆ ಬರುತ್ತದೆ. ಅದು ಸ್ವ-ಪರಿಜ್ಞಾನವನ್ನು ಬೆಳೆಸಿಕೊಳ್ಳಲು ನಿಮಗೆ ನೆರವಾಗುತ್ತದೆ. ಈ ಸ್ವ-ಪರಿಜ್ಞಾನವು ನಿಮ್ಮ ಸಹಜ ಪ್ರವೃತ್ತಿಗಳಿಗೆ ಸಂಬಂಧಿಸಿದ ನಿಮ್ಮ ಮಿತಿಗಳನ್ನು ಗಮನಕ್ಕೆ ತರುತ್ತದೆ. ಈ ಅರಿವು ಯಮ-ನಿಯಮಗಳನ್ನು ಅಭ್ಯಾಸ ಮಾಡಲು ನಿಮ್ಮನ್ನು ಉತ್ತೇಜಿಸುತ್ತದೆ.

ಉನ್ನತ ಪ್ರಜ್ಞೆಯ ಬಗ್ಗೆ ಗಂಭೀರವಾಗಿ ವಿಚಾರಮಾಡಿ ನೋಡಿದೆ. ಆದರೆ ನನ್ನ ಆಲೋಚನೆಗಳಿಗೆ ಯಾವುದೇ ನಿರ್ಣಯಕ್ಕೆ ಬರಲಾಗಿಲ್ಲ. ದೇವರನ್ನು ಕುರಿತಂತೆ ನಾನು ಯಾವುದೇ ಪರಿಕಲ್ಪನೆಯನ್ನು ಮಾಡಲಾರೆ. ನಾನೂ ಅದರ ಒಂದು ಭಾಗವೇ ಆಗಿರುವ ಈ ಬ್ರಹ್ಮಾಂಡವನ್ನು ಸೃಷ್ಟಿಸಿರುವ ಉನ್ನತ ಶಕ್ತಿಯೊಂದಿರಲೇ ಬೇಕೆಂದು ನನ್ನ ಅಂತರ್ದೃಷ್ಟಿಗೆ ಅರಿವಾಗಿದೆ. ಆದರೆ ಈ ಜ್ಞಾನ ಎಲ್ಲಿಂದ ಬರುತ್ತದೆ? ಇದು ನನ್ನ ಮೆದುಳು ಎಂಬ ಕಂಪ್ಯೂಟರ್‌ನಿಂದಲೇ ಹುಟ್ಟಿದ್ದು. ಈ ಕಂಪ್ಯೂಟರ್ ದೈವಘಟನೆಯನ್ನು(ಕಾರ್ಯ ಕಾರಣ ಸಂಬಂಧ?) ಅಂಗೀಕರಿಸುತ್ತದೆ. ಒಂದು ವೇಳೆ ದೈವಘಟನೆ ವಾಸ್ತವವಲ್ಲ ಎಂದಾದರೆ ಸೃಷ್ಟಿಸಲ್ಪಡುವ ಪ್ರಶ್ನೆಯೇ ಏಳುವುದಿಲ್ಲ. ವ್ಯಕ್ತಿ ಸುಮ್ಮನೆ ಇದ್ದಾನೆ /ಇದ್ದಾಳೆ ಅಷ್ಟೆ.

ಈ ಜ್ಞಾನದ ಬಗೆಗೆ ನನಗೆ ಯಾವುದೇ ಸಂದೇಹವಿಲ್ಲ. ನನ್ನ ಅಂತರ್ದೃಷ್ಟಿಯನ್ನು ಸಂದೇಹಿಸಲಾರಂಭಿಸಿದರೆ ನನ್ನ ಸಂದೇಹವನ್ನೇ ಸಂದೇಹಿಸುವಂಥ ಪ್ರತಿಕ್ರಿಯಾ ಸರಣಿಯನ್ನೇ ಶುರುಮಾಡಬೇಕಾಗುತ್ತದೆ ! ಈ ಜ್ಞಾನದ ಸಿಂಧುತ್ವದ ಬಗ್ಗೆ ಚಿಂತೆ ಮಾಡುವುದನ್ನು ಬಿಟ್ಟು ಅದು ಹೇಗಿದೆಯೋ ಹಾಗೆ ಇರುವಂತೆ ಬಿಟ್ಟುಬಿಡುತ್ತೇನೆ.

ಈ ಉನ್ನತ ಪ್ರಜ್ಞೆಗೆ ನನ್ನ ವಿಷಯದಲ್ಲಿ ಆಸಕ್ತಿ ಹುಟ್ಟಿದೆಯೆ? ಈ ಬ್ರಹ್ಮಾಂಡದಲ್ಲಿ ನಾನು ಕೇವಲ ಒಂದು ಕಣ. ಅದಕ್ಕೆ ನನ್ನ ಗೊಡವೆ ಏಕಾದರೂ ಬೇಕು?

ನಾನು ಉನ್ನತ ಪ್ರಜ್ಞೆ ಎಂದು ನನಗೆ ತಿಳಿಸಲಾಗಿದೆ. ನನಗೆ ಮಾತ್ರ ಇದು ಗೊತ್ತಿಲ್ಲ. ಕಾರಣವೇನು? ನನ್ನ 'ಅಹಂ' ಇದಕ್ಕೆ ಅಡ್ಡಿಬರುತ್ತದೆ. ಈ 'ಅಹಂ' ನ ಕಾರಣ ಕರ್ತರು

ಯಾರು? ಈ ಬೇರ್ಪಡಿಸುವ ಆಟದ ಅಗತ್ಯವಾದರೂ ಏನು? ಏಕ (ಒಂದೇ) ಪ್ರಜ್ಞೆ, ತನ್ನ ಸಂತೋಷಕ್ಕಾಗಿ ಅನೇಕಗಳಾಗಿ ಕವಲೊಡೆಯುತ್ತದೆ ಎಂದು ನನಗೆ ತಿಳಸಲಾಗಿದೆ. ಈ ವಿವರಣೆ ಮೂರ್ಖತನದ್ದೆಂದು ಅನಿಸುತ್ತದೆ.

ದೇವರ ಬಗ್ಗೆ ಮತ್ತು ಉನ್ನತ ಪ್ರಜ್ಞೆಯ ಬಗ್ಗೆ ಓದಿದಾಗೆಲ್ಲ ನಾನೊಂದು ಬಿಂದುವಿಗೆ ಬಂದು ನಿಲ್ಲುತ್ತೇನೆ. ಆ ಬಿಂದುವಿನಲ್ಲಿ ಕೇವಲ ಸಿದ್ಧಾಂತಗಳಿವೆ. ಆ ಸಿದ್ಧಾಂತಗಳಾದರೋ ಮಾನವ ಮನಸ್ಸಿನ ಕೊರತೆಗಳಿಂದಲೇ ಹೊರಹೊಮ್ಮಿದ ಹಾಗೂ ಮಾನವ ಮನಸ್ಸನ್ನು ಸಂತೃಪ್ತಗೊಳಿಸಲೆಂದು ಕಟ್ಟಿದ ಸಿದ್ಧಾಂತಗಳು.

ಈ ಸಂದರ್ಭದಲ್ಲಿ ಉನ್ನತ ಪ್ರಜ್ಞೆ ಎಂಬುದು ವಾಸ್ತವವಾಗಿ ಇದೆಯೆ, ಇಲ್ಲವೆ ಅಥವಾ ದೇವರು ಇದ್ದಾನೆಯೆ ಅಥವಾ ಇಲ್ಲವೆ ಎಂಬ ಪ್ರಶ್ನೆಗೆ ಯಾವ ಮಹತ್ವವೂ ಇಲ್ಲ. ಈ ಶಕ್ತಿಯ ಸ್ಪರ್ಶ ಆಗಾಗ ನನ್ನ ಅನುಭವಕ್ಕೆ ಬಂದಿದೆ. ಆದರೆ ಅದು ನನ್ನ ಭ್ರಮೆಯಿರಬಹುದು. ಈ ವಿಷಯದಲ್ಲಿ ನನ್ನದು ಪೂರ್ತಿ ತಪ್ಪಿರಲೂ ಬಹುದು ಎಂಬುದನ್ನು ನಾನು ಒಪ್ಪುತ್ತೇನೆ. ಈ ಬ್ರಹ್ಮಾಂಡದ ರಚನೆಯನ್ನು ಸರಿ ಅಥವಾ ತಪ್ಪು ಎಂದು ಸಾಧಿಸುವ ಅಥವಾ ಅದರ ಸೃಷ್ಟಿಕರ್ತನಿಗೂ ಅದಕ್ಕೂ ಏನಾದರೂ ಸಂಬಂಧ ಇದ್ದರೆ ಅದನ್ನು ಸಾಬೀತು ಮಾಡುವ ಅನಿವಾರ್ಯತೆ ನನಗಿಲ್ಲ.

ನಾನೇನಾದರೂ ಕಷ್ಟ ಅಥವಾ ತೊಂದರೆಯಲ್ಲಿದ್ದಾಗ ಪ್ರಾರ್ಥಿಸುತ್ತೇನೆ. ನನಗೇನಾದರೂ ಒಳ್ಳೆಯದು ಆದರೆ ಆಗ ದೇವರಿಗೆ ನಮಸ್ಕಾರ ಸಲ್ಲಿಸುತ್ತೇನೆ. ನಾನು ಈ ಮುಂಚೆ ಹೇಳಿರುವುದಕ್ಕೂ ಇದಕ್ಕೂ ಏನಾದರೂ ಪೂರ್ವಾಪರ ವಿರೋಧವಿದೆಯೆ? ಒಂದು ವೇಳೆ ಇದ್ದರೆ ಅದು ಹಾಗೇ ಇರಲಿ! ಕಾರಣ ಇದು ಹಲವು ಬಗೆಯ ಆಸ್ತಿಕ ಮತ್ತು ನಾಸ್ತಿಕ ಸಿದ್ಧಾಂತಗಳಿಗೂ ಇರುವ ಪೂರ್ವಾಪರ ವಿರೋಧಕ್ಕಿಂತ ಹೆಚ್ಚಿನದಾಗಿರಲು ಸಾಧ್ಯವಿಲ್ಲ. ನಮ್ಮ ಮೆದುಳುಗಳು ನಿರಪೇಕ್ಷ ಅಥವಾ ಪರಿಪೂರ್ಣದೊಂದಿಗೆ **(absolute)** ವ್ಯವಹರಿಸುವ ಮಟ್ಟಿಗೆ ಸಜ್ಜುಗೊಂಡಿಲ್ಲ. ಹಾಗಾಗಿ ನನ್ನ ಸ್ವಲ್ಪ ಮಟ್ಟಿನ ಶಕ್ತಿ ಸಾಮರ್ಥ್ಯಗಳನ್ನು ಉಳಿಸಿಕೊಂಡು ಹೆಚ್ಚು ಸಂಭವವೂ ಸಾರ್ಥಕವೂ ಆದದ್ದನ್ನೇಕೆ ನಾನು ಮಾಡಬಾರದು?

ನನ್ನನ್ನು ಕುಗ್ಗಿಸುವ ಅಥವಾ ಸಂಕುಚಿತಗೊಳಿಸುವ ಕೋಪ, ಪ್ರೀತಿ, ಮೋಹ ಮತ್ತು ಎಲ್ಲ ಬಗೆಯ ಋಣಾತ್ಮಕ ಗುಣಗಳಿಂದ ಮುಕ್ತಿ ಅಥವಾ ಬಿಡುಗಡೆ ಸಾಧ್ಯ ಮತ್ತು ಸಾರ್ಥಕ.(ಗ್ರಾಹ್ಯ). ಈ ವಿಷಯದಲ್ಲಿ ಯಾವುದೇ ಅಪಾರ್ಥ ಬೇಡ. ಈ ಭಾವನೆಗಳಿಗೆ ಕಾರಣವಾದ ಜೀವನ ಸಂದರ್ಭಗಳಿಂದ ತಪ್ಪಿಸಿಕೊಳಲು ನಾನು ಬಯಸುವುದಿಲ್ಲ. ತೀರ ದಯನೀಯವಾಗಿರುವುದನ್ನು ತ್ಯಜಿಸುವ ಸಾಮರ್ಥ್ಯ ಗಳಿಸಬೇಕೆಂಬುದೇ ನನ್ನ ಆಸೆ.

ವಾಸ್ತವವಾಗಿ ಮುಕ್ತಿ ಅಥವಾ ಮೋಕ್ಷ ಎಂದರೇನೆಂದು ನಾನು ಅರ್ಥಮಾಡಿಕೊಳ್ಳುವೆನೆ? ನನ್ನ ಪ್ರಯತ್ನವಷ್ಟರಿಂದಲೇ ಮುಕ್ತಿ ಸಾಧ್ಯವೆಂದು ನಾನು ನಂಬುತ್ತೇನೆಯೆ? ಇಲ್ಲ. ಈ ದಿಶೆಯಲ್ಲಿ ಇನ್ನೂ ಕೆಲವು ಶಕ್ತಿಗಳು ಕಾರ್ಯ ನಿರತವಾಗಿರುವುದನ್ನು ಅಂತರ್ದೃಷ್ಟಿಯಿಂದ ನಾನು ಅನುಭವಕ್ಕೆ ತಂದುಕೊಳ್ಳಬಲ್ಲೆ. ಆ ಶಕ್ತಿಗಳ ಕಾರ್ಯದ ಇಣುಕು ನೋಟಗಳು ಮತ್ತೆ ಮತ್ತೆ ಕಂಡು ಬರುತ್ತಿವೆ.

ನನಗೆ ಗುರುವಿನ ಅವಶ್ಯಕತೆ ತೀವ್ರವಾಗಿದ್ದಾಗ ಅವರು ನನ್ನ ಬಳಿಗೆ ಬಂದರು. ಈ ಶಕ್ತಿಗಳೊಂದಿಗೆ ಸಮರಸವಾಗಿರುವುದನ್ನು ನಾನು ಕಲಿತೆನಾದರೆ ಅವು ನನ್ನೊಂದಿಗೆ ಇರುತ್ತವೆ.

ನನ್ನ ದಿನಚರಿಯ ಪುಸ್ತಕದಿಂದ ಹೆಚ್ಚುಕಡಿಮೆ ಶಬ್ದಶಃ ಉದ್ಧರಿಸಲಾಗಿರುವ ಈ ಸುದೀರ್ಘ ಉದ್ಧೃತ ಭಾಗ ಕೆಲವರಿಗೆ ಭಾವನಾತ್ಮಕ ಪ್ರಲಾಪವೆಂದೆನಿಸಬಹುದು. ಆದಾಗ್ಯೂ ಇದನ್ನು ಇಲ್ಲಿ ಸೇರಿಸಲೇ ಬೇಕೆನ್ನಿಸಿತು. ಅದಕ್ಕೆ ಕಾರಣ ಈಶ್ವರ ಪ್ರಣಿಧಾನದ ದಿಕ್ಕಿನಲ್ಲಿ ನನ್ನ ಮನಸ್ಸು ಹೇಗೆ ಕ್ರಿಯಾಶೀಲವಾಗಿತ್ತು ಎಂಬುದನ್ನು ಇದು ಅತ್ಯಂತ ಸ್ಪಷ್ಟವಾಗಿ ತೋರಿಸುತ್ತದೆ.

* * *

ಈ ಅಧ್ಯಯನವನ್ನು ಶುರುಮಾಡುವುದಕ್ಕಿಂತ ಮುಂಚೆ ನನ್ನ ಸ್ನೇಹಿತರಿಗೆಲ್ಲ ಪವಾಡ ಸದೃಶ ಅನುಭವಗಳಾಗಿವೆ, ಆದರೆ ನನಗೆ ಮಾತ್ರ ಅಂಥವೆಂದೂ ಆಗಿಲ್ಲ ಎಂದು ದೂರು ಹೇಳುತ್ತಿದ್ದೆ. ಕೆಲಮಟ್ಟಿನ ಸಂಕೋಚದಿಂದ ನಾನು ಇದೆಲ್ಲವನ್ನೂ ಬರೆಯುತ್ತಿದ್ದೇನೆ. ಈ ಅಧ್ಯಯನದ ಅವಧಿಯಲ್ಲಿ ಆಶ್ಚರ್ಯಕರವೆನ್ನಿಸುವಂಥ ಆಕಸ್ಮಿಕಗಳು (ಕಾಕತಾಲೀಯ coincidence) ಅಥವಾ ದೂರ ಮನಃಸ್ಪರ್ಶನ (Telepathy) ಎನ್ನುವಂಥ ಅಥವಾ ಅಸಾಧಾರಣವೆಂದೇ ಹೇಳಬಹುದಾದ ಅನುಭವಗಳ ಅಧಿಕ ಅರಿವು ನನಗಾಯಿತು. ಎಲ್ಲವೂ ಅಕಸ್ಮಾತ್ತಾಗಿ ಸಂಭವಿಸಿದವುಗಳೇ ಆಗಿರಬಹುದು. ನನ್ನ ವೈಚಾರಿಕ ಮನಸ್ಸು ಅವುಗಳನ್ನು ಅದೇ ರೀತಿ ನೋಡಲಿಚ್ಛಿಸುತ್ತದೆ. ನನ್ನ ಮನಸ್ಸು ಒಂದು ಉಚ್ಚ ಸ್ತರದ ನಿಶ್ಚಲ ಶಾಂತ ಸ್ಥಿತಿಯನ್ನು ತಲುಪಿದ್ದಾಗ ಮಾತ್ರ ಅಂಥ ಅನುಭವಗಳು ಆಗುತ್ತಿದ್ದುವೆಂದು ತೋರಿತು. ಆಲೋಚನೆಯ ಗತಿ ನಿಧಾನವಾದಾಗ, ಭಾವನಾತ್ಮಕ ಪ್ರತಿಕ್ರಿಯಾತ್ಮಕತೆ ಕಡಿಮೆಯಾದಾಗ ಹೊರಗಿನ ಪ್ರಚೋದಕಗಳ (ಉದ್ದೀಪಕಗಳ) ಗ್ರಹಿಸುವಿಕೆ ತೀವ್ರವಾಗುತ್ತದೆಂದೆನಿಸಿತು.

* * *

ನಾನು 'ನಡೆದುಕೊಂಡು ಹೋಗಲಿ ಬಿಡು' ಎಂದು ವರ್ಣಿಸಿರುವ ಎರಡನೇ ಹಂತದ ಅನುಭವಗಳ ಅವಧಿ ಅಡೆತಡೆಯಿಲ್ಲದ ಆನಂದದ ಸ್ಥಿತಿಯೇನೂ ಆಗಿರಲಿಲ್ಲ. ಮೇಲಿಂದ ಮೇಲೆ ಸಂದೇಹಗಳು ಮತ್ತು ಇನ್ನಿತರೆ ಅನಿಶ್ಚಯತೆಗಳಿಂದ ಕ್ಲೇಶಕ್ಕೊಳಗಾಗುತ್ತಿದ್ದೆ. ಈ ಅವಧಿಯು ಅಭ್ಯಾಸದಲ್ಲಿನ ನನ್ನ ಸಡಿಲತೆಯೊಂದಿಗೆ ತಳುಕುಹಾಕಿಕೊಂಡಿತ್ತೆಂದು ನನಗೆ ತಿಳಿಯಿತು. ಅಭ್ಯಾಸದಲ್ಲಿನ ನನ್ನ ಶೈಥಿಲ್ಯ (ಸಡಿಲತೆ) ಅಥವಾ ಸಂದೇಹಗಳು ಇವುಗಳಲ್ಲಿ ಯಾವುದು ಮೊದಲು ಎಂಬುದು ನನಗೆ ಸ್ಪಷ್ಟವಿಲ್ಲ. ಒಂದಂತೂ ಸ್ಪಷ್ಟ, ಕೊನೆಯ ಪಕ್ಷ ನನ್ನ ವಿಷಯದಲ್ಲಿ: ಯೋಗಾಭ್ಯಾಸ ಮತ್ತು ಅವುಗಳಿಂದ ಒಡಮೂಡುವ ಮಾನಸಿಕ ಅನುಭವಗಳು ನಿರಂತರವಾಗಿ ನಡೆಯುವ ಪ್ರಕ್ರಿಯೆಗಳಲ್ಲ. ಹೀಗೆ ಮತ್ತೆ ಮತ್ತೆ ಸಂಭವಿಸುವ ಈ ಶೈಥಿಲ್ಯ ಸಹಜ ಕ್ರಮ(ಲಯ)ದಿಂದಾಗುವಂಥದ್ದೋ, ಅಥವಾ ಯೋಗದ ಪ್ರಕ್ರಿಯೆಯೇ, ಕಡೇ ಪಕ್ಷ ಆರಂಭದಲ್ಲಿ ಸ್ವಭಾವತಃ ವಿಚ್ಛಿನ್ನ ಚಟುವಟಿಕೆಯೋ ಎಂಬುದು

ನನಗೆ ಖಚಿತವಿಲ್ಲ. ಈ ವಿಷಯದಲ್ಲಿ ನನ್ನ ಗುರುಗಳು ನನಗೆ ಯಾವುದೇ ಸಲಹೆ ನೀಡಲಿಲ್ಲ. ಸ್ವತಃ ನಾನೇ ಕಾದು ಕಂಡುಕೊಳ್ಳಬೇಕೆಂದು ಹೇಳಿದರು.

ನನ್ನ ಪತ್ನಿಯ ಗಮನಿಕೆಗಳು

ನನ್ನ ಹೆಂಡತಿಯ ಗಮನಿಕೆಗಳನ್ನು ಆಕೆಯ ಮಾತುಗಳಲ್ಲೇ ಸಂಗ್ರಹಿಸಿ ಕೊಡುತ್ತಿದ್ದೇನೆ.

ನನ್ನ ಯಜಮಾನರು ಗುರು ಗೊತ್ತುಪಡಿಸಿದ ಅಭ್ಯಾಸಗಳನ್ನು ಮೊದಲ ಮೂರು ತಿಂಗಳು ಕಟ್ಟುನಿಟ್ಟಾಗಿ ಅನುಸರಿಸಿದರು. ಇದರ ನಂತರ ಅವರ ಕ್ರಿಯೆಯಲ್ಲಿ ಇಳಿಕೆಯ (ಕಡಿಮೆಯಾಗುವುದು) ಅವಧಿ ಪ್ರಾರಂಭವಾಯಿತು. ನಿಮ್ಹಾನ್ಸ್‌ನಲ್ಲಿ ನಡೆದ ಒಂದು ಯೋಗದ ಸಮಾವೇಶದ ನಂತರ ಇದು ಉಂಟಾಯಿತು. ನಾನು ನನ್ನ ಯಜಮಾನರ ಗುರುಗಳೊಂದಿಗೆ ಸಮಾಲೋಚಿಸಿದೆ. ಅಂಥ ಏರು ಪೇರುಗಳು ಸಹಜ ಮತ್ತು ಸಾಧನೆಯಲ್ಲಿ ಸ್ಥಿರತೆ ಬರಬೇಕೆಂದರೆ ಹಲವು ವರ್ಷಗಳು ಹಿಡಿಯುತ್ತವೆ ಎಂದು ನನಗೆ ಭರವಸೆ ನೀಡಿದರು. ಯೋಗವು ವಿಕಾಸದತ್ತ ಕೊಂಡೊಯ್ಯುತ್ತದೆಯೇ ಹೊರತು ಕ್ರಾಂತಿಯ ಕಡೆಗಲ್ಲ ಎಂದು ಹೇಳಿದರು.

ಮತ್ತೆ ಮೂರು ತಿಂಗಳು ಕಳೆದ ಮೇಲೆ ಈ ಅಭ್ಯಾಸಗಳು ಮತ್ತೆ ನಿಯಮಿತವಾದುವು. ಆದರೆ ಮೊದಲಿನ ಅವಧಿಗೆ ಹೋಲಿಸಿದರೆ ಈಗಿನದರಲ್ಲಿ ತೀವ್ರತೆ ಕಡಿಮೆಯಾಗಿತ್ತು.

ಈ ಬದಲಾವಣೆಗಳನ್ನು ನಾನು ಎರಡು ಆಯಾಮಗಳಲ್ಲಿಟ್ಟು ವಿವರಿಸುತ್ತೇನೆ: ಅವುಗಳೆಂದರೆ ಅಲ್ಪ ಕಾಲಿಕಕ್ಕೆ ಎದುರಾಗಿ ದೀರ್ಘ ಕಾಲಿಕ ಎಂದು ಹಾಗೂ ಸಕಾರಾತ್ಮಕಕ್ಕೆ ಎದುರಾಗಿ ನಕಾರಾತ್ಮಕ ಎಂದು.

ತಮ್ಮ ಯೋಗಾಭ್ಯಾಸ ತೃಪ್ತಿಕರವಾಗಿತ್ತು ಎಂದು ನನ್ನ ಯಜಮಾನರು ಹೇಳಿಕೊಂಡ ದಿನಗಳಲ್ಲಿ ಅವರೊಂದಿಗೆ ಇರುವುದು ಸಂತೋಷದಾಯಕವಾಗಿರುತ್ತಿತ್ತು. ಜನರ ನ್ಯೂನತೆಗಳ ವಿಷಯಕ್ಕೆ ಅವರಿಗಿರುತ್ತಿದ್ದ ಎಂದಿನ ಕೋಪ ಮತ್ತು ಅಸಹನೆಗಳು ಕಣ್ಣಿಗೆ ಹೊಡೆಯುಷ್ಟರಮಟ್ಟಿಗೆ ಗೈರುಹಾಜರಾಗಿರುತ್ತಿದ್ದುವು. ಸಣ್ಣ ತಪ್ಪುಗಳನ್ನು ಕ್ಷಮಿಸಿಬಿಡುತ್ತಿದ್ದರು. ಮನಸ್ಥಿತಿಯ ಅಸಂಗತಿಗಳು ಅಥವಾ ಅಸಮಂಜಸತೆಗಳು ಕೂಡ ಕಡಿಮೆಯಾದುವು. ಭೂತಕಾಲದ ಬಗೆಗೆ ಅಥವಾ ಭವಿಷ್ಯತ್ತಿನ ಬಗೆಗೆ ಚಿಂತಿಸುತ್ತ ಕೂಡುವುದರ ಬದಲು ವರ್ತಮಾನಕ್ಕೆ ಅವರು ಹೆಚ್ಚು ಕಾಲವನ್ನು ಮೀಸಲಿಡಲು ಸಾಧ್ಯವಾಯಿತು. ಏನು ಮಾಡಬೇಕೋ ಅದನ್ನೇ ಮಾಡಿದರು ಮತ್ತು ಹೆಚ್ಚು ಸಮರ್ಥವಾಗಿ ಮಾಡಿದರು. ಈ ಬದಲಾವಣೆಗಳನ್ನು ನಾನು ಸಕಾರಾತ್ಮಕ ಬದಲಾವಣೆಗಳೆಂದು ಪರಿಗಣಿಸುತ್ತೇನೆ.

ನಿರಂತರವಾದ ಅಭ್ಯಾಸದ ಅವಧಿಯ ನಂತರ ಅವರ ಸ್ಥಿತಿ ಸ್ಥಿರಗೊಂಡಿತು. ಬದುಕಿನ ಬೃಹತ್ ವಿಷಯಗಳಿಗೆ ಸಂಬಂಧಿಸಿದಂತೆ ಅವರು ಹೆಚ್ಚು ಸಹಿಷ್ಣುವಾದರು ಮತ್ತು ಅರ್ಥಮಾಡಿಕೊಳ್ಳಲಾರಂಭಿಸಿದರು. ತಮ್ಮ ಗತಕಾಲದತ್ತ ದೃಷ್ಟಿಹಾಯಿಸ ಬಲ್ಲವರಾದರು ಮತ್ತು ಕೆಲವೊಂದು ಘಟನೆಗಳಿಗೆ ಸಂಬಂಧಿಸಿದಂತೆ ಯಾತನಾ ಪೂರ್ಣ ಪ್ರತಿಕ್ರಿಯೆಯು ಬಹುಶಃ ಅತಿರೇಕದಿಂದ ಕೂಡಿದ್ದಾಗಿತ್ತು ಎಂದು ಹೇಳಬಲ್ಲವರಾಗಿದ್ದರು. ಭೂತದ ಅಥವಾ ಭವಿಷ್ಯದ ಸಂಗತಿಯನ್ನು ಚರ್ಚೆಗೆ ತರದೆ ವರ್ತಮಾನದ ಕ್ಷಣದಲ್ಲಿ ಬದುಕಬಲ್ಲವರಾಗಿದ್ದರು. ಇವು ನಾನು ಅವರಲ್ಲಿ ಕಂಡುಕೊಂಡ ಕೆಲವು ದೀರ್ಘಕಾಲಿಕ ಸಕಾರಾತ್ಮಕ ಬದಲಾವಣೆಗಳು.

ಕೆಲವೊಂದು ನಕಾರಾತ್ಮಕ ಪರಿಣಾಮಗಳೂ ಇದ್ದವು. ಆದಾಗ್ಯೂ ಇವು ಹೆಚ್ಚು ಕಾಲ ಉಳಿಯಲಿಲ್ಲ. ನನ್ನ ಯಜಮಾನರ ಯೋಗಾಭ್ಯಾಸವು ಚೆನ್ನಾಗಿ ಆಗದೆ ಇದ್ದಾಗ ಅವರ ಕೋಪ ಮತ್ತು ಅಸಹನೆ ಹೆಚ್ಚುತ್ತಿತ್ತು. ಕೆಲವೊಂದು ಘಟನೆಗಳಿಗೆ ಸಂಬಂಧಿಸಿದಂತೆ ಅವರ ಪ್ರತಿಕ್ರಿಯೆಗಳು ಅವರು ಅಧ್ಯಯನವನ್ನು ಪ್ರಾರಂಭಿಸುವುದಕ್ಕಿಂತ ಮುಂಚಿನ ಸಮಯದ ಪ್ರತಿಕ್ರಿಯೆಗಿಂತ ಹೆಚ್ಚು ತೀವ್ರವಾಗಿರುತ್ತಿತ್ತು.

ನನ್ನ ಯಜಮಾನರ ಯೋಗಾಭ್ಯಾಸವನ್ನು ಒಂದು ವರ್ಷದ ಅವಧಿಯವರೆಗೂ ಗಮನಿಸಿದ ಮೇಲೆ ಯೋಗದ ಕ್ರಮಬದ್ಧವಾದ ಅಭ್ಯಾಸವು ಅವರ ವ್ಯಕ್ತಿತ್ವದ ಸಕಾರಾತ್ಮಕ ಅಂಶಗಳನ್ನು ಹೆಚ್ಚಿಸಿದೆ ಹಾಗೂ ನಕಾರಾತ್ಮಕ ಅಂಶಗಳನ್ನು ಕಡಿಮೆಯಾಗಿಸಿದೆ ಎಂಬ ತೀರ್ಮಾನಕ್ಕೆ ನಾನು ಬಂದೆ. ಆದಾಗ್ಯೂ ನಿರಂತರತೆಯಿಲ್ಲದೆ ಮಧ್ಯೆ ಮಧ್ಯೆ ನಿಲ್ಲಿಸಿ ಮಾಡಿದ ಅಭ್ಯಾಸವು ಯೋಗಾಭ್ಯಾಸವನ್ನು ಮಾಡದೆ ಇರುವುದಕ್ಕಿಂತ ಹೆಚ್ಚು ಅಪಾಯಕಾರಿ ಎಂದು ಸಾಧಿತವಾಯಿತು. ಜೀವನದ ಪ್ರಮುಖವಾದ ನಿರ್ಣಯಗಳನ್ನು ಯೋಗಾಭ್ಯಾಸದ ಪ್ರಾರಂಭಿಕ ದಿನಗಳಲ್ಲಿ ತೆಗೆದುಕೊಳ್ಳಬಾರದು ಎಂಬುದನ್ನೂ ಕಂಡುಕೊಂಡೆ. ಕಾರಣ, ಆ ಹಂತದಲ್ಲಿ ವ್ಯಕ್ತಿತ್ವವು ಅಸ್ಥಿರವಾಗಿರುತ್ತದೆ. ನನ್ನ ಯಜಮಾನರು ತಮ್ಮ ಜೀವನ ಪರ್ಯಂತವೂ ಯೋಗಾಭ್ಯಾಸವನ್ನು ಮುಂದುವರಿಸುವ ಸಾಧ್ಯತೆಯೇ ಇದೆ ಎಂದು ನಿರ್ಣಯಿಸಿದೆ.

ಗುರುಗಳ ಟಿಪ್ಪಣಿ ಮತ್ತು ಮಾರ್ಗದರ್ಶನ

ನನ್ನ ಈ ಪಯಣದಲ್ಲಿ ನನ್ನ ಗುರುಗಳು ಅದೆಷ್ಟು ಅನಿವಾರ್ಯರಾಗಿದ್ದರೆಂದರೆ ಈ ಪ್ರಕ್ರಿಯೆಯಲ್ಲಿ ನನ್ನ ಪ್ರಯತ್ನದ ಮೇಲೆ ಮತ್ತು ಬದುಕಿನ ಮೇಲೆ ಅವರು ಬೀರಿದ ಪ್ರಭಾವವನ್ನು ವಿವರಿಸದಿದ್ದರೆ ನನ್ನ ಈ ವಿವರಣೆ ಅಪೂರ್ಣವಾಗಿಯೇ ಉಳಿದುಬಿಡುತ್ತದೆ. ನನ್ನ ಪ್ರಜ್ಞೆಗಿಂತ ಅತಿ ಹೆಚ್ಚು ವಿಕಸಿತವಾದ ಪ್ರಜ್ಞೆಯ ಬಗ್ಗೆ ಮಾತನಾಡಲು ಯತ್ನಿಸುವುದು ನನಗೆ ಕಷ್ಟ ಅಷ್ಟೇ ಅಲ್ಲ, ಧಾರ್ಷ್ಟ್ಯವೂ ಹೌದು ಎನಿಸುತ್ತದೆ. ಆದರೆ ನಾನು ಪ್ರಯತ್ನವನ್ನಂತೂ ಮಾಡಬೇಕು. ನನ್ನ ಗುರುಗಳು ನನ್ನ ದಿನಚರಿಯ ಪುಸ್ತಕ ಮತ್ತು ಕನಸಿನ ದಿನಚರಿಯ ಪುಸ್ತಕ ಎರಡರಲ್ಲೂ ಮಾರ್ಜಿನ್ನಿನಲ್ಲಿ ತಮ್ಮ ಟಿಪ್ಪಣಿಯನ್ನು ನಮೂದಿಸುತ್ತಿದ್ದರು. ಈ ಟಿಪ್ಪಣಿಗಳು ಅವರ ದೃಷ್ಟಿಕೋಣವನ್ನು ಬಿಂಬಿಸುತ್ತವೆ. ಅವರ ಮಾತುಗಳಲ್ಲೇ ಇದನ್ನು ನೀಡಿದೆ:

- ನಿಮಗೆ ನಿಮ್ಮಲ್ಲಿ ಎಷ್ಟು ನಂಬಿಕೆ ಇದೆಯೋ ಅದಕ್ಕಿಂತ ಹೆಚ್ಚು ನಂಬಿಕೆ ನಿಮ್ಮ ಗುರುವಿಗೆ ನಿಮ್ಮಲ್ಲಿ ಇದೆ.
- 'ನ್ಯಾಯ' ಮತ್ತು 'ಅನ್ಯಾಯ'ಗಳೆಂಬುವು ಪ್ರಕೃತಿಯ ಮೇಲಿನ ಮನಸ್ಸಿನ ಹೇರಿಕೆ. ಅವು ಪರಸ್ಪರ ಸಾಪೇಕ್ಷವಾದವು ಮತ್ತು ಬದಲಾಗಬಹುದಾದವು.

- ಗುರಿಯಿಲ್ಲದ ಜೀವನ ಅತ್ಯಂತ ದಾರುಣವಾದ ಜೀವನ. ನಿಮ್ಮ ಬದುಕಿನ ಗುಣಾತ್ಮಕತೆ ನಿಮ್ಮ ಸಂಕಲ್ಪದ ಗುಣಾತ್ಮಕತೆಯನ್ನವಲಂಬಿಸಿದೆಯೆಂಬುದನ್ನು ಮರೆಯ ಬೇಡಿ. ಸಾಧಕನು ತನ್ನ ಸಂಕಲ್ಪವನ್ನು ಸದಾ ನೆನಪಿನಲ್ಲಿಟ್ಟು ಕೊಂಡಿರಬೇಕು. ಎಷ್ಟು ಸಾಧನೆ ಮಾಡಿದ್ದಾನೆಂಬುದು ಸಾಧಕನನ್ನು ಪರೀಕ್ಷಿಸುವ ಒರೆಗಲ್ಲಲ್ಲ; ಬದಲಿಗೆ ತನ್ನ ಸಂಕಲ್ಪಕ್ಕೆ ಅವನು ಎಷ್ಟರಮಟ್ಟಿಗೆ ಜೀವಂತ ವಾಗಿದ್ದಾನೆಂಬುದು ಅವನ ಪರೀಕ್ಷೆಯ ಒರೆಗಲ್ಲು.
- ನಾನು ಸದಾ ನಿಮ್ಮ ಬಾಗಿಲ ಬಳಿ ಕಾಯುತ್ತಿರುತ್ತೇನೆ. ಆದರೆ ಅನೇಕ ವೇಳೆ ನಿಮ್ಮ ಬಾಗಿಲು ಮುಚ್ಚಿರುತ್ತದೆ.
- ಹೆದರಬೇಡಿ. ಕಾರಣ, ವಾಸ್ತವದಲ್ಲಿ ನಾನು ನೀವೇ ಆಗಿದ್ದೇನೆ.
- ಎಲ್ಲಿ ನಂಬಿಕೆ ಇರುತ್ತದೆಯೋ ಅಲ್ಲಿ ಸಂದೇಹಗಳು ಇರಲೇ ಬೇಕು. ನೋವು ಮತ್ತು ನಲಿವುಗಳು ಹೀಗೆಯೇ ಸದಾ ಕಾಲ ಪರಸ್ಪರ ಹೆಣೆದುಕೊಂಡಿರುತ್ತವೆ. ಆದರೆ ಎಲ್ಲಿ ಜ್ಞಾನವಿದೆಯೋ ಅಲ್ಲಿ ಸಂದೇಹಕ್ಕವಕಾಶವಿಲ್ಲ.
- ನಂಬಿಕೆ ಎನ್ನುವುದು ಬೌದ್ಧಿಕ, ಅವಾಸ್ತವ ಮತ್ತು ಬದಲಾವಣೆ ಗೊಳಗಾಗುವಂಥದು. ಜ್ಞಾನವೆನ್ನುವುದು ಪ್ರಜ್ಞೆ, ಅದು ಬದಲಾವಣೆ ಗೊಳಗಾಗದಂಥದು. ಇವೆರಡರಲ್ಲಿ ನಮಗೆ ಗೊಂದಲವುಂಟಾದಾಗ ನೋವು ಶುರುವಾಗುತ್ತದೆ.
- ವಾಸ್ತವ ಸತ್ಯವನ್ನು ಕಂಡುಕೊಳ್ಳುವ ಸಲುವಾಗಿ ಉದ್ದೇಶಪೂರ್ವಕವಾಗಿ ಎಲ್ಲವನ್ನೂ ಸಂದೇಹಿಸುವ ದಿಟ್ಟತನವೇ ಸಾಧನೆ. ಜಗತ್ತು ನಾನು ಅಂದುಕೊಂಡಿದ್ದಂತೆ ಇಲ್ಲ. ನಾನು ಹೇಗಿದ್ದೇನೆ ಎಂದು ಅಂದುಕೊಂಡಿದ್ದೆನೋ ಹಾಗೆ ನಾನಿಲ್ಲ. ನೇತಿ, ನೇತಿ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸಾಧಕನಿಗೆ ಅಪಾರ ದಿಟ್ಟತನವಿರಬೇಕು. ಕೊನೆಯಲ್ಲಿ ಯಾವುದು ಸತ್ಯವೋ ಅದು, ಬದಲಾಗದಿರುವಂಥದು ಮಾತ್ರವೇ ತನ್ನದೇ ಯಶಸ್ಸಿನ(ಕೀರ್ತಿಯ) ಬೆಳಕಿನಲ್ಲಿ ನಿಂತಿರುತ್ತದೆ. ಆಗ ಆಂತರಿಕ ಪವಾಡದ ಕೀರ್ತಿಯು ತೆರೆದುಕೊಳ್ಳುತ್ತಿರುತ್ತದೆ. ಆಗ ಬದಲಾಗುತ್ತಿರುವ ನಂಬಿಕೆಗಳ ಉಬ್ಬರವಿಳಿತಗಳಲ್ಲಿ ಅತ್ತಿಂದಿತ್ತ ಒಲೆದಾಡುವುದು ಇರುವುದಿಲ್ಲ. ಬದಲಿಗೆ ಆಗ ಇರುವುದೇನಿದ್ದರೂ ಇದುವರೆಗೂ ಯಾವ ಲೇಖನಿಯೂ ವಿವರಿಸಲಾಗದಿರುವ ಸರ್ವವ್ಯಾಪಿಯಾದ ನಿಶ್ಚಯ.
- ತಾಳ್ಮೆಯಿಂದಿರಿ. ನೀವಿನ್ನೂ ಸಿದ್ಧರಾಗುತ್ತಿದ್ದೀರಿ. ತಲುಪಬೇಕಾದ ಸ್ಥಳಕ್ಕೆ ಸಜ್ಜುಗೊಳಿಸಿಕೊಂಡು ಪಯಣ ಪ್ರಾರಂಭಿಸುತ್ತಿದ್ದೀರಿ ಅಷ್ಟೆ. ಇನ್ನೂ ತಳಹದಿ ಹಾಕಿಲ್ಲ. ವಿಶ್ರಾಂತಿ ತೆಗೆದುಕೊಳ್ಳಿ, ವಿಶ್ರಾಂತಿ. ಬಹು ಸಮಯದ ವರೆಗೆ ನೀವು

ನನ್ನನ್ನು ಅರ್ಥಮಾಡಿಕೊಳ್ಳುವುದಿಲ್ಲ. ಆದರೆ ಅದು ಅಷ್ಟು ಮುಖ್ಯವಲ್ಲ. ನೀವು ಮಾಡಬೇಕಾದ್ದೇನಿದ್ದರೂ ನನ್ನಲ್ಲಿ ನಂಬಿಕೆಯಿಡುವುದು- ನಿಮ್ಮನ್ನು ನೀವು ನಂಬುವುದು.

- ಮನುಷ್ಯನ ನೋವಿಗೆ ಕಾರಣವಾದ ಮಹಾಮಾರ್ಗಗಳಲ್ಲಿ ನಿರೀಕ್ಷೆಯು ಅತ್ಯಂತ ಪ್ರಬಲವಾದ್ದು. ಈ ಜಗತ್ತು, ಸಮಾಜ ಮತ್ತು ಸಾಮಾಜಿಕ ಸಂಬಂಧಗಳು ಇವುಗಳ ಲಕ್ಷಣಗಳನ್ನು ಸ್ಪಷ್ಟವಾಗಿ ನಿರೂಪಿಸಬೇಕೆಂಬುದು ಅವನ ಪ್ರಯತ್ನ.
- ನಿರೀಕ್ಷೆ ಹೆಚ್ಚಾದಷ್ಟೂ ಪತನ, ಹತಾಶೆ ಮತ್ತು ದುಃಖಗಳೂ ಹೆಚ್ಚಾಗುತ್ತವೆ. ಮನುಷ್ಯನ ಮಹಾನ್ ನಿರೀಕ್ಷೆಗಳಲ್ಲಿ ಕೆಲವು ಆಧ್ಯಾತ್ಮಿಕ ಬದುಕು, ಅದರ ಪರಂಪರೆಗಳು ಮತ್ತು ಗುರುಗಳಿಗೆ ಸಂಬಂಧಿಸಿದವು. ಎಚ್ಚರಿಕೆಯಿಂದಿರಿ !
- ವಾಸ್ತವ ರೂಪದಲ್ಲಿ ಗ್ರಹಿಸುವುದು ಎಂದರೆ ಒಂದು ಅರ್ಥದಲ್ಲಿ ಸಂಪೂರ್ಣವಾಗಿ ಸ್ಪಷ್ಟ ವ್ಯಾಖ್ಯಾನಕ್ಕೆ ನಿಲುಕದಿರುವ ಸಾಮರ್ಥ್ಯ.
- ಗಂಡ-ಹೆಂಡತಿಯರೆಂದರೆ ಜೊತೆಯಲ್ಲಿ ಹಾರುತ್ತಿರುವ ಹಕ್ಕಿಗಳು. ಅವರಿಗೆ ನಾಲ್ಕು ರೆಕ್ಕೆಗಳು ಇರುವುದು ನಿಜವಾದರೂ ಅವರನ್ನು ಕಟ್ಟಿಹಾಕಿದ್ದೇ ಆದರೆ ಅವರು ಹಾರಲಾರರು.
- ಸತ್ಯವೆಂದರೆ ನೀವು ಏನನ್ನು ಅರಸುತ್ತಿದ್ದೀರೋ ಅದು ನೀವೇ.
- ಸಾಧಕನು ಸಂಗತಿಗಳು ಹೇಗೆ ಆಗಬೇಕೋ ಹಾಗೆ ಆಗುವುದಕ್ಕೆ ಬಿಡುತ್ತ ಜೀವನ ವಾಹಿನಿಯೊಂದಿಗೆ ಹರಿದು ಹೋಗಲು ಯತ್ನಿಸುತ್ತಾನೆ.
- ನಿಮ್ಮ ಸಂತಸಗಳಿಂದ ನಾನು ಸಂತುಷ್ಟನಾಗಿದ್ದೇನೆ. ಆದರೆ ನೀವು ಯಾವತ್ತೂ ಇಷ್ಟಪಡದಿರುವ ಅಥವಾ ನಿಮಗೆ ಅಗತ್ಯವಿಲ್ಲದಿರುವ ವಸ್ತುಗಳನ್ನು ಹಾಕುವ ಕಸದ ತೊಟ್ಟಿಯಾಗಿ ನನ್ನನ್ನು ನೀವು ಬಳಸಿಕೊಳ್ಳಬೇಕೆಂಬುದು ನನ್ನ ಆಸೆ.
- ಪೂರ್ಣ ಸಮರ್ಪಣೆ. ನಿಮ್ಮ ಬದುಕಿನ ಹೊಣೆಯನ್ನು ನೀವೇ ಹೊತ್ತುಕೊಳ್ಳಿ ಇಲ್ಲವೆ ಅದನ್ನು ದೇವರಿಗೆ ಬಿಡಿ. ಸ್ವಾತಂತ್ರ್ಯವನ್ನು ಮರೆಯುವುದೇ ದುಃಖ.
- ಈ ಸಂದರ್ಭದಲ್ಲಿ ಸ್ವಾತಂತ್ರ್ಯವೆಂದರೆ ತನ್ನ ಅಗತ್ಯಗಳನ್ನು ತಾನೇ ತನ್ನ ಮೂಲಕವೇ ಈಡೇರಿಸಿಕೊಳ್ಳುವುದು ಎಂದು. ಅಂಥವರು ಸ್ವಯಂ ತೃಪ್ತರು. ಅವರು ಬೇರೆಯವರಿಂದ ಏನನ್ನೂ ನಿರೀಕ್ಷಿಸರು, ಬಯಸರು,

ಇಷ್ಟಪಡರು. ಅವರ ಅಪೇಕ್ಷೆಗಳು(ಹಕ್ಕೊತ್ತಾಯಗಳು) ಯಾವುವೂ ಇರುವುದಿಲ್ಲ. ಹಾಗಾಗಿ ಅವರಿಗೆ ಬೇರೆಯವರನ್ನು ಮಿತ್ರರನ್ನಾಗಿ ಮಾಡಿಕೊಳ್ಳುವುದು ಮತ್ತು ಅದನ್ನು ಉಳಿಸಿಕೊಂಡು ಬರುವುದು ಬಹು ಸುಲಭ.

- ಬಹಳಷ್ಟು ಜನ ಎಲ್ಲವೂ ದೇವರನ್ನೇ ಅವಲಂಬಿಸಿದೆಯೇನೋ ಎನ್ನುವಂತೆ ಅವನನ್ನು ಪ್ರಾರ್ಥಿಸುತ್ತಾರೆ. ಆದರೆ ಎಲ್ಲವೂ ತಮ್ಮನ್ನೇ ಅವಲಂಬಿಸಿದೆಯೆಂಬಂತೆ ನಡೆದುಕೊಳ್ಳುತ್ತಾರೆ.
- ಸೋಲು ಭಕ್ತಿಯ ತಾಯಿ. ಹಾಗೆಯೇ ಉನ್ನತವಾದ ತಿಳಿವಿನ ಗ್ರಹಿಕೆಯ ತಾಯಿಯೂ ಅದೇ. ಯಶಸ್ಸಿನ ವೇದಿಕೆಯ ಮೇಲೆ ಕುಳಿತು ನೀವು ನಿಜಕ್ಕೂ ಹೆಚ್ಚು ಕಲಿಯಲಾರಿರಿ.
- ಅಹಂಕಾರವಿಲ್ಲದ ಮನುಷ್ಯನಿಗೆ ಅಪಮಾನವೆಂದರೆನೆಂಬುದೇ ತಿಳಿದಿರುವುದಿಲ್ಲ. ಅಲ್ಲಿಯವರೆಗೂ ದಿನಕ್ಕೊಮ್ಮೆ ಅಪಮಾನಕ್ಕೊಳಗುಮಾಡುವಂತೆ ಪ್ರಾರ್ಥಿಸುತ್ತಿರಲಿ.
- ಯಾರೆಷ್ಟೇ ಚತುರರಾಗಿದ್ದರೂ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗದ ನಿಯಮವೊಂದಿದೆ. ಆ ನಿಯಮವೆಂದರೆ 'ನೀವು ಏನನ್ನು ಕೊಡುತ್ತೀರೋ ಅದನ್ನೇ ಪಡೆಯುತ್ತೀರಿ' ಎಂಬುದು. ಎಲ್ಲವನ್ನೂ ಕೊಟ್ಟುಬಿಡಿ. ಎಲ್ಲವನ್ನೂ ಪಡೆಯುವಿರಿ. ಅಲ್ಪವನ್ನು ಮಾತ್ರ ಕೊಡಲು ನೀವು ಸಿದ್ಧರಿದ್ದರೆ ಅದೂ ಆಗಬಹುದು. ಆದರೆ ಹೆಚ್ಚಿನದನ್ನು ನಿರೀಕ್ಷಿಸಬೇಡಿ. ಎಲ್ಲಕ್ಕಿಂತ ಹೆಚ್ಚಿನದೆಂದರೆ ದೂರಬೇಡಿ.
- ನಾವು ಏನು ಆಗಬೇಕೆಂದಿದ್ದೇವೋ ಅದರ ಬಗ್ಗೆ ಶ್ರದ್ದೆ ಅಥವಾ ವಿಶ್ವಾಸ ಇಡುವುದಲ್ಲ, ಬದಲಿಗೆ ಆಗಿಹೋಗಿರುವುದರ ಬಗ್ಗೆ, ಆಗುತ್ತಿರುವುದರ ಬಗ್ಗೆ ಸ್ವಾರ್ಥ ಅಥವಾ ಬೇರೆ ಯಾವುದೇ ಉದ್ದೇಶವಿಟ್ಟುಕೊಳ್ಳದೆ ಶ್ರದ್ಧೆ(ವಿಶ್ವಾಸ) ಇಡಬೇಕು. ಸಂಪೂರ್ಣ ಸ್ವೀಕೃತಿ ಎಂದು ಹೇಳಲಾಗುವ ಇಂಥ ಶ್ರದ್ಧೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬಲ್ಲವರು ಕೇವಲ ಕೆಲವೇ ಮಂದಿ.

ಒಂದು ವರ್ಷದ ಯೋಗಾಧ್ಯಯನದಿಂದ ತಲುಪಿದ ತೀರ್ಮಾನಗಳು

ಖಚಿತವಾದ ತೀರ್ಮಾನಗಳಿಗೆ ಬರಲು ಒಂದು ವರ್ಷದ ಅವಧಿ ತೀರಾ ಕಡಿಮೆಯ ಅವಧಿ. ಆದಾಗ್ಯೂ ಎಲ್ಲೋ ಒಂದು ಕಡೆಯಿಂದ ಪ್ರಾರಂಭ ಮಾಡಲೇಬೇಕು. ಒಂದು ವರ್ಷದ ಮುಕ್ತಾಯದ ನಂತರದಲ್ಲಿ ಇವು ನಾನು ತಲುಪಿದ ತಾತ್ಕಾಲಿಕ ತೀರ್ಮಾನಗಳು. ಇನ್ನಷ್ಟು ಅನುಭವದ ಬೆಳಕಿನಲ್ಲಿ ಬಹುಶಃ ಅವುಗಳನ್ನು ಪರಿಷ್ಕರಿಸಲೂ ಬಹುದು.

ಅರಿವು ಅಥವಾ ಜಾಗೃತಿ ಬಹಳ ಮುಖ್ಯವಾದ್ದು. ಯೋಗದ ಅಭ್ಯಾಸಗಳೆಲ್ಲವೂ ನಾವೇನು ಮಾಡುತ್ತಿದ್ದೇವೆ, ನಮ್ಮ ಮನಸ್ಸಿನಲ್ಲಿ ಮತ್ತು ನಮ್ಮ ಸುತ್ತ ಏನಾಗುತ್ತಿದೆ ಎಂಬುದನ್ನು ಕುರಿತಂತೆ ನಮ್ಮ ಅರಿವನ್ನು ಹೆಚ್ಚಿಸುವ ವಿಧಾನಗಳು. ಸಾಮಾನ್ಯವಾಗಿ ನಮ್ಮ ಬಹುಮಟ್ಟಿನ ಚಟುವಟಿಕೆಯೆಂದರೆ ಬಾಹ್ಯ ಸಂಗತಿಗಳಿಗೆ ಅಥವಾ ಘಟನೆಗಳಿಗೆ ನಾವು ತೋರುವ ಪ್ರತಿಕ್ರಿಯೆ. ಈ ರೀತಿಯ ಪ್ರತಿಕ್ರಿಯಾತ್ಮಕವಾದ ಬದುಕು ಸಹಜವೆಂದೇ

ತೋರುತ್ತದೆ. ಆದರೆ ಅದು ನಮ್ಮ ಹತೋಟಿಗೆ ಮೀರಿದ ನಿರ್ಬಂಧಪಡಿಸುವ ಗುಣವನ್ನು ತನ್ನಲ್ಲಿ ಅಡಗಿಸಿಕೊಂಡಿದೆ. ಈ ನಿರ್ಬಂಧ ಪಡಿಸುವಿಕೆಯು ಸಂಕಲ್ಪವನ್ನು ಶಕ್ತಿಗುಂದಿಸುತ್ತದೆ, ಸ್ಪಷ್ಟತೆಯನ್ನು ಕಡಮೆಮಾಡುತ್ತದೆ ಮತ್ತು ನಿರ್ಣಯಗಳು ತಪ್ಪಾಗಲು ಕಾರಣವಾಗುತ್ತದೆ.

ಎಲ್ಲ ಯೋಗಾಭ್ಯಾಸಗಳ ಇನ್ನೊಂದು ಧ್ಯೇಯ(ಗುರಿ) ನಾವು ನಮ್ಮ ಆಲೋಚನೆಗಳು ಮತ್ತು ಕಾರ್ಯಗಳನ್ನು ಪರ್ಯಾಲೋಚಿಸಿದ ವಿಧಾನದಲ್ಲಿ ಕಾರ್ಯಗತಗೊಳಿಸುವಂತೆ ಮಾಡುವುದು. ಆಸನಗಳು ನಮಗೆ ದೈಹಿಕ ಮುದ್ರೆಗಳು ಮತ್ತು ಚಲನೆಗಳ ಅರಿವುಂಟುಮಾಡುತ್ತವೆ. ಧ್ಯಾನವು ನಮ್ಮ ಆಲೋಚನೆಗಳ ಬಗ್ಗೆ ನಮಗೆ ಅರಿವುಂಟುಮಾಡುತ್ತದೆ. ಪ್ರಾಣಾಯಾಮವು ನಮ್ಮ ಉಸಿರಾಟದ ಬಗ್ಗೆ ಅರಿವು ನೀಡುತ್ತದೆ.

ಈ ಬಗೆಯ ಅರಿವು ನಮ್ಮನ್ನು ನಾವೇ ಅಭ್ಯಾಸ ಮಾಡಲು ಹಾಗೂ ಅರ್ಥಮಾಡಿಕೊಳ್ಳಲು ನೆರವಾಗುತ್ತದೆ. ನನ್ನ ಅಧ್ಯಯನದ ಅವಧಿಯಲ್ಲಿ ನನ್ನ ಶಾರೀರಿಕ ಮತ್ತು ಮಾನಸಿಕ ಗುಣವಿಶೇಷಗಳೊಂದಿಗೆ– ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ಬಗೆಯ ಗುಣವಿಶೇಷಗಳೊಂದಿಗೆ– ಹಿಂದೆಂದೂ ಆಗದ ರೀತಿಯಲ್ಲಿ ಮುಖಾಮುಖಿಯಾದೆ. ನನ್ನ ಹಠಾತ್ ಪ್ರವೃತ್ತಿಗಳು(ಆವೇಗಪರತೆ), ಪ್ರತಿಕ್ರಿಯಾತ್ಮಕತೆ, ಮಾತ್ಸರ್ಯಗಳು, ಆತ್ಮ ಸಂಶಯಗಳು, ತಳಮಳಗಳು, ಮತ್ತು ದೈಹಿಕ ದೌರ್ಬಲ್ಯಗಳು ಇವೆಲ್ಲವುಗಳೊಂದಿಗೆ ನಾನು ನೇರವಾಗಿ ಮುಖಾಮುಖಿಯಾದೆ. ಪ್ರಾರಂಭದಲ್ಲಿ ಹೀಗೆ ನನ್ನದೇ ಪೊಳ್ಳುತನಗಳ ಅರಿವಾಗುವುದು ತುಂಬಾ ಆತಂಕವುಂಟುಮಾಡುತ್ತಿತ್ತು. ಮೊದಲೆರಡು ತಿಂಗಳು ನನಗೆ ಅತಿಯಾದ ಭಯ, ಹತಾಶೆ ಮತ್ತು ಉಲ್ಲಾಸಗಳು ಒಂದಾದ ನಂತರ ಒಂದು ಆಗುತ್ತಿತ್ತು. ಮನೋಭಾವದಲ್ಲಾಗುತ್ತಿದ್ದ ಈ ತೆರನ ಓಲಾಟಗಳು ಅನೇಕವೇಳೆ ಸಹಿಸಲ ಸಾಧ್ಯವಾಗಿರುತ್ತಿದ್ದುವು. ನನ್ನ ಅರಿವಿನ ಹೆಚ್ಚಳದಿಂದಾಗಿ ನನ್ನ ಮನಸ್ಸಿನ ಸೂಕ್ಷ್ಮತೆ ವೃದ್ಧಿಸಿದ್ದರ ಸಹಜ ಫಲವೇ ಮನೋಭಾವಗಳ ಈ ಒಲೆದಾಟ; ಲೋಲಕವು (Pendulum) ತನ್ನ ಸಹಜ ವಿರಾಮ ಸ್ಥಿತಿಗೆ ಬರುವ ಮುನ್ನ ಈ ರೀತಿಯ ಒಲೆದಾಟ ತೀರ ಸಹಜ ಎಂದು ಗುರುಗಳು ನನಗೆ ವಿವರವಾಗಿ ತಿಳಿಯ ಹೇಳಿದರು.

ಕಾಲ ಕಳೆದಂತೆ ಅರಿವು ವಿಶ್ರಾಂತಿದಾಯಕವೆನಿಸುತ್ತದೆ. ಹೀಗಾಗುವುದಕ್ಕೆ ಎರಡು ಕಾರಣಗಳಿವೆ. ಯೋಗಾಸನಗಳು ಉಂಟುಮಾಡುವ ಭೌತಿಕ ಪರಿಣಾಮವು ದೈಹಿಕ ವಿಶ್ರಾಂತಿಗೆ ಭಾಗಶಃ ಕಾರಣವಾದರೆ, ನಮ್ಮ ಒಳಗಿನ ಮತ್ತು ಹೊರಗಿನ ಪ್ರಪಂಚದೊಂದಿಗೆ ನಾವು ವ್ಯವಹರಿಸದೆ ವಿಧಿಯೇ ಇಲ್ಲ ಎಂಬುದು ನಮ್ಮ ಅರಿವಿಗೆ ಬರುವುದು ಭಾಗಶಃ ಕಾರಣವಾಗುತ್ತದೆ. ದಿನನಿತ್ಯದ ಸಾಮಾನ್ಯ ಜೀವನದಲ್ಲಿ ಈ ಅನುಭವಗಳಿಂದ ತಪ್ಪಿಸಿಕೊಳ್ಳುವ ತರಬೇತಿ ಮನುಷ್ಯನಿಗೆ ಆಗಿರುತ್ತದೆ; ಆದರೆ ಯೋಗದಲ್ಲಿ ಇದರಿಂದ ತಪ್ಪಿಸಿಕೊಳ್ಳುವ

ಮಾತೇ ಇಲ್ಲ. ಈ ನಿರ್ಬಂಧವು ಒಂದು ಬಲವಾದ ಇಚ್ಛಾಶಕ್ತಿಯನ್ನು ಅರಳಿಸುತ್ತದೆ. ಅದು ಬಾಹ್ಯ ಮತ್ತು ಆಂತರಿಕ ವಾಸ್ತವಗಳೊಂದಿಗೆ ವ್ಯವಹರಿಸಲು ನಮ್ಮನ್ನು ಅಣಿಗೊಳಿಸುತ್ತದೆ.

ಈ ವಿಶ್ರಾಂತಿಯಿಂದ ಕೂಡಿದ ಅರಿವು ಮತ್ತು ವೃದ್ಧಿಸಿದ ಇಚ್ಛಾಶಕ್ತಿ ಭವಿಷ್ಯದ ಮತ್ತು ಭೂತದ ಬಗೆಗಿನ ನಮ್ಮ ಚಿಂತನೆಯನ್ನು ಕಡಿಮೆ ಮಾಡುತ್ತದೆ. ಹಾಗೂ ಅದೇ ಸಮಯಕ್ಕೆ ವರ್ತಮಾನದ ಬಗೆಗೆ, ಇಲ್ಲಿನ ಹಾಗೂ ಈಗಿನ ಬಗೆಗೆ ಹೆಚ್ಚು ಗಮನ ನೀಡುವಂತೆ ಮಾಡುತ್ತದೆ. ಸದಾ ವರ್ತಮಾನದೊಂದಿಗಿನ ಸಂಪರ್ಕ, ಸಂತಸ ಮತ್ತು ಆನಂದದ ಭಾವನೆಯನ್ನು ಅನುಭವಕ್ಕೆ ತರುತ್ತದೆ. ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಹೆಚ್ಚು ಆತ್ಮವಿಶ್ವಾಸ ಮತ್ತು ಸ್ಪಷ್ಟತೆ ಇರುತ್ತದೆ. ಮತ್ತು ತೀರ್ಮಾನಗಳು ಹೆಚ್ಚು ಸ್ವಯಂಪ್ರೇರಿತವಾಗಿರುತ್ತವೆ (ಭೂತದ ಮತ್ತು ಭವಿಷ್ಯದ ಪರಿಗಣನೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂಬ ನಿರ್ಬಂಧಕ್ಕೆ ಒಳಪಡದೆ). ಅಂಥ ಆತ್ಮವಿಶ್ವಾಸ ಮತ್ತು ಸ್ಪಷ್ಟತೆ ಒಂದು ಬಗೆಯ ಹಗುರತೆಯ ಹಾಗೂ ಅಧಿಕ ಶಕ್ತಿಯ ಭಾವನೆಯನ್ನು ತಂದುಕೊಡುತ್ತವೆ.

ವಿಶ್ರಾಂತಿಯ, ಕಾಲಾತೀತತೆಯ, ಸಂತಸದ, ಅಧಿಕ ಇಚ್ಛಾಶಕ್ತಿಯ, ಆತ್ಮವಿಶ್ವಾಸದ ಮತ್ತು ಸ್ವಯಂಪ್ರೇರಣೆಯ ಈ ಭಾವನೆಗಳು ಒಟ್ಟಾಗಿಯೇ ಉಂಟಾಗುತ್ತವೆ ಹಾಗೂ ಅವು ಒಂದೇ ಪ್ರಕ್ರಿಯೆಯ ವಿವಿಧ ಮುಖಗಳು. ವಿಶ್ರಾಂತಿಯಿಂದ ಹೆಚ್ಚಿನ ಶಕ್ತಿ ಅಥವಾ ಚೈತನ್ಯ ಉಂಟಾಗುತ್ತದೆ. ಇದು ನಮ್ಮ ದೈಹಿಕ ಆಯಾಸವನ್ನು ಕಡಿಮೆ ಮಾಡುತ್ತದೆ ಹಾಗೂ ನಮ್ಮ ಆಹಾರ ಮತ್ತು ನಿದ್ರೆಯ ಆವಶ್ಯಕತೆಗಳನ್ನು ಕಡಿಮೆ ಮಾಡುತ್ತದೆ. ನನ್ನ ನಿದ್ರೆಯ ಆವಶ್ಯಕತೆ ನಾಲ್ಕು – ಐದು ಗಂಟೆಗಳಿಗೆ ಇಳಿಯಿತು ಮತ್ತು ನನ್ನ ತೂಕ 10–15 ಪೌಂಡ್ ಕಡಿಮೆಯಾಯಿತು. ಅದರ ಪರಿಣಾಮವಾಗಿ ನಾನು ಕಡಿಮೆ ಆಹಾರ ತೆಗೆದುಕೊಳ್ಳಲಾರಂಭಿಸಿದೆ. ಆತಂಕ ಮತ್ತು ಒತ್ತಡಗಳಿಗೆ ಸಾಮಾನ್ಯ ಪ್ರತಿಕ್ರಿಯೆಯಾಗಿ ಅನಿವಾರ್ಯವೆನ್ನುವಂತೆ ನಾನು ತೆಗೆದುಕೊಳ್ಳುತ್ತಿದ್ದ ಅಧಿಕ ಆಹಾರದ ಪ್ರಮಾಣ ಕ್ರಮೇಣ ಕಡಿಮೆಯಾಯಿತು.

ವರ್ತಮಾನ ಅಥವಾ ಪ್ರಸ್ತುತದ ಮೇಲೆ ನಮ್ಮ ಗಮನವನ್ನು ಕೇಂದ್ರಿತಗೊಳಿಸುವ ಹೆಚ್ಚಿನ ಸಾಮರ್ಥ್ಯವು ನಮ್ಮ ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಜೊತೆಗೆ ಈ ಹಿಂದೆ ನಾವು ಕಡೆಗಣಿಸಿರಬಹುದಾದ ನಮ್ಮ ಸುತ್ತಣ ಪರಿಸರದಿಂದ ಸೂಚನೆಗಳನ್ನು ಗ್ರಹಿಸುತ್ತೇವೆ. ಇದರ ಪರಿಣಾಮವಾಗಿ ಬೇರೆ ರೀತಿಯಲ್ಲಿ ನೋಡಿದಾಗ ಸಂಬಂಧವಿಲ್ಲವೆಂಬಂತೆ ತೋರುವ ಘಟನೆಗಳ ನಡುವೆ ಸಂಬಂಧವಿರುವುದು ಕಂಡುಬರುತ್ತದೆ. ನಮ್ಮ ಸುತ್ತ ಏನಾಗುತ್ತಿದೆ ಎಂಬುದರ ಕುರಿತಂತೆ ಹೆಚ್ಚಾದ ಈ

ಸೂಕ್ಷ್ಮಸಂವೇದನೆ ಪವಾಡವೆಂಬಂತೆ ಬೆರಗುಗೊಳಿಸುತ್ತದೆ. ನಮ್ಮ ಈ ಹೆಚ್ಚಾದ ಚೈತನ್ಯದಿಂದಾಗಿ ನಮ್ಮದೇ ಸ್ವಾರ್ಥಸಾಧಕ ಆವಶ್ಯಕತೆಗಳ ಗೀಳಿಗೆ ಬೀಳುವುದಿಲ್ಲ. ನಮ್ಮ ಬಗ್ಗೆ ನೀಡಿದಷ್ಟೇ ಗಮನವನ್ನು ಬೇರೆಯವರ ಬಗ್ಗೆಯೂ ನೀಡುವುದು ನಮಗೆ ಸಾಧ್ಯವಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ನಮ್ಮ ಅನುಕಂಪೆ ವೃದ್ಧಿಸುತ್ತದೆ.

ಘಟನೆಗಳನ್ನು ನಿರುದ್ವಿಗ್ನವಾಗಿ ಅಂಗೀಕರಿಸುವ ಈ ಪ್ರವೃತ್ತಿ ನಮ್ಮನ್ನು ಮತ್ತು ನಮ್ಮ ಪರಿಸರವನ್ನು ಕೆಲವರು ದೇವರು ಅಥವಾ ಈಶ್ವರ ಎಂದು ಕರೆಯುವ ಒಂದು ಅವೈಯಕ್ತಿಕ ಇಚ್ಛಾಶಕ್ತಿಗೆ ಬಿಟ್ಟುಕೊಡುವಂತೆ ಅಥವಾ ಅರ್ಪಿಸಿಕೊಳ್ಳುವಂತೆ ಮಾಡುತ್ತದೆ. ಈ ಘಟನೆಗಳೊಂದಿಗೆ ಹೆಚ್ಚು ಹೆಚ್ಚು ಸಮರಸಭಾವದಿಂದ ನಾವು ಕೆಲಸಮಾಡುವುದನ್ನು ಮತ್ತು ಅದಕ್ಕನುಗುಣವಾಗಿ ಅವುಗಳನ್ನು ನಿಯಂತ್ರಿಸುವ ಇಚ್ಛೆ ತೀರ ಕಡಿಮೆಯಾಗುವುದನ್ನು ನಾವು ಕಂಡುಕೊಳ್ಳುತ್ತೇವೆ. ಹೀಗೆ 'ಅವುಗಳ ಪಾಡಿಗೆ ಅವು ನಡೆದುಕೊಂಡುಹೋಗಲಿ' ಎಂಬ ದೃಷ್ಟಿಯ ಈ ಸಾಮರ್ಥ್ಯ ನಮಗೆ ಇನ್ನೂ ಹೆಚ್ಚಿನ ವಿಶ್ರಾಂತಿ ನೀಡುತ್ತದೆ. ಹೀಗೆ ಈ ಇಡೀ ಸರಣಿ ಪ್ರಕ್ರಿಯೆ ಬಲಗೊಳ್ಳುತ್ತದೆ. ವಿಶ್ರಾಂತಿಯು ಅರಿವಿನ ಹೆಚ್ಚಳಕ್ಕೆ ಕಾರಣವಾಗುತ್ತದೆ. ಅದಕ್ಕೆ ಪ್ರತಿಯಾಗಿ ಇದು ವರ್ತಮಾನದೊಂದಿಗೆ ಹೊಂದಾಣಿಕೆ ಉಂಟುಮಾಡುತ್ತದೆ. ಅದರೊಂದಿಗೆ ಇಚ್ಛಾಶಕ್ತಿ ಹೆಚ್ಚುತ್ತದೆ, ತೀರ್ಮಾನ ತೆಗೆದುಕೊಳ್ಳುವಲ್ಲಿ ಸ್ಪಷ್ಟತೆ ಮತ್ತು ಆತ್ಮವಿಶ್ವಾಸವುಂಟಾಗುತ್ತದೆ. ಅಂತಿಮವಾಗಿ ಎಲ್ಲವಸ್ತುಗಳ ನಡುವಿನ ಅಂತಃ ಸಂಬಂಧಗಳ ಹೆಚ್ಚಿನ ಗ್ರಹಿಕೆಗೆ ಕಾರಣವಾಗುತ್ತದೆ.

ಈ ಅಧ್ಯಯನದಲ್ಲಿ ನನ್ನ ಅನುಭವವೇನಿದ್ದರೂ ಪತಂಜಲಿಯು ತನ್ನ 'ಯೋಗಸೂತ್ರಗಳಲ್ಲಿ' ವಿವರಿಸಿರುವ ಮಾರ್ಗದಲ್ಲಿ ಪ್ರಾರಂಭಿಕ ಹೆಜ್ಜೆ ಮಾತ್ರ. ಒಂದು ವರ್ಷದ ಅವಧಿಯಲ್ಲಿ ನಾನು ಮಾಡಿದ್ದೆಲ್ಲವೂ ಬಹುಶಃ ನನ್ನ ವಿಕ್ಷೇಪಗಳೊಂದಿಗೆ ಸಂಭಾಳಿಸಿದ್ದು. ವಿಶೇಷ ಸಿದ್ಧಿಗಳನ್ನು, ಕೈವಲ್ಯ ಮತ್ತು ಮೋಕ್ಷವೇ ಮೊದಲಾದವನ್ನು ನೀಡುತ್ತದೆಂದು ಹೇಳಲಾದ ಸಮಾಧಿಯ ಹಂತವನ್ನು ಮುಟ್ಟಿದ ಅನುಭವ ನನಗಿಲ್ಲ. ಅಥವಾ ಪ್ರಾಣ ಶಕ್ತಿ ಸಂಚಾರದ ಅನುಭವವೂ ನನಗಾಗಿಲ್ಲ. ಆದರೆ ಯೋಗತಂತ್ರಗಳು ಕ್ಷೇಮದ, ಸಂತಸದ, ಅರ್ಥಗ್ರಹಣದ, ಚೈತನ್ಯದ ಮತ್ತು ಸಹಾನುಭೂತಿ, ಅನುಕಂಪವೇ ಮೊದಲಾದ ಭಾವಗಳ ಅನುಭವಗಳನ್ನು ತಂದುಕೊಟ್ಟು ಆ ಮೂಲಕ ವೈಯಕ್ತಿಕ ಬದುಕಿನ ಸುಖ ಸಂತೋಷಕ್ಕೆ ಕಾರಣವಾಗಬಲ್ಲುವೆಂದು ಸ್ಥಾಪಿಸಲು ನನಗೆ ಸಾಧ್ಯವಾಯಿತು.

ಒಂದು ವರ್ಷದ ಯೋಗಾಧ್ಯಯನವು ನನ್ನ ವೈದ್ಯಕೀಯ ವೃತ್ತಿಯಲ್ಲಿ ಅಳವಡಿಸಬಹುದಾದ ಸಲಹೆಗಳನ್ನು ಪ್ರೇರಿಸುತ್ತದೆಂದು ನಾನು ಭರವಸೆ ತಾಳಿದ್ದೆ. ಚಿಕಿತ್ಸೆಯ ಆರಂಭದಲ್ಲಿ ಯಾವ ಯೋಗ ತಂತ್ರಗಳು ಸುಲಭವೆನಿಸುತ್ತವೆ ಎಂಬ ವಿಷಯದಲ್ಲಿ ಜನರ ಅಭಿಪ್ರಾಯಗಳು ಭಿನ್ನವಾಗಿವೆ ಎಂಬುದು ನನ್ನ ಅನಿಸಿಕೆ. ಅದೇ ರೀತಿ ಬೇರೆ

ಬೇರೆ ಮನೋರೋಗ ಸಮಸ್ಯೆಗಳಿಗೆ ಬೇರೆ ಬೇರೆ ಯೋಗತಂತ್ರಗಳನ್ನು ಬಳಸಬಹುದು ಎಂಬುದು ಕೂಡ ನನ್ನ ಅನಿಸಿಕೆ. ಉದಾಹರಣೆಗೆ, ಶರೀರಕ್ಕೆ ನೀಡುವ ಗಮನವನ್ನು ಕಡಿಮೆಮಾಡುವ ಮೂಲಕ ಹೈಪೋಕಾಂಡ್ರಿಯಾಕ್ಸ್ ಸಮಸ್ಯೆಗೆ ಧ್ಯಾನವು ನೆರವಾಗಬಹುದು. ಹಾಗೆಯೇ 'ಅಹಂ'ನ ಮಿತಿಗಳನ್ನು ಸಡಿಲಗೊಳಿಸುವ ಮೂಲಕ ಜನರ ತಳಮಳವನ್ನು ತಗ್ಗಿಸಬಹುದು. ಪ್ರಾಣಾಯಾಮವು ಚುರುಕುತನವನ್ನು ಹೆಚ್ಚಿಸುತ್ತದೆ. ಹಾಗೂ ಖಿನ್ನತೆಯನ್ನು ಹೋಗಲಾಡಿಸಲು ಕೂಡ ನೆರವಾಗಬಹುದು. ಆಸನಗಳು ಆಲೋಚನೆಗಳಿಗಿಂತ ಹೆಚ್ಚಾಗಿ ದೇಹದ ಮೇಲೆ ಗಮನವನ್ನು ಕೇಂದ್ರೀಕರಿಸುತ್ತವೆ. ಈ ತಂತ್ರವು ಛಿದ್ರ ವ್ಯಕ್ತಿತ್ವದ ಮನೋರೋಗಿಗಳಿಗೆ (Schizoid) ನೆರವಾಗಬಹುದು. ಯೋಗನಿದ್ರೆಯು ಸರಳ ರೇಖಾತ್ಮಕ ಶಾಬ್ದಿಕ ಚಿಂತನೆಯ ಕಡೆಯಿಂದ ಪ್ರತಿಮೆಗಳು ಮತ್ತು ದೃಶ್ಯಾತ್ಮಕತೆಗೆ ಬದಲಾಯಿಸುತ್ತದೆ. ಇದು ಗೀಳು –ಬದ್ಧತೆಯ ವಿಕಾರಗಳಿಂದ ಬಳಲುವ ರೋಗಿಗಳಿಗೆ ಅನುಕೂಲಕರವಾಗ ಬಹುದು. ಈ ಎಲ್ಲ ಅನಿಸಿಕೆಗಳು (ಮೂಡಿಕೆಗಳು) ತಾತ್ಕಾಲಿಕ. ಇವನ್ನು ಮುಂದುವರಿದ ಪರಿಶೋಧನೆಗೆ ಪ್ರಕಲ್ಪನೆಗಳೆಂದೇ ಪರಿಗಣಿಸ ಬೇಕು.

ಏನೇ ಆದರೂ ಎಲ್ಲ ಯೋಗಾಭ್ಯಾಸಗಳೂ ನಮ್ಮನ್ನು ನಾವು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಮತ್ತು ಆ ಮೂಲಕ ನಮ್ಮ ವೈರುಧ್ಯಗಳನ್ನು/ಸಂಘರ್ಷಗಳನ್ನು (conflicts) ಬಗೆಹರಿಸಿಕೊಳ್ಳಲು ನೆರವಾಗುತ್ತವೆ ಹಾಗೂ ನರವ್ಯಾಧಿ ಸಂಬಂಧವಾದ ಪ್ರವೃತ್ತಿಗಳನ್ನು(neurotic tendencies) ಕಡಿಮೆಮಾಡುತ್ತವೆ. ಯೋಗಾಭ್ಯಾಸದ ಅವಧಿಯಲ್ಲಿ ಅಶಾಬ್ದಿಕ ಅರಿವು ಹೆಚ್ಚು ಪ್ರಬಲವಾಗಿರುತ್ತದೆ. ಅದು ಮೆದುಳಿನ ಬಲಭಾಗವನ್ನು ಬಹುಶಃ ಸಾಮಾನ್ಯವಾಗಿ ಇರುವುದಕ್ಕಿಂತಲೂ ಹೆಚ್ಚು ಚುರುಕುಗೊಳಿಸುತ್ತದೆ. ಅಷ್ಟೇ ಅಲ್ಲದೆ ನಾವು ಶಾಬ್ದಿಕ ಕೌಶಲವನ್ನು ಹೆಚ್ಚು ಹೆಚ್ಚು ಅವಲಂಬಿಸುವುದನ್ನು ಸರಿಪಡಿಸುತ್ತದೆ. ಇದು ಹೆಚ್ಚಿನ ಸಂಶೋಧನೆಯನ್ನು ಅಪೇಕ್ಷಿಸುವ ನನ್ನ ಒಂದು ಊಹೆ.

ಯೋಗದ ನಿಜವಾದ ಗುರಿ ನಿಶ್ಚಯವಾಗಿಯೂ ಮುಕ್ತಿಯೇ. ಮುಕ್ತಿ ಸಂಪಾದನೆಯು ವ್ಯಕ್ತಿಯ ಇಡೀ ಅಸ್ತಿತ್ವದ ತ್ಯಾಗವನ್ನು ಅಪೇಕ್ಷಿಸುತ್ತದೆ. ಆದರೆ ಆ ತ್ಯಾಗದ ಸಾಮರ್ಥ್ಯ ವಿರುವವರಾಗಲಿ ಅದಕ್ಕೆ ಸಿದ್ಧರಿರುವವರಾಗಲಿ ಹೆಚ್ಚು ಮಂದಿ ಇಲ್ಲ. ನಿಗದಿಪಡಿಸಿದ ದೈಹಿಕ ಮತ್ತು ಮಾನಸಿಕ ಅಭ್ಯಾಸದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದವರು ಯಾರಾದರೂ ಇದ್ದರೆ, ಯಮ ಮತ್ತು ನಿಯಮಗಳನ್ನು ಅನುಸರಿಸಬೇಕೆಂಬ ಅಂಥವರ ಅಪೇಕ್ಷೆ ಮತ್ತು ಸಾಮರ್ಥ್ಯ ಹೆಚ್ಚುವ ಸಾಧ್ಯತೆಯಂತೂ ಇದೆ. ಮುಕ್ತಿಯನ್ನು ಅಪೇಕ್ಷಿಸುವವರಿಗೂ ವ್ಯಕ್ತಿತ್ವದ ಮತ್ತು ಮನೋಧರ್ಮದ ಕೆಲವು ಸರಿಯಾದ ಪೂರ್ವ ಅಗತ್ಯಗಳು ಕೂಡ ಬೇಕಾಗುತ್ತವೆ. ಯೋಗಸೂತ್ರಗಳು ಮತ್ತು ಪಾರಂಪರಿಕ ಭಾರತೀಯ ಚಿಂತನೆ ಜನ್ಮಾಂತರಗಳ ಸಂಸ್ಕಾರವೂ ಇದಕ್ಕೆ ಬಹಳ ಮುಖ್ಯ ಎಂದು ಸಾಧಿಸುತ್ತವೆ. ಬಹುಶಃ ಅದು ನಿಜವೂ

ಹೌದು. ಆದರೆ ಇದು ನನಗೆ ಪರಿಚಿತವಲ್ಲದ ವಿಷಯ. ಹಾಗಾಗಿ ಈ ಬಗ್ಗೆ ನಾನು ಚರ್ಚಿಸುವುದಿಲ್ಲ.

ನನ್ನ ಪ್ರಯೋಗಕ್ಕೆ ಅದರದೇ ಆದ ಮಿತಿಗಳಿದ್ದುವು. ಹಾಗಿದ್ದರೂ ಒಂದು ವರ್ಷದ ಅವಧಿಯ ಯೋಗಾಭ್ಯಾಸದ ಅನುಭವವು ನಾನು ಕೈಗೊಳ್ಳಬೇಕೆಂದಿದ್ದ ಸಾಧು ಸಂನ್ಯಾಸಿಗಳನ್ನು ಕುರಿತ ಅಧ್ಯಯನಕ್ಕೆ ಒಂದು ಬುನಾದಿಯನ್ನು ಒದಗಿಸಿತು.

□□

ಭಾಗ–2
ಸಾಧುಗಳೊಂದಿಗೆ ಭೇಟಿ

ಉದ್ದೇಶ ಮತ್ತು ಸ್ಥಳ

ಸನ್ಯಾಸಿಗಳನ್ನು ಕುರಿತ ನನ್ನ ಅಧ್ಯಯನದ ಹಾದಿ ಒಬ್ಬ ವಿಜ್ಞಾನಿಯದು ಮತ್ತು ನಂಬಿಕೆಯಿಲ್ಲದವನ ಹಾದಿ. ಆದರೆ ಅದರಲ್ಲಿ ಸಂನ್ಯಾಸಿಗಳ ಬದುಕಿನ ಅರ್ಥ ಕುರಿತಂತೆ ಮನುಷ್ಯನ ಗಾಢವಾದ ಆಸಕ್ತಿ ಇತ್ತು. ಬಹಳಷ್ಟು ಸಮಯ ಆನಂದದ ಸ್ಥಿತಿಯಲ್ಲಿ ಇರುತ್ತಾರೆ ಎಂದು ಹೇಳಿಕೊಳ್ಳುವ ಸನ್ಯಾಸಿಗಳು ನಿಜಕ್ಕೂ ಹಾಗೆ ಇರುತ್ತಾರೆಯೇ ಎಂಬುದನ್ನು ನಾನು ತಿಳಿಯಬೇಕೆಂದಿದ್ದೆ.

ಈ ಶೋಧದಲ್ಲಿ ನನ್ನ ಆಸಕ್ತಿ ಕುದುರಿದ್ದಕ್ಕೆ ಬೇರೆ ಕಾರಣಗಳೂ ಇದ್ದುವು. ಆಧ್ಯಾತ್ಮಿಕ ಅನುಭವಗಳನ್ನು ಕುರಿತು ಅಧ್ಯಯನ ಮಾಡುವುದರಲ್ಲಿ ನಾನು ಆಸಕ್ತನಾಗಿದ್ದೆ. ಅಂಥ ಅನೇಕ ಅನುಭವಗಳ ವಿವರಗಳನ್ನು ನಾನು ಓದಿದ್ದೆ ಮತ್ತು ಕೆಲವೊಂದು ಪರಿಸರದಲ್ಲಿ ಆ ಆಧ್ಯಾತ್ಮಿಕ ಅನುಭವಗಳನ್ನು ಚೋದಿಸಲು ಸಾಧ್ಯವೆಂದು ನನಗೆ ತಿಳಿದಿತ್ತು. ಇಂಥ ಅನುಭವವನ್ನು ತಂದುಕೊಳ್ಳಲು ಸನ್ಯಾಸಿಗಳು ವಿಶಿಷ್ಟ ಬಗೆಯ ಅಭ್ಯಾಸಗಳಲ್ಲಿ ತೊಡಗುತ್ತಾರೆಂಬುದು ಎಲ್ಲರಿಗೂ ವಿದಿತವೇ ಇದೆ. ಈ ಅನುಭವಗಳ ವರ್ಣನೆಗಳನ್ನು ಅವರುಗಳಿಂದಲೇ ಕೇಳಲು ಹಾಗೂ ಆ ಅನುಭವಗಳನ್ನು ಗಳಿಸಲು ಅವರು ಅನುಸರಿಸುವ ವಿಧಾನಗಳ ಬಗ್ಗೆ ಹೆಚ್ಚು ತಿಳಿಯಲು ಇಚ್ಛಿಸಿದ್ದೆ.

ಯೋಗ ಸೂತ್ರಗಳು ಹೇಳುವ, ಸಿದ್ಧಿಗಳೆಂದು ಕರೆಯಲಾಗುವ ಹಾರುವ ಸಾಮರ್ಥ್ಯ, ಕಣ್ಣಿಗೆ ಕಾಣಿಸದೆ ಅಂತರ್ಧಾನವಾಗಿಬಿಡುವ ಇಲ್ಲವೆ ಆನೆಯ ಬಲದಂಥ ಬಲ ಹೊಂದುವುದೇ ಮೊದಲಾದ ವಿಶೇಷ ಶಕ್ತಿಗಳ ಬಗ್ಗೆಯೂ ತಿಳಿಯಬೇಕೆಂದಿದ್ದೆ. ಹಾಗೆ ನೋಡಿದರೆ ಪತಂಜಲಿಯ ಯೋಗ ಸೂತ್ರದ 196 ಸೂತ್ರಗಳಲ್ಲಿ 55 ಸೂತ್ರಗಳು ಈ ಸಿದ್ಧಿಗಳ ಬಗ್ಗೆಯೇ ಚರ್ಚಿಸುತ್ತವೆ. ಕೆಲವು ಸನ್ಯಾಸಿಗಳು ಈ ಸಿದ್ಧಿಗಳನ್ನು ಪಡೆದಿರುವುದಾಗಿ ಹೇಳಿಕೊಳ್ಳುತ್ತಾರೆ. ಈಗ ನಮಗೆ ತಿಳಿದಿರುವ ಭೌತಶಾಸ್ತ್ರದ ನಿಯಮಗಳನ್ನೂ ಮೀರಿ ಕಾರ್ಯವೆಸಗಬಲ್ಲ ಸಾಮರ್ಥ್ಯ ನೀಡುವ ಸಿದ್ಧಿಗಳನ್ನು ಈ ಸನ್ಯಾಸಿಗಳು ನಿಜಕ್ಕೂ ಪಡೆದಿದ್ದಾರೆಯೆ ಎಂದು ಕಂಡುಕೊಳ್ಳಬಯಸಿದ್ದೆ.

ಈ ಸಾಧುಗಳ ಬಗೆಗಿನ ನನ್ನ ಆಸಕ್ತಿಗಿದ್ದ ಕೊನೆಯ ಒಂದು ಕಾರಣ ಮನೋರೋಗ ಚಿಕಿತ್ಸಕನಾದ ನನ್ನ ವೃತ್ತಿಗೆ ಸಂಬಂಧಿಸಿದ್ದು. ಭಾರತದಲ್ಲಿ ಹುಟ್ಟಿ ಬೆಳೆದಿದ್ದವನಾದ ಕಾರಣ ಬಹಳಷ್ಟು ಜನ ತಮ್ಮ ಭಾವನಾತ್ಮಕ ಸಮಸ್ಯೆಗಳ ಪರಿಹಾರಕ್ಕೆ ಮನೋರೋಗ ಚಿಕಿತ್ಸಕರ

ಬಳಿಗೆ ಹೋಗುವುದಕ್ಕಿಂತ ಹೆಚ್ಚಾಗಿ ಸಾಧು ಸನ್ಯಾಸಿಗಳ ಬಳಿಗೆ ಹೋಗುತ್ತಾರೆಂದು ನನಗೆ ಗೊತ್ತಿತ್ತು. ಅದೂ ಅಲ್ಲದೆ ಛಿದ್ರ ವ್ಯಕ್ತಿತ್ವದ (ದ್ವಂದ್ವ ವ್ಯಕ್ತಿತ್ವದ) ಮನೋರೋಗಿಗಳು ಯೋಗದ ನೆರವಿನಿಂದ ಈ ಒಂದು ಗಂಭೀರ ಮನೋವ್ಯಾಧಿಯನ್ನು ಪರಿಹರಿಸಿಕೊಳ್ಳಲು ಸಾಧ್ಯವೆ ಎಂದು ಕಂಡುಕೊಳ್ಳಬೇಕೆಂದಿದ್ದೆ. ನಾನು ಮತ್ತು ನನ್ನ ಸಹೋದ್ಯೋಗಿ ಮನೋರೋಗ ಚಿಕಿತ್ಸಕರು ಇನ್ನೂ ಉತ್ತಮ ಮನೋರೋಗ ಚಿಕಿತ್ಸಕರಾಗುವಲ್ಲಿ ಸಾಧು ಸನ್ಯಾಸಿಗಳಿಂದ ಕಲಿಯುವಂಥದು ಏನಾದರೂ ಇದೆಯೆ ಎಂಬ ವಿಸ್ಮಯವೂ ಇತ್ತು.

ಇದೊಂದು ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿತ್ತು. ನಾನು ಅದನ್ನು ಇಪ್ಪತ್ತೈದು ವರ್ಷಗಳ ಕಾಲ ಮುಂದುವರಿಸಿಕೊಂಡು ಹೋದೆ. ಪ್ರತಿ ವರ್ಷವೂ ಸನ್ಯಾಸಿಗಳನ್ನು ಸಂದರ್ಶಿಸಲು ಹಿಮಾಲಯ ಪರ್ವತದಲ್ಲಿ ಒಂದು ತಿಂಗಳು ಕಳೆಯುತ್ತಿದ್ದೆ. ಹೊರಗಿನವರ ಮಧ್ಯ ಪ್ರವೇಶವಿಲ್ಲದೆ ನಿರ್ವಿಘ್ನವಾಗಿ ತಮ್ಮ ಸಾಧನೆಗಳನ್ನು ಮುಂದುವರಿಸಲು ಅವರಲ್ಲಿ ಕೆಲವರಂತೂ ಜನರಿಗೆ ಪ್ರವೇಶಿಸಲು ಹೆಚ್ಚುಕಡಿಮೆ ಸಾಧ್ಯವಾಗದಂಥ ಉನ್ನತ ಪರ್ವತ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು.

* * *

ಹಿಂದೂ ಧರ್ಮದ ಪರಂಪರೆಯಲ್ಲಿ ಮನುಷ್ಯನ ಜೀವನಕ್ಕೆ ನಾಲ್ಕು ಹಂತಗಳನ್ನು ನಿಗದಿಪಡಿಸಲಾಗಿದೆ. ಅವುಗಳೆಂದರೆ ಬ್ರಹ್ಮಚರ್ಯೆ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ. ಮದುವೆಯಾಗಿ ಮಕ್ಕಳನ್ನು ಪಡೆದಮೇಲೆ, ಆ ಮಕ್ಕಳೂ ಜೀವನದಲ್ಲಿ ನೆಲೆನಿಂತ ನಂತರದಲ್ಲಿ ಮನೆಯನ್ನು ತೊರೆದು ಕಾಡಿನಲ್ಲಿ ಗುಡಿಸಿಲು ವಾಸ ಮಾಡುತ್ತ ಧ್ಯಾನ ಮತ್ತು ತಪಸ್ಸಿನಲ್ಲಿ ತೊಡಗಿ ಐಹಿಕ ವಸ್ತು ಸಂಬಂಧಗಳಿಂದ ತನ್ನ ಆತ್ಮವನ್ನು ಬಿಡುಗಡೆಗೊಳಿಸಿ ಕೊಳ್ಳಬೇಕು. ಪ್ರಾಪಂಚಿಕ ಸಂಬಂಧಗಳನ್ನೆಲ್ಲ ಕಡಿದುಕೊಂಡ ಹಂತವನ್ನು ತಲುಪಿದಾಗ ಕಾಡಿನ ಗುಡಿಸಿಲನ್ನು ಬಿಟ್ಟು ದಿನನಿತ್ಯದ ಗೊಡವೆಗಳಿಂದ ನಿರ್ಲಿಪ್ತನಾಗಿ ಆತ್ಯಂತಿಕ ಬಿಡುಗಡೆಯಾದ ಮೋಕ್ಷವನ್ನು ಹುಡುಕುತ್ತ ಪರಿವ್ರಾಜಕ ಸನ್ಯಾಸಿಯಾಗುತ್ತಾನೆ. ಇದು ಎಲ್ಲರೂ ಅನುಸರಿಸುವ ಸಾಮಾನ್ಯ ನಡೆ ಅಲ್ಲವಾದರೂ ಅದೊಂದು ಮಾನ್ಯಮಾಡಲ್ಪಟ್ಟ ಅಂಗೀಕೃತವಾದ ಮತ್ತು ಕೆಲವರು ಅಳವಡಿಸಿಕೊಂಡ ಜೀವನ ಶೈಲಿ.

ಸಾಮಾನ್ಯವಾಗಿ ಬಹಳಷ್ಟು ಹಿಂದೂಗಳಿಗೆ ತೀರ್ಥಯಾತ್ರೆಯ ಸಮಯವಾದ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ನಾನು ಹಿಮಾಲಯಕ್ಕೆ ಭೇಟಿ ನೀಡುತ್ತಿದ್ದೆ. ನಾನು ನೂರಕ್ಕೂ ಹೆಚ್ಚು ಜನ ಸಾಧುಗಳು ಮತ್ತು ಕೆಲವು ಸಾಧ್ವಿಯರನ್ನು ಸಂಧಿಸಿದೆ. ಅವರುಗಳು ಪರಿವ್ರಾಜಕ ಸನ್ಯಾಸಿನಿಯರಾಗಿದ್ದರು ಇಲ್ಲವೆ ಸಮಾನ ಮನಸ್ಕರ ಆಶ್ರಮಗಳಲ್ಲಿ ಇರುತ್ತಿದ್ದರು. ಇದರ ಜೊತೆಗೆ ಕೆಲವು ವೇಳೆ ನನ್ನ ತೌರು ಪ್ರದೇಶವಾದ ದಕ್ಷಿಣಭಾರತವಾಸಿ ಸಾಧುಗಳ ಸಂದರ್ಶನ ಮಾಡಿದ್ದೇನೆ.

ನಾವು ಸಂದರ್ಶಿಸಿದ ಕೆಲವು ಸಾಧುಗಳು ಪರಂಪರೆಯನ್ನು ಅನುಸರಿಸಿದ್ದರು. ಅದರಂತೆ ಗೃಹಸ್ಥ ಜೀವನದ ಹೊಣೆಗಾರಿಕೆಗಳನ್ನೆಲ್ಲ ಯಶಸ್ವಿಯಾಗಿ ನಿರ್ವಹಿಸಿ

ಪ್ರಜ್ಞಾಪೂರ್ವಕವಾಗಿ ತಮ್ಮ ಜೀವನ ಯಾತ್ರೆಯ ಅಂತಿಮ ಹಂತವನ್ನು ಪ್ರವೇಶ ಮಾಡುವುದರಲ್ಲಿದ್ದರು. ವಾಸ್ತವವಾಗಿ ಅವರಲ್ಲಿ ಜೀವನದ ಪ್ರಾರಂಭಿಕ ಹಂತಗಳ ಮೂಲಕ ಸಾಗದೆ ಅವನ್ನು ದಾಟಿಕೊಂಡು ಇನ್ನೂ ಚಿಕ್ಕ ವಯಸ್ಸಿನಲ್ಲೇ ಸನ್ಯಾಸಿಗಳಾದವರೇ ಹೆಚ್ಚು ಮಂದಿ ಇದ್ದರು. ಅವರ ಜೀವನದ ಮುಂಚಿನ ದಿನಗಳಿಂದಲೇ ಇದೇ ತಮ್ಮ ವಿಧಿ ಎಂದು ಭಾವಿಸಿದ್ದರು. ಸನ್ಯಾಸಿಗಳು ಇಂಥ ಬದುಕಿನ ಹಾದಿಯನ್ನು ಹೇಗೆ ಆರಿಸಿಕೊಂಡರು, ಅವರ ಬಾಲ್ಯದ ಅನುಭವಗಳು ಯಾವ ರೀತಿ ಇದ್ದುವು, ಅವರ ಈ ಸನ್ಯಾಸಜೀವನದ ಆಯ್ಕೆಗೆ ಯಾವುದಾದರೂ ವಿಶಿಷ್ಟ ಘಟನೆ ಅಥವಾ ಮಾನಸಿಕ ಆಘಾತ ಅಥವಾ ಸಂಕಷ್ಟ ಕಾರಣವಾಗಿತ್ತೆ ಎಂಬುದನ್ನೆಲ್ಲ ತಿಳಿದುಕೊಳ್ಳುವುದರಲ್ಲಿ ನನಗೆ ವಿಶೇಷ ಆಸಕ್ತಿ ಇತ್ತು.

ಸಾಧು ಮತ್ತು ಸನ್ಯಾಸಿ ಶಬ್ದಗಳ ಪರಿಭಾಷೆಯನ್ನು ನೀಡಲು ಯತ್ನಿಸುತ್ತೇನೆ. 'ಸಾಧು' ಮತ್ತು 'ಸನ್ಯಾಸಿ' ಶಬ್ದಗಳ ಮೂಲ ಬೇರೆ ಬೇರೆಯೇ ಇದೆ. ಕೆಲವರು ಹೇಳುವಂತೆ ಎರಡಕ್ಕೂ ಇರುವ ವಿಶಿಷ್ಟ ವ್ಯತ್ಯಾಸವೆಂದರೆ ಸನ್ಯಾಸಿಯು ಗುರುವಿನಿಂದ ಕ್ರಮಬದ್ಧವಾದ ಸನ್ಯಾಸ ದೀಕ್ಷೆಯನ್ನು ಪಡೆದಿರುತ್ತಾನೆ, ಆದರೆ ಸಾಧು ಅಂಥ ದೀಕ್ಷೆಯನ್ನೇನೂ ಪಡೆದಿರುವುದಿಲ್ಲ. ನನ್ನ ಅನುಭವದಲ್ಲಿ ಈ ಎರಡೂ ಶಬ್ದಗಳು ಪರಸ್ಪರ ಅದಲು-ಬದಲು ಮಾಡಬಹುದಾದ ಶಬ್ದಗಳು. ಕೆಲವರು ಅಧಿಕಾರಯುತವಾಗಿ ಹೇಳುವುದೆಂದರೆ 'ಸನ್ಯಾಸಿ' ಎಂದರೆ ಕುಟುಂಬ ಮತ್ತು ಮನೆಯ ಸಂಬಂಧವನ್ನು ತ್ಯಜಿಸಿದವನು; ಸನ್ಯಾಸದ ಈ ಹೊಸ ಬದುಕಿಗೆ ಪ್ರವೇಶ ಪಡೆಯುವ ಸಲುವಾಗಿ ಗುರುವಿನಿಂದ ಸನ್ಯಾಸ ದೀಕ್ಷೆ ಪಡೆದವನು; ಅವನು ಸೇರಿದ ಸನ್ಯಾಸ ಪರಂಪರೆ ನಿಗದಿ ಪಡಿಸಿರುವ ಕೆಲವು ವಿಶಿಷ್ಟ ಆಚರಣೆಗಳನ್ನು ದಿನನಿತ್ಯದ ಬದುಕಿನಲ್ಲಿ ಅನುಷ್ಠಾನಕ್ಕೆ ತರುತ್ತಾನೆ; ಅವನ ಸನ್ಯಾಸ ಪಂಥ ಗೊತ್ತು ಪಡಿಸಿರುವ ಪಂಥೀಯ ಲಾಂಛನ ಮತ್ತು ವಸ್ತ್ರಗಳನ್ನು ಧರಿಸುತ್ತಾನೆ; ಬ್ರಹ್ಮಚಾರಿಯಾಗಿರುತ್ತಾನೆ; ಕೆಲವೊಂದು ವಸ್ತ್ರಗಳು ಹಾಗೂ ಸನ್ಯಾಸಿ ಎಂದು ಗುರುತಿಸಲು ಅಗತ್ಯವಾದ ಸಂಕೇತಗಳನ್ನು ಹೊರತುಪಡಿಸಿದರೆ ಅವನದೆನ್ನುವ ಯಾವುದೇ ವೈಯಕ್ತಿಕ ವಸ್ತುಗಳಿರುವುದಿಲ್ಲ; ಹಣ ಸಂಪಾದನೆಯ ಯಾವುದೇ ಧಂಧೆಯಲ್ಲಿ ತೊಡಗಿಸಿಕೊಳ್ಳುವುದಿಲ್ಲ; ಬೇರೆಯವರ ಸಂಪಾದನೆಯ ಮೇಲೆಯೇ ಅವಲಂಬಿತನಾಗಿರುತ್ತಾನೆ, ಸನ್ಯಾಸ ದೀಕ್ಷೆ ಪಡೆಯುವ ಸಮಯದಲ್ಲಿ ಕೈಕೊಂಡ ತೀರ್ಮಾನದಂತೆ ಪರಿವ್ರಾಜಕ ಜೀವನ ಬದುಕುತ್ತಾನೆ ಅಥವಾ ಆಶ್ರಮವಾಸ ಮಾಡುತ್ತಾನೆ.

ಇವು ಸನ್ಯಾಸಿಗಳ ಕೆಲವು ಸಾಮಾನ್ಯ ಲಕ್ಷಣಗಳು. ಆದರೆ ಅಷ್ಟೊಂದು ಸುದೀರ್ಘ ಮತ್ತು ಸಂಕೀರ್ಣ ಪರಂಪರೆಯಲ್ಲಿ ಈ ಎಲ್ಲ ನಿಯಮಗಳಿಗೆ ಅಪವಾದಗಳಿಲ್ಲದೆ ಇರುವುದು ಆಶ್ಚರ್ಯವೇನಲ್ಲ. ಉದಾಹರಣೆಗೆ ಫಬಾರಿ ಸಾಧುಗಳು ಔಪಚಾರಿಕವಾಗಿ ಸನ್ಯಾಸ ದೀಕ್ಷೆಯನ್ನೇನೋ ತೆಗೆದುಕೊಳ್ಳುತ್ತಾರೆ, ಆದರೆ ಗೃಹಸ್ಥಜೀವನವನ್ನು ಮುಂದುವರಿಸುತ್ತಾರೆ. ಸ್ವಾಮಿನಾರಾಯಣ ಸಂಪ್ರದಾಯಕ್ಕೆ ಸೇರಿದ ಸಾಧುಗಳು ಜಮೀನುಗಳನ್ನು ಹೊಂದಿರುತ್ತಾರೆ, ಹಣದ ಹೂಡಿಕೆ ಮಾಡುತ್ತಾರೆ ಮತ್ತು ತಮ್ಮದೇ ಸಂಪಾದನೆಯ ಮೇಲೆ ಜೀವಿಸುತ್ತಾರೆ.

ಹಣ ಸಂಗ್ರಹಿಸುವ ಆಧುನಿಕ ಆಶ್ರಮಗಳೂ ಇವೆ. ಹಣ ವಸೂಲಿ ಮಾಡುವುದೇನಿದ್ದರೂ ಸಾರ್ವಜನಿಕ ಕಲ್ಯಾಣಕ್ಕೇ ಹೊರತು ತಮಗೋಸ್ಕರ ಅಲ್ಲ ಎಂದು ಅವು ಹೇಳಿಕೊಳ್ಳುತ್ತವೆ. ಯಾವುದೇ ದೀಕ್ಷೆ ತೆಗೆದುಕೊಳ್ಳದ ಸಾಧುಗಳೂ ಇದ್ದಾರೆ. ಅಲ್ಲದೆ ಅವರು ಶಿವನನ್ನು ತಮ್ಮ ಪ್ರತ್ಯಕ್ಷ ಗುರು ಎಂದು ಹೇಳಿಕೊಳ್ಳುತ್ತಾರೆ.

* * *

ಸನ್ಯಾಸವು ಭಾರತೀಯ ನಾಗರಿಕತೆಯ ಪ್ರಾರಂಭದಿಂದಲೂ ಅದರ ಭಾಗವೇ ಆಗಿದೆ. ಅದು ಆರ್ಯ-ಪೂರ್ವ ಸಂಪ್ರದಾಯವಾಗಿದ್ದಿರಬೇಕೆಂದು ಊಹಿಸಲಾಗಿದೆ. ಮೂರು ಸಾವಿರ ವರ್ಷಗಳಷ್ಟು ಹಳೆಯದಾದ ಹರಪ್ಪಾ ಸಂಸ್ಕೃತಿಯ ಉತ್ಖನನಗಳಲ್ಲಿ ದೊರಕಿರುವ ಯೋಗ ಮುದ್ರೆಯಲ್ಲಿ ಕುಳಿತಂತಿರುವ ಗುಂಗುರು ಕೂದಲಿನ ಮಣ್ಣಿನ ಮೂರ್ತಿಗಳು ಸನ್ಯಾಸಿಗಳನ್ನೇ ಪ್ರತಿನಿಧಿಸುತ್ತವೆಂದು ಊಹಿಸಲಾಗಿದೆ. ಈ ಸಿದ್ಧಾಂತವನ್ನೇ ಮುಂದುವರಿಸಿ ಆರ್ಯ-ಪೂರ್ವ ಸಂಪ್ರದಾಯವನ್ನೇ ಮುಂದೆ ಬ್ರಾಹ್ಮಣ ಸಂಸ್ಕೃತಿಯಲ್ಲಿ ಸೇರಿಸಿಕೊಳ್ಳಲಾಯಿತು, ಹಾಗಾಗಿಯೇ ಸನ್ಯಾಸವು ಮನುಷ್ಯ ಜೀವನದ ಯಾತ್ರೆಯ ನಾಲ್ಕು ಹಂತಗಳಲ್ಲಿ ನಾಲ್ಕನೆಯದಾಗಿ ರೂಢಿಗೆ ಬಂದಿತು. ಹಿಂದೂ ಧರ್ಮದ ಅನಂತರದ ಗ್ರಂಥಗಳಾದ ಋಗ್ವೇದ ಸಂಹಿತೆ, ಬ್ರಾಹ್ಮಣಗಳು, ಉಪನಿಷತ್ತುಗಳು ಮತ್ತು ಧರ್ಮಸೂತ್ರಗಳು, ಧರ್ಮಶಾಸ್ತ್ರಗಳಲ್ಲಿ ಸನ್ಯಾಸಿಗಳನ್ನು ಕುರಿತ ಉಲ್ಲೇಖಗಳು ಕಂಡುಬರುತ್ತವೆ. ರಾಮಾಯಣ ಹಾಗೂ ಮಹಾಭಾರತವೇ ಮೊದಲಾದ ಮಹಾಕಾವ್ಯಗಳಲ್ಲಿ, ಮತ್ತಿತರ ಕಥೆಗಳು ಹಾಗೂ ನಾಟಕಗಳಲ್ಲಿ ಸನ್ಯಾಸ ಜೀವನದ ವಿವರಪೂರ್ಣವಾದ ಚಿತ್ರಗಳು ದೊರೆಯುತ್ತವೆ.

ಸನ್ಯಾಸಿಗಳಲ್ಲಿ ಮೂರು ಮುಖ್ಯ ಉಪವಿಭಾಗಗಳಿವೆ. ಅವುಗಳೆಂದರೆ ವಿಷ್ಣುವನ್ನು (ಅದರಲ್ಲೂ ವಿಶೇಷವಾಗಿ ಅವನ ಅವತಾರಗಳಾದ ರಾಮ ಮತ್ತು ಕೃಷ್ಣರನ್ನು) ಆರಾಧಿಸುವ ವೈಷ್ಣವರು, ಶಿವನನ್ನು ಆರಾಧಿಸುವ ಶೈವರು ಮತ್ತು ಸ್ತ್ರೀ ಶಕ್ತಿಯ ಉಪಾಸಕರಾದ ಶಾಕ್ತರು. ಇವುಗಳಲ್ಲಿ ಪ್ರತಿಯೊಂದೂ ನಾನಾ ಬಗೆಯ ಉಪವರ್ಗಗಳಾಗಿ ಮತ್ತು ಒಂದೊಂದು ಉಪವರ್ಗವೂ ಮತ್ತೆ ಹಲವು ಗುಂಪುಗಳಾಗಿ ವಿಂಗಡಣೆಗೊಂಡಿವೆ. ಉಪಪಂಗಡಗಳ ಒಟ್ಟು ಸಂಖ್ಯೆ ಸಾವಿರ ಅಥವಾ ಇನ್ನೂ ಹೆಚ್ಚೇ ಇರಬಹುದು. ಸ್ಥೂಲವಾಗಿ ವೈಷ್ಣವರು ಹಣೆಯ ಮೇಲೆ ಲಂಬಾಕಾರದ ತಿಲಕವನ್ನು ಹಲವು ವಿಧವಾಗಿ ಬಣ್ಣದಲ್ಲಿ ಅಂಕಿಸಿಕೊಳ್ಳುತ್ತಾರೆ. ವಿಷ್ಣುವಿನ ಸಂಕೇತಗಳನ್ನು ದೇಹದ ಮೇಲೆ ಅಂಕಿಸಿಕೊಳ್ಳುತ್ತಾರೆ. ಬಿಳಿಯ ವಸ್ತ್ರವನ್ನು ಧರಿಸುತ್ತಾರೆ. ಶೈವರು ಹಣೆಯ ಮೇಲೆ ಅಡ್ಡ ನಾಮಗಳನ್ನು, ಅಂಕಿಸಿಕೊಳ್ಳುತ್ತಾರೆ. ಗೈರಿಕ ವಸನವನ್ನು ಧರಿಸುತ್ತಾರೆ. ಶಾಕ್ತರು ಕೂಡ ಗೈರಿಕ ವಸನ ಧರಿಸುತ್ತಾರೆ ಹಾಗೂ ಸ್ವಲ್ಪ ವಿಭಿನ್ನ ರೀತಿಯ ಅಡ್ಡ ನಾಮಗಳನ್ನು ಧರಿಸುತ್ತಾರೆ. ಶೈವರಲ್ಲಿ ಬಹಳ ಮುಖ್ಯವಾದ ಪಂಗಡವೆಂದರೆ ದಶನಾಮಿ ಸಾಧುಗಳದು. ಎಂಟನೇ ಶತಮಾನದಲ್ಲಿ ಶಂಕರಾಚಾರ್ಯರು ಈ ಪಂಗಡಕ್ಕೊಂದು ವ್ಯವಸ್ಥಿತ ರೂಪವನ್ನು ಕೊಟ್ಟರು. ಅದರ ಹತ್ತು ಸಮೂಹ ಅಥವಾ ಪಂಗಡಗಳೆಂದರೆ ಗಿರಿ, ಪುರಿ, ಭಾರತಿ, ವನ, ಪರ್ವತ,

ಅರಣ್ಯ, ಸಾಗರ, ತೀರ್ಥ, ಆಶ್ರಮ ಮತ್ತು ಸರಸ್ವತಿ. ಸಾಧುವಿನ ಹೆಸರಿನ ಕೊನೆಗೆ ಅವರು ಸೇರಿರುವ ಪಂಗಡದ ಹೆಸರನ್ನು ಸೇರಿಸಲಾಗುತ್ತದೆ. ವೈಷ್ಣವರಲ್ಲಿ ಶ್ರೀ ಸಂಪ್ರದಾಯವೇ ಅತ್ಯಂತ ಪುರಾತನವಾದದ್ದು. ಹನ್ನೆರಡನೇ ಶತಮಾನದಲ್ಲಿದ್ದ ರಾಮಾನುಜರ ಹೆಸರನ್ನು ಈ ಸಮೂಹದೊಂದಿಗೆ ತಳುಕುಹಾಕಲಾಗಿದೆ. ಈ ಸಾಧುಗಳು ಮುಖ್ಯವಾಗಿ ಬ್ರಾಹ್ಮಣ ಮೂಲದವರು. ಅವರೆಲ್ಲರೂ ಸಂಸ್ಕೃತದಲ್ಲಿ ಮತ್ತು ಹಿಂದೂ ಧರ್ಮಶಾಸ್ತ್ರದಲ್ಲಿ ಪಾರಂಗತರು. ಬೇರೆಯವರಿಗಿಂತ ತಾವು ಶ್ರೇಷ್ಠರೆಂದು ಅವರು ಭಾವಿಸುತ್ತಾರೆ.

ರಾಮಾನಂದಿ ಸಂಪ್ರದಾಯದ ಸಾಧುಗಳು ಸ್ವಾಮಿ ರಾಮಾನಂದರೊಂದಿಗೆ ತಮ್ಮ ಸಂಬಂಧ ಸ್ಥಾಪಿಸಿಕೊಳ್ಳುತ್ತಾರೆ. ರಾಮಾನಂದರು ಸ್ತ್ರೀಯರಿಗೆ ಮತ್ತು ನಿಮ್ನ ವರ್ಗದ ಜನರಿಗೆ ದೀಕ್ಷೆ ನೀಡಿದ ಕ್ರಾಂತಿಕಾರಿ ಸಾಧು. ಅವರು ರಾಮ ಮತ್ತು ಕೃಷ್ಣರನ್ನು ಪೂಜಿಸುತ್ತಾರೆ. ತುಲಸೀ ದಾಸರು ಮತ್ತು ಕಬೀರರು (ಹದಿನೈದನೇ ಶತಮಾನ) ರಾಮಾನಂದಿ ಸಂಪ್ರದಾಯದ ಸಾಧುಗಳು. ಭಕ್ತಿಯೇ ಅವರ ಸಾಧನೆಯ ಪ್ರಮುಖ ಹಾದಿ.

ವೈಷ್ಣವ ಮತ್ತು ಶೈವ ಪಂಥಗಳೆರಡೂ ಸನ್ಯಾಸಿ ಪಂಗಡದವರನ್ನು ಮತ್ತು ಇತರೆ ನಾಗಾ ಪಂಗಡದವರನ್ನು ರಕ್ಷಿಸುತ್ತವೆಂದು ಹೇಳಲಾದ ವೀರ ಸಾಧುಗಳಾದ ನಾಗಾ ಪಂಗಡದ ಸಾಧುಗಳನ್ನು ಹೊಂದಿವೆ. ಅವರುಗಳು ತೀರ್ಥ ಸ್ಥಾನಗಳ ವಿಭಿನ್ನ ಅಖಾಡಗಳಲ್ಲಿ ವಾಸಿಸುತ್ತಾರೆ. ಅವರ ದೀಕ್ಷಾ ಪದ್ಧತಿ ತುಂಬಾ ಕಠೋರವೂ ದೀರ್ಘವೂ ಆದದ್ದು. ಅವರು ದಿಗಂಬರರಾಗಿ (ನಗ್ನರಾಗಿ) ಇರುತ್ತಾರೆ ಇಲ್ಲವೆ ಶ್ವೇತ ವಸನಧಾರಿಗಳಾದ ಶ್ವೇತಾಂಬರರಾಗಿರುತ್ತಾರೆ. ಅವರು ಆಕ್ರಮಣಕಾರಿಗಳೆಂದು ಪರಿಗಣಿಸಲಾಗಿದೆ ಮತ್ತು ತಮ್ಮ ತಮ್ಮಲ್ಲೇ ಮೇಲಿಂದ ಮೇಲೆ ಕಲಹವಾಡುತ್ತಿರುತ್ತಾರೆ. 1998ರಲ್ಲಿ ನಾನು ಹರಿದ್ವಾರಕ್ಕೆ ಹೋಗಿದ್ದಾಗ ನಿರಂಜನಿ ಮತ್ತು ಜೂನಾ ಅಖಾಡಗಳ ನಡುವಿನ ಸಂಘರ್ಷದ ಅನಂತರದ ಪರಿಣಾಮವನ್ನು ಕಣ್ಣಾರೆ ಕಂಡೆ. ಅವರುಗಳು ಒಬ್ಬರು ಇನ್ನೊಬ್ಬರ ಆಸ್ತಿಗಳನ್ನು ಹಾಳುಮಾಡಿದ್ದಲ್ಲದೆ ಬೆಲೆಬಾಳುವ ವಸ್ತುಗಳನ್ನು ಗಂಗಾ ನದಿಗೆ ಎಸೆದಿದ್ದರು. ಅದು ಯಾತ್ರಿಕರು ಸ್ನಾನ ಮಾಡುವ ಸ್ಥಳ. ಅಲ್ಲಿಯ ಕೊಳಕನ್ನೆಲ್ಲ ತೆಗೆದುಹಾಕುವವರೆಗೂ ಸರ್ಕಾರಿ ಅಧಿಕಾರಿಗಳು ಯಾತ್ರಿಕರಿಗೆ ಪ್ರವೇಶವಿಲ್ಲದಂತೆ ಮುಚ್ಚಿಬಿಟ್ಟಿದ್ದರು.

ನಾನು ಹೃಷೀಕೇಶದಲ್ಲಿ ಕೆಲವು ಸನ್ಯಾಸಿಗಳನ್ನು ಸಂದರ್ಶಿಸಿದೆ. ಇನ್ನು ಕೆಲವರನ್ನು ಪವಿತ್ರ ಸ್ಥಳಗಳಿಗೆ ಯಾತ್ರೆ ಹೋಗುತ್ತಿದ್ದ ಸಂದರ್ಭದಲ್ಲಿ ಭೇಟಿ ಮಾಡಿದೆ. ಉಳಿದವರನ್ನು 10 ರಿಂದ 15 ಸಾವಿರ ಅಡಿಗಳ ಎತ್ತರದಲ್ಲಿ ನಾನು ಟ್ರೆಕ್ಕಿಂಗ್ ಮಾಡುತ್ತಿದ್ದಾಗ ಭೇಟಿಮಾಡಿದೆ. ನನ್ನ ಉದ್ದೇಶವನ್ನು ಸರಿಯಾಗಿ ಗ್ರಹಿಸದೆ ಇದ್ದರೂ ಬಹಳಷ್ಟು ಜನ ಸಾಧುಗಳು ನನ್ನ ಶೋಧದಲ್ಲಿ ಸಹಕರಿಸಿದರು. ತೀರಾ ಕೆಲವರು ಮಾತ್ರ ನನ್ನೊಂದಿಗೆ ಮಾತನಾಡಲು ನಿರಾಕರಿಸಿದರು. ಪ್ರಾರಂಭದಲ್ಲಿ ನಾನು ತುಂಬಾ ನಮ್ಯವಾದ ಶೋಧನಾ ವಿಧಾನವನ್ನು ಅಳವಡಿಸಿಕೊಂಡೆ. ದಿನ ಕಳೆದಂತೆ ಅದರಲ್ಲೂ ಮುಖ್ಯವಾಗಿ ನನ್ನ ಕೆನಡಾದ ಸಹೋದ್ಯೋಗಿಗಳೊಂದಿಗೆ ಕೆಲಸ ಮಾಡಲು ಪ್ರಾರಂಭಿಸಿದ ಮೇಲೆ ಈ ಸಂದರ್ಶನದ

ವಿಧಾನ ಸುಧಾರಿಸುತ್ತ ಹೋಯಿತು. ವಿಶಿಷ್ಟ ಶೋಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಾವು ಹೊಂದಾಣಿಕೆ ಮಾಡಿಕೊಂಡೆವು. ಹಾಗಿದ್ದಾಗ್ಯೂ ಸಂವಾದಗಳು ಅನೌಪಚಾರಿಕವಾಗಿದ್ದವು ಮತ್ತು ಮುಕ್ತವಾಗಿದ್ದವು. ಸಂದರ್ಶನಗಳು ಎರಡರಿಂದ ನಾಲ್ಕು ಗಂಟೆಗಳವರೆಗೂ ನಡೆಯಿತು.. ಆದರೆ ನಾನು ಸನ್ಯಾಸಿಗಳೊಂದಿಗೆ, ಎತ್ತರದ ಪರ್ವತ ಪ್ರದೇಶಗಳಲ್ಲಿಯ ಅವರ ಸರಳ ಕುಟೀರಗಳಲ್ಲಿ ತಂಗುತ್ತ ಹೆಚ್ಚು ಹೊತ್ತು ಕಳೆಯುತ್ತಿದ್ದೆ. ಎಲ್ಲರೂ ಆತಿಥ್ಯದಲ್ಲಿ ಅತ್ಯಂತ ಉದಾರಿಗಳಾಗಿದ್ದರು. ಆಮೇಲೆ ನಾನು ಅವರುಗಳಿಗೆ ಸ್ವಲ್ಪಮಟ್ಟಿನ ಹಣವನ್ನು ನೀಡಿದೆನಾದರೂ ಅವರಲ್ಲಿ ಯಾರೊಬ್ಬರೂ ಹಣ ಕೇಳಿದ್ದು ನನಗೆ ನೆನಪಿಲ್ಲ.

ಈ ಸಂದರ್ಶನಗಳಲ್ಲಿ ಕೆಲವೊಂದು ಮಹತ್ವದ ವಿಷಯಗಳನ್ನು ಸೇರಿಸಿದ್ದೆ.

ಮೊದಲನೆಯದು ಆ ವ್ಯಕ್ತಿಯ ಜೀವನ ವೃತ್ತಾಂತ. ಆತನ ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು, ಕುಟುಂಬದೊಳಗಿನ ಪರಸ್ಪರ ಸಂಬಂಧಗಳು, ಸಂದರ್ಶಿಸಲಾದ ವ್ಯಕ್ತಿಯ ಸೋದರ ಸೋದರಿಯರೊಂದಿಗಿನ ಸಂಬಂಧದ ವಿಷಯ ಇವನ್ನೆಲ್ಲ ಕೇಳುತ್ತಿದ್ದೆ. ಚಿಕ್ಕ ಹುಡುಗನಾಗಿದ್ದಾಗ ಆತ ಎಂಥವನಾಗಿದ್ದ ಹಾಗೂ ಆಗ ಅವನ ಮಹತ್ವಾಕಾಂಕ್ಷೆಗಳೇನಿದ್ದುವು? ಬಾಲ್ಯದಲ್ಲಿ ಏನಾದರೂ ಆಘಾತಕಾರಿ ಸಂಗತಿಗಳು ಘಟಿಸಿದ್ದುವೆ ಹಾಗೂ ಅವುಗಳಿಂದ ಅವನ ಮೇಲೆ ಯಾವ ರೀತಿಯ ಪರಿಣಾಮವುಂಟಾಗಿತ್ತು?

ಎರಡನೆಯದಾಗಿ ಆಧ್ಯಾತ್ಮಿಕತೆಯನ್ನು ಅವನು ಮುಖಾಮುಖಿಯಾದ ಬಗೆ ಹೇಗೆ? ಎಂದು ಕೇಳುತ್ತಿದ್ದೆ. ಆತನಿಗೆ ಆಧ್ಯಾತ್ಮದಲ್ಲಿ ಜೀವನ ಪರ್ಯಂತದ ಆಸಕ್ತಿ ಇತ್ತೆ? ಇದ್ದಕ್ಕಿದ್ದಂತೆ ಜ್ಞಾನೋದಯವಾಯಿತೋ ಅಥವಾ ಬದುಕನ್ನು ಪರಿವರ್ತನೆ ಮಾಡಿಬಿಡುವಂಥದ್ದರ ಮುಖಾಮುಖಿಯಾಯಿತೋ? ಆಗಿದ್ದರೆ ಯಾವ ವಯಸ್ಸಿನಲ್ಲಿ? ಅವನನ್ನು ಪ್ರಭಾವಿಸಿದ್ದು ಯಾವುದು? ಆತ ಆಧ್ಯಾತ್ಮದ ಹಾದಿಯಲ್ಲಿ ಸಾಗಬೇಕೆಂಬುದೇ ವಿಧಿಯ ಇಚ್ಛೆಯಾಗಿತ್ತೆ?

ಮೂರನೆಯದು ಆತ ಸನ್ಯಾಸ ತೆಗೆದುಕೊಳ್ಳಲು ಕಾರಣಗಳೇನೆಂದು ಕೇಳುತ್ತಿದ್ದೆ. ಸಾಧುವಾಗುವುದೆಂದರೆ ಆತ ಏನೆಂದು ತಿಳಿದಿದ್ದ? ಬೃಹತ್ ಸಮಾಜದೊಂದಿಗೆ ಸನ್ಯಾಸಿಯ ಸಂಬಂಧ ಯಾವ ಬಗೆಯದು? ಸಮಾಜಕ್ಕೆ ಪ್ರತಿಯಾಗಿ ಅವನು ಸಲ್ಲಿಸಬೇಕಾದ ಕರ್ತವ್ಯಗಳಿವೆಯೆ? ಇದ್ದರೆ ಅವನ್ನು ಯಾವ ರೀತಿಯಲ್ಲಿ ಈಡೇರಿಸುತ್ತಾನೆ?

ನಾಲ್ಕನೆಯದು ಸಾಧುವಾದ ಅನಂತರದ ಘಟ್ಟದಲ್ಲಿ ಆತನ ಅನುಭವಗಳ ಬಗ್ಗೆ ತಿಳಿಯಲಾಶಿಸಿದೆ. ಮೊದಲಿನ ಅನುಭವ ಕಾಲಾಂತರದಲ್ಲಿ ಯಾವ ರೀತಿ ಬದಲಾಯಿತು? ಗುಂಪುಗಳು ಇಲ್ಲವೆ ಆಶ್ರಮಗಳೊಂದಿಗೆ ತೊಡಗಿಸಿಕೊಂಡಿದ್ದನೆ? ಆತನ ಕುಟುಂಬದವರ ಪ್ರತಿಕ್ರಿಯೆ ಯಾವ ರೀತಿ ಇತ್ತು?

ಐದನೆಯದು ಆತನ ಆಧ್ಯಾತ್ಮಿಕ ಅನುಭವಗಳ ಬಗೆಗೆ ನನಗೆ ಕುತೂಹಲವಿತ್ತು. ಅಂದರೆ ಸಾಧುವಾದ ಮೇಲೆ ದೇವರನ್ನು ಅಥವಾ ಬೇರೆ ಜಗತ್ತಿನ ಜೀವಿಗಳನ್ನು ಸಂಧಿಸುವ, ನೋಡುವ, ಸಂದೇಶಗಳನ್ನು ಪಡೆಯುವ ಇವೇ ಮೊದಲಾದ ಅಸಾಧಾರಣ ಅನುಭವಗಳೊಂದಿಗೆ ಮುಖಾಮುಖಿಯಾಗುವ ನಿರೀಕ್ಷೆ ಇತ್ತೆ ಹೇಗೆ ಎಂಬುದನ್ನು ತಿಳಿಯುವ ಕುತೂಹಲವಿತ್ತು. ತನ್ನ 'ಸ್ವ' ದ ('ಅಹಂ' ನ) ಹಾನಿಯ ಅನುಭವವಾಯಿತೆ? ಅಂಥ ಅನುಭವಗಳಿಗೆ ಅವರು ಹೇಗೆ ಪ್ರತಿಕ್ರಿಯಿಸಿದರು? ಈ ರೀತಿಯ ಅನುಭವಗಳಿಗೂ ಭಾವನಾತ್ಮಕ ಸಮಸ್ಯೆಗಳಿಗೂ ಗೊಂದಲವುಂಟಾಗುವ ಸಾಧ್ಯತೆ ಇದೆಯೆ? ಇವೆರಡನ್ನೂ ಪ್ರತ್ಯೇಕಿಸುವುದು ಹೇಗೆ?

ಆರನೆಯದು, ಆತನ ಗುರುವಿನೊಂದಿಗೆ ಇದ್ದ ಸಂಬಂಧದ ಬಗ್ಗೆ ವಿಚಾರಿಸಿದೆ. ಅವರು ಗುರುಗಳನ್ನು ಹೇಗೆ ಹುಡುಕಿಕೊಂಡರು? ಮತ್ತು ಅವರಿಂದ ಸನ್ಯಾಸ ದೀಕ್ಷೆ ದೊರೆತದ್ದು ಹೇಗೆ? ಈಗ ನಿಮ್ಮದೇ ಶಿಷ್ಯರಿದ್ದಾರೆಯೆ?

ಅಂತಿಮವಾಗಿ ಸನ್ಯಾಸ ಜೀವನದ ಬಗ್ಗೆ ಹೆಚ್ಚು ವಿವರಗಳನ್ನು ತಿಳಿಯ ಬಯಸಿದೆ. ಅಂದರೆ ಅವರ ದಿನಚರ್ಯೆ (ದಿನವನ್ನು ಹೇಗೆ ಕಳೆಯುತ್ತಾರೆ) ಮತ್ತು ಒಂದು ವರ್ಷದ ಜೀವನ ವಿಧಾನ. ಪರಿವ್ರಾಜಕ ಸನ್ಯಾಸಿಗಳನ್ನು ಅವರ ಸಂಚಾರದ ಹಿಂದಿನ ಉದ್ದೇಶ, ಸಂಚಾರದ ಪ್ರೇರಣಾ ಶಕ್ತಿ ಮತ್ತು ಇತರೆ ಪರಿವ್ರಾಜಕರ ಬಗೆಗಿನ ಅವರ ಸಂಬಂಧದ ಬಗ್ಗೆಯೂ ಶೋಧಿಸಿದೆ. ಅವರ ಏಕಾಂತ, ಲೈಂಗಿಕತೆ ಹಾಗೂ ಆಧ್ಯಾತ್ಮಿಕ ಹುಡುಕಾಟದ ಅಂತಿಮ ಗುರಿ ಇವುಗಳ ಬಗ್ಗೆಯೂ ಪರಿಶೋಧಿಸಿದೆ. ಸಂಬಂಧಿಸಿದ ವ್ಯಕ್ತಿಯ ದೃಷ್ಟಿಯಲ್ಲಿ ಮೋಕ್ಷದ ಅರ್ಥ ಏನಾಗಿತ್ತು ಎಂಬುದರ ಬಗ್ಗೆಯೂ ಶೋಧಿಸಿದೆ.

* * *

ಕೆಲವೊಮ್ಮೆ ಭೇಟಿಮಾಡಿದ ವ್ಯಕ್ತಿಯಷ್ಟೇ ಸ್ಥಳವೂ ಮಹತ್ವದ್ದಾಗಿರುತ್ತದೆ. ಸ್ಥಳವೊಂದು ಒಂದು ಪ್ರದೇಶದ ಎಲ್ಲ ಮುಖಾಮುಖಿಗಳಿಗೆ ಮತ್ತು ಚಟುವಟಿಕೆಗಳಿಗೆ ಆಧ್ಯಾತ್ಮಿಕದ ತಿರುವನ್ನು ನೀಡಬಲ್ಲುದು. ಸಾಧುಗಳ ವೈಯಕ್ತಿಕ ಇತಿಹಾಸದ ಬಗೆಗೆ ಗಮನ ಕೊಡುವುದಕ್ಕಿಂತ ಮುಂಚೆ ನಾನು ಬಹುಪಾಲು ಸಂದರ್ಶನಗಳನ್ನು ನಡೆಸಿದ ಪ್ರದೇಶದ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಸಾಮಾನ್ಯವಾಗಿ ಒಂದು ತಿಂಗಳ ವಾಸ್ತವ್ಯವನ್ನು ಹೃಷೀಕೇಶದಿಂದ ಪ್ರಾರಂಭಿಸುತ್ತಿದ್ದೆ. ಅಲ್ಲಿ ಮುನ್ನೂರಕ್ಕೂ ಹೆಚ್ಚು ಆಶ್ರಮಗಳಿವೆ. ಪಕ್ಕದ ಹರಿದ್ವಾರದಲ್ಲಿ ಆರು ನೂರಕ್ಕೂ ಹೆಚ್ಚು ಆಶ್ರಮಗಳಿವೆ. ತೀರ್ಥಯಾತ್ರೆಯ ಋತುವಿನಲ್ಲಿ (ಕಾಲದಲ್ಲಿ) ಇಲ್ಲಿ ಸನ್ಯಾಸಿಗಳ ಸೇನೆಯನ್ನೇ ನೋಡಬಹುದು. ಅವರುಗಳು ಕಾಲ್ನಡಿಗೆಯಲ್ಲಿ ಸುಮಾರು ಹತ್ತು ಸಾವಿರ ಅಡಿಗಳ ಎತ್ತರದ ಪರ್ವತ ಪ್ರದೇಶಗಳಲ್ಲಿ ಇರುವ ಗಂಗೋತ್ರಿ, ಯಮುನೋತ್ರಿ, ಬದರೀನಾಥ ಮತ್ತು ಕೇದಾರನಾಥವೇ ಮೊದಲಾದ ಪವಿತ್ರ ಕ್ಷೇತ್ರಗಳತ್ತ ಹೋಗುತ್ತ ಬರುತ್ತ ಇರುತ್ತಾರೆ. ಪವಿತ್ರ ಗಂಗಾ ನದಿಯಲ್ಲಿ ಸ್ನಾನಮಾಡಲು ಹಾಗೂ ಸನ್ಯಾಸಿಗಳ ಪದತಲದಲ್ಲಿ ಕುಳಿತು ಬದುಕನ್ನು ಹೆಚ್ಚು ಸಾರ್ಥಕಗೊಳಿಸಿಕೊಳ್ಳುವುದು

ಹೇಗೆಂಬುದನ್ನು ತಿಳಿಯಲು ಬರುವ ಬೃಹತ್ ಭಕ್ತ ಸಮೂಹವನ್ನೇ ಇಲ್ಲಿ ಕಾಣಬಹುದು. ಅದರಲ್ಲೂ ಗಂಗೋತ್ರಿ ಹೆಚ್ಚು ಇಷ್ಟವಾದ ಜಾಗ. 1984ರಿಂದ 2000ದ ಅವಧಿಯಲ್ಲಿ ನಾನು ಮೂರು ಬಾರಿ ಇಲ್ಲಿಗೆ ಭೇಟಿಕೊಟ್ಟಿದ್ದೇನೆ.

ಮೊದಲಸಲ ಇಲ್ಲಿಗೆ ಭೇಟಿಕೊಟ್ಟಾಗ ನಾನು ಮತ್ತು ನನ್ನ ಹೆಂಡತಿ ಹೃಷೀಕೇಶದಿಂದ ಬಸ್ಸಿನಲ್ಲಿ ಗಂಗೋತ್ರಿಗೆ ಹೊರಟೆವು. ಪ್ರಯಾಣ ತುಂಬಾ ದೀರ್ಘವಾಗಿತ್ತು. ಉತ್ತರ ಕಾಶಿಯಲ್ಲಿ ಒಂದು ರಾತ್ರಿ ತಂಗಿದ್ದು ವಾಹನವನ್ನು ಬದಲಾಯಿಸಿದೆವು. ವಾಹನ ಬೀಳದಿರಲೆಂದು ಹಗ್ಗಗಳಿಂದ ಕಟ್ಟಲಾಗಿತ್ತು. ಜನರು, ಅವರ ಸಾಮಾನು ಸರಂಜಾಮು, ಮತ್ತು ಪ್ರಾಣಿಗಳನ್ನು ಭರ್ತಿಯಾಗಿ ತುಂಬಲಾಗಿತ್ತು. ಈ ಪಯಣದ ಎರಡು ನೆನಪುಗಳು ಈಗಲೂ ಸ್ಫುಟವಾಗಿವೆ. ಮೊದಲನೆಯದು ಬಸ್ ಡ್ರೈವರ್ ಹಾಕಿದ್ದ ಹಾಡು. ಕಿವಿಗಡಚಿಕ್ಕುವಷ್ಟು ಗಟ್ಟಿಯಾದ, ವಿಷಯ ಲೋಲುಪತೆಯಿಂದ ಕೂಡಿದ, ದ್ವಂದ್ವಾರ್ಥಗಳಿಂದ ಇಡಿಕಿರಿದ, ಉದ್ರೇಕಕಾರಿಯಾದ ಹಾಡು. ಯಾತ್ರಾರ್ಥಿಗಳೂ ಇಷ್ಟಪಟ್ಟು ಅದರ ಮಜಾ ತೆಗೆದುಕೊಂಡರು.

ಎರಡನೆಯ ನೆನಪೆಂದರೆ ಗಡ್ಡಬಿಟ್ಟಿದ್ದ, ವೃದ್ಧ ಸ್ವಾಮಿಗಳಾದ ಶಂಕರ್ ಮಹಾರಾಜರದು. ಅವರ ಜೊತೆ ಒಬ್ಬ ಎತ್ತರದ ಸ್ಫುರದ್ರೂಪಿಯಾದ, ಕಿವಿಗಳಲ್ಲಿ ಕುಂಡಲಿಗಳನ್ನು ಧರಿಸಿದ್ದ ನವಯುವಕನಿದ್ದ. ಅವರು ನಿಂತು ಪಯಣಿಸುತ್ತಿದ್ದರು. ಬಸ್ಸು ಎಡಕ್ಕೂ ಬಲಕ್ಕೂ ಓಲಾಡುತ್ತ ಸಾಗುತ್ತಿತ್ತು. ಪ್ರತಿಬಾರಿ ಬಸ್ ಒಂದು ಕಡೆಗೆ ಹೊರಳಿದಾಗೆಲ್ಲ ಹಿರಿಯ ಸ್ವಾಮೀಜಿಯವರು ಕ್ಷೀಣ ಸ್ವರದಲ್ಲಿ "ನನಗೆ ಹೊಟ್ಟೆ ತೊಳಸುತ್ತಿದೆ" ಎಂದು ಕಿರಲುತ್ತಿದ್ದರು. ಆ ಉದ್ಧಟ ಯುವ ಡ್ರೈವರ್ "ನಿಮಗೆ ಕಿಟಕಿಯ ಪಕ್ಕದ ಸೀಟು ಕೊಡುವ ಪ್ರಯಾಣಿಕನನ್ನೊಬ್ಬನನ್ನು ಹೊಂಚಿಕೊಳ್ಳಿ, ಇಲ್ಲವೆ ಗಲೀಜನ್ನೆಲ್ಲ ನೀವೇ ಚೊಕ್ಕಟಮಾಡಬೇಕಾಗುತ್ತೆ ಎಂದು ಹೇಳುತ್ತಿದ್ದ.

ಯಾರೂ ಆ ಹಿರಿಯ ಸನ್ಯಾಸಿಗೆ ಸೀಟು ಬಿಟ್ಟುಕೊಡಲಿಲ್ಲ. ಕೊನೆಗೆ ಸ್ವಾಮೀಜಿಯ ದೂರಿನಿಂದ ಬೇಸತ್ತಿದ್ದ ಡ್ರೈವರ್ "ನಿಮ್ಮ ಆ ಕಮಂಡಲುವಿನಲ್ಲಿ ವಾಂತಿ ಮಾಡಿಕೊಳ್ಳಿ" ಎಂದು ಕೂಗಿ ಹೇಳಿದ.

ಗಂಗೋತ್ರಿ ತಲುಪಿ ಶಂಕರ್ ಮಹಾರಾಜರು ಬಸ್‌ನಿಂದ ಇಳಿದಾಗ ಅವರು ಭಿಕ್ಷಾಟನೆಗೆ ಮತ್ತು ತಿನಿಸುಗಳಿಗೆ ಬಳಸುತ್ತಿದ್ದ ಕಮಂಡಲು ವಾಂತಿಯಿಂದ ಭರ್ತಿಯಾಗಿತ್ತು. ಅವರು ಡ್ರೈವರ್ ಮಾತಿನಂತೆ ನಡೆದುಕೊಂಡಿದ್ದರು.

ಈ ಎರಡು ನೆನಪುಗಳಿಂದ ನಾನು ಕಂಡುಕೊಂಡದ್ದೆಂದರೆ ಇಂದ್ರಿಯ ಭೋಗಾಪೇಕ್ಷೆ ಮತ್ತು ಆಧ್ಯಾತ್ಮಿಕತೆ ಎರಡೂ ಜೊತೆಗೂಡಿ ಇರಬಲ್ಲುವು ಎಂಬುದು. ಸನ್ಯಾಸಿ ಇರುವ ಸಾಮಾನ್ಯ ಸಂದರ್ಭದ ಹೊರತಾಗಿ ಯಾತ್ರಿಕರು ಸ್ವಾಮೀಜಿಯನ್ನು ಸಂಧಿಸಿದಾಗ ಅವರು – ಈ ಬಸ್ ಪ್ರಯಾಣದಲ್ಲಿ ಆದಂತೆ– ಅವರನ್ನು ಕಿಂಚಿತ್ತೂ ಲಕ್ಷಿಸಲೇ ಇಲ್ಲ. ಕೊನೇ ಪಕ್ಷ ಅವರ ಬಗ್ಗೆ ದಯೆಯನ್ನೂ ತೋರಲಿಲ್ಲ. ಒಂದು ವೇಳೆ ಅದೇ ಸ್ವಾಮಿ ಪರ್ವತದ

ಗುಹೆಯಲ್ಲಿ ಕೃಷ್ಣಾಜಿನದ ಮೆಲೆ ಕುಳಿತಿದ್ದು, ಮುಂದುಗಡೆ ಶಿವನ ತ್ರಿಶೂಲವಿದ್ದಿದ್ದರೆ ಯಾತ್ರಿಗಳು ಖಂಡಿತಕ್ಕೂ ಸ್ವಾಮೀಜಿಯ ಕಾಲಿಗೆ ಬಿದ್ದು ಅವರ ಆಶೀರ್ವಾದ ಬೇಡುತ್ತಿದ್ದರೆಂದು ನನಗೆ ನಂಬಿಕೆ ಇದೆ.

ಬಸ್ ಗಂಗೋತ್ರಿಯಿಂದ ಹದಿನಾಲ್ಕು ಕಿಲೋಮೀಟರ್ ದೂರದಲ್ಲಿದ್ದ ಒಂದು ಸಣ್ಣ ಹಳ್ಳಿ ಲಂಕಾಗೆ ಕರೆದೊಯ್ದಿತು. ನಾವು ಆಯಾಸಗೊಂಡಿದ್ದೆವು. ಹಾಗಾಗಿ ಒಂದು ಜೀಪ್ ಟ್ಯಾಕ್ಸಿಮಾಡಿಕೊಂಡು ಗಂಗೋತ್ರಿಗೆ ಹೊರಟೆವು. ಒಂಬತ್ತು ಗಂಟೆಯ ಹೊತ್ತಿಗೆ ಅಲ್ಲಿಗೆ ತಲುಪಿದೆವು. ಅಲ್ಲಿ ವಾಸ್ತವ್ಯಕ್ಕಿದ್ದ ಜಾಗಗಳೆಲ್ಲ ಯಾತ್ರಿಕರಿಂದ ಭರ್ತಿಯಾಗಿತ್ತು. ಚಳಿ, ಎತ್ತರ ಪ್ರದೇಶದಲ್ಲಿಯ ಜ್ವರ ಮತ್ತು ಇಲಿಗಳ ಕಾಟ ಸಹಿಸಿಕೊಂಡೇ ರಾತ್ರಿಯನ್ನು ಸ್ಥಳೀಯ ಸರ್ಕಾರಿ ಚಿಕಿತ್ಸಾಲಯದಲ್ಲಿ ಕಳೆದೆವು. ಇನ್ನೂ ಕತ್ತಲೆ ಇದ್ದಾಗಲೇ ನಾನು ಎದ್ದೆ. ಶೌಚಕ್ಕೆಂದು ಹೊರಗೆ ಹೋದಾಗ ನಿದ್ರಾಹೀನತೆ, ಆಯಾಸ, ಮತ್ತು ಬೀಸುತ್ತಿದ್ದ ಮಂಜಿನಿಂದ ಕೂಡಿದ ಶೀತಲ ಗಾಳಿ ಎಲ್ಲ ಸೇರಿ ವಾಪಸ್ ಮನೆಗೆ ಹೋಗದೆ ವಿಧಿಯಿಲ್ಲ ಎನ್ನುವಂತಾಗಿತ್ತು. ಸ್ವಲ್ಪವೇ ಸಮಯದ ನಂತರ ಪೂರ್ವದಿಂದ ಕಾಂತಿ ಚಿಮ್ಮಿತು. ಕತ್ತಲೆಯ ಗರ್ಭದಿಂದ ಹೊರಬಂದ ಪರ್ವತಗಳ ಮೇಲೆ ಬಂಗಾರದ ಬಣ್ಣತೊಡೆದಿತ್ತು. ಎರಡೂ ಭಗೀರಥ ಪರ್ವತಗಳ ಮೇಲೆ ಪ್ರಕಾಶ ಬೀರುತ್ತ ಸೂರ್ಯನು ಉದಯಿಸಿದ. ಪರ್ವತಗಳ ಮೇಲೆ ಹರಡಿದ್ದ ಹಿಮ ಕನ್ನಡಿಯಲ್ಲೆಂಬಂತೆ ಸೂರ್ಯಕಿರಣಗಳನ್ನು ಪ್ರತಿಫಲಿಸುತ್ತಿದ್ದವು. ಗಂಗೆ ಈ ಪರ್ವತ ಶಿಖರಗಳ ಮೇಲಿನಿಂದ ಬುಡಕ್ಕೆ ಬೀಳುತ್ತಿದ್ದುದು ಕಾಣಿಸುತ್ತಿತ್ತು. ಗಂಗೋತ್ರಿಯ ಬಂಡೆಗಳ ಮೇಲೆ ಧಾರೆ ಬೀಳುತ್ತಿದ್ದಂತೆ ಅದರ ಘೋಷ ಕೂಡ ಕೇಳಿಸಿತು. ಆ ಸುಂದರ ಪ್ರದೇಶದಲ್ಲಿ ನಾವು ಇದ್ದಷ್ಟೂ ದಿನ ನದಿಯ ನಿರಂತರ ನಿರ್ಘೋಷದ ಹಿಮ್ಮೇಳವಿತ್ತು.

ಗಂಗೋತ್ರಿಯ ಪ್ರಮುಖ ಆಕರ್ಷಣೆಯೆಂದರೆ ಅಲ್ಲಿ ಗಂಗೆಗಾಗಿ ನಿರ್ಮಿಸಲಾಗಿರುವ ದೇವಸ್ಥಾನ. ಇದು ಬೇಸಿಗೆಯ ದಿನಗಳಲ್ಲಿ ಮಾತ್ರ ತೆರೆದಿರುತ್ತದೆ. ಮೇ-ಜೂನ್ ತಿಂಗಳುಗಳಲ್ಲಿ ಯಾತ್ರಿಕರ ಬೃಹತ್ ಸ್ತೋಮವೇ ಇರುತ್ತದೆ. ಬಹಳಷ್ಟು ಜನರು ಹಗಲುಹೊತ್ತು ಮಾತ್ರ ಇರುತ್ತಾರೆ. ಹಾಗಾಗಿಯೂ ಸಾಕಷ್ಟು ಸಂಖ್ಯೆಯ ಜನರು ಇಲ್ಲಿಯ ಮೂರು ನಾಲ್ಕು ಆಶ್ರಮಗಳಲ್ಲಿ ರಾತ್ರಿ ಉಳಿದುಕೊಳ್ಳುತ್ತಾರೆ.

ಅಲ್ಲಿ ಕಿರಿದಾದ ರಸ್ತೆಯಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿದ್ದ ರೆಸ್ಟೋರೆಂಟಿನಲ್ಲಿ ಬೆಳಿಗ್ಗೆ ಬಿಸಿಬಿಸಿ ತಿಂಡಿ ತಿಂದೆವು. ಅದರ ಅಕ್ಕಪಕ್ಕ ಸಾಲಾಗಿ ಇತರೆ ಅಂಗಡಿಗಳು ಮತ್ತು ರೆಸ್ಟೋರೆಂಟುಗಳು ಇದ್ದವು. ಆ ಅಂಗಡಿಗಳಲ್ಲಿ ಎಲ್ಲ ಥರದ ಸಾಮಾನುಗಳನ್ನು ಮಾರುತ್ತಿದ್ದರು. ದೇವರುಗಳಿಗೆ ಅರ್ಪಿಸಲು ಪ್ರಸಾದ, ಸಣ್ಣ ಪುಟ್ಟ ಸಾಮಾನುಗಳು, ಸ್ಥಳೀಯವಾಗಿ ದೊರೆಯುತ್ತಿದ್ದ ಬೆಲೆಬಾಳುವ ಹರಳುಗಳ ಒಡವೆಗಳು, ಎಲ್ಲಕ್ಕಿಂತ ಮುಖ್ಯವಾಗಿ ಪವಿತ್ರ ಗಂಗಾಜಲವನ್ನು ಕೊಂಡೊಯ್ಯಲು ಮುಚ್ಚಳವಿರುವ ಹಿತ್ತಾಳೆಯ ಮತ್ತು ತಾಮ್ರದಿಂದ ಮಾಡಿದ ಪಾತ್ರೆಗಳನ್ನು ಮಾರುತ್ತಿದ್ದರು. ಹಿಂದೂ ನಂಬಿಕೆಯ ಪ್ರಕಾರ ಸಾಯುತ್ತಿರುವ ಮನುಷ್ಯನ ಬಾಯಿಗೆ ಬೀಳುವ ಒಂದು ತೊಟ್ಟು ಗಂಗಾಜಲವೂ ಅವನನ್ನು ಸ್ವರ್ಗಕ್ಕೆ

ಕಳಿಸಬಲ್ಲುದು. ಚಳಿಗಾಲದಲ್ಲಿ ಅಂಗಡಿಗಳಾಗಲಿ ರೆಸ್ಟೋರೆಂಟುಗಳಾಗಲಿ ಇರುವುದಿಲ್ಲ. ಮುಂಚೆಯೇ ಸಿದ್ಧಪಡಿಸಲಾಗಿರುವ ಈ ಅಂಗಡಿಗಳನ್ನು ಅಕ್ಟೋಬರ್ ಕೊನೆಯಲ್ಲಿ ಕೆಳಗೆ ಸಮತಲ ಪ್ರದೇಶಕ್ಕೆ ಕೊಂಡೊಯ್ಯಲಾಗುತ್ತದೆ. ಮತ್ತೆ ಏಪ್ರಿಲ್ ಕೊನೇ ವಾರದಲ್ಲಿ ಇಲ್ಲಿಗೆ ತರಲಾಗುವುದು.

ನಾವು ಅಲ್ಲಿಗೆ ಹೋಗಿದ್ದಾಗ ಅದು ತೀರ್ಥಯಾತ್ರೆಯ ಉಕ್ಕಂದದ ಕಾಲ. ಆ ಇಡೀ ಪ್ರದೇಶ ಜನಜಂಗುಳಿಯಿಂದ ಇಡಿಕಿರಿದಿತ್ತು. ಅವರಲ್ಲಿ ಅನೇಕರು ಸಾಧುಗಳು. ಅವರು ಧರಿಸಿದ್ದ ವಸ್ತ್ರಗಳ ಬಣ್ಣ ಮತ್ತು ಅವರ ಮೈಮೇಲಿನ ವಿಭೂತಿಯ ಗುರುತುಗಳು ಅವರು ಯಾವ ಪಂಥಕ್ಕೆ ಸೇರಿದವರೆಂಬುದನ್ನು ಸೂಚಿಸುತ್ತಿದ್ದವು. ಅನೇಕ ಸಾಧುಗಳು ಗಂಗಾ ಘಾಟ್‌ನ ಹಾದಿಯಲ್ಲಿ ಮತ್ತು ಗಂಗಾದೇವಿಯ ದೇವಸ್ಥಾನದ ಸುತ್ತ ಮುತ್ತ ಶಾಂತರಾಗಿ ಕುಳಿತು ಭಿಕ್ಷೆಯ ನಿರೀಕ್ಷೆಯಲ್ಲಿರುತ್ತಿದ್ದರು. ಅವರುಗಳು ವೃದ್ಧರೂ, ವ್ಯಾಧಿ ಪೀಡಿತರೂ, ಜೀರ್ಣ-ಶೀರ್ಣವಾದ ವಸ್ತ್ರಗಳನ್ನು ಧರಿಸಿದವರೂ ಆಗಿರುತ್ತಿದ್ದರು. ಅವರಲ್ಲಿ ದಷ್ಟಪುಷ್ಟ ದೇಹದ, ಸಣ್ಣ ಗುಂಪುಗಳಲ್ಲಿ ಬಹಳ ಹೆಮ್ಮೆಯಿಂದ ತಮ್ಮ ದೇವತೆಗಳ ನಾಮೋಚ್ಚಾರಣೆಯನ್ನು ಉಚ್ಚ ಕಂಠದಲ್ಲಿ ಮಾಡುತ್ತ ನದಿಯ ಕಡೆ ಸಾಗುತ್ತಿದ್ದವರೂ ಇದ್ದರು. ನಾವು ದೇವಸ್ಥಾನದ ಸಮೀಪಕ್ಕೆ ಹೋದಾಗ ದೇವರಲ್ಲಿ ಸೇರಿಹೋಗಬೇಕೆಂಬ ಉದ್ದೇಶದಿಂದ ಕೆಲವರು ಸಾಧುಗಳು ಆತ್ಮ ಹನನದಲ್ಲಿ ತೊಡಗಿಕೊಂಡಿದ್ದದ್ದನ್ನು ಕಂಡೆವು. ಒಬ್ಬನು ಕಳೆದ ಹತ್ತು ವರ್ಷಗಳಿಂದ ಒಂಟಿಕಾಲಿನಲ್ಲಿ ನಿಂತಿದ್ದನು. ಇನ್ನಾರೋ ಒಬ್ಬ ಆರು ವರ್ಷಗಳಿಂದ ತನ್ನ ಕುತ್ತಿಗೆಗೆ ಬೀಸುವ ಕಲ್ಲನ್ನು ನೇತುಹಾಕಿಕೊಂಡಿದ್ದನು. ಇನ್ನೊಬ್ಬನು ತಿಂಗಳಿಗೊಂದು ಬಾರಿ ಮಾತ್ರ ಊಟಮಾಡುತ್ತಿದ್ದನು. ಹೀಗೆಂದು ಅದನ್ನು ತಿಳಿದಿರುವವರು ನಮಗೆ ಹೇಳಿದರು. ದೇವಾಲಯದಲ್ಲಿ ನಾನಾ ಬಗೆಯ ಪೂಜೆ-ಪುರಸ್ಕಾರಗಳಲ್ಲಿ ಮಗ್ನರಾಗಿದ್ದ ಭಾರಿ ಜನಜಂಗುಳಿ ಇತ್ತು. ಕೆಲವರು ತಮ್ಮ ತಮ್ಮ ಆಣೆ, ಪ್ರಮಾಣ, ವ್ರತ, ಹರಕೆಗಳನ್ನು ತೀರಿಸುತ್ತಿದ್ದರು. ಕೆಲವರು ತಮ್ಮ ಹಿರಿಯರನ್ನು ಪೂಜಿಸುತ್ತಿದ್ದರು, ಇಲ್ಲವೆ ಸುಮ್ಮನೆ ಪ್ರಾರ್ಥಿಸುತ್ತಿದ್ದರು. ಪುರೋಹಿತರು ಅವರಿಗೆ ನೆರವಾಗುತ್ತಿದ್ದರು. ಆ ಎಲ್ಲ ಪುರೋಹಿತರು(ಪಂಡರು) ಒಂದೇ ಪರಿವಾರಕ್ಕೆ ಸೇರಿವರಾಗಿದ್ದು ತಲೆತಲಾಂತರದಿಂದ ದೇವಸ್ಥಾನದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರೆಂದು ಆಮೇಲೆ ನಮಗೆ ತಿಳಿದುಬಂತು.

ಅಲ್ಲಿಯ ಯೋಗಾಶ್ರಮದಲ್ಲಿ ತಂಗಲು ನಮಗೆ ಸ್ಥಳ ದೊರೆಯಿತು. ಇಲ್ಲಿ ಯಾತ್ರಿಕರಿಗೆ ಮರದಿಂದ ಕೆಲವು ಕುಟೀರಗಳನ್ನು ಮಾಡಿದ್ದರು. ಬೆಳಗಿನ ಚಹಾ, ಉಪಾಹಾರ, ಮಧ್ಯಾಹ್ನದ ಮತ್ತು ರಾತ್ರಿಯ ಊಟ ಇಲ್ಲಿ ದೊರೆಯುತ್ತಿತ್ತು. ರಾತ್ರಿಯ ಸಮಯದಲ್ಲಿ ಚಳಿಯನ್ನು ಓಡಿಸಲು ಒಲೆ (ಬೆಂಕಿಯ ಗೂಡು) ಇರುತ್ತಿತ್ತು. ಅಲ್ಲಿ ಕುಳಿತು ಆಶ್ರಮದ ಮುಖ್ಯಸ್ಥರಾಗಿದ್ದ ಸಾಧುಗಳು ತಾವು ಸಂಧಿಸಿದ ಅಪೂರ್ವ ಸಾಧುಗಳ ಕಥೆಗಳನ್ನು ಹೇಳುತ್ತಿದ್ದರು. ನಾನು ನನ್ನ ಬೆನ್ನು ನೋವಿನ ಸಂಗತಿಯನ್ನು ತಿಳಿಸಿದಾಗ ಅವರು ನನ್ನ ಬೆನ್ನಿನ ಮಾಲಿಷ್ ಮಾಡಿದರು. ಅದಕ್ಕೆ ಅವರು ಹಣವನ್ನೇನೂ ಕೇಳಲಿಲ್ಲ. ನಮ್ಮ ವಾಸ್ತವ್ಯದ ಕಡೆಯಲ್ಲಿ ನಾನು ಕೊಟ್ಟ ಸ್ವಲ್ಪ ಹಣವನ್ನೇ ಕೃತಜ್ಞತೆಯಿಂದ ಸ್ವೀಕರಿಸಿದರು. ಮೊದಲದಿನ ಅಲ್ಲೇ

ಸುತ್ತ ಮುತ್ತ ಅಡ್ಡಾಡಿದೆವು. ನೂರು ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿದೆ ಎಂದು ಹೇಳಲಾದ ಬಾಬಾ ಒಬ್ಬರನ್ನು ಭೇಟಿಯಾಗಲು ಹೋದೆವು. ಹಣ್ಣುಗಳನ್ನು ಮಾತ್ರವೇ ತಿಂದು ಜೀವಿಸುವವರಾದ ಕಾರಣದಿಂದ ಫಲಾಹಾರಿ ಬಾಬಾ ಎಂದು ಹೆಸರಾದ ಅವರು ನಮಗೆ ಭಕ್ತಿಯ ಬಗೆಗೆ ತಿಳಿಸಿದರು. ರಾಮನಾಮೋಚ್ಚಾರಣೆಯು ನಮಗೆ ಹೇಗೆ ಒಳಿತುಂಟು ಮಾಡುತ್ತದೆಂಬ ಬಗ್ಗೆ ತಿಳಿಸಿದರು. ತಮ್ಮ ಬಗ್ಗೆ ಹೇಳಿಕೊಳ್ಳುವಾಗ ಅವರು ಸಂಕೋಚಪಡುತ್ತಿದ್ದರು. ಆದರೆ ಆ ಸ್ಥಳದಲ್ಲಿ, ಚಳಿಗಾಲ, ಬೇಸಿಗೆ ಕಾಲ ಹೀಗೆ ಎಲ್ಲಾ ಕಾಲಗಳಲ್ಲೂ ನಲವತ್ತು ವರ್ಷಗಳಿಂದ ನಿರಂತರವಾಗಿ ವಾಸಿಸುತ್ತಿರುವುದಾಗಿ ತಿಳಿಸಿದರು. ಭಗವಾನ್ ಶ್ರೀರಾಮನೇ ಅವರ ಅಗತ್ಯಗಳನ್ನೆಲ್ಲ ಪೂರೈಸುತ್ತಾನೆಂದು ಹೇಳಿದರು. ಕೆಲವು ವರ್ಷಗಳ ಹಿಂದೆ ಅವರ ಕಣ್ಣಿನಲ್ಲಿ ಪೊರೆ ಬೆಳೆದು ಶಸ್ತ್ರಚಿಕಿತ್ಸೆ ಮಾಡಬೇಕಾಗಿದ್ದಾಗ, ಕೆಳಗೆ ಬಯಲು ಪ್ರದೇಶದಿಂದ ಒಬ್ಬ ವೈದ್ಯರು ತಮ್ಮ ಸಂಗಡಿಗರೊಂದಿಗೆ ಅವರ ಗುಡಿಸಿಲಿಗೆ ಬಂದು ಶಸ್ತ್ರ ಚಿಕಿತ್ಸೆ ಮಾಡಿದರಂತೆ.

ಈ ಸುಮಧುರ ಸ್ವಭಾವದ ವೃದ್ಧರಿಗೆ ವಿರುದ್ಧವಾಗಿ ಅಲ್ಲಿ ಸುಂದರವಾದೊಂದು ಕುಟೀರದಲ್ಲಿ ಸಪೂರ ದೇಹದ ಕಠೋರ ಸ್ವಭಾವದ ಸ್ವಾಮಿಯೊಬ್ಬರು ಇದ್ದರು. ಈ ಮನುಷ್ಯ ಚಿತ್ರಕಾರ, ಶಿಲ್ಪಿ, ಛಾಯಾಗ್ರಾಹಕ, ಮತ್ತು ಹರಿಯುವ ನೀರಿನಲ್ಲಿ ತೇಲಿಬರುವ ಮರದ ತುಂಡು, ಕಡ್ಡಿಗಳನ್ನು ಸಂಗ್ರಹಿಸುತ್ತಿದ್ದವ. ಅವರು ಚಿತ್ರಿಸಿದ್ದ ಕಲಾ ನಮೂನೆಗಳು ಅವರ ಕುಟೀರದ ಗೋಡೆಗಳ ಮೇಲೆ ಮತ್ತು ಕಿರು ತೋಟದಲ್ಲಿ ತುಂಬಿದ್ದವು. ನಡವಳಿಕೆಯಲ್ಲಿ ಅವರು ಅಪ್ರಸನ್ನ, ಅಹಂಕಾರಿ ಮತ್ತು ಸ್ವಕೇಂದ್ರಿತ ವ್ಯಕ್ತಿಯಾಗಿದ್ದರು. ಇತರೆ ಸ್ವಾಮಿಗಳ ಬಗ್ಗೆ ಒಂದೇ ಒಂದು ಒಳ್ಳೆಯ ಮಾತೂ ಅವರ ಬಾಯಿಂದ ಬರಲಿಲ್ಲ. ಮೊದಲು ಮುಂಬೈನಲ್ಲಿ ಹೋಟೆಲ್ ಮ್ಯಾನೇಜರ್ ಆಗಿದ್ದು ಅನಂತರದಲ್ಲಿ ದಿನನಿತ್ಯದ ಬದುಕಿನ ವ್ಯಾಪಾರೀಕರಣಕ್ಕೆ ಬೇಸತ್ತು ಪ್ರಪಂಚ ತ್ಯಜಿಸಿ ಸ್ವಾಮಿಗಳಾಗಿದ್ದ ಕಿರಿವಯಸ್ಸಿನ ಒಬ್ಬ ಸ್ವಾಮಿಯನ್ನೂ ಭೇಟಿಮಾಡಿದೆವು. ಅವರು ಸಂತೋಷಚಿತ್ತರಾಗಿದ್ದರು. ಆದರೂ ದುಃಖಿಯಂತೆ ಕಂಡುಬರುತ್ತಿದ್ದರು. ಜನ ಅವರನ್ನು ಇಷ್ಟಪಡುತ್ತಿದ್ದರು, ಆದರೆ ಅವರು ಬಳಿ ಇದ್ದಾಗ ಅಶಾಂತರಾಗಿರುತ್ತಿದ್ದರು. ನಾವು ಭೇಟಿಮಾಡಿದ ಇತರೆ ಸಾಧುಗಳು ಫೋಟೋ ತೆಗೆಸಿಕೊಳ್ಳಲು ಕಾತರರಾಗಿದ್ದರು. ಒಬ್ಬರಂತೂ ಅವರ ಫೋಟೋ ತೆಗೆಯುತ್ತಿದ್ದಾಗ ಮೈಮೇಲೆ ಹೊದೆದಿದ್ದ ಶಾಲನ್ನು ತೆಗೆದಿಟ್ಟರು.

ಗಂಗೋತ್ರಿಯು ವಾಸ್ತವದಲ್ಲಿ ಗಂಗೆಯ ಉಗಮ ಸ್ಥಾನವಲ್ಲ. ಅದು ಅಲ್ಲಿಂದ ಇಪ್ಪತ್ತೆರಡು ಕಿಲೋಮೀಟರ್ ಮೇಲಕ್ಕೆ ಗೋಮುಖ ಎಂಬ ಹಿಮಬಂಡೆಯಿಂದ ಹೊಮ್ಮುತ್ತದೆ. ಮರುದಿನ ಅಲ್ಲಿಗೆ ನಮ್ಮನ್ನು ಕರೆದೊಯ್ಯಲು ಒಬ್ಬ ಮಾರ್ಗದರ್ಶಕನನ್ನು ಗೊತ್ತುಮಾಡಿಕೊಂಡೆವು. ಆ ರಾತ್ರಿ ಹಸಿರು ಬಣ್ಣದ ಜೀನ್ಸ್ ತೊಟ್ಟು ಎತ್ತರದ ಟೋಪಿ ಧರಿಸಿ, ಉಣ್ಣೆಯ ಮಫ್ಲರ್ ಸುತ್ತಿಕೊಂಡಿದ್ದ ಒಬ್ಬ ಯಕ್ಷನಂತೆ ಕಾಣಿಸಿಕೊಂಡು ತಾನು ನಮ್ಮನ್ನು ಗೋಮುಖದಿಂದ ಮೇಲೆ, ಹದಿನೈದು ಸಾವಿರ ಅಡಿ ಎತ್ತರದಲ್ಲಿರುವ ತಪೋವನ ಎಂಬ ಪ್ರದೇಶಕ್ಕೆ ಕರೆದೊಯ್ಯುವುದಾಗಿ ತಿಳಿಸಿದ. ಮರುದಿನ ಬೆಳಿಗ್ಗೆ ನಾವು

ಗೊತ್ತುಮಾಡಿಕೊಂಡಿದ್ದ ಮಾರ್ಗದರ್ಶಿ ಬರದೆ ಇದ್ದಾಗ ನಾವು ಈ ನೇಪಾಲಿಯಕ್ಷಯನನ್ನು ಮಾರ್ಗದರ್ಶಕನಾಗಿರಲು ಕೇಳಿದೆವು. ಅವನು ನಮ್ಮನ್ನು ಅಗಲ ಕಿರಿದಾದ, ಹಳ್ಳ ತಿಟ್ಟಿನಿಂದ ಕೂಡಿದ ಒಂದು ದಾರಿಯ ಮೂಲಕ ಕರೆದೊಯ್ದು. ಅಲ್ಲಿಂದ ಆಳ ಪಾತಾಳದಲ್ಲಿ ತೆಳ್ಳನೆಯ ಗಂಗೆ ಕಾಣಿಸಿತು. ಅಲ್ಲಿಂದ ನಾವು ಕೆಳಗೆ ಬೀಳುವ ಸಂಭವ ಹೆಚ್ಚಿತ್ತು. ನಾವು ಹನ್ನೆರಡು ಸಾವಿರ ಅಡಿ ಎತ್ತರದಲ್ಲಿದ್ದ ಭೋಜ್ ಕಣಿವೆಯವರೆಗೂ ಹೋದೆವು. ನಡಿಗೆಯಂತೂ ತುಂಬ ಪ್ರಯಾಸಕರವಾಗಿದ್ದರೂ ದಾರಿ ಸುಂದರವಾಗಿತ್ತು. ದಾರಿಯ ಎಡಗಡೆಯಲ್ಲಿದ್ದ ದೊಡ್ಡ ಬಂಡೆಗಳಲ್ಲಿ ಕಾಡುಗುಲಾಬಿಗಳು, ಹಳದಿ ಮತ್ತು ಬಿಳಿಯ ಮಲ್ಲಿಗೆಗಳು ಹಾಗೂ ಮೇಲುಭಾಗದಲ್ಲಿ ಹಸಿರಾಗಿದ್ದು, ಕೆಳಭಾಗದಲ್ಲಿ ಹೊಂಬಣ್ಣದಿಂದ ಕೂಡಿದ ಎಲೆಗಳಿಂದ ಶೋಭಿತವಾಗಿದ್ದ ಚಿಕ್ಕ ಚಿಕ್ಕ ಮರಗಳು ಇಡಿಕಿರಿದಿದ್ದವು. ದಾರಿಯ ಬಲಭಾಗದಲ್ಲಿ ಆಗಲವಾಗಿ ಬಾಯಿ ತೆರೆದುಕೊಂಡ ಆಳ ಪ್ರಪಾತವಿತ್ತು. ಭೋಜ್ ಕಣಿವೆಯಲ್ಲಿ ಒಂದು ಆಶ್ರಮವಿದೆ. ಅಲ್ಲೊಬ್ಬ ಅತಿ ವಿಚಿತ್ರ ಸ್ವಾಮಿಗಳಿದ್ದರು. ಅಲ್ಲಿಗೆ ಬರುವ ಮುನ್ನವೇ ಅವರ ಬಗೆಗೆ ತಲ್ಲಣವುಂಟುಮಾಡುವಂಥ ಕಥೆಗಳನ್ನು ಕೇಳಿದ್ದೆವು. ನಮ್ಮ ಆಯಾಸ, ಎತ್ತರ ಪ್ರದೇಶದಲ್ಲಿ ಉಂಟಾಗುವ ಹೊಟ್ಟೆ ತೊಳಸು ಮತ್ತು ಸೂರ್ಯತಾಪವನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ನಮ್ಮ ಹೊಟ್ಟೆಗಳಿಗೆ ಭರ್ತಿ ಖಿಚಡಿಯನ್ನು ಬಲವಂತವಾಗಿ ಗಿಡಿದರು. ರಾತ್ರಿ ನಮಗೆ ನೀಡಲಾಗಿದ್ದ ಕೊಠಡಿಗಳನ್ನು ಬಿಟ್ಟು ಹೊರಬರಲು ಒತ್ತಾಯಿಸಿದರು. ಆ ಕೊಠಡಿಗಳ ಬಾಗಿಲುಗಳು ನಾವು ಹೊರಗೆ ಬಂದ ಕೂಡಲೇ ತಮಗೆ ತಾವೇ ಬಂದಾಗುತ್ತಿದ್ದವು. ಒಂದು ಗಂಟೆ ಕಾಲ ನಡೆದ ಹವನ ಕಾರ್ಯ ಮುಗಿಯುವವರೆಗೂ ಮೂಳೆ ಕೊರೆವ ಹಿಮಗಾಳಿಯ ಹೊಡೆತ ಸಹಿಸಿಕೊಂಡು ನಾವು ಕುಳಿತಿರುವಂತೆ ಮಾಡಿದರು. ಆರತಿಯ ನಂತರ ಮತ್ತೆ ತಿನ್ನಲು ಬಲವಂತಪಡಿಸಿದರು. ನಾವು ಪ್ರತಿಯೊಬ್ಬರೂ ಮೂರು ರೊಟ್ಟಿ ತಿನ್ನುವವರೆಗೂ ಕೊಠಡಿಯೊಳಕ್ಕೆ ನಮ್ಮನ್ನು ಬಿಡುವುದಿಲ್ಲವೆಂದು ನಿಷ್ಠುರವಾಗಿ ಹೇಳಲಾಯಿತು. ಬೇರೆಯವರಿಗೆ ಸೇವೆ ಸಲ್ಲಿಸಬೇಕೆಂಬ ಬಯಕೆಯೂ ಬಲವಂತವಾದಾಗ ಅದು ಭಯಂಕರ ಕೊಡುಗೆಯಾಗಿ ಪರಿಣಮಿಸಬಹುದು.

ಮರುದಿನ ನಾವುಗಳೆಲ್ಲರೂ ಹೊತ್ತಿಗೆ ಮುಂಚೆಯೇ ಎದ್ದು ಆರು ಗಂಟೆಗೆಲ್ಲ ಗೋಮುಖದ ಕಡೆಗೆ ಹೊರಟೆವು. ಹಿಮಬಂಡೆಗಳು ಕರಗಿ ನೀರಾಗಿ ನದಿಗೆ ಹರಿಯತೊಡಗಿದ್ದವು. ವಯಸ್ಸಾದವರೂ ಸೇರಿದಂತೆ ಜನ ಇಂಥ ಕೊರೆಯುವ ನೀರಿನಲ್ಲಿಯೂ ಸ್ನಾನ ಮಾಡುವುದರಿಂದ ಹಿಮ್ಮೆಟ್ಟಲಿಲ್ಲ. ನಮ್ಮ ಜೊತೆ .ಬೇಸಿಗೆಯ ದಿರಸನ್ನು ಧರಿಸಿ ಶೂ ಇಲ್ಲದೆ ಗಂಗೋತ್ರಿಯಿಂದ ನಡೆದು ಬಂದಿದ್ದ ಮಹಿಳೆಯೊಬ್ಬರು ಬಟ್ಟೆ ಧರಿಸಿಯೇ ಪೂರಾ ಒಂದು ಮುಳುಗುಹಾಕಿ ಹಿಮ ಶೀತಲ ಗಾಳಿಯಲ್ಲಿ ನಡೆಯುತ್ತಲೇ ಬಂದರು.

ಮುಂದೆ ಸಾಗಲು ನಾವು ಹಿಂಜರಿಯುತ್ತಿದ್ದೆವು. ಆದರೆ ನಮ್ಮ ಮಾರ್ಗದರ್ಶಿ ಈ ಯಾತ್ರೆ ಬಹಳ ಸುಲಭವೆನ್ನುವಂತೆ "ನೋಡಿ ಎದುರುಗಡೆ ಬಂಡೆಗಳು ಕಾಣುತ್ತಾ ಇದೆಯಲ್ಲ, ಅದೇ ತಪೋವನ. ಬರೀ ಐದು ಕಿಲೋಮೀಟರ್ ಅಷ್ಟೆ" ಎಂದು ಹೇಳುತ್ತಿದ್ದ.

ಐದು ಕಿಲೊಮೀಟರ್ ತಾನೆ. ಇದೇನು ಮಹಾ ಎಂದು ಅಂದುಕೊಂಡೆವು. ಶೀಘ್ರದಲ್ಲೇ ನಾವು ಹಿಮ ಬಂಡೆಯ ಮೇಲಕ್ಕೆ ತಲುಪಿದೆವು. ಅದು ತುಂಬಾ ಜಾರಿಕೆಯಿಂದ ಕೂಡಿತ್ತು. ಇವೆಲ್ಲ ಅತ್ಯಂತ ಕಡಿದಾದ ಬಂಡೆಗಳು. ವಿಪರೀತ ಮಾತಾಡುವ, ತನ್ನದೇ ಒಂದು ಅಭಿಪ್ರಾಯ ತಳೆಯುತ್ತಿದ್ದ, "ಪುರಾತನ ನಾವಿಕ" (ಕೋಲೆರಿಡ್ಜ್ ನ Ancient Mariner) ನಮಗೆ ಗಂಟುಬಿದ್ದಿದ್ದ. ನಾವು ಹಿಂತಿರುಗಿ ನೋಡಿ ಗಟ್ಟಿಯಾಗಿ ಮಾತಾಡಿದರೆ ಅದು ಭೂ ಕುಸಿತಕ್ಕೆ ಕಾರಣವಾಗಬಹುದೆಂದು ನಾವು ಎಚ್ಚರಿಸಬೇಕೆಂದಿದ್ದೆವು. ಆದರೆ ನಮ್ಮ ಹಿಂದಕ್ಕೆ ತಿರುಗಿ ಕೆಳಕ್ಕೆ ನೋಡಲು ಹೆದರಿಕೆಯಾಯಿತು. ಮೇಲು ಮೇಲಕ್ಕೆ ಹತ್ತಿದಂತೆಲ್ಲ ಏದುಸಿರು ಬಿಡುತ್ತಿದ್ದೆವು. ಎರಡೂವರೆ ಗಂಟೆಗಳ ನಂತರ ಅಂತಿಮವಾಗಿ ಮಾರ್ಗದರ್ಶಿ ಚಂಪಕ್ ತೋರಿಸಿದ್ದ ಎರಡು ಬಂಡೆಗಳ ಹತ್ತಿರಕ್ಕೆ ತಲುಪಿದೆವು.

"ಆಹಾ! ಇದೀಗ ನಾವು, ನಿಮಗೆ ಮೇಲೆ ಕಾಣುತ್ತಾ ಇವೆಯಲ್ಲ ಆ ಎರಡು ಧ್ವಜಗಳು ಅಲ್ಲಿದ್ದೇವೆ." – ಎಂದು ಉದ್ಗರಿಸಿದ.

ಆ ಬಾವುಟಗಳಿರುವ ಸ್ಥಳಕ್ಕೆ ಹೋಗಲು ನಮಗೆ ಇನ್ನೂ ಎರಡು ಗಂಟೆ ಬೇಕಾಯಿತು. ಅಲ್ಲಿಂದ ಅಂದು ರಾತ್ರಿ ನಾವು ಉಳಿಯಬೇಕಿದ್ದ ಶಿಮ್ಲಾ ಬಾಬಾ ಅವರ ಆಶ್ರಮವನ್ನು ತಲುಪಲು ಇನ್ನೂ ಎರಡು ಕಿಲೋಮೀಟರ್ ನಡೆಯಬೇಕೆಂದು ಹೇಳಿದನು.

ತಪೋವನ ಎಂಬ ಆ ಸ್ಥಳವು ಬೆಟ್ಟದ ಮೇಲಿರುವ, ಫುಟ್ ಬಾಲ್ ಮೈದಾನದಷ್ಟು ವಿಸ್ತಾರದ ಹಸಿರು ಹುಲ್ಲಿನಿಂದ ಆವೃತವಾದ ಸಮತಲ ಪ್ರದೇಶ. ಅದು ಶಿವಲಿಂಗ ಪರ್ವತದ ಬುಡದಲ್ಲಿದೆ. ಇಲ್ಲಿ ಗಂಗೆ ಮಂದಗತಿಯಿಂದ ಹರಿಯುವ ಒಂದು ತೆಳ್ಳನೆಯ ಧಾರೆ ಅಷ್ಟೆ. ಪಾತ್ರವೂ ತೀರ ಕಿರಿದೇ.

ನಾವು ಶಿಮ್ಲಾ ಬಾಬಾ ಅವರ ಕುಟೀರಕ್ಕೆ ಹೋದೆವು. ಇದು ಕಲ್ಲು ಮಣ್ಣು ಮತ್ತು ಟಾರ್ಪಾಲಿನಿಂದಾದ ರಚನೆ. ಬಾಬಾ ಅವರು ಚಾಪೆಯ ಮೇಲೆ ಕುಳಿತಿದ್ದರು. ಲಂಗೋಟಿಯನ್ನು ಹೊರತುಪಡಿಸಿದರೆ ಮೈಮೇಲೆ ಬೇರೆ ವಸ್ತ್ರವಿರಲಿಲ್ಲ. ನಾವು 12000 ಅಡಿಯಿಂದ 15000 ಅಡಿಗಳವರೆಗೆ ಕೆಲವೇ ಗಂಟೆಗಳಲ್ಲಿ ಹತ್ತಿಬಂದಿದ್ದೆವು. ಎತ್ತರದ ಕಾರಣ ನಮಗೆಲ್ಲ ಹೊಟ್ಟೆತೊಳಸುವಂತಾಗಿತ್ತು. ಬಾಬಾ ಅವರು ಸ್ವಲ್ಪ ಚಹಾ ಮಾಡಿಕೊಟ್ಟರು. ಜೊತೆಗೆ ದಾಲ್ ಮತ್ತು ರೊಟ್ಟಿಯನ್ನು ಕೊಟ್ಟರು. ಆಮೇಲೆ ಹೊದೆಯಲು ರಗ್ಗುಗಳನ್ನು ಕೊಟ್ಟರು. ನಾವು ಸೌದೆಗಳನ್ನು ತುಂಬುವ ಜಾಗವಾಗಿದ್ದ ಇನ್ನೊಂದು ಕುಟೀರದಲ್ಲಿ ವಿಶ್ರಾಂತಿ ತೆಗೆದುಕೊಂಡೆವು. ಕೆಲವು ಗಂಟೆಗಳ ಕಾಲ ನಿದ್ರಿಸಿ ಸಂಜೆಯ ಚಹಾಕ್ಕೆ ಬಾಬಾರ ಬಳಿ ಸೇರಿದೆವು.

ಚಹಾದ ನಂತರ ಬಾಬಾ ಅವರು ಇನ್ನೊಬ್ಬ ಸಂನ್ಯಾಸಿಯ ಪರಿಚಯಮಾಡಿಕೊಟ್ಟರು. ಅವರು ಮೂರನೆಯ ಸಣ್ಣ ಕುಟೀರದಲ್ಲಿದ್ದರು.

"ನೀವು ಅವರ ಜೊತೆ ಮಾತಾಡಬೇಕು. ಅವರು ಲಂಗೋಟಿ ಧರಿಸಿಯೇ ಹಿಮಾಲಯವನ್ನೆಲ್ಲ ಸುತ್ತಾಡಿದ್ದಾರೆ"– ಎಂದು ಶಿಮ್ಲಾ ಬಾಬಾ ಹೇಳಿದರು.

ಅವರೊಬ್ಬ ಸ್ಥೂಲಕಾಯದ ಸ್ವಾಮಿ. ಹಿಮಭರಿತ ನೆಲದ ಮೇಲೆ ಲಂಗೋಟಿ ಧರಿಸಿ ಬರಿಗಾಲಿನಲ್ಲೇ ವೇಗವಾಗಿ ಓಡುತ್ತಿದ್ದರು. ನಾವಾದರೋ ಚಳಿಗಾಲದ ಉಡುಪು ಧರಿಸಿಯೂ, ಕೈಗಳಿಗೆ ಗ್ಲೌಸ್, ತಲೆಗೆ ಟೋಪಿ ಧರಿಸಿಯೂ ನಡುಗುತ್ತಿದ್ದೆವು. ತಮ್ಮ ಕಲ್ಲು ಕಟ್ಟಡದಲ್ಲಿ ರಚಿಸಿದ್ದ ಭಟ್ಟಿಯ ಮುಂದೆ ಕುಳಿತು ನಮಗೆ ಬೆಚ್ಚಗೆ ಮಾಡಿಕೊಳ್ಳಲು ಹೇಳಿದರು. ಅವರದು ದೊಡ್ಡ ಗಂಟಲು. ಆದರೆ ಹೃದಯ ತುಂಬಿ ನಗುತ್ತಿದ್ದರು. ಜನರೊಂದಿಗೆ ಮಾತಾಡುವುದು ಕತೆ ಹೇಳುವುದೆಂದರೆ ಅವರಿಗೆ ತುಂಬ ಇಷ್ಟ. ಬೆಂಕಿಯೇನೋ ಶಾಖವಾಗಿಯೇ ಇತ್ತಾದರೂ ಸೌದೆ ಹಸಿ ಇದ್ದದ್ದರಿಂದ ಅದರಿಂದ ಏಳುತ್ತಿದ್ದ ಹೊಗೆ ನಮ್ಮನ್ನು ಹಿಮ್ಮೆಟ್ಟಿಸುತ್ತಿದ್ದುದೇ ಸಮಸ್ಯೆಯಾಗಿತ್ತು. ಅವರ ಪ್ರತಿಯೊಂದು ವಾಕ್ಯ ಪ್ರಾರಂಭವಾಗುತ್ತಿದ್ದುದೇ "ಶ್ರೀರಾಮ್ ಭರೋಸಾ" ಎಂದು.

ಬೆಂಕಿಯ ಸುತ್ತ ಕುಳಿತಿದ್ದ ಗುಂಪಿನೊಂದಿಗೆ ನಾವು ಸೇರಿಕೊಂಡಾಗ ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿಯ ಪ್ರಶ್ನೆಗೆ ಉತ್ತರವಾಗಿ ಒಂದು ಹೊಸ ಕಥೆ ಹೇಳತೊಡಗಿದರು.

ಬಾಬಾರ ಕಂಠ ಜೋರಾಯಿತು: "ಶ್ರೀ ರಾಮ ಭರೋಸಾ. ನೀವು ಬ್ರಹ್ಮ ರಾಕ್ಷಸನನ್ನು ಹೇಗೆ ಹುಡುಕಿ ಅವನನ್ನು ವಶಪಡಿಸಿಕೊಳ್ಳಬಹುದೆಂಬುದನ್ನು ನಾನು ನಿಮಗೆ ಹೇಳಿಕೊಡಬಲ್ಲೆ. ಶ್ರೀ ರಾಮ್ ಭರೋಸಾ (ರಾಕ್ಷಸ ಎಂದರೆ ದುಷ್ಟ, ಪಾಪಿ ಮತ್ತು ಅಪಾಯಕಾರಿ ಭೂತವಾಗಿರುತ್ತಾನೆ) ಒಮ್ಮೆ ಅವನು ನಿಮ್ಮ ಕೈವಶನಾದನೆಂದರೆ ಇಡೀ ಪ್ರಪಂಚವೇ ನಿಮ್ಮ ಹತೋಟಿಗೆ ಬರುತ್ತದೆ ರಾಮ ಭರೋಸಾ. ಆಗ ನೀವು ಈ ಶಕ್ತಿಯನ್ನು ಮಾನವ ಸಮಾಜದ ಒಳಿತಿಗೆ ಹೇಗೆ ಬಳಸಬಹುದೆಂಬುದು ನಿಮಗೆ ಗೊತ್ತಾಗುತ್ತದೆ."

ಕುತೂಹಲಕ್ಕಾಗಿ ಒಬ್ಬ ವ್ಯಕ್ತಿ ಮೆಲುದನಿಯಲ್ಲಿ– "ಬ್ರಹ್ಮರಾಕ್ಷಸನನ್ನು ಹಿಡಿಯೋದು ಹೇಗೆ" ಎಂದು ಕೇಳಿದ.

ಬಾಬಾ ಹೇಳತೊಡಗಿದರು– "ಶ್ರೀರಾಮ್ ಭರೋಸಾ. ಮುಂಚೆ ನೀವು ಅದಕ್ಕೆ ಸ್ವಲ್ಪ ಕಠಿಣತರವಾದ ಅನುಷ್ಠಾನಗಳನ್ನು ಮಾಡಬೇಕಾಗುತ್ತದೆ. ಬೆಳಗಿನ ಜಾವದಲ್ಲಿ ತಣ್ಣೀರಿನಿಂದ ಸ್ನಾನ ಮಾಡುವುದು, ದಿನಕ್ಕೆ ಒಂದು ಬಾರಿ ಮಾತ್ರ ಸಾತ್ವಿಕ ಆಹಾರ ತೆಗೆದುಕೊಳ್ಳುವುದು, ಮತ್ತು ಇಡೀ ದಿನವೆಲ್ಲಾ ಪ್ರಾರ್ಥನೆ ಮಾಡುತ್ತಾ ಇರುವುದು ಇವೇ ಆ ಅನುಷ್ಠಾನಗಳು. ಈ ಅನುಷ್ಠಾನಗಳನ್ನು ನಲವತ್ತು ದಿವಸಗಳ ಕಾಲ ಮಾಡಬೇಕಾಗುತ್ತೆ. ನಲವತ್ತನೇ ದಿನದ ರಾತ್ರಿ, ಅದು ಅಮಾವಾಸ್ಯೆ. ನೀವು ಶ್ಮಶಾನಕ್ಕೆ ಹೋಗಬೇಕಾಗುತ್ತೆ. ಅಲ್ಲಿ ಆಲದ ಮರ ಇದೆ." ಅಷ್ಟು ಹೊತ್ತಿಗೆ ಇಡೀ ಕುಟೀರವನ್ನೆಲ್ಲ ಹೊಗೆ ಆವರಿಸಿಕೊಂಡುಬಿಟ್ಟಿತು. ಕಣ್ಣುಗಳೆಲ್ಲಾ ಉರಿಯತೊಡಗಿ ಎಲ್ಲರ ಮೂಗಿನಲ್ಲೂ ನೀರು ಸುರಿಯತೊಡಗಿತು. ಪ್ರತಿಯೊಬ್ಬರೂ ತಮ್ಮ ಕಣ್ಣುಗಳನ್ನು ಉಜ್ಜುತ್ತ, ಮೂಗುಗಳನ್ನು ಒರೆಸಿಕೊಳ್ಳತೊಡಗಿದರು. ಬಾಬಾ ಬೆಂಕಿ ಚೆನ್ನಾಗಿ ಉರಿಯಲೆಂದು ಒಲೆ ಊದತೊಡಗಿದರು. ಆದರೆ ಹೊಗೆ ಅವರ ಮಾತು ಕೇಳುತ್ತಿರಲಿಲ್ಲ.

ಅವರು ಮುಂದುವರಿಸಿದರು.: "ಶ್ರೀ ರಾಮ ಭರೋಸಾ. ನೀವು ಆಲದ ಮರ ಹತ್ತಬೇಕಾಗುತ್ತದೆ. ಬೆಳಿಗ್ಗೆ ಮುಂಚೆಯೇ ಅಲ್ಲಿಗೆ ಹೋಗಿ. ಕಾಯಿರಿ. ಮಧ್ಯರಾತ್ರಿಯಲ್ಲಿ ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳಲು ಬ್ರಹ್ಮರಾಕ್ಷಸ ಬರುತ್ತಾನೆ. ನೀವು ನಾನು ಹೇಳಿಕೊಡುವ ಮಂತ್ರವನ್ನು ನಿಲ್ಲಿಸದೆ ಜಪಿಸುತ್ತಾ ಇರಿ. ಮರದಿಂದ ಇಳಿದು ಅವನ ನೆತ್ತಿಯ ಮೇಲಿನ ಕೂದಲನ್ನು ಹಿಡಿದುಕೊಳ್ಳಿ. ಆಮೇಲೆ ರಾಮ ಭರೋಸಾ. ಬ್ರಹ್ಮರಾಕ್ಷಸನು ಇನ್ನುಮುಂದೆ ಯಾವತ್ತೂ ನಿಮ್ಮ ದಾಸನಾಗಿರುತ್ತಾನೆ"

ಒಬ್ಬ ವ್ಯಕ್ತಿ ಕೇಳಿದ_ "ಬಾಬಾ ! ಆ ಮಂತ್ರ ಯಾವುದು?"

ಈ ಹೊತ್ತಿಗೆ ಸರಿಯಾಗಿ ಕುಟೀರದಲ್ಲಿನ ಹೊಗೆ ತುಂಬಾ ಜೋರಾಗಿ ತಡೆದುಕೊಳ್ಳಲು ಅಸಾಧ್ಯವಾಗಿ ನಾವು ಬಾಬಾ ಅವರ ಚರಣ ಸ್ಪರ್ಶಮಾಡಿ ಅಲ್ಲಿಂದ ಹೊರ ಹೊರಟೆವು. ಅಯ್ಯೋ ! ಕೊನೆಗೂ ಬ್ರಹ್ಮರಾಕ್ಷಸನನ್ನು ವಶಮಾಡಿಕೊಳ್ಳುವ ಮಂತ್ರವನ್ನು ನಾವು ಕಲಿಯಲೇ ಇಲ್ಲ !

ನಾವು ಶಿಮ್ಲಾ ಬಾಬಾ ಅವರಲ್ಲಿಗೆ ಹಿಂತಿರುಗಿ ಬಂದಾಗ ಅವರು ಪ್ರೀತಿಯಿಂದ ಆಗ ತಾನೆ ತಯಾರಿಸಿದ ದಾಲ್, ಬೇಯಿಸಿದ ತರಕಾರಿಗಳು, ಮತ್ತು ರೊಟ್ಟಿಗಳನ್ನು ಉಣಬಡಿಸಿದರು. ಅವರಿಗೆ ತಮ್ಮ ಬಗ್ಗೆ ಹೇಳಿಕೊಳ್ಳಲು ಹೆಚ್ಚೇನೂ ಇರಲಿಲ್ಲ.

"ನೀವು ಒಬ್ಬರೇ ಇಲ್ಲಿ ಇದ್ದೂ ಇದ್ದೂ ಬೇಜಾರಾಗೋಲ್ಲವೆ" ಎಂದು ನಾವು ಕೇಳಿದೆವು.

"ಸೇವೆ ಮಾಡುವುದು ಮತ್ತು ಆಧ್ಯಾತ್ಮಿಕ ಅನುಷ್ಠಾನಗಳನ್ನು ಆಚರಿಸುವುದು ಎರಡೂ ಒಂದೊಂದು ಕೈಯ ಲಾಡು ಇದ್ದಂತೆ. ಇಲ್ಲಿ ಜನರು ಇದ್ದಾಗ ಒಂದು ಕೈಯಿಂದ ಲಾಡು ತಿನ್ನುತ್ತೇನೆ ನಾನೊಬ್ಬನೇ ಇದ್ದಾಗ ಇನ್ನೊಂದು ಕೈಯಿಂದ ಲಾಡು ತಿನ್ನುತ್ತೇನೆ – ಎಂದು ಅವರು ಪ್ರೀತಿಯಿಂದ ಹೇಳಿದರು."

ಅವರಿಗೆ ಸಿಗರೇಟೆಂದರೆ ಬಹಳ ಇಷ್ಟ ಎಂದು ನಮಗೆ ಹೇಳಲಾಗಿತ್ತು. ನಾವು ಸಿಗರೇಟ್ ತಂದಿದ್ದೆವು. ಅವರು ಜಗತ್ತಿನ ಗೊಡವೆ ಇಲ್ಲದೆ ತಮ್ಮ ಬಗ್ಗೆಯೂ ನಿಶ್ಚಿಂತರಾಗಿ ಅವುಗಳನ್ನು ಸೇದುತ್ತ ಕುಳಿತರು. ಮರುದಿನ ನಸುಕಿನಲ್ಲೇ ಅಲ್ಲಿಂದ ಹೊರಟೆವು. ಕಾರಣ, ಹಿಂತಿರುಗುವ ಸಂದರ್ಭದಲ್ಲಿ ಭೋಜ್ ಪಾಸ್ ಬಾಬಾರ ಬಳಿ ನಿಲ್ಲುವುದು ನಮಗೆ ಬೇಕಿರಲಿಲ್ಲ. ಇಡೀ ದಿನ ಗಂಗೋತ್ರಿಯ ತನಕ ನಡೆದು 23 ಕಿಲೋಮೀಟರ್ ಸವೆಸಿದೆವು. ಹಿಂತಿರುಗುವಾಗ ನಾವು ಸಂಧಿಸಿದ ವಿಭಿನ್ನ ಸ್ವಭಾವದ ನಾನಾ ವ್ಯಕ್ತಿಗಳ ಬಗ್ಗೆ ಮಾತಾಡಿಕೊಂಡೆವು: ಅದರಲ್ಲೂ ವಿಶೇಷವಾಗಿ ಪ್ರೇಮ ಸ್ವಭಾವದ ಶಿಮ್ಲಾ ಬಾಬಾ, ಮತ್ತು ನೇಪಾಳಿ ಮಾರ್ಗದರ್ಶಿ ಚಂಪಕ್. ಬಗ್ಗೆ . ಈ ಶಿಮ್ಲಾ ಬಾಬಾ ಸಹಾನುಭೂತಿಪರ, ಕರುಣಾಳು, ಹಾಸ್ಯ ಮನೋಧರ್ಮದ ಹಾಗೂ ಸದಾ ಮುಗುಳ್ನಗುತ್ತಿರುವ ವ್ಯಕ್ತಿ. ಹಿಮಶೀತಲ ಚಳಿಯಲ್ಲಿ ಬೆಳಗಿನಜಾವ 4 ಗಂಟೆಯ ಸಮಯದಲ್ಲಿ ಲಂಗೋಟಿ ಮಾತ್ರ ಧರಿಸಿ

ಯೋಗಾಭ್ಯಾಸ ಮಾಡುತ್ತಿದ್ದರು. ನಾವು ಆ ಬಗ್ಗೆ ಕೇಳಿದಾಗ ಅತ್ಯಂತ ವಿನಯದಿಂದ "ಇದೇನು ಮಹಾ ! ಇಡೀ ದಿನವೆಲ್ಲ ಬೆಂಕಿ ಮುಂದೆ ಸೋಂಬೇರಿಯಾಗಿ ಬಿದ್ದಿರುತ್ತೀನಿ" ಎಂದು ಹೇಳಿದರು.

ಇನ್ನು ಚಂಪಕನ ಬಗ್ಗೆ ಹೇಳಬೇಕೆಂದರೆ ನಾನು ಭೇಟಿಮಾಡಿರುವ ವ್ಯಕ್ತಿಗಳಲ್ಲಿ ಶ್ರೇಷ್ಠ ಮನಶ್ಶಾಸ್ತ್ರಜ್ಞರಲ್ಲೊಬ್ಬ ಎಂದು ಹೇಳಬಹುದು. ಇಪ್ಪತ್ತೆಂಟು ವರ್ಷದ ಹಳದಿ-ಕಂದು ಬಣ್ಣದ, ಮಾಂಸಖಂಡಗಳಿಂದಲೇ ತುಂಬಿದ್ದು ಒಂದಿನಿತೂ ಕೊಬ್ಬಿಲ್ಲದ ಸದೃಢ ದೇಹದ ವ್ಯಕ್ತಿ ಆತ. ಮಧ್ಯ ವಯಸ್ಸಿನ, ನಗರ ಜೀವಿಗಳಾದ ನಮ್ಮನ್ನು 9000 ಅಡಿಗಳ ಎತ್ತರದಿಂದ 15000 ಅಡಿಗಳ ಎತ್ತರದ ವರೆಗೆ ಎರಡು ದಿನಗಳಲ್ಲಿ ಅದು ಹೇಗೆ ಕರೆದೊಯ್ದು ಮತ್ತೆ ವಾಪಸ್ ಕರೆತಂದನೆಂಬುದು ನಿಜಕ್ಕೂ ಆಶ್ಚರ್ಯಕರವೇ. ಅವನು ಯಾವಾಗಲೂ ನಮ್ಮನ್ನು ಹುರಿದುಂಬಿಸುತ್ತಿದ್ದನು. ನಾವು ಅದನ್ನು ಸಾಧಿಸಬಲ್ಲೆವೆಂದು ಅವನಿಗೆ ಪೂರ್ತಿ ಭರವಸೆ ಇದ್ದಂತಿತ್ತು. ಬಹುಶಃ ಸಹಾನುಭೂತಿ ಮತ್ತು ಆತ್ಮವಿಶ್ವಾಸವನ್ನು ಗಂಗಾ ಮಾತೆಯ ಬಗೆಗಿನ ಗಾಢ ಶ್ರದ್ದೆಯಿಂದ ಪಡೆದಿದ್ದನೆನಿಸುತ್ತದೆ. ಆ ಪ್ರದೇಶದ ಪ್ರತಿಯೊಬ್ಬರಿಗೂ ಗಂಗಾ ಮಾತೆ ದಾರಿತೋರುವ ಶಕ್ತಿಯೆಂದು ಅವನು ನಂಬಿದ್ದ.

* * *

1998ರಲ್ಲಿ ಇಬ್ಬರು ಕೆನಡಾದ ಸಹೋದ್ಯೋಗಿಗಳೊಂದಿಗೆ ಗಂಗೋತ್ರಿಗೆ ಮತ್ತೆ ಬಂದೆ. ಸಂಶೋಧನಾ ಯೋಜನೆಯೊಂದರಲ್ಲಿ ನಾವು ಒಟ್ಟಿಗೆ ಕೆಲಸ ಮಾಡುತ್ತಿದ್ದೆವು. ಅದರ ಒಂದು ಮುಖ್ಯ ಉದ್ದೇಶ ಸನ್ಯಾಸ ಜೀವನದಲ್ಲಿ, ಸಾಮಾನ್ಯ ಜೀವನದ ಅಡಚಣೆಗಳಿಂದ ರೋಗಿಗಳ ಸೂಕ್ಷ್ಮ 'ಅಹಂ'ಗೆ ಧಕ್ಕೆ ಒದಗುವುದನ್ನು ತಡೆಗಟ್ಟಿ ರಕ್ಷಣೆ ನೀಡಲು ಸಾಧ್ಯವಾಗುವ ಕಾರಣದಿಂದ ಸನ್ಯಾಸವು ಸುಪ್ತ ಸ್ಕಿಸೋಫ್ರೆನಿಕ್ ರೋಗಿಗಳಿಗೆ ಒಂದು ಸುರಕ್ಷಿತ ತಾಣವನ್ನು ಒದಗಿಸುತ್ತದೆಯೇ? ಕಾರಣ ಸನ್ಯಾಸ ಜೀವನದಲ್ಲಿ ಸಾಮಾನ್ಯ ಜನರ ಅನಗತ್ಯ ಮಧ್ಯ ಪ್ರವೇಶದಿಂದ ಅವರುಗಳ ಸೂಕ್ಷ್ಮ ಅಹಂ ಅನ್ನು ಕಾಪಿಡಬಹುದು. ಸ್ಕಿಸೋಫ್ರೇನಿಯಾದ ಪ್ರಾರಂಭಿಕ ಹಂತಗಳಲ್ಲಿ ಸರ್ವೇಸಾಮಾನ್ಯವಾಗಿರುವ ಅಸ್ಪಷ್ಟ ತಾತ್ವಿಕ ಚಿಂತನೆಗಳನ್ನು ಉದಾತ್ತೀಕರಿಸಿ ಅರ್ಥಪೂರ್ಣವೂ ಸಾಮಾಜಿಕವಾಗಿ ಸ್ವೀಕಾರಾರ್ಹವೂ ಆಗಬಹುದಾದ ಆಚರಣೆಗೆ ಇಲ್ಲಿ ಅಳವಡಿಸಲು ಸಾಧ್ಯವೆ? ಎಂಬುದನ್ನು ಕಂಡುಕೊಳ್ಳುವುದು. ಇವೆಲ್ಲವುಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಹಾಗೂ ಜನರು ಏಕೆ ಸನ್ಯಾಸ ತೆಗೆದುಕೊಳ್ಳುತ್ತಾರೆ, ಸನ್ಯಾಸವು ಅವರ ಮಾನಸಿಕ ಜೀವನವನ್ನು ಮತ್ತು ಸಮಾಜದೊಂದಿಗೆ ಅವರ ಸಂಬಂಧವನ್ನು ಯಾವ ರೀತಿಯಲ್ಲಿ ಪ್ರಭಾವಿತಗೊಳಿಸುತ್ತದೆ ಎಂಬುದರ ಕಾರಣಗಳ ಬಗ್ಗೆ ಶೋಧಿಸುವ ಅಗತ್ಯವಿತ್ತು.

ನಾವು ಮೊದಲು ಹರಿದ್ವಾರಕ್ಕೆ ಹೋದೆವು. ಅಲ್ಲಿಂದ ಹೃಷೀಕೇಶ, ಹೃಷೀಕೇಶದಿಂದ ಗಂಗೋತ್ರಿ ಮತ್ತು ಬದರೀನಾಥಗಳಿಗೆ ಹೋದೆವು. ಹರಿದ್ವಾರದಲ್ಲಿ ಸಾಧುಗಳನ್ನು ಭೇಟಿಮಾಡುವುದು ತುಂಬ ಸುಲಭವಿತ್ತು. ಅದರಲ್ಲೂ ಅವರೊಂದಿಗಿನ ನಮ್ಮ ಸಂವಾದವು

ಅವರಿಗೆ ದುಡ್ಡು ತಂದುಕೊಡುತ್ತದೆಂಬುದು ಅವರಿಗೆ ಗೊತ್ತಾದಾಗ ನಮ್ಮೊಂದಿಗೆ ಮಾತಾಡಲು ಬಯಸಿ ಕಾದುನಿಂತವರ ದೊಡ್ಡ ಗುಂಪೇ ಇತ್ತು.

ನಾವು ವಿವಿಧ ರೀತಿಯ ಸಾಧುಗಳನ್ನು ಸಂಧಿಸಿದೆವು. ಅವರಲ್ಲಿ ಅನೇಕರ ಜೀವನ ಕಥೆಗಳು ಇದೇ ಅಧ್ಯಾಯದಲ್ಲಿ ಮುಂದೆ ಬರುತ್ತವೆ. ಅವರಲ್ಲಿ ಕೆಲವರು ಸಾಧುಗಳು, ಕೆಲವರು ಮನೋವಿಕಾರಿಗಳು, ಇನ್ನು ಕೆಲವರು ವರ್ಷದಲ್ಲಿ ಕೆಲವು ತಿಂಗಳು ಮಾತ್ರ ಮನೆಗಳಿಂದ ದೂರವಿದ್ದು ಈ ತೀರ್ಥಕ್ಷೇತ್ರಗಳಲ್ಲಿ ಕಳೆಯುತ್ತಿದ್ದ ಅಂಶಕಾಲಿಕ ಸಾಧುಗಳು. ಕೆಲವರಂತೂ ಅತಿಯಾದ ಮಾದಕ ದ್ರವ್ಯಗಳನ್ನು ಸೇವಿಸುವವರಾಗಿದ್ದರು.

ಹೃಷೀಕೇಶದಲ್ಲಿ ನಾವು ಶಿವಾನಂದಾಶ್ರಮಕ್ಕೆ ಹೋದೆವು. ಅಲ್ಲಿಯ ಪ್ರಧಾನ ಸ್ವಾಮಿಯವರು ಮಧ್ಯಾಹ್ನದ ನಿದ್ರೆಯಲ್ಲಿದ್ದಾರೆಂದು ತಿಳಿಸಿದರು. ವಿಶ್ರಾಂತಿಯ ನಂತರ ಅವರನ್ನು ಭೇಟಿಮಾಡಿ ನಾವು ಏನನ್ನು ನಿರೀಕ್ಷಿಸುತ್ತಿದ್ದೇವೆಂದು ಹೇಳಿದೆವು. ಅವರು ಒಬ್ಬ ಹೆಡ್ ಮಾಸ್ಟರ್‌ನಂತೆ ವರ್ತಿಸುತ್ತ ದರ್ಪದಿಂದ ನಮ್ಮನ್ನೇ ಪ್ರಶ್ನೆಗಳನ್ನು ಕೇಳುತ್ತಹೋದರು. ಅವರು ತೋರಿಕೆಯ ಪ್ರತಿಷ್ಠೆಯಿಂದ ನಮ್ಮ ಪ್ರಶ್ನೆಗಳಿಗೆ ತಮ್ಮ ಪ್ರಶ್ನೆಗಳಿಂದಲೇ ಉತ್ತರ ಕೊಡುತ್ತಹೋದರು. ಒಬ್ಬ ಕಿರಿಯ ವಯಸ್ಸಿನ ಬೆಳ್ಳನೆಯ ಸಂನ್ಯಾಸಿನಿಯೊಬ್ಬರು ಅವರ ಬಳಿ ಕುಳಿತು, ನಮ್ಮ ಸಂವಾದಗಳನ್ನೆಲ್ಲ ರೆಕಾರ್ಡ್ ಮಾಡುತ್ತಿದ್ದರು. ಒಮ್ಮೊಮ್ಮೆ ನಮ್ಮ ಮೂರ್ಖತನದ ಪ್ರಶ್ನೆಗಳಿಗೆ ಮುಗುಳ್ನಗುತ್ತಿದ್ದರು. ಈ ಸಂದರ್ಶನ ನಿಸ್ಸಂದೇಹವಾಗಿ ಅಹಿತಕರವಾಗಿತ್ತು.

ನಾವು ಮಧ್ಯಾಹ್ನದ ಹೊತ್ತಿಗೆ ಗಂಗೋತ್ರಿ ತಲುಪಿದೆವು. ನನ್ನ ಈ ಮುಂಚಿನ ಗಂಗೋತ್ರಿಯ ಭೇಟಿಯ ನೆನಪುಗಳು ಒತ್ತರಿಸಿ ಬಂದವು. ನಾವು ಉಳಿದುಕೊಂಡಿದ್ದ ವಿಶ್ರಾಂತಿ ಗೃಹವನ್ನು ಹೊರತು ಪಡಿಸಿದರೆ ಆ ಜಾಗದಲ್ಲಿ ಏನೇನೂ ಬದಲಾವಣೆಗಳಾಗಿರಲಿಲ್ಲ. ಗಡವಾಲ್ ಮಂಡಲ್ ಅವರು ಅದನ್ನು ನೋಡಿಕೊಳ್ಳುತ್ತಿದ್ದರು.

ಗಂಗೋತ್ರಿಯಿಂದ ನಾವು ಬದರೀನಾಥಕ್ಕೆ ಹೋದೆವು. ಅಲ್ಲಿ ದೇವಸ್ಥಾನದ ಸುತ್ತ ಮುತ್ತ ಇದ್ದ ಇಕ್ಕಟ್ಟಾದ ಬೀದಿಗಳ ತುಂಬೆಲ್ಲ ಜನರು ಇಡಿಕಿರಿದಿದ್ದರು. ಅವರುಗಳು ರೆಸ್ಟೊರೆಂಟುಗಳಲ್ಲಿ ತಿನಿಸುಗಳನ್ನು ತಿನ್ನುತ್ತ, ಅತ್ತ ಗಡಿಯಾಚೆಯ ಚೀನಾದಿಂದ ಬರುತ್ತಿದ್ದ ಒಡವೆಗಳು ಮತ್ತು ಎಲೆಕ್ಟ್ರಾನಿಕ್ ವಸ್ತುಗಳನ್ನು ಕೊಳ್ಳುತ್ತ ಓಡಾಡುತ್ತಿದ್ದರು. ನನಗೆ ಇದೊಂದು ತೀರ್ಥಕ್ಷೇತ್ರವೆಂದು ಅನ್ನಿಸುವುದಕ್ಕಿಂತ ಹಳ್ಳಿಯ ಮಾರುಕಟ್ಟೆ ಅನ್ನಿಸಿತು. ಚಿನ್ನದ ಬಣ್ಣದಿಂದ ಕಂಗೊಳಿಸುತ್ತ ಅಲಂಕಾರದ ವಿದ್ಯುದ್ದೀಪಗಳಿಂದ ಝುಗಝುಗಿಸುತ್ತ, ಪಕ್ಕದಲ್ಲೊಂದು ಬಿಸಿನೀರಿನ ಬುಗ್ಗೆಯನ್ನು ಹೊಂದಿದ್ದ ಕೊಳದ ಪಕ್ಕದಲ್ಲಿದ್ದ ದೇವಸ್ಥಾನವೇ ಅತ್ಯಂತ ಸುಂದರವಾಗಿತ್ತು. ಜನಗಳು ಪುಣ್ಯ ಸ್ನಾನಕ್ಕೆಂದು ಜಮಾಯಿಸಿದ್ದ ಕೊಳದ ಪಕ್ಕದಲ್ಲಿ ಉದ್ದಕ್ಕೂ ಸಾಧುಗಳು ಮತ್ತು ಭಿಕ್ಷುಕರು ನಿಂತಿದ್ದರು. ಇದ್ದುದರಲ್ಲಿ ಸ್ವಚ್ಛವಾಗಿದ್ದ ಲಾಡ್ಜೊಂದು ನಮಗೆ ತಂಗಲು ಸಿಕ್ಕಿತು. ಅಲ್ಲಿ ಎರಡು ದಿನ ಕಳೆದೆವು. ಮರುದಿನ ಅಮೆರಿಕಾದಲ್ಲಿದ್ದ

ನನ್ನ ಮಗಳೊಂದಿಗೆ ಮಾತನಾಡುತ್ತ ನಾನು ಹಿಮಾಲಯದಲ್ಲಿ 11000 ಅಡಿ ಎತ್ತರದ ಪ್ರದೇಶದಿಂದ ಉಪಗ್ರಹ ತಂತ್ರಜ್ಞಾನವನ್ನು ಬಳಸಿಕೊಂಡು ಫೋನ್ ಮಾಡುತ್ತಿದ್ದೇನೆಂದು ಹೇಳುತ್ತಿರುವಾಗ ನನಗೆ ಆ ವೈದೃಶ್ಯ ಸ್ಪಷ್ಟವಾಗಿ ಅರಿವಿಗೆ ಬಂದಿತು.

ನಾವು ಕೊಠಡಿಯಲ್ಲಿದ್ದಾಗ ಒಬ್ಬ ಸನ್ಯಾಸಿನಿ ಬಂದು, ಇತ್ತ ಟಿಬೆಟ್ಟಿನ ಕಡೆಯ ಗಡಿಯಲ್ಲಿನ ಭಾರತದ ಕೊಟ್ಟಕೊನೆಯ ಹಳ್ಳಿಯಾದ 'ಮಾನಾ' ವನ್ನು ನೋಡಲು ಕರೆದುಕೊಂಡು ಹೋಗುವುದಾಗಿ ಹೇಳಿದಳು. ಹಳ್ಳಿಯ ನಿವಾಸಿಗಳನ್ನು ಭೂತಿಯಾರ್ ಗಳೆಂದು ಕರೆಯುತ್ತಾರೆ. ಆದರೆ ಅವರು ಭೂತಾನದವರಲ್ಲ. ಅವರು ಬೌದ್ಧ ಧಾರ್ಮಿಕ ನಂಬಿಕೆಗಳಿಗಿಂತ ಹೆಚ್ಚಾಗಿ ಹಿಂದೂ ನಂಬಿಕೆಗಳನ್ನು ಹೊಂದಿದ್ದ ಟಿಬೇಟನ್ನರಾಗಿದ್ದರು. ಹಳ್ಳಿಯು ಧಾರ್ಮಿಕ ಸಂಕೇತಗಳಿಂದ ಆವರಿಸಲ್ಪಟ್ಟಿದೆ. ವ್ಯಾಸರು ಕುಳಿತುಕೊಂಡು ಮಹಾಭಾರತವನ್ನು ಬರೆದರೆಂದು ಹೇಳಲಾದ ದೊಡ್ಡ ಬಂಡೆ, ಅವರು ಕುಳಿತು ಭಾಗವತ ಪುರಾಣವನ್ನು ರಚಿಸಿದ ಗುಹಾ ದೇವಾಲಯ, ಹಾಗೂ ದ್ರೌಪದಿಯ ಅಂಗೈ ಗುರುತುಗಳನ್ನು ತೋರಿಸಿದರು. ಹತ್ತಿರದಲ್ಲೇ ಅಲಕನಾಂದಾ ನದಿ ಭೋರ್ಗರೆಯುತ್ತ ಹರಿಯುತ್ತದೆ. ಹತ್ತಿರದ ಬೆಟ್ಟದ ಮೇಲಿದ್ದ ಮೆಟ್ಟಿಲುಗಳನ್ನು ತೋರಿಸಿ ಇವು ಪಾಂಡವರು ಸ್ವರ್ಗಾರೋಹಣ ಮಾಡಿದಾಗ ಹತ್ತಿಹೋದ ಮೆಟ್ಟಿಲುಗಳೆಂದು ಹೇಳಿದರು. ಗುಹಾ ದೇವಾಲಯದಲ್ಲಿ ಸ್ವಲ್ಪ ಹೊತ್ತು ಕುಳಿತೆವು. ಅದ್ಭುತವಾದ ಮಹಾನ್ ಶಾಂತಿಯ ಭಾವ ಹೃದಯನ್ನೆಲ್ಲ ಆವರಿಸಿತ್ತು. ಇತರೆ ಯಾತ್ರಿಗಳ ಮುಖದ ಮೇಲೆ ಲಾಸ್ಯವಾಡುತ್ತಿದ್ದಂಥದೇ ಆಧ್ಯಾತ್ಮಿಕದ ಉತ್ತುಂಗ ಭಾವದಲ್ಲಿ ನಾನೂ ಕೊಚ್ಚಿಹೋದೆ.

ಈ ಸನ್ಯಾಸಿನಿ ತನ್ನ ಕಥೆ ಹೇಳಿದಳು. ಅವಳ ತಂದೆತಾಯಿಗಳು ಅವಳನ್ನು ಒಂದು ಆಶ್ರಮಕ್ಕೆ ಒಪ್ಪಿಸಿಕೊಟ್ಟರು. ಆ ಆಶ್ರಮದಲ್ಲಿ ಅವಳ ಒಬ್ಬ ಚಿಕ್ಕಮ್ಮ ಮುಂಚೆಯೇ ಸನ್ಯಾಸಿನಿಯಾಗಿದ್ದಳು. ಈಕೆಗೆ ಹದಿನಾಲ್ಕು ವರ್ಷ ವಯಸ್ಸಾದಾಗ ಅವಳ ಚಿಕ್ಕಮ್ಮ ಬೇಕೆನಿಸಿದರೆ ಮದುವೆ ಮಾಡಿಕೊಳ್ಳಬಹುದೆಂದು ಆಯ್ಕೆಯ ಅವಕಾಶ ನೀಡಿದಳು. ಆದರೆ ಈಕೆ ಧಾರ್ಮಿಕ ಬದುಕನ್ನು ಬಯಸಿ ಸನ್ಯಾಸ ದೀಕ್ಷೆ ತೆಗೆದುಕೊಳ್ಳಲು ನಿರ್ಧರಿಸಿದಳಂತೆ. ಆಕೆ ಒಬ್ಬ ವೈಷ್ಣವ ಸಾಧುವಾಗಿದ್ದಳು. ನಮ್ಮನ್ನು ತನ್ನ ಸಣ್ಣ ಮನೆಗೆ ಕರೆದೊಯ್ದಳು. ಅದರಲ್ಲಿ ಶೇಷಶಾಯಿಯಾದ ವಿಷ್ಣುವಿನ ಹಲವು ಮೂರ್ತಿಗಳಿದ್ದವು. ಅಲ್ಲೊಂದು ತ್ರಿಶೂಲವೂ ಇತ್ತು. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಕಾರಣ ಅದು ನಾನು ತಿಳಿದಿರುವಂತೆ ಶಿವೋಪಾಸಕರ ಪ್ರತೀಕ. ಮನೆಯ ಸುತ್ತ ಆಕೆಯದೊಂದು ಸಣ್ಣ ಜಾಗವಿತ್ತು. ಅದು ವಿವಾದದಲ್ಲಿತ್ತು. ಆಕೆ ಅಲ್ಲಿ ತಾನು ದತ್ತು ತೆಗೆದುಕೊಂಡ ಇಬ್ಬರು ಹೆಣ್ಣು ಮಕ್ಕಳು ಮತ್ತು ಕ್ಷಯರೋಗ ಪೀಡಿತನಾದ ಸೋದರನೊಂದಿಗೆ ವಾಸವಿದ್ದಳು. ಪರ್ವತ ಪ್ರದೇಶದಿಂದ ಕೆಳಗೆ ನೂರು ಕಿಲೋಮೀಟರ್ ದೂರದ ಶ್ರೀನಗರದ ಹಳ್ಳಿಯೊಂದರಲ್ಲಿ ಆಕೆಯದು ಇನ್ನೊಂದು ಆಶ್ರಮವಿದೆ. ಅಲ್ಲಿ ಆಕೆ ಒಂಬತ್ತು ಜನ ಹೆಣ್ಣುಮಕ್ಕಳಿಗೆ ಆಶ್ರಯ ನೀಡಿ, ಜೀವನದ ಮಾರ್ಗೋಪಾಯಗಳನ್ನು, ಹೊಲಿಗೆ ಮತ್ತು

ಅಡುಗೆ ಮಾಡುವುದನ್ನು ಕಲಿಸುತ್ತಾಳೆ. ಆಕೆಗೆ ದೀಕ್ಷೆ ನೀಡಿದವನು ಒಬ್ಬ ನಾಗಾ ಸಾಧು. ಆಧ್ಯಾತ್ಮದ ಶೋಧದಲ್ಲಿ ತೊಡಗುವ ಬದಲು ಬೇರೆಯವರನ್ನು ನೋಡಿಕೊಳ್ಳುವುದರಲ್ಲಿ ಏಕೆ ಆಕೆ ಕಾಲವನ್ನು ಕಳೆಯುತ್ತಿದ್ದಾಳೆ ಎಂದು ನನ್ನ ಆಶ್ಚರ್ಯವನ್ನು ವ್ಯಕ್ತಪಡಿಸಿದೆ. ಅದಕ್ಕೆ ಆಕೆ ಈ ರೀತಿಯ ಬದುಕಿಗೆ ಬರಲು ತನಗೆ ಬೇರೆಯವರು ನೆರವು ನೀಡಿದ್ದಾರೆ, ಬೇರೆಯವರಿಂದ ತಾನೇನು ಪಡೆದಳೋ ಅದನ್ನು ಬೇರೆಯವರಿಗೆ ತಾನೂ ನೀಡುತ್ತಿದ್ದೇನೆ ಎಂದು ಉತ್ತರಿಸಿದಳು. ಭಜನೆಗಳನ್ನು ಹಾಡುವುದು, ಪ್ರೀತಿಯಿಂದ ಜನರಿಗೆ ನೆರವಾಗುವುದರಲ್ಲಿ ತಾನು ದಿನ ದೂಡುತ್ತಿರುವುದಾಗಿ ತಿಳಿಸಿದಳು.

ನಾನು 2000ದ ಮೇತಿಂಗಳಲ್ಲಿ ಗಂಗೋತ್ರಿಗೆ ಮೂರನೇ ಬಾರಿಗೆ ಬಂದೆ. ಹೃಷೀಕೇಶಕ್ಕೆ ಬಂದ ಮೇಲೆ ಗಂಗೋತ್ರಿಗೆ ಹೋಗುವ ಮಾರ್ಗಗಳೆಲ್ಲ ಬಂದಾಗಿರುವುದು ತಿಳಿದು ನಿರಾಶೆಯಾಯಿತು. ಒಂದು ವಾರದ ನಂತರ ನಾವು ಪಯಣ ಮುಂದುವರಿಸಲು ಸಾಧ್ಯವಾಯಿತೇನೋ ನಿಜ. ಆದರೆ ದೇವಸ್ಥಾನ ಮತ್ತೂ ಹದಿನೈದು ದಿನಗಳ ಕಾಲ ಮುಚ್ಚಿರುವುದಾಗಿ ತಿಳಿಯಿತು. ಉತ್ತರಕಾಶಿಯಿಂದ ಗಂಗೋತ್ರಿ ತಲುಪಲು ಕೇವಲ ಮೂರೂವರೆ ಗಂಟೆ ಸಾಕಾಯಿತು. ಹಿಮದಿಂದ ರಸ್ತೆಗೇನೂ ತಡೆಯುಂಟಾಗಿರಲಿಲ್ಲ. ಕೆಲವೇ ದಿನಗಳಲ್ಲಿ ರೆಸ್ಟೋರೆಂಟ್ ಮತ್ತು ಅಂಗಡಿಗಳ ಆಕಾರ ತಳೆಯಲಿರುವಂಥ ಪೂರ್ವನಿರ್ಮಿತ ಗೋಡೆಗಳಂಥವನ್ನು ನಿಲ್ಲಿಸುವುದರಲ್ಲಿ ಜನರು ನಿರತರಾಗಿದ್ದರು. ಆಕಾಶ ನಿರ್ಮಲವಾಗಿತ್ತು. ಭಗೀರಥ ಪರ್ವತದ ಎರಡೂ ಶಿಖರಗಳು ಮತ್ತೆ ಕನ್ನಡಿಯಂತೆ ಹೊಳೆಯುತ್ತಿದ್ದವು. ಬಂಡೆಗಳ ಮೇಲೆ ಹರಿಯುತ್ತಿದ್ದ ಗಂಗೆಯ ಗರ್ಜನೆ ಅಷ್ಟೇನೂ ಜೋರಿರಲಿಲ್ಲ. ಕಾರಣ ಹರಿವು ಹೆಚ್ಚಾಗುವುದೇನಿದ್ದರೂ ಪರ್ವತಗಳ ಮೇಲಿನ ಹಿಮ ಕರಗತೊಡಗಿದಾಗ. ಉತ್ತರಕಾಶಿಯಲ್ಲಿನ ಸ್ವಾಮೀಜಿ ಊಟದ ಪಾಕೆಟ್ ನೀಡಿದ್ದರು. ಆದರೆ ಬಿಸಿಬಿಸಿಯಾಗಿ ತಯಾರಿಸಿದ ದಾಲ್ ಮತ್ತು ರೊಟ್ಟಿ ನೀಡುವ ರೆಸ್ಟೋರೆಂಟ್ ತೆರೆದಿದ್ದುದು ನಮಗೆ ಸಂತಸವುಂಟುಮಾಡಿತು.

"ಗೋಮುಖಕ್ಕೆ ಹೋಗಬೇಕೇನು?" ಎಂದು ಯಾರೋ ಕೇಳುತ್ತಿದ್ದುದು ಕೇಳಿಸಿತು.

ಆ ದನಿ ನಮ್ಮ ನೆನಪುಗಳಲ್ಲಿ ಯಾವುದನ್ನೋ ಕಲಕಿತು. ಸುತ್ತಮುತ್ತ ನೋಡಿದಾಗ ಹಲವು ವರ್ಷಗಳ ಹಿಂದೆ ನಾವು ಮೊತ್ತಮೊದಲು ಗಂಗೋತ್ರಿಗೆ ಬಂದಿದ್ದಾಗ ನಮ್ಮನ್ನು ತಪೋವನಕ್ಕೆ ಕರೆದೊಯ್ದಿದ್ದ ಮಾರ್ಗದರ್ಶಿ ಚಂಪಕ್ ಕಣ್ಣಿಗೆ ಬಿದ್ದ. ಅವನೂ ನಮ್ಮನ್ನು ಗುರುತಿಸಿ ಹೊಳಪಿನ ದೊಡ್ಡ ನಗೆಬೀರಿದ. ಅವನು ಸ್ವಲ್ಪ ಕೃಶನಾದಂತೆ ಕಂಡಿತು. ಕಾಯಿಲೆಯಿಂದಾಗಿ ಪ್ರತಿ ವರ್ಷ ಗಂಗೋತ್ರಿಗೆ ಬರಲಾಗುತ್ತಿರಲಿಲ್ಲ. ಆದಾಗ್ಯೂ ಅವನು ಉತ್ಸಾಹಭರಿತನಾಗಿದ್ದ ಮತ್ತು ಗಂಗಾ ಮಾತೆಯ ಕೃಪೆಯಿಂದ ನಮ್ಮನ್ನು ಮತ್ತೊಮ್ಮೆ ತಪೋವನಕ್ಕೆ ಕರೆದೊಯ್ಯುವುದಾಗಿ ಆಶ್ವಾಸನೆಯಿತ್ತ. ನಮ್ಮ ಪಯಣದ ಹಾದಿಯಲ್ಲಿ ಗಂಗಾ ಮಾತೆಗೆ ಸಂಬಂಧಿಸಿದ ಹಲವಾರು ಪವಾಡದ ಕತೆಗಳನ್ನು ಹೇಳಿದ. ನಡೆಯಲು ತೊಂದರೆಯಿದ್ದ ದಂಪತಿ ಎರಡು ವರ್ಷಗಳ ಹಿಂದೆ ಗಂಗೋತ್ರಿಗೆ ಹೋಗಬೇಕೆಂದು

ಬಂದರು. ಚಂಪಕ್ "ಮಾತಾಜಿ' ಯನ್ನು ಹೊತ್ತೊಯ್ದು. ಆದರೆ ಗಂಡನಿಗೆ ನಡೆಯಲಾಗಲಿಲ್ಲ. ಅವನು ಕುಳಿತು ಅಳಲಾರಂಭಿಸಿದ. ಗಂಗಾ ಮಾತೆಗೆ ದಯೆ ಬಂತು. ಅವನನ್ನು ಸ್ವಲ್ಪ ಪುಸಲಾಯಿಸಿದ ಮೇಲೆ ಆ ಮನುಷ್ಯ ನಿಜಕ್ಕೂ ಗೋಮುಖದವರೆಗೂ ನಡೆದೇ ಬಿಟ್ಟ. ಅಲ್ಲಿ ಮತ್ತೊಮ್ಮೆ ಕುಳಿತು ಅತ್ತ. ಆದರೆ ಈ ಸಲ ಕೃತಜ್ಞತೆಯಿಂದ ಅತ್ತ. ಇನ್ನೊಬ್ಬ ವ್ಯಕ್ತಿ ಬದುಕಿರಲು ಇಷ್ಟವಿಲ್ಲದವನು ಮತ್ತೆಂದೂ ಹಿಂತಿರುಗಿ ಬರದೆ ಹಿಮಬಂಡೆಗಳೊಳಕ್ಕೆ ನಡೆದುಬಿಟ್ಟನೆಂದು ಚಂಪಕ್ ತಿಳಿಸಿದ. ಹದಿನೈದು ವರ್ಷದ ಹುಡುಗಿಯೊಬ್ಬಳು ಕಲ್ಲಿನ ಮೇಲೆ ಜಾರಿ ಕೆಳಗೆ ಗಂಗಾ ಮಾತೆಯ ಬಾಹುಗಳಲ್ಲಿ ಸೇರಿಕೊಂಡಳು. ಅದೊಂದು ಸುಖದ ಘಟನೆಯೋ ದುರಂತ ಘಟನೆಯೋ ಎಂದು ನಮಗೆ ನಿರ್ಣಯಿಸಲಾಗಲಿಲ್ಲ. ಅದು ಗಂಗಾ ಮಾತೆಯ ಕೃಪೆಯ ದ್ಯೋತಕ ಎಂದು ಚಂಪಕ್‌ನ ಅನಿಸಿಕೆ.

ಹಲವು ವರ್ಷಗಳ ಹಿಂದೆ ನಾವು ಭೇಟಿಮಾಡಿದ್ದ ಹಾಗೂ ಶತಾಯು ಎಂದು ತಿಳಿದಿದ್ದ– "ಫಲಾಹಾರಿ ಬಾಬಾ ಇನ್ನೂ ಜೀವಂತವಿದ್ದಾರೆ" ಎಂದು ಚಂಪಕ್ ಹೇಳಿದ.

ಗೋಮುಖ ಮತ್ತು ತಪೋವನಕ್ಕೆ ಹೋಗುವಷ್ಟು ನಮಗೆ ಸಮಯವಿರಲಿಲ್ಲ. ಆದರೆ ಮೂರು ಕಿಲೋಮೀಟರ್ ಮೇಲಕ್ಕೆ ಹತ್ತಿ ಫಲಾಹಾರಿ ಬಾಬಾ ಅವರನ್ನು ನೋಡಲು ಸಾಧ್ಯವಾಯಿತು. ಚಂಪಕ್ ಮತ್ತು ಗಂಗಾ ಮಾತೆಯ ನೆರವಿನಿಂದ ಇದು ನಮಗೆ ಸಾಧ್ಯವಾಯಿತು. ಆಸ್‌ಬೆಸ್ಟಾಸ್ ಛಾವಣಿ ಹೊಂದಿದ್ದ ಕಾನ್ ಕ್ರೀಟ್ ವರಾಂಡಾದಲ್ಲಿ ಅವರು ಕುಳಿತಿದ್ದುದು ಕಾಣಿಸಿತು. ಕಳೆದ ಸಲ ನಾವು ಭೇಟಿಯಾಗಿದ್ದಾಗ ಅವರು ಮರದ ಕುಟೀರದಲ್ಲಿ ವಾಸಿಸುತ್ತಿದ್ದರು. ಈ ಸಲ ಅದರ ಜಾಗದಲ್ಲಿ ಎರಡು ರೂಂ, ಅಡುಗೆ ಕೋಣೆ, ಮತ್ತು ಶೌಚದ ಕೊಠಡಿ ಉಳ್ಳ ಒಂದು ಸಣ್ಣ ಕಾಂಕ್ರೀಟ್ ಕುಟೀರ.

ಅವರಿಗೆ ನಮ್ಮ ನೆನಪಿತ್ತು ಎಂದು ನನಗೆ ಅನಿಸುತ್ತಿಲ್ಲ. ಆದರೆ ನಾವು ಕಳೆದ ಬಾರಿ ಭೇಟಿಯಾದ ಬಗ್ಗೆ ಹೇಳಿದಾಗ ಅವರ ಮುಗುಳ್ನಗುವಿಗೇನೂ ಕೊರತೆಯಾಗಲಿಲ್ಲ.

"ಹಾಗಾದರೆ ನೀವೆಲ್ಲ ಬೆಂಗಳೂರಿನಿಂದ ಬಂದಿದ್ದೀರಿ. ಬೆಂಗಳೂರಿನಲ್ಲಿ ಸ್ಥಳ ಇದೆಯಾ? ದೆಹಲಿಯಲ್ಲಿ ಜಾಗ ಇದೆಯಾ?" ಎಂದು ಅವರು ಕೇಳಿದ ರೀತಿ ರಾಜನ ಕಡೆಯವರು ಬಂದಾಗ ಕಾಡಿನ ಋಷಿಗಳು ಪ್ರಶ್ನೆ ಕೇಳುತ್ತಿದ್ದುದನ್ನು ನೆನಪಿಸಿತು.

"ನೀವೇನು ಮಾಡುತ್ತಿದ್ದೀರಿ? ನಿಮ್ಮ ಮಕ್ಕಳು ಏನು ಮಾಡುತ್ತಾ ಇದ್ದಾರೆ?" ಹೀಗೆ ಪ್ರಶ್ನೆ ಕೇಳುತ್ತಾ ಹೋದರು. ನಾವು ಅವರ ಪ್ರಶ್ನೆಗಳಿಗೆ ಉತ್ತರಿಸುತ್ತ ಹೋದಂತೆ ಅವರ ಹಲ್ಲಿಲ್ಲದ ಅಗಲ ಬಾಯಿಯ ನಗೆ ಅವರ ಸಂತಸದ ಸ್ಥಿತಿಯನ್ನು ವ್ಯಕ್ತಪಡಿಸುತ್ತಿತ್ತು.

"ನೀವು ದೇವರ ನಾಮಸ್ಮರಣೆ ಮಾಡುತ್ತೀರಾ?" ಮಾಡುತ್ತಿಲ್ಲವಾದರೆ ಈಗಲೇ ಶುರು ಮಾಡಿ. ಪ್ರಾರಂಭದಲ್ಲಿ ಅದಕ್ಕೆ ನಿಮ್ಮ ಪ್ರಯತ್ನ ಬೇಕಾಗುತ್ತದೆ. ಆಮೇಲೆ ಅದು ಸಂತೋಷದಾಯಕವೂ ಸರಾಗವೂ ಆಗುತ್ತದೆ. ನೀವು ಅದಿಲ್ಲದೆ ಇರಲಾರಿರಿ."

ಆ ನಂತರ ಅವರು ದೇವರ ನಾಮಸ್ಮರಣೆ ಮಾಡಿದರು.

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ।
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ॥

"ನೀವು ಇದನ್ನು ಹೇಳುತ್ತಲೇ ಇರಬೇಕು. ನೀವು ಪ್ರವಚನವನ್ನು ಕೇಳಲು ಹೋಗುತ್ತೀರಲ್ಲ, ಅದು ಸತ್ಸಂಗ. ಪರಸ್ಪರ ವಿಚಾರವಿನಿಮಯ ನಡೆಸುವುದು ಬಹಳ ಮುಖ್ಯ. ಕಲಿಕೆ ತನಗೆ ತಾನೆ ಹೆಚ್ಚು ಪ್ರಯೋಜನಕ್ಕೆ ಬರುವುದಿಲ್ಲ. ನಿಮ್ಮ ವೈಯಕ್ತಿಕ ಪ್ರಯತ್ನದಿಂದ ಪ್ರಗತಿ ಸಾಧಿಸುತ್ತೀರಿ." ನೀವು ಗಂಗೋತ್ರಿಗೆ ಏಕೆ ಬಂದಿರಿ ಎಂದರೆ ಬರಬೇಕೆಂದು ಇಷ್ಟಪಟ್ಟು ಬಂದಿರಿ.

ಅವರ ಮಾತಿನಲ್ಲಿ ಸಿಹಿ ಮತ್ತು ಮಾಧುರ್ಯವಿತ್ತು. ಆದರೆ ಬೌದ್ಧಿಕ ತೇಜಸ್ಸು ಇರಲಿಲ್ಲ. ಅವರು ನನ್ನ ಹೆಂಡತಿಯೊಂದಿಗೆ ಮಾತಾಡುತ್ತಲೇ ಇದ್ದರು. ಆ ಸಮಯದಲ್ಲಿ ನಾನು ಬಾಬಾ ಅವರ ಜೊತೆ ಮೊದಲು ಕುಳಿತುಕೊಳ್ಳುತ್ತಿದ್ದ ಯುವ ಸಾಧುವಿನೊಂದಿಗೆ ಮಾತಾಡಲು ಅಲ್ಲಿಂದ ಹೊರಟೆ.

"ನೀವು ಎಷ್ಟು ಕಾಲ ಕೆಲಸ ಮಾಡಿದಿರಿ? ಈಗೆಷ್ಟು ಸಂಪಾದಿಸುತ್ತೀರಿ? ಕಳೆದ ಸಲ ಇಲ್ಲಿ ಬಂದು ಹೋದಮೇಲೆ ಎಷ್ಟು ಹೆಚ್ಚಿಗೆ ಸಂಪಾದನೆ ಮಾಡಿದಿರಿ? ನೀವು ನಿಮ್ಮ ಸಂಪಾದನೆಯ ಸ್ವಲ್ಪ ಭಾಗವನ್ನು ನಮ್ಮೊಂದಿಗೆ ಹಂಚಿಕೊಳ್ಳಬೇಕು. ಅದನ್ನು ನಾವು ಇಲ್ಲಿಯ ಜನರೊಂದಿಗೆ ಹಂಚಿಕೊಳ್ಳಬಹುದು. ಈ ಬಂಡೆಗಳಿಂದ ನಾನು ಏನು ತಾನೆ ಗಳಿಸಬಲ್ಲೆ, ಸಾಧ್ಯವೆ?" ನಮ್ಮ ಮೇಲೆ ಆತನಿಗೆ ಪೂರಾ ಅಧಿಕಾರವಿದೆಯೇನೋ ಎನ್ನುವ ಹಾಗೆ ಹೀಗೆಲ್ಲ ಹೇಳಿದರು.

ನಾನು ವಾಪಸ್ ಹೋಗಿ "ಬಾಬಾ ನಿಮ್ಮ ವಯಸ್ಸೆಷ್ಟು? ಎಂದು ಕೇಳಿದೆ.

"ಅದನ್ನು ಕಟ್ಟಿಕೊಂಡು ಏನಾಗಬೇಕು? ನಾನು ಇಲ್ಲಿದ್ದುಕೊಂಡು ಅವನು ಬಯಸುವಷ್ಟು ಕಾಲವೂ ಅವನ ನಾಮಸ್ಮರಣೆ ಮಾಡುತ್ತಾ ಇರುತ್ತೀನಿ" ಎಂದರು.

ನಾನು ಅವರ ಫೋಟೋ ತೆಗೆದುಕೊಂಡೆ. ಆ ಅಂಥ ವ್ಯಕ್ತಿ ತಾನು ಎಲ್ಲವನ್ನೂ ನೋಡುತ್ತಿದ್ದೇನೇನೋ ಎನ್ನುವ ಭಂಗಿಯನ್ನು ತೋರಿದರು. ಅಲ್ಲಿಂದ ಹೊರಡುವಾಗ ಅವರ ಆಶೀರ್ವಾದವನ್ನು ತೆಗೆದುಕೊಳ್ಳಲು ಬಾಗಿದಾಗ ಅವರು ತಮ್ಮ ಮುಷ್ಟಿಯಿಂದ ನನ್ನ ಬೆನ್ನಮೇಲೆ ಮಗುವಿನ ಹಾಗೆ ಆಟಕ್ಕೆಂಬಂತೆ ಗುದ್ದಿದರು. ನಗುತ್ತ "ಹರೇರಾಮ್" ಎಂದು ನಾಮಸ್ಮರಣೆ ಮಾಡುತ್ತಿರು" ಎಂದರು.

ನಾವಿನ್ನೇನು ಹೊರಟೆವು ಎನ್ನುವ ಹೊತ್ತಿಗೆ ಆಶ್ರಮದೊಳಗಿದ್ದ ಚಂಪಕ್, ಎತ್ತರ ಪರ್ವತ ಪ್ರದೇಶಗಳಲ್ಲಿ ಮಾತ್ರ ಸಿಗುವ ಅಪರೂಪದ ಕೆಲವು ಒಣಗಿದ ಬ್ರಹ್ಮ ಕಮಲದ ಹೂಗಳನ್ನು ತಂದು ನನ್ನ ಪತ್ನಿಯ ಕೈಗಿತ್ತು

"ಇದನ್ನು ನಿಮ್ಮ ಮನೆಯ ದೇವರ ಕೋಣೆಯಲ್ಲಿಡಿ. ಮುಂದಿನ ವರ್ಷ ಮತ್ತೆ ಬನ್ನಿ. ತಪೋವನಕ್ಕೆ ಹೋಗುವ ದಿನ ನಿಶ್ಚಿತವಾಗಿದೆ" ಎಂದನು.

❑❑

ಸನ್ಯಾಸದ ಮೊದಲ ಹೆಜ್ಜೆಗಳು

ನಾನು ನನ್ನ ತಿರುಗಾಟದ ಸಂದರ್ಭಗಳಲ್ಲಿ ಮತ್ತು ಬೇರೆ ಕಡೆಯೂ ಸೇರಿದಂತೆ ನೂರಕ್ಕೂ ಹೆಚ್ಚು ಸಾಧುಗಳನ್ನು ಸಂದರ್ಶಿಸಿದ್ದೇನೆ. ನಾನು ವಿಸ್ತಾರವಾಗಿ ಸಂದರ್ಶನಮಾಡಿದ ನಲವತ್ತು ಸಾಧುಗಳಲ್ಲಿ ಸುಮಾರು ಮೂರನೇ ಎರಡರಷ್ಟು ಮಂದಿ ಯಾವತ್ತೂ ಸಾಧುವಾಗಬೇಕೆಂದೇ ಬಯಸಿದ್ದವರು. ಇನ್ನುಳಿದವರು ಯಾವುದೋ ಒಂದು ಅನುಭವವನ್ನು ಸನ್ಯಾಸಕ್ಕೆ ಖಚಿತ ಕಾರಣವೆಂದು ಅಥವಾ ಬಾಹ್ಯ ಸಂದರ್ಭವು ಸನ್ಯಾಸವನ್ನು ಆಯ್ಕೆಮಾಡಿಕೊಳ್ಳುವಲ್ಲಿ ತಮ್ಮನ್ನು ಪ್ರಭಾವಿಸಿತೆಂದು ಹೇಳಿದರು. ಕೆಲವೊಂದು ಸಮಾನ ಅನುಭವಗಳನ್ನು ಹೊರತು ಪಡಿಸಿದರೆ ಅವರ ವೈವಿಧ್ಯಪೂರ್ಣವಾದ ವ್ಯಕ್ತಿತ್ವಗಳು ಮತ್ತು ಅವರು ಎದುರಿಸಿದ ಸಂಘರ್ಷಗಳು ಅವರ ಕಥೆಗಳನ್ನು ವೈಶಿಷ್ಟ್ಯಪೂರ್ಣವಾಗಿಸಿವೆ.

* * *

ನಾನು ಸಂದರ್ಶಿಸಿದ ಒಂದು ಗುಂಪಿಗೆ ಸನ್ಯಾಸ ಜೀವನದ ಬಗೆಗಿನ ತುಡಿತ ಅವರ ಬಾಲ್ಯಕಾಲದಿಂದಲೇ ಇತ್ತು. ಮನೋರೋಗ ತಜ್ಞನಾಗಿ ನಾನು ಅನುಭವ ಹೊಂದಿದ್ದಾಗ್ಯೂ ಸನ್ಯಾಸ ತೆಗೆದುಕೊಳ್ಳಬೇಕೆಂಬ ಅವರ ಬಯಕೆಯನ್ನು ವಿವರಿಸುವಂಥ ಒಂದು ಘಟನೆಯೂ ನನಗೆ ದೊರೆಯಲಿಲ್ಲ. ಆ ಸನ್ಯಾಸಿಗಳು ಮತ್ತೆ ಮತ್ತೆ ಹೇಳಿದ್ದೆಂದರೆ ಅದೇ ಅವರ ಪಾಲಿನ ವಿಧಿಲಿಖಿತವೆಂದು ಅವರಿಗೆ ತಿಳಿದಿತ್ತು. ತಮ್ಮ ಪಾಲಿನ ಲೌಕಿಕ ಜವಾಬ್ದಾರಿಗಳಾದ ನೌಕರಿ, ಕುಟುಂಬ ಮತ್ತು ಮಕ್ಕಳ ಪಾಲನೆ-ಪೋಷಣೆಯ ಜವಾಬ್ದಾರಿಗಳನ್ನು ಪೂರ್ತಿಯಾಗಿ ನಿಭಾಯಿಸಿದ ನಂತರವಷ್ಟೇ ಸನ್ಯಾಸ ಜೀವನದ ಈ ದಾರಿಯನ್ನು ಆಯ್ಕೆಮಾಡಿಕೊಂಡ ಉದಾಹರಣೆಗಳೂ ಇದ್ದುವು. ಕೆಲವೊಮ್ಮೆ ಕುಟುಂಬದ ಸದಸ್ಯರು ಅವರ ತೀರ್ಮಾನವನ್ನು ಬೆಂಬಲಿಸಿದ ಉದಾಹರಣೆಗಳು ಇವೆ. ಆದರೆ ಯಾವಾಗಲೂ ಅಲ್ಲ. ಇನ್ನು ಕೆಲವು ಸಾಧುಗಳು ತುಂಬ ಪೂರ್ವ ವಯಸ್ಸಿನಲ್ಲೇ ಈ ಧಾರ್ಮಿಕ ಬದುಕಿಗೆ ಪ್ರವೇಶಿಸಿದ್ದರು ಮತ್ತು ಅವರು ಗೃಹಸ್ಥ ಜೀವನವನ್ನು ಅನುಸರಿಸಲೇ ಇಲ್ಲ. ಸನ್ಯಾಸವು ತಮ್ಮ ಸ್ವಭಾವದಲ್ಲಿಯೇ ಶಾಶ್ವತವಾಗಿ ಸೇರಿಹೋಗಿರುವ ಕಾರಣಕ್ಕಾಗಿ ಸನ್ಯಾಸವನ್ನು ಸ್ವೀಕರಿಸಿದೆವು ಎಂದು ನಂಬಿದವರು ಬಹುಮಟ್ಟಿಗೆ ಸಂತೋಷದಿಂದಿರುವಂತೆ ಮತ್ತು ಸನ್ಯಾಸ ಜೀವನಕ್ಕೆ ಹೊಂದಿಕೊಂಡಿರುವಂತೆ ತೋರುತ್ತಿದ್ದರು.

ಸ್ವಾಮಿ ವಾಸುದೇವಾನಂದ ಎನ್ನುವವರು ತಂದೆತಾಯಿಗಳ ವಿರೋಧವನ್ನು ಎದುರಿಸಿ ಸನ್ಯಾಸ ಸ್ವೀಕರಿಸಿದ್ದರು. ಇನ್ನೂ ಶಾಲಾ ಬಾಲಕನಾಗಿದ್ದಾಗಲೇ ವಿವೇಕಾನಂದರ ಒಂದು ಗ್ರಂಥವನ್ನು ಓದಿ ಅದರಿಂದ ಪ್ರಭಾವಿತರಾಗಿದ್ದವರು. ಅವರು ಬಿ.ಎ. ವ್ಯಾಸಂಗ ಮಾಡುತ್ತಿದ್ದಾಗ ಆಧ್ಯಾತ್ಮಿಕ ಬರಹಗಳಲ್ಲಿ ಅವರ ಆಸಕ್ತಿ ಹೆಚ್ಚಾಗಿ ಬಿ.ಎ. ಕೊನೆಯ ವರ್ಷದಲ್ಲಿ ಮನೆ ಬಿಟ್ಟು ಕಲ್ಕತ್ತಾದ ಒಂದು ಆಶ್ರಮಕ್ಕೆ ಓಡಿಹೋದರು. ಆದರೆ ಅವರ ತಂದೆತಾಯಿಗಳು ಅವರನ್ನು ಪತ್ತೆಮಾಡಿ ಮತ್ತೆ ಮನೆಗೆ ಕರೆತಂದರು. ಅವರು ಬಿ.ಎ. ಮುಗಿಸಿ ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಗೆ ವ್ಯಾಸಂಗ ಮಾಡತೊಡಗಿದರು. ಎರಡನೇ ಬಾರಿಗೆ ಅವರು ಮನೆಬಿಟ್ಟು ಓಡಿಹೋದರು. ಆದರೆ ಈ ಬಾರಿ ಅವರು ಮೂರು ತಿಂಗಳ ಕಾಲ ಹೃಷೀಕೇಶದಲ್ಲಿದ್ದರು. ಆದರೆ ಮತ್ತೊಮ್ಮೆ ಅವರ ತಂದೆ ತಾಯಿಗಳು ಮನೆಗೆ ಕರೆತಂದರು. ಈ ಸಲ ಬಿ.ಇಡಿ ಪದವಿ ಮುಗಿಸಿ ಕೆಲಸಕ್ಕಾಗಿ ದೆಹಲಿಗೆ ಅರ್ಜಿ ಹಾಕಿಕೊಂಡರು. ಕೆಲಸದ ಸಂದರ್ಶನಕ್ಕೆಂದು ದೆಹಲಿಗೆ ಟ್ರೈನಿನಲ್ಲಿ ಹೋಗುತ್ತಿದ್ದಾಗ, ಅವರು ಕುಳಿತಿದ್ದ ಬೋಗಿಗೆ ಒಬ್ಬ ಸನ್ಯಾಸಿಯ ಪ್ರವೇಶವಾಯಿತು. ಅವರಿಬ್ಬರಲ್ಲಿ ಮಾತು-ಕತೆ ನಡೆದು ಕೆಲಸಕ್ಕಾಗಿ ಸಂದರ್ಶನಕ್ಕೆ ಹೋಗುವ ಬದಲು ಸನ್ಯಾಸಿಯೊಂದಿಗೆ ಟ್ರೈನ್‌ನಿಂದ ಇಳಿದು ಅವರೊಂದಿಗೆ ಆಶ್ರಮದಲ್ಲಿ ಇರಲು ಹೋಗಿಬಿಟ್ಟರು. ಅಲ್ಲಿ ಒಂದು ವರ್ಷ ಇದ್ದುಕೊಂಡು ಸಂಸ್ಕೃತ ಮತ್ತು ಯೋಗವನ್ನು ಕಲಿತರು. ಆ ನಂತರ ಸುತ್ತ ಮುತ್ತೆಲ್ಲ ಸಂಚರಿಸಿದರು. ಇತರೆ ಆಶ್ರಮಗಳು ಮತ್ತು ಆಧ್ಯಾತ್ಮಿಕ ಕೇಂದ್ರಗಳಿಗೆ ಹೋದರು. ಅಂತಿಮವಾಗಿ ನಾವು ಅವರನ್ನು ಭೇಟಿಯಾಗುವುದಕ್ಕೆ ಐದು ವರ್ಷದ ಹಿಂದೆ ಸನ್ಯಾಸ ತೆಗೆದುಕೊಂಡಿದ್ದರು.

ತಾವು ಸನ್ಯಾಸ ತೆಗೆದುಕೊಳ್ಳಲು ಕಾರಣವಾದ ಆಂತರಿಕ ಅನಿವಾರ್ಯತೆಯನ್ನು ಘನಶ್ಯಾಮದಾಸ್ ಅವರು ವಿಸ್ತಾರವಾಗಿ ನಿರೂಪಿಸಿದರು.

"ನನ್ನ ಬಾಲ್ಯದಲ್ಲಿ ನಾನು ವ್ಯಾಸಂಗ ಮಾಡುತ್ತಿದ್ದೆ. ದೊಡ್ಡವನಾದಂತೆ ದುಡಿದು ಹಣ ಸಂಪಾದಿಸಿ ತಂದೆ ತಾಯಿಗಳಿಗೆ ನೀಡುತ್ತಿದ್ದೆ. ಸನ್ಯಾಸಿಯಾಗಬೇಕೆಂಬುದು ನನ್ನ ಯೋಜನೆಯಲ್ಲ. ನನ್ನ ಪೂರ್ವ ಜನ್ಮದ ಕರ್ಮದಿಂದಾಗಿ ನಾನು ಸನ್ಯಾಸಿಯಾಗಿದ್ದೇನೆ."

ಅವರಿಗೆ ಬೇರೆಯವರ ಸೇವೆ ಮಾಡಬೇಕೆಂಬ ತುಡಿತವಿತ್ತು. ಅವರನ್ನು ಇದಕ್ಕೆ ಪ್ರೇರಿಸಿದ್ದ ಶಕ್ತಿ ಅವರ ನಿಯಂತ್ರಣವನ್ನು ಮೀರಿದ್ದಾಗಿತ್ತು. "ನನ್ನ ಒಳಗಿರುವುದು ಮಾತನಾಡುತ್ತಿದೆ. ಅದೇ ಎಲ್ಲವನ್ನೂ ನೋಡುತ್ತಿದೆ, ಅದೇ ಸೇವೆಯನ್ನೂ ಮಾಡುತ್ತಿದೆ".

ಸಾಧುವಾಗುವುದರಲ್ಲಿ ವಿಶೇಷವಾದ ಅರ್ಹತೆಯೇನೂ ಇಲ್ಲ. ಅವರು ಹೇಳುವುದು– "ನಾನು ಏನು ತಾನೆ ಮಾಡಲಿ? ಎಲ್ಲವೂ ದೇವರು ಹೇಳಿದಂತೆ ನಡೆಯಿತು. ನಾನು ಏನು ಮಾಡುತ್ತೇನೋ ಅದಕ್ಕೆ ನಾನು ಹೊಣೆಗಾರನೆಂದರೆ ಅದು ನನ್ನ ಅಹಂಕಾರ ಅಷ್ಟೆ. ದೇವರು ಏನನ್ನು ಮಾಡುವಂತೆ ಹೇಳುತ್ತಾನೋ ಅದನ್ನೇ ನಾವು ಮಾಡುತ್ತೇವೆ."

ಅವರ ತಂದೆತಾಯಿಗಳು ರೈತಾಪಿ ಜನ. ಅವರ ಸೋದರ ಸೋದರಿಯರಿಗೂ ಅವರಿಗೂ ಏನಾದರೂ ವ್ಯತ್ಯಾಸವಿತ್ತೆ ಎಂದು ಕೇಳಿದಾಗ– "ಇಲ್ಲ, ಏನೂ ವ್ಯತ್ಯಾಸವಿಲ್ಲ. ಅವನ ಇಚ್ಛೆ ಏನಿತ್ತೋ ಅದನ್ನೇ ನಾವೆಲ್ಲ ಮಾಡಿದೆವು."

ಭವಿಷ್ಯದ ಬಗ್ಗೆ ಕೇಳಿದಾಗ– "ನನಗೆ ಹೇಗೆ ತಾನೆ ಗೊತ್ತಾಗುತ್ತೆ? ಅವನು ಹೇಳಿದ್ದು ಆಗುತ್ತದೆ ಅಷ್ಟೆ. ಅವನು ಕುಳಿತುಕೋ ಎಂದರೆ ನಾನು ಕುಳಿತುಕೊಳ್ಳುತ್ತೇನೆ. ಅವನು ನಡೆದಾಡು ಎಂದರೆ ನಡೆದಾಡುತ್ತೀನಿ."

ಇತರೆ ಸಾಧುಗಳು ತಾವು ಹೇಗೆ ಯಾವತ್ತಿನಿಂದಲೂ ಸಾಧುವಾಗಬೇಕೆಂದು ಬಯಸಿದ್ದರೂ ಸಂಪ್ರದಾಯದಂತೆ ಮೊದಲು ಗೃಹಸ್ಥಜೀವನವನ್ನು ಅನುಸರಿಸ ಬೇಕಾಗಿತೆಂಬುದನ್ನು ವಿವರಿಸಿದರು.

ನಾನು ಸಂದರ್ಶನ ನಡೆಸಿದ ಸಮಯದಲ್ಲಿ ರಾಮಾನಂದಗಿರಿ ಅವರಿಗೆ ಎಪ್ಪತ್ತು ವರ್ಷ ವಯಸ್ಸಾಗಿತ್ತು.

"ನಮ್ಮ ತಂದೆಯವರು ರೈತರು. ನನಗೊಬ್ಬ ತಮ್ಮ ಮತ್ತು ತಂಗಿ ಇದ್ದಾರೆ. ನಾನೇ ಹಿರಿಯ ಮಗ. ನಾನು ಸನ್ಯಾಸ ತೆಗೆದುಕೊಳ್ಳಲು ಮನೆಬಿಟ್ಟು ಹೊರಟಾಗ ನನಗೆ ಮೂವತ್ತೈದು ವರ್ಷ ವಯಸ್ಸು. ನಿಮ್ಮ ಪೂರ್ವ ಜನ್ಮಗಳ ಪ್ರಭಾವದಿಂದಾಗಿ ಸಂಸ್ಕಾರಗಳು ಜಾಗೃತವಾದಾಗ, ಸಾಂಸಾರಿಕ ಜಂಜಡಗಳಲ್ಲಿ ಎಷ್ಟೇ ಸಿಕ್ಕಿಕೊಂಡಿದ್ದರೂ ಭಗವಾನ್ ಶ್ರೀಕೃಷ್ಣನು ನಿಮ್ಮನ್ನು ಅವುಗಳಿಂದ ಪಾರುಮಾಡುತ್ತಾನೆ. ಅದನ್ನು ಸಂಸ್ಕಾರವೆನ್ನಿ, ಅದೃಷ್ಟವೆನ್ನಿ, ದೈವ, ಕರ್ಮ ಎಂದೆಲ್ಲ ಏನೇ ಹೇಳಿದರೂ ಅವು ಅದರದ್ದೇ ಬೇರೆಬೇರೆ ಹೆಸರುಗಳು ಅಷ್ಟೆ."

ಆಮೇಲೆ ನೀವು ಸಂನ್ಯಾಸ ತೆಗೆದುಕೊಳ್ಳಲು ಸಿದ್ಧರಿದ್ದಿರೆಂದರೆ ಅದನ್ನು ಆಗುಮಾಡಿಸಲು ಅನುಕೂಲಕರವಾಗಿ ಎಲ್ಲ ಸಂಗತಿಗಳು ನಡೆಯುತ್ತವೆ ಎನ್ನುವುದಕ್ಕೆ ರಾಮಾಯಣದ ಒಂದು ಕಥೆ ಹೇಳಿದರು.

"ಹಾಗಾದರೆ ನೀವು ಸನ್ಯಾಸಕ್ಕೆ ಹೇಗೆ ಪಾತ್ರರಾದಿರಿ?"– ಎಂದು ನಾನು ಕೇಳಿದೆ.

"ಅದು ನಮ್ಮ ಪ್ರಾರಬ್ಧ– ನಮ್ಮ ಹಿಂದಿನ ಜನ್ಮಗಳ ಕರ್ಮದ ಫಲ" –ಎಂಬ ವಾಡಿಕೆಯ ಉತ್ತರಕೊಟ್ಟರು.

ಇಂಥ ಉತ್ತರವನ್ನು ಈ ಮುಂಚೆ ಹಲವು ಸಲ ಕೇಳಿದ್ದರಿಂದ ನಾನು ಸ್ವಲ್ಪ ಅಸಹನೆಯಿಂದಲೇ – "ಅದು ನನಗೆ ಅರ್ಥವಾಗುತ್ತದೆ. ಆದರೆ ಈ ಕರ್ಮವನ್ನು ನೀವು ಅರ್ಜಿಸಿಕೊಂಡಿದ್ದಿರಿ ಹಾಗೂ ನೀವು ಸನ್ಯಾಸಕ್ಕೆ ಸಿದ್ಧವಾಗಿದ್ದಿರಿ ಎಂಬುದಕ್ಕೆ ಈ ಜನ್ಮದಲ್ಲಿ ಕಾಣಿಸಿಕೊಂಡ ಲಕ್ಷಣಗಳೇನು?"– ಎಂದು ಕೇಳಿದೆ.

"ಸನ್ಯಾಸದ ಕಡೆಗೆ ನಿಮ್ಮನ್ನು ತಿರುಗಿಸುವ ಎರಡು ಮುಖ್ಯ ಕಾರಣಗಳಿವೆ. ನಿಮ್ಮ ಸೋದರನಿಂದಲೋ, ಸೋದರಿಯಿಂದಲೋ, ಹೆಂಡತಿಯಿಂದಲೋ, ಮಕ್ಕಳಿಂದಲೋ

ಇಲ್ಲವೆ ಮನೆಯ ಹೊರಗಿನ ಜಗತ್ತಿನಿಂದಲೋ ಧಕ್ಕೆ ಒದಗಿರುತ್ತದೆ ಇಲ್ಲವೆ ಸನ್ಯಾಸದ ಪ್ರವೃತ್ತಿ ನಿಮ್ಮಲ್ಲಿ ಬಾಲ್ಯದಿಂದಲೇ ಇರುತ್ತದೆ." – ಎಂದು ಉತ್ತರಿಸಿದರು.

"ನಿಮ್ಮ ವಿಷಯ ಹೇಗೆ? ನಿಮ್ಮ ಬಂಧುಗಳು ಅಥವಾ ಸ್ನೇಹಿತರ ಕಡೆಯಿಂದ ಯಾವುದಾದರೂ ರೀತಿಯಲ್ಲಿ ಯಾತನೆಗೆ ಒಳಗಾದಿರಾ?"– ನಾನು ಕೇಳಿದೆ.

"ಹಾಗೇನಿಲ್ಲ. ಬಾಲ್ಯದಿಂದಲೂ ನಾನು ಸರಿಯಾದ ಹಾದಿಯಲ್ಲೇ ಇದ್ದೆ. ನನ್ನ ಸೋದರರು ಮತ್ತು ಸೋದರಿಯರು ಎಲ್ಲಾ ಮಕ್ಕಳು ಸಾಮಾನ್ಯವಾಗಿ ಮಾಡುವಂಥ ಆಟ, ತುಂಟತನ, ಇತ್ಯಾದಿಗಳನ್ನೇ ಮಾಡುತ್ತಿದ್ದರು. ಆದರೆ ನಾನು ಯಾವಾಗಲೂ ಭಜನೆ, ಕೀರ್ತನೆ (ದೇವರನ್ನು ಕುರಿತ ಸ್ತುತಿ ಗೀತೆಗಳು)ಗಳಲ್ಲಿ ಆಸಕ್ತನಾಗಿರುತ್ತಿದ್ದೆ. ನಾನು ಯಾವಾಗಲೂ ದೇವಸ್ಥಾನಕ್ಕೆ ಹೋಗುತ್ತಿದ್ದೆ. ನನ್ನ ತಂದೆ ತಾಯಿಗಳಾಗಲಿ, ಸೋದರ ಸೋದರಿಯರಾಗಲಿ ಆ ರೀತಿ ಇರಲಿಲ್ಲ. ಆದರೆ ನಾನು ಸ್ವಲ್ಪ ಈ ಥರ ಇದ್ದೆ." – ಇದನ್ನು ಅವರು ಸ್ವಲ್ಪಮಟ್ಟಿನ ಹೆಮ್ಮೆಯಿಂದಲೇ ಹೇಳಿಕೊಂಡರು.

"ಅಂದರೆ ಇದರರ್ಥ ಧಾರ್ಮಿಕ ಜೀವನದಲ್ಲಿ ಅದೆಷ್ಟು ಮುಳುಗಿಹೋಗಿದ್ದಿರಿ ಎಂದರೆ ನೀವು ಸ್ಕೂಲಿಗೂ ಹೋಗಲಿಲ್ಲ, ಮದುವೇನೂ ಆಗಲಿಲ್ಲ ಅಂತಲೆ?" ಎಂದು ಕೇಳಿದೆ.

"ಇಲ್ಲ, ಇಲ್ಲ. ನಾನು ಸುಶಿಕ್ಷಿತ. ಸ್ಕೂಲಿಗೆ ಹೋದೆ ಮತ್ತು ಎಂಟನೇ ಕ್ಲಾಸ್ ಪಾಸ್ ಆದ ಪ್ರಮಾಣಪತ್ರ ಕೂಡ ಇದೆ. ನಮ್ಮ ತಂದೆ ತಾಯಿ ನನ್ನ ಮದುವೇನೂ ಮಾಡಿದರು. ನಾನು 10–12 ವರ್ಷ ಸಾಂಸಾರಿಕ ಜೀವನವನ್ನೂ ನಡೆಸಿದೆ. ನನಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಇದ್ದಾರೆ. ದೇವರ ದಯೆಯಿಂದ ನನಗೆ ಸಾಂಸಾರಿಕ ಜವಾಬ್ದಾರಿಗಳಿಂದ ಬಿಡುಗಡೆ ದೊರೆಯುವಂಥ ಕೆಲವೊಂದು ಘಟನೆಗಳು ನಡೆದುವು. ಮೊದಲನೆಯದಾಗಿ ನನ್ನ ಹೆಂಡತಿ ತೀರಿಕೊಂಡಳು. ಆಮೇಲೆ ನನ್ನ ತಾಯಿ ಅಂತಿಮವಾಗಿ ನನ್ನ ತಂದೆ ಹೀಗೆ ಒಬ್ಬರಾಗುತ್ತ ಒಬ್ಬರು ಎಲ್ಲರೂ ಎರಡು ವರ್ಷಗಳ ಅತ್ಯಲ್ಪ ಅಂತರದಲ್ಲಿ ತೀರಿಕೊಂಡರು."

ಅವರುಗಳ ಸಾವು ದೇವರ ದಯೆಯಿಂದ ಆದದ್ದು ಎಂದು ಅವರಿಗೆ ಅನ್ನಿಸಿತೆ ಎಂದು ಅವರನ್ನು ಕೇಳಬೇಕೆಂದುಕೊಂಡೆ. ಆದರೆ ಸೌಜನ್ಯ ಅಡ್ಡಬಂತು

"ಹಾಗಾಗಿ ಮೂವತ್ತೈದನೆ ವಯಸ್ಸಿನಲ್ಲಿ ಒಂದು ದಿನ ನನ್ನ ತಮ್ಮನಿಗೆ ನನ್ನ ಮಕ್ಕಳನ್ನು ನೋಡಿಕೊಳ್ಳಲು ಹೇಳಿ ವೃಂದಾವನದ ಕಡೆಗೆ ಹೊರಟುಬಿಟ್ಟೆ."

"ಅಂದರೆ ನೀವು ಹೇಳೋದು ನಿಮ್ಮ ತಮ್ಮ ನಿಮ್ಮ ಮಕ್ಕಳನ್ನು ನೋಡಿಕೊಳ್ಳಲು ಕೂಡಲೇ ಒಪ್ಪಿಕೊಂಡುಬಿಟ್ಟರು, ಅಂತಲೆ?" ಎಂದು ಆಶ್ಚರ್ಯದಿಂದ ಕೇಳಿದೆ."

"ಇಲ್ಲ, ಇಲ್ಲ. ಅದಕ್ಕೆ ಅಗತ್ಯವಾದ ವ್ಯವಸ್ಥೆಯನ್ನೆಲ್ಲ ಮಾಡಲಾಯಿತು"

"ಏನು ವ್ಯವಸ್ಥೆ?"

"ಇದು ನಿಮಗೆ ಸ್ಪಷ್ಟವಾಗಲಿಲ್ಲವೇನು? ನನ್ನ ಮಕ್ಕಳನ್ನು ನೋಡಿಕೊಳ್ಳುತ್ತೇನೆಂದು ಅವನು ಮಾತು ಕೊಟ್ಟಿದ್ದಕ್ಕೆ ಪ್ರತಿಯಾಗಿ ನಾನು ನನ್ನ ಪಾಲಿನ ಆಸ್ತಿಯನ್ನು ಅವನಿಗೆ ಕೊಟ್ಟುಬಿಟ್ಟೆ." –ಎಂದು ನಗುತ್ತ ಹೇಳಿದರು. "ಆ ನಂತರ ನಾನು ಒಬ್ಬ ಗುರುವಿನೊಂದಿಗೆ ಇರಲು ವೃಂದಾವನದತ್ತ ಹೊರಟೆ. ಈ ಗುರುಗಳು ಈ ಮುಂಚೆಯೇ ಕೆಲವು ಸಲ ನಮ್ಮ ಹಳ್ಳಿಗೆ ಬರುವ ಸಂದರ್ಭ ಒದಗಿ ಬಂದಿತ್ತು. ನಾನು ಅವರ ಶಿಷ್ಯನಾಗಬೇಕೆಂದು ನಿರ್ಧರಿಸಿದ್ದೆ. ನಾನು ಅವರ 'ಅಭಯ ಆಶ್ರಮ' ಕ್ಕೆ ಹೋದೆ. ಸ್ವಾಮೀಜಿಯವರು ನನ್ನನ್ನು ತಮ್ಮ ಶಿಷ್ಯನಾಗಿ ತೆಗೆದುಕೊಂಡರು. ಅಲ್ಲಿ ನಾನು 4–5 ವರ್ಷ ಬ್ರಹ್ಮಚಾರಿಯ ಸ್ಥಿತಿಯಲ್ಲಿದ್ದೆ. ಆ ನಂತರ ದೀಕ್ಷೆ ಸ್ವೀಕರಿಸಿದೆ."

ಸಾಂಪ್ರದಾಯಿಕ ಭಾರತೀಯ ಮಾದರಿಯನ್ನು ಅನುಸರಿಸಿದ ಇನ್ನೊಂದು ಜೀವನವೆಂದರೆ ಅನಂತ್ ಅವರದ್ದು. ಅವರಿಗೆ ಸನ್ಯಾಸದ ಆಕರ್ಷಣೆ ಜೀವನವಿಡೀ ಇತ್ತು. ಸತ್ಸಂಗ್ ಎಲೆಲ್ಲಿರುತ್ತದೋ ಅಲ್ಲೆಲ್ಲಾ ಇವರು ಹಾಜರ್. ಅವರ ಸೋದರ ಸೋದರಿಯರಾರೂ ಈ ತೆರನ ಆಸಕ್ತಿ ಇದ್ದವರಲ್ಲ. ಆದಾಗ್ಯೂ ಅವರು ರೈತರಾಗಿ ತಮ್ಮ ಉದ್ಯೋಗ ಆರಂಭಿಸಿದರು. ಮದುವೆಯಾಗಿ ಒಬ್ಬ ಮಗ ಮತ್ತು ಇಬ್ಬರು ಹೆಣ್ಣುಮಕ್ಕಳನ್ನು ಪಡೆದರು. ಅವರ ಹೆಂಡತಿ ಹದಿನೈದು ವರ್ಷದ ಹಿಂದೆ ತೀರಿಹೋದರು. ನಾವು ಅವರನ್ನು ಸಂದರ್ಶಿಸಿದ ಕಾಲಕ್ಕೆ ಅವರು ಸಂನ್ಯಾಸಿಯಾಗಿ ಹತ್ತು ವರ್ಷವಾಗಿತ್ತು.

"ಅಂತಿಮವಾಗಿ ಮಗನಿಗೆ ಮದುವೆಮಾಡಿ ಮನೆಯ ಬೀಗದ ಕೈಗಳನ್ನು ಒಪ್ಪಿಸುವುದೆಂದು ತೀರ್ಮಾನಿಸಿದೆ. ನಾನು ಯಾವತ್ತೂ ಮನೆಯಿಂದ ಹೊರಹೋಗಬೇಕೆಂದೇ ಬಯಸಿದ್ದೆ. ಆದರೆ ಮನೆಯಲ್ಲೇ ಇದ್ದುಕೊಂಡು ಮಗನಿಗೆ ಮಾರ್ಗದರ್ಶನ ಮಾಡುತ್ತಿದ್ದೆ. ಎಲ್ಲವನ್ನೂ ನಿಭಾಯಿಸಿಕೊಂಡುಹೋಗುತ್ತಾನೆಂದು ಭರವಸೆ ಬರುವವರೆಗೂ ಇದು ಮುಂದುವರೆಯಿತು. ನಾನು ಮನೆಯಲ್ಲಿ ಗೃಹಸ್ಥನಾಗಿದ್ದ ಕಾಲದಲ್ಲಿ ಭಜನೆಮಾಡುವುದರಲ್ಲಿ ಕಾಲ ಕಳೆಯುತ್ತಿದ್ದೆ. ನಾನು ಹೇಳಿದೆ– 'ನಿನಗೆ ಮನೆಯಲ್ಲಿ ಊಟ ಸಿಗುತ್ತೆ. ದನಕರು ಇದೆ. ನಿನಗೆ ಬೇಕಾದ್ದೆಲ್ಲವೂ ಇದೆ. ಈಗ ನನಗೆ ಮನೆಬಿಟ್ಟು ಹೋಗಲು ಬಿಟ್ಟುಕೊಟ್ಟು ನನಗೆ ಬೇಕಾದ್ದನ್ನು ಹೊಂದಲು ಬಿಡು'.

ಆಮೇಲೆ ನಾವು ಅಭಿನವ ಎಂಬ ಸನ್ಯಾಸಿಯ ಸಂದರ್ಶನ ಮಾಡಿದೆವು. ಅಭಿನವರು ತಮ್ಮ ದೀರ್ಘ ಕಾಲದ ಗುರಿಯ ಬಗ್ಗೆ ಸದಾ ಎಚ್ಚರ ಹೊಂದಿದ್ದರು. ಹಾಗೆ ನೋಡಿದರೆ ಅವರು ಮದುವೆಯಾಗದೆ ಉಳಿದು, ಮನೆಯ ಇನ್ನಿತರೆ ಸದಸ್ಯರಿಗೆ ನೆರವಾಗುವ ಸಲುವಾಗಿ ಮನೆಯ ಜವಾಬ್ದಾರಿಯನ್ನು ಹೊತ್ತುಕೊಂಡ ಕಡಿಮೆ ಸಂಪ್ರದಾಯವಾದಿ ಯಾಗಿದ್ದರು. ಅವರು ತಮಿಳುನಾಡಿನಿಂದ ಬಂದವರು. ನಾವು ಅವರನ್ನು ಭೇಟಿಮಾಡಿದ್ದು ಬದರೀನಾಥದಲ್ಲಿ.

“ನನಗೆ ನಾಲ್ಕು ಜನ ಸೋದರರು, ಒಬ್ಬಳೇ ಸೋದರಿ. ನಾವೆಲ್ಲರೂ ತಮಿಳುನಾಡಿನಲ್ಲೇ ವಿದ್ಯಾಭ್ಯಾಸಮಾಡಿದೆವು. ತಮಿಳುನಾಡಿನಲ್ಲಿ ವಿದ್ಯಾಭ್ಯಾಸಕ್ಕೆ ಮೊದಲ ಆದ್ಯತೆ. ಸಂಪತ್ತಿಗೆ ಅನಂತರದ ಆದ್ಯತೆ. ನಾವು ಪಡೆಯುತ್ತಿದ್ದದ್ದು ಧಾರ್ಮಿಕ ಶಿಕ್ಷಣ. ಇದು ನಮ್ಮನ್ನು ಮೋಕ್ಷಕ್ಕೆ ಕೊಂಡೊಯ್ಯುವಂಥದು. ಬಾಲ್ಯದಿಂದ ಕಲಿಸುತ್ತಿದ್ದದ್ದು ಜೀವನ ಕಲೆಯ ಶಿಕ್ಷಣವನ್ನು. ಜೀವನ ನಿರ್ವಹಣೆಗೆ ಬೇಕಾಗಿರುವುದು ಹೆಚ್ಚಿನ ಹಣವಲ್ಲ; ಕಡಿಮೆ ಹಣವೇ ಸಾಕು. ಹಣ ಅಧಿಕ ಪ್ರಮಾಣದಲ್ಲಿ ಬಂದಾಗ ಮನಶ್ಶಾಂತಿಯೇ ಇರುವುದಿಲ್ಲ. ಜೀವನದಲ್ಲಿ ಯಾರೂ ಆತ್ಯಂತಿಕ ಗುರಿಯನ್ನು ಹೊಂದಿರಬಾರದು. ನಾವು ಹಂತ ಹಂತವಾಗಿ ಸಾಗಬೇಕು. ಇದೇ ಕರ್ಮಯೋಗ. ಫಲದ ಬಗ್ಗೆ ಚಿಂತಿಸದೆ ನಿನ್ನ ಕರ್ತವ್ಯವನ್ನು ನೀನು ಮಾಡು.

“ನನ್ನ ಪ್ರಾಥಮಿಕ ವಿದ್ಯಾಭ್ಯಾಸ ಒಂದು ಸಣ್ಣ ಹಳ್ಳಿಯಲ್ಲಾಯಿತು. ಆ ನಂತರ ನಾನು ರಾಮಕೃಷ್ಣಾಶ್ರಮದ ಶಾಲೆಗೆ ಸೇರಿದೆ. ಅಲ್ಲಿ ನನಗೆ ಶಿಸ್ತು ಮತ್ತು ದಿನದಿನದ ಕರ್ತವ್ಯಗಳನ್ನು ಮಾಡುತ್ತ ಯಾವುದೇ ಆಸೆಗಳನ್ನಿಟ್ಟುಕೊಳ್ಳದೆ ಜೀವನವನ್ನು ಹತೋಟಿಯಲ್ಲಿಟ್ಟುಕೊಳ್ಳುವುದನ್ನು ಕಲಿಸಲಾಯಿತು. ಅಲ್ಲಿ ಯೋಗವನ್ನು, ಯೋಗಾಸನಗಳನ್ನು ಮಾಡುವುದನ್ನು ಕಲಿಸಿಕೊಟ್ಟರು. ಯೋಗ ಕಲಿಕೆಯ ಸಂತಸದೊಂದಿಗೆ ದೈಹಿಕ ಮತ್ತು ಮಾನಸಿಕ ಶಕ್ತಿಗಳನ್ನು ಪಡೆಯುತ್ತೇವೆ. ಪ್ರೌಢಶಾಲೆಯಲ್ಲಿ ನಾನು ವಿಜ್ಞಾನ ವಿಷಯಗಳನ್ನು ಆರಿಸಿಕೊಂಡೆ. ಆ ನಂತರ ಇಂಜಿನಿಯರಿಂಗ್ ವ್ಯಾಸಂಗ ಮುಂದುವರಿಸಿದೆ. ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ತೆಗೆದುಕೊಂಡೆ. ಇಂಜಿನಿಯರಿಂಗ್‌ನ ಆ ಐದು ವರ್ಷಗಳಲ್ಲಿ ನಾನು ನನ್ನ ಸಮಯವನ್ನೆಲ್ಲ ಅಧ್ಯಯನಕ್ಕೆ ಮೀಸಲಾಗಿಟ್ಟೆ. ಕೆಲವು ಗಂಟೆಗಳು ಮಾತ್ರ ಸ್ವಲ್ಪಮಟ್ಟಿನ ಯೋಗವನ್ನು ಮುಂದುವರಿಸಿದೆ. ಆ ಓದು ಮುಗಿದ ಮೇಲೆ ಭಾರತೀಯ ನಿರ್ವಹಣಾ (I.I.M) ಸಂಸ್ಥೆಯ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಂಡು ಅದರಲ್ಲಿ ಚೆನ್ನಾಗಿ ಮಾಡಿದೆ. ನಾನು ಕಲ್ಕತ್ತಾದಲ್ಲಿ ಓದು ಮುಂದುವರಿಸಿ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಮಾನವ ಸಂಪನ್ಮೂಲದಲ್ಲಿ ವಿಶೇಷ ಪರಿಣತಿಯನ್ನು ಸಾಧಿಸಿದೆ.

ಇದರ ನಂತರ ಒಂದು ದೊಡ್ಡ ಕಂಪೆನಿಯ ದೂರ ಸಂಪರ್ಕ ವಿಭಾಗದಲ್ಲಿ ಕೆಲಸ ಮಾಡತೊಡಗಿದೆ. ಇದಲ್ಲದೆ ಕಂಪೆನಿಯಲ್ಲಿ ಇತರೆ ಕೆಲಸಗಳನ್ನೂ ಮಾಡಿದೆ. ಏನೇ ಆದರೂ ನನ್ನ ಜೀವನದುದ್ದಕ್ಕೂ ಆಧ್ಯಾತ್ಮದ ದಾರಿಯೇ ನನ್ನ ಗುರಿಯಾಗಿತ್ತು. ನಲವತ್ತನೇ ವಯಸ್ಸಿನ ನಂತರ ರಾಷ್ಟ್ರಕ್ಕಾಗಿ ನಾನು ಏನಾದರೂ ಮಾಡುತ್ತೇನೆಂದು ನಿರ್ಧರಿಸಿದ್ದೆ. ನಾನು ಮದುವೆಯಾಗಲಿಲ್ಲ. ಮದುವೆಯಾಯಿತೆಂದರೆ ಕುಟುಂಬ ಜೀವನಕ್ಕೆ ಗಮನಕೊಡಬೇಕಾಗುತ್ತದೆ ಮತ್ತು ನಮ್ಮ ಇಡೀ ಸಮಯವನ್ನು ಮದುವೆ ಮತ್ತು ಕುಟುಂಬದ ಸಲುವಾಗಿ ಮೀಸಲಿಡಬೇಕಾಗುತ್ತದೆ. ನಲವತ್ತು ವರ್ಷ ತುಂಬುವವರೆಗೂ

ನಾನು ನನ್ನ ಕಟುಂಬದ ಅಗತ್ಯಗಳನ್ನು ಈಡೇರಿಸುವುದೆಂದೂ ಆನಂತರ ನನ್ನ ಆಧ್ಯಾತ್ಮಿಕ ಅಗತ್ಯಗಳತ್ತ ಗಮನ ವಹಿಸುವುದೆಂದೂ ಮುಂಚೆಯೇ ಯೋಜಿಸಿದ್ದೆ. ನನ್ನ ಕುಟುಂಬ ಕ್ರಮೇಣ ನನ್ನ ಯೋಜನೆಯನ್ನು ಒಪ್ಪಿಕೊಂಡಿತು. ಸನ್ಯಾಸ ತೆಗೆದುಕೊಳ್ಳುವ ಮುಂಚೆ ನನ್ನನ್ನು ನಾನು ಬಂಧನಗಳಿಂದ ಬಿಡಿಸಿಕೊಂಡೆ. ಮೊದಲಿಗೆ ನನಗೆ ಉದ್ಯೋಗ ನೀಡಿದ್ದ ಕಂಪೆನಿಯಿಂದ, ಎರಡನೆಯದಾಗಿ ನನ್ನ ಕುಟುಂಬದಿಂದ ಕೊನೆಯದಾಗಿ ಮಿತ್ರರು ಮತ್ತು ಜೊತೆಗಾರರಿಂದ ಬಿಡಿಸಿಕೊಂಡೆ."

ಅಭಿನವರು ತಮ್ಮ ವ್ಯಕ್ತಿತ್ವವನ್ನು ಸರೋವರದಲ್ಲಿ ತೇಲುತ್ತಿರುವ ಕಮಲದಂತೆ ಎಂದು ವರ್ಣಿಸಿದರು. ಜನರು ಕಮಲದ ಎಲೆಯ ಮೇಲೆ ಅಥವಾ ಅದರ ದಳಗಳ ಮೇಲೆ ನೀರು ಹಾಕಿದಾಗ ಅದು ಜಾರಿಹೋಗುತ್ತದೆ. ನಾನು ಆ ಕಮಲದ ಎಲೆಯ ಹಾಗೆ".

"ನಿಮ್ಮ ಸುತ್ತ ಮುತ್ತ ಇದ್ದ ಜನರಿಗೆ ನಿಮ್ಮಲ್ಲಿ ಹುಟ್ಟಿನಿಂದಲೂ ಅಂಥ ಗುಣಗಳಿದ್ದುವೆಂಬುದು ಗೊತ್ತಿತ್ತೆ?"

"ಹೌದು ಹೌದು. ನಾನು ಬೇರೆಯದೇ ಸ್ವಭಾವದ ವ್ಯಕ್ತಿ ಎಂಬುದು ನನ್ನ ತಂದೆ-ತಾಯಿ, ನಮ್ಮ ನೆರೆಹೊರೆಯವರು ಎಲ್ಲರಿಗೂ ಗೊತ್ತಿತ್ತು. ಈ ವಿಷಯದಲ್ಲಿ ಅವರುಗಳು ಯಾರೂ ನನ್ನನ್ನು ಯಾವತ್ತೂ ಪೀಡಿಸಲಿಲ್ಲ."

ಸಾಮಿ ಮುಕ್ತಾನಂದರ ಕಥೆ ಅನೇಕ ದೃಷ್ಟಿಗಳಿಂದ ಕುತೂಹಲಕಾರಿಯಾದ್ದು. ಬಾಲ್ಯಕಾಲದ ದೃಢ ನಂಬಿಕೆಗಳು ಪ್ರೌಢಾವಸ್ಥೆಯ ಅಭ್ಯಾಸಗಳಾಗಿ ಹೇಗೆ ಪರಿವರ್ತಿತವಾಗುತ್ತವೆ ಎಂಬುದನ್ನು ನಮಗೆ ಹೇಳಿದರು. ನಾಗಾ ಪರಂಪರೆಯ ಸಾಧುವಾಗಿ ಅವರು ದೀಕ್ಷೆ ಪಡೆದುಕೊಂಡ ಬಗ್ಗೆ ವಿವರವಾದ ಚಿತ್ರವನ್ನು ನೀಡಿದ್ದಾರೆ. ಅಲ್ಲದೆ ಯಾವುದೇ ಒಂದು ಸಂಪ್ರದಾಯ ಅಥವಾ ಪರಂಪರೆಯ ಬಗ್ಗೆ ಅವಸರದ ಸಾಮಾನ್ಯೀಕರಣದ ಹೇಳಿಕೆಗಳನ್ನು ಮಾಡುವುದು ವಿವೇಕಯುತವಾದದ್ದಲ್ಲ ಎಂದು ತೋರಿಸಿಕೊಟ್ಟರು. ನಾಗಾಗಳು ಒರಟು ಮತ್ತು ಜಗಳಗಂಟಿ ಸ್ವಭಾವದವರೆಂಬುದು ಒಂದು ಸಾಮಾನ್ಯ ತಿಳುವಳಿಕೆ. ಆದರೆ ಮುಕ್ತಾನಂದರು ಇದಕ್ಕೆ ಅಪವಾದವಾಗಿದ್ದರು.

ನಾನು ಮುಕ್ತಾನಂದರನ್ನು ಮೊದಲು ಕಂಡದ್ದು ಇನ್ನೊಬ್ಬ ಸನ್ಯಾಸಿಯನ್ನು ಸಂದರ್ಶನ ಮಾಡಲು ಹೋಗಿದ್ದಾಗ. ಸಂದರ್ಶನದುದ್ದಕ್ಕೂ ತುಂಬ ಆಸಕ್ತಿಯಿಂದ ಕುಳಿತಿದ್ದರು. ಆದರೆ ಯಾವುದೇ ಪ್ರಶ್ನೆ ಕೇಳುವ ಮೂಲಕವಾಗಲಿ ಬೇರಾವುದೇ ರೀತಿಯಲ್ಲಿ ಮಧ್ಯೆ ತಲೆಹಾಕುವುದಾಗಲಿ ಮಾಡಲಿಲ್ಲ. ಸಂದರ್ಶನದ ನಂತರ ಮುಕ್ತಾನಂದರನ್ನು ತಮ್ಮ ಆಶ್ರಮದ ಗೋಡೆಗಳ ಮೇಲೆಲ್ಲ ಚಿತ್ರ ಬರೆದ ಭಿತ್ತಿಚಿತ್ರ ಕಲಾವಿದರೆಂದು ನನಗೆ ಪರಿಚಯಿಸಲಾಯಿತು. ಅವರು ಸನ್ಯಾಸಿಯಾಗಿದ್ದೂ ಕಲಾವಿದರಾಗಿದ್ದುದು ನನ್ನನ್ನು ಗೋಜಲುಗೊಳಿಸಿತು. ನನ್ನೊಂದಿಗೆ ಅವರಿಗೆ ಮಾತನಾಡಲು ಸಾಧ್ಯವೆ ಎಂದು ಕೇಳಿದೆ. ಅವರು ಮಧ್ಯಾಹ್ನ ಬರಲು ತಿಳಿಸಿದರು.

"ನೀವು ಎಲ್ಲಿ ಸಿಕ್ಕುತ್ತೀರಿ"? ಎಂದು ಕೇಳಿದೆ.

"ನಾನು ಉಳಿದುಕೊಂಡಿರುವ ಆಶ್ರಮಕ್ಕೆ ಬಂದು ಪೈಂಟರ್ ಸ್ವಾಮಿಯನ್ನು ನೋಡಬೇಕೆಂದು ಕೇಳಿ"– ಎಂದು ನಗುತ್ತ ಹೇಳಿದರು.

ಅದೇ ದಿನ ಸಂಜೆ ಆಶ್ರಮಕ್ಕೆ ಹೋದೆ. ಅಲ್ಲಿ ಧ್ಯಾನದ ಸಲುವಾಗಿ ಕಟ್ಟಿಸಿರುವ ಬಿದಿರಿನ ಗುಡಿಸಿಲಿನ ಹೊರಗೋಡೆಯ ಮೇಲೆ ದೊಡ್ಡದೊಂದು ಭಿತ್ತಿ ಚಿತ್ರ ರಚಿಸುವುದರಲ್ಲಿ ತೊಡಗಿದ್ದ ಸ್ವಾಮೀಜಿಯನ್ನು ಕಂಡೆ. ನನ್ನ ಟೇಪ್ ರೆಕಾರ್ಡರ್ ಅನ್ನು ಪ್ರಾರಂಭಿಸಲು ಹೇಳಿ ಪ್ರಶ್ನೆಗಳನ್ನು ಕೇಳಬೇಕೆಂದು ನನಗೆ ಸೂಚಿಸಿದರು. ಅವರು ನನ್ನ ಕಡೆಗೆ ಬೆನ್ನು ಮಾಡಿ ಚಿತ್ರ ರಚಿಸುತ್ತಲೇ ನನ್ನೊಂದಿಗೆ ಮಾತಿಗೆ ತೊಡಗಿದರು. ಹೀಗೇ ನಡೆದು ಸ್ವಲ್ಪ ಹೊತ್ತಿನ ನಂತರ ಅವರಿಗೆ ನನ್ನ ಪ್ರಶ್ನೆಗಳ ವಿಚಾರದಲ್ಲಿ ಆಸಕ್ತಿ ಮೂಡಿ ಚಿತ್ರ ರಚಿಸುವುದನ್ನು ಬಿಟ್ಟು ನನ್ನೆದುರಿಗೆ ಬಂದು ನೆಲದ ಮೇಲೆ ಕುಳಿತುಕೊಂಡರು.

ನಾಗಾ ಸಂಪ್ರದಾಯದ ಬಗ್ಗೆ ವಿಸ್ತಾರವಾಗಿ ಚರ್ಚಿಸಿದರು. 'ನಾಗಾ' ಶಬ್ದ ಬೆತ್ತಲೆ ಎಂಬ ಅರ್ಥದ ಸಂಸ್ಕೃತದ 'ನಗ್ನ' ಶಬ್ದದಿಂದ ಬಂದಿದೆ. ನಾಗಾ ಸಾಧುಗಳು ತಮ್ಮ ದುರಹಂಕಾರ ಮತ್ತು ಒರಟುತನಕ್ಕೆ ಹೆಸರಾದವರು. ಸಣ್ಣ ಒಂದು ನೆಪ ಸಿಕ್ಕಿದರೂ ಸಾಕು ಯುದ್ಧಕ್ಕೆ ತುದಿಗಾಲ ಮೇಲೆ ನಿಂತಿರುತ್ತಾರೆ. ಈ ಮುಂಚೆ ಒಮ್ಮೆ ನಾನು ಅವರ ಫೋಟೋ ತೆಗೆಯುತ್ತಿದ್ದುದನ್ನು ನೋಡಿ ನನ್ನನ್ನು ಅಟ್ಟಿಸಿಕೊಂಡು ಬಂದರು. ದಾಖಲೆಗಳ ಪ್ರಕಾರ ನಾಗಾ ಸಾಧುಗಳದು ಬಹಳ ಹಿಂದಿನಿಂದ ಬಂದ ಪರಂಪರೆ. ಆದರೆ ಹದಿನಾರನೇ ಶತಮಾನದಲ್ಲಿ ಮಧುಸೂದನ ಸರಸ್ವತಿ ಎಂಬ ಸಂನ್ಯಾಸಿಯು, ಆಗಾಗ್ಗೆ ಮುಸ್ಲಿಮ್ ಫಕೀರರ ಆಕ್ರಮಣಕ್ಕೆ ಒಳಗಾಗುತ್ತಿದ್ದ ಸನ್ಯಾಸಿಗಳ ರಕ್ಷಣೆಯ ಸಲುವಾಗಿ ಆಯುಧ ಇಟ್ಟುಕೊಳ್ಳಲು ಅವಕಾಶವಿರುವ ಸನ್ಯಾಸಿಗಳ ಒಂದು ವಿಶೇಷ ಪಡೆ ರಚಿಸಲು ಅಕ್ಬರ್ ಬಾದಶಹನಿಂದ ಅನುಮತಿ ಪಡೆದನಂತೆ. ಇವರೇ ಆಧುನಿಕ ನಾಗಾಗಳ ಪೂರ್ವಜರು.

ಮುಕ್ತಾನಂದರು ಮೆಲುದನಿಯಲ್ಲಿ, ಮುಖದಲ್ಲಿ ಮುಗುಳುನಗೆ ತುಂಬಿಕೊಂಡು ತಮ್ಮ ಕಥೆ ಹೇಳಿದರು. ಅವರು ಗುಜರಾತಿನ ಮಧ್ಯಮ ವರ್ಗದ ಕುಟುಂಬದಿಂದ ಬಂದವರು. ಅವರ ತಂದೆ ಒಂದು ಬಟ್ಟೆ ಮಿಲ್ಲಿನಲ್ಲಿ ನೇಯ್ಗೆ ಕಲಿಸುವ ಅಧ್ಯಾಪಕರು. ತುಂಬ ಧಾರ್ಮಿಕ ಸ್ವಭಾವದವರು. ಅವರಿಗೊಬ್ಬ ಗುರುಗಳಿದ್ದರು. ಅವರು ಧಾರ್ಮಿಕ ಮತ್ತು ಲೌಕಿಕ ಎರಡೂ ವಿಚಾರಗಳಿಗೆ ಸಂಬಂಧಿಸಿದಂತೆ ಸಲಹೆ ನೀಡುತ್ತಿದ್ದರು. ಮುಕ್ತಾನಂದರಿಗೆ ಇಬ್ಬರು ಅಣ್ಣಂದಿರು, ಒಬ್ಬ ಅಕ್ಕ ಮತ್ತು ಒಬ್ಬ ತಂಗಿ ಇದ್ದರು. ಅವರ ದೊಡ್ಡ ಅಣ್ಣ ಜಿಲ್ಲಾ ಮ್ಯಾಜಿಸ್ಟ್ರೇಟ್ ಎರಡನೇ ಅಣ್ಣ ಒಂದು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿ. ಅವರ ಇಬ್ಬರೂ ಸೋದರಿಯರನ್ನು ಒಳ್ಳೆಯ ಕುಟುಂಬಗಳಿಗೆ ಮದುವೆಮಾಡಿ ಕೊಡಲಾಗಿತ್ತು ಮುಕ್ತಾನಂದರು ಕೃಷ್ಣಜನ್ಮಾಷ್ಟಮಿಯಂದು ರಾತ್ರಿ 11 ಗಂಟೆಗೆ ಹುಟ್ಟಿದರಂತೆ. ವಿನೋದಕ್ಕೆ ಅವರು ಹೇಳಿದ್ದು ಒಂದುವೇಳೆ ಅವರು ಅರ್ಧರಾತ್ರಿಗೆ ಹುಟ್ಟಿದ್ದರೆ (ಶ್ರೀ ಕೃಷ್ಣ ಹುಟ್ಟಿದನೆಂದು ನಂಬಲಾಗಿರುವ ಮುಹೂರ್ತ)

ಅವರೊಬ್ಬ ನಿಜವಾದ ಸನ್ಯಾಸಿಯಾಗಿಬಿಡುತ್ತಿದ್ದರಂತೆ. ಅವರು ಒಂದಲ್ಲ ಒಂದು ದಿನ ಸನ್ಯಾಸಿಯಾಗುತ್ತಾರೆಂದು ಜಾತಕದ ಭವಿಷ್ಯವಾಣಿಯಾಗಿತ್ತಂತೆ. ಬಾಲ್ಯದಿಂದಲೂ ಮುಕ್ತಾನಂದರು ಧಾರ್ಮಿಕ ವಿಷಯಗಳಲ್ಲಿ ಹೆಚ್ಚು ತೊಡಗಿಕೊಳ್ಳುತ್ತಿದ್ದರಂತೆ. ಅಲ್ಲದೆ ಇತರೆ ಮಕ್ಕಳೊಡನೆ ಆಟಪಾಟಗಳಲ್ಲಿ ಕಳೆಯುವುದಕ್ಕಿಂತ ಹೆಚ್ಚಾಗಿ ತಮ್ಮ ಮನೆಯ ಬಳಿ ಇದ್ದ ದೇವಸ್ಥಾನದಲ್ಲಿ ತಮ್ಮ ಹೆಚ್ಚು ಸಮಯವನ್ನು ಕಳೆಯುತ್ತಿದ್ದರಂತೆ. ಅವರ ಹಿರಿಯಣ್ಣ ಅವರ ಜಾತಕವನ್ನು ಮನಸ್ಸಿನಲ್ಲಿಟ್ಟುಕೊಂಡು ದೇವಸ್ಥಾನಗಳಿಗೆ ಹೋಗಬೇಕೆಂಬ ಮುಕ್ತಾನಂದರ ಉತ್ಸಾಹವನ್ನು ತಗ್ಗಿಸಿ ಇತರೆ ಮಕ್ಕಳ ಹಾಗೆ ಶಾಲೆಗೆ ಹೋಗುವುದರ ಬಗ್ಗೆ ನಿಶ್ಚಯಮಾಡಿಕೊಳ್ಳುತ್ತಿದ್ದರಂತೆ. ಅವರ ಶಾಲಾ ಶಿಕ್ಷಣ ಮುಗಿದ ನಂತರದಲ್ಲಿ ಒಂದು ದಿನ ತಾನು ಸನ್ಯಾಸಿಯಾಗಲಿಚ್ಛಿಸಿರುವುದಾಗಿ ಬಹಿರಂಗವಾಗಿ ಪ್ರಕಟಿಸಿದರಂತೆ. ಅವರ ಮನೆಯಲ್ಲಿ ಸುಖ ಸಂತೋಷವಿತ್ತೆಂದು, ಅವರು ಅಲ್ಲಿ ಬೆಳೆಯುತ್ತಿದ್ದ ಕಾಲದಲ್ಲಿ ಯಾವುದೇ ಬಗೆಯ ಬಿಗುವಿನ ಸ್ಥಿತಿ, ಆತಂಕಗಳು ಇರಲಿಲ್ಲವೆಂದು ಮುಕ್ತಾನಂದರು ನನಗೆ ಭರವಸೆ ನೀಡಿದರು. ಅವರ ಈ ಧೀರ ಘೋಷಣೆಯ ನಂತರ ಅವರ ಮನೆಯವರು ಕುಟುಂಬದ ಗುರುಗಳೊಂದಿಗೆ ಸಮಾಲೋಚಿಸಿದರಂತೆ. ಆ ಗುರುಗಳು ಮುಕ್ತಾನಂದನು ತಮ್ಮೊಂದಿಗೆ ಬಂದಿರಲು ಅವಕಾಶ ನೀಡಬೇಕೆಂದು ತಿಳಿಸಿದರಂತೆ.

"ಅವನು ನನ್ನ ಮಾರ್ಗದರ್ಶನದಲ್ಲಿ ಸಾಧನೆಗಳನ್ನು ಮಾಡಬಹುದು. ಅದು ಅವನ ನಿಜವಾದ ಪ್ರವೃತ್ತಿಯೇ ಆಗಿದ್ದಲ್ಲಿ ಅವನು ಸನ್ಯಾಸ ತೆಗೆದುಕೊಳ್ಳಲು ನಾವು ಅವಕಾಶ ಮಾಡಿಕೊಡಬೇಕು. ಒಂದು ವೇಳೆ ಅವನಿಗೆ ಸನ್ಯಾಸ ಬೇಸರವೆನಿಸಿದರೆ ನಾನೇ ಅವನನ್ನು ಮನೆಗೆ ಕಳಿಸುತ್ತೇನೆ" ಎಂದು ಹೇಳಿದರಂತೆ.

ಮುಕ್ತಾನಂದರಿಗೆ ಬೇಸರವೆನಿಸಲಿಲ್ಲ. ಅವರು ಆಶ್ರಮದ ದಿನನಿತ್ಯದ ಎಂದಿನ ಕಲಾಪಗಳಲ್ಲಿ ಹೆಚ್ಚಿನ ಆಸಕ್ತಿ ತೋರಿದರು. ಎಂಟು ವರ್ಷಗಳ ಕಾಲ ಗುರುವಿನೊಂದಿಗೆ ಆಶ್ರಮದಲ್ಲಿ ಉಳಿದ ಮೇಲೆ ಹೆಚ್ಚಿನ ಆಧ್ಯಾತ್ಮಿಕ ಶಿಕ್ಷಣ ಪಡೆಯಲು ಅವರ ಗುರುಗಳು ಒಬ್ಬ 'ಮಂಡಲೇಶ್ವರರ' ಹತ್ತಿರಕ್ಕೆ ಹರಿದ್ವಾರಕ್ಕೆ ಕಳಿಸಿಕೊಟ್ಟರು. ಮಂಡಲೇಶ್ವರರು ಅಖಾಡದೊಂದಿಗೆ ಸಂಬಂಧ ಹೊಂದಿದವರಾಗಿರುತ್ತಾರೆ. (ಅಖಾಡಗಳೆಂದರೆ ನಾಗಾ ಸಾಧುಗಳು ವಾಸಿಸುವ ದೊಡ್ಡ ಸಂಸ್ಥಾನಗಳು.). ನಾಗಾ ಸಾಧುಗಳ ಏಳು ಮುಖ್ಯ ಅಖಾಡಾಗಳಿವೆ. ಅವುಗಳಲ್ಲಿ ಪ್ರಮುಖ ಕಾರ್ಯಾಲಯವು ಪ್ರಮುಖ ತೀರ್ಥಸ್ಥಾನದಲ್ಲಿದ್ದು ಉಳಿದ ತೀರ್ಥ ಸ್ಥಾನಗಳಲ್ಲಿ ಶಾಖೆಗಳಿರುತ್ತವೆ. ಅಖಾಡಕ್ಕೆ ಮುಖ್ಯ ಆಡಳಿತಗಾರನಾಗಿ ಒಬ್ಬ 'ಮಹಂತ' ಇರುತ್ತಾನೆ. ಆದರೆ ಆಧ್ಯಾತ್ಮಿಕ ಶಿಕ್ಷಣ ನೀಡುವವರು ಅಖಾಡಕ್ಕೆ ಸೇರಿದ ಮಂಡಲೇಶ್ವರರು.

ಮುಕ್ತಾನಂದರು ನಾಲ್ಕು ವರ್ಷಗಳ ಕಾಲ ಅಧ್ಯಯನ ಮಾಡಿದರು. ಆನಂತರ ಅವರಿಗೆ ದೀಕ್ಷೆ ನೀಡಲಾಯಿತು. ಅವರ ಗುರು ಯಾವುದೋ ಒಂದು ಗೊತ್ತಾದ ನಾಗಾ ಸಂಸ್ಥಾನಕ್ಕೆ ಸೇರಿದ್ದರಿಂದ ಮುಕ್ತಾನಂದರೂ ನಾಗಾ ಸಾಧು ಆದರು. ನಾಗಾ ಸಾಧುವಿನ

ದೀಕ್ಷೆಯೆಂದರೆ ಅದೊಂದು ವಿಲಕ್ಷಣ ಆಚರಣೆಯಾಗಿರುತ್ತದೆ. ಹಲವಾರು ಧಾರ್ಮಿಕ ವಿಧಿಗಳು ಮುಗಿದ ನಂತರ ಗುರುವಾದವನು ವ್ಯಕ್ತಿಯ ಲಿಂಗವನ್ನು ಹಠಾತ್ತನೆ ಬಲವಾಗಿ ಎಳೆದುಬಿಡುತ್ತಾನೆ. ಲೈಂಗಿಕವಾಗಿ ವ್ಯಕ್ತಿಯನ್ನು ಪೂರ್ತಿ ನಪುಂಸಕನನ್ನಾಗಿಸುವ ಇದನ್ನು ಮುಕ್ತಾನಂದರು ಜನನಾಂಗವನ್ನು ಒಡೆಯುವ ಕ್ರಿಯೆ ಎನ್ನುತ್ತಾರೆ. ಇದು ವ್ಯಕ್ತಿಯನ್ನು ನಿಜಕ್ಕೂ ನಪುಂಸಕನನ್ನಾಗಿಸುತ್ತದೆ ಎಂಬುದು ಮುಕ್ತಾನಂದರ ನಂಬಿಕೆ. ಗುರು ಜನನಾಂಗದ ಸುತ್ತ ಬಿಗಿಯಾದ ಬೆಳ್ಳಿಯ ಒಂದು ಉಂಗುರನ್ನು ಅಳವಡಿಸುತ್ತಾನೆ. ಅದು ಲೈಂಗಿಕ ಕ್ರಿಯೆಯನ್ನು ನಿರ್ಬಂಧಿಸುತ್ತದೆ. ಯಾವುದೇ ಹಿಂಜರಿಕೆಯಿಲ್ಲದೆ ಮುಕ್ತಾನಂದರು ತಮ್ಮ ಕೆಳ ಉಡುಪನ್ನು ತೆರೆದು ತಮ್ಮ ಶಿಶ್ನಕ್ಕೆ ಅಳವಡಿಸಿದ್ದ ರಿಂಗ್ ಅನ್ನು ನನಗೆ ತೋರಿಸಿದರು. ಅದು ಮೂತ್ರವಿಸರ್ಜನೆಗೆ ಯಾವ ರೀತಿಯಲ್ಲೂ ಬಾಧಕವಲ್ಲ ಎಂದು ಭರವಸೆಯಿಂದ ಹೇಳಿದರು. ಈ ಪುರುಷ ಪಾವಿತ್ರ್ಯದ ಬೆಲ್ಟ್ ಕಾಮೋದ್ರೇಕದಿಂದಾಗಿ ಪುರುಷನ ಶಿಶ್ನ ನಿಮಿರಿ ದೊಡ್ಡದಾಗುವುದನ್ನು ತಡೆಯುತ್ತದೆ ಎಂದು ಹೇಳಿದರು.

* * *

ಇತರೆ ಸಾಧುಗಳು ತಮ್ಮ ಜೀವನದಲ್ಲಿ ಎದುರಾದ ಬೇರೆ ಬೇರೆ ಘಟನೆಗಳ ಕಾರಣದಿಂದಾಗಿ ಸನ್ಯಾಸದ ಹಾದಿಯನ್ನು ಹಿಡಿದಿದ್ದರು. ಹಲವರು ಬಾಲ್ಯದಲ್ಲಿ ಅನಾಥರಾಗಿದ್ದು ಯಾರೋ ಸಾಧು ಅವರುಗಳ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.

ಸ್ವಾಮಿ ಮಾಧವಾನಂದರು ಮೊದಲಿನಿಂದಲೂ ಸನ್ಯಾಸಿಯಾಗಬೇಕೆಂದಿದ್ದರು. ಆದರೆ ಅವರ ಬಾಲ್ಯದಲ್ಲಿ ಇನ್ನೂ ತುಂಬಾ ಚಿಕ್ಕ ಹುಡುಗನಾಗಿದ್ದಾಗ ನಡೆದ ತೀವ್ರ ಮಾನಸಿಕ ಆಘಾತವನ್ನುಂಟುಮಾಡುವ ಘಟನೆಯಿಂದ ಅವರ ಇಡೀ ಲೋಕದೃಷ್ಟಿ ರೂಪಿತವಾಯಿತು.

"ಒಂದು ರೈಲು ಅಪಘಾತವುಂಟಾಯಿತು. ನಾನು ಸುಮಾರು ಎಂಟು ವರ್ಷದ ಹುಡುಗನಾಗಿದ್ದಾಗ ನನ್ನ ತಂದೆ ತಾಯಿಗಳೊಂದಿಗೆ ಪ್ರಯಾಣಮಾಡುತ್ತಿದ್ದೆ. ರೈಲು ಒಂದು ಸೇತುವೆಯ ಮೇಲೆ ಹೋಗುತ್ತಿದ್ದಾಗ ಸೇತುವೆ ಕುಸಿಯಿತು. ಟ್ರೈನು ಹರಿಯುತ್ತಿದ್ದ ನದಿಗೆ ಬಿದ್ದುಬಿಟ್ಟಿತು. ನನ್ನ ತಂದೆ ತಾಯಿಗಳೂ ಸೇರಿದಂತೆ ಎಲ್ಲ ಏಳುನೂರು ಜನ ಪ್ರಯಾಣಿಕರು ಸತ್ತುಹೋದರು. ಉಳಿದವನು ನಾನು ಮಾತ್ರ. ಪೊಲೀಸರು ತನಿಖೆ ನಡೆಯುತ್ತಿದ್ದ ಸುಮಾರು ಒಂದು ತಿಂಗಳ ಕಾಲ ನನ್ನನ್ನು ಅಲ್ಲೇ ಇಟ್ಟುಕೊಂಡಿದ್ದರು. ಅಷ್ಟೊಂದೆಲ್ಲ ಹೆಣಗಳನ್ನು ನೋಡಿದ್ದೆಂದರೆ ಅದೊಂದು ಭಯಾನಕ ಅನುಭವವಾಗಿತ್ತು. ನನ್ನ ತಂದೆ ತಾಯಿಗಳ ಶವವನ್ನು ನಾನು ಗುರುತಿಸಿದೆ.

ಆಗ ನನ್ನ ತಾಯಿಯ ತಂದೆ(ತಾತ) ಬಂದು ತಮ್ಮ ಊರಿಗೆ ನನ್ನನ್ನು ಕರೆದೊಯ್ದರು. ಅವರು ಮತ್ತು ಅವರ ಕುಟುಂಬದೊಂದಿಗೆ ಬೆಳೆದೆ. ಹತ್ತನೇ ತರಗತಿಯ ತನಕ ಅಲ್ಲಿ ವಿದ್ಯಾಭ್ಯಾಸ ಮಾಡಿದೆ. ನನ್ನ ಶಾಲಾ ವಿದ್ಯಾಭ್ಯಾಸ ಮುಗಿದ ಮೇಲೆ ನನ್ನ ಸೋದರ ಮಾವ ನನ್ನ ಜೀವನೋಪಾಯ, ಮದುವೆ ಇವುಗಳ ಬಗ್ಗೆ ಮಾತಾಡತೊಡಗಿದರು.

'ಜೀವನೋಪಾಯದ ಪ್ರಶ್ನೆಯು ಬಗ್ಗೆ ಏನೂ ಸಮಸ್ಯೆ ಇಲ್ಲ. ಆದರೆ ನಾನು ಮದುವೆಯಾಗುವುದಿಲ್ಲ' ಎಂದೆ. ಆಗ ನನ್ನ ಸೋದರ ಮಾವ– 'ಏಕೆ, ನಿನ್ನನ್ನು ಹಾಗೂ ನಿನ್ನ ಮನೆ – ಮಠ ಇವುಗಳನ್ನು ನೋಡಿಕೊಳ್ಳಲು ಯಾರಾದರೂ ಇರಬೇಡವೆ?' ಎಂದು ಕೇಳಿದರು. ಆಗ ನಾನು 'ಆ ರೈಲು ದುರ್ಘಟನೆಯ ನಂತರ ನನ್ನನ್ನು ಯಾರು ನೋಡಿಕೊಂಡರೋ ಅವರೇ ಈಗಲೂ ನೋಡಿಕೊಳ್ಳುತ್ತಾರೆ' ಎಂದೆ. ಈ ಮಾತು–ಕತೆಯ ನಂತರ ನಾನು ಮನೆಬಿಟ್ಟು ಒಬ್ಬ ಆಧ್ಯಾತ್ಮಿಕ ಗುರುವನ್ನು ಹುಡುಕುತ್ತ ಹೊರಟೆ. ರಾಮಕೃಷ್ಣ ಆಶ್ರಮದಲ್ಲಿ ಅವರನ್ನು ನಾನು ಭೇಟಿಮಾಡಿದೆ. ಇದು ನಡೆದು ಮೂವತ್ತು ವರ್ಷವಾಯಿತು" ಎಂದರು.

ನಾವು ಮದನ ಮೋಹನದಾಸರನ್ನು ಭೇಟಿಮಾಡಿದಾಗ ಅವರಿಗೆ ತೊಂಬತ್ತೆಂಟು ವರ್ಷ ವಯಸ್ಸಾಗಿತ್ತು. ಅದನ್ನು ಅವರು ಲೆಕ್ಕಹಾಕಿದ್ದು ಅವರು ಸನ್ಯಾಸ ದೀಕ್ಷೆ ತೆಗೆದುಕೊಂಡ ವರ್ಷವಾದ 1918 ಅನ್ನು ನೆನಪಿಸಿಕೊಳ್ಳುವ ಮೂಲಕ. ಆಗ ಅವರಿಗೆ ಹದಿನಾಲ್ಕು ವರ್ಷವಾಗಿತ್ತು. ಅವರಿನ್ನೂ ತುಂಬ ಚಿಕ್ಕವರಿರುವಾಗಲೇ ತಾಯಿ ತೀರಿಕೊಂಡಿದ್ದರು. ಮದನರಿಗೆ ಹನ್ನೆರಡು ವರ್ಷ ವಯಸ್ಸಾಗಿದ್ದಾಗ ಅವರ ತಂದೆ ತೀರಿಕೊಂಡರು. ಅವರು ಸಣ್ಣ ಗುಮಾಸ್ತೆ ಕೆಲಸದಲ್ಲಿದ್ದವರು. ಬಾಲಕನೊಬ್ಬನೇ ತನ್ನ ತಂದೆ ಆಗಾಗ್ಗೆ ಭೇಟಿ ಮಾಡಲು ಹೋಗುತ್ತಿದ್ದ ಒಬ್ಬ ಮಹಾತ್ಮರೊಂದಿಗೆ ಇರಲು ಹೋಗಿಬಿಟ್ಟನು. ತನ್ನ ಪಿತ್ರಾಜಿತ ಆಸ್ತಿಯನ್ನು ಮಾರಿ ಮಹಾತ್ಮರ ಆಶ್ರಮಕ್ಕೆ ಕೊಟ್ಟುಬಿಟ್ಟನು. ಸನ್ಯಾಸ ದೀಕ್ಷೆ ಸ್ವೀಕರಿಸಿದ ನಂತರದಲ್ಲಿ ಸಾಧನೆಗಳನ್ನು ಮಾಡುವುದರಲ್ಲಿ ಮತ್ತು ಮಹಾತ್ಮರ ಸೇವೆ ಮಾಡುವುದರಲ್ಲಿ ತನ್ನ ಕಾಲವನ್ನು ಕಳೆಯುತ್ತಿದ್ದನು. ಮಹಾತ್ಮರು ತೀರಿಕೊಂಡ ಮೇಲೆ ಈ ಹುಡುಗನೇ ಆಶ್ರಮವನ್ನು ಮತ್ತು ಅದಕ್ಕೆ ಸೇರಿದ್ದ ದೇವಸ್ಥಾನವನ್ನು ನೋಡಿಕೊಳ್ಳತೊಡಗಿದ. ಆದರೆ ಈ ಜವಾಬ್ದಾರಿ ತುಂಬ ಹೆಚ್ಚಿನದಾಗಿತ್ತು. ಅವರು ದೇಶದ ತೀರ್ಥ ಸ್ಥಳಗಳ ಯಾತ್ರೆಗೆಂದು ಹೊರಟು ಎಲ್ಲ ಕಡೆ ಸಂಚರಿಸತೊಡಗಿದರು. ಆಗಾಗ್ಗೆ ಒಮ್ಮೆ ಯಾವುದಾದರೊಂದು ಆಶ್ರಮದಲ್ಲಿ ತಂಗಿದ್ದು ನಂತರದಲ್ಲಿ ಮುಂದುವರಿಯುತ್ತಿದ್ದರು. ಹಿಂದೆಲ್ಲ ಅವರು ಕಾಲ್ನಡಿಗೆಯಲ್ಲಿ ಸಂಚರಿಸುತ್ತಿದ್ದರು. ಆದರೆ ಈ ಬಾರಿ ಅವರು ಮಹಾರಾಷ್ಟ್ರದಿಂದ ಬಸ್‌ನಲ್ಲಿ ಬಂದಿದ್ದರು. ಗಂಗೋತ್ರಿಯೆಡೆಗಿನ ತಮ್ಮ ಉಳಿದ ಪಯಣವನ್ನು ಕಾಲ್ನಡಿಗೆಯಿಂದ ಪೂರ್ತಿಗೊಳಿಸುವ ಉದ್ದೇಶವಿತ್ತು.

"ನೀವು ಎಲ್ಲಿಯಾದರೂ ಏಕೆ ಸ್ಥಿರವಾಗಿ ನೆಲೆನಿಲ್ಲಲಿಲ್ಲ.? ಹೀಗೆ ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಗೀಳಿಗೇಕೆ ಬಿದ್ದಿದ್ದೀರಿ" –ಎಂದು ನಾನು ಕೇಳಿದೆ.

"ಜ್ಞಾನಿಗಳಾದ ಇತರೆ ಸಂತರನ್ನು ಇನ್ನು ಯಾವ ರೀತಿಯಲ್ಲಿ ಭೇಟಿಮಾಡಲು ಸಾಧ್ಯ? ನನ್ನ ಪರ್ಯಟನೆಗಳಲ್ಲಿ ನಾನು ಅದೆಷ್ಟೋ ಕಲಿತಿದ್ದೇನೆ". ಎಂದು ಹೇಳಿದರು.

"ನಾನು ತಪ್ಪು ದಾರಿಯನ್ನು ಆಯ್ಕೆಮಾಡಿಕೊಂಡೆ; ಬಹುಶಃ ಮದುವೆ

ಮಾಡಿಕೊಂಡು ಒಂದು ಕಡೆ ನೆಲೆನಿಂತಿದ್ದರೆ ಚೆನ್ನಾಗಿರುತ್ತಿತ್ತು ಎಂದು ಯಾವತ್ತಾದರೂ ನಿಮಗೆ ಅನ್ನಿಸಿತ್ತೆ?"

"ಇಂಥ ಒಂದು ಆಲೋಚನೆ ನನ್ನ ಮನಸ್ಸಿಗೆ ಯಾವತ್ತೂ ಬರಲಿಲ್ಲ. ನನಗೆ ನಾನು ಮುಕ್ತನಾಗಿದ್ದೇನೆಂಬ ಭಾವನೆ ಉಂಟಾಗುತ್ತದೆ. ಜೊತೆಗೆ ನಾನು ಪ್ರಯಾಣ ಮಾಡುತ್ತಿರುವಾಗ ನನ್ನ ಹೃದಯ ಭಕ್ತಿ ಭಾವನೆಯಿಂದ ತುಂಬಿಹೋಗಿದೆಯೆನಿಸುತ್ತದೆ." ಎಂದರು.

ಹೋಗಲು ಬೇರೆ ಇನ್ನಾವ ಮಾರ್ಗವೂ ಇಲ್ಲದಿದ್ದಾಗ ಸನ್ಯಾಸ ಜೀವನದ ಈ ದಾರಿಯನ್ನು ತಮ್ಮ ಜೀವನದ ಮಾರ್ಗವಾಗಿ ಆರಿಸಿಕೊಂಡವರು ಓಮ್ ನಾಥ್. ಇನ್ನೂ ಚಿಕ್ಕ ಮಗುವಾಗಿದ್ದಾಗ ತಂದೆ ತಾಯಿಗಳೊಂದಿಗೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದರಂತೆ. ಆ ಬಸ್ ಕೋಡುಗಲ್ಲಿನಿಂದ ಕೆಳಕ್ಕೆ ಬಿದ್ದುಬಿಟ್ಟಿತು. ಅವರ ತಂದೆ ತಾಯಿಗಳು ತೀರಿಕೊಂಡರು. ಅಘೋರಿ ಪಂಥಕ್ಕೆ ಸೇರಿದ ಸಾಧುವೊಬ್ಬ ಈ ಅನಾಥ ಮಗುವನ್ನು ತನ್ನ ಆಶ್ರಯಕ್ಕೆ ತೆಗೆದುಕೊಂಡನು. ಈ ಅನಾಥ ಮಗುವೇ ಮುಂದೆ ಸಾಧು ಓಮ್ ನಾಥ್ ಎನಿಸಿಕೊಂಡಿತು.

ಹಿತವಲ್ಲದ ಕೌಟುಂಬಿಕ ಸಂಬಂಧಗಳು ಕೆಲವೊಮ್ಮೆ ಸನ್ಯಾಸಕ್ಕೆ ಪ್ರಚೋದನ ಕಾರಿಯಾದ ಅಂಶಗಳಾಗಿದ್ದವು. ಸ್ವಾಮಿ ಗೋರಖಗಿರಿ ಮಹಾರಾಷ್ಟ್ರದ ಒಂದು ಹಳ್ಳಿಯವರು. ಅವರ ತಂದೆ ಅಲ್ಲಿಯ ಒಬ್ಬ ಸಣ್ಣ ರೈತರು. ಅವರಿಗೆ ಹದಿನೈದು ವರ್ಷವಾಗಿದ್ದಾಗ ತಾಯಿಯನ್ನು ಕಳೆದುಕೊಂಡರು. ಅಗ ಅವರ ತಂದೆ ಎರಡನೇ ಮದುವೆಯಾದರು. ಅವರ ಮಲತಾಯಿಗೆ ಮೂರು ವರ್ಷಗಳಲ್ಲಿ ಎರಡು ಮಕ್ಕಳಾದುವು. ಆ ಮಲತಾಯಿ ಇವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ಅವರು ಏನೇ ಮಾಡಿದರೂ ಅದನ್ನು ಏಕೆ ಮಾಡಿದೆ ಎಂದು ಪ್ರಶ್ನಿಸುತ್ತಿದ್ದರು ಮತ್ತು ಮಾಡಿದ್ದೆಲ್ಲವನ್ನೂ ಟೀಕಿಸುತ್ತಿದ್ದರು. ಅವರಿಗೆ ತಾನು ಒಂಟಿ ಮತ್ತು ದುಃಖಿ ಎನಿಸಿತು. ಅವರ ಆತ್ಮೀಯ ಸಂಬಂಧವಿದ್ದುದು ಅವರ ತಾಯಿಯೊಂದಿಗೆ. ಆದರೆ ಆಕೆ ಈಗ ಇರಲಿಲ್ಲ. ಅವರ ತಂದೆ ಅವರ ದೂರುಗಳನ್ನು ಕೇಳಿಸಿಕೊಳ್ಳುತ್ತಲೇ ಇರಲಿಲ್ಲ. ಬದುಕಿರುವುದರಲ್ಲಿ ಏನು ಅರ್ಥವಿದೆ ಎಂದು ಅವರಿಗೆ ಅನೇಕ ಬಾರಿ ಅನ್ನಿಸುತ್ತಿತ್ತು. ಅವರು ಪಟ್ಟಣದಲ್ಲಿಯ ದೇವಸ್ಥಾನಗಳು ಮತ್ತು ಆಶ್ರಮಗಳನ್ನು ಹುಡುಕಿಕೊಂಡುಹೋಗುತ್ತಿದ್ದರು. ಅಲ್ಲಿದ್ದ ಮಹಾತ್ಮರ ಮಾತುಗಳನ್ನು ಕಿವಿಗೊಟ್ಟು ಕೇಳುತ್ತಿದ್ದರು. ಇದು ಅವರ ಮನಸ್ಸಿಗೆ ಹೆಚ್ಚಿನ ನೆಮ್ಮದಿ ನೀಡುತ್ತಿತ್ತು. ಒಂದು ದಿನ ಅವರ ಮಲತಾಯಿ ಎಂದಿಗಿಂತ ಹೆಚ್ಚು ನಿಂದಿಸಿದಾಗ ತಾನು ಸನ್ಯಾಸಿಯಾಗುವುದಾಗಿ ತಮ್ಮ ತಂದೆಗೆ ತಿಳಿಸಿದರು.

"ಸರಿ, ಹೋಗು ಸನ್ಯಾಸಿ ಆಗು"– ಎಂದರು ಅಪ್ಪ.

ಅವರು ಕೂಡಲೇ ಮನೆಬಿಟ್ಟು ಹೋಗಿಬಿಟ್ಟರು. ಅನೇಕ ದೇವಸ್ಥಾನಗಳು ಮತ್ತು ಆಶ್ರಮಗಳಿಗೆ ಎಡತಾಕಿದರು. ಕೆಲವು ದಿನ ಅವರಿಗೆ ಊಟ ಸಿಕ್ಕಿತು. ಇನ್ನುಕೆಲವು ದಿನ ಹಸಿದುಕೊಂಡೇ ಇರಬೇಕಾಯಿತು. ಅವರಿಗೆ ಅದೆಷ್ಟು ಬೇಜಾರಾಗಿಬಿಟ್ಟಿತೆಂದರೆ ಚಲಿಸುವ ರೈಲಿಗೆ ಸಿಕ್ಕಿ ಸಾಯಬೇಕೆಂದು ನಿರ್ಧರಿಸಿದರು. ಆಗ ಅವರಿಗೆ ಇಪ್ಪತ್ತಮೂರು ವರ್ಷ. ಮನಸ್ಸಿನಲ್ಲಿ ನಿರ್ಧಾರಮಾಡಿಕೊಂಡು ಅವರು ರೈಲ್ವೇ ಲೈನಿನ ಹತ್ತಿರ ಸರಕು ಸಾಗಣೆ ಮಾಡುವ ಗುಡ್ಸ್ ಟ್ರೈನಿಗಾಗಿ ಕಾದು ಕೂತರು. ಪ್ರಯಾಣಿಕರ ಟ್ರೈನಿಗಿಂತ ಸರಕು ಸಾಗಣೆಯ ಟ್ರೈನಿನ ಕೆಳಗೆ ಹೋಗುವುದು ಸುಲಭ. ಕಾರಣ ಪ್ರಯಾಣಿಕರ ಟ್ರೈನಿನ ಕೆಳಗೆ ಸ್ವಲ್ಪವೇ ಜಾಗ ಇರುತ್ತದೆ. ಅಗ ಒಬ್ಬ ಸಾಧು ಇವರನ್ನು ನೋಡಿದ. ಈ ಮನುಷ್ಯ ಏನೋ ಮಾಡಿಕೊಳ್ಳೋಕೆ ಹೊರಟಿದ್ದಾನೆಂದು ತಿಳಿದು ಇವರ ಹತ್ತಿರ ಬಂದು ಕಿವಿಯ ಮೇಲೊಂದು ಜೋರು ಹೊಡೆತ ಕೊಟ್ಟು ಅಲ್ಲಿದ್ದುಕೊಂಡು ಏನುಮಾಡುತ್ತೀ ಎಂದು ಕೇಳಿದ. ಗೋರಖ್ ಅಳತೊಡಗಿದ. ನಂತರ ತನ್ನ ವ್ಯಥೆಯ ಕಥೆಯನ್ನು ಹೇಳಿದ. ಅವನೆಷ್ಟು ನಿಷ್ಪ್ರಯೋಜಕನಾಗಿದ್ದನೆಂದರೆ ಪಟ್ಟಣದ ಯಾವ ಸಾಧುವೂ ಅವನನ್ನು ಶಿಷ್ಯನನ್ನಾಗಿ ತೆಗೆದುಕೊಳ್ಳಲು ಸಿದ್ಧರಿರಲಿಲ್ಲ. ಆ ಸಾಧುವು ಅವನಿಗೆ ಬುದ್ಧಿಹೇಳಿ ತನ್ನದೇ ಜೀವನದ ಆರಂಭದ ಕಷ್ಟದ ದಿನಗಳ ಬಗ್ಗೆ ತಿಳಿಸಿ ಹೇಳಿ ತಾನು ಅವನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಲು ಸಿದ್ಧನಿರುವುದಾಗಿ ಹೇಳಿದನು. ಆತ್ಮಹತ್ಯೆಯ ವಿಚಾರ ಬಿಟ್ಟು ಜೀವನದ ನಿಜವಾದ ಗುರಿಯೇನೆಂದು ತಿಳಿದುಕೊಳ್ಳಲು ಹೇಳಿದನು. ಮನುಷ್ಯ ಜನ್ಮ ದೊರೆಯುವುದು ಎಂಬತ್ತನಾಲ್ಕು ಲಕ್ಷ ಜನ್ಮಗಳನ್ನು ಎತ್ತಿಬಂದ ಮೇಲೆ. ಅಂಥದರಲ್ಲಿ ಅಮೂಲ್ಯವಾದ ಮಾನವ ಜೀವನ ಎಂಬ ಆಸ್ತಿಯನ್ನು ಉದ್ದೇಶಪೂರ್ವಕವಾಗಿ ತ್ಯಜಿಸುವ ಮೂರ್ಖತನ ತೋರಬಾರದು ಎಂದು ಹೇಳಿದನು. ಆ ಸಾಧು ಮಹಾತ್ಮನು ಆ ಕೂಡಲೇ ಅವರಿಗೆ ಸನ್ಯಾಸ ದೀಕ್ಷೆ ನೀಡಿದ್ದೇ ಅಲ್ಲದೆ ಒಂದು ಮಂತ್ರ ಮತ್ತು ಗೋರಖ ಗಿರಿ ಎಂಬ ಹೊಸ ಹೆಸರನ್ನೂ ನೀಡಿದನು. ಇದು ಅವರ ಬದುಕಿನಲ್ಲಿ ಒದಗಿಬಂದ ಒಂದು ಹೊಸ ತಿರುವು.

ಸನ್ಯಾಸಿಯ ಜೀವನ ಕಠಿಣವಾದ್ದು. ಅದರಲ್ಲೂ ಪರಿವ್ರಾಜಕ ಸನ್ಯಾಸಿಯಾದವರದು. ಅಂಗವಿಕಲತೆಯೂ ಕೆಲವೊಮ್ಮೆ ಸನ್ಯಾಸ ತೆಗೆದುಕೊಳ್ಳಲು ಕಾರಣವಾಗಬಹುದು.

ಅಜಯ ಸಿಂಗರ ಕಥೆ ಇದಕ್ಕೆ ನಿದರ್ಶನ. ಅವರು ಸನ್ಯಾಸ ತೆಗೆದುಕೊಳ್ಳಲು ಕಾರಣವೇನೆಂದು ನಾನು ಕೇಳಿದಾಗ "ಅದೇನೆಂದರೆ ನನ್ನ ಎಡಗೈ ನಿಷ್ಪ್ರಯೋಜಕವಾಗಿದೆ. ಹಾಗಾಗಿ ನಾನು ಎಲ್ಲವನ್ನೂ ಬಿಟ್ಟು ಭಜನೆ ಮಾಡುತ್ತ ಹೋಗಬೇಕೆಂದು ಯೋಚಿಸಿದೆ".

"ನಿಮ್ಮ ಮನೆಯವರು ಅದಕ್ಕೆ ಒಪ್ಪಿದರೆ?"– ನಾನು ಕೇಳಿದೆ.

"ಇಲ್ಲ. ಯಾವುದೇ ಕುಟುಂಬ ಅದರ ಸದಸ್ಯ ಹೀಗೆ ಮನೆಬಿಟ್ಟು ಹೊರಟು ಹೋಗುವುದನ್ನು ಇಷ್ಟಪಡುವುದಿಲ್ಲ."

" ನೀವು ಇದರ ಚಿಕಿತ್ಸೆಗೆ ಎಲ್ಲಾದರೂ ಹೋಗಿದ್ದಿರಾ?"

"ಖಂಡಿತಾ. ಆದರೆ ಡಾಕ್ಟರುಗಳು ಒಂದು ಶಸ್ತ್ರ ಚಿಕಿತ್ಸೆ ಮಾಡಬೇಕಾಗುತ್ತೆ ಎಂದು ಹೇಳಿದರು. ಜೊತೆಗೆ ಶಸ್ತ್ರ ಚಿಕಿತ್ಸೆ ಮಾಡಿದಮೇಲೂ ಇದು ಸರಿಹೋಗುತ್ತೆ ಎನ್ನುವುದಕ್ಕೆ ಏನೂ ಗ್ಯಾರಂಟಿ ಇಲ್ಲ ಎಂದರು".

"ನಾನು ಇದರ ಬಗ್ಗೆ ಯಾತಕ್ಕೆ ಕೇಳುತ್ತಾ ಇದ್ದೀನಿ ಅಂದರೆ ನಾನು ಒಬ್ಬ ವೈದ್ಯ. ಕೈ ಪೂರಾ ಸರಿಹೋಗದೆ ಇದ್ದರೂ ಚಿಕಿತ್ಸೆಯ ನಂತರ ಅದು ಮೊದಲಿಗಿಂತ ಖಂಡಿತಾ ಉತ್ತಮವಾಗುತ್ತೆ ಅಂತ ನನಗೆ ಅನ್ನಿಸುತ್ತೆ. ಹೋಗಲಿ ಜೀವನಕ್ಕೆ ನಿಮ್ಮ ತಂದೆ ತಾಯಿ ಏನು ಮಾಡುತ್ತಾರೆ ಅದನ್ನು ಹೇಳಿ."

" ಅವರು ಒಂದು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು."

"ಸೋದರ ಸೋದರಿಯರಿದ್ದಾರೆಯೆ?"

"ನನಗೆ ಸೋದರಿಯರು ಯಾರೂ ಇಲ್ಲ. ಆದರೆ ಮೂರು ಜನ ತಮ್ಮಂದಿರಿದ್ದಾರೆ"

ನಿಮ್ಮ ಕುಟುಂಬದ ಇತರೆ ಸದಸ್ಯರೆಲ್ಲ ಆರೋಗ್ಯವಾಗಿದ್ದಾರೆಯೇ?

"ನಮ್ಮ ಕುಟುಂಬದ ಇತರೆಯವರೆಲ್ಲ ಚೆನ್ನಾಗಿದ್ದಾರೆ. ಯಾವುದೇ ಕಾಯಿಲೆ ಕಸಾಲೆ ಇಲ್ಲ."

"ಎಷ್ಟು ದಿನದಿಂದ ಈ ಕೈ ಹೀಗಿದೆ?"

" ಕಳೆದ ಐದಾರು ವರ್ಷಗಳಿಂದ"

" ಅದರೆ ಕಳೆದ ಹತ್ತು ವರ್ಷಗಳಿಂದ ನೀವು ಸಾಧು ಆಗಿದ್ದೀನಿ ಅಂತ ಹೇಳಿದಿರಿ. ಅದರರ್ಥ ನಿಮ್ಮ ಕೈಯಿನ ಸಮಸ್ಯೆಯಿಂದ ನೀವು ಸಾಧು ಆಗಲಿಲ್ಲ?"

"ಅದಕ್ಕೆ ಮುಂಚೆಯೂ ನಾನು ಸಾಧು ಆಗಬೇಕೆಂದು ಬಯಸಿದ್ದೆ. ನಾನು ಆಗಿಂದಾಗ್ಗೆ ಮನೆಬಿಟ್ಟು ಸನ್ಯಾಸಿಗಳ ಜೊತೆ ಇರುತ್ತಾ ಇದ್ದೆ."

"ಅದರರ್ಥ ನೀವು ಸಾಧು ಆದಾಗ ನಿಮ್ಮ ಕೈ ಸರಿಯಾಗಿತ್ತು ಅಂತ ತಾನೆ?"

"ಹೌದು ಅದು ಸರಿಯಾಗಿತ್ತು. ನಾನು ಸಾಧುಗಳಿಗೆ ಅಡಿಗೆ ಮಾಡಿಹಾಕುತ್ತಾ ಇದ್ದೆ. ಕೆಲವು ಸಲ ಐವತ್ತು ಅರುವತ್ತು ಜನ ಇರುತ್ತಿದ್ದರು. ಆಶ್ರಮದಲ್ಲಿ ಅಡಿಗೆ ಮಾಡುವವನಾಗಿದ್ದೆ. ಒಮ್ಮೆ ಅಡಿಗೆ ಮಾಡುತ್ತ ಇದ್ದಾಗ ನಾನು ಕೈ ಸುಟ್ಟುಕೊಂಡುಬಿಟ್ಟೆ."

"ನಿಮ್ಮ ಕೈ ಸುಟ್ಟಿರೋದು ನನಗೆ ಕಾಣಿಸುತ್ತೆ. ಆಗಾಗ್ಗೆ ಮನೆಬಿಟ್ಟು ಹೋಗುತ್ತಾ ಇದ್ದೆ ಅಂತ ಹೇಳಿದಿರಿ. ಏಕೆ?"

"ಕೆಲವೊಂದು ಸಮಸ್ಯೆ ಇತ್ತು"

"ಮನೆಯಲ್ಲೆ? ನಿಮ್ಮ ತಂದೆ ತಾಯಿ ನಿಮ್ಮ ಬಗ್ಗೆ ಕೋಪ ಮಾಡಿಕೊಳ್ಳುತ್ತಿದ್ದರೇನು?"

"ನಿಮಗೆ ನಾನು ನಿಜ ಸಂಗತಿ ಹೇಳ್ತೀನಿ. ಹಳ್ಳಿಯಲ್ಲಿ ನಮ್ಮ ತಂದೆಯ ಬಗ್ಗೆ ತುಂಬ ಗೌರವ ಇತ್ತು. ನಾನು ಬೇರೆ ಹುಡುಗರ ಜೊತೆ ಹೊರಗೆ ಹೋದಾಗ ಅಲ್ಲಿ ಬೇರೆ ಯಾರೇ ತಪ್ಪು ಮಾಡಿದರೂ ಶಿಕ್ಷೆ ನನಗೆ ಸಿಗುತ್ತಿತ್ತು."

"ಅಂದರೆ ನೀವು ಕೆಟ್ಟ ಸಹವಾಸದಲ್ಲಿದ್ದಿರಿ"

"ಹಳ್ಳಿಯಲ್ಲಿ ಇದ್ದ ಹುಡುಗರೆಲ್ಲಾ ಅದೇ ಥರದವರಾದರೆ ನಾನು ತಾನೆ ಏನು ಮಾಡಕ್ಕಾಗುತ್ತಿತ್ತು. ನಾನು ಅವರ ಜೊತೆ ಹೋಗಲೇ ಬೇಕಾಗುತ್ತಿತ್ತು. ನಾನು ಮನೆಯಲ್ಲಿ ಯಾವಾಗಲೂ ಒಬ್ಬನೇ ಇರಲಾಗುತ್ತಿರಲಿಲ್ಲ. ಹಾಗಾಗಿ ಮನೆಬಿಟ್ಟೆ."

"ಊರಿನ ಜನ, ಅದರಲ್ಲೂ ಮುಖ್ಯವಾಗಿ ನಿಮ್ಮ ತಂದೆ ತಾಯಿಗಳು, ನೀವು ಮನೆಬಿಟ್ಟು ಹೋಗುವ ನಿರ್ಧಾರ ಮಾಡಿದಾಗ ಅವರುಗಳು ಏನು ಹೇಳಿದರು?"

"ಎಲ್ಲರೂ ಹೋಗಬೇಡ ಅಂತ ಹೇಳಿದರು."

"ಹಾಗಾದರೆ ನೀವು ಯಾವತ್ತೂ ವಾಪಸ್ ಹೋಗಲೇ ಇಲ್ಲ?"

"ಕೈ ಸುಟ್ಟುಕೊಂಡ ಮೇಲೆ ನಾನು ಹೋದದ್ದು ನಿಜ. ನಮ್ಮ ತಂದೆ-ತಾಯಿಗಳು- "ನೀನು ಇಲ್ಲೇ ಇದ್ದುಬಿಡು. ಕುಟುಂಬ ನಿನ್ನನ್ನು ನೋಡಿಕೊಳ್ಳುತ್ತೆ"- ಎಂದು ಹೇಳಿದರು. ಆದರೆ- "ಒಂದು ವೇಳೆ ನಾನು ಇಲ್ಲೇ ಉಳಿದುಕೊಂಡು ಮದುವೆಯಾದ ನಂತರದಲ್ಲಿ ತಮ್ಮಂದಿರು ನನಗೆ ಬೆಂಬಲ ಕೊಡದೆ ಹೋದರೆ ಆಗ ನಾನು ಏನು ಮಾಡಲಿ?"- ಎಂದು ಮನಸ್ಸಿನಲ್ಲೇ ಯೋಚಿಸಿದೆ.

"ಮೊದಲ ಆರು ವರ್ಷ, ನಿಮ್ಮ ಕೈ ಸುಡದೆ ಸರಿಯಾಗಿತ್ತಲ್ಲ ಆಗ ಏನು ಮಾಡಿದಿರಿ?"

"ನಾನು ನೇರವಾಗಿ ಹರಿದ್ವಾರಕ್ಕೆ ಹೋದೆ. ಚಿಕ್ಕಂದಿನಿಂದಲೇ ನನಗೆ ಚೆನ್ನಾಗಿ ಅಡಿಗೆ ಮಾಡುವುದಕ್ಕೆ ಬರುತ್ತಿತ್ತು. ಸಾಧುಗಳು ಆಶ್ರಮದಲ್ಲಿ ಅಡಿಗೆಯವನಾಗಿ ಇದ್ದುಬಿಡಲು ಹೇಳಿದರು. ಒಂದು ದಿನ ನನ್ನ ಕೈ ಸುಟ್ಟುಹೋಯಿತು. ಅವರು ಚಿಕಿತ್ಸೆ ಮಾಡಿಸಿದರೂ ಗಾಯ ಸರಿಯಾಗಿ ವಾಸಿಯಾಗಲಿಲ್ಲ. ಆಗ ಅಲ್ಲಿಂದ ಹೊರಟುಬಿಟ್ಟೆ."

"ನೀವು ಸನ್ಯಾಸ ದೀಕ್ಷೆ ತೆಗೆದುಕೊಂಡಿರಾ?"

ಇಲ್ಲ, ದೀಕ್ಷೆ ತೆಗೆದುಕೊಳ್ಳಲಿಲ್ಲ. ನಾನು ಕೇವಲ ಅಲೆಮಾರಿ(ತಿರುಗಾಟದ) ಸಾಧು ಅಷ್ಟೆ. ನನ್ನ ಸಮಯ ಬಂದಾಗ ದೀಕ್ಷೆ ತೆಗೆದುಕೊಳ್ಳುತ್ತೀನಿ. ಕಾಲ ಪಕ್ವವಾಗುವವರೆಗೂ ಯಾರೂ ದೀಕ್ಷೆ ತೆಗೆದುಕೊಳ್ಳಲಾಗುವುದಿಲ್ಲ."

"ನಿಮಗೆ ನಂಬಿಕೆ ಇದೆಯಾ?ದೇವರ ಬಗ್ಗೆ ಯೋಚಿಸುತ್ತೀರಾ?"

"ಖಂಡಿತವಾಗಿಯೂ ನಾನು ಭಕ್ತಿಯಲ್ಲಿ ನಂಬಿಕೆ ಇರುವವನು. ಹಾಗೆ ನಂಬಿಕೆ ಇಲ್ಲದೆ ಹೋಗಿದ್ದರೆ ಹೀಗೆ ಸಾಧುಗಳೊಂದಿಗೆ ಸಂಚರಿಸುತ್ತಿರಲಿಲ್ಲ."

"ದೇವರನ್ನು ಕಾಣಬೇಕೆಂಬ ಕಾರಣದಿಂದ ಹೀಗೆ ಸಾಧುವಿನ ಹಾಗೆ ಸಂಚರಿಸುತ್ತಾ ಇದ್ದೀರೋ ಅಥವಾ ನಿಮ್ಮ ಕೈ ಸುಟ್ಟುಹೋದದ್ದರಿಂದಾಗಿ ವಿಧಿಯಿಲ್ಲದೆ ಹೀಗೆ ಮಾಡುತ್ತಿದ್ದೀರೋ?"

" ನನಗೆ ದೇವರಲ್ಲಿ ನಂಬಿಕೆ ಇದೆ. ಸಂದರ್ಭಗಳು ಕೂಡ ನನ್ನನ್ನು ನಿರುಪಾಯನನ್ನಾಗಿ ಮಾಡಿವೆ."

"ಏನು ಹಾಗಂದರೆ"

"ನಾನು ಒಳಗೊಳಗೇ ಭಗ್ನಗೊಂಡಿದ್ದೇನೆ. ನಾನು ಯಾವಾಗಲೂ ದುಃಖಿ. ನಾನು ಚೆನ್ನಾಗಿರಬೇಕಾಗಿತ್ತು ಅನ್ನಿಸುತ್ತೆ. ಆಗ ನಾನೂ ಬೇರೆಯವರ ಹಾಗೆಯೇ ಕೆಲಸಮಾಡಿ ನೀವು ಮಾಡುತ್ತಿದ್ದೀರಲ್ಲ ಹಾಗೆ ಜನರಿಗೆ ದಾನ, ಧರ್ಮ ನೀಡಬಹುದಾಗಿತ್ತು."

"ನೀವು ಕಾಲ ಹೇಗೆ ಕಳೆಯುತ್ತೀರಿ?"

"ಅದು ಸಂದರ್ಭವನ್ನವಲಂಬಿಸಿದೆ. ಒಳ್ಳೆ ಜೊತೆ ಸಿಕ್ಕಿದರೆ ಇತರೆ ಸಾಧುಗಳೊಂದಿಗೆ ಸಂಚಾರ ಮಾಡುತ್ತೀನಿ. ಹಾಗೆ ಜೊತೆ ಸಿಕ್ಕದೆ ಇದ್ದಾಗ ನನಗೆ ಎಲ್ಲಿ ಬೇಕೋ ಅಲ್ಲಿಗೆ ಹೋಗುತ್ತೀನಿ. ಸಂಚಾರ ಮಾಡಬೇಕು ಅಂತ ಮನಸ್ಸಿಗೆ ಅನ್ನಿಸಿಬಿಟ್ಟರೆ ನಾನು ಯಾವುದಕ್ಕೂ ಕಾಯುವುದಿಲ್ಲ."

* * *

ದೌರ್ಭಾಗ್ಯವನ್ನು ತಪ್ಪಿಸುವ ಸಲುವಾಗಿ ಒಬ್ಬ ಸಾಧು ಈ ರೀತಿಯ ಸಾಧುಗಳ ಜೀವನ ಮಾರ್ಗವನ್ನು ಅಳವಡಿಸಿಕೊಂಡಿದ್ದನು. ಆ ನಂತರದಲ್ಲಿ ಈ ಜೀವನ ತನಗೆ ಹೊಂದುತ್ತದೆಂದು ಕಂಡುಕೊಂಡನು. ಆತ ಹೇಳಿದ್ದು:

"ನಾನು ಇಪ್ಪತ್ತು ವರ್ಷದವನಾಗಿದ್ದಾಗ ಜ್ಯೋತಿಷಿಯೊಬ್ಬನು ನಾನು ಇಪ್ಪತ್ತಮೂರನೇ ವಯಸ್ಸಿನಲ್ಲಿ ತೀರಿಹೋಗುತ್ತೇನೆಂದು ನನ್ನ ತಂದೆ-ತಾಯಿಗಳಿಗೆ ತಿಳಿಸಿದನು. ಸನ್ಯಾಸಿಯಾಗಿಬಿಟ್ಟರೆ ಇಂಥ ಭವಿಷ್ಯವಾಣಿಗಳು ನಿಜವಾಗುವುದನ್ನು ತಪ್ಪಿಸಬಹುದೆಂಬ ಒಂದು ಸಾಮಾನ್ಯ ನಂಬಿಕೆ ಜನರಲ್ಲಿದೆ. ಅಷ್ಟುಹೊತ್ತಿಗೆ ನಾನು ನನ್ನ ಪ್ರೌಢಶಾಲೆಯ ಹತ್ತನೇ ತರಗತಿಯನ್ನು ಮುಗಿಸಿದ್ದೆ. ನನ್ನ ತಂದೆ-ತಾಯಿಗಳು ನನ್ನನ್ನು ಒಬ್ಬ ಗುರುವಿಗೆ ಒಪ್ಪಿಸಿಬಿಡಲು ನಿರ್ಧರಿಸಿದರು. ನನ್ನನ್ನು ಆಶ್ರಮಕ್ಕೆ ಕಳಿಸಿಕೊಟ್ಟರು. ನನಗೆ ಇಪ್ಪತ್ತಮೂರು ವರ್ಷ ಆದಾಗ ಆಶ್ರಮಕ್ಕೆ ಬಂದರು. ಸ್ವಲ್ಪ ಹಣ ಕೊಟ್ಟು ನನ್ನನ್ನು ವಾಪಸ್ ಕರೆದುಕೊಂಡು ಹೋಗಲು ಬಯಸಿದರು. ಆದರೆ ನಾನು ಹಿಂತಿರುಗಲು ನಿರಾಕರಿಸಿದೆ."

"ಸಾಧುವಾಗುಳಿಯಬೇಕೆಂಬುದು ನಿಮ್ಮ ಸ್ವಂತ ನಿರ್ಧಾರವೋ ಅಥವಾ ನಿಮ್ಮ ಗುರುವಿನ ಒತ್ತಾಯವೋ?"

"ಅದು ನನ್ನದೇ ನಿರ್ಧಾರ."

"ಕಾರಣ?"

"ನನ್ನ ಗುರುವಿನ ಮಾತುಗಳು ಮತ್ತು ಧರ್ಮಗ್ರಂಥಗಳ ಓದು ನನಗೆ ಬದುಕಿನ ಬಗೆಗೆ ತಿಳಿವು ನೀಡಿದ್ದುವು. ಜೀವನವೆಂದರೆ ನೋವು, ರೋಗ, ದುಃಖ, ಮತ್ತು ಮಮಕಾರಗಳಿಂದ ತುಂಬಿದ್ದೆಂದು ಗೊತ್ತಾಗಿತ್ತು. ಎಷ್ಟರ ಮಟ್ಟಿಗೆ ಎಂದರೆ ಶ್ರೀಮಂತ ವ್ಯಕ್ತಿ ಕೂಡ ಸಂಕಷ್ಟಕ್ಕೆ ಈಡಾಗುತ್ತಾನೆ. ನಾನೊಂದು ವೇಳೆ ಸನ್ಯಾಸಿಯ ಬದುಕನ್ನು ನಡೆಸಿದ್ದೇ ಆದರೆ ನನಗೆ ಮೋಕ್ಷ ಪ್ರಾಪ್ತಿಯಾಗುತ್ತದೆ. ಮೋಕ್ಷವೆಂದರೆ ಇಷ್ಟೆಲ್ಲ ದುಃಖ, ನೋವುಗಳಿಂದ ತುಂಬಿರುವ ಈ ಮಾನವ ಬದುಕಿಗೆ ಮತ್ತೆಂದೂ ಬರದಿರುವುದು. ಗುರುವಿನೊಂದಿಗೆ ನಾನು ಇದ್ದ ವರ್ಷಗಳಲ್ಲಿ ನಾನು ಈ ಇಹ ಲೋಕದ ಬದುಕಿನ ಬಗೆಗೆ ವೈರಾಗ್ಯವನ್ನು ಬೆಳೆಸಿಕೊಂಡಿದ್ದೆ. ದೈಹಿಕ ಸಂಕಷ್ಟಗಳಿಂದ ಬಿಡುಗಡೆಗಾಗಿ ಎದುರು ನೋಡುತ್ತಿದ್ದೆ."

ತಮ್ಮ ಜೀವನದಲ್ಲಿ ಒದಗಿಬಂದ ಸಂಕಷ್ಟಗಳ ಕಾರಣದಿಂದ ಸನ್ಯಾಸ ತೆಗೆದುಕೊಳ್ಳಬೇಕಾಗಿ ಬಂದವರು, ತಮ್ಮ ಸ್ವಭಾವಕ್ಕನುಗುಣವಾಗಿ ನಡೆದುಕೊಳ್ಳುತ್ತಿದ್ದವರಿಗಿಂತ ಕಡಿಮೆ ಸಂತೃಪ್ತರಾಗಿದ್ದರು.

ಪಚಪನ್ ನಾರಾಯಣರಿಗೆ ಸಾಧುವಿನ ಜೀವನವೆಂದರೆ ವೃದ್ಧಾಪ್ಯದ ಸವಾಲುಗಳನ್ನು ಎದುರಿಸುವ ಒಂದು ಬಗೆಯೆನಿಸಿತ್ತು.

ನಾವು ಬದರೀನಾಥಕ್ಕೆ ಹೋಗುವ ಮಾರ್ಗದಲ್ಲಿ ಜೋಷಿಮಠದಲ್ಲಿ ತಂಗಿದ್ದೆವು. ಇಲ್ಲಿ ಸಣ್ಣ ಹನುಮಾನ್ ದೇವಸ್ಥಾನದ ಹತ್ತಿರ ಬಿಸಿಲು ಕಾಯಿಸಿಕೊಳ್ಳತ್ತಿದ್ದ ಒಬ ವೃದ್ಧ ಸಾಧುವನ್ನು ಭೇಟಿಮಾಡಿದೆವು. ಆ ಮನುಷ್ಯ ತುಂಬ ಕಪ್ಪಗಿದ್ದನು. ತಲೆತುಂಬ ದಟ್ಟವಾದ ಬಿಳಿ ಕೂದಲು. ಕಾಷಾಯ ವಸ್ತ್ರಧಾರಿಯಾಗಿ ರುದ್ರಾಕ್ಷಿ ಮಾಲೆಯನ್ನು ಧರಿಸಿದ್ದನು. ಹೆಸರೇನೆಂದು ಕೇಳಿದ್ದಕ್ಕೆ 'ಪಚಪನ್ ನಾರಾಯಣ್' ಅಂದರೆ –ಐವತ್ತೈದು ದೇವರುಗಳು ಎಂದು ಹೇಳಿ ನಕ್ಕನು. ನನಗೆ ಯಾವುದೇ ಕುಟುಂಬವಿಲ್ಲ, ಆಸ್ತಿಯಿಲ್ಲ–ಏನೇನೂ ಇಲ್ಲ. ಕೆಲವರು ನನ್ನನ್ನು ಹುಚ್ಚ ಎನ್ನುತ್ತಾರೆ. (ಆಮೇಲೆ ಅದನ್ನು ತಿದ್ದಿಕೊಂಡು) ಹುಚ್ಚ ಎಂದು ಕರೆಯುತ್ತಿದ್ದರು, ಆದರೆ ಈಗಲ್ಲ. ಈ ದೇವಸ್ಥಾನವನ್ನು ನೋಡಿಕೊಳ್ಳುವುದು ಬಿಟ್ಟು ನಾನೆಲ್ಲೂ ಹೋಗುವುದಿಲ್ಲ.

"ನೀವು ಹುಟ್ಟಿದ್ದೆಲ್ಲಿ?"

"ತಮಿಳುನಾಡಿನ ಮದುರೈ ಜಿಲ್ಲೆಯಲ್ಲಿ."

"ನಿಮ್ಮ ತಂದೆ ತಾಯಿ ಏನು ಮಾಡುತ್ತಿದ್ದರು?"

"ಅವರು ಹೊಲ-ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದರು."

"ನಿಮ್ಮ ಬಾಲ್ಯ ಹೇಗೆ ಕಳೆಯಿತು?"

"ಜನರ ಮನೆಗಳಲ್ಲಿ ಆಳಿನ ಕೆಲಸ ಮಾಡುತ್ತಿದ್ದೆ. ಆಮೇಲೆ ದೇವಸ್ಥಾನದಲ್ಲಿ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದೆ. ಕೆಲವುಸಲ ದೇವಸ್ಥಾನದಲ್ಲಿ ಅಡುಗೆಯ ಕೆಲಸಕ್ಕೆ ಸಹಾಯ ಮಾಡುತ್ತಿದ್ದೆ. ಕೊನೆಗೆ ಅದೆಲ್ಲ ಮಾಡಿ ಸಾಕಾಗಿ ಮುಂಬಯಿಗೆ ಹೋಗಿಬಿಟ್ಟೆ. ಇದು ನಾನು ಮೂವತ್ತು ವರ್ಷದವನಾಗಿದ್ದಾಗ ನಡೆದದ್ದು. ನನಗೆ ಕುಟುಂಬ ಇರಲಿಲ್ಲ, ಮದುವೆಯಾಗಿರಲಿಲ್ಲ. ನಮ್ಮ ತಂದೆ ತಾಯಿಗಳಿಗೆ ಹೇಳದೆ ಕೇಳದೆ ಮನೆಬಿಟ್ಟು ಹೊರಟುಬಂದಿದ್ದೆ.

ಮುಂಬಯಿಯಲ್ಲಿ ನಾನು ಇಪ್ಪತ್ತೈದು ವರ್ಷ ಇದ್ದೆ. ಒಬ್ಬ ಸೇಠ್ ಮಾಲೀಕನಾಗಿದ್ದ ಕಟ್ಟಡದಲ್ಲಿ ಲಿಫ್ಟ್‌ಮನ್ ಆಗಿ ಕೆಲಸ ಮಾಡಿದೆ. ನನಗೆ ವಯಸ್ಸಾಗಿತ್ತು. ಆಗ ಸೇಠ್ ಕೆಲಸ ಬಿಡಬೇಕೆಂದು ಹೇಳಿದ್ದರಿಂದ ನಾನು ಅಲ್ಲಿಂದ ಹೊರಡಬೇಕಾಯಿತು. ನಂತರ ನಾನು ದೆಹಲಿಗೆ, ಅಲ್ಲಿಂದ ಕಾಶಿಗೆ ಹೋದೆ. ದೆಹಲಿಯಲ್ಲಿ ನಾನು ಒಂದು ಆಶ್ರಮದಲ್ಲಿದ್ದೆ. ಐದು ವರ್ಷಗಳ ಕಾಲ ಒಂದು ಊರಿನಿಂದ ಮತ್ತೊಂದು ಊರಿಗೆ ಪಯಣಿಸುತ್ತ ನಾನು ಇಲ್ಲಿಗೆ ಬಂದೆ."

"ನಿಮಗೆ ಯಾರಾದರೂ ಗುರುಗಳು ಇದ್ದರೆ?"

"ಹೌದು ಇದ್ದರು. ಕಾಶಿಯಲ್ಲಿ ಒಬ್ಬ ನಾಗಾ ಬಾಬಾ ಅವರಿಂದ ನಾನು ದೀಕ್ಷೆ ಪಡೆದಿದ್ದೆ."

"ನೀವು ಇಲ್ಲಿಗೆ ಬಂದಮೇಲೆ ಏನಾಯಿತು?"

"ಇದೇ ದೇವಸ್ಥಾನವನ್ನು ನೋಡಿಕೊಳ್ಳುತ್ತಿದ್ದ ಸಾಧುವಿನ ಸೇವೆ ಮಾಡಿಕೊಂಡಿದ್ದೆ. ನಾನು ಯಾವುದೇ ಕೆಟ್ಟ ಕೆಲಸ ಮಾಡುವುದಿಲ್ಲ. ಕೆಲವು ಸಲ ಟೆಲಿಫೋನ್ ಬೂತ್ ಆಗಿದ್ದ ಒಂದು ಅಂಗಡಿಯ ಹೊರಗೆ ಕೂತುಕೊಳ್ಳುತ್ತೇನೆ. ಕೆಲವೊಂದು ಸಲ ಪ್ರವಾಸಿಗರು ಈ ಪ್ರದೇಶದ ಬಗ್ಗೆ ತಿಳಿಯಲಿಚ್ಛಿಸುತ್ತಾರೆ. ಅವರಿಗೆ ನಾನು ಸೂಚನೆಗಳನ್ನು, ಮಾರ್ಗದರ್ಶನವನ್ನು ನೀಡುತ್ತೇನೆ. ಅವರು ಸ್ವಲ್ಪ ಹಣ ಕೊಡುತ್ತಾರೆ"

"ನೀವು ಸೇವೆ ಸಲ್ಲಿಸುತ್ತಿದ್ದ ಸಾಧುವಿಗೇನಾಯಿತು?"

ಅವರು ತೀರಿಕೊಂಡರು. ಜನ ಅವರ ಸಾಮಾನುಗಳನ್ನೆಲ್ಲ ತೆಗೆದುಕೊಂಡು ಹೋದರು. ಈ ಕೊಠಡಿಯೊಂದು ಮಾತ್ರ ಮೊದಲಿನಂತೆಯೇ ಇತ್ತು. ನಾನು ಇಲ್ಲಿ ಕುಳಿತು ತೀರಿಕೊಂಡ ವೃದ್ಧ ಸಾಧು ಮಾಡುತ್ತಿದ್ದ, ಈ ದೇವಾಲಯುವನ್ನು ನೋಡಿಕೊಳ್ಳುವುದೇ ಮೊದಲಾದ ಕೆಲಸಗಳನ್ನೆಲ್ಲ ನೋಡಿಕೊಳ್ಳುತ್ತೇನೆ."

"ಒಬ್ಬರೇ ಇರುವುದಕ್ಕೆ ನಿಮಗೆ ಕಷ್ಟ ಎನ್ನಿಸುವುದಿಲ್ಲವೆ?"

"ಜನ ಒಂದೊಂದು ಸಲ ನನ್ನನ್ನು ಹುಚ್ಚ ಎನ್ನುತ್ತಾರೆ"

"ಯಾವಾಗಲಾದರೂ ನಿಮಗೆ ನಿಮ್ಮ ಮನೆಯವರ ಕೊರತೆ ಕಾಡಿಸುತ್ತದೆಯೆ?"

"ಒಂದು ಸಲ ನಾನು ಅಲ್ಲಿಗೆ ಹೋಗಿದ್ದೆ. ನಾನು ಕಾಷಾಯ ವಸ್ತ್ರ ಧರಿಸಿರುವುದು, ಜಟೆ ಬಿಟ್ಟಿರುವುದು ಗಡ್ಡ ಬಿಟ್ಟಿರುವುದು ಇದನ್ನೆಲ್ಲ ನೋಡಿ ಜನ ನಕ್ಕರು. ನನ್ನನ್ನು ಒಂದು ದೇವಸ್ಥಾನಕ್ಕೆ ಕರೆದುಕೊಂಡುಹೋಗಿ ಜಟೆ ಗಡ್ಡ ಮೀಸೆ ಎಲ್ಲವನ್ನೂ ಬೋಳಿಸಿದರು. ಅಲ್ಲಿ ಕೆಲವು ತಿಂಗಳಿದ್ದೆ. ಆಮೇಲೆ ಬೇಸರವಾಗಿ ವಾಪಸ್ ಇಲ್ಲಿಗೆ ಬಂದೆ. ಈ ವಯಸ್ಸಿನಲ್ಲಿ ನನಗೆ ಯಾವುದೇ ಕೆಲಸ ಮಾಡಲಾಗುವುದಿಲ್ಲ. ಊಟ ಮಾಡಬಲ್ಲೆ ಅಷ್ಟೆ.(ಅವರು ಮತ್ತೆ ನಕ್ಕರು)"

"ನೀವು ಇಲ್ಲಿ ಸುತ್ತ ಮುತ್ತ ಎಲ್ಲ ಸಂಚಾರ ಮಾಡಿದ್ದೀರಾ?"

"ಒಂದು ಸಲ ಬದರಿಗೆ ಹೋಗಿದ್ದೆ. ಅಲ್ಲಿ ಸಾಧುಗಳ ಒಂದು ಗುಂಪಿನೊಂದಿಗೆ ಇದ್ದೆ. ಆದರೆ ಅವರು ನನಗೆ ಮೋಸ ಮಾಡಿದರು. ಅವರುಗಳು ಕೆಟ್ಟದ್ದನ್ನೂ ಮಾಡುತ್ತಿದ್ದರು- ಗಾಂಜಾ ಸೇದುತ್ತಿದ್ದರು. ನಾನೆಂದೂ ಅಂಥ ಕೆಟ್ಟ ಕೆಲಸ ಮಾಡಲ್ಲ........."

* * *

ಸಾಧುವಾದವನು ತನ್ನ ಕುಟುಂಬದೊಂದಿಗೆ ಯಾವುದೇ ಸಂಬಂಧ ಇಟ್ಟುಕೊಳ್ಳಬಾರದೆಂಬುದು ಸಮಾಜದ ನಿರೀಕ್ಷೆ. ಆದರೆ ಅನೇಕ ಸಾಧುಗಳಿಗೆ ತಮ್ಮ ಕುಟುಂಬದೊಂದಿಗೆ ಒಂದು ಸೂಕ್ಷ್ಮವಾದ ಸಂಬಂಧದ ಎಳೆ ಅನೇಕ ವೇಳೆ ಇರುತ್ತದೆ. ಕುಟುಂಬದ ಸದಸ್ಯರು ಯಾರೆಲ್ಲ ಬದುಕಿದ್ದಾರೆ ಮತ್ತು ಚೆನ್ನಾಗಿದ್ದಾರೆ ಎಂಬುದು ಅವರಿಗೆ ಗೊತ್ತಿರುವಂತೆ ತೋರುತ್ತಿತ್ತು. ಒಬ್ಬ ಮನುಷ್ಯನಂತೂ ಸೈಬರ್ ಕೆಫೆಯ ಮೂಲಕ ಆಗಾಗ್ಗೆ ಇ-ಮೇಲ್ ಮಾಡುತ್ತ ಸಂಪರ್ಕ ಇಟ್ಟುಕೊಂಡಿದ್ದನು. ಕುಟುಂಬದವರ ದುಃಖದುಮ್ಮಾನಗಳ ಬಗ್ಗೆ ತಿಳಿದು ಮನೆಗೂ ಹೋಗಿಬರುವವರಿದ್ದರು. ಒಬ್ಬ ಯುವ ಸಾಧು ತನ್ನ ಹದಿಮೂರನೆಯ ವಯಸ್ಸಿನಲ್ಲಿ ಮನೆಯವರಿಗೆ ಹೇಳದೆ ಮನೆಬಿಟ್ಟುಬಂದಿದ್ದನು.

"ಮನೆಯುವರಿಗೆ ತಿಳಿಯದಂತೆ ನಾನು ಮನೆಬಿಟ್ಟು ಬಂದಿದ್ದೆ. ನಾನು ಎಲ್ಲಿದ್ದೇನೆಂಬುದು ಯಾರಿಗೂ ಗೊತ್ತಿರಲಿಲ್ಲ. ಸುಮಾರು ಹನ್ನೆರಡು-ಹದಿಮೂರು ವರ್ಷ ಅಲ್ಲಿ ಇಲ್ಲಿ ಅಲೆದಾಡುತ್ತಿದ್ದಾಗ ನನ್ನ ಒಬ್ಬ ಪರಿಚಿತನು ಸಿಕ್ಕಿ- 'ನೀನು ಊರಿಗೆ ಹೋಗಿ ನಿನಗೆ ಜನ್ಮ ಕೊಟ್ಟ ತಾಯಿಯ ಸ್ಥಿತಿ ಹೇಗಿದೆ ಎಂದು ನೋಡಿದ್ದೀಯಾ? ಅವಳು ಅತ್ತೂ ಅತ್ತೂ ಅರೆಜೀವವಾಗಿದ್ದಾಳೆ." - ಎಂದು ಹೇಳಿದ. ಹಾಗಾಗಿ ಹದಿಮೂರು ವರ್ಷಗಳ ನಂತರ ನಾನು ಹಳ್ಳಿಗೆ ಹೋದೆ. ಅಲ್ಲಿ ನೋಡಿದರೆ ಅತ್ತೂ ಅತ್ತೂ ನನ್ನ ತಾಯಿಯ ಎರಡೂ ಕಣ್ಣುಗಳ ದೃಷ್ಟಿ ಹೆಚ್ಚು-ಕಡಿಮೆ ಹೋಗಿಯೇ ಬಿಟ್ಟಿತ್ತು. ನನ್ನನ್ನ ನೋಡಿ ಅಂತೂ ನಾನು ಸಾಧುವಾಗಿದ್ದೇನೆ ಎಂದು ತಿಳಿದು ಸಂತೋಷಪಟ್ಟಳು. ಜನರಂತೂ ನಾನು ಏನಾದರೊಂದು ಅಪರಾಧ ಮಾಡಿ ಓಡಿಹೋಗಿಬಿಟ್ಟಿರಬಹುದು ಎಂದೇ ಸಂದೇಹ ಪಟ್ಟಿದ್ದರು. ಅನಂತರದಲ್ಲಿ ನಮ್ಮ ತಾಯಿಯ ಕಣ್ಣುಗಳು ಬಹಳ ಬೇಗ ಸುಧಾರಿಸಿದವು. ಈ ವರ್ಷದ ದಿವಾಲಿಗೆ ನಾನು ಮತ್ತೆ ನನ್ನ ಹಳ್ಳಿಗೆ ಹೋಗಿದ್ದೆ. ನಮ್ಮ ತಾಯಿ ನನಗೊಂದು ಶಾಲು ಕೊಟ್ಟಳು. ನನ್ನ ಚಿಕ್ಕಮ್ಮ ನನಗೆ ಹೊದೆಯಲು ಬೆಡ್ ಷೀಟ್

ಕೊಟ್ಟಳು. ನನ್ನ ಚಿಕ್ಕಮ್ಮ ಇಪ್ಪತ್ತೆರಡು ವರ್ಷಗಳ ನಂತರ ನನ್ನನ್ನು ನೋಡಿದರೂ ಗುರುತುಹಿಡಿದಳು."

* * *

ನಾನು ಪ್ರಾರಂಭದಲ್ಲಿ ನೀಡಿದ ಕೆಲವು ವಿವರಗಳಿಂದ, ಸನ್ಯಾಸ ಪ್ರಪಂಚಕ್ಕೆ ಪ್ರವೇಶಿಸಲು ಇರುವ ದಾರಿಗಳು ಹಲವಾರು ಎಂಬುದಂತೂ ಸ್ಪಷ್ಟವಾಯಿತು. ಈ ಬಗೆಯ ಕೆಲವು ವೈದೃಶ್ಯಗಳನ್ನು ಎತ್ತಿಹೇಳುವ ಎರಡು ಸಂದರ್ಶನಗಳ ಬಗ್ಗೆ ವಿವರವಾಗಿ ಚರ್ಚಿಸುತ್ತೇನೆ. ಒಂದು ಒಬ್ಬ ಯುವತಿಯ ಕತೆ. ಆಕೆ ತನ್ನ ಗುರಿ ತಲುಪಲು ಹಲವಾರು ವರ್ಷಗಳ ಕಾಲ ಸೆಣಸಿದ್ದೇ ಅಲ್ಲದೆ ಅನೇಕ ಅಡಚಣೆಗಳನ್ನು ದಾಟಬೇಕಾಯಿತು. ಬಹಳಷ್ಟು ಸನ್ಯಾಸಿಗಳು ಪುರುಷರೇ. ಆದರೆ ಅನೇಕ ಸ್ತ್ರೀಯರೂ ಈ ಮಾರ್ಗವನ್ನು ಆಯ್ದುಕೊಳ್ಳುತ್ತಾರೆ. ಎರಡನೆಯದು ಧಾರ್ಮಿಕ ಬದುಕಿನತ್ತ ಆಸಕ್ತನಾದ ಹಾಗೂ ಇಳಿವಯಸ್ಸಿನಲ್ಲಿ ಸನ್ಯಾಸವನ್ನು ತೆಗೆದುಕೊಂಡ ಪುರುಷನೊಬ್ಬನ ಕತೆ.

ಗೀತಾಳ ತಂದೆಗೆ ಅರಬ್ ದೇಶದಲ್ಲಿ ಉದ್ಯೋಗವಿದ್ದುದರಿಂದ ತನ್ನ ತಾಯಿಯ ಕಡೆಯ, ಅಜ್ಜ ತಾತನ ಮನೆಯಲ್ಲಿ ಬೆಳೆದು ಬಂದಳು. ಅವಳ ತಾತ ತುಂಬ ತಿಳಿವಳಿಕೆಯಿದ್ದ, ಹಿಂದೂ ಶಾಸ್ತ್ರಗಳಲ್ಲಿ ಒಳ್ಳೆಯ ಪಾಂಡಿತ್ಯವಿದ್ದ ವ್ಯಕ್ತಿ ಗೀತಾಳಿಗೆ ಅಕ್ಷರಾಭ್ಯಾಸ ಮಾಡಿಸಿದವರು ಮತ್ತು ಅವಳಿನ್ನೂ ಎರಡೂವರೆ ವರ್ಷದವಳಿರುವಾಗಲೇ ಅವಳಿಗೆ ಪೌರಾಣಿಕ ಕಥೆಗಳನ್ನು ಹೇಳುತ್ತಿದ್ದರು. ನಾಲ್ಕನೇ ವಯಸ್ಸಿಗೆ ಅವಳಿಗೆ ಓದುವುದು ಬರೆಯುವುದು ಬರುತ್ತಿತ್ತು. ಇಷ್ಟು ಚಿಕ್ಕ ವಯಸ್ಸಿನಲ್ಲೇ ಅವಳು ಪೌರಾಣಿಕ ಕಥೆಗಳನ್ನೊಳಗೊಂಡ ಪತ್ರಿಕೆಗಳನ್ನು ಓದುತ್ತಿದ್ದಳು. ಹಾಗೆ ನೋಡಿದರೆ ಅವರ ಮನೆಯಲ್ಲಿ ಪತ್ರಿಕೆ ಓದಲು ಅವಕಾಶ ಸಿಕ್ಕ ಮೊದಲ ಹುಡುಗಿ. ಆಮೇಲೆ ಅವಳು ತನ್ನ ಚಿಕ್ಕಮ್ಮನಿಗೆ ಆ ಪತ್ರಿಕೆಯಲ್ಲಿನ ಕಥೆಗಳನ್ನು ಓದಿಹೇಳುತ್ತಿದ್ದಳು. ಇದರ ನಂತರವಷ್ಟೇ ಕುಟುಂಬದ ಇತರೆ ಸದಸ್ಯರಿಗೆ ಪತ್ರಿಕೆ ಓದುವ ಅವಕಾಶ ದೊರೆಯುತ್ತಿತ್ತು.

ಅವರ ತಾತ ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿ ಶಾಲೆಗೆ ಕಳಿಸುವುದನ್ನು ವಿರೋಧಿಸುತ್ತಿದ್ದರೂ ಮನೆಯ ಇತರೆ ಮಕ್ಕಳನ್ನು ಸ್ಕೂಲಿಗೆ ಕಳಿಸುವಂತೆ ತನ್ನನ್ನೂ ಕಳಿಸಬೇಕೆಂದು ಕೇಳಿಕೊಂಡಳು. ಶಾಲೆ ನಡೆಸಿದ ಸಂದರ್ಶನದಲ್ಲಿ ಓದುವುದರಲ್ಲಿ ಹಾಗೂ ಗಣಿತದಲ್ಲಿನ ಅವಳ ಸಾಮರ್ಥ್ಯ ತಿಳಿಯಲು ಪರೀಕ್ಷೆ ನಡೆಸಲಾಯಿತು. ಅವಳ ತಿಳಿವಳಿಕೆ ಆಧರಿಸಿ ಇನ್ನೂ ಮೇಲಿನ ತರಗತಿಗೇ ಸೇರಿಸಿಕೊಳ್ಳಬಹುದಿತ್ತು. ಶಾಲೆಯ ಬಗ್ಗೆ ಅವಳಿಗೆ ತುಂಬ ಪ್ರೀತಿಯಿತ್ತು. ಎಂದೂ ಬೇಸರವೆನಿಸಲಿಲ್ಲ. ಮನೆಯಲ್ಲಿ ಅಧ್ಯಾತ್ಮ ವಿಷಯದ ಸಾಹಿತ್ಯವನ್ನು ಓದುವುದರಲ್ಲಿ ಸಮಯ ಕಳೆಯುತ್ತಿದ್ದಳು.

ಅವಳಿಗೆ ಎಂಟು ವರ್ಷ ವಯಸ್ಸಾಗಿದ್ದಾಗ ಅವಳ ತಂದೆ ವಿದೇಶದಿಂದ ಹಿಂತಿರುಗಿದರು. ಅವರ ಕುಟುಂಬ ಮುಂಬೈಗೆ ತೆರಳಿತು. ಅಲ್ಲಿ ಒಂದು ಆಂಗ್ಲ ಮಾಧ್ಯಮ ಶಾಲೆಗೆ ಅವಳನ್ನು ಸೇರಿಸಿದರು. ಇಲ್ಲಿ ಅವಳಿಗೆ ತೀರಾ ಬೇಸರವೆನಿಸತೊಡಗಿತು. ದುಃಖವೂ ಆಯಿತು. ಓದಿನಲ್ಲಿ ತೀರಾ ಹಿಂದಾದಳು; ಅನುತ್ತೀರ್ಣಳೂ ಆದಳು. ಮತ್ತೆ ಪ್ರಯತ್ನಿಸಲು

ನಿರಾಕರಿಸಿದಳು. ಕೆಲವು ವರ್ಷಗಳ ನಂತರ ಅವರಲ್ಲಿ ಇರಲೆಂದು ಬಂದ ಬಂಧುವೊಬ್ಬನು ಅವಳ ಈ ಅಪಯಶಸ್ಸಿಗೆ ಕಾರಣ ಅವಳ ಇಂಗ್ಲಿಷ್ ಭಾಷಾ ಜ್ಞಾನ ತೀರಾ ಕಳಪೆಯದಾಗಿದ್ದುದು ಎಂದು ಕಂಡುಕೊಂಡನು. ಗೀತಾಳಿಗೆ ಇಂಗ್ಲಿಷ್ ಕಲಿಸುವ ಜವಾಬ್ದಾರಿಯನ್ನು ತಾನೇ ಹೊತ್ತುಕೊಂಡನು. ಅದರ ಪರಿಣಾಮವಾಗಿ ಆ ಹುಡುಗಿ ತನ್ನ ತರಗತಿಯಲ್ಲಿ ಅತ್ಯುನ್ನತ ಸ್ಥಾನಕ್ಕೆ ತಲುಪಿದಳು.

ವೈದ್ಯಳಾಗಬೇಕೆಂದು ಅಪೇಕ್ಷಿಸಿ ಗೀತಾ ಕಾಲೇಜಿಗೆ ಹೋದಳು. ಮೊದಲ ವರ್ಷ ಆಕೆಗೆ ಸ್ವಾಮಿ ದಯಾನಂದರ ಭೇಟಿಯಾಯಿತು. ಗೀತಾಳ ತಂದೆ ತುಂಬಾ ಆಕ್ರಮಣಕಾರಿ ಸ್ವಭಾವದ ವ್ಯಕ್ತಿ. ಹೆಂಡತಿಯೊಂದಿಗೆ ಜಗಳವಾಡುತ್ತಿದ್ದ. ಅವನು ಹಾಕಿದ ಗೆರೆಗಳನ್ನು ಮೀರಿದರೆ ಮಕ್ಕಳನ್ನು ಹೊಡೆಯುತ್ತಿದ್ದ. ಈ ಕಾರಣಗಳಿಂದ ಗೀತಾ ಮನೆಯಲ್ಲಿ ಯಾವತ್ತೂ ಸುಖವಾಗಿರಲಿಲ್ಲ. ಅವಳು ಯಾವುದೇ ಪ್ರಶ್ನೆ ಕೇಳುವಂತಿರಲಿಲ್ಲ. ಸ್ವಾಮೀಜಿಯವರಿಂದ ಅವಳು ತುಂಬ ಪ್ರಭಾವಿತಳಾದಳು. ಕಾರಣ ಅವರು ತುಂಬಾ ಹಾಸ್ಯ ಮನೋಧರ್ಮ ದವರಾಗಿದ್ದರು. ಸರಳರು. ಅವರನ್ನು ಚುಡಾಯಿಸುವುದನ್ನು ಇಷ್ಟಪಡುತ್ತಿದ್ದರು. ಕೆಲವೊಮ್ಮೆ ಸನ್ಯಾಸಿಯಾದವರು ಕೇಳಬಾರದ ಐಸ್ ಕ್ರೀಂ ಬೇಕೆಂದು ಕೇಳುತ್ತಿದ್ದರು. "ನಾನು ಯಾವ ಪ್ರಶ್ನೆ ಕೇಳಿದರೂ ನೀವು ಉತ್ತರ ಹೇಳುತ್ತೀರಾ" ಎಂದು ಪ್ರಶ್ನಿಸುವ ಮೂಲಕ ಅವರನ್ನು ಪರೀಕ್ಷೆಗೊಡ್ಡಿ ಅವರಿಂದ "ನನಗೆ ಉತ್ತರ ಗೊತ್ತಿದ್ದರೆ ಖಂಡಿತವಾಗಿಯೂ ಉತ್ತರಿಸುತ್ತೇನೆ. ಎಂಬ ಉತ್ತರ ಪಡೆದುಕೊಂಡಳು.

"ನಿಮ್ಮನ್ನು ಎಲ್ಲಿ ಭೇಟಿಮಾಡಬಹುದು" ಎಂದು ಕೇಳಿದಳು.

"ಆಶ್ರಮದಲ್ಲೇಕೆ ಆಗಬಾರದು?"

"ನಮ್ಮ ತಂದೆ ಅಲ್ಲಿಗೆ ಬರಲು ಬಿಡುವುದಿಲ್ಲ"

"ಹಾಗಾದರೆ ಎಲ್ಲಿ ಬೇಕಾದರೂ ಭೇಟಿಮಾಡಬಹುದು" ಎಂದರು.

ಆರು ತಿಂಗಳ ಮುಂಚೆ ಒಬ್ಬ ಗೆಳೆಯನ ಮನೆಯಲ್ಲಿ ಅವರನ್ನು ಭೇಟಿಮಾಡಿದಳು. "ನೀನು ನನ್ನ ಮೇಲೆ ಆಕ್ರಮಣ ಮಾಡಿಬಿಡುತ್ತೀನಿ ಅಂತ ಇದ್ದೆ ಏನಾಯಿತು"? ಎಂದು ಅವಳನ್ನು ಲೇವಡಿ ಮಾಡಿದರು.

ಅವಳ ತಂದೆ ಎಲ್ಲ ಗುರುಗಳನ್ನು, ಸ್ವಾಮಿ, ಸನ್ಯಾಸಿಗಳು. ಆಧ್ಯಾತ್ಮ ಶಿಕ್ಷಕರನ್ನು ಮೋಸಗಾರರು ಎಂದು ಜರೆದು ತಿರಸ್ಕರಿಸುತ್ತಿದ್ದರೆಂದು ಒಪ್ಪಿಕೊಳ್ಳಲು ಅವಳು ಸಿದ್ಧಳಿರಲಿಲ್ಲ.

1974ರಲ್ಲಿ ಗೀತಾ ಎಂ.ಬಿ.ಬಿ.ಎಸ್. ಮುಗಿಸಿದಳು. ಆಕೆ ವೈದ್ಯ ಶಿಕ್ಷಣ ಪಡೆಯುತ್ತಿದ್ದಾಗಲೂ ಸ್ವಾಮಿ ದಯಾನಂದರ ಆಶ್ರಮಕ್ಕೆ ನಿಯಮಿತವಾಗಿ ಹೋಗಿಬರುತ್ತಿದ್ದ ಸ್ನೇಹಿತನಿಂದ ನೋಟ್ಸ್ ಪಡೆದುಕೊಂಡು ವೇದಾಂತದ ಅಧ್ಯಯನವನ್ನು ಮುಂದುವರೆಸಿದ್ದಳು. ಎಂ.ಬಿ.ಬಿ.ಎಸ್ ಮುಗಿಸಿದ ನಂತರದಲ್ಲಿ ಸ್ವಾಮೀಜಿಯವರು

ಭಗವದ್ಗೀತೆಯ ಮೇಲೆ ನಡೆಸಿಕೊಟ್ಟ ಹನ್ನೆರಡು ದಿನಗಳ ಕೋರ್ಸಿಗೆ ಹಾಜರಾದಳು. ಇದು ಅವಳಿಗೆ ಒಂದು ದಿವ್ಯದರ್ಶನ ಮೂಡಿಸಿತ್ತು.

"ಈ ಗೀತಾ-ಶಿಕ್ಷಣದ ಅವಧಿಯಲ್ಲಿ ಆದ ಹಾಗೆ ಎಂದೂ ಇಂಥದೊಂದು ಆನಂದಾತಿರೇಕದ ಅನುಭವವಾಗಿರಲಿಲ್ಲ"

ಅವಳ ಜೀವಮಾನದುದ್ದಕ್ಕೂ ಏನನ್ನಾದರೂ ಮಾಡಿಮುಗಿಸಿದಾಗ "ಮುಂದೇನು" ಎಂಬ ಪ್ರಶ್ನೆ ಅವಳಿಗೆದುರಾಗುತ್ತಿತ್ತಂತೆ.

"ಈಗ ಇಂಥದಿನ್ನೇನೂ ಉಳಿದಿಲ್ಲ. ನನ್ನ ಶೇಷಾಯುಷ್ಯವನ್ನು ಆಧ್ಯಾತ್ಮಿಕ ಹುಡುಕಾಟದಲ್ಲಿ ಕಳೆಯುತ್ತೇನೆ ಎಂದು ನನಗೆ ಗೊತ್ತಿತ್ತು"

ಸ್ವಾಮೀಜಿಯ ಉಪನ್ಯಾಸಗಳಲ್ಲಿ ಹಣದ ಮೌಲ್ಯ, ವಸ್ತುಗಳ ಮೌಲ್ಯ, ಸಂಬಂಧಗಳ ಅರ್ಥ, ಅವಳನ್ನು ನಿರಂತರವಾಗಿ ಕಾಡುತ್ತಿದ್ದ ಭವಿಷ್ಯ ಇವೇ ಮೊದಲಾದವುಗಳನ್ನು ಕುರಿತ ಕೆಲವು ಮೂಲಭೂತ ಪ್ರಶ್ನೆಗಳಿಗೆ ಉತ್ತರ ಸಿಕ್ಕಿತು.

ತನ್ನ ಇನ್ನು ಮುಂದಿನ ಜೀವನವನ್ನು ಶಾಸ್ತ್ರಗಳನ್ನು ಅಧ್ಯಯನ ಮಾಡುವುದರಲ್ಲಿ ಕಳೆಯುತ್ತೇನೆಂದು ನಿರ್ಧರಿಸಿದಳು. ಆದರೆ ಹಾಗಾಗಲಿಲ್ಲ. ಅವಳ ತಂದೆ ಅವಳು ಸ್ವಾಮೀಜಿಯನ್ನು ಸಂಪರ್ಕಿಸುವುದನ್ನು ತುಂಬಾ ವಿರೋಧಿಸಿದರು. ಸ್ವತಃ ಸ್ವಾಮೀಜಿಯೇ, ಅವಳು ಬೇರೆ ಇನ್ನೇನನ್ನಾದರೂ ಯೋಚಿಸುವ ಮೊದಲು ಎಂ.ಡಿ. ಸ್ನಾತಕೋತ್ತರ ಶಿಕ್ಷಣವನ್ನು ಮುಗಿಸುವಂತೆ ಹೇಳಿದರು. ತುಂಬಾ ಪರಿಶ್ರಮ ಹಾಕಿ ಎರಡೂವರೆ ವರ್ಷಗಳಲ್ಲಿ ಎಂ. ಡಿ ಮುಗಿಸಿದಳು. ಇದೇ ಸಮಯದಲ್ಲಿ ಅವಳ ಚಿಕ್ಕಪ್ಪ ಒಬ್ಬರು ಕೆಲವು ರಾಜಕಾರಣಿಗಳ ವಂಚನೆಯ ವ್ಯವಹಾರಗಳನ್ನು ಬಯಲಿಗೆಳೆದಿದ್ದರು. ಆದರೆ ಅವರು ಬಯಲಿಗೆಳೆದಿದ್ದ ಅಂಶಗಳನ್ನು ಅವು ರಾಜಕೀಯವಾಗಿ ಅನುಕೂಲಕರವಲ್ಲವೆಂಬ ಕಾರಣಕ್ಕೆ ತಿರಸ್ಕರಿಸಲಾಗಿತ್ತು. ಈ ಚಿಕ್ಕಪ್ಪ ರಾಜೀನಾಮೆ ನೀಡಿದರು. ಅದಾದ ಸ್ವಲ್ಪ ಸಮಯದಲ್ಲೇ ತೀರಿಕೊಂಡರು. ಗೀತಾ ತನ್ನ ಚಿಕ್ಕಪ್ಪನಿಗೊದಗಿದ ಈ ದುರ್ವಿಧಿಯಿಂದ ದುಃಖಿತಳಾಗಿದ್ದಳು. ಯುವತಿ ಗೀತಾಳಿಗೆ ಈ ನಷ್ಟ ಭಾರೀ ಮಹತ್ವದ್ದಾಗಿತ್ತು. ಜೀವನದ ಉದ್ದೇಶವೇನು ಎಂದು ತನಗೆತಾನೆ ಮತ್ತೆಮತ್ತೆ ಕೇಳಿಕೊಳ್ಳುತ್ತಿದ್ದಳು.

ಅವಳ ತಂದೆಯೊಂದಿಗಿನ ಸಂಘರ್ಷ ಮುಂದುವರಿಯಿತು. ಪದವಿ ಪರೀಕ್ಷೆ ಮುಗಿದ ಮೇಲೆ ಅವಳು ಮದುವೆಯಾಗಬೇಕೆಂಬುದು ಅವರ ಇಚ್ಛೆಯಾಗಿತ್ತು. ಪದವಿಯನ್ನೇನೋ ಮುಗಿಸಿದಳು. ಆದರೆ ಮದುವೆಗೆ ನಿರಾಕರಿಸಿದಳು. ಅವರ ಅಪ್ಪನಿಗೆ ವಿಪರೀತ ಸಿಟ್ಟು ಬಂದು ಇಂಥ ವಿಚಾರಗಳನ್ನು ತನ್ನ ಮಗಳ ತಲೆಗೆ ತುಂಬಿದ ಸ್ವಾಮಿಯನ್ನು ಕೊಲ್ಲುವ ಬೆದರಿಕೆ ಹಾಕಿದ. ಒಂದು ವರ್ಷದ ತನಕ ಸ್ವಾಮೀಜಿಯುನ್ನು ನೋಡುವುದಿಲ್ಲವೆಂದು ಮಗಳಿಂದ ಮಾತು ತೆಗೆದುಕೊಂಡ. ಅದರೆ ಅವಳಿಗೆ ಈ ಮಾತನ್ನು ಉಳಿಸಿಕೊಳ್ಳಲಾಗಲಿಲ್ಲ. ಕಾರಣ ಆರು ತಿಂಗಳ ನಂತರ ಅವಳ ತಾಯಿ

ಕಾಯಿಲೆಬಿದ್ದರು. ಸ್ವಾಮೀಜಿಯ ಸಹಾಯ ಮತ್ತು ಬೆಂಬಲ ಗಳಿಸಲು ಹೋಗಿ ಅವರನ್ನು ಭೇಟಿಮಾಡಿದಳು. ಅವಳ ತಂದೆಯು ಮನೋಧರ್ಮದಿಂದ ಸ್ವಾಮೀಜಿ ಗೊಂದಲಕ್ಕೊಳಗಾಗಿದ್ದರು. ಮಕ್ಕಳಿಂದ ಆ ರೀತಿಯಲ್ಲಿ ಮಾತು ತೆಗೆದುಕೊಳ್ಳುವುದು ತಂದೆಯ ಧರ್ಮವಲ್ಲ ಮತ್ತು ಅವರ ತಂದೆಗೆ ಮಕ್ಕಳಿಂದ ಸಂತೋಷ ಹೊಂದುವುದು ಹೇಗೆಂದು ತಿಳಿದಿಲ್ಲ ಎಂದು ಹೇಳಿದರು. ಈ ಭಾವನೆಗಳಿಂದ ಅವರ ತಂದೆ ಇನ್ನಷ್ಟು ಉದ್ರಿಕ್ತಗೊಂಡ. ಮದುವೆಯಾಗುವುದಕ್ಕೆ ಒಪ್ಪಬೇಕು ಇಲ್ಲವೆ ಮನೆಬಿಟ್ಟು ಹೊರ ನಡೆಯಬೇಕು ಎಂದು ಹೇಳಿದನು.

ಅವಳ ತಾಯಿ ಕೂಡಾ ಅವಳನ್ನು ಬೆಂಬಲಿಸಲಿಲ್ಲ. "ನಿನಗೆ ಯಾವುದು ನ್ಯಾಯ ಅನ್ನಿಸುತ್ತೋ ಅದರ ಬೆಂಬಲ ನಿನಗಿರುತ್ತೆ. ಅದರೊಂದಿಗೆ ನಿನ್ನ ಯೌವನವೂ ಜೊತೆಗಿರುತ್ತದೆ. ನಿಮ್ಮ ತಂದೆಗೆ ಯಾವುದರ ಬೆಂಬಲವೂ ಇಲ್ಲ. ಹಾಗಾಗಿ ನಾನು ಅವರ ಬೆಂಬಲಕ್ಕಿರಬೇಕು"–ಎಂದಳು.

ಗೀತಾ ಮನೆಬಿಟ್ಟು ಸ್ವಾಮೀಜಿ ಪ್ರವಚನ ನಡೆಸುತ್ತಿದ್ದ ಕಲ್ಕತ್ತಾಕ್ಕೆ ಹೋದಳು. ಅವಳ ತಂದೆ ಅವಳನ್ನೇ ಹಿಂಬಾಲಿಸಿಕೊಂಡು ಬಂದು ಸ್ವಾಮೀಜಿಯೊಂದಿಗೆ ವಿವಾದಕ್ಕೆ ತೊಡಗಿದ. ಈ ಅಹಿತಕರ ಘಟನೆಯ ನಂತರ ಸ್ವಾಮೀಜಿ ಗೀತಾಳಿಗೆ ಮನೆಗೆ ಹಿಂತಿರುಗಿ ಹೋಗುವಂತೆ ಹೇಳಿದರು. ಹಾಗೆ ಮಾಡದೆ ಇದ್ದರೆ ನಿನ್ನ ತಂಗಿಯರಿಗೆ ಆಘಾತವುಂಟು ಮಾಡುತ್ತಾನೆ ಎಂದು ಹೇಳಿದರು. ಆಕೆ ಮನೆಗೆ ಹಿಂತಿರುಗಿದಳು. ಹಳ್ಳಿಯಲ್ಲಿ ಚಿಕಿತ್ಸಾ ಕೆಲಸಕ್ಕೆ ತೊಡಗಿಸಿಕೊಂಡು ಸಮಯ ಕಳೆಯುವುದಾಗಿ ನಿರ್ಧರಿಸಿದಳು. ಒಂದು ಮಿಷನ್ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿಕೊಂಡು ಚಿಕಿತ್ಸಾ ಕಾರ್ಯ ಆರಂಭಿಸಿ ಹನ್ನೆರಡು ವರ್ಷಗಳ ಕಾಲ ಅದರ ಕಾರ್ಯವಿಧಾನವನ್ನು ಪ್ರಗತಿಯತ್ತ ಕೊಂಡೊಯ್ದಳು . ಅವಳು ಆ ಅಸ್ಪತ್ರೆ ಬಿಡುವ ಕಾಲಕ್ಕೆ ಅದು ಆರ್ಥಿಕವಾಗಿ ಸುಸ್ಥಿರವಾಗಿತ್ತು. ಈ ಅವಧಿಯಲ್ಲಿ ಸಂಸ್ಕೃತವನ್ನು ಕಲಿತಳು. ಸ್ವಾಮೀಜಿಯೊಂದಿಗೆ ಸದಾ ಸಂಪರ್ಕವನ್ನಿಟ್ಟುಕೊಂಡಿದ್ದಳು. ಅಂತೂ ಕೊನೆಗೆ ಅವಳ ತಂದೆ ಅರೆ ಮನಸ್ಸಿನಿಂದ ಸ್ವಾಮೀಜಿಯ ಬಳಿಗೆ ತೆರಳಲು ಅನುಮತಿ ನೀಡಿದನು.

"ಹೋಗು. ಆದರೆ ನಿನಗೆ ನನ್ನ ಅಗತ್ಯವಿದೆ ಅನ್ನಿಸಿದರೆ ಮತ್ತೆ ಹಿಂತಿರುಗಿ ಬರಬೇಡ"– ಎಂದು ಹೇಳಿದನು

ನಾನು ಆಕೆಯನ್ನು ಭೇಟಿಮಾಡುವುದಕ್ಕೆ ಐದು ವರ್ಷ ಮುಂಚೆಯೇ ಸ್ವಾಮೀಜಿಯ ಕೊಯಮತ್ತೂರು ಆಶ್ರಮವನ್ನು ಆಕೆ ಸೇರಿಕೊಂಡಿದ್ದಳು. ಆಶ್ರಮ ಸೇರಿದ ಒಂದು ವರ್ಷದ ನಂತರ ಅವಳ ತಂದೆಗೆ ಪ್ರಾಸ್ಟೇಟ್ ಕ್ಯಾನ್ಸರ್ ಆಯಿತು. ಆಕೆ ಮನೆಗೆ ಹಿಂತಿರುಗಿ ತನ್ನ ತಂದೆಯನ್ನು, ಈ ಮಧ್ಯೆ ಅಗಲಿ ಹೋಗಿರಲೇ ಇಲ್ಲವೇನೋ ಎಂಬಂತೆ ನೋಡಿಕೊಂಡಳು. ಆತ ಗುಣಮುಖನಾದ ನಂತರ ಅವಳನ್ನು ಆಶ್ರಮದಲ್ಲಿ ಭೇಟಿಮಾಡಿದನು ; ಅಷ್ಟೇ ಅಲ್ಲ ಆಕೆ ತೆಗೆದುಕೊಂಡಿದ್ದ ನಿರ್ಧಾರ ಅವಳ ದೃಷ್ಟಿಯಿಂದ ಸರಿಯಾಗಿಯೇ ಇದ್ದಿತೆಂದು ಒಪ್ಪಿಕೊಂಡನು.

ನಾನು ಆಕೆಯ ಸಂದರ್ಶನ ಮಾಡುವ ಆರು ತಿಂಗಳು ಮೊದಲು ಸನ್ಯಾಸ ತೆಗೆದುಕೊಂಡಿದ್ದಳು. ಈ ಬಗ್ಗೆ ನಾನು ಹಲವಾರು ಪ್ರಶ್ನೆಗಳನ್ನು ಕೇಳಿದೆ.

"ಈ ಸನ್ಯಾಸ ಯಾಕೆ ಬೇಕಿತ್ತು? ಈ ಔಪಚಾರಿಕ ಸನ್ಯಾಸವಿಲ್ಲದೆಯೂ ನೀವು ಈಗ ಮಾಡುತ್ತಾ ಇರುವ ಕೆಲಸವನ್ನು ಮುಂದುವರಿಸಬಹುದಾಗಿತ್ತಲ್ಲವೆ?"

"ಎಲ್ಲವನ್ನೂ ಅದರ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲೇಬೇಕಾಗುತ್ತದೆ"- ಎಂದು ಹೇಳುತ್ತಾ ಮುಗುಳ್ನಕ್ಕಳು.

"ಆದರೆ ನೀವು ಮೆಡಿಕಲ್‌ನ ಕೆಲಸವನ್ನೇಕೆ ಬಿಟ್ಟುಬಿಟ್ಟಿರಿ? ನಿಮ್ಮ ಶಿಕ್ಷಣ ಮತ್ತು ನಿಮ್ಮ ವೃತ್ತಿಯಲ್ಲಿ ನೀವು ಗಳಿಸಿಕೊಂಡಿರುವ ತಜ್ಞತೆಯನ್ನೇಕೆ ವ್ಯರ್ಥಗೊಳಿಸುತ್ತೀರಿ?"

"ಪ್ರಾಮಾಣಿಕವಾಗಿ ಹೇಳ ಬೇಕೆಂದರೆ ಸ್ವಾಮೀಜಿಯವರ ಬರವಣಿಗೆಯ ಕೆಲಸದಲ್ಲಿ ನಾನು ಎಷ್ಟೆಲ್ಲ ನೆರವು ನೀಡಬೇಕಾಗುತ್ತದೆಂದರೆ ಪೂರ್ಣಕಾಲಾವಧಿಯ ವೈದ್ಯಕೀಯ ಕೆಲಸವನ್ನು ಮಾಡಲು ನನಗೆ ವೇಳೆಯಿಲ್ಲ. ಆದರೆ ನಾನು ಅದನ್ನು ಪೂರ್ತಿ ಬಿಟ್ಟಿಲ್ಲ. ಆಶ್ರಮದಲ್ಲಿ ಏನಾದರೂ ತುರ್ತು ಸಂದರ್ಭ ಬಂದಾಗ ನಾನು ಅದರ ನಿಗಾ ವಹಿಸುತ್ತೇನೆ"

ಆಕೆಯ ಮುಖದಮೇಲೆ ಶಾಂತಿಯುತವಾದ ನಗೆ ಇತ್ತು. ಚಿಕ್ಕಂದಿನಿಂದಲೂ ತಾನು ಇರಿಸಿಕೊಂಡ ಗುರಿಯನ್ನು ತಲುಪುವ ಸಲುವಾಗಿ ಏನೆಲ್ಲ ಅಡ್ಡಿ-ಅಡಚಣೆಗಳನ್ನು ದಾಟಿಕೊಂಡು ಬಂದಿರುವ ವ್ಯಕ್ತಿಯನ್ನು ಪ್ರಶ್ನಿಸಲು ನಾನಾರು?

* * *

ಮಾನ್ಯ 'ವಿ' ಅವರ ಜೀವನ ಯಾತ್ರೆಯನ್ನು ಹಲವು ವರ್ಷಗಳಿಂದ ಅವಲೋಕಿಸಿಕೊಂಡುಬಂದ ಸುದೈವಿ ನಾನು. ನಾನು ಅವರನ್ನು ಮೊದಲು ಭೇಟಿಮಾಡಿದ್ದು ಸ್ವಾಮಿ ದಯಾನಂದರ ದಕ್ಷಿಣ ಭಾರತದ ಆಶ್ರಮದಲ್ಲಿ. ಆಗ ಅಲ್ಲಿಯೇ ನನ್ನ ಸಂಶೋಧನೆಯನ್ನು ಮುಂದುವರಿಸುವ ಆಶಯವಿತ್ತು. ಮೊದಲ ದಿನ ಸ್ವಾಮೀಜಿಯವರು ಒಂದು ಗುಂಪಿಗೆ ನನ್ನನ್ನು ಒಬ್ಬ ಸಂಶೋಧಕನೆಂದು ಮತ್ತು ಕೆಲವು ಪ್ರಶ್ನೆಗಳನ್ನು ಕೇಳ ಬಯಸುತ್ತೇನೆಂದು ಪರಿಚಯಿಸಿದರು. ಒಬ್ಬ ವ್ಯಕ್ತಿಯನ್ನು ಆಧ್ಯಾತ್ಮಿಕ ಹುಡುಕಾಟದತ್ತ ಕೊಂಡೊಯ್ಯುವ ಜೀವನದ ಸಂದರ್ಭಗಳು ಮತ್ತು ಜೀವನ ಯಾವ ತೆರದವು ಮತ್ತು ಆ ಪಯಣದಲ್ಲಿ ಅವರಿಗಾದ ಅನುಭವಗಳೆಂಥವು ಎಂಬುದನ್ನು ತಿಳಿದುಕೊಳ್ಳಲು ನನಗೆ ಆಸಕ್ತಿಯಿದೆ ಎಂದು ಹೇಳಿದೆ. ಅಂದರೆ ಅವರು ಯಾವ ಥರದಲ್ಲಾದರೂ ಬದಲಾದರೆ? ಜೀವನ ಕಡಿಮೆ ದುಃಖಕರ ಎನಿಸಿತೆ? ಈ ರೀತಿಯವು ಎಂದೆ. ಅವರಲ್ಲಿ ಅನೇಕರು ತಮ್ಮ ಕೈ ಎತ್ತಿ ನನ್ನೊಂದಿಗೆ ಮಾತಾಡಲು ಮುಂದೆ ಬಂದರು. ಆದರೆ ಈ 'ವಿ' ಕೈ ಎತ್ತಲೂ ಇಲ್ಲ; ಮುಂದೆ ಬರಲೂ ಇಲ್ಲ. ಆದಾಗ್ಯೂ ಎರಡು ದಿನಗಳ ನಂತರ ನನ್ನ ಪಾಡಿಗೆ ನಾನು ನಿಂತಿದ್ದಾಗ ನನ್ನ ಬಳಿ ಬಂದರು. ನಾನು ಪ್ರಶ್ನೆ ಕೇಳುವುದಿದ್ದರೆ ಅವರು ಸಂತೋಷದಿಂದ ಉತ್ತರಿಸುವುದಾಗಿ ತಿಳಿಸಿದರು. ನನ್ನೊಂದಿಗೆ ಭೇಟಿಯ ವೇಳೆ,

ಸ್ಥಳ ಮತ್ತು ನನಗೆಷ್ಟು ಕಾಲ ಬೇಕಾಗುತ್ತದೆ ಎಂಬುದನ್ನೆಲ್ಲ ನಿಗದಿ ಪಡಿಸಿಕೊಂಡು ಗುರುತು ಹಾಕಿಕೊಂಡರು. ಅವರೊಬ್ಬ ಬಹಳ ಎಚ್ಚರದ, ಶಿಸ್ತಿನ ಮತ್ತು ಬಹಳ ಕಾಡುವ ವ್ಯಕ್ತಿ ಎನಿಸಿತು.

ಅಂತೂ ಕೊನೆಗೊಮ್ಮೆ ಅವರನ್ನು ಭೇಟಿಮಾಡಿದಾಗ ಅವರನ್ನು ಮಾತಿಗೆಳೆಯುವುದು ಕಷ್ಟವಾಯಿತು.

"ನಿರ್ದಿಷ್ಟವಾದ ಪ್ರಶ್ನೆಗಳನ್ನು ಕೇಳಿ. ನಾನು ಉತ್ತರಿಸುತ್ತೇನೆ" ಎಂದರು

ಏನೇ ಆದರೂ ನಿಧಾನವಾಗಿ ಅವರು ಕರಗಿದರು. ಅವರಿಂದ ಬೀಳ್ಕೊಂಡು ಹೊರಡುವ ಸಮಯಕ್ಕೆ ಅವರು ನನಗೆ ಸಲಹೆ ಸೂಚನೆಗಳನ್ನು ನೀಡತೊಡಗಿದರು. ಮತ್ತು ನಮ್ಮ ಸಂಭಾಷಣೆ 'ಘೊಳ್' ಎಂದು ನಗೆಯಲ್ಲಿ ಕೊನೆಗೊಂಡಿತು.

ನನಗೆ ಹಿತವೆನಿಸಿತು. ನಮ್ಮ ಮಾತು-ಕತೆಯ ನಡುವೆ ಅವರು ಬಿಗುವನ್ನು ಬಿಟ್ಟು ಮುಕ್ತವಾಗಿದ್ದರು. ಅವರು ತಮ್ಮ ಕಥೆಯನ್ನು ತುಣುಕು ತುಣುಕುಗಳಾಗಿ ಹೇಳಿದರು. ಆದರೆ ಅದೆಲ್ಲವನ್ನೂ ನಿರಂತರವಾದ ಕ್ರಮದಲ್ಲಿ ಪ್ರಸ್ತುತ ಪಡಿಸುತ್ತೇನೆ.

ಮಿಸ್ಟರ್ 'ವಿ' ಕೆಳಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿದವರು. ಅವರ ತಂದೆ ಭಾರತೀಯ ರೈಲ್ವೆ ಇಲಾಖೆಯಲ್ಲಿ ಒಂದು ಸಣ್ಣ ಉದ್ಯೋಗದಲ್ಲಿದ್ದರು. ಒಂದು ಒಳ್ಳೆಯ ಶಾಲೆಗೆ ಇವರನ್ನು ಕಳಿಸಲು ಸಾಧ್ಯವಾಯಿತಾದರೂ ಭಾರೀ ಅನುಕೂಲಗಳನ್ನೇನೂ ಒದಗಿಸಲಾಗಲಿಲ್ಲ. ನಿದರ್ಶನಕ್ಕೆ, ಕುಟುಂಬಕ್ಕೆ ಬಸ್ ಛಾರ್ಜ್ ಭರಿಸುವ ಶಕ್ತಿ ಇಲ್ಲದೆ ಇದ್ದುದರಿಂದ ಬಾಲಕ ಶಾಲೆ ಮತ್ತು ಕಾಲೇಜಿಗೆ ಐದಾರು ಮೈಲಿ ನಡೆದೇ ಹೋಗಬೇಕಾಗುತ್ತಿತ್ತು. ಬುದ್ಧಿವಂತ ವಿದ್ಯಾರ್ಥಿಯಾಗಿದ್ದು ಉನ್ನತ ವಿದ್ಯಾಭ್ಯಾಸದ ಸಲುವಾಗಿ ವಿದೇಶಕ್ಕೆ ಹೋಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದನು. ಆದರೆ ಕುಟುಂಬದ ಆರ್ಥಿಕ ಪರಿಸ್ಥಿತಿಯಿಂದಾಗಿ ಅದು ಅಸಾಧ್ಯವಾಯಿತು. ಅದರಿಂದ ಆತಂಕಗೊಂಡು ತರಗತಿಯಲ್ಲಿ ತನ್ನ ಜೊತೆಯ ಸಹಪಾಠಿಗಳಿಗಿಂತ ಹಿಂದೆಬಿದ್ದನು. ತನ್ನ ಸಹಪಾಠಿಗಳ ಹತ್ತಿರ ಇದ್ದ ಸಲಕರಣೆಗಳು ಇವನ ಬಳಿ ಇರಲಿಲ್ಲ. ಅತ್ಯಂತ ಕಠಿಣ ಪರಿಶ್ರಮವಹಿಸಿ ಅಧ್ಯಯನ ಮಾಡುವುದಾಗಿಯೂ ಅಪಾರ ಹಣ ಸಂಪಾದಿಸುವುದಾಗಿಯೂ ಮತ್ತು ತಾನು ಬೇಕೆನಿಸಿದ್ದನ್ನು ಪಡೆಯಲು ಮತ್ತು ಬೇಕಾದ್ದನ್ನು ಮಾಡಲು ಅನುಕೂಲವಾಗುವಂಥ ಅತಿಮುಖ್ಯವಾದೊಂದು ಸ್ಥಾನವನ್ನು ಸಂಪಾದಿಸುವುದಾಗಿಯೂ ನಿರ್ಧಾರವನ್ನು ತೆಗೆದುಕೊಂಡನು.

ಅವನ ಯೋಜನೆ ಫಲಕೊಟ್ಟಿತು. ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದುಕೊಂಡ ಮೇಲೆ ಒಂದು ಕಂಪನಿಯಿಂದ ಮತ್ತೊಂದು ಕಂಪನಿಗೆ ಹಾರುತ್ತ ತನ್ನ ಮೂವತ್ತನೇ ವಯಸ್ಸಿನಲ್ಲಿ ವಿದೇಶೀ ಕಂಪನಿಗಳೊಂದಿಗೆ ಸಂಪರ್ಕಹೊಂದಿದ್ದ ಕಂಪನಿಯಲ್ಲಿ ಕೆಲಸ

ಮಾಡತೊಡಗಿದನು. ಆ ಕಂಪನಿ ಇವನಿಗೆ ಒಂದು ಜವಾಬ್ದಾರಿಯುತ ಹುದ್ದೆಯನ್ನು ನೀಡಿತು. ಕಂಪನಿಗೆ ಹೆಚ್ಚು ಯಶಸ್ಸನ್ನೇನೋ ತಂದುಕೊಟ್ಟನಾದರೂ ಅದರೊಂದಿಗಿನ ಭಿನ್ನಾಭಿಪ್ರಾಯದಿಂದಾಗಿ ಅದನ್ನು ಬಿಟ್ಟನು. ಮುಂದೆ ಹೈದರಾಬಾದಿಗೆ ಹೋಗಿ ಸಣ್ಣದೊಂದು ಕಂಪನಿಯನ್ನು ಖರೀದಿಸಿ ಐದು ವರ್ಷದೊಳಗಾಗಿ ಅದನ್ನೊಂದು ಹೆಚ್ಚು ಲಾಭ ಗಳಿಸುವ ಕಂಪನಿಯನ್ನಾಗಿ ಪರಿವರ್ತಿಸಿದನು. ಆದರೆ ಅವನ ಮುಂದಿನ ಸಾಹಸ ಹೆಚ್ಚು ಯಶಸ್ಸು ತರಲಿಲ್ಲ. ಅದರ ಫಲವಾಗಿ ತನ್ನ ಭಾಗವನ್ನು ಬಿಟ್ಟುಕೊಟ್ಟು ತನ್ನ ಸಣ್ಣ ಕಂಪನಿಗೆ ವಾಪಸಾಗಬೇಕಾಯಿತು. ಆತನ ಹೆಂಡತಿ ಸದಾ ಅವನಿಗೆ ಬೆಂಬಲವಾಗಿದ್ದಳು. ಈ ಅವಧಿಯಲ್ಲಿ ಸ್ವಾಮಿ ದಯಾನಂದರ ಪರಿಚಯವಾಯಿತು. ಅವನು ಮತ್ತು ಅವನ ಹೆಂಡತಿ ಸ್ವಾಮೀಜಿಗೆ ತೀರಾ ನಿಕಟರಾದರು. ಕಾಲಾಂತರದಲ್ಲಿ ತನ್ನೆಲ್ಲ ಉದ್ಯಮದ ವ್ಯವಹಾರವನ್ನು ಮಕ್ಕಳಿಗೆ ವಹಿಸಿಕೊಟ್ಟು ದಂಪತಿಗಳಿಬ್ಬರೂ ಬೆಂಗಳೂರಿಗೆ ಹೋಗಿಬಿಟ್ಟರು. ಅಲ್ಲಿಯೂ ತನ್ನ ಧಾರ್ಮಿಕ ಆಚರಣೆಗಳನ್ನು ಮತ್ತು ಸ್ವಾಮಿ ದಯಾನಂದರ ಸಂಪರ್ಕವನ್ನು ಮುಂದುವರಿಸಿದನು. ದುರದೃಷ್ಟವಶಾತ್ ಆತನ ಹೆಂಡತಿ ಕಾಯಿಲೆಬಿದ್ದು ತೀರಿಕೊಂಡಳು. ಗರ್ಭಿಣಿಯಾಗಿದ್ದ ಕಾರಣಕ್ಕೆ ಅಮೆರಿಕಾದಿಂದ ಬರಲಾಗದ ಮಗಳೊಬ್ಬಳನ್ನು ಹೊರತುಪಡಿಸಿದರೆ ಉಳಿದೆಲ್ಲಾ ಮಕ್ಕಳು ತೀರಿಹೋದ ತಾಯಿಯ ಬಳಿ ಇದ್ದರು. ಆಗ ಹೊಳೆವ ಕಣ್ಣು ಮಿನುಗಿಸುತ್ತ ಮಿಸ್ಟರ್ 'ವಿ' ಹೇಳಿದ್ದು": "ನೋಡಿ ಒಂದೇ ವಾರದಲ್ಲಿ ನನ್ನ ಮಗಳು ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಆಶ್ಚರ್ಯವೆಂದರೆ ಆ ಮಗುವಿನ ನಕ್ಷತ್ರವೂ ನನ್ನ ಹೆಂಡತಿಯದೇ ನಕ್ಷತ್ರ." ಈ ಘಟನೆಯ ಮಹತ್ವದ ಬಗೆಗಿನ ತೀರ್ಮಾನವನ್ನು ನನಗೇ ಬಿಟ್ಟರು.

ಆತನ ಹೆಂಡತಿಯ ಮರಣದ ನಂತರ ಮಕ್ಕಳು 'ವಿ' ಅವರು ಹೈದರಾಬಾದಿಗೆ ಹಿಂತಿರುಗಬೇಕೆಂದು ಒತ್ತಾಯಿಸಿದರು. ಹೆಂಡತಿಯೂ ತೀರಿಕೊಂಡು, ಮಕ್ಕಳು ಜೀವನದಲ್ಲಿ ಸುಸ್ಥಿರವಾಗಿ ನೆಲೆನಿಂತಿದ್ದು, ತಾನೂ ಆರ್ಥಿಕವಾಗಿ ಸ್ವತಂತ್ರನಾಗಿರುವ ಈ ಸಂದರ್ಭದಲ್ಲಿ ಸನ್ಯಾಸ ತೆಗೆದುಕೊಳ್ಳಬಾರದೇಕೆ ಎಂದು ಯೋಚಿಸುತ್ತಿದ್ದರು. ಸನ್ಯಾಸಿಯಾಗದೆ ಇದುವರೆಗೆ ಮಾಡದೆ ಇರುವುದೇನನ್ನು ಸನ್ಯಾಸಿಯಾಗಿ ಮಾಡಲು ಸಾಧ್ಯ ಎಂದು ನಾನು ಅವರನ್ನು ಪ್ರಶ್ನಿಸಿದೆ. ಅದಕ್ಕೆ ಅವರು– "ಯಾರಿಗೂ ಪ್ರಾರಬ್ಧದಿಂದ (ಹಿಂದಿನ ಜನ್ಮಗಳ ಕರ್ಮಫಲವಾದ ವಿಧಿ) ಬಿಡುಗಡೆಯಿಲ್ಲ" ಎಂದರು. ಅವರ ಕರ್ಮಫಲ(ವಿಧಿ) ಅದೇ(ಸನ್ಯಾಸ) ಎಂದು ಅವರು ತಿಳಿದಿದ್ದರು.

ಸ್ವಾಮಿ ದಯಾನಂದರ ಸಾಹಚರ್ಯದ ಬಗ್ಗೆ ಅವರ ಅನಿಸಿಕೆ ಏನು ಎಂದು ಅವರನ್ನು ಕೇಳಿದೆ.

"ನನ್ನ ಭಾವನೆಗಳೊಂದಿಗೆ ಹೊಂದಿಕೊಂಡುಹೋಗುವುದರಲ್ಲಿ ಅವರು ನನಗೆ ನೆರವಾಗಿದ್ದಾರೆ. ನನ್ನ ಹೆಂಡತಿ ತೀರಿಕೊಂಡಾಗ ನಾನು ಸ್ವಾಮೀಜಿಗೆ ಫೋನು ಮಾಡಿದೆ.

ಅವರು– 'ಆಕೆ ಒಂದು ದೊಡ್ಡ ಚೇತನ. ನೀವು ಹೇಗೂ ಪಕ್ವಗೊಂಡಿದ್ದೀರಿ. ನಾನು ನಿಮ್ಮ ಜೊತೆ ಇದ್ದೇನೆ.'–ಎಂದು ಹೇಳಿದರು". ಇದನ್ನು ನನಗೆ ಹೇಳುತ್ತಿರುವಾಗ ಮಿಸ್ಟರ್ 'ವಿ' ಅವರ ದನಿ ಭಾವನೆಗಳಿಂದ ಭಾರವಾಗಿತ್ತು.

ಪತ್ನಿಯ ಸಾವಿನಿಂದ ದುಃಖ ಪೀಡಿತರಾಗಿದ್ದ ಅವರಿಗೆ ಈಗ ಜೀವನಕ್ಕೇನೂ ಅರ್ಥವಿಲ್ಲವೆನಿಸಿತು. ವೇದಾಂತದ ಗಂಭೀರ ಅಧ್ಯಯನದಲ್ಲಿ ಮೂರು ತಿಂಗಳು ಕಳೆಯಬೇಕೆಂದು ಆಶ್ರಮಕ್ಕೆ ಬಂದಿದ್ದರು.

ಮುಂದಿನ ಮೂರುವರ್ಷ ಅವರೊಂದಿಗೆ ಸಂಪರ್ಕ ಹೊಂದಿದ್ದೆ. ಅವರು ಇ-ಮೇಲ್ ಸಂದೇಶಗಳನ್ನು ಕಳಿಸುತ್ತಿದ್ದರು ಮತ್ತು ಅವರಿಗೆ ಕಾಲದಿಂದ ಕಾಲಕ್ಕೆ ಹೊಳೆದಂಥ ಒಳನೋಟಗಳನ್ನು ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದರು. ಅವರ ಎಲ್ಲ ಸಂದೇಶಗಳಿಗೆ ನಾನು ಉತ್ತರಿಸುತ್ತಿರಲಿಲ್ಲ. ಆದರೆ ಅವರು ತಮ್ಮ ಹೊಸ ಒಳನೋಟಗಳನ್ನು ಕಳಿಸುತ್ತಲೇ ಇದ್ದರು. ಅವರ ಒಳನೋಟಗಳೆಲ್ಲವೂ ಅಂಥ ನಾಟಕೀಯವಾಗೇನೂ ಇರಲಿಲ್ಲ. ಹೆಚ್ಚಿನವು ಬ್ರಹ್ಮನೊಂದಿಗೆ ಒಂದಾಗುವುದಕ್ಕೆ ಸಂಬಂಧಿಸಿದ, ಸರ್ವಸಂಗ ಪರಿತ್ಯಾಗ, ಗುರುವಿನ ಗುಣಗಳು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಸನ್ಯಾಸಿಗಳು ಸಾಮಾನ್ಯ ಜನರಿಗೆ ನೀಡುತ್ತಿದ್ದ ತಮ್ಮ ಉಪನ್ಯಾಸಗಳಲ್ಲಿ ಪ್ರಸ್ತಾಪಿಸುತ್ತಿದ್ದವೇ ಆಗಿರುತ್ತಿದ್ದವು. ಆದರೆ 'ವಿ' ಅವರಿಗೆ ಇವುಗಳು ತುಂಬ ಮಹತ್ವದವಾಗಿದ್ದವು. ಹೀಗಿದ್ದಾಗ ಒಂದು ದಿನ ಅವರೀಗ ಸ್ವಾಮಿ ಸರ್ವಭೂತಾನಂದರಾಗಿದ್ದಾರೆಂಬ ಸಂದೇಶ 'ವಿ' ಅವರ ಕಡೆಯಿಂದ ಬಂದಿತು. ಹೃಷೀಕೇಶದ ಆಶ್ರಮಕ್ಕೆ ನಾನು ಮೂರನೇ ಬಾರಿಗೆ ಹೋದ ಸಂದರ್ಭದಲ್ಲಿ ಅವರನ್ನು ಭೇಟಿಯಾದೆ. ಬೋಳು ಮಂಡೆಯ ಕಾಷಾಯಧಾರಿ ಸರ್ವಭೂತಾನಂದರು ಸೂಸುತ್ತಿದ್ದ ಮುಗುಳ್ನಗೆ ಅವರೀಗ ಅದೆಷ್ಟು ಸುಖಿಗಳು ಮತ್ತು ಪ್ರಫುಲ್ಲ ಚಿತ್ತರು ಎಂಬುದನ್ನು ಎತ್ತಿ ತೋರುತ್ತಿತ್ತು. ಚಹಾ ಹೀರುತ್ತ ನಾವು ದೀರ್ಘ ಮಾತು-ಕತೆಯಲ್ಲಿ ತೊಡಗಿದ್ದಾಗ ಅವರು– ತಾವು ಸನ್ಯಾಸಿಯಾಗಬೇಕೆಂಬ ತಮ್ಮ ಬದ್ಧತೆ ಹೇಗೆ ತಮಗೆ ನಿಧಾನವಾಗಿ ಸ್ಪಷ್ಟವಾಗುತ್ತ ಹೋಯಿತೆಂಬುದನ್ನು ತಿಳಿಸಿದರು.

"ಈ ಸ್ಪಷ್ಟತೆ ನಿಮಗೆ ಹೇಗೆ ಬಂತು. ನಿಮಗೇನಾದರೂ ದರ್ಶನ(ದಿವ್ಯ ದೃಷ್ಟಿ) ಅಥವಾ ಅಸಾಧಾರಣ ಸಂದೇಶ ದೊರಕಿತೆ?"– ಎಂದು ನಾನು ಕೇಳಿದೆ.

"ಇಲ್ಲ. ಅದು ಹೇಗಾಯಿತೆಂದರೆ ಈಚೆಗೆ ನಾನು ಜನರ ಜೊತೆ ಸಂಪರ್ಕಕ್ಕೆ ಬಂದಾಗ ಅವರೊಂದಿಗೆ ವಿಚಾರ ವಿನಿಮಯ ಮಾಡುವುದು ಹೆಚ್ಚು ಕಷ್ಟವೆನಿಸತೊಡಗಿತು. ಆಗ ಈ ಲೌಕಿಕ ಜಗತ್ತಿನಿಂದ ದೂರವುಳಿಯವುದು ತೀರ ಅಗತ್ಯವೆನಿಸಿತು."

"ನೀವು ಸನ್ಯಾಸಿಯಾಗಲು ತಕ್ಕವರಾಗಿದ್ದೀರಿ ಎಂದು ಸ್ವಾಮಿ ದಯಾನಂದರು ನಿಮಗೆ ಹೇಳಿದರೇನು?"

"ಇಲ್ಲ. ನಿಜ ಹೇಳಬೇಕೆಂದರೆ ಸನ್ಯಾಸ ದೀಕ್ಷೆಯ ಮುಹೂರ್ತವನ್ನು– 'ನಾವು

ಅದರ ಬಗ್ಗೆ ಆಮೇಲೆ ನೋಡೋಣಂತೆ'- ಎಂದು ಹೇಳಿ ಮುಂದೆ ಹಾಕುತ್ತಾ ತಡಮಾಡಲೆತ್ನಿಸಿದರು".

ಆದಾಗ್ಯೂ ನಮ್ಮ ಈ ಮಾತು-ಕತೆಗೆ ಒಂದು ತಿಂಗಳು ಮೊದಲು ಸ್ವಾಮಿ ದಯಾನಂದರು ಕಳೆದ ಹಲವಾರು ವರ್ಷಗಳಿಂದ ತಮ್ಮ ಅನುಯಾಯಿಗಳೂ ಭಕ್ತರೂ ಆಗಿದ್ದ ಎಂಟು ಜನರಿಗೆ ಸನ್ಯಾಸದೀಕ್ಷೆ ನೀಡಿದರು. ವಾಸ್ತವವಾಗಿ ಹಿಂದಿನ ವರ್ಷ ಇಪ್ಪತ್ತಾರು ಜನರಿಗೆ ಅವರು ಸನ್ಯಾಸದೀಕ್ಷೆ ನೀಡಿದ್ದರು. ಸ್ವಾಮಿಯೊಬ್ಬರು ಅಷ್ಟೊಂದು ಜನರಿಗೆ ಸನ್ಯಾಸ ನೀಡುತ್ತಾರೆನ್ನುವುದು ಒಂದು ಅಭೂತಪೂರ್ವ ಘಟನೆಯಾಗಿತ್ತು.

"ಬಹುಶಃ ಅವರಿಗೆ ತಮಗೆ ವಯಸ್ಸಾಗುತ್ತಿದೆಯೆನಿಸಿ ಈ ಲೌಕಿಕ ಜಗತ್ತಿನಲ್ಲಿಯ ತಮ್ಮ ಕರ್ತವ್ಯಗಳನ್ನು ಪೂರ್ಣಗೊಳಿಸಿಬಿಡಬೇಕೆಂದೆನಿರಬೇಕು".-ಎಂದರು ಸರ್ವಭೂತಾನಂದರು.

"ಸ್ವಾಮೀಜಿಯವರು ನಿಮಗೆ ಸನ್ಯಾಸ ದೀಕ್ಷೆನೀಡುವ ತೀರ್ಮಾನಕ್ಕೆ ಬಂದಿದ್ದಾರೆಂದು ನೀವು ಯಾವಾಗ ಕಂಡುಕೊಂಡಿರಿ?" – ನಾನು ಕೇಳಿದೆ.

"ಎರಡು-ಮೂರು ದಿನಗಳ ಮುಂಚೆಯಷ್ಟೇ ನನಗೆ ತಿಳಿದುಬಂತು"

"ಇದಕ್ಕೆ ನೀವು ಸಿದ್ಧರಾಗಿದ್ದೀರೆಂದು ನಿಮಗೆ ಅನ್ನಿಸಿತೆ? ನೀವು ಹೇಗೆ ನಿಮ್ಮನ್ನು ಸಿದ್ಧಗೊಳಿಸಿಕೊಂಡಿರಿ? ನೀವು ಶಾಸ್ತ್ರಗಳ ಅಧ್ಯಯನ ಮಾಡಿದಿರಾ?" – ನಾನು ಕೇಳುತ್ತಲೇ ಹೋದೆ.

"ಇಲ್ಲ. ನಾನು ಸ್ವಾಮೀಜಿಯವರ ಉಪನ್ಯಾಸಗಳನ್ನು ಮತ್ತು ಧ್ವನಿಮುದ್ರಿಕೆಗಳನ್ನು ಕೇಳುತ್ತಿದ್ದೆ. ಮೂಲ ಶಾಸ್ತ್ರಗಳ ನೇರ ಜ್ಞಾನ ನನಗಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳಲೇ ಬೇಕು."

"ಸನ್ಯಾಸಿಗಳಿಗೆ ತಕ್ಕಂತೆ ನೀವು ನಿಮ್ಮೆಲ್ಲ ವಸ್ತುಗಳನ್ನು, ಸ್ವತ್ತನ್ನು ತ್ಯಜಿಸಿದಿರಾ?"

"ಒಂದು ರೀತಿಯಲ್ಲಿ ಹೌದು; ತ್ಯಜಿಸಿದ್ದೇನೆ. ನನ್ನೆಲ್ಲಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ಮಗನಿಗೆ ಜಿ.ಪಿ.ಎ. ನೀಡಿದ್ದೇನೆ."

"ನಾನು ಸ್ವಲ್ಪ ಒರಟಾಗಿಯೇ-" ಸರ್ವಸಂಗ ಪರಿತ್ಯಾಗ ಎಂದು ಹೇಳುತ್ತಾರಲ್ಲ ಅದು ಹೀಗೇನೆ?"-ಎಂದು ಕೇಳಿದೆ.

" ಹೌದು, ಹಾಗೇನೇ. ಈಗಿನ ಸಾಮಾಜಿಕ ವಾತಾವರಣದಲ್ಲಿ ಸನ್ಯಾಸಿಗಳ ವಿಷಯಕ್ಕೆ ಸಮಾಜ ತನ್ನ ಜವಾಬ್ದಾರಿಯೇನೆಂದು ಅರ್ಥಮಾಡಿಕೊಳ್ಳದೆ ಇರುವುದರಿಂದ ಒಮ್ಮೆಗೇ ಎಲ್ಲವನ್ನೂ ತ್ಯಜಿಸಿಬಿಡುವುದು ಮೂರ್ಖತನ. ಹೀಗೆ ಮಾಡಬೇಕೆಂದು ಸ್ವಾಮೀಜಿ ಯಾರಿಂದಲೂ ನಿರೀಕ್ಷಿಸುವುದಿಲ್ಲ".

ಈ ಆಶ್ರಮದ ಸದಸ್ಯರಾಗಿ ನೀವು ಏನು ಹೇಳುತ್ತೀರಿ? ಆಶ್ರಮವು ನಿಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸುವ ಸ್ಥಿತಿಯಲ್ಲಿಲ್ಲವೆ?" – ಎಂದು ನಾನು ಪ್ರಶ್ನಿಸಿದೆ.

"ಈ ಆಶ್ರಮ ತನ್ನ ಆಶ್ರಿತರನ್ನು ಪ್ರೋತ್ಸಾಹಿಸುವುದಕ್ಕೆ ಇರುವುದಲ್ಲ. ಜನರು ಅದರ ದುರುಪಯೋಗ ಮಾಡಿಕೊಳ್ಳುತ್ತಾರೆ. ಕಲಿಕೆ ಮತ್ತು ಬೋಧನೆಗಳಿಗೆ ತಕ್ಕುದಾದ ಒಂದು ವಾತಾವರಣವನ್ನು ಇದು ಒದಗಿಸಿಕೊಡುತ್ತದೆ ಅಷ್ಟೆ."

* * *

ಸರ್ವಭೂತಾನಂದರು ತಮ್ಮ ಸನ್ಯಾಸದೀಕ್ಷೆಯನ್ನು ವಿಸ್ತಾರವಾಗಿ ವರ್ಣಿಸಿದರು. ಅದು ಇಪ್ಪತ್ತನಾಲ್ಕು ಗಂಟೆಗಳ ಕಾಲ ನಡೆಯುವ ಒಂದು ಪ್ರಕ್ರಿಯೆ. ಮೊತ್ತಮೊದಲಿಗೆ ದೀಕ್ಷಿತನಾಗುವ ವ್ಯಕ್ತಿಯ ಕೇಶ ಮುಂಡನ ಮಾಡಿಸಲಾಗುತ್ತದೆ. ವಿಧಿಪೂರ್ವಕವಾದ ಸ್ನಾನ ಮಾಡಿಸುತ್ತಾರೆ. ನೀರಿಗೆ ಹಾಕಿರದ ಹೊಸ ಶ್ವೇತ ವಸ್ತ್ರವನ್ನು (ಶವಕ್ಕೆ ಹೊದಿಸುವ ಬಟ್ಟೆಯನ್ನೂ ಇದರಿಂದಲೇ ತಯಾರಿಸಲಾಗುತ್ತದೆ) ಧರಿಸಲು ಹೇಳುತ್ತಾರೆ. ತನ್ನ ಪಿತೃಗಳಿಗೆ ನೀಡಬೇಕಾದ ತರ್ಪಣ ವಿಧಿಯನ್ನು ಆಚರಿಸಲು ಒಬ್ಬ ಪುರೋಹಿತ ಶಿಷ್ಯನಿಗೆ ನೆರವಾಗುತ್ತಾನೆ. ಇದರ ನಂತರ ಹೋಮವನ್ನು ನಡೆಸಲಾಗುತ್ತದೆ. ಅದರ ನಂತರ ಇಡೀ ರಾತ್ರಿ ಗಾಯತ್ರೀ ಮಂತ್ರವನ್ನು ಉಚ್ಚರಿಸುತ್ತ ಜಪ ಮಾಡಬೇಕಾಗುತ್ತದೆ. ಮರು ದಿನ ಸ್ವಾಮೀಜಿಯವರು ಶಿಷ್ಯನನ್ನು ಗಂಗಾ ನದಿಗೆ ಕರೆದುಕೊಂಡುಹೋಗುತ್ತಾರೆ. ಅಲ್ಲಿ ನದಿಯಲ್ಲಿ ಇಳಿದು ತನ್ನೆಲ್ಲ ವಸ್ತ್ರಗಳನ್ನು ಕಳಚಿಹಾಕುವುದರೊಂದಿಗೆ ಸನ್ಯಾಸ ದೀಕ್ಷಾ ಸಮಾರಂಭ ಮುಕ್ತಾಯವಾಗುತ್ತದೆ.

ವಸ್ತ್ರವನ್ನೆಲ್ಲಾ ಕಳಚಿಹಾಕಿದ ನಂತರ ಶಿಷ್ಯನು ತನ್ನ ಜೀವನ ಕೊನೆಗೊಳಿಸುವ ಸಲುವಾಗಿ ಹಿಮಾಲಯದತ್ತ ಹೋಗುವುದನ್ನು ಅನುಕರಿಸುವಂತೆ ಉತ್ತರದ ದಿಕ್ಕಿನೆಡೆಗೆ ನಡೆಯುತ್ತಾನೆ. ಆ ಹಂತದಲ್ಲಿ ಸ್ವಾಮೀಜಿ ಶಿಷ್ಯನನ್ನು ಕುರಿತು– "ನೀನು ಹಿಮಾಲಯಕ್ಕೆ ಹೋಗಬೇಕಾಗಿಲ್ಲ. ಇಲ್ಲಿ ಬಾ., ನಿನಗೆ ಸನ್ಯಾಸ ನೀಡುತ್ತೇನೆ" ಎನ್ನುತ್ತಾರೆ. ಅದರರ್ಥ ಜೀವನ ಇನ್ನೂ ಕೊನೆಗೊಂಡಿಲ್ಲ ಎಂದು.

ಮುಂದಿನ ಹಂತದಲ್ಲಿ ಗುರುವಾದವರು ಶಿಷ್ಯನಿಗೆ ಹೊಸ "ಸನ್ಯಾಸ ನಾಮ" ನೀಡುತ್ತಾರೆ. ಹೆಸರನ್ನು ಮುಂಚೆ ಆರಿಸಿರುವುದಿಲ್ಲ. ಇದು ಗುರುವಿನ ಅಂತಃ ಪ್ರಜ್ಞೆಯಲ್ಲಿ ಆ ಕ್ಷಣಕ್ಕೆ ಸ್ಫುರಿಸುವ ಹೆಸರು. ಹೆಸರನ್ನು ಮುಂಚೆಯೇ ಆಯ್ಕೆಮಾಡಿದರೆ ಅದು ಸಾರ್ಥಕವಾಗುವುದಿಲ್ಲ ಎನ್ನುತ್ತಾರೆ ಸ್ವಾಮಿ ದಯಾನಂದರು. ಆನಂತರದಲ್ಲಿ ಗುರುವಾದವರು ಸನ್ಯಾಸಿ ಶಿಷ್ಯನಿಗೆ ಹೊಸ ಜೀವನದಲ್ಲಿ ಅವನ ನಡೆ ಹೇಗೆ ಎಂಬುದರ ಬಗ್ಗೆ ತಿಳಿಸಿಕೊಡುತ್ತಾರೆ. ಸಾಧುವಾದವನು ಮೂರು ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಅವುಗಳೆಂದರೆ ಅಹಿಂಸಾ ಮನೋಭಾವದಿಂದಿರುವುದು, ಮತ್ತು ಸ್ಪರ್ಧಾ ಮನೋಭಾವ ತೋರದಿರುವುದು,

ಏನನ್ನೂ ಒತ್ತಾಯದಿಂದ ಕೇಳದಿರುವುದು. ಈ ಸನ್ಯಾಸ ದೀಕ್ಷೆಯ ನಂತರ ಸನ್ಯಾಸಿ ಈ ಲೌಕಿಕ ಪ್ರಪಂಚದಲ್ಲಿದ್ದೂ ಅದರ ವ್ಯವಹಾರಗಳಲ್ಲಿ ಭಾಗಿಯಾಗದೆ ಇರಬೇಕು.

ಸ್ವಾಮಿ ಸರ್ವಭೂತಾನಂದರು ಸನ್ಯಾಸದೀಕ್ಷಾವಿಧಿಯ ವಿವರಣೆಯನ್ನು ಮುಗಿಸಿದ ಮೇಲೆ– "ನಿಮ್ಮ ಕುಟುಂಬದ ಸದಸ್ಯರು ಈ ಸಮಾರಂಭದಲ್ಲಿ ಹಾಜರಿದ್ದರೆ?"– ಎಂದು ಕೇಳಿದೆ.

"ಇಲ್ಲ. ಕೇವಲ ಇತರ ಸನ್ಯಾಸಿಗಳಷ್ಟೇ ಇದ್ದರು. ಕುಟುಂಬದವರು ಅನಂತರದಲ್ಲಿ ನನ್ನನ್ನು ಭೇಟಿಮಾಡಲು ಬಂದರು. ಈಗ ನಾನು ಅವರ ಬಂಧುವಲ್ಲ."

ಆನಂತರದಲ್ಲಿ ನನಗೆ ತಿಳಿದುಬಂದದ್ದು: ಸ್ವಾಮಿ ದಯಾನಂದರ ಆಶ್ರಮದಲ್ಲಿ ಇದನ್ನೆಲ್ಲ ಅತ್ಯಂತ ವ್ಯವಸ್ಥಿತವಾಗಿ ಏರ್ಪಾಟು ಮಾಡಲಾಗಿರುತ್ತದೆ ಎಂದು. ಹೊಸ ಸಾಧುಗಳಿಗೆ ನೀಡಲಾಗುವ ಕಾಷಾಯ ವಸ್ತ್ರಗಳು ಅತ್ಯಂತ ಬೆಲೆಬಾಳುವ ಅತ್ಯುತ್ಕೃಷ್ಟ ಗುಣಮಟ್ಟದವಾಗಿರುತ್ತವೆ. ಸಮಾರಂಭದ ನಂತರ ಸನ್ಯಾಸಿ ಶಿಷ್ಯನನ್ನು ಮೊದಲ ಭಿಕ್ಷೆಯ ಸಲುವಾಗಿ ಕಾರಿನಲ್ಲಿ ಕಾಲಿ ಕಂಬ್ಳಿವಾಲಾ ಅನ್ನಕ್ಷೇತ್ರಕ್ಕೆ ಕರೆದೊಯ್ಯಲಾಗುತ್ತದೆ. ಆದರೆ ಈ ಸಾಧು ಇತರ ಸಾಧುಗಳ ಹಾಗೆ ಸರತಿಯ ಸಾಲಿನಲ್ಲಿ ನಿಲ್ಲಬೇಕಾಗಿಲ್ಲ. ಒಳಗೆ ಕರೆದುಕೊಂಡುಹೋಗಿ ಪ್ರತ್ಯೇಕವಾಗಿ ಭೋಜನ ನೀಡಲಾಗುತ್ತದೆ.

ಒಂದೇ ವರ್ಷದಲ್ಲಿ ಇಪ್ಪತ್ತಾರು ಶಿಷ್ಯರಿಗೆ ಅವಸರದಲ್ಲಿ ಸನ್ಯಾಸ ನೀಡಿದ್ದನ್ನು ಕಟುವಾಗಿ ಟೀಕಿಸಲಾಯಿತೆಂದು ತಿಳಿದುಬಂತು. ಗುರು ಸಾಮಾನ್ಯವಾಗಿ ಸನ್ಯಾಸ ದೀಕ್ಷೆಯನ್ನು ಯಾವಾಗಲೂ ಮುಂದೆಹಾಕುತ್ತಿರುತಾರೆ. ಮತ್ತು ಶಿಷ್ಯನ ಎದುರು ಅನೇಕ ಕಠಿಣ ಸವಾಲುಗಳನ್ನು ಒಡ್ಡುತ್ತಿರುತ್ತಾರೆ.

ಇಲ್ಲಿ ವಿವರಿಸಲಾಗಿರುವ ಸನ್ಯಾಸ ದೀಕ್ಷಾ ಸಮಾರಂಭವು ಸನ್ಯಾಸ ತೆಗೆದು ಕೊಳ್ಳುವವರೆಲ್ಲರೂ ಸಾಮಾನ್ಯವಾಗಿ ಅನುಸರಿಸುವ ಸಮಾರಂಭವೇ ಆಗಿದೆ. ಹೋಮವನ್ನು ಪುರೋಹಿತರ ನೆರವಿನಿಂದ ಸ್ವಯಂ ಶಿಷ್ಯನೇ ಮಾಡುತ್ತಾನೆ. ಅವನು ಲೌಕಿಕ ಪ್ರಪಂಚದ ಪಾಲಿಗೆ ಸತ್ತ ಲೆಕ್ಕವಾದ್ದರಿಂದ ಅವನ ಪಾಲಿಗೆ ಯಾವ ಬಂಧುಗಳೂ ಇಲ್ಲ. ಹಾಗಾಗಿ ಸ್ವಯಂ ಆತ್ಮ ಪಿಂಡವನ್ನು ಕೊಟ್ಟುಕೊಳ್ಳುತ್ತಾನೆ. ಇಲ್ಲಿ ಎಂಬುದು ಪ್ರಾಸಂಗಿಕವಾಗಿ ಪ್ರಸ್ತಾಪಿಸಬಹುದಾದ ಒಂದು ಕುತೂಹಲಕಾರಿ ಸಂಗತಿ ಉಂಟು. ಸನ್ಯಾಸ ದೀಕ್ಷೆಯ ಆಚರಣೆಯ ಒಂದು ಅಂಶವನ್ನು ಹೋಲುವ ಆಚರಣೆಯನ್ನು ದಕ್ಷಿಣ ಭಾರತದ ವಿವಾಹಗಳಲ್ಲಿ ನಡೆಸಲಾಗುತ್ತದೆ. ಅದೆಂದರೆ ವರನು ಹೋಮವನ್ನು ಮುಗಿಸಿದ ಮೇಲೆ ಅಧ್ಯಯನದ ಸಲುವಾಗಿ ಕಾಶಿ ಯಾತ್ರೆಗೆ ಹೊರಡಲು ಸಿದ್ಧನಾದಂತೆ ಕಂಡುಬರುತ್ತಾನೆ. ಆಗ ಮಾವನಾಗಲಿರುವವನು ತನ್ನ ಭಾವಿ ಅಳಿಯನಿಗೆ– "ಕಾಶಿಗೆ ಹೋಗುವುದು ಬೇಡ. ನಿನಗೆ ನನ್ನ ಮಗಳನ್ನು ಕೊಡುತ್ತೇನೆ" ಎಂದು ತಡೆಹಾಕುತ್ತಾನೆ.

□□

ಗುರುಗಳು ಮತ್ತು ದೇವರು

ಆಧ್ಯಾತ್ಮಿಕ ಗ್ರಂಥಗಳು ಜಿಜ್ಞಾಸುವನ್ನು ನಿಜವಾದ ಅರಿವಿನೆಡೆಗೆ ಕೊಂಡೊಯ್ಯುವಂಥವು ಎಂದು ನಾಲ್ಕು ಪ್ರಕಾರದ ಯೋಗಗಳನ್ನು ವಿವರಿಸುತ್ತಾರೆ. ಸಂಸ್ಕಾರವಂತ ಮನಸ್ಸನ್ನು ಈಗಾಗಲೇ ಹೊಂದಿರುವಂಥವರಿಗೆ **ಜ್ಞಾನಯೋಗವೇ** ಅತ್ಯುತ್ತಮವಾದ ಮಾರ್ಗ. ಅದರದ್ದು ಆತ್ಮನಿರೀಕ್ಷಣೆ ಮತ್ತು ವಿಶ್ಲೇಷಣೆಯ ಹಾದಿ. ಅತ್ಯಂತ ಕ್ರಿಯಾಶೀಲವಾದ ಮನಸ್ಸಿನವರಿಗೆ ಮನಸ್ಸನ್ನು ಶಾಂತಗೊಳಿಸಲು **ರಾಜಯೋಗವು** ಮನೋದೈಹಿಕ ಅಭ್ಯಾಸಗಳು ಮತ್ತು ನೈತಿಕ ಮನೋಧರ್ಮವನ್ನು ನಿಗದಿಪಡಿಸುತ್ತದೆ. ಏನೇ ಆದರೂ ನಮ್ಮಲ್ಲಿಯ ಬಹಳಷ್ಟು ಜನರಿಗೆ **ಕರ್ಮಯೋಗದ** ಹಾದಿಯೇ ಸರಿಯಾದ್ದು. ಅದರದ್ದು ಫಲಾಫಲಗಳ ಬಗ್ಗೆ ಯೋಚಿಸದೆ ವಿಹಿತವಾದ ಕರ್ತವ್ಯ ಕರ್ಮಗಳನ್ನು ಮಾಡುತ್ತಾ ಹೋಗುವುದು. ನಾಲ್ಕನೆಯದು **ಭಕ್ತಿಯೋಗದ** ಮಾರ್ಗ. ಇದರಲ್ಲಿ ವ್ಯಕ್ತಿಯು ತನ್ನ ಇಷ್ಟ ದೈವದ ಪ್ರೀತಿ ಮತ್ತು ದಯೆಗೆ ತನ್ನನ್ನು ತಾನು ಸಮರ್ಪಿಸಿಕೊಳ್ಳುತ್ತಾನೆ ಮತ್ತು ಅವನ ಪಾಲಿನ ವಿಧಿ ಅಥವಾ ಅದೃಷ್ಟ ಏನನ್ನೇ ದಯಪಾಲಿಸಿದರೂ ಅದನ್ನು ಅಂಗೀಕರಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳುತ್ತಾನೆ. ಅತ್ಯಂತ ಭಾವುಕ ಮನಸ್ಸಿನವರಿಗೆ ಇದು ತುಂಬ ಸೂಕ್ತವಾದ ವಿಧಾನ. ಈ ಪುಸ್ತಕದ ಪ್ರಾರಂಭದ ಭಾಗದಲ್ಲಿ ವಿವರಿಸಿರುವ ನನ್ನ ಅಂತರ್ಯಾತ್ರೆಯು ರಾಜಯೋಗದ ಮಾರ್ಗವೇ ಆಗಿತ್ತು. ಎಲ್ಲ ವರ್ಗದ ಸಾಧುಗಳನ್ನೂ ಸಾಮುದಾಯಿಕ ಸ್ಥಿತಿಗಳಲ್ಲಿ ಇಲ್ಲವೆ ನಿಶ್ಚಿತ ನೆಲೆಗಳಿಲ್ಲದ ಸಂಚಾರ ಸ್ಥಿತಿಯಲ್ಲಿ ಕಾಣಬಹುದು.

ನಾಲ್ಕೂ ಮಾರ್ಗದ ಸಾಧುಗಳು, ಯಾವುದೇ ವಿಶಿಷ್ಟ ವರ್ಗ ಇಲ್ಲವೆ ಗುಂಪಿಗೆ ಸೇರದ ಸಂಚಾರೀ ಸಾಧುಗಳನ್ನೂ ಒಳಗೊಂಡಂತೆ ವಿಭಿನ್ನ ಸಂಪ್ರದಾಯದ ಸಾಧುಗಳನ್ನು ನಾವು ಭೇಟಿಮಾಡಿದೆವಾದರೂ ಅವರೆಲ್ಲರಲ್ಲೂ ಹೆಚ್ಚಿನ ಸಾಮಾನ್ಯತೆ ಇತ್ತು. ಅವರೆಲ್ಲರೂ ಬ್ರಹ್ಮ ಮತ್ತು ಆತ್ಮದ ಐಕ್ಯತೆಯ ಬಗ್ಗೆ ಹೇಳುತ್ತಿದ್ದರು. ಶಂಕರಾಚಾರ್ಯ ಸಂಪ್ರದಾಯದ ಶಿವನ ಅನುಯಾಯಿಗಳಲ್ಲಿ ಇದನ್ನು ನಾನು ಕಂಡುಕೊಂಡೆ. ಆದರೆ ಇದನ್ನು ಬಹುಮಟ್ಟಿಗೆ ಎಲ್ಲ ಸಂಪ್ರದಾಯಗಳವರೂ ಸ್ವೀಕರಿಸಿದ್ದಂತೆ ಕಂಡುಬಂದಿತು. ಎಲ್ಲ ಸಾಧುಗಳೂ ಪ್ರತಿನಿತ್ಯವೂ ಸಾಧನೆ ಅರ್ಥಾತ್ ಆಧ್ಯಾತ್ಮ ಸಾಧನೆ ಮಾಡುತ್ತಾರೆ. ಈ ಸಾಧನೆಗಳು ಅವರುಗಳ ಸಂಪ್ರದಾಯಕ್ಕೆ ತಕ್ಕಂತೆ ಬೇರೆ ಬೇರೆಯಾಗಿರುತ್ತವೆ. ವೇದಾಂತಿಗಳು ತಮ್ಮ

ಮನೋಧರ್ಮವನ್ನು ಬೌದ್ಧಿಕ ಚರ್ಚೆಗಳ ಮೂಲಕ ಬದಲಾಯಿಸಿಕೊಳ್ಳುವ ಸಲುವಾಗಿ ಧಾರ್ಮಿಕ ಗ್ರಂಥಗಳ ಅಧ್ಯಯನದಲ್ಲಿ ತಮ್ಮ ಜೀವನವನ್ನು ಕಳೆಯುತ್ತಾರೆ. ಇನ್ನು ಕೆಲವರು ಭಕ್ತಿಯ ಭಾವನಾತ್ಮಕ ಪ್ರಕ್ರಿಯೆಗಳನ್ನು ಪಾಲಿಸುತ್ತಾರೆ. ಇದರಲ್ಲಿ ಅವರುಗಳು ತಮ್ಮ ಇಷ್ಟ ದೈವದ ಸ್ತುತಿ ಭಜನೆಗಳ ಮೂಲಕ ತಮ್ಮ ಭಕ್ತಿನಿವೇದನೆ ಮಾಡುತ್ತಾರೆ. ಕೆಲವರು ದೈಹಿಕ ಮತ್ತು ಮಾನಸಿಕ ಅಭ್ಯಾಸಗಳನ್ನು ಒಳಗೊಂಡ ಯೋಗಶಾಸ್ತ್ರವನ್ನು ಅನುಸರಿಸುತ್ತಾರೆ. ಇನ್ನು ಕೆಲವರು ಈಡೇರಿಸಲು ಅತ್ಯಂತ ಕಷ್ಟವಾದ ಶವ್ರತಗಳನ್ನು ಕೈಗೊಳ್ಳುತ್ತಾರೆ. ಕೆಲವೊಮ್ಮೆ ಈ ಶವ್ರತಗಳು ದೈಹಿಕ ಶಕ್ತಿಯ ಹಸಿಹಸಿ ಪ್ರದರ್ಶನವಾಗಿದ್ದು ಇತರೆ ಸಾಧುಗಳು ಇವನ್ನು ಒಪ್ಪುವುದಿಲ್ಲ. ಸನ್ಯಾಸದ ಇನ್ನಿತರೆ ಪ್ರಕಾರಗಳಲ್ಲಿ ಕೇವಲ ಹಣ್ಣು ಹಂಪಲುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕಾರದ ಆಹಾರ ಸ್ವೀಕರಿಸದಿರುವಂಥ ವ್ರತಗಳು. 102 ವರ್ಷದ ಒಬ್ಬ ಸ್ವಾಮೀಜಿಯನ್ನು ನಾನು ಭೇಟಿಮಾಡಿದ್ದೆ. ಅವರ ವ್ರತವೆಂದರೆ 11000 ಅಡಿ ಎತ್ತರದಲ್ಲಿದ್ದ ತಮ್ಮ ಕುಟೀರದಿಂದ ಎಂದಿಗೂ ಹೊರಬರದಿರುವುದು. ಒಮ್ಮೆ ಅವರು ಕಾಯಿಲೆ ಬಿದ್ದರು. ಆಪರೇಷನ್ ಮಾಡಬೇಕಾಗಿತ್ತು. ಅವರು ತಮ್ಮ ಕುಟೀರವನ್ನು ಬಿಟ್ಟು ಹೊರಬರಲು ನಿರಾಕರಿಸಿದ್ದರಿಂದ ಅವರ ಭಕ್ತರು ಶಸ್ತ್ರ ವೈದ್ಯರು ಮತ್ತು ಅವರ ತಂಡವನ್ನು ಹೆಲಿಕಾಪ್ಟರ್ ಮೂಲಕ ಕರೆತರಬೇಕಾಯಿತು. ಒಂದೇ ಜಾಗದಲ್ಲಿ ನೆಲೆ ನಿಂತದ್ದೇ ಆದರೆ ಆ ಜಾಗದ ಬಗ್ಗೆ ಭಾವನಾತ್ಮಕ ವ್ಯಾಮೋಹ ಬೆಳೆಯುವ ಕಾರಣ ಸದಾ ಸಂಚಾರದಲ್ಲಿರುವ ವ್ರತ ಕೈಗೊಳ್ಳುವ ಸನ್ಯಾಸಿಗಳು ಕೆಲವರು.

* * *

ಭಾರತೀಯ ಪರಂಪರೆಯಲ್ಲಿ ಗುರು ಅತ್ಯಂತ ಪ್ರಮುಖ ವ್ಯಕ್ತಿ. ಸರಿಯಾದ ಗುರುವನ್ನು ಕಂಡುಕೊಳ್ಳುವುದು ಬಹಳ ಮುಖ್ಯ. ಹೊಸ ಸಾಧುವನ್ನು ಸ್ವಾಗತಿಸುವಲ್ಲಿ ಮತ್ತು ಪುನರ್ ಆಶ್ವಾಸನೆ ನೀಡುವಲ್ಲಿ ಗುರುವಿನ ಪಾತ್ರದ ಬಗೆಗೆ ಬಹಳಷ್ಟು ಕಥೆಗಳನ್ನು ಕೇಳಿದ್ದೆವು. ವಾಸ್ತವವಾಗಿ ಗುರು ಶಿಷ್ಯ ಈ ಬಾಂಧವ್ಯ ದೀಕ್ಷೆ ಸ್ವೀಕರಿಸಿದ ಅನಂತರದಲ್ಲಿ ಅನೇಕ ವರ್ಷಗಳವರೆಗೂ ಇರುತ್ತದೆ; ಬಹಶಃ ಜೀವನ ಪರ್ಯಂತದವರೆಗೆ ಮುಂದುವರಿಯುತ್ತದೆ. ಸಾಧುವಿಗೂ ಆತನ ಗುರುವಿಗೂ ಇರುವ ಸಂಬಂಧದ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಸಿಕ್ಕ ಪ್ರತಿಕ್ರಿಯೆಗಳೆಂದರೆ ಆದರ, ಕೃತಜ್ಞತೆ ಮತ್ತು ಭಕ್ತಿ.

ರಾಮಾನಂದಗಿರಿ ಹೇಳುವುದೆಂದರೆ– "ಗುರು–ಶಿಷ್ಯರ ನಡುವಿನ ಸಂಬಂಧ ಸರಿಯಾಗಿ ಸ್ಥಾಪಿತವಾಗುವುದು ಅವರಿಬ್ಬರ ಮನಸ್ಸುಗಳು ಪರಸ್ಪರ ಬೆಸೆದುಕೊಂಡಾಗ. ನನ್ನ ಗುರುವಿನೊಂದಿಗೆ ನನಗಿದ್ದ ಸಂಬಂಧ ಈ ಬಗೆಯದು. ಅಂಥ ಪರಿಸ್ಥಿತಿಯಲ್ಲಿ ಗುರುವನ್ನು ಶಿಷ್ಯ ಹೆಚ್ಚು ಕೇಳುವ ಅಗತ್ಯವಿರುವುದಿಲ್ಲ, ಗುರು ಕೂಡ ಹೆಚ್ಚು ತಿಳಿಯಹೇಳುವುದೇನೂ ಇರುವುದಿಲ್ಲ. ಏನಾಗಬೇಕೋ ಅದು ತನ್ನಷ್ಟಕ್ಕೆ ತಾನೇ ಆಗುತ್ತಿರುತ್ತದೆ."

ನಾಗಾ ಸಾಧುವೊಬ್ಬನು ತಾನು ಗುರುವನ್ನು ಹೇಗೆ ಕಂಡುಕೊಂಡೆ ಮತ್ತು ಗುರುವಿನೊಂದಿಗೆ ತನ್ನ ಸಂಬಂಧ ಯಾವ ರೀತಿಯದು ಎಂದು ತಿಳಿಸಿದ್ದು ಹೀಗೆ:

"ನನ್ನ ಜೊತೆಯ ಸಾಧುವಿನೊಂದಿಗೆ ನಾನು ದೆಹಲಿಗೆ ಹೋಗಿದ್ದಾಗ ಒಂದು ಆಶ್ರಮಕ್ಕೆ ಹೋದೆ. ಅಲ್ಲಿ ಒಂದು ಮೂಲೆಯಲ್ಲಿ ನಗ್ನ ಸಾಧುವೊಬ್ಬ ಕುಳಿತಿರುವುದನ್ನು ನೋಡಿದೆವು. ನಾವು ಅವರಿಗೆ ಸ್ವಲ್ಪ ಚಹಾ ನೀಡಿದೆವು. ಅವರು ಕೋಪಗೊಂಡಿದ್ದರು. ಕೇಳಿದರು– "ನಿನಗೆ ಗುರು ಇದ್ದಾರೆಯೆ ಅಥವಾ ಇಲ್ಲವೆ?" "ನಾನೊಬ್ಬ ಬ್ರಹ್ಮಚಾರಿ, ಅನನುಭವಿ, ಹೊಸಬ. ಗುರು ಇಲ್ಲ." ಎಂದು ಹೇಳಿದೆ. ನಾನೊಂದು ವೇಳೆ ಆಶ್ರಮದ ಮುಖ್ಯಸ್ಥನ ಶಿಷ್ಯನಾಗುವುದಾದರೆ ನಾವು ಕೊಟ್ಟ ಚಹಾ ಸ್ವೀಕರಿಸುವುದಾಗಿ ಹೇಳಿದರು. ಹಾಗಾಗಿ ನಾನು ಆಶ್ರಮದ ಮುಖ್ಯಸ್ಥನ ಶಿಷ್ಯನಾದೆ.

"ನೀವು ಶಿಷ್ಯನಾಗುವ ಮುಂಚೆ ನಿಮ್ಮನ್ನು ಪರೀಕ್ಷೆಗೊಳಪಡಿಲಾಯಿತೆ?"

"ಹೌದು. ನನ್ನ ಗುರು ಐದು ಸಾವಿರ ರೂಗಳನ್ನು ನೀಡಿ ಮನೆಗೆ ಹಿಂತಿರುಗಲು ಹೇಳಿದರು. ನಾನು ಹಣವನ್ನು ನಿರಾಕರಿಸಿದೆ. 'ನನಗೆ ಹಣವಾಗಲಿ, ಚಿನ್ನ ಬೆಳ್ಳಿಯಾಗಲಿ ಅಥವಾ ನಿಮ್ಮ ಮನೆಯಾಗಲಿ ಯಾವುದೂ ಬೇಡ. ಆ ಮರದ ಕೆಳಗೆ ನಿನ್ನ ಇಡೀ ಜೀವನ ಕಳೆ ಎಂದು ನೀವು ಹೇಳಿದರೆ ಅದಕ್ಕೆ ನಾನು ಸಿದ್ಧ. ಹೋಗು, ಸದಾ ಸಂಚರಿಸುತ್ತಿರು ಎಂದು ನೀವು ಹೇಳಿದರೆ ನಾನು ಹಾಗೆಯೇ ಮಾಡುತ್ತೇನೆ'–ಎಂದು ಹೇಳಿದೆ. ನನಗೆ ಬೇಕಾಗಿದ್ದುದೇನಿದ್ದರೂ ಸನ್ಯಾಸ ಮಾತ್ರ . ಸನ್ಯಾಸಿಯಾಗಬೇಕೆಂಬುದೇ ನನ್ನ ಇಚ್ಛೆ."

ಗುರು ಅವನಿಗೆ ಕೂಡಲೇ ಸನ್ಯಾಸದೀಕ್ಷೆ ನೀಡಲಿಲ್ಲ. "ನನ್ನ ಗುರುವಿನೊಂದಿಗೆ ಇಪ್ಪತ್ತೆರಡುದಿವಸ ಇದ್ದೆ. ಆಮೇಲೆ ಅವರು ನನ್ನನ್ನು ಅಲಹಾಬಾದಿಗೆ ಕರೆದೊಯ್ದರು ಅಲ್ಲಿ ನನ್ನ ದೀಕ್ಷಾ ಸಂಸ್ಕಾರ ನಡೆಯಿತು. ನನ್ನ ಜಾತಿ ಯಾವುದೆಂದೂ ಕೇಳಿದರು. ಕೆಳಜಾತಿಯವರಿಗೆ ಅವರು ದೀಕ್ಷೆ ನೀಡುವುದಿಲ್ಲ. ನಾನು ಠಾಕುರ್ ಜಾತಿಯವನಾಗಿದ್ದರಿಂದ ನನಗೆ ದೀಕ್ಷೆ ನೀಡಿದರು."

ಗುರುವಿನೊಂದಿಗೆ ಆತನ ಸಂಬಂಧದ ಬಗ್ಗೆ ಕೇಳಲಾದ ಪ್ರಶ್ನೆಗೆ ಸ್ಪಷ್ಟವಾಗಿ ಹೀಗೆ ಹೇಳಿದ– "ನಮ್ಮ ಗುರುಗಳು ನಮ್ಮನ್ನು ತಮ್ಮ ಸ್ವಂತ ಮಕ್ಕಳಂತೆ ನೋಡಿಕೊಂಡರು. ನಮಗೆ ಅವರು ಯೋಗ ಕಲಿಸಿದರು ಮತ್ತು ಧಾರ್ಮಿಕ ಗ್ರಂಥಗಳನ್ನು ಬೋಧಿಸಿದರು. ನಾವು ಚೆನ್ನಾಗಿ ಅಧ್ಯಯನ ಮಾಡಿದಾಗ ಪ್ರೀತಿ ತೋರಿಸುತ್ತಿದ್ದರು. ಅದೇ ಚುರುಕಾಗಿಲ್ಲದೆ ತಪ್ಪು ಮಾಡಿದರೆ ತುಂಬ ಕೋಪ ಬಂದುಬಿಡುತ್ತಿತ್ತು. ಯೋಗ ತರಬೇತಿಯ ಅವಧಿಯಲ್ಲಿ ನಾವು ನಿದ್ರೆ ಹೋಗಿದ್ದರೆ ನಮ್ಮ ಮುಖದ ಮೇಲೆ ನೀರೆರಚಿ ಎಚ್ಚರಗೊಳಿಸಿ ಮತ್ತೆ ಅಭ್ಯಾಸಕ್ಕೆ ಹಚ್ಚುತ್ತಿದ್ದರು. ಅವರು ನಮ್ಮ ದೇಹಗಳನ್ನು ಬಲಯುತವಾಗಿ ಮಾಡಿದರು. ಆ ತರಬೇತಿಯಿಂದಾಗಿಯೇ ನನ್ನ ಶರೀರ ಆರೋಗ್ಯದಿಂದಿದೆ. ನನಗೊಂದು ವೇಳೆ

ಕಾಯಿಲೆ ಆದರೂ ನಾನೇ ಯೋಗದಿಂದ ಸರಿಪಡಿಸಿಕೊಳ್ಳಬಲ್ಲೆ. ನನ್ನ ಜೀವನದಲ್ಲಿ ಇದುವರೆಗೂ ಯಾವತ್ತೂ ಔಷದಿ ತೆಗೆದುಕೊಂಡಿಲ್ಲ."

ಮುಕ್ತಾನಂದರು ತಮ್ಮ ಗುರುಗಳ ಬಗ್ಗೆ ಅತ್ಯಂತ ಪ್ರೀತಿಯಿಂದ ಮಾತನಾಡಿದರು– "ನನ್ನ ಗುರುಗಳು ದ್ವೇಷವೆಂದರೇನೆಂದೇ ತಿಳಿಯದ ಪ್ರೇಮದ ಸಾಗರವಾಗಿದ್ದರು; ಈಗಲೂ ಆಗಿದ್ದಾರೆ. ತಂದೆ ಮಗನನ್ನು ನೋಡಿಕೊಳ್ಳುವುದಕ್ಕಿಂತ ಚೆನ್ನಾಗಿ ನನ್ನನ್ನು ನೋಡಿಕೊಂಡರು. ಸ್ವತಃ ತಾವೇ ರಾತ್ರಿ ಮೂರು ಗಂಟೆಗೆ ಏಳುತ್ತಿದ್ದರು. ತಮ್ಮ ದಿನನಿತ್ಯದ ಸ್ನಾನವೇ ಮೊದಲಾದ ಬೆಳಗಿನ ಕೃತ್ಯಗಳಾದ ಮೇಲೆ ನನಗಾಗಿ ಬಿಸಿ ಬಿಸಿ ಹಾಲು ಮತ್ತು ಸ್ನಾನಕ್ಕೆ ಬಿಸಿನೀರು ತಂದಿಟ್ಟುಕೊಂಡು ಆನಂತರವೇ ನಿದ್ರೆಯಿಂದ ಎಬ್ಬಿಸುತ್ತಿದ್ದರು. ಚಳಿಗಾಲದಲ್ಲಿ ನನಗಾಗಿ ಅವರು ಉದ್ದಿನ ಹಿಟ್ಟು ಮತ್ತು ಒಣ ಹಣ್ಣುಗಳಿಂದ ಮಾಡಿದ ಲಾಡು ಉಂಡೆಗಳನ್ನು ಮಾಡಿಕೊಡುತ್ತಿದ್ದರು. ಈ ಲಾಡುಗಳು ಶರೀರವನ್ನು ಬೆಚ್ಚಗಿಡುತ್ತವೆ ಮತ್ತು ಬುದ್ಧಿ ಶಕ್ತಿಯನ್ನು ಹೆಚ್ಚಿಸುತ್ತವೆ. ನನಗೆ ಶಿಕ್ಷಣ ನೀಡಿದರು. ವೇದಾಂತ ಗ್ರಂಥಗಳನ್ನು ಬೋಧಿಸಿದರು. ಈ ಕಲಿಯುಗದಲ್ಲಿ ಇಂಥ ಒಬ್ಬ ಗುರುಗಳು ನನಗಿರುವುದಕ್ಕೆ ನಾನು ನಿಜಕ್ಕೂ ಅದೃಷ್ಟಶಾಲಿ." ಇದನ್ನು ಹೇಳುತ್ತಿದ್ದಂತೆ ಅವರ ಕಣ್ಣುಗಳಿಂದ ನೀರು ಹೊರಹೊಮ್ಮುತ್ತಿತ್ತು.

ರಾಮಾನಂದರನ್ನು ಅವರ ಗುರುಗಳ ಹೆಸರೇನೆಂದು ಕೇಳಿದಾಗ "ಅವರ ಹೆಸರು ಶ್ರೀ ಶ್ರೀ 108 ಸ್ವಾಮಿ ವಿಶಿಷ್ಟಾತ್ಮಾನಂದ"– ಎಂದು ಹೇಳಿದರು.

ನನಗೆ ಎಂದೂ ಅರ್ಥವೇ ಆಗದಿರುವ ಸಂಗತಿಯೊಂದರ ಬಗ್ಗೆ ಸ್ಪಷ್ಟೀಕರಿಸಲು ಕೇಳಬೇಕೆಂದು ತೀರ್ಮಾನಿಸಿದೆ. "ಯಾರದ್ದಾದರೂ ಹೆಸರಿನೊಂದಿಗೆ 108 ಎಂದು ಹಾಕುವುದರ ಅರ್ಥವೇನು?"

ಅವರು ತಮ್ಮ ಕಣ್ಣುಗಳನ್ನು ಮುಚ್ಚಿ ಕೆಲವು ಕ್ಷಣಗಳ ನಂತರ ಹೇಳಿದರು. "ಶ್ರೀ ಶ್ರೀ ಎಂಬುದನ್ನು ಯಾರಿಗಾದರೂ ಗೌರವ ಸೂಚಕವಾಗಿ ಬಳಸಲಾಗುತ್ತದೆ. 108 ರುಂಡಮಾಲಿಯಾದ ಶಿವನು ಧರಿಸಿರುವ ಹಾರದಲ್ಲಿರುವ ತಲೆಬುರುಡೆಗಳ ಸಂಖ್ಯೆ. ಒಂದು ಕಡೆಗೆ 36 ಕಪಾಲಗಳು(ತಲೆಬುರುಡೆ) ಇನ್ನೊಂದು ಕಡೆಗೆ 36 ಕಪಾಲಗಳು, ಹೃದಯದ ಮೇಲೆ 8 ಕಪಾಲಗಳು, ಕೊರಳ ಸುತ್ತ 8, ಮೇರು ದಂಡದ ಮೇಲೆ 21, ಎಲ್ಲ ಸೇರಿ ಒಟ್ಟು 108. ಈ ಸಂಖ್ಯೆ ಶರೀರದೊಳಗಿನ ನಾನಾ ಕೀಲುಗಳದೂ ಹೌದು. ನಿಮಗಿದು ಗೊತ್ತಿತ್ತೆ? ಶಿವನ ಆತ್ಮ ಮತ್ತು ನಿಮ್ಮ ಆತ್ಮ ಎರಡೂ ಒಂದೇ. ಅಲ್ಲವೆ? ನೀವು ಮತ್ತು ದೇವರು ಒಂದೇ ಎಂಬ ಸತ್ಯವನ್ನು ಅರಿತಾಗ ನೀವು 108 ಪದವಿಗೆ ಅರ್ಹರೆನಿಸುತ್ತೀರಿ."

"ಈ ಸತ್ಯವನ್ನು ನೀವು ಅರ್ಥಮಾಡಿಕೊಂಡಿದ್ದೀರಿ ಎಂಬುದನ್ನು ನಿರ್ಣಯಿಸುವವರು ಯಾರು?" – ನಾನು ಕೇಳಿದೆ.

"ನಿಮ್ಮ ಶಿಷ್ಯರು ತೀರ್ಮಾನಿಸುತ್ತಾರೋ ಅಥವಾ ಇತರೆ ಸಾಧುಗಳು ಇದನ್ನು ತೀರ್ಮಾನಿಸುತ್ತಾರೋ?"

"ಇಲ್ಲ, ಇಲ್ಲ. ಈ ಸತ್ಯವನ್ನು ವ್ಯಕ್ತಿಯು ಸ್ವತಃ ತನ್ನ ಅಂತಃ ಪ್ರಜ್ಞೆಯಿಂದ ಅರಿಯುತ್ತಾನೆ. ಹೀಗೆ ಅನುಭೂತಿ ಹೊಂದಿದಾಗ ಈ ಉಪಾಧಿಯನ್ನು ನಿಮ್ಮ ಹೆಸರಿಗೆ ನೀವೇ ಸೇರಿಸಿಕೊಳ್ಳಬಹುದು." – ಹೀಗೆಂದು ಹೇಳುತ್ತ ಈ ರೀತಿಯ ಪ್ರಶ್ನೆಗೆ ಮುಕ್ತಾಯ ಹಾಡಿದರು.

ದೀಕ್ಷೆ ತೆಗೆದುಕೊಳ್ಳುವ ಮುನ್ನ ಈ ವ್ಯಕ್ತಿ ತಮ್ಮ ಗುರುವಿನೊಂದಿಗೆ ಐದು ವರ್ಷಗಳ ಕಾಲ ಇದ್ದರು. ಮೂರು–ನಾಲ್ಕು ವರ್ಷಗಳ ನಂತರ ಅವರು ಆಶ್ರಮವನ್ನು ಬಿಟ್ಟು ಗುರುವಿನ ಸೂಚನೆಯ ಮೇರೆಗೆ ಬೇರೆ ಕಡೆ ಹೊರಟರು.

* * *

ನಮ್ಮೊಂದಿಗೆ ಮಾತು–ಕತೆ ನಡೆಸಲು ಒಪ್ಪಿ ಬಂದ ಸಾಧುಗಳು ಬೇರೆ ಬೇರೆ ಹಿಂದೂ ಪರಂಪರೆಗಳಿಗೆ ಸೇರಿದವರಾಗಿದ್ದರು. ಕೆಲವರು ಧರ್ಮಗ್ರಂಥಗಳಲ್ಲಿ ಅಪಾರವಾದ ಅಧ್ಯಯನವನ್ನು ಮಾಡಿದವರಾಗಿದ್ದರು. ಅಲ್ಲದೆ ಧರ್ಮಶಾಸ್ತ್ರದ ಬಗೆಗಿನ ಪ್ರಶ್ನೆಗಳ ಬಗೆಗೂ ಪರಿಶ್ರಮವಿದ್ದವರಾಗಿದ್ದರು. ಕೆಲವರಂತೂ ಅತ್ಯುನ್ನತ ವಿದ್ಯಾಭ್ಯಾಸ ಮಾಡಿದವರಾಗಿದ್ದರು. ಬಹುವೇಳೆ ಶಿಷ್ಯನು ಅನುಸರಿಸಬೇಕಾದ ಮಾರ್ಗವನ್ನು ನಿರ್ಧರಿಸುತ್ತಿದ್ದುದು ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಲೊಪ್ಪುವ ಗುರು. ತಮ್ಮ ಈಗಿನ ಜೀವನವು ತಮ್ಮ ಹಿಂದಿನ ಜನ್ಮಗಳ ಪ್ರಭಾವದ ಫಲವಾಗಿ ಪೂರ್ವನಿರ್ಧಾರಿತವಾದದ್ದು ಎಂದು ಹೇಳಿದರು. ಹಿಂದೂ ಪೌರಾಣಿಕ ಪರಂಪರೆ ಅತ್ಯಂತ ಶ್ರೀಮಂತವಾದದ್ದು. ಆದರೆ ದೇವತೆಗಳು, ದೇವಿಯರುಗಳು ಮತ್ತು ಅವರುಗಳನ್ನು ಬೆಂಬಲಿಸುವವರ ಜಾತಿಯ ರಾಜ್ಯದಲ್ಲಿ ಧಾರ್ಮಿಕ ಬಹುತ್ವದ ದೃಢವಾದ ಸೂತ್ರ ಮತ್ತು ಎಲ್ಲ ವಸ್ತುಗಳ ಆತ್ಯಂತಿಕ ಏಕತೆಯಲ್ಲಿ ದೃಢ ನಂಬಿಕೆಯಿದೆ. ಹತ್ತೊಂಬತ್ತನೇ ಶತಮಾನದ ಧಾರ್ಮಿಕ ಬಹುತ್ವದ ಪ್ರತಿಪಾದಕರಾದ ಶ್ರೀ ರಾಮಕೃಷ್ಣ ಪರಮಹಂಸರು ಹೀಗೆ ಹೇಳುತ್ತಾರೆ:

ದೇವನನ್ನು ಹಲವು ಹೆಸರುಗಳು ಮತ್ತು ಅನಂತ ರೂಪಗಳ ಮುಖಾಂತರ ತಲುಪಬಹುದು. ಸತ್ಯ ಒಂದೇ. ವ್ಯತ್ಯಾಸವಿರುವುದೆಲ್ಲಾ ಹೆಸರುಗಳು ಮತ್ತು ರೂಪಗಳಲ್ಲಿ. ಕೆಲವರು ಸತ್ಯವನ್ನು ಅಲ್ಲಾ ಎಂದು ಕರೆದರೆ ಇನ್ನು ಕೆಲವರು ದೇವರು ಎಂದು, ಬ್ರಹ್ಮ ಎಂದು, ಕಾಳಿ ಎಂದು, ಕರೆಯುತ್ತಾರೆ. ಮತ್ತೆ ಕೆಲವರು ರಾಮ, ಯೇಸು, ದುರ್ಗಾ ಹರಿ ಎಂದೆಲ್ಲಾ ಕರೆಯುತ್ತಾರೆ.

ದೇವರು ನಿರಾಕಾರನೂ ಹೌದು, ಸಾಕಾರನೂ ಹೌದು. ಅವನು ಸಾಕಾರ ನಿರಾಕಾರಗಳನ್ನು ಮೀರಿದವನೂ ಹೌದು.

(ಭಾರತ್: ಸತ್ಯದ ಸ್ಪರ್ಶ)

ಯಾವುದೇ ಪರಂಪರೆ ಅಥವಾ ಪಂಥಕ್ಕೆ ಸೇರಿದವರಾಗಿದ್ದರೂ ನಾವು ಸಂದರ್ಶಿಸಿದ ಬಹಳಷ್ಟು ಸಾಧುಗಳು ಈ ಲೋಕದೃಷ್ಟಿಯನ್ನು ಹೊಂದಿದವರೇ ಆಗಿದ್ದರು

ಸಾಂಪ್ರದಾಯಿಕ ಹಿಂದುವೊಬ್ಬನ ಆತ್ಯಂತಿಕ ಗುರಿ ಮೋಕ್ಷ ಸಂಪಾದನೆ ಅಥವಾ ಜನ್ಮಾಂತರಗಳ ಬಂಧನದಿಂದ ಬಿಡುಗಡೆ ಹೊಂದುವುದು. ನಮ್ಮ ಮಾತು–ಕತೆಗಳಲ್ಲಿ ನಮ್ಮ ಆಸಕ್ತಿ ಮುಖ್ಯವಾಗಿ ಧಾರ್ಮಿಕ ಬದುಕನ್ನು ಕುರಿತಂತೆ ಸಾಧುಗಳ ದೃಷ್ಟಿಕೋನ ಏನು, ಅವರ ಪ್ರೇರಣೆ ಯಾವುದು, ಅವರ ಸಂಘರ್ಷ ಮತ್ತು ಸಂತೃಪ್ತಿ ಇವುಗಳ ಬಗೆಗೇ ಇರುತ್ತಿತ್ತು. ಕೆಲವು ಸಂನ್ಯಾಸಿಗಳಿಗೆ ಬಲವಾದ ಮಾರ್ಗದರ್ಶನದ ಪ್ರಜ್ಞೆ ಇತ್ತು. ಅದಕ್ಕೆ ತಮ್ಮ ಇಷ್ಟ ದೈವ ಕಾರಣವೆಂದು ಅವರುಗಳು ಆ ದೈವಕ್ಕೆ ಸಮರ್ಪಿಸುತ್ತಿದ್ದರು. ಇತರ ಸನ್ಯಾಸಿಗಳು ಹಾಗೆ ದೈವ ಕುರಿತಂತೆ ವೈಯಕ್ತಿಕವಾದ ಪ್ರಜ್ಞೆ ಅಷ್ಟು ಬಲವಾಗಿಲ್ಲದವರು. ಸಕಲ ಜೀವಿಗಳ ಪರಸ್ಪರ ಸಂಬಂಧ ಮತ್ತು ಏಕತೆ ಕುರಿತಂತೆ ಹೇಳಲಿಚ್ಛಿಸುತ್ತಿದ್ದರು. ವ್ಯಕ್ತಿಯ ಆತ್ಮ ದೇವನ ಆತ್ಮವೇ ಹೊರತು ಬೇರೆಯಲ್ಲ; ಆದರೆ ಅದರ ಸಮಗ್ರತೆಯಲ್ಲಿ ಈ ಸತ್ಯದ ಅನುಭೂತಿಯನ್ನು ಸಾಧಿಸುವುದು ಅಷ್ಟೊಂದು ಸುಲಭವಲ್ಲ.

ಬದರೀನಾಥಕ್ಕೆ ಹೋಗುವ ದಾರಿಯಲ್ಲಿರುವ ಗಣೇಶ ದೇವಸ್ಥಾನದಲ್ಲಿ ಒಬ್ಬ ದೊಡ್ಡ ಆಧ್ಯಾತ್ಮಿಕ ಸಾಧುಗಳು ಇರುವುದಾಗಿ ನಮ್ಮ ಟ್ಯಾಕ್ಸಿ ಡ್ರೈವರ್ ಹೇಳಿದನು. ಹಾಗೆ ಬದರೀನಾಥಕ್ಕೆ ಹೋಗುತ್ತಿರುವಾಗ ಸುಮಾರು ಆರು ಅಡಿ ಉದ್ದ, ಆರು ಅಡಿ ಅಗಲ ಮತ್ತು ಆರು ಅಡಿ ಎತ್ತರವಿದ್ದ ಒಂದು ಸಾಧಾರಣ ಕಟ್ಟಡದ ಮುಂದೆ ಟ್ಯಾಕ್ಸಿಯನ್ನು ನಿಲ್ಲಿಸಿದನು. ಅಲ್ಲಿ ಮರದ ಗಣೇಶ ಮೂರ್ತಿಯ ಮುಂದೆ ಉದ್ದನೆಯ ಗಡ್ಡ ಬಿಟ್ಟಿದ್ದ ಸಾಧುವೊಬ್ಬರು ಕುಳಿತಿದ್ದರು. ಮೂರ್ತಿಯ ಪಕ್ಕದ ಗೋಡೆಯ ಮೇಲೆ ರಾಮ, ಸೀತಾ, ಲಕ್ಷ್ಮಣ, ಹನುಮಂತ ಮತ್ತು ಕೃಷ್ಣರ ಚಿತ್ರಗಳನ್ನು ತಗಲುಹಾಕಲಾಗಿತ್ತು. ದೇವಸ್ಥಾನವಿದ್ದುದು ಗಂಗೆಯ ಗುಪ್ತಗಾಮಿನಿಯಾದ ಉಪನದಿಯೊಂದು ಮುಖ್ಯ ನದಿಯನ್ನು ಸೇರುವ ಸ್ಥಳದಲ್ಲಿ. ಕೆಳಭಾಗದಲ್ಲಿ ನದಿಯತ್ತ ದೃಷ್ಟಿ ಹಾಯಿಸುವ ಜಾಗದಲ್ಲಿ ತಗಡಿನ ಹೊದಿಕೆ ಹೊದಿಸಿದ, ಮರದಿಂದ ನಿರ್ಮಿಸಿದ ಒಂದು ಕುಟೀರ ಕಾಣುತ್ತಿತ್ತು. ಅದು ಈ ಸಾಧು ವಾಸಮಾಡುತ್ತಿದ್ದ ಕುಟೀರ. ಅವರ ಹೆಸರು ಸ್ವಾಮಿ ಮಾಧವಾನಂದ. ಅವರ ತಂದೆ ತಾಯಿಗಳು ಒಂದು ರೈಲು ದುರ್ಘಟನೆಯಲ್ಲಿ ಮೃತಿಹೊಂದಿದ್ದರು. ದೇವರೇ ತಮ್ಮನ್ನು ರಕ್ಷಿಸಿದವನೆಂದು ಹಾಗೂ ತಮ್ಮ ಜೀವನವನ್ನು ನಿಯಂತ್ರಿಸುತ್ತಿರುವವನು ಅವನೇ ಎಂದು ಅವರು ನಂಬಿದ್ದರು. ಅಷ್ಟೇ ಅಲ್ಲ, ತಮಗೆ ದೀಕ್ಷೆ ಕೊಟ್ಟವನೂ ದೇವರೇ, ಗುರು

ಏನಿದ್ದರೂ ಆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದವರು ಎಂದೂ ನಂಬಿದ್ದರು. ನೀವು ಹರಿದ್ವಾರಕ್ಕೆ ಹೇಗೆ ಬಂದಿರಿ ಎಂದು ಕೇಳಿದಾಗ– "ನಾನು ಉದ್ದೇಶಪೂರ್ವಕವಾಗಿ ಏನನ್ನೂ ಮಾಡಿದ್ದಲ್ಲ, ದೇವರು ಎಲ್ಲೆಲ್ಲಿಗೆ ಕರೆದೊಯ್ದನೋ ಅಲ್ಲಿಗೆ ನಾನು ಹೋದೆ. ನೀವು ನೋಡುತ್ತಿರುವ ಈ ದೇವಸ್ಥಾನ 250 ವರ್ಷಗಳಷ್ಟು ಹಳೆಯದು. ಇದನ್ನು ನೋಡಿಕೊಳ್ಳುವವರೊಬ್ಬರು ಬೇಕಾಗಿತ್ತು. ಆ ಕಾರ್ಯ ನಾನು ಕೈಗೊಂಡೆ. ಭಗವಾನ್ ಗಣೇಶನ ಈ ಮೂರ್ತಿ ಕಲ್ಲಿನದಲ್ಲ, ಮರದಿಂದ ಮಾಡಿದ್ದು. ನಾನು ದೇವಸ್ಥಾನವನ್ನು ದಿನವೂ ಬೆಳಿಗ್ಗೆ ಚೊಕ್ಕಟಗೊಳಿಸುತ್ತೇನೆ. ದೇವರಿಗೆ ಮಾಡಬೇಕಾದ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತೇನೆ. ವರ್ಷಪೂರ್ತಿ– ಹನ್ನೆರಡೂ ತಿಂಗಳು – ನಾನು ಇಲ್ಲೇ ಇರುತ್ತೇನೆ." ಎಂದರು.

"ಹಿಮಪಾತದ ಸಮಯದಲ್ಲೂ ಇಲ್ಲೇ ಇರುತ್ತೀರಾ?"

"ಇಲ್ಲಿ ಹೆಚ್ಚು ಹಿಮ ಬೀಳುವುದಿಲ್ಲ. ಈ ಜಾಗ ಎತ್ತರವಾದ ಪರ್ವತವೊಂದರ ನೆರಳಿನಲ್ಲಿದೆ. ಆದರೆ ಇಲ್ಲಿ ತುಂಬಾ ಚಳಿಯಾಗುತ್ತದೆ."

"ಊಟಕ್ಕೇನು ಮಾಡುತ್ತೀರಿ?"

"ಓಹ್ ! ನನ್ನ ಅಗತ್ಯಗಳು ತೀರಾ ಮಿತವಾದವು. ನಾನಾ ಚಹಾ ಕುಡಿಯುವುದಿಲ್ಲ. ನಾನು ಧೂಮಪಾನ ಮಡುವುದಿಲ್ಲ. ಟ್ರಕ್ ಡ್ರೈವರ್‌ಗಳು ಕೆಲವೊಮ್ಮೆ ಇಲ್ಲಿ ನಿಲ್ಲುತ್ತಾರೆ. ಅವರು ನನಗೆ ಆಹಾರ ತಂದುಕೊಡುತ್ತಾರೆ."

"ನಿಮ್ಮನ್ನು ಒಂಟಿತನ ಕಾಡುವುದಿಲ್ಲವೆ?"

"ನಾನು ಒಂಟಿ ಅಲ್ಲ. ದೇವರು ನನ್ನ ಜೊತೆ ಸದಾ ಇರುತ್ತಾನೆ. ಆಮೇಲೆ ನಿಮ್ಮಂಥ ಆಗಂತುಕರು ಇರುತ್ತಾರೆ. ಅನೇಕ ವಿದೇಶೀಯರು ಕೂಡ ಇಲ್ಲಿ ಬರುತ್ತಾರೆ– ಕೇವಲ ನನ್ನನ್ನು ನೋಡುವ ಸಲುವಾಗಿ. ನಿಮ್ಮ ಹಾಗೆ ಅಲ್ಲ. ನೀವು ಕೇಳುತ್ತಿರುವಂಥ ಪ್ರಶ್ನೆಗಳನ್ನು ಜನ ಕೇಳುವುದಿಲ್ಲ. ಹೌದು, ಅವರಿಗೆ ಫೋಟೋಗಳನ್ನು ತೆಗೆಯುವುದೆಂದರೆ ತುಂಬ ಇಷ್ಟ."

"ನೀವು ಸಮಯವನ್ನು ಹೇಗೆ ಕಳೆಯುತ್ತೀರಿ?"

"ಇಡೀ ದಿನ ಮಂತ್ರಗಳನ್ನು ಹೇಳುತ್ತ ಮತ್ತು ದೇವರ ಬಗ್ಗೆ ಮಾತನಾಡುತ್ತ."

"ಅಂದರೆ ನಿಮಗೆ ಸನ್ಯಾಸ ದೀಕ್ಷೆ ನೀಡುವಾಗ ನಿಮ್ಮ ಗುರುಗಳು ಹೇಳಿಕೊಟ್ಟ ಮಂತ್ರ ತಾನೆ?"

"ನನ್ನ ಗುರು ನನಗೆ ಮಂತ್ರ ನೀಡಲಿಲ್ಲ. ಅದು ನನ್ನ ಮನಸ್ಸಿಗೆ ತನಗೆ ತಾನೆ

ಬಂತು. ಹೀಗೆ ಬಂದ ಮಂತ್ರದ ಬಗ್ಗೆ ಗುರುಗಳಿಗೆ ಹೇಳಿದಾಗ ಅದು ಸರಿಯಾಗೇ ಇದೆ ಎಂದರು."

"ಆದರೂ ಹೀಗೆ ಒಬ್ಬರೇ ಇರುವುದೆಂದರೆ?"

"ಒಬ್ಬನೇ ಇರುವುದರ ಬಗ್ಗೆ ಹೇಳುತ್ತಿದ್ದೀರಾ? ಈ ಜಗತ್ತಿನಲ್ಲಿ ಪ್ರತಿಯೊಬ್ಬನೂ ಒಬ್ಬನೇ ಬರುತ್ತಾನೆ ಮತ್ತು ಒಬ್ಬನೇ ಹೋಗುತ್ತಾನೆ. ಇನ್ನು ನಾನು ಆಗಲೇ ಹೇಳಿದ ಹಾಗೆ ದೇವರು ನನ್ನ ಜೊತೆ ಯಾವಾಗಲೂ ಇರುತ್ತಾನೆ. ಕೆಲವು ವರ್ಷಗಳ ಹಿಂದೆ ಒಂದು ದೊಡ್ಡ ಭೂಕಂಪ ಆಯಿತು. ಕಂಪನ ಆರು ಗಂಟೆಗಳ ತನಕ ಇತ್ತು. ಎಲ್ಲ ಕಡೆಯಿಂದಲೂ ಕಲ್ಲುಗಳು ಬೀಳುತ್ತಾ ಇದ್ದವು. ಆದರೂ ನಾನು ಜೀವಂತ ಉಳಿದೆ. !"

"ನನ್ನ ದಿನಚರ್ಯೆ ಇದು. ಇಲ್ಲಿ ನಾನು ಬೆಳಿಗ್ಗೆ ಆರು ಗಂಟೆಯಿಂದ ರಾತ್ರಿ ಒಂಬತ್ತೂವರೆಯ ವರೆಗೂ ಇರುತ್ತೇನೆ. ಆ ನಂತರ ಕೆಳಗೆ ಇರುವ ನನ್ನ ಕುಟೀರಕ್ಕೆ ಹೋಗಿ ನನ್ನ ಅಡುಗೆ ಮಾಡಿಕೊಳ್ಳುತ್ತೇನೆ. ಊಟ ದಿನಕ್ಕೆ ಒಮ್ಮೆ ಮಾತ್ರ. ರಾತ್ರಿ ಹನ್ನೆರಡೂವರೆ ಅಥವಾ ಒಂದು ಗಂಟೆಗೆ ಮಲಗುತ್ತೇನೆ. ಬೆಳಗಿನ ಜಾವ ಮೂರು ಗಂಟೆಗೆಲ್ಲ ಎದ್ದುಬಿಡುತ್ತೇನೆ. ನನ್ನ ಪ್ರಾತರ್ವಿಧಿಗಳನ್ನು ಮುಗಿಸಿ ಕುಟೀರದಲ್ಲಿ ಭಜನೆಗಳನ್ನು ಹಾಡುತ್ತೇನೆ. ಇದು ಮೂರು ಗಂಟೆಗಳ ಕಾಲ ಸಾಗುತ್ತದೆ. ಆಮೇಲೆ ದೇವಸ್ಥಾನದ ಕೆಲಸಗಳನ್ನು ಮಾಡಲು ಇಲ್ಲಿಗೆ ಬಂದುಬಿಡುತ್ತೇನೆ."

"ನೀವು ದೇವರನ್ನು ನೋಡುತ್ತೀರಾ? ಹಾಗಿದ್ದರೆ ಯಾವ ರೂಪದಲ್ಲಿ?"

ನಿಜ, ನಾನು ದೇವರನ್ನು ನೋಡುತ್ತೇನೆ. ಸಕಲ ವಸ್ತುಗಳಲ್ಲಿಯೂ ದೇವರನ್ನು ಕಾಣುತ್ತೇನೆ. ಈ ಅರಳಿ ಮರ ಇದೆಯಲ್ಲ–ಇದರ ವಿಶಿಷ್ಟ ಆಕಾರ ನೋಡಿ. ಇದರಲ್ಲಿ ನೀವು ದೇವರನ್ನು ಕಾಣಲಾರಿರಾ? ಈ ನದಿ, ಈ ಪರ್ವತ–ಇದೆಲ್ಲವೂ ದೇವರೇ. ಯಾವುದೋ ಒಂದು ಗೊತ್ತಾದ ಆಕೃತಿಯಲ್ಲಿ ದೇವರನ್ನು ಕಾಣುವ ಅಗತ್ಯವೆಲ್ಲಿದೆ? ನೋಡಿ, ಬೇರೆ ಬೇರೆ ದೇವರುಗಳಿಲ್ಲ. ಬೇರೆ ಬೇರೆ ಧರ್ಮಗಳಿಲ್ಲ. ಇರುವುದು ಒಂದೇ ದೇಶ (ಜಗತ್ತು), ಒಂದೇ ಜಾತಿ, ಒಂದೇ ಧರ್ಮ. ಎಲ್ಲವೂ ಸನಾತನ ಧರ್ಮ.–ಅದು ಅನಾದಿ ಮತ್ತು ಅನಂತ. ನಿಜ, ಕ್ರಿಶ್ಚಿಯನ್ನರು ಮತ್ತು ಮುಸಲ್ಮಾನರೂ ಇದ್ದಾರೆ. ಆದರೆ ಅವರು ಬರುವ ಮುನ್ನ ಇದ್ದದ್ದು ಸನಾತನ ಧರ್ಮವೊಂದೇ. ಇತರ ಧರ್ಮಗಳು ಇಲ್ಲದೆ ಇದ್ದಾಗಲೂ ಇದು ಇದ್ದೇ ಇರುತ್ತದೆ."

ಆಂತರಿಕ ಒತ್ತಡ ಎಂಬಂಥದು ಅಸಾಧಾರಣವಾದ್ದೇನಲ್ಲ. ಕೆಲವು ಸನ್ಯಾಸಿಗಳು ಪ್ರಾರಬ್ಧದ ಬಗ್ಗೆ ಅಂದರೆ ಈಗಿನ ಜನ್ಮದ ಕರ್ಮಗಳ ಮೇಲೆ ಹಿಂದಿನ ಜನ್ಮದ ಕರ್ಮಗಳ ಪ್ರಭಾವ–ಪರಿಣಾಮಗಳನ್ನು ಕುರಿತು ಹೇಳಿದರು. ಘನಶ್ಯಾಮದಾಸ್ ಎಂಬ

ಸಾಧು– "ಎಲ್ಲವೂ ಭಗವಂತನ ಸಂಕಲ್ಪದ ಮೇಲೆಯೇ ನಡೆಯುತ್ತಿದೆ. ನಾನು ಮಾಡಿದ್ದಕ್ಕೆ ನಾನು ಜವಾಬ್ದಾರನೆಂದು ನಾನು ತಿಳಿದರೆ ಅದು ಕೇವಲ ಅಹಂಕಾರ. ಅದು ಮಿಥ್ಯಾಭಿಮಾನ. ನಾವೇನು ಮಾಡುತ್ತೇವೋ ಅದನ್ನು ಅವನೇ ನಮ್ಮಿಂದ ಮಾಡಿಸುತ್ತಾನೆ."

"ಭವಿಷ್ಯದ ಗರ್ಭದಲ್ಲಿ ಏನು ಹುದುಗಿದೆ ಎಂದು ಅವನಿಗೆ ಗೊತ್ತಿರುವುದಿಲ್ಲ. ನನಗೆ ಹೇಗೆ ಗೊತ್ತಾಗುತ್ತದೆ? ಅವನೇನು ಹೇಳುತ್ತಾನೋ ಅದೇ ಆಗುತ್ತದೆ. ಅವನು ಕುಳಿತುಕೋ ಎಂದರೆ ನಾನು ಕುಳಿತುಕೊಳ್ಳುತ್ತೇನೆ, ಅವನು ಮುಂದೆ ನಡೆ ಎಂದರೆ ನಡೆಯುತ್ತೇನೆ ಅಷ್ಟೆ." –ಎಂದು ಹೇಳಿದರು.

ಅವರು ಮತ್ತೂ ಮುಂದುವರಿದು– "ನೀವು ಏನಿದ್ದರೂ ದೇವರನ್ನು ಅನುಭವಕ್ಕೆ ತಂದುಕೊಳ್ಳಬಹುದು ಅಷ್ಟೆ." ಅವರು ಒಂದು ವಾಕ್ಯವನ್ನು ಉದ್ಧರಿಸುತ್ತ– 'ನಾನು ನೀವು ಅನುಭವಕ್ಕೆ ತಂದುಕೊಳ್ಳುವ ಗಾಳಿ. ನೀವು ಎಷ್ಟೇ ಪ್ರಯತ್ನ ಪಟ್ಟರೂ ಎಂದಿಗೂ ನನ್ನನ್ನು ಹಿಡಿಯಲಾರಿರಿ.'– ಎಂದು ಹೇಳಿದರು. "ದೇವರನ್ನು ಯಾರಾದರೂ ನೋಡಿರಲಿ ಅಥವಾ ನೋಡದೆ ಇರಲಿ, ಅವನು ಯಾವಾಗಲೂ ಇದ್ದಾನೆ."

ಒರಿಸ್ಸಾದ ಸಾಧುವೊಬ್ಬರು ತಾನು ನಿಜಕ್ಕೂ ದೇವರನ್ನು ನೋಡಿರುವುದಾಗಿ ಹೇಳುತ್ತಾ– "ಹೌದು ನೋಡಿದ್ದೇನೆ– ವಿವಿಧ ರೂಪಗಳಲ್ಲಿ. ನೀವು ಧ್ಯಾನಸ್ಥಿತಿಯಲ್ಲಿದ್ದಾಗ ದೇವರು ಯಾವ ರೂಪದಲ್ಲಿ ನಿಮ್ಮ ಮುಂದೆ ಕಾಣಿಸಿಕೊಳ್ಳಬೇಕೆಂದು ಬಯಸುತ್ತೀರೋ ಆ ರೂಪನ್ನು ನೀವು ಆಯ್ಕೆಮಾಡಿಕೊಳ್ಳಬಹುದು. ಮತ್ತು ಅವನು ಅದೇ ರೂಪಿನಿಂದ ನಿಮಗೆ ಕಾಣಿಸಿಕೊಳ್ಳುತ್ತಾನೆ. ನಿನ್ನೆ ದಿನ ನಾನು ಗಂಗಾ ಮಾತೆಯ ದರ್ಶನ ಮಾಡಿದೆ"– ಎಂದರು.

ಪ್ರೇಮದಾಸರು ಶಿವನನ್ನು ತಮ್ಮ ಗುರು ಎಂದು ಭಾವಿಸಿದ್ದರು. ತಾನು ಶಿವನೊಂದಿಗೆ ನೇರವಾಗಿ ಸಂವಾದ ನಡೆಸಿರುವುದಾಗಿ ಹಾಗೂ ಅವನನ್ನು ನೋಡಿರುವುದಾಗಿ ಹೇಳಿದರು. "ಒಮ್ಮೆ , ನಾನು ಅವನನ್ನು ಮನುಷ್ಯ ರೂಪಿನಲ್ಲಿ ನೋಡಬೇಕೆಂದಿರುವುದಾಗಿ ಹೇಳಿದಾಗ ಶಿವನು–' ಆಗಬಹುದು. ನಾನು ಬರುತ್ತೇನೆ. ಆದರೆ ನನ್ನೊಂದಿಗೆ ಮಾತಾಡಕೂಡದು. ನಾನು ಮಧ್ಯರಾತ್ರಿಯ ಸುಮಾರಿಗೆ ನೀನು ಲಿಂಗವನ್ನು ಸ್ಥಾಪಿಸಿರುವ ಸ್ಥಳಕ್ಕೆ ಬರುತ್ತೇನೆ.' ಎಂದನು. ಮಧ್ಯರಾತ್ರಿಯ ಹೊತ್ತಿಗೆ ಲಿಂಗವು ಬೆಳ್ಳಿಯ ಹಾಗೆ ಹೊಳೆಯತೊಡಗಿತು. ಆಗ ಎತ್ತರದ ಉದ್ದ ಗಡ್ಡದ ನೀಳ ಕೇಶದ ಶಿವನು ಬಂದ. ಬಂದು ನನ್ನತ್ತ ನೋಡಿ ಹೊರಟುಹೋದನು".

ಪ್ರೇಮದಾಸರು ಶಿವನನ್ನು ನೋಡಿದ್ದು ಅದೊಂದೇ ಸಲ. ಆದರೆ ಅವನ ಮಾತನ್ನು ಕೇಳುತ್ತಾರೆ ಮತ್ತು ಅವರಿಗೆ ಬೇಕೆನಿಸಿದಾಗಲೆಲ್ಲ ಶಿವನು ಅವರೊಂದಿಗೆ ಮಾತಾನಾಡುತ್ತಾನೆ.

ರಾಮ ಸುಖ ದಾಸರು, 'ಸಂಪೂರ್ಣ ಅಸ್ತಿತ್ವವನ್ನು, ಸಕಲ ಜೀವದ ಅಖಂಡತೆಯ ದರ್ಶನವನ್ನು' ಮಾಡುವಂಥ ಒಂದು ಬಿಂದುವನ್ನು ತಾವು ತಲುಪಿರುವುದಾಗಿ ನಮಗೆ ತಿಳಿಸಿದರು. ಅದರ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ಕೇಳಿದಾಗ "ಒಳ್ಳೆಯದು, ಈಗ ನಾನು ನಿಮಗೆ ಇದನ್ನು ತಿಳಿಸುತ್ತೀನಿ: ನಾನೊಂದು ವೇಳೆ ತುಂಬ ಪ್ರಸಿದ್ಧನೂ ನಂಬಲರ್ಹನೂ ಜ್ಞಾನಿಯೂ ಆದ ಸಾಧುವನ್ನು ಭೇಟಿಮಾಡಿದ್ದೇ ಆದರೆ, ಅವರು ಏನೆಲ್ಲವನ್ನೂ ಅರ್ಜಿಸಿದ್ದಾರೆ ಅದನ್ನು ವರ್ಗಾಯಿಸಿಬಿಡಬೇಕೆಂದು ನಾನೆಂದೂ ಬಯಸುವುದಿಲ್ಲ. ಬದಲಿಗೆ ಅವರು ಯಾವ ಮೂಲದಿಂದ ತಮ್ಮ ಪಾತ್ರೆಯನ್ನು ತುಂಬಿಸಿಕೊಂಡಿದ್ದಾರೋ ನಾನು ಕೂಡ ಅದೇ ಮೂಲದಿಂದ ನೀರು ತೆಗೆದುಕೊಳ್ಳಬೇಕು, ಅದು ಒಂದೇ ಒಂದು ತೊಟ್ಟಾದರೂ ಸರಿ ಎಂದು ನನ್ನ ಇಚ್ಛೆ."

"ಅಂದರೆ ನೀವು ದೇವರಿಂದಲೇ ನೇರವಾಗಿ ಜ್ಞಾನವನ್ನು ಪಡೆಯಲಿಚ್ಛಿಸುತ್ತೀರಿ?"

"ಹೌದು ! ನನಗೆ ಒಂದು ತೊಟ್ಟು ಮಾತ್ರ ಸಿಕ್ಕಿದರೂ, ಒಂದು ವೇಳೆ ಅದೇ ಮೂಲ ಎಂದು ಗೊತ್ತಾದರೆ ಕಾಲಾಂತರದಲ್ಲಿ ಪೂರಾ ಪಾತ್ರೆಯನ್ನು ತುಂಬಿಸಿಕೊಳ್ಳುತ್ತೇನೆ".

ತಾನು ಮಹಾಕಾಲನಾದ ಶಿವನನ್ನು ನೋಡಿರುವುದಾಗಿಯೂ ಅವರು ಹೇಳಿದರು.

"ನೀವು ಮಹಾಕಾಲನನ್ನು ನೋಡಿದ್ದರೆ ಕಾಲದ ನಿರಂತರತೆಯಲ್ಲಿ ಈ ಜೀವನ ಎನ್ನುವುದು ಒಂದು ಕ್ಷಣ ಮಾತ್ರ ಎಂದು ನಿಮಗೆ ಅರ್ಥವಾಗುತ್ತದೆ. ಇದನ್ನು ಸಾಧಿಸಲು ನಾನು ವಿಶೇಷವಾದದ್ದೇನನ್ನೂ ಮಾಡಲಿಲ್ಲ. ನಿಮಗೆ ಗುರಿಯೊಂದಿದ್ದರೆ ನೀವು ನಿರಾಯಾಸವಾಗಿ ಧ್ಯಾನದ ಸಮಾಧಿ ಸ್ಥಿತಿಯನ್ನು ತಲುಪಬಲ್ಲಿರಿ. ಧ್ಯಾನದ ಆ ಸ್ಥಿತಿಯಲ್ಲಿ ನೀವು ಏನನ್ನು ನೋಡಬೇಕೋ ಅದನ್ನೇ ನೋಡುತ್ತೀರಿ"

□□

ರಸ್ತೆಯ ಮೇಲೆ: ಸಂಚಾರಿ ಸಾಧುಗಳು

ಸಾಮಾನ್ಯವಾಗಿ ಸಾಧುವಾದವನು ಆಶ್ರಮದಲ್ಲಿ ಸಾಮುದಾಯಿಕ ಜೀವನ ನಡೆಸುತ್ತಾನೆ ಅಥವಾ ಮಾಧವಾನಂದರಂತೆ ಒಂದು ಗುಹೆ ಇಲ್ಲವೆ ಗುಡಿಸಿಲಿನಂಥ ಒಂದು ಜನದೂರವಾದ ಪ್ರತ್ಯೇಕ ಸ್ಥಳದಲ್ಲಿ ಸಂನ್ಯಾಸಿಯ ಬದುಕು ನಡೆಸುತ್ತಾನೆ ಅಥವಾ ನಿರಂತರ ಪಯಣದ ಬದುಕನ್ನೂ ನಡೆಸುತ್ತಾನೆ. ಹಿಮಾಲಯದಲ್ಲಿ ಹಿಮ ಕರಗಿತೆಂದರೆ ರಸ್ತೆಗಳೆಲ್ಲ ಯಾತ್ರಿಕರಿಂದ ತುಂಬಿರುತ್ತವೆ. ಅವರಲ್ಲಿ ಬಹಳಷ್ಟು ಜನ ಸಾಧುಗಳು. ಇವರಲ್ಲಿ ಕೆಲವರೊಡನೆ ಮಾತನಾಡುವಂಥ ಭಾಗ್ಯ ನಮಗೆ ದೊರಕಿತು. ಹಿಂದೂ ಸಂಪ್ರದಾಯದಲ್ಲಿ ತೀರ್ಥಯಾತ್ರೆ ಮತ್ತು ದೇಶಸಂಚಾರ ಬಹಳ ಮುಖ್ಯವಾದ್ದು.

ನಾವು ಭೇಟಿಮಾಡಿದ ಪರಿವ್ರಾಜಕ ನಾಗಾ ಸಾಧುವೊಬ್ಬನು, ಪರಿವ್ರಾಜಕನ ಬದುಕನ್ನು ವಿವರಿಸಿದನು.

"ನಾನು –ಕೇದಾರನಾಥ, ಜಮುನೋತ್ರಿ, ಬದರೀನಾಥ ಮತ್ತು ಗಂಗೋತ್ರಿಯೇ ಮೊದಲಾದ– ನಾಲ್ಕೂ ಪವಿತ್ರ ಧಾಮಗಳಿಗೆ ಹೋಗಿದ್ದೇನೆ. ನಾನು ಮೊದಲ ಬಾರಿಗೆ ಇಲ್ಲಿಗೆ ಬಂದೆ. ಸಾಧು ಬಾಬಾ ಒಬ್ಬರ ಜೊತೆ ಇದ್ದೆ. ಆಮೇಲೆ ಇಲ್ಲಿಂದ ಕೆಳಗಡೆ ಹದಿನೈದು ಕಿಲೋಮೀಟರ್ ದೂರದಲ್ಲಿರುವ ಸಾಧುವಿನ ಬಳಿಗೆ ಹೋದೆ. ಹೀಗೆ ನಾನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುತ್ತಾ ಇದ್ದೆ."

"ನೀವು ಒಬ್ಬರೇ ತಿರುಗಾಡುತ್ತೀರಾ?"

"ಹೌದು. ಕೆಲವರು ಯಾರದ್ದಾದರೂ ಜೊತೆಯಲ್ಲಿ ಓಡಾಡುತ್ತಾರೆ. ಆದರೆ ಬೇರೆಯವರ ಜೊತೆ ಪ್ರಯಾಣ ಮಾಡುವಾಗ ನಮ್ಮ ವಿಚಾರ, ಅಭ್ಯಾಸ, ಧೋರಣೆಗಳಲ್ಲಿ ಏನಾದರೂ ವ್ಯತ್ಯಾಸವಿದ್ದರೆ ಅದರಿಂದ ತೊಂದರೆಗಳಾಗಬಹುದು. ಅದಕ್ಕೋಸ್ಕರ ನಾನು ಒಬ್ಬನೇ ತಿರುಗಾಡಬಯಸಿದೆ."

"ಒಬ್ಬರೇ ತಿರುಗಾಡುವಾಗ ನಿಮಗೆ ಭಯವಾದದ್ದಿಲ್ಲವೆ?'

"ಇಲ್ಲ, ಯಾವತ್ತೂ ಇಲ್ಲ. ನಾನು ಎಲ್ಲ ಥರದ ಸ್ಥಳಗಳಿಗೆ ಹೋಗಿಬಂದಿದ್ದೇನೆ. ಸಾಧುಗಳು ಮದ್ಯ ಇಲ್ಲವೆ ಗಾಂಜಾ ತೆಗೆದುಕೊಳ್ಳುವ ಜಾಗಗಳಿಗೂ ಹೋಗಿದ್ದೇನೆ. ಸತ್ತ ಹೆಣಕ್ಕೆ ಜೀವ ಬರಿಸುವ ಶಕ್ತಿ ಹೊಂದಿರುವ ಸಾಧುಗಳನ್ನೂ ನೋಡಿದ್ದೇನೆ".

"ತಿರುಗಾಟದ ಬದುಕನ್ನು ಜೀವಿಸುವ ಈ ಸಾಧುಗಳು ಯಾವ ರೀತಿಯ ಬದುಕು ನಡೆಸುತ್ತಾರೆ?"

"ಅಯ್ಯೋ ! ಅದೊಂದು ಅದ್ಭುತ ಜೀವನ. ಅವರುಗಳು ತಮ್ಮ ಮನಸ್ಸಿನಲ್ಲಿರುವ ಭಗವಂತನೊಂದಿಗೆ ಸಂಚರಿಸುತ್ತಿರುತ್ತಾರೆ. ದೇವರ ಮೇಲೆ ಮನಸ್ಸನ್ನು ಕೇಂದ್ರೀಕರಿಸ ಬಹುದು. ದಟ್ಟ ಅರಣ್ಯದಲ್ಲಿ ಸಂಚರಿಸುತ್ತಿದ್ದರೂ ಭಯವಾಗುವುದಿಲ್ಲ. ಆಹಾರದ ಚಿಂತೆಯಿಲ್ಲದೆ ಹೋಗುತ್ತಿರುತ್ತಾರೆ. ಇದ್ದಕ್ಕಿದ್ದಂತೆ ಎಲ್ಲಿಂದಲೋ ಒಂದು ಕುಟೀರ ಕಾಣಿಸುತ್ತೆ. ಅಲ್ಲಿ ಬೆಂಕಿಯೂ ಇರುತ್ತೆ. ಆಹಾರವೂ ಬೇಯುತ್ತಿರುತ್ತದೆ. ಇದ್ದಕ್ಕಿದ್ದಂತೆ ಪಾತ್ರೆಗಳು ಕಾಣಿಸಿಕೊಳ್ಳುತ್ತವೆ. ಊಟ ಸಿಗುತ್ತೆ. ಊಟಮಾಡಿ ನಿದ್ದೆ ಹೋಗುತ್ತಾರೆ. ಬೆಳಿಗ್ಗೆ ಎದ್ದಾಗ ಅಲ್ಲಿ ಕುಟೀರವೂ ಇರುವುದಿಲ್ಲ, ಆತಿಥೇಯರೂ ಇರುವುದಿಲ್ಲ, ಬೆಂಕಿಯೂ ಇರುವುದಿಲ್ಲ, ಪಾತ್ರೆಗಳೂ ಇರುವುದಿಲ್ಲ. ಸಂಚಾರಿ ಸನ್ಯಾಸಿಗಳಲ್ಲಿ ಇಂಥ ಶಕ್ತಿಗಳು ಇರುತ್ತವೆ. ಅಂಥ ಶಕ್ತಿಯುಳ್ಳ ಸಾಧುಗಳು ಅನಾಮಧೇಯರಾಗಿದ್ದುಬಿಡಲಿಚ್ಛಿಸುತ್ತಾರೆ. ಜನಗಳಿಗೆ ಅವರ ಶಕ್ತಿಗಳ ಬಗ್ಗೆ ಗೊತ್ತಾದರೆ ಅವರ ತಪಶ್ಶಕ್ತಿ ನಾಶವಾಗುತ್ತದೆ".

"ತಿರುಗಾಟದಲ್ಲಿ ಸಿಗುವ ಸಂತಸ ಯಾವ ಬಗೆಯದು?"

"ಹಿಂದೆ ಟೆಲಿಫೋನ್ ಅಥವಾ ಟೆಲಿಗ್ರಾಫ್ ಇರಲಿಲ್ಲ. ಸುದ್ದಿಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ತಲುಪುತ್ತಿದ್ದುದು ತಿರುಗಾಟದಿಂದಲೇ. ಉದಾಹರಣೆಗೆ, ಮುಂಬಯಿಯಿಂದ ಬರುತ್ತಿರುವ ಸಾಧುವೊಬ್ಬನಿಗೆ ಬದರೀನಾಥದ ಹತ್ತಿರ ಇಂಥ ಉತ್ಸವ ಅಥವಾ ಹಬ್ಬ ನಡೆಯಲಿದೆ ಎಂದು ನೀವು ಹೇಳಬಹುದು. ಇತರ ಸುದ್ದಿಗಳೂ ಹೀಗೆಯೇ ಇನ್ನೊಂದು ಕಡೆಗೆ ತಲುಪುತ್ತವೆ.

"ನಿರಂತರವಾಗಿ ಸುತ್ತಾಡುವುದರ ಮತ್ತೊಂದು ಉದ್ದೇಶ ಯಾವುದೇ ಒಂದು ಸ್ಥಳಕ್ಕೆ ಅಂಟಿಕೊಳ್ಳದಿರುವುದು. ಸನ್ಯಾಸಿಗಳಾದ ನಾವು ಬೇರೆ ಬೇರೆ ಮನೆಗಳಿಂದ ಆಹಾರವನ್ನು ಕೇಳಿ ಪಡೆದು ತಿನ್ನಬೇಕೆಂದು ನಮಗೆ ಗುರೂಪದೇಶವಾಗಿರುತ್ತದೆ. ಐದು ಮನೆಗಳಿಂದ ಆಹಾರವನ್ನು ನಾವು ಬೇಡಿ ಪಡೆಯಬೇಕು. ಮೊದಲ ಮನೆಯಿಂದ ಪಡೆದುಕೊಂಡದ್ದು ಇರುವೆಗಳಿಗೆ ಹೋಗುತ್ತದೆ, ಎರಡನೆಯ ಮನೆಯದು ಹಸುವಿಗೆ, ಮೂರನೆಯ ಮನೆಯದು ನೀರಿಗೆ ಹೋಗುತ್ತದೆ. ನಾಲ್ಕನೆಯದು ನಮಗೆ, ಐದನೆಯ ಮನೆಯಿಂದ ಪಡೆದದ್ದನ್ನು ನಮ್ಮಲ್ಲಿಗೆ ಭೇಟಿಯಾಗಲು ಬಂದವರಿಗೆ ನೀಡುತ್ತೇವೆ. ಎಲ್ಲ ಮನೆಗಳಿಂದ ಪಡೆದ ಆಹಾರವನ್ನು ನಾವೇ ತಿಂದುಬಿಟ್ಟರೆ, ನಮಗೆ ಅದರಿಂದ ಒಳ್ಳೆಯದಾಗುವುದಿಲ್ಲ. ಅದನ್ನು ನೀಡಿದವರಿಗೂ ಆಧ್ಯಾತ್ಮದ ಪ್ರಯೋಜನ ದೊರೆಯುವುದಿಲ್ಲ."

"ನೀವು ಕಾಲಿಗೆ ಚಪ್ಪಲಿ ಇಲ್ಲದೆ ನಡೆದಾಡುತ್ತಿರುವುದನ್ನು ನೋಡುತ್ತಿದ್ದೇನೆ. ನಿಮಗೆ ಥಂಡಿಯಾಗುವುದಿಲ್ಲವೆ?"

"ಇಲ್ಲ, ಅದು ನಮಗೆ ಅಭ್ಯಾಸವಾಗಿಬಿಟ್ಟಿದೆ. ನನ್ನ ಕಾಲು ನೋಡಿ. ಅದಕ್ಕೆ ಯಾವುದೇ ಮೊಳೆ ಅಥವಾ ಕಲ್ಲು ಸಿಕ್ಕಿಕೊಂಡಿಲ್ಲ. ಇದು ಚಪ್ಪಲಿಯ ಅಟ್ಟೆ (ಸೋಲ್) ಇದ್ದಹಾಗಿದೆ. ಕಲ್ಲು ಮತ್ತು ಮರಳು ನಮಗೆ ಹೂವಿನ ಹಾಗೆ. ನಡೆದಾಡಲು ನಮಗೆ ದೇವರು ಗುಲಾಬಿ ಹೂವುಗಳ ದಾರಿಯನ್ನೇ ನಿರ್ಮಿಸಿದ್ದಾನೇನೋ ಎನ್ನುವಂತೆ ಅನ್ನಿಸುತ್ತೆ."

"ಇದು ನಿಜಕ್ಕೂ ಅದ್ಭುತ !"

"ನಮಗೆ ಯಾವುದರಿಂದಲೂ ತೊಂದರೆಯಾಗುವುದಿಲ್ಲ." ಆ ಸಮಯಕ್ಕೆ ಯಾರೋ ಒಬ್ಬ ಭಕ್ತನು ಕೆಲವು ಸಾಧುಗಳಿಗೆ ಏನೋ ದಾನ ನೀಡುತ್ತಿರುವುದನ್ನು ನೋಡಿ ಅವರು ವಿಚಲಿತರಾಗುತ್ತಾರೆ. ಹೇಳುತ್ತಾರೆ– "ಆ ಮನುಷ್ಯನನ್ನು ನೋಡಿ.......ಅವನು ಸಾಧುಗಳಿಗೆ ಚಿಲ್ಲರೆ ನಾಣ್ಯಗಳನ್ನು ಕೊಡುತ್ತಾ ಇದ್ದಾನೆ. ಈ ಕಾಲದಲ್ಲಿ 25 ಪೈಸೆ, 50 ಪೈಸೆ ನಾಣ್ಯಗಳಿಗೆ ಏನೂ ಬರುವುದಿಲ್ಲ. ಒಂದು ವೇಳೆ ಅವನು ಒಬ್ಬ ಸಾಧುವಿಗೆ ಒಂದು ಪೂರ್ತಿ ಊಟ ಕೊಡಿಸಿದರೆ ದೇವರ ನ್ಯಾಯಾಲಯದಲ್ಲಿ ಅವನಿಗೆ ಮೆಚ್ಚಿಗೆ ಸಿಗುತ್ತೆ."

"ಬಾಬಾ, ನೀವು ಸನ್ಯಾಸಿಯ ಬದುಕನ್ನು ಆಯ್ಕೆಮಾಡಿಕೊಂಡಿದ್ದೀರಿ. ಆದರೂ ಯಾವತ್ತೋ ಒಂದು ದಿನ ನಿಮ್ಮ ಜೀವನವೂ ಕೊನೆಗೊಳ್ಳುತ್ತೆ. ನಿಮಗೆ ಸಾವಿನ ಭಯ ಯಾವತ್ತಾದರೂ ಮನಸ್ಸಿಗೆ ಬಂದಿದೆಯೆ ಅಥವಾ ನಿಮ್ಮ ಜೀವನ ಯಾವತ್ತು ಕೊನೆಗೊಳ್ಳಬಹುದು ಅಂತ ಯಾವತ್ತಾದರೂ ಯೋಚಿಸಿದ್ದೀರಾ?"

"ಇಲ್ಲ, ಇಲ್ಲ." – ಅವರು ಭಾವುಕರಾಗಿ ಉತ್ತರಿಸಿದರು. "ಸಾವನ್ನು ಎದುರುಗೊಳ್ಳುವುದರಲ್ಲಿ ಭಯ ಯಾತಕ್ಕೆ ಆಗಬೇಕು? ಆತ್ಮಕ್ಕೆ ಎಂದೂ ಸಾವಿಲ್ಲ. ಜೀವಿಯೊಬ್ಬ ಹಳೆಯ ಉಡುಪನ್ನು ತ್ಯಜಿಸುವಂತೆ ತನ್ನ ದೇಹವನ್ನು ತ್ಯಜಿಸುತ್ತಾನೆ ಅಷ್ಟೆ.

"ನಿಮಗೆ ಬಟ್ಟೆ ಬದಲಾಯಿಸಲು ಹೆದರಿಕೆಯಾಗುತ್ತೇನು? ಸಾವು ಒಂದು ದಿನ ಬರಲೇ ಬೇಕು......ಕೆಲವು ದಿನಗಳಲ್ಲಿ.......ಕೆಲವು ವರ್ಷಗಳಲ್ಲಿ ಅಥವಾ ಹತ್ತು ಸಾವಿರ ವರ್ಷಗಳ ನಂತರವಾದರೂ.......ಅದು ಬರಲೇ ಬೇಕು. ಅದಕ್ಕೆ ಯಾಕೆ ಹೆದರುವುದು? ಮಹಾಕಾಲನನ್ನು ಪೂಜಿಸಿದವನು ಕಾಲಕ್ಕೆ ಏಕೆ ಹೆದರಬೇಕು? ಒಮ್ಮೆ ಒಬ್ಬ ಮನುಷ್ಯನು ಬ್ರಾಹ್ಮಣನ ಬಳಿಗೆ ಹೋಗಿ ತನಗೆ ದೆವ್ವದ ಕಾಟವಿದೆ ಎಂದು ಹೇಳಿದ. ಆಗ ಬ್ರಾಹ್ಮಣನು– 'ನನಗೆ ಹನ್ನೊಂದೂವರೆ ರೂಪಾಯಿ ಕೊಡು. ನಾನು ಅದನ್ನು ಓಡಿಸುತ್ತೇನೆ ಎಂದನು'. ಅವನ ಹತ್ತಿರ ಒಂದೇ ಒಂದು ಪೈಸೆಯೂ ಇರಲಿಲ್ಲ. ಆಗ ಬ್ರಾಹ್ಮಣ ಹೇಳಿದ– 'ನಿನ್ನ ಹತ್ತಿರ ಏನೂ ಇಲ್ಲದಿದ್ದರೆ ಆ ದೆವ್ವ ನಿನಗೇನು ಮಾಡ ಬಲ್ಲುದು !' ನಾನೊಬ್ಬ ನಗ್ನ ಸಾಧು. ನಾನು ಏಕಾದರೂ ಹೆದರಬೇಕು?"

"ದೇವರು ಎಲ್ಲೆಲ್ಲಿಯೂ ಇರುವುದಾದರೆ ಜನರು ಬದರೀನಾಥದಲ್ಲೇಕೆ ಗುಂಪು ಸೇರುತ್ತಾರೆ?"

"ವಿಷಯ ಏನೆಂದರೆ ಇಲ್ಲಿಯ ಶಾಂತತೆ ಮತ್ತು ಪ್ರಕೃತಿ ಸೌಂದರ್ಯ ನಮಗೆ ತುಂಬ ಇಷ್ಟವಾಗುತ್ತದೆ. ಮನಸ್ಸನ್ನು ಪೂಜೆಯ ಮೇಲೆ ಕೇಂದ್ರೀಕರಿಸಲು ಸಾಧ್ಯ. ಇಲ್ಲಿಂದ ಕೆಲವು ಕಿಲೋಮೀಟರ್ ಮುಂದೆ ನಡೆದು ಹೋದರೆ ಧ್ಯಾನಕ್ಕೆ ಅತ್ಯಂತ ಪ್ರಶಸ್ತವಾದ ವಾತಾವರಣ ಸಿಗುತ್ತದೆ."

"ನೀವು ಇಲ್ಲಿಗೆ ಎಷ್ಟು ಸಲ ಬರುತ್ತೀರಿ?"

"ನನ್ನ ಹದಿನೆಂಟನೆಯ ವಯಸ್ಸಿನಿಂದಲೂ ಇಲ್ಲಿಗೆ ಬರುತ್ತಿದ್ದೇನೆ."

"ಈಗ ಎಲ್ಲಿಗೆ ಹೋಗುತ್ತೀರಿ?"

"ಓಹ್ ! ಎಲ್ಲೋ ಒಂದು ಕಡೆ. ಬಹುಶಃ 2007 ರಲ್ಲಿ ಕುಂಭಮೇಳಕ್ಕೆ ಹೋಗಬಹುದು"

"ನಿಮಗೆ ಇಂಗ್ಲಿಷ್ ಅರ್ಥವಾಗುತ್ತದೆಯೆ?"

"ಸ್ವಲ್ಪ ಮಟ್ಟಿಗೆ. ನಾನೊಬ್ಬ ಅನಕ್ಷರಸ್ಥ. ಆದರೆ ನಾನು ನಿಮ್ಮಂಥವರಿಂದ ಭಾಷೆಗಳನ್ನು ಕಲಿಯುತ್ತೇನೆ. ನಾವು ಪರಸ್ಪರ ಜೊತೆಯಲ್ಲಿ ಕಲೆತು ಸಮಯ ಕಳೆದರೆ ನಾವೆಲ್ಲರೂ ಒಬ್ಬರು ಇನ್ನೊಬ್ಬರ ಭಾಷೆಯನ್ನು ಕಲಿಯಬಹುದು".

"ನೀವು ಗಾಂಜಾ ಸೇದುತ್ತೀರಾ?"

"ಖಂಡಿತವಾಗಿಯೂ. ಗಾಂಜಾ ಸೇದುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಥಂಡಿಯಾಗುವುದಿಲ್ಲ. ಈ ಕಡೆ ಅದನ್ನು ಬೆಳೆಯುತ್ತಾರೆ."

ನಮ್ಮ ಮಾತು–ಕತೆಯಿಂದ ಈ ಮನುಷ್ಯ ಭಾರತಾದ್ಯಂತ ಸಂಚಾರ ಮಾಡಿದ್ದಾರೆ ಎನ್ನುವುದು ತಿಳಿದುಬಂತು.

"ಮೊದಲ ಸಲ ನಾನು ನಾಲ್ಕು ಧಾಮಗಳಿಗೆ ನಡೆದುಕೊಂಡೇ ಹೋಗಿದ್ದೆ. ಆ ನಂತರ ಮೋಟರು ವಾಹನದ ಮೂಲಕ ಹಲವಾರು ಬಾರಿ ಹೋಗಿದ್ದೇನೆ. ನಾನು ಲಡಾಖ್‌ಗೆ ಹೋಗಿದ್ದೇನೆ. ಅಲ್ಲೊಂದು ತೀರ್ಥಸ್ಥಾನವಿದೆ. ಅಲ್ಲಿ ಒಂದೂವರೆ ಟನ್ ಎಣ್ಣೆ ಉರಿಸಿ ದೀಪಗಳನ್ನು ಬೆಳಗುತ್ತಾರೆ. ಒಬ್ಬ ಪೂಜಾರಿ ಬತ್ತಿಗಳನ್ನು ಮಾಡುತ್ತಾನೆ, ಇನ್ನೊಬ್ಬ ದೀಪಗಳನ್ನು ಸ್ವಚ್ಛಗೊಳಿಸುತ್ತಾನೆ. ಮೂರನೆಯವನು ದೀಪಗಳನ್ನು ಹಚ್ಚುತ್ತಾನೆ. ನಾನು ಕಾಶ್ಮೀರಕ್ಕೂ ಹೋಗಿದ್ದೇನೆ. ಮುಂಬಯಿಗೂ ಹೋಗಿದ್ದೇನೆ. ಅಲ್ಲಿ ನಮ್ಮ ನಾಗಾ ಸಂಪ್ರದಾಯಕ್ಕೆ ಸೇರಿದ ಆಶ್ರಮಕ್ಕೆ ಭೇಟಿಕೊಟ್ಟಿದ್ದೆ. ನನ್ನ ಶರೀರ ದುರ್ಬಲವಾಗುವವರೆಗೂ ತಿರುಗಾಡುತ್ತಿರುತ್ತೇನೆ. ಬದರೀನಾಥದ ಕೆಳಗೆ, ಆಶ್ರಮವನ್ನು ಪ್ರಾರಂಭಿಸಬೇಕೆಂದು ನನಗೊಂದು ನಿಜವಾದ ಆಸೆಯಿದೆ. ಅದರಿಂದ ಈ ದೇವಸ್ಥಾನಕ್ಕೆ ಬರುವ ಸಾಧುಗಳು ವಿಶ್ರಾಂತಿ ತೆಗೆದುಕೊಳ್ಳಲು ಅನುಕೂಲವಾಗುತ್ತದೆ"– ಎಂದು ಆ ಸಾಧು ಹೇಳಿದರು.

ನಾವು ಇನ್ನೊಬ್ಬ ಸಾಧುವನ್ನು ಸಂದರ್ಶಿಸಿದೆವು. ಆತ ಸಾಮಾನ್ಯವಾಗಿ ಒರಿಸ್ಸಾ ಮತ್ತು ದೆಹಲಿಯ ಆಶ್ರಮಗಳಲ್ಲಿ ಇರುತ್ತಾ ಇದ್ದರು. ನಾವು ಅವರನ್ನು ಭೇಟಿಮಾಡಿದ

ಸಂದರ್ಭದಲ್ಲಿ ಅವರು ಹಿಮಾಲಯದ ತೀರ್ಥಯಾತ್ರೆಗೆ ಹೊರಟಿದ್ದರು. "ನಾನು ಒಂದು ಆಶ್ರಮದಿಂದ ಇನ್ನೊಂದು ಆಶ್ರಮಕ್ಕೆ ಸಂಚಾರ ಮಾಡುತ್ತಾ ಇರುತ್ತೇನೆ. ಹಿಮಾಲಯಕ್ಕೆ ಇದು ನನ್ನ ಮೂರನೆಯ ಯಾತ್ರೆ. ನಾನು ಮತ್ತೆ ಬದರಿ ಮತ್ತು ಕೇದಾರಕ್ಕೆ ಹೋಗುತ್ತೇನೆ. ಇದಕ್ಕೆ ಒಂದೂವರೆ ತಿಂಗಳು ಬೇಕಾಗುತ್ತೆ. ಒಂದೊಂದು ಸಲ ನಾನು ಒಬ್ಬನೇ ಪ್ರಯಾಣ ಮಾಡುತ್ತೇನೆ. ಇನ್ನು ಕೆಲವೊಮ್ಮೆ ಬೇರೆ ಕೆಲವರ ಜೊತೆ ಸಂಚಾರ ಮಾಡುತ್ತೇನೆ. ನಾನು ಒಬ್ಬನೇ ಇದ್ದಾಗ ಬಹಳಷ್ಟು ಸಮಯವನ್ನು ಧ್ಯಾನದಲ್ಲಿ ಕಳೆಯುತ್ತೇನೆ. ಸಂಗಡಿಗರೊಂದಿಗೆ ಧರ್ಮಗ್ರಂಥಗಳ ಬಗ್ಗೆ ಚರ್ಚೆ ಮಾಡುತ್ತಾ ಸಮಯ ಕಳೆಯುತ್ತೇನೆ". ಎಂದು ಅವರು ಹೇಳಿದರು.

ನಮಗೆ ಮತ್ತೆ ಮತ್ತೆ ತಿಳಿದುಬಂದ ಸಂಗತಿಯೆಂದರೆ ಸಂಚಾರ ಮತ್ತು ತೀರ್ಥಯಾತ್ರೆ ಸಾಧುಗಳ ಸಂಪ್ರದಾಯದ ಪ್ರಮುಖ ಭಾಗ. ಅದಕ್ಕೆ ಪ್ರೇರಕವಾದ ಅಂಶಗಳು ವಿಭಿನ್ನವಾಗಿರಬಹುದು. ತಿರುಗಾಟ ಅಥವಾ ಸಂಚಾರ ಸಾಧುಗಳಿಗೆ ಹಸಿವು, ನಿಂದೆ ಮತ್ತು ಅನುಕೂಲಕರವಾದ ಆಶ್ರಯ ಸ್ಥಾನಗಳ ಕೊರತೆಯನ್ನು ಎದುರಿಸುವುದನ್ನು ಕಲಿಸುತ್ತದೆ. ಸನ್ಯಾಸ ತೆಗೆದುಕೊಳ್ಳಬೇಕೆಂದಿರುವ ಆಕಾಂಕ್ಷಿ ಸನ್ಯಾಸ ದೀಕ್ಷೆಯನ್ನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾನೆಂಬುದನ್ನು ಗೊತ್ತು ಹಚ್ಚಲು ಅನೇಕ ವೇಳೆ ಸಂಚಾರವೊಂದೇ ಗುರು ಒಡ್ಡುವ ಪರೀಕ್ಷೆಯಾಗುತ್ತದೆ. ಕೆಲವರಿಗೆ ಸಂಚಾರವೆಂಬುದು ಒಂದು ಸವಾಲು ಮತ್ತು ಸಾಹಸ. ಸವಾಲು ಕಷ್ಟಕರವಾಗಿದ್ದಷ್ಟೂ ಅವರಿಗೆ ಸಂತೃಪ್ತಿ ನೀಡುವಂಥದಾಗಿರುತ್ತದೆ. ಸಂಚಾರ ಮಾರ್ಗದಲ್ಲಿ ಮಹಾತ್ಮರನ್ನು ಸಂಧಿಸಲು ಹಾಗೂ ಅವರಿಂದ ಕಲಿಯಲು ಅದೊಂದು ಅವಕಾಶವೊದಗಿಸುತ್ತಿತ್ತು. ಕೆಲವು ಸಾಧುಗಳು ಹಿಂದೂ ಪಾರಂಪರಿಕ ಜ್ಞಾನ ಮತ್ತು ಶಿಕ್ಷಣವನ್ನು ಪ್ರಸಾರ ಮಾಡಲು ಸಂಚರಿಸುತ್ತಾರಾದರೆ ಇನ್ನು ಕೆಲವರು ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಅಗತ್ಯವಾದ ಮಾರ್ಗೋಪಾಯಗಳನ್ನು ತಿಳಿಸಿಕೊಡಲು ಸಂಚಾರ ಮಾಡುತ್ತಿದ್ದರು.

ತಾತ್ವಿಕವಾಗಿ ಸನ್ಯಾಸಿಯಾದವನು ಎಲ್ಲ ಲೌಕಿಕ ಸಂಬಂಧಗಳನ್ನು ಕಳೆದುಕೊಂಡವನಾಗಿರುತ್ತಾನಾದರೂ ಅವನ ಸಾಮಾಜಿಕ ಹಿನ್ನೆಲೆ ಪ್ರಸ್ತುತವಾಗಿರಬಹುದು. ಉನ್ನತ ಜಾತಿ ಮತ್ತು ಉನ್ನತ ವರ್ಗಕ್ಕೆ ಸೇರಿದ ಸನ್ಯಾಸಿಗಳಿಗೆ ಆಶ್ರಮದಲ್ಲಿ ಸುಲಭವಾಗಿ ಆಶ್ರಯ ಸಿಗುತ್ತದೆ. ಬಡ ಮತ್ತು ಕೆಳ ಜಾತಿಗಳಿಂದ ಬಂದ ಸಾಧುಗಳಿಗೆ ಅಷ್ಟು ಸುಲಭವಾಗಿ ಆಶ್ರಮದಲ್ಲಿ ನೆಲೆ ಸಿಗುವುದಿಲ್ಲ. ಅಂಥವರು ತಾತ್ಕಾಲಿಕವಾಗಿ ಆಶ್ರಯ ಪಡೆಯಲು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುತ್ತಿರಬೇಕಾಗುತ್ತದೆ. ಇನ್ನೊಬ್ಬ ಸಾಧು ತನಗೆ ಭಿಕ್ಷೆಯ ಹೊಸ ಜಾಗಗಳನ್ನು ಗಿಟ್ಟಿಸಿಕೊಳ್ಳಲು ತಿರುಗಾಡಬೇಕಾಗುತ್ತದೆಂದು ಮುಕ್ತವಾಗಿ ಒಪ್ಪಿಕೊಂಡರು.

ಕೆಲವೊಮ್ಮೆ ಬೇರೆ ಥರದ ಅವಕಾಶಗಳಿಂದ ತಿರುಗಾಟದ ಉದ್ದೇಶವೇ ತಲೆಕೆಳಕಾಗಬಹುದು. ನಿದರ್ಶನಕ್ಕೆ ರಾಮಾನಂದ ಗಿರಿಯವರು ತಮ್ಮ ಅಂತರಂಗದ

ಯಾತ್ರೆಯಲ್ಲಿ ಪ್ರಗತಿ ಸಾಧಿಸುತ್ತ ಹೋದಂತೆ ಹೆಚ್ಚು ಒಂಟಿಯಾಗಿರಬೇಕೆಂದಾಶಿಸಿ ಹರಿದ್ವಾರದ ಕಡೆಗೆ ಹೊರಟುಬಿಟ್ಟರು.

ಈ ಯಾತ್ರೆಯ ಬಗ್ಗೆ ರಾಮಾನಂದಗಿರಿಯವರು– "ಅಲ್ಲಿಗೆ ಇದು ನನ್ನ ಮೊದಲ ಭೇಟಿಯಾದ ಕಾರಣ ಅಲ್ಲಿ ಊಟ ಹೇಗೆ ದೊರಕಿಸಿಕೊಳ್ಳಬಹುದೆಂಬ ಬಗ್ಗೆ ನನಗೆ ಏನೇನೂ ಗೊತ್ತಿರಲಿಲ್ಲ. ಗಂಗೆಯಲ್ಲಿ ಸ್ನಾನಮಾಡಿದೆ. ಯಾರೋ ಒಂದು 'ಅನ್ನಕ್ಷೇತ್ರ' ದ ದಾರಿ ತಿಳಿಸಿದರು. ಅಲ್ಲಿಗೆ ಹೋದಾಗ ನನಗೆ ಊಟ ಸಿಕ್ಕಿತು. ಆ ನಂತರ ಹೃಷೀಕೇಶಕ್ಕೆ ಹೋಗುತ್ತಿದ್ದ ಸನ್ಯಾಸಿಗಳ ಗುಂಪನ್ನು ಸೇರಿಕೊಂಡೆ. ಅಲ್ಲಿ ನನಗೆ ಕಾಲಿಕಂಬ್ಲಿವಾಲಾ ಅನ್ನಕ್ಷೇತ್ರಕ್ಕೆ ಹೋಗಲು ನಿರ್ದೇಶನ ದೊರೆಯಿತು. ಬೆಳಗಿನ ಊಟವನ್ನು ಕಾಲಿಕಂಬ್ಲಿವಾಲಾ ಅನ್ನಕ್ಷೇತ್ರದಲ್ಲಿ ಮತ್ತು ಸಂಜೆಯ ಊಟವನ್ನು ನೇಪಾಳಿ ಅನ್ನ ಕ್ಷೇತ್ರದಲ್ಲಿ ಪಡೆದುಕೊಂಡು ನಾನು ಹೃಷೀಕೇಶದಲ್ಲಿ ಆರಾಮವಾಗಿ ಇದ್ದುಬಿಡಬಹುದೆಂದು ಹೇಳಿದರು."

ನೇಪಾಳಿ ಅನ್ನಕ್ಷೇತ್ರವು ಒಂದು ಅದ್ಭುತ ಸ್ಥಳ. ಸುಮಾರು ಇನ್ನೂರು ಜನ ಮಹಾತ್ಮರು ಅಲ್ಲಿ ಪ್ರತಿ ಸಾಯಂಕಾಲ ಊಟಮಾಡುತ್ತಾರೆ. ಅಲ್ಲಿಯ ವ್ಯವಸ್ಥಾಪಕನು ಮೂರು–ನಾಲ್ಕು ದಿನ ನಾನು ಅಲ್ಲಿರಲು ಒಪ್ಪಿಗೆ ಕೊಟ್ಟನು.

"ಮರುದಿನ ನಾನು ಧರ್ಮಗ್ರಂಥಗಳಿಂದ ಕಥೆಗಳನ್ನು ಓದಿ ಹೇಳುತ್ತಿದ್ದ ಕಥೆಯ ಅಧಿವೇಶನಕ್ಕೆ ಹಾಜರಾದೆ. ಅಲ್ಲಿಯ ಕಥಾವಾಚಕನಿಗೆ ಕಣ್ಣಿನ ಸೋಂಕು ಉಂಟಾಗಿ ಕಥೆಯನ್ನು ಓದುವ ಸ್ಥಿತಿಯಲ್ಲಿರಲಿಲ್ಲ. ಆಗ ತತ್‌ಕ್ಷಣದ ಪ್ರತಿಕ್ರಿಯೆಯಾಗಿ ನಾನು ಕಥೆ ಓದುತ್ತೇನೆಂದು ಹೇಳಿದೆ. ಅಲ್ಲಿ ಕಥೆ ಕೇಳಲು ಬಂದಿದ್ದ ಶ್ರೋತೃಗಳು ಹೊಸಬನ ಅಧಿಕ ಪ್ರಸಂಗತನಕ್ಕೆ ನಕ್ಕು ನಾನು ಹೇಗೂ ಮೂರ್ಖನಾಗುತ್ತೇನೆಂದು ಭಾವಿಸಿ ಕಥೆ ಮಾಡಲು ಆಗ್ರಹಿಸಿದರು. ಆದರೆ ಏನಾದರೂ ಒಂದು ವಿಚಾರ ಮನಸ್ಸಿಗೆ ಬಂದರೆ ನಾನು ಹೆಚ್ಚು ಯೋಚನೆ ಮಾಡುವಂಥ ವ್ಯಕ್ತಿಯಲ್ಲ. ಜನರಿಗೆ ನನ್ನ ಓದುವ ಶೈಲಿ ಎಷ್ಟು ಹಿಡಿಸಿತೆಂದರೆ ದಿನವೂ ಕಥೆಹೇಳಲು ಆಗ್ರಹಿಸಿದರು. ಆ ದಿನದಿಂದ ನಾನು ನೇಪಾಳಿ ಆಶ್ರಮದಲ್ಲಿರತೊಡಗಿದೆ."

"ನನಗೇನೂ ಕಥೆ ಹೇಳಲು ತರಬೇತಿಯಿರಲಿಲ್ಲ. ಯಾವ ಥರದ ತರಬೇತಿ ಬೇಕು? ಹುಟ್ಟಿದಾಗಿನಿಂದ ಈ ಕಥೆಗಳನ್ನು ಹಗಲು–ರಾತ್ರಿ ಕೇಳುತ್ತಲೇ ಇರುತ್ತೀರಿ. ಸ್ವಲ್ಪ ಸಹಜ ಶಕ್ತಿ ಇತ್ತು ಅಂತ ಆದರೆ ಮತ್ತು ಅದರ ಬಗ್ಗೆ ಹೆಚ್ಚು ಸ್ವ –ಪ್ರಜ್ಞೆ ಬೆಳೆಸಿಕೊಂಡಿಲ್ಲದಿದ್ದರೆ ಯಾರು ಬೇಕಾದರೂ ಕಥೆ ಮಾಡಬಹುದು." ಎಂದು ಹೇಳಿದರು.

ಅವರು ಪ್ರಯಾಣದ ಆಸೆಯನ್ನು ನೀಗಿಕೊಂಡು ತೀರ್ಥಯಾತ್ರೆಯ ಆಲೋಚನೆಯನ್ನು ಕೈಬಿಟ್ಟರು.

"ನನಗೆ ತಿರುಗಾಟದ ಅಗತ್ಯವಿರಲಿಲ್ಲ. ಮಹಾತ್ಮರನ್ನು ಭೇಟಿಮಾಡುವ ಸಲುವಾಗಿ ತೀರ್ಥಯಾತ್ರೆ ಮಾಡುತ್ತಾರೆ. ಪ್ರತಿ ದಿನವೂ ನೂರು ಅಥವಾ ಅದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮಹಾತ್ಮರು ಇಲ್ಲಿಗೆ ಬರುತ್ತಾರೆ. ಅವರೊಂದಿಗೆ ಚರ್ಚೆಮಾಡುತ್ತ ಇದ್ದರೆ ನನ್ನೆಲ್ಲ ಸಂದೇಹಗಳು ಪರಿಹಾರವಾಗುತ್ತವೆ. ಎರಡು ವರ್ಷಗಳ ಹಿಂದೆ ನನ್ನ ಭಕ್ತರು ರಾಜಾಸ್ಥಾನದಲ್ಲಿಯ ಒಂದು ಜಾಗಕ್ಕೆ ಕರೆದುಕೊಂಡುಹೋದರು. ನನ್ನನ್ನು ಒಂದು ದೇವಸ್ಥಾನದಲ್ಲಿರಿಸಿ ರಾಜೋಪಚಾರ ನಡೆಸಿದರು. ಆದರೆ ಇಲ್ಲಿಗೆ ಬರುವ ಮಹಾತ್ಮರ ಒಡನಾಟ ನನಗೆ ತಪ್ಪಿಹೋಯಿತು. ಆರು ತಿಂಗಳ ನಂತರ ನಾನು ವಾಪಸ್ ಬಂದೆ."

❑❑

ಧಾರ್ಮಿಕ ಸಮುದಾಯಗಳು–ಆಶ್ರಮಗಳು ಮತ್ತು ಮಠಗಳು

ತಿರುಗಾಡುವ ಸಾಧುಗಳು ಅನೇಕ ವೇಳೆ ತಮ್ಮ ಧಾರ್ಮಿಕ ಬದುಕಿನ ವಿಸ್ತಾರವಾದ ಚಿತ್ರವನ್ನು ನೀಡುತ್ತಿದ್ದರು. ಹಾಗಿದ್ದಾಗ್ಯೂ ಒಂದು ಜಾಗದಲ್ಲಿ ಸ್ಥಿರವಾಗಿ ನೆಲೆ ನಿಂತಿದ್ದ ಸಾಧುಗಳೊಂದಿಗೆ ಹೆಚ್ಚು ಸಮಯ ಕಳೆಯಲು ಹಾಗೂ ಅವರ ಬದುಕಿನ ರೀತಿಯನ್ನು ಕುರಿತ ವಿವರವಾದ ಚಿತ್ರವನ್ನು ಪಡೆದುಕೊಳ್ಳಲು ನಮಗೆ ಸಾಧ್ಯವಾಯಿತು. ಕೆಲವು ಸಾಧುಗಳು ಒಂದೆಡೆ ಸ್ಥಿರವಾಗಿ ನೆಲೆನಿಂತವರ ಜೀವನ ಶೈಲಿಯನ್ನು ಟೀಕಿಸುತ್ತಿದ್ದರು. ನಮ್ಮ ಸಂಪರ್ಕದ ಸಂಚಾರಿ ಸಾಧುವೊಬ್ಬರು ಆಶ್ರಮದ ಹೆಚ್ಚು ಸುರಕ್ಷಿತ ವ್ಯವಸ್ಥೆಯಲ್ಲಿರುತ್ತಿದ್ದವರನ್ನು ಇಷ್ಟಪಡುತ್ತಿರಲಿಲ್ಲ. ನಗರಗಳಲ್ಲಿ ಉಪನ್ಯಾಸ ನೀಡುತ್ತ ಆಶ್ರಮಗಳನ್ನು ಸ್ಥಾಪಿಸಿರುವ ಸಾಧುಗಳ ಬಗ್ಗೆ ಅವರ ಅಭಿಪ್ರಾಯವನ್ನು ಕೇಳಿದಾಗ–

"ಅವರುಗಳು ಸೋಂಬೇರಿಗಳಾಗಿದ್ದಾರೆ. ಅವರಿಗೆ ವಾಸ್ತವವಾಗಿ ಬೇಕಾಗಿರುವುದು ಏನಿದ್ದರೂ ತಮಗಾಗಿ ಆಶ್ರಮಗಳನ್ನು ಕಟ್ಟಿಸಿಕೊಡುವ ಶ್ರೀಮಂತರು ಕೊಡಮಾಡುವ ಭೋಗ ವಿಲಾಸದ ವಸ್ತುಗಳು. ಹಿಮಾಲಯದ ಜೀವನ ಕಷ್ಟಕರವಾದ್ದು. ಗುಹೆಗಳಲ್ಲಿ ವಾಸಮಾಡುತ್ತ, ಮುಂದಿನ ಊಟ ಎಲ್ಲಿ ಸಿಗುತ್ತದೆ ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳದೆ ಇರುವುದೆಂದರೆ ಹೆದರಿಕೆ ಹುಟ್ಟಿಸುವಂಥದು. ಆ ಕಾರಣದಿಂದಾಗಿಯೇ ಅವರುಗಳು ಮೈದಾನ ಪ್ರದೇಶಗಳಲ್ಲಿ ವಾಸಮಾಡುತ್ತಾರೆ. ಒಮ್ಮೆ ಒಂದು ವ್ಯವಸ್ಥೆಯನ್ನು ಸ್ಥಾಪಿಸಿದಿರೆಂದರೆ ನಿಮ್ಮ ಸಾಧನೆ, ಅಭ್ಯಾಸ ಎಲ್ಲವೂ ನಾಶವಾಯಿತು ಅಂತಲೇ." –ಎಂದು ಉತ್ತರಿಸಿದರು.

ಅವರ ಮಾತುಗಳಲ್ಲಿ ದೃಢ ನಿಶ್ಚಯವಿತ್ತು. ಆದರೆ ಹಿಂದಿನ ಕಾಲದಲ್ಲೂ ಪ್ರಖ್ಯಾತ ಹಿಂದೂ ಮಹಾಕಾವ್ಯ, ಪುರಾಣಗಳಲ್ಲಿ ವರ್ಣಿಸಿರುವಂತೆ ಆಶ್ರಮಗಳನ್ನು ಹೊಂದಿದ್ದ ಋಷಿಗಳಿದ್ದರು. ಅವರುಗಳು ರಾಜಕುಮಾರರಿಗೆ ವಿದ್ಯೆ ಕಲಿಸುವ ಆಚಾರ್ಯರಾಗಿದ್ದರು. ಸಾಮಾನ್ಯ ಮನುಷ್ಯನೂ ಆಧ್ಯಾತ್ಮ ವಿದ್ಯೆಯ ಬೆಳಕನ್ನು ಪಡೆಯಲು ಹೋಗಬಹುದಾದ ಆಶ್ರಮಗಳು ಕೂಡ ಇದ್ದುವೆಂಬ ವಿಚಾರ ನನಗೆ ತಿಳಿದಿತ್ತು. ನಾನು ಎರಡು ಆಶ್ರಮಗಳನ್ನು ವಿಶೇಷವಾಗಿ ಅಧ್ಯಯನದ ಸಲುವಾಗಿ ಆರಿಸಿಕೊಂಡೆ. ಅವೆರಡೂ ವಿಭಿನ್ನ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದುವು. ಒಂದು ಹಿಮಾಲಯದಲ್ಲಿದ್ದ ಹೃಷೀಕೇಶ. ಇದು ಭಕ್ತಿ ಸಂಪ್ರದಾಯವನ್ನನುಸರಿಸುತ್ತಿತ್ತು. ಎರಡನೆಯದು ವೇದಾಂತದ ದೃಷ್ಟಿಕೋನವನ್ನು ಹೊಂದಿದ್ದ ಆಶ್ರಮ. ಅದು ಹೃಷೀಕೇಶದಲ್ಲೂ ಅಸ್ತಿತ್ವದಲ್ಲಿ ಇತ್ತಾದರೂ ಅದರ ಕುರಿತಾದ

ನನ್ನ ಅನುಭವ ದಕ್ಷಿಣ ಭಾರತದ್ದು. ಹೃಷೀಕೇಶದಲ್ಲಿ ನಾನು ತಂಗಿದ್ದ ಅವಧಿಯಲ್ಲಿ ಪವಿತ್ರ ತೀರ್ಥಕ್ಷೇತ್ರಗಳ ಯಾತ್ರೆ ಮಾಡುತ್ತಿದ್ದ ದಕ್ಷಿಣ ಭಾರತದ ಮಠದ ಮುಖ್ಯಸ್ಥರೊಬ್ಬರ ಸಂದರ್ಶನವನ್ನು ನಡೆಸಲೂ ಸಾಧ್ಯವಾಯಿತು.

ನನ್ನ ಪರಿಚಯದವರೊಬ್ಬರು ಹೃಷೀಕೇಶದ ಆಶ್ರಮದಲ್ಲಿ ಎರಡು ವರ್ಷಗಳ ಹಿಂದೆ ತಂಗಿದ್ದರು. ಅವರು ಆ ಮಠದ ವ್ಯವಸ್ಥಾಪಕರಾಗಿದ್ದ ರಾಮದೇವ ಪಾಠಿಯವರ ಬಗ್ಗೆ ತುಂಬ ಮೆಚ್ಚುಗೆಯಿಂದ ಮಾತಾಡಿದ್ದರು. ನಾನು ಅವರನ್ನು ಭೇಟಿಯಾಗಲು ಉತ್ಸುಕತೆಯಿಂದಿದ್ದೆ. ಈ ಆಶ್ರಮದಲ್ಲಿ ಭಕ್ತಿ ತತ್ತ್ವದ್ದೇ ಮೇಲ್ಗೈಯಾಗಿತ್ತು. ದೇವರ ಬಗೆಗಿನ ಭಕ್ತಿ ಮತ್ತು ಇತರೆಯವರ ಸೇವೆಗೆ ಬಹಳ ಮಹತ್ವ ನೀಡಲಾಗುತ್ತಿತ್ತು.

ನಾನು ಮತ್ತು ನನ್ನ ಹೆಂಡತಿ ಇಲ್ಲಿಗೆ ಬಂದಾಗ ನಮ್ಮ ಮನಸ್ಸಿಗೆ ಅನ್ನಿಸಿದ್ದು ಅದೊಂದು ದಟ್ಟ ಹಸಿರಿನಿಂದ ಕೂಡಿದ ಸ್ವಚ್ಛವಾದ ಪ್ರದೇಶವೆಂದು. ಮರಗಳು, ಹುಲ್ಲು, ಹೂವಿನ ಗಿಡಗಳನ್ನು ಹೇಗೆಂದರೆ ಹಾಗೆ ಅವ್ಯವಸ್ಥಿತವಾಗಿ ಬೆಳೆಸಿದ್ದಾರೆಂದು ಅನಿಸಿದರೂ, ಮನೆಯ ರೀತಿಯಲ್ಲಿ ಇದ್ದು ಸುಂದರವಾಗಿ ಕಾಣುತ್ತಿತ್ತು. ಅನಂತರದಲ್ಲಿ ರಾಮದೇವ ಅವರ ಪರಿಚಯ ಚೆನ್ನಾಗಿ ಆದಮೇಲೆ ಅವರು ಹೇಳಿದ್ದೆಂದರೆ ತನಗೆ ಗಿಡಗಳೆಂದರೆ ತುಂಬ ಇಷ್ಟವೇ ಆದರೂ, ಅದು ಆಶ್ರಮದ ಹಾಗೆ ಕಾಣಬೇಕೇ ಹೊರತು ಪ್ರವಾಸೀ ತಾಣವಾಗಿ ಕಾಣಬಾರದೆಂದು. ತುಂಬಾ ಜನ ಬಂದು ಎಲ್ಲಕಡೆಯೂ ತುಳಿದಾಡಿ ಹುಲ್ಲನ್ನು ಹಾಳುಮಾಡಬಾರದೆಂಬುದು ಅವರ ಆಸೆಯಾಗಿತ್ತು.

ನಾವು ಮುಂದೆ ಸಾಗಿದಂತೆ ತುಂಬ ಉದ್ದವಾದ ಸುತ್ತಲೂ ಮರೆಯಿಂದ ಕೂಡಿದ ಒಂದು ವೆರಾಂಡ ಕಣ್ಣಿಗೆ ಬಿತ್ತು.

ಅಲ್ಲಿ ಎತ್ತರವಾದ, ಬಲಿಷ್ಠ ಮತ್ತು ಸ್ಥೂಲ ಕಾಯದ ವ್ಯಕ್ತಿಯೊಬ್ಬ ಸೋಫಾದ ಮೇಲೆ ಕುಳಿತಿದ್ದುದು ಕಾಣಿಸಿತು. ಅವರ ಎದುರುಗಡೆ ಎಂಟರಿಂದ ಹತ್ತು ಜನ ಕುಳಿತಿದ್ದರು. ಅವರು ದಪ್ಪ ಗಾಜಿನ ಕನ್ನಡಕ ಧರಿಸಿದ್ದರು. ಅದರ ಮೂಲಕ ನಮ್ಮನ್ನು ನಿಟ್ಟಿಸಿ ನೋಡುತ್ತಿದ್ದರು. ನಾವು ಅವರು ಈ ಮುಂಚೆ ಎಂದೂ ಭೇಟಿಮಾಡಿರದ ಆದರೆ ಹೊಸದಾಗಿ ಬಂದವರೆಂಬುದು ಅರಿವಾಗಿ ನಮ್ಮನ್ನು ಸ್ವಾಗತಿಸಿದರು. ಅಷ್ಟೇ ಅಲ್ಲದೆ ಬೇರೆಯವರಿಗೆ ನಮಗೆ ಜಾಗ ಮಾಡಿಕೊಡಲು ಹೇಳಿದರು. ನಾನು ಆರ್ಥೋಪೆಡಿಕ್ ಕೊರಳ ಕಾಲರ್ ಧರಿಸಿದ್ದನ್ನು ನೋಡಿ ಕುಳಿತುಕೊಳ್ಳಲು ನನಗೊಂದು ಕುರ್ಚಿ ಕೊಟ್ಟರು. ನನ್ನ ಹೆಂಡತಿ ಇತರರ ಜೊತೆ ನೆಲದ ಮೇಲೆ ಕುಳಿತಳು. ತಮ್ಮ ಸಹಾಯಕರಲ್ಲೊಬ್ಬನನ್ನು ಕರೆದು ನಮಗೆ ಕುಡಿಯಲು ನೀರು ತಂದುಕೊಡಲು ಹೇಳಿದರು. ನಾವು ಆರಾಮವಾಗಿ ಕುಳಿತಿದ್ದೇವೆಂಬುದು ಖಚಿತವಾದ ಮೇಲೆ ನಮ್ಮ ಆಗಮನದಿಂದ ನಡುವೆ ನಿಂತಿದ್ದ ತಮ್ಮ ಮಾತು-ಕತೆಯನ್ನು ಮುಂದುವರಿಸಿದರು.

ಮುವತ್ತು ವರ್ಷದ ಒಬ್ಬ ಯುವಕನಿಗೆ ಆಶ್ರಮದಲ್ಲಿ ಕೆಲಸ ಸಿಗಬಹುದೆಂದು ಹೇಳುತ್ತಿದ್ದರು. ಅಂದಂದಿನ ಸಂಬಳ, ಇರಲು ಸ್ಥಳ, ತಿನ್ನಲು ಆಹಾರ ಮತ್ತು ಸೂಕ್ತ

ವೈದ್ಯಕೀಯ ನೆರವು ಎಲ್ಲವೂ ಸಿಗುತ್ತದೆಂದು ಹೇಳಿದರು. ಆದರೆ ಇದನ್ನು ಕೇಳಿಸಿಕೊಳ್ಳುತ್ತಿದ್ದ ವ್ಯಕ್ತಿಯು ಆತಂಕಗೊಂಡಂತೆ ಮತ್ತು ದುಃಖಿತನಂತೆ ತೋರುತ್ತಿದ್ದ. ಅವನೊಂದಿಗೆ ಮಾತನಾಡುತ್ತಿದ್ದ ವ್ಯಕ್ತಿ ನಾವು ಭೇಟಿಮಾಡಲು ಬಂದ ವ್ಯಕ್ತಿಯೇ ಆಗಿದ್ದರು. ಆ ಮನುಷ್ಯನ ಬಗ್ಗೆ ನಮಗೆ ಹೇಳುವ ಮೂಲಕ ನಮ್ಮನ್ನೂ ಆವರ ಮಾತು-ಕತೆಯಲ್ಲಿ ಸೇರಿಸಿಕೊಂಡರು.

"ಈ ಬಡಪಾಯಿ ಒಬ್ಬಂಟಿ. ಅವನ ಹೆಂಡತಿ ಸದ್ಯಕ್ಕೆ ಅವನನ್ನು ತೊರೆದಿದ್ದಾಳೆ. ಅವನಿಗೆ ಕತ್ತಲೆಯಲ್ಲಿ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ. ಹಾಗಾಗಿ ಎಲ್ಲೂ ಏನೂ ಕೆಲಸ ಸಿಕ್ಕಲ್ಲ. ಜೊತೆಗೆ ಜನಗಳನ್ನು ಕಂಡರೆ ಅವನಿಗೆ ತುಂಬ ಹೆದರಿಕೆ. ಯಾರಾದರೂ ಮಾತಾಡಿಸಿದರೆ ಅವನು ದಿಕ್ಕು ತೋಚದವನಂತಾಗಿಬಿಡುತ್ತಾನೆ. ತನ್ನ ಪರಿಸ್ಥಿತಿಯ ಬಗೆಗಿನ ಚಿಂತೆ ವ್ಯಸನಗಳಿಂದಾಗಿ ರಾತ್ರಿ ಹೊತ್ತು ನಿದ್ದೆಮಾಡಕ್ಕಾಗಲ್ಲ ಅವನಿಗೆ".

ಅವರಿಗೆ- "ನಾನೊಬ್ಬ ವೈದ್ಯ ಮತ್ತು ಮನೋಚಿಕಿತ್ಸಕ. ನಾನೇನಾದರೂ ಅವನಿಗೆ ಸ್ವಲ್ಪ ಸಹಾಯಮಾಡಬಹುದೆ?" ಎಂದು ಕೇಳಿದೆ.

"ನೋಡಿ, ಆವಶ್ಯಕತೆ ಬಿತ್ತು ಅಂದರೆ ಸಹಾಯ ಸಿಕ್ಕೇ ಸಿಗುತ್ತೆ." - ಎಂದು ಅವರು ಸುತ್ತ ಇದ್ದ ಎಲ್ಲರನ್ನೂ ಉದ್ದೇಶಿಸಿ ಹೇಳಿದರು. ಆಮೇಲೆ ಆ ಮನುಷ್ಯನತ್ತ ತಿರುಗಿ- "ನೋಡು ನಿನ್ನ ಪಾಲಿನ ಭಗವಂತ ಬಂದಿದ್ದಾನೆ. ಅವನಿಗೆ ನಿನ್ನ ಕಷ್ಟ ಎಲ್ಲ ಹೇಳಿಕೊ" ಎಂದರು.

ಸಾಮೀಜಿ ನಮಗೆ ಹೇಳಿದ ಸಂಗತಿಗಳನ್ನೇ ಅವನು ಮತ್ತೆ ಹೇಳಿದ. ಮತ್ತು ಹೆಚ್ಚುಕಡಿಮೆ ಕಣ್ಣುತುಂಬ ನೀರು ತುಂಬಿಕೊಂಡು ತನ್ನ ಕಣ್ಣುಗಳಿಗೆ ಮತ್ತು ತನ್ನ ಭಯ ಎರಡಕ್ಕೂ ತನಗೆ ನೆರವು ಬೇಕೆಂದು ಹೇಳಿದ. ಕಂಡಹಾಗೆಯೇ ಆ ಮನುಷ್ಯ ಆತಂಕದಿಂದಿದ್ದ. ಅವನ ನಾಡಿಯ ಮಿಡಿತ ನಿಮಿಷಕ್ಕೆ ಒಂದು ನೂರು ಇತ್ತು. ಅವನು ಬೆವರುತ್ತಿದ್ದ. ನಾನು ಸಹಾಯ ಮಾಡುತ್ತೇನೆಂದು ಹೇಳಿದಾಗ ಅವನು ಸಂತೃಪ್ತಗೊಂಡಂತೆ ಕಂಡಿತು. ಗೋಡೆಯ ಮೇಲಿನ ತುಂಬ ದಪ್ಪದಪ್ಪ ಅಕ್ಷರಗಳನ್ನು ಕೂಡ ಓದುವುದು ಅವನಿಗೆ ಅಸಾಧ್ಯ ಎಂಬುದನ್ನು ನಾನು ಕಂಡುಕೊಂಡೆ. ನಾನು ಅವನ ಆತಂಕಕ್ಕೆ ತಕ್ಕ ಔಷಧವನ್ನೇನೋ ಕೊಡುತ್ತೇನೆ. ಅದೇ ಸಮಯಕ್ಕೆ ಅವನ ಕಣ್ಣು ಪರೀಕ್ಷಿಸುವ ಸಲುವಾಗಿ ಒಬ್ಬ ನೇತ್ರ ಚಿಕಿತ್ಸಕರಲ್ಲಿಗೆ ಅವನನ್ನು ಕಳುಹಿಸಿಕೊಡಬೇಕಾಗುತ್ತದೆ ಎಂದು ಸ್ವಾಮೀಜಿಗೆ ತಿಳಿಸಿದೆ. ಸ್ವಾಮೀಜಿಯವರು ಪೆನ್ನು ಮತ್ತು ಕಾಗದ ತೆಗೆದು ಕೊಟ್ಟರು. ನಾನು ಅವನಿಗೆ ಅಗತ್ಯವಾದ ಔಷಧ ಬರೆದುಕೊಟ್ಟೆ. ಸ್ವಾಮೀಜಿ ಇನ್ನೊಬ್ಬ ಸಹಾಯಕನನ್ನು ಕರೆದು ಅವನಿಗೆ ಸ್ವಲ್ಪ ಹಣ ಕೊಟ್ಟು ಔಷಧ ತರಿಸಲು ಕಳಿಸಿದರು. ಆ ವ್ಯಕ್ತಿಗೆ ಸ್ವಾಮೀಜಿ- "ಈಗ ಅಗತ್ಯ ಏರ್ಪಾಟುಗಳು ಆಗುತ್ತಿವೆ, ಅವನು ಕೆಲಸ ಮಾಡಲು ಪ್ರಾರಂಭಿಸಿದರೆ ಕತ್ತಲಾಗುವ ಮುಂಚೆ ಏನಾದರೂ ಮಾಡಬಹುದೆಂದು" ತಿಳಿಸಿದರು. ಎಲ್ಲವನ್ನೂ ಎಷ್ಟು ಸರಳವಾಗಿ, ಸಮರ್ಥವಾಗಿ ನಡೆಸಲಾಯಿತೆಂದರೆ ನನಗೆ ಬಹಳ ನಿರುಮ್ಮಳವೆನಿಸತೊಡಗಿತು. ನಾನು

ಅಲ್ಲಿಗೆ ಬಂದದ್ದೇಕೆಂದು ಹೇಳಿದೆ ಮತ್ತು ಅವರು ಆಶ್ರಮದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವ ಮುಖ್ಯಸ್ಥರೆ ಎಂದು ಕೇಳಿದೆ. ತಾನೊಬ್ಬ ಕಾವಲುಗಾರ ಅಷ್ಟೆ ಎಂದರವರು. ಆಶ್ರಮವನ್ನು ನೋಡಿಕೊಳ್ಳುವುದು ಮತ್ತು ಅಲ್ಲಿಗೆ ಬರುವವರ ಬಗ್ಗೆ ಲಕ್ಷ್ಯ ವಹಿಸುವುದು ತನ್ನ ಕರ್ತವ್ಯ ಎಂದರು. ನಾವು ಸ್ವಲ್ಪ ಚಹಾ ತೆಗೆದುಕೊಳ್ಳಬಹುದೇ ಎಂದು ಅವರು ಕೇಳಿದರು. ನಾವು ಆಗಲೇ ಚಹಾ ತೆಗೆದುಕೊಂಡಾಗಿದೆ ಎಂದಾಗ ಅವರು ಮಾತುಕತೆಯನ್ನು ಮುಂದುವರಿಸಿದರು. ಮೂರ್ಛೆ ರೋಗ ಬರುತ್ತಿದ್ದ ಒಬ್ಬ ಹುಡುಗನ ಬಗ್ಗೆ ಹೇಳಿದರು. ಹಸುಗಳನ್ನು ನೋಡಿಕೊಳ್ಳುವುದಕ್ಕೋಸ್ಕರ ಅವನನ್ನು ಕೆಲಸಕ್ಕಿಟ್ಟುಕೊಂಡಿದ್ದರೂ ಅವನಿಗೆ ಕೆಲಸ ಮಾಡುವಾಗಲೇ ಮೂರ್ಛೆ ಬರುವುದು ಮುಂದುವರಿದಿತ್ತು ಎಂದರು. ಸ್ನೇಹಿತರು ಆ ಮನುಷ್ಯ ಆಶ್ರಮದಲ್ಲಿರುವಾಗಲೇ ತೀರಿಕೊಂಡುಬಿಡಬಹುದೆಂದು ಸ್ವಾಮೀಜಿಗೆ ಹೇಳಿದರು. ಆಗ ಸ್ವಾಮೀಜಿಯವರು ಅವನಿಗೆ ಅಗತ್ಯವಿರುವ, ಮೂರು ತಿಂಗಳಿಗಾಗುವಷ್ಟು ಔಷಧ ಖರೀದಿಸಿ ಅವನನ್ನು ಅವನ ಊರಿಗೆ ಕಳಿಸಿಕೊಟ್ಟರು. ಅವನ ಬಗ್ಗೆ ಈಗಲೂ ಸ್ವಾಮೀಜಿಗೆ ಕಾಳಜಿ ಇತ್ತು. ತಮ್ಮನ್ನು ಆಶ್ರಯಿಸಿ ಇಲ್ಲಿಗೆ ಬರುವ ಬಡ ರೋಗಿಗಳ ಬಗೆಗಿನ ಯೋಚನೆಯಲ್ಲಿ ಅನೇಕ ವೇಳೆ ತಮಗೆ ನಿದ್ರೆ ಬರುವುದಿಲ್ಲ ಎಂದು ಹೇಳಿದರು. ಭಾವನಾತ್ಮಕ ಪರಿಣಾಮಕ್ಕಾಗಿ ಇದನ್ನು ಅವರು ಹೇಳುತ್ತಿರಲಿಲ್ಲ. ಅವರದು ನಿಜವಾದ ಕಾಳಜಿ ಎನಿಸಿತು.

ಇದರ ನಂತರ ನನ್ನೊಂದಿಗೆ– "ಹಾಗಾದರೆ ನೀವು ಸನ್ಯಾಸಿಗಳ ಜೀವನವನ್ನು ಅಧ್ಯಯನ ಮಾಡಲು ಬಂದಿದ್ದೀರಿ." ಎಂದು ಹೇಳಿ ನನ್ನ ಉತ್ತರಕ್ಕೆ ಕಾಯದೆ ಅವರು ಪಂಜಾಬಿನಿಂದ ಬಂದಿದ್ದ ಒಬ್ಬ ಅತ್ಯಂತ ಪ್ರತಿಷ್ಠಿತ ವ್ಯಕ್ತಿಯ ಬಗ್ಗೆ ಹೇಳಿದರು. ಅವನು ತನ್ನ ಅರ್ಧದಷ್ಟು ವಯಸ್ಸಿನ ಹೆಂಗಸಿನ ಜೊತೆ ಬಂದಿದ್ದನು. ಅವರಿಬ್ಬರೂ ಸ್ವಾಮೀಜಿಯಿಂದ ಸಂನ್ಯಾಸ ತೆಗೆದುಕೊಳ್ಳಲಿಚ್ಛಿಸಿದ್ದರು. ಸಂಬಂಧಿಸಿದ ವ್ಯಕ್ತಿಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳದೆ ಹಾಗೂ ಯಾವ ಸಂದರ್ಭದಲ್ಲಿ ಅವರು ಸನ್ಯಾಸ ತೆಗೆದುಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳದೆ ತಾನು ಸನ್ಯಾಸ ಕೊಡಲಾಗುವುದಿಲ್ಲ ಎಂದು ಹೇಳಿದರಂತೆ. ಆಗ ಆ ದಂಪತಿ ಕೆಲವು ದಿನಗಳ ನಂತರ ಹಿಂತಿರುಗಿ ಬರುವುದಾಗಿ ಹೇಳಿ ಹೋಗಿ ಮತ್ತೆ ತಿರುಗಿ ಬಂದರು. ಬೇರೆ ಯಾರಿಂದಲೋ ಸನ್ಯಾಸ ದೀಕ್ಷೆ ತೆಗೆದುಕೊಂಡು, ಕಾಷಾಯ ವಸ್ತ್ರ ಧಾರಿಗಳಾಗಿ ಬಂದಿದ್ದರು. ಏನೂ ಟೀಕೆ ಮಾಡದೆ ಸ್ವಾಮೀಜಿ ಅವರನ್ನು ಸ್ವಾಗತಿಸಿ ಅವರಿಗೆ ಪ್ರತ್ಯೇಕ ಕೊಠಡಿಗಳನ್ನು ನೀಡಿದರು. ಅವರಿಬ್ಬರೂ ಒಂದೇ ಕೊಠಡಿಯಲ್ಲಿರಬೇಕೆಂದು ಬಯಸುತ್ತಾರೆಂದು ಗೊತ್ತಾದಾಗ ಅವರಿಗೆ ಈ ಸ್ಥಳವನ್ನು ಬಿಟ್ಟು ಹೊರಡಿ ಎಂದು ದೃಢವಾಗಿ ಹೇಳಿದರು. ಅಲ್ಲದೆ ಸನ್ಯಾಸವನ್ನು ಅಂಥ ಉದ್ದೇಶಗಳಿಗೆ ಬಳಸಲಾಗದೆಂದು ಬುದ್ಧಿ ಹೇಳಿದರು. ಈ ಜೋಡಿ ಬೇರೆ ಎಲ್ಲೋ ಹೋಗಿ ನೆಲೆಸಿದರು. ಒಂದು ದಿನ ಆ ಹೆಂಗಸು ಹೇಗೆ ಆಶ್ರಮಕ್ಕೆ ಧಾವಿಸಿ ಬಂದು ಗಂಗಾ ನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದಳೆಂದು ಹೇಳುವ ಮೂಲಕ ಆ ಕಥೆಯನ್ನು ಕೊನೆಗೊಳಿಸಿದರು. ಅವಳ ತಂದೆಯೆಂದು ಹೇಳಬಹುದಾದಷ್ಟು ವಯಸ್ಸಾಗಿದ್ದ ಆ

ಮನುಷ್ಯ ಅವಳ ಭಾವಾತಿರೇಕದ ಬೂಟಾಟಿಕೆಗಳಿಂದ ಬೇಸತ್ತು ಅವಳೊಂದಿಗಿನ ಆ ವಿಚಿತ್ರ ಸಂಬಂಧದಿಂದ ತಪ್ಪಿಸಿಕೊಳ್ಳಬೇಕೆಂದಿದ್ದನು.

ಆ ಕಾರಣದಿಂದಲೇ ಈ ಆತ್ಮಹತ್ಯೆಯ ಬೆದರಿಕೆ ಬಂದಿತ್ತು. ಆ ಮನುಷ್ಯ ಈಗಾಗಲೇ ಒಮ್ಮೆ ಮದುವೆಯಾಗಿದ್ದರೂ ಈ ಯುವತಿಯೊಂದಿಗೆ ಸಂಬಂಧ ಬೆಳೆಸಿ ಅವಳಿಂದ ಒಂದು ಮಗುವನ್ನೂ ಪಡೆದಿದ್ದನೆಂದೂ ತಿಳಿದು ಬಂದಿತು. ಅವನು ತನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಬಂದಿದ್ದು ಈ ಯುವತಿಯೊಂದಿಗೆ ಈ ರೀತಿಯ ಸಂಬಂಧವನ್ನು ಮುಂದುವರೆಸುವ ಚತುರ ಹಾದಿ ಹಿಡಿಯಲು ತೀರ್ಮಾನಿಸಿದ್ದ.

ಸ್ವಾಮೀಜಿ ಮಾತು ನಿಲ್ಲಿಸದೆ ತಮ್ಮ ಗುರುಗಳು ಎಂಥ ಅದ್ಭುತ ವ್ಯಕ್ತಿಗಳಾಗಿದ್ದರು ಎಂಬುದನ್ನು ಹೇಳುತ್ತಹೋದರು. ಅವರೊಬ್ಬ ಅದ್ಭುತ ಕಥಕ. ತಮ್ಮ ಕಥೆಗಳಿಂದ ಜನರ ಮೇಲೆ ಮೋಡಿಮಾಡಿದರು.

ನಾನು ಅವರನ್ನು ಹಲವಾರು ಬಾರಿ ಭೇಟಿಯಾದೆ. ಅದರ ಉದ್ದೇಶ ಅವರನ್ನು ಕೂಲಂಕಷವಾಗಿ ಸಂದರ್ಶಿಸುವುದಷ್ಟೇ ಅಲ್ಲ; ಅವರು ನನಗೆ ತುಂಬ ಇಷ್ಟವಾಗಿದ್ದರು ಮತ್ತು ಅವರ ಆಶ್ರಮಕ್ಕೆ ಯಾರು ಹೋದರೂ ಅವರ ಬಗ್ಗೆ ತೋರಿಸುತ್ತಿದ್ದ ಕಾಳಜಿಯಿಂದ ನಾನು ಬಹಳ ಪ್ರಭಾವಿತನಾಗಿದ್ದೆ. ತಮ್ಮ ಬಗ್ಗೆಯೇ ಅನೇಕ ಸಂಗತಿಗಳನ್ನು ತಿಳಿಸಿದ್ದಷ್ಟೇ ಅಲ್ಲದೆ ಇತರ ಕಥೆಗಳನ್ನು ಹೇಳುವುದನ್ನು ಅವರಿಗೆ ತಡೆದುಕೊಳ್ಳಲಾಗಲಿಲ್ಲ. ಅದಾಗ್ಯೂ ನಾನು ಅವರ ಜೀವನ ಗಾಥೆಯ ಬಗ್ಗೆಯೇ ನನ್ನ ಗಮನ ಕೇಂದ್ರೀಕರಿಸುತ್ತೇನೆ.

ಸ್ವಾಮಿ ರಾಮದೇವ ಪಾಠಿಯವರು ಗರೀಬ್ ದಾಸ ಸಂಪ್ರದಾಯದ ಸದಸ್ಯರು. ಗರೀಬ್ ದಾಸನನ್ನು ಸಂತ ಕವಿ ಕಬೀರರ ಅವತಾರವೆಂದು ಮಾನ್ಯಮಾಡಲಾಗುತ್ತಿತ್ತು. ಕಬೀರರಿಗೆ ಜಾತಿಯಲ್ಲಿ ನಂಬಿಕೆಯಿರಲಿಲ್ಲ ಹಾಗೂ ಧಾರ್ಮಿಕ ಸಹಿಷ್ಣುತೆಯನ್ನು ಬೆಂಬಲಿಸುತ್ತಿದ್ದರು. ಗರೀಬ್ ದಾಸರು ಹಿಂದುವಾಗಿರಲಿ ಇಲ್ಲವೆ ಮುಸ್ಲಿಮನಾಗಿರಲಿ, ಸ್ತ್ರೀಯಾಗಲಿ, ಪುರುಷನಾಗಲಿ ಎಲ್ಲರನ್ನೂ ಸಮಾನರೆಂದು ಪರಿಗಣಿಸುತ್ತಿದ್ದರು. ಅವರು ಜಾತೀಯುತೆಯನ್ನು ವಿರೋಧಿಸುತ್ತಿದ್ದರು. ಯಾರು ಬೇಕಾದರೂ ಅವರ ಅನುಯಾಯಿಗಳಾಗಬಹುದಿತ್ತು ಮತ್ತು ಅವರಿಂದ ದೀಕ್ಷೆ ತೆಗೆದುಕೊಳ್ಳಬಹುದಿತ್ತು. ಅವರ ಕೃಪೆಯಿಂದ ಅಸ್ಪೃಶ್ಯ ವರ್ಗದ ಅನೇಕರು ಸನ್ಯಾಸ ತೆಗೆದುಕೊಂಡರು.

ರಾಮದೇವ ಪಾಠಿಯವರು ನೇಪಾಳದ ಗಡಿಯಲ್ಲಿದ್ದ ತೆರಾಯ್ ಪ್ರದೇಶದಲ್ಲಿದ್ದ ಪಿಲಿಭಿತ್ ಎಂಬ ಹಳ್ಳಿಯಲ್ಲಿ ಹುಟ್ಟಿದವರು. ಭೂಮಿ ಮತ್ತು ದನಕರುಗಳ ಸಂಪತ್ತನ್ನು ಹೊಂದಿದ್ದ ಒಂದು ಸ್ಥಿತಿವಂತ ಕುಟುಂಬದ ಐದು ಮಕ್ಕಳ ಪೈಕಿ ಅವರು ಮೂರನೆಯವರು. ರಾಮದೇವರು ಇನ್ನೂ ಆರು ತಿಂಗಳ ಕೂಸಾಗಿದ್ದಾಗ ಒಬ್ಬ ಸನ್ಯಾಸಿ ಅವರ ಮನೆಗೆ ಬಂದು ತೊಟ್ಟಿಲಿನಿಂದ ಅವರನ್ನು ಅಪಹರಿಸಿಬಿಟ್ಟನು. ಕುಟುಂಬವು ಅವನನ್ನು ಹುಡುಕುತ್ತ ಹೋದಾಗ ಕೆಲವು ಗಂಟೆಗಳ ನಂತರ ಸನ್ಯಾಸಿಯೊಂದಿಗೆ ಇದ್ದ ಮಗುವನ್ನು ಪತ್ತೆಮಾಡಿದರು.

ತಾನು ಮಾಡಿದ ಕೃತ್ಯಕ್ಕೆ ಸನ್ಯಾಸಿ ಕ್ಷಮೆ ಕೇಳಲಿಲ್ಲ. "ಈ ಮಗು ಹೆಚ್ಚು ದಿನ ಬದುಕುವುದಿಲ್ಲ. ನಿಮಗೆ ಅವನಿಂದೇನೂ ಉಪಯೋಗವಿಲ್ಲ" ಎಂದು ಹೇಳಿ ತನ್ನ ಹಾದಿಹಿಡಿದು ಸಾಗಿದನು.

ಅವರ ಕುಟುಂಬದಲ್ಲಿ ರಾಮದೇವ್ ಒಬ್ಬ ಅಸಾಧಾರಣ ಬಾಲಕನಾಗಿದ್ದನು. ಹಾಗಿದ್ದುದು ಈ ಘಟನೆಯ ಕಾರಣವಾಗಿ ಮಾತ್ರವಲ್ಲ, ಇತರ ಮಕ್ಕಳಂತಲ್ಲದೆ ಚಿಕ್ಕಂದಿನಿಂದಲೂ ತುಂಬ ಧಾರ್ಮಿಕ ಸ್ವಭಾವದವನಾಗಿದ್ದುದೂ ಅದಕ್ಕೆ ಕಾರಣವಾಗಿತ್ತು. ಅವನ ತಾಯಿ ಕೂಡ ತುಂಬ ಧಾರ್ಮಿಕಳಾಗಿದ್ದಳು. ಮಕ್ಕಳು ಯಾರಾದರೂ ಅರ್ಧ ಗಂಟೆ ಕಾಲ ದೇವರ ಪೂಜೆ ಮಾಡಿದ್ದೇ ಆದರೆ ದೇವರು ಅವರಿಗೆ ಒಂದು ನಾಣ್ಯವನ್ನು ನೀಡುತ್ತಾನೆಂದು ಹೇಳುವ ಮೂಲಕ ಪೂಜೆ ಮಾಡಲು ಮತ್ತು ಧ್ಯಾನ ಮಾಡಲು ಮಕ್ಕಳನ್ನು ಹುರಿದುಂಬಿಸುತ್ತಿದ್ದಳು. ಅವಳು ಮಾಡುತ್ತಿದ್ದ ಉಪಾಯವೆಂದರೆ ಮಗು ಕಣ್ಣುಮುಚ್ಚಿ ಕುಳಿತುಕೊಂಡಿರುತ್ತಿದ್ದ ಚಾಪೆಯ ಕೆಳಗೆ ಒಂದು ನಾಣ್ಯವನ್ನು ಸರಿಸಿ ಬಚ್ಚಿಡುವುದು. ರಾಮದೇವ ಮಾತ್ರ ಈ ನಾಣ್ಯಗಳನ್ನು ಪಡೆದುಕೊಳ್ಳುತ್ತಿದ್ದನು. ಇತರ ಮಕ್ಕಳಿಗೆ ಅಷ್ಟು ತಾಳ್ಮೆ ಇರುತ್ತಿರಲಿಲ್ಲ.

ರಾಮದೇವನಿಗೆ ಹನ್ನೊಂದು ವರ್ಷವಾಗಿದ್ದಾಗ ಹಳ್ಳಿಯ ಹೊರಭಾಗದಲ್ಲಿ ಒಬ್ಬ ಸನ್ಯಾಸಿ ಬಂದಿರತೊಡಗಿದನು. ರಾಮದೇವನು ಅವನೊಂದಿಗೆ ಗಂಟಗಟ್ಟಲೆ ಇರುತ್ತಿದ್ದನು. ಈ ಸನ್ಯಾಸಿಯ ಬಗ್ಗೆ ರಾಮದೇವ ಎರಡು ಕಥೆಗಳನ್ನು ಹೇಳಿದರು. ಒಂದು ಸಲ ಸನ್ಯಾಸಿಗೆ ಪೂಜೆಗೋ ಧಾರ್ಮಿಕ ಆಚರಣೆಗೋ ಸ್ವಲ್ಪ ತುಪ್ಪ ಬೇಕಾಗಿತ್ತು. ಆದರೆ ಅವನ ಬಳಿ ಅದು ಇರಲಿಲ್ಲ. ಅವನು ರಾಮದೇವಗೆ ನದಿಯ ಹತ್ತಿರಕ್ಕೆ ಹೋಗಿ ಸ್ವಲ್ಪ ತುಪ್ಪ ನೀಡುವಂತೆ ಪ್ರಾರ್ಥಿಸಲು ಹೇಳಿದನು. ಈ ನದಿಯ ಹೆಸರು ಕ್ಷೀರ ಗಂಗಾ. ಅದರ ಶಬ್ದಶಃ ಅರ್ಥ ಹಾಲಿನ ಪ್ರವಾಹವನ್ನು ಹರಿಸುವ ನದಿ ಎಂದು. ಹಿಮಾಲಯದಲ್ಲಿ ಹಲವಾರು ಕ್ಷೀರ ಗಂಗಾಗಳಿವೆ. ನದಿ ಪ್ರಕ್ಷುಬ್ಧಗೊಂಡು ನೊರೆ ನೊರೆಯಾಗಿ ಬೆಳ್ಳಗೆ ಉಕ್ಕಿ ಹರಿದಾಗ ಅದನ್ನು ಕ್ಷೀರ ಎಂದು ಕರೆಯುತ್ತಾರೆ. ಇದರ ಬಗ್ಗೆ ಇದ್ದ ಒಂದು ಕಥೆಯೆಂದರೆ ಈ ನದಿ ಒಂದು ಕಾಲಕ್ಕೆ ನಿಜಕ್ಕೂ ಹಾಲಿನ ನದಿಯೇ ಆಗಿತ್ತು; ಆದರೆ ಒಮ್ಮೆ ಪಾಪಿಯೊಬ್ಬ ನದಿಯಲ್ಲಿ ತನ್ನ ಬಟ್ಟೆಗಳನ್ನು ಒಗೆದಾಗ ಹಾಲು ನೀರಾಗಿ ಪರಿವರ್ತಿತವಾಯಿತು. ಈ ವಿಚಿತ್ರ ಆದೇಶವನ್ನು ಕೇಳಿ ರಾಮದೇವರ ಕುತೂಹಲ ಕೆರಳಿತು. ಆದರೆ ಅವರು ಹೇಳಿದಂತೆ ಮಾಡಿದರು. ನದಿಯನ್ನು ತುಪ್ಪ ನೀಡುವಂತೆ ಪ್ರಾರ್ಥಿಸಿದ ಬಳಿಕ ಒಂದು ಸಣ್ಣ ಪಾತ್ರೆಯಲ್ಲಿ ನದಿಯ ನೀರನ್ನು ತುಂಬಿಕೊಂಡು ಬಂದು ಸನ್ಯಾಸಿಗೆ ಕೊಟ್ಟರು. ಸನ್ಯಾಸಿಯು ಒಂದು ಕಡ್ಡಿಯನ್ನು ಆ ಪಾತ್ರೆಯಲ್ಲಿ ಅದ್ದಿ ಅದನ್ನು ರಾಮದೇವರ ಮುಂದೋಳಿನ ಮೇಲಿಟ್ಟನು. ಅವರ ಚರ್ಮಕ್ಕೆ ಸೋಕಿದ್ದು ನಿಜಕ್ಕೂ ತುಪ್ಪವೇ ಆಗಿತ್ತು ! ಇದರಿಂದ ಆ ಚಿಕ್ಕ ಹುಡುಗನಿಗೆ ದೇವರ ಮೇಲಿನ ಭಕ್ತಿ ಇನ್ನಷ್ಟು ದೃಢವಾಯಿತು ಹಾಗೂ ತಾನೂ ಸನ್ಯಾಸಿಯಾಗ ಬಯಸಿದನು. ಇನ್ನೊಮ್ಮೆ ಸನ್ಯಾಸಿಯು ಬೆಟ್ಟದ ತುದಿಯಲ್ಲಿ ವಾಸಮಾಡುತ್ತಿದ್ದ ಒಬ್ಬ ಸಾಧುವಿನ ಧುನಿಯಿಂದ ಬೆಂಕಿಯ ಕಿಡಿಯನ್ನು ತರಲು ಹೇಳಿದನು. ಅಲ್ಲಿ ವಾಸಿಸುತ್ತಿದ್ದ ಕಾಡು ಪ್ರಾಣಿಗಳಿಗೆ

ಹೆದರದೆ ಓಡುತ್ತ ಬಂದಾಗ ಒಂದು ಚಿರತೆ ಎದುರಿಗೆ ಬಂತು. ಅದಾದರೋ ಅವನ ಮೇಲೆ ಹಾರಿಬೀಳುವುದರಲ್ಲಿತ್ತು. ರಾಮದೇವನಿಗೆ ತನಗೆ ವಹಿಸಿದ ಕೆಲಸದ ಬಗ್ಗೆ ಅದೆಷ್ಟು ಬದ್ಧತೆ ಹಾಗೂ ಆ ಚಿರತೆ ತನ್ನ ಮೇಲೆ ಆಕ್ರಮಣ ಮಾಡುವುದಿಲ್ಲವೆಂದು ಅದೆಂಥ ನಂಬಿಕೆ ಇತ್ತೆಂದರೆ ಆ ಚಿರತೆಯ ಎದುರಿನಿಂದಲೇ ಮುಂದುವರಿದು ಸಾಧುವಿನ ಆಶ್ರಮಕ್ಕೆ ಹೋಗಿ ಉರಿಯುತ್ತಿದ್ದ ಕಟ್ಟಿಗೆಯ ತುಣುಕನ್ನು ಎತ್ತಿಕೊಂಡು ಓಡುತ್ತ ಕೆಳಕ್ಕೆ ಸನ್ಯಾಸಿಯ ಬಳಿಗೆ ಬಂದೇ ಬಿಟ್ಟರು. ಅಲ್ಲಿಂದ ಮುಂದೆ ಅವರಿಗೆ ಯಾವುದರ ಭಯವೂ ಇರಲಿಲ್ಲ.

ಕೆಲವು ತಿಂಗಳ ನಂತರ ಸನ್ಯಾಸಿಯು ಒಬ್ಬ ಭಕ್ತನ ಮನೆಗೆ ಹೋಗುವ ಸಲುವಾಗಿ ಆ ಹಳ್ಳಿಯನ್ನು ಬಿಟ್ಟು ಹೊರಟನು. ಗುರುವಿನ ಅಭಾವ ರಾಮದೇವನಿಗೆ ಮನಸ್ಸಿಗೆ ತುಂಬಾ ತಟ್ಟಿತು. ಆ ಕಾರಣದಿಂದ ಗುರುವನ್ನು ಹುಡುಕಲು ಮನೆಯಿಂದ ಹೊರಟರು. ಸನ್ಯಾಸಿ ತಾನು ಹಲವಾರು ಸಲ ಹೋಗುತ್ತಿದ್ದ ದೆಹಲಿಯ ಒಂದು ಆಶ್ರಮದ ಬಗ್ಗೆ ಹೇಳುತ್ತಿದ್ದುದು ಹುಡುಗನಿಗೆ ನೆನಪಾಯಿತು. ಹಾಗಾಗಿ ರಾಮದೇವ ಆ ಆಶ್ರಮವನ್ನು ಹುಡುಕಿಕೊಂಡು ದೆಹಲಿಯತ್ತ ಹೊರಟರು. ಅವರ ಬಳಿ ಅದರ ವಿಳಾಸವಿರಲಿಲ್ಲವಾದ್ದರಿಂದ ಆ ಆಶ್ರಮವನ್ನು ಹುಡುಕಲಾಗಲಿಲ್ಲ. ಅಲ್ಲಿ ಇಲ್ಲಿ ಅಲೆದಾಡುತ್ತ ಮೂರು ದಿನ ಕಳೆದರು. ಆಮೇಲೆ ಒಬ್ಬ ಪೋಲೀಸಿನವನು ಇವರನ್ನು ಹಿಡಿದುಕೊಂಡನು. ತಾನೊಬ್ಬ ಅನಾಥನೆಂದು ರಾಮದೇವ ಆ ಪೋಲೀಸನಿಗೆ ಸುಳ್ಳು ಹೇಳಿ ತನ್ನನ್ನು ಯಾವುದಾದರೂ ಆಶ್ರಮಕ್ಕೆ ಕರೆದೊಯ್ಯಲು ಹೇಳಿದರು. ಅಲ್ಲಿ ಅವರು ನರಸಿಂಹಗಿರಿಯ ಆಶ್ರಮಕ್ಕೆ ಹೋಗಿ ಅಲ್ಲಿದ್ದುಕೊಂಡೇ ಸ್ಕೂಲಿಗೆ ಹೋಗಲಾರಂಭಿಸಿದರು. ಹನ್ನೆರಡನೇ ಪರೀಕ್ಷೆ ತೇರ್ಗಡೆಯಾದ ಮೇಲೆ ಪಾಲಿಟೆಕ್ನಿಕ್ ಕಾಲೇಜಿನಿಂದ ಒಂದು ಡಿಪ್ಲೊಮಾ ದೊರಕಿಸಿಕೊಂಡರು. ಆ ನಂತರ ಸಂಜೆ ಕಾಲೇಜಿಗೆ ಹಾಜರಾಗಿ ಬಿ.ಎ. ಮತ್ತು ಎಂ. ಎ. ಪದವಿ ಗಳಿಸಿದರು. ಬೆಳಗಿನ ಹೊತ್ತು ಆಶ್ರಮದಲ್ಲಿ ಕೆಲಸ ಮಾಡುತ್ತಿದ್ದರು.

ರಾಮದೇವರಿಗೆ ಸುಮಾರು ಇಪ್ಪತ್ತು ವರ್ಷವಾಗಿದ್ದಾಗ ಅವರ ಆಧ್ಯಾತ್ಮಿಕ ಆಸಕ್ತಿಗಳು ದುರ್ಬಲಗೊಳ್ಳತೊಡಗಿದವು. ಆರ್ಯ ಸಮಾಜದ ಆಂದೋಲನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರ ಉಪನ್ಯಾಸಗಳಿಗೆ ಹಾಜರಾಗುತ್ತಿದ್ದರು.

ಆರ್ಯ ಸಮಾಜಿಗಳು ವಿಗ್ರಹಾರಾಧನೆಯನ್ನು ಖಂಡಿಸುತ್ತಿದ್ದರು ಮತ್ತು ಹಿಂದೂ ಧರ್ಮವನ್ನು ಸುಧಾರಣೆ ಮಾಡುವ ಬಗ್ಗೆ ಮಾತಾಡುತ್ತಿದ್ದರು. ಅದು ಹೇಗೋ ಒಂದು ದಿನ ಯಾರೋ ಒಬ್ಬ ಹೊರಗಿನವನು ಬಂದು ಆರ್ಯ ಸಮಾಜದ ಸಂಸ್ಥಾಪಕರ ಭಾವ ಚಿತ್ರಕ್ಕೆ ಹರಿದ ಚಪ್ಪಲಿಗಳ ಹಾರವನ್ನು ಹಾಕಿದ್ದನು. ಉಪನ್ಯಾಸವನ್ನು ವ್ಯವಸ್ಥೆಗೊಳಿಸಿದ್ದವರು ವಿಪರೀತ ಸಿಟ್ಟಿಗೆದ್ದು ನಮ್ಮ ಗುರುವಿಗೆ ಅಪಮಾನ ಮಾಡಲು ನಿನಗೆಷ್ಟು ಧೈರ್ಯ ಎಂದು ಕೇಳಿದರು. ಆ ಮನುಷ್ಯನು– "ನಿಮಗೆ ಹೇಗೂ ಮೂರ್ತಿಪೂಜೆಯಲ್ಲಿ

ನಂಜಿಕೆಯಿಲ್ಲದಿರುವುದರಿಂದ ಇದು ನಿಮ್ಮನ್ನೇಕೆ ಸಿಟ್ಟಿಗೆಬ್ಬಿಸುತ್ತದೆ ಎಂದು ನಾನು ಭಾವಿಸಿದೆ" – ಎಂದನು.

ಈ ಘಟನೆ ಯುವಕ ರಾಮದೇವನ ಮೇಲೆ ಅಗಾಧ ಪರಿಣಾಮ ಬೀರಿತು. ಅವರು ಆರ್ಯ ಸಮಾಜದಿಂದ ವಿಮುಖರಾದರು.

ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ ರಾಮದೇವ ದೆಹಲಿಗೆ ಸಮೀಪದ ಶಾಲೆಯಲ್ಲಿ ಎರಡು ವರ್ಷ ಅಧ್ಯಾಪಕರಾಗಿ ಕೆಲಸ ಮಾಡಿದರು. ಆದರೆ ಸನ್ಯಾಸಿಯಾಗಬೇಕೆಂಬ ತುಡಿತ ಮಾತ್ರ ಹೋಗಲಿಲ್ಲ. ಒಂದು ದಿನ ಹರಿದ್ವಾರಕ್ಕೆ ಹೋಗುವ ಉದ್ದೇಶದಿಂದ ಶಾಲೆಯನ್ನು ಬಿಟ್ಟು ಹೊರಟರು. ಆದರೆ ಇನ್ನೂ ಸನ್ಯಾಸಿಯ ಬದುಕು ಸಾಗಿಸಲು ಬೇಕಾದಷ್ಟು ಧೈರ್ಯವನ್ನು ಒಟ್ಟುಗೂಡಿಸಿಕೊಂಡಿರದೆ ಇದ್ದ ಕಾರಣ ರೈಲ್ವೇ ಸ್ಟೇಷನ್ನಿನಿಂದ ಹಿಂತಿರುಗಿದರು. ಭಿಕ್ಷೆ ಬೇಡುವುದೆಂದರೆ ಅವರಿಗೆ ಮುಜುಗರವೆನಿಸುತ್ತಿತ್ತು. ಆದಾಗ್ಯೂ ಮತ್ತೆರಡು ತಿಂಗಳು ಕಳೆದ ಮೇಲೆ ಅವರು ಧೈರ್ಯ ಮಾಡಿ ಜೇಬಿನಲ್ಲಿ ನಲವತ್ತೇಳು ರೂಪಾಯಿ ಇಟ್ಟುಕೊಂಡು ಹರಿದ್ವಾರಕ್ಕೆ ಹೋದರು. ಹರಿದ್ವಾರದಿಂದ ಹೃಷೀಕೇಶದತ್ತ ನಡೆಯತೊಡಗಿದರು. ಹೃಷೀಕೇಶಕ್ಕೆ ಹೋಗುವ ದಾರಿ ಕ್ರೂರ ಮೃಗಗಳಿಂದ ತುಂಬಿದ್ದ ಕಾಡಿನ ಮೂಲಕ ಹಾದು ಹೋಗುತ್ತಿತ್ತು. ಆದರೆ ನಡೆದುಹೋಗುವುದನ್ನು ನಿಲ್ಲಿಸದೆ ಮುಂದುವರಿಸಿ ಕಾಲಿ ಕಂಬ್ಲಿವಾಲಾ ಅನ್ನಕ್ಷೇತ್ರವನ್ನು ತಲುಪಿದರು. ಅಲ್ಲಿಯೇ ಉಳಿದಿದ್ದು ರಾತ್ರಿಯನ್ನು ಕಳೆದರು.

ಕಾಲಿ ಕಂಬ್ಲಿವಾಲಾ(ಕರಿಯ ಕಂಬಳಿ ಹೊದ್ದವನು) ಎನ್ನುವವನು ಹಿಮಾಲಯದಲ್ಲಿ ವಾಸಿಸುತ್ತಿದ್ದ ಹತ್ತೊಂಬತ್ತನೇ ಶತಮಾನದ ಸಾಧು. ಸಾಧುಗಳು ಭಿಕ್ಷಾಟನೆ ಮಾಡಲು ಇರುವ ಸ್ಥಳಗಳ ಕೊರತೆ ಇದೆ ಎಂದು ಮನಗಂಡು ಆತನು ಬದರೀನಾಥ ಮತ್ತು ಗಂಗೋತ್ರಿಗೆ ಹೋಗುವ ಮಾರ್ಗದಲ್ಲಿ 108 ಆಶ್ರಯ ಸ್ಥಾನಗಳನ್ನು ನಿರ್ಮಿಸಿದನು. ಅವುಗಳಲ್ಲಿ ಇಪ್ಪತ್ತೊಂಬತ್ತು ಸ್ಥಳಗಳು ಈಗಲೂ ಅಸ್ತಿತ್ವದಲ್ಲಿವೆ. ಅವುಗಳಿಗೆ ಆ ಟ್ರಸ್ಟ್ ಬೆಂಬಲವಾಗಿದೆ.

ಮರುದಿನ ಬೆಳಿಗ್ಗೆ ಗುರುವಿನ ಅನ್ವೇಷಣೆಗೆ ತೊಡಗಿದರು. ಒಂದಿಬ್ಬರು ಸನ್ಯಾಸಿಗಳು ತಿರಸ್ಕರಿಸಿದ ಮೇಲೆ ಒಬ್ಬರ ಆಶ್ರಮಕ್ಕೆ ಹೋಗಿ ತಲುಪಿದರು. ಮುಂದೆ ಅವರೇ ಇವರ ಗುರುವಾದರು. ಇವರು ಆ ಆಶ್ರಮಕ್ಕೆ ಹೋದಾಗ ಅವರು ಕೆಲವು ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದರು. ರಾಮದೇವರಿಗೆ ಅವರ ಮಾತುಗಳು ತಮ್ಮ ಮನಸ್ಸಿನಲ್ಲಿದ್ದ ಪ್ರಶ್ನೆಗಳಿಗೆ ಉತ್ತರಗಳೆಂಬಂತೆ ಅನಿಸಿದುವು. ಉಪನ್ಯಾಸ ಮುಗಿದ ಮೇಲೆ ಸನ್ಯಾಸಿಯು ಈ ಯುವಕನನ್ನು ಬಂದ ಉದ್ದೇಶವೇನೆಂದು ಕೇಳಿದರು.

"ಸಾಧುವಾಗ ಬೇಕೆಂಬುದು"– ರಾಮದೇವರ ಉತ್ತರ.

"ಏಕೆ? ಇಷ್ಟವಿಲ್ಲದ ಕೆಟ್ಟ ಮದುವೆಯಿಂದ ತಪ್ಪಿಸಿಕೊಳ್ಳಬೇಕೆಂದಿದ್ದೀಯಾ?

ನಿಮ್ಮ ತಂದೆ-ತಾಯಿಗಳೊಂದಿಗೆ ಜಗಳ ಆಡಿದ್ದೀಯಾ? ಅಥವಾ ಪರೀಕ್ಷೆಯಲ್ಲಿ ಫೇಲಾಗಿದ್ದೀಯಾ?" -ಎಂದು ಸನ್ಯಾಸಿ ಕೇಳಿದನು.

"ಇದಾವುದೂ ಅಲ್ಲ" ಎಂದು ಹೇಳಿ ಹುಡುಗನು ತನ್ನ ಕಥೆ ಹೇಳಿದನು. ಆದರೆ ಸನ್ಯಾಸಿಯು ಅವರನ್ನು ಓಡಿಸಿಬಿಟ್ಟರು. ಹಠಮಾರಿ ಹುಡುಗನು ಸನ್ಯಾಸಿಯು ಅವನಿದ್ದಲ್ಲಿಗೇ ಬಂದು ಕರೆದುಕೊಂಡುಹೋಗಿ ಶಿಷ್ಯನನ್ನಾಗಿ ಅಂಗೀಕರಿಸುವುದಾಗಿ ಭರವಸೆ ನೀಡುವವರೆಗೂ ಗಂಗಾ ನದಿಯ ಬಳಿಯೇ ಮೂರು ಹಗಲು ಮೂರು ರಾತ್ರಿ ಆಹಾರವಿಲ್ಲದೆ ಕಳೆದನು.

ಮುಂದಿನ ವರ್ಷಗಳೆಂದರೆ ರಾಮದೇವರ ಪಾಲಿಗೆ ಅತ್ಯಂತ ಕಾರ್ಯ ಬಾಹುಳ್ಯದ ಕಾಲ. ಶಾಸ್ತ್ರವಿಚಾರಗಳನ್ನು ಕುರಿತಂತೆ ಕ್ರಮಬದ್ಧವಾದ ಪಾಠವಿರುತ್ತಿತ್ತು. ಆದರೆ ಗುರುಗಳು ದೈಹಿಕ ಶ್ರಮದ ಮೇಲೆ ಹೆಚ್ಚು ಒತ್ತುಕೊಡುತ್ತಿದ್ದರು. ರಾಮದೇವರು ತಮ್ಮ ಬಾಕಿ ಸಮಯವನ್ನೆಲ್ಲ ಗಂಗೆಯ ದಡಗಳನ್ನು ಬಲಪಡಿಸಲು ಕಲ್ಲುಗಳನ್ನು ಹೊರುವುದರಲ್ಲಿ ಕಳೆದರು. ಆಗಿನ್ನೂ ಹೃಷೀಕೇಶವು ಕಾಡಾಗಿಯೇ ಇದ್ದ ದಿನಗಳು. ಗುರು ಮತ್ತು ಶಿಷ್ಯರು ಮರದಿಂದ ನಿರ್ಮಿತವಾದ ಹುಲ್ಲಿನ ಮೇಲ್ಛಾವಣಿ ಹೊಂದಿರುವ ಕುಟೀರದಲ್ಲಿರುತ್ತಿದ್ದರು. ಆಶ್ರಮದಲ್ಲಿ ಅಡಿಗೆ ಮಾಡುತ್ತಿರಲಿಲ್ಲ. ಆಹಾರವನ್ನು ಅನ್ನಕ್ಷೇತ್ರಗಳಿಂದ ತರಲಾಗುತ್ತಿತ್ತು. ಎಂಟು ವರ್ಷಗಳ ಕಾಲ ಗುರುಸೇವೆ ಮಾಡಿ ಶಾಸ್ತ್ರಗಳನ್ನು ಕಲಿತ ನಂತರದಲ್ಲಿ ರಾಮದೇವರು ತಮಗೆ ದೀಕ್ಷೆ ನೀಡಬೇಕೆಂದು ಗುರುಗಳನ್ನು ಕೇಳಿದರು.

"ನೀನು ಮೊದಲು ಗೋಮುಖಕ್ಕೆ ಹೋಗಿ ಅಲ್ಲಿಂದ ನೀರು ತೆಗೆದುಕೊಂಡು ಬರಬೇಕು." ಎಂದು ಗುರುಗಳು ಹೇಳಿದರು. ರಾಮದೇವ ಕಾಲುನಡಿಗೆಯಲ್ಲಿ ಯಾತ್ರೆ ಮುಗಿಸಿ ನೀರು ತೆಗೆದುಕೊಂಡು ಹಿಂತಿರುಗಿ ಬರಲು ಮೂರು ತಿಂಗಳು ಹಿಡಿಯಿತು. ಆ ನಂತರ ಅವರನ್ನು ದೇಶದ ಎಲ್ಲ ಜ್ಯೋತಿರ್ಲಿಂಗಗಳ ತೀರ್ಥಯಾತ್ರೆ ಮಾಡಿಕೊಂಡು ಬರಬೇಕೆಂದು ಕಳಿಸಿಕೊಡಲಾಯಿತು. ಜ್ಯೋತಿರ್ಲಿಂಗಗಳೆಂದು ಹೇಳುವ ಲಿಂಗಗಳು ಭಾರತದಲ್ಲಿ ಹನ್ನೆರಡು ಇವೆ. ಜ್ಯೋತಿರ್ಲಿಂಗವೆಂದರೆ ಬೆಳಕನ್ನು ಬಿತ್ತರಿಸುವ ಲಿಂಗ.

"ನೀನು ಕಾಲಿಗೆ ಚಪ್ಪಲಿ ಇಲ್ಲದೆ ಬರಿಗಾಲಿನಲ್ಲಿ ಹೋಗಬೇಕಾಗುತ್ತದೆ ಮತ್ತು ಯಾರದೇ ಮನೆಯಲ್ಲಿ ತಂಗಕೂಡದು ಯಾವುದೇ ಹೆಣ್ಣಿನೊಂದಿಗೆ ಮಲಗುವಂತಿಲ್ಲ. ಪ್ರತಿ ರಾತ್ರಿಯೂ ನಿನಗೆ ಮಾಡಬೇಕೆಂದು ಹೇಳಲಾಗಿರುವ ಜಪವನ್ನು ಮಾಡಬೇಕು." ಇವು ಅವರಿಗೆ ಗುರುವಿನ ಸೂಚನೆಗಳು.

ರಾಮದೇವ ಮೊದಲು ಪೂರ್ವಕ್ಕೆ ಕಲ್ಕತ್ತಾದವರೆಗೂ ಹೋದರು. ಆ ಮೇಲೆ ದಕ್ಷಿಣದಲ್ಲಿದ್ದ ಭುವನೇಶ್ವರಕ್ಕೆ, ಆ ನಂತರ ಪಶ್ಚಿಮಕ್ಕೆ ತಿರುಗಿ ಮಹಾರಾಷ್ಟ್ರಕ್ಕೆ ತೆರಳಿದರು. ಮಹಾರಾಷ್ಟ್ರದಿಂದ ದಕ್ಷಿಣಕ್ಕೆ ಹೊರಳಿ ತಿರುಪತಿಗೆ ಹೋದರು. ಅಂತಿಮವಾಗಿ ರಾಮೇಶ್ವರಕ್ಕೆ ಹೋದರು. ಅಲ್ಲಿಂದ ಮತ್ತೆ ಉತ್ತರಕ್ಕೆ ಪಶ್ಚಿಮ ಕರಾವಳಿಯ ಹತ್ತಿರ ಕರಾಚಿಯವರೆಗೂ ಹೋದರು. ಆ ನಂತರ ಮತ್ತೆ ಪೂರ್ವಕ್ಕೆ ತಿರುಗಿ ಗುಜರಾತ್ ಮಾರ್ಗವಾಗಿ ರಾಜಾಸ್ತಾನಕ್ಕೆ ಹೋದರು. ಎಲ್ಲ ಮುಗಿಸಿಕೊಂಡು ತಮ್ಮ ಆಶ್ರಮಕ್ಕೆ ವಾಪಸ್ ಬರುವ ಹೊತ್ತಿಗೆ

ಮೂರೂವರೆ ವರ್ಷಗಳು ಮುಗಿದಿತ್ತು. ಅಂತಿಮವಾಗಿ ಗುರುಗಳು ಅವರಿಗೆ ಸನ್ಯಾಸ ದೀಕ್ಷೆ ನೀಡಿದರು. ಇದರ ನಂತರ ಗುರುಗಳು ತಮ್ಮೊಂದಿಗೆ ಅವರನ್ನು ಗಂಗೋತ್ರಿಗೆ ಕರೆದುಕೊಂಡು ಹೋದರು. ಅಲ್ಲಿ ಅವರಿಬ್ಬರೂ ಮೂರು ವರ್ಷ ಇದ್ದರು.

ಆಮೇಲೆ ಹೃಷೀಕೇಶದಲ್ಲಿನ ಆಶ್ರಮಕ್ಕೆ ಹಿಂತಿರುಗಿದರು. ಅಲ್ಲಿಂದ ಮುಂದೆ ಪ್ರತಿ ವರ್ಷವೂ ಕೆಲವು ತಿಂಗಳುಗಳ ಕಾಲ ಪಂಜಾಬ್ ಮತ್ತು ಹರಿಯಾಣಗಳ ಕಡೆ ಪ್ರವಾಸಹೋಗುವ ಪರಿಪಾಟಿ ಇಟ್ಟುಕೊಂಡಿದ್ದಾರೆ.

ಕಳೆದ ಹದಿನಾರು ವರ್ಷಗಳಿಂದ ಅವರು ಈ ಆಶ್ರಮದ ಮುಖ್ಯಸ್ಥರಾಗಿದ್ದಾರೆ. ಗುರುಗಳು 1986ರಲ್ಲಿ ದೀರ್ಘ ಕಾಯಿಲೆಯ ನಂತರ ಆಸ್ಪತ್ರೆಯಲ್ಲಿ ನಿಧನಹೊಂದಿದರು. ಆದರೆ ಸಾಯುವ ಮುನ್ನ ಕೋಮಾದಿಂದ ಹೊರಬಂದರು ಮತ್ತು ರಾಮದೇವ ಅವರನ್ನು ಆಶ್ರಮದ ಮುಖ್ಯಸ್ಥರನ್ನಾಗಿ ಮಾಡಬೇಕೆಂದು ಬಯಸಿರುವುದಾಗಿ ತಿಳಿಸಿದರು. ಗುರುಗಳ ಸೂಚನೆಗಳೆಂದರೆ– ಆಶ್ರಮದಲ್ಲಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಜಪವನ್ನು ನಡೆಸಬೇಕು, ಆಶ್ರಮದ ಸುತ್ತ ಗೋಡೆ ನಿರ್ಮಿಸಬೇಕು; ಆಶ್ರಮಕ್ಕೆ ಯಾರೇ ಬಂದರೂ ಅವರಿಗೆ ಭೋಜನ ನೀಡಬೇಕು; ಯಾವ ವ್ಯಕ್ತಿಯೂ ಇಲ್ಲಿಂದ ಹಸಿದುಕೊಂಡು ಹೋಗಬಾರದು– ಎಂಬುವು.

ರಾಮದೇವ ಆಶ್ರಮದ ಮುಖ್ಯಸ್ಥರಾಗಿ ತಮ್ಮ ಗುರುಗಳು ಹೇಳಿದ್ದೆಲ್ಲವನ್ನೂ ಈಡೇರಿಸಿದ್ದಾರೆ. ಜೊತೆಗೆ ಇನ್ನೂ ಹೆಚ್ಚಿನದನ್ನು ಮಾಡಿದ್ದಾರೆ. ಯಾರನ್ನೂ ಕೇಳದೆಯೆ ಹಣದ ನೆರವು ಒದಗಿಬಂದಿದೆ. ಈಗ ಆಶ್ರಮದಲ್ಲಿ ಹದಿನಾರು ಕೊಠಡಿಗಳಿವೆ. ಒಂದು ಸ್ಕೂಟರ್ ಒಂದು ಕಾರು ಮತ್ತು ಹತ್ತು ಹಸುಗಳು ಇವೆ. ಹಾಲನ್ನು ಎಂದೂ ಮಾರುವುದಿಲ್ಲ. ಅವರು ಸಾಧುಗಳಾಗಿರಲಿ ಅಥವಾ ಸಾಮಾನ್ಯರಾಗಿರಲಿ ಅತಿಥಿಗಳ ಸೇವೆಗಾಗಿ ಬಳಸಲಾಗುತ್ತದೆ.

ಸ್ವಾಮಿ ರಾಮದೇವರಿಗೂ ಅವರದೇ ಆದ ಕಷ್ಟಗಳೂ ಇದ್ದುವು. ಎರಡು ಸಲ ಅವರನ್ನು ಆಸ್ಪತ್ರೆಗೆ ಅಡ್ಮಿಟ್ ಮಾಡಲಾಗಿತ್ತು. ಒಮ್ಮೆ ಮುಂಗರುಳಿನ ಹುಣ್ಣಿಗಾಗಿ ಶಸ್ತ್ರ ಚಿಕಿತ್ಸೆಯ ಸಲುವಾಗಿ ಹಾಗೂ ಇನ್ನೊಮ್ಮೆ ಹೃದಯಾಘಾತವುಂಟಾದಾಗ. ಹೃದಯಾಘಾತವಾದಾಗ ತೀವ್ರ ನಿಗಾ ಘಟಕದಲ್ಲಿಟ್ಟಿದ್ದಾಗ, ತಾನಿನ್ನೂ ಮಾಡಬೇಕಾದ ಕೆಲವು ಕೆಲಸಗಳು ಬಾಕಿ ಇರುವುದರಿಂದ ತನ್ನನ್ನು ಇನ್ನೂ ನಾಲ್ಕು ಅಥವಾ ಐದು ವರ್ಷಗಳ ಕಾಲ ಜೀವಂತವಾಗಿ ಇಟ್ಟಿರಬೇಕೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು. ಇಪ್ಪತ್ತೈದು ದಶಲಕ್ಷ ಬಾರಿ ಜಪ ಮಾಡುವುದಾಗಿ ಪ್ರತಿಜ್ಞೆ ಮಾಡಿದರು.

ಸ್ವಾಮೀಜಿಯವರು ಪ್ರತಿದಿನ ಬೆಳಗಿನ ಜಾವ 3 ಗಂಟೆಗೆಲ್ಲ ಎದ್ದು ಸುಮಾರು ನಾಲ್ಕು ಗಂಟೆಗಳ ಕಾಲ ತಮ್ಮ ಜಪ, ತಪ ಪೂಜಾದಿಗಳನ್ನು ಮಾಡುತ್ತಾರೆ. ಬೆಳಿಗ್ಗೆ ಬಂದವರನ್ನು ಭೇಟಿಮಾಡುತ್ತಾರೆ. ಅಲ್ಲಿ ಸೇರಿರುವ ಶ್ರೋತೃಗಳಿಗೆ ಸಲಹೆ ಸೂಚನೆ ಮತ್ತು ಕರುಣಾಪೂರ್ಣವಾದ ಮಾತುಗಳನ್ನು ಈ ಸಮಯದಲ್ಲಿ ಹೇಳುತ್ತಾರೆ. ಮಧ್ಯಾಹ್ನ

ಊಟವಾದ ನಂತರ ಸಂಜೆ ನಾಲ್ಕರ ವರೆಗೂ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ. ಆಮೇಲೆ ಮತ್ತೆ ಎರಡು ಗಂಟೆಗಳ ಕಾಲ ಜನರನ್ನು ಭೇಟಿಮಾಡುತ್ತಾರೆ. ಆ ಮೇಲೆ ಆಶ್ರಮದ ಸುತ್ತ ತಿರುಗಾಡಿ ಆಗಿರುವ ಪ್ರಗತಿ ಪರಿಶೀಲಿಸುತ್ತಾರೆ. ಆ ನಂತರ ಮತ್ತೆರಡು ಗಂಟೆಗಳ ಕಾಲ ಜಪ ಮತ್ತು ಪೂಜೆಗೆ ಕುಳಿತುಬಿಡುತ್ತಾರೆ. ಈಗ ಪ್ರಯಾಣ ಮಾಡುವುದನ್ನು ಬಿಟ್ಟುಬಿಟ್ಟಿದ್ದಾರೆ. ಇನ್ನು ತಾನು ಸಾಯುವ ತನಕ ಎಂದಿಗೂ ಆಶ್ರಮವನ್ನು ಬಿಟ್ಟು ಹೊರಗಡೆ ಸಂಚರಿಸುವ ಸಾಧ್ಯತೆ ಇಲ್ಲವೆಂದು ನನಗೆ ತಿಳಿಸಿದರು. ಸ್ವಾಮಿ ರಾಮದೇವರಿಗೆ ಮೂವತ್ತೆರಡು ವರ್ಷ ವಯಸ್ಸಿನ ಸಮರ್ಥ ಸಹಾಯಕ ಸ್ವಾಮಿ ಮಹಿಮಾನಂದರಿದ್ದಾರೆ. ಅವರು ತನ್ನ ಹದಿನಾರು- ಹದಿನೇಳನೇ ವಯಸ್ಸಿನಲ್ಲಿ ಸ್ವಯಿಚ್ಛೆಯಿಂದ ರಾಮದೇವರ ಬಳಿ ಬಂದು ಸೇರಿಕೊಂಡಿದ್ದಾರೆ. ಅವರ ತಂದೆ ತಾಯಿಗಳು ರಾಮದೇವರಿಗೆ ಪರಿಚಯವಿದ್ದವರೇ ಆಗಿದ್ದು ಹುಡುಗನಿಗೆ ಸ್ವಾಮೀಜಿಯೊಂದಿಗೆ ಹೋಗಲು ಅನುಮತಿ ನೀಡಿದರು. ಸ್ವಲ್ಪ ಕಾಲದ ನಂತರ ತಮ್ಮ ಮಗನ ಬಗೆಗಿನ ಕಾಳಜಿಯಿಂದ ಆಶ್ರಮದಿಂದ ಮನೆಗೆ ಕರೆದುಕೊಂಡುಹೋಗಿ ಹುಡಗನ ಇಚ್ಛೆಗೆ ವಿರುದ್ಧವಾಗಿ ಮದುವೆಯ ಏರ್ಪಾಟು ಮಾಡಿದರು. ಯುವಕನು ಮನೆಬಿಟ್ಟು ಆಶ್ರಮಕ್ಕೆ ಓಡಿಬಂದನು. ಮತ್ತೆ ಹಿಂತಿರುಗಿ ಹೋಗಲು ನಿರಾಕರಿಸಿದನು. ಆ ನಂತರ ಅವನ ಕುಟುಂಬದವರು ಅವನ ಹೆಂಡತಿಯನ್ನು ಅವನ ತಮ್ಮನೊಂದಿಗೆ ಮದುವೆಮಾಡಿಸುವ ಉದ್ದೇಶದಿಂದ ಅವನನ್ನು ಕೊಲ್ಲಿಸುವ ಯೋಚನೆ ಮಾಡಿದರು. ಸುದೈವದಿಂದ ಅವರ ಹಂಚಿಕೆ ಈಡೇರಲಿಲ್ಲ. ಆ ನಂತರದಲ್ಲಿ ಅವರ ಊರಿನವರು ಮತ್ತು ಸ್ವಾಮಿ ರಾಮದೇವರ ನಡುವೆ ಒಂದು ಸಭೆ ನಡೆಯಿತು. ಅದರಲ್ಲಿ ಈ ಯುವಕನು ಸ್ವಂತ ಇಚ್ಛೆಯಿಂದ ಕಾನೂನು ಬದ್ಧವಾಗಿ ತನ್ನ ಪಾಲಿನ ಆಸ್ತಿಯ ಹಕ್ಕುಗಳನ್ನು ತನ್ನ ಅಣ್ಣನಿಗೆ ನೀಡಿದನು.

ಆಶ್ರಮದಲ್ಲಿದ್ದ ಸಮಯದಲ್ಲಿ ಮಹಿಮಾನಂದನು ಸಂಸ್ಕೃತದಲ್ಲಿ ಒಂದು ಕೋರ್ಸ್ ಮುಗಿಸಿದನು. ಈಗ ಅದಕ್ಕಿಂತ ಉನ್ನತ ದರ್ಜೆಯ ವಿದ್ಯಾರ್ಹತೆಗಾಗಿ ಅಧ್ಯಯನ ಮಾಡುತ್ತಿದ್ದಾನೆ. ಎಂಟು ವರ್ಷಗಳ ಕಾಲ ಸ್ವಾಮಿ ರಾಮಾನಂದರ ಸೇವೆ ಸಲ್ಲಿಸಿದ ನಂತರದಲ್ಲಿ ಈಗ್ಗೆ ಒಂದು ವರ್ಷದ ಹಿಂದೆ ಸನ್ಯಾಸ ದೀಕ್ಷೆಯನ್ನು ಪಡೆದುಕೊಂಡನು. ಈಗಲೂ ತನ್ನ ಸೇವೆ ಮುಂದುವರಿಸಿದ್ದಾನೆ. ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ರಾತ್ರಿ ಹನ್ನೊಂದು ಗಂಟೆಗೆ ಮಲಗುತ್ತಾನೆ. ಈ ಮಧ್ಯೆ ಸತತವಾಗಿ ಕ್ರಿಯಾಶೀಲನಾಗಿದ್ದು ಆಶ್ರಮದ ವ್ಯವಸ್ಥೆಯನ್ನು ನೋಡಿಕೊಳ್ಳುವುದಲ್ಲದೆ ಆಶ್ರಮಕ್ಕೆ ಬಂದ ಅತಿಥಿಗಳ ಸೇವೆ ಮಾಡುತ್ತಾನೆ. ಆತನು ತನ್ನ ಗುರುವಿನಷ್ಟೇ ಮೃದುಭಾಷಿ ಮತ್ತು ಹಿತಭಾಷಿ. ಗುರುವಿನ ನಂತರ ಅವರ ಉತ್ತರಾಧಿಕಾರಿಯಾಗುವ ಸಾಧ್ಯತೆ ಇದೆ.

ನಾನು ಆಶ್ರಮಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ರಾಮದೇವ ಅವರು ಜನರು ತರುವ ಸಮಸ್ಯೆಗಳನ್ನು ಬಗೆಹರಿಸುವ ರೀತಿಯನ್ನು ಕಾಣುವ ಅವಕಾಶ ದೊರೆಯಿತು. ಹತ್ಯೆಯಿಂದಾಗಿ ಮಗನನ್ನು ಕಳೆದುಕೊಂಡಿದ್ದ ತಾಯಿಯನ್ನು ಸಂತೈಸಿದರು. ಇತ್ತೀಚೆಗೆ

ತಂದೆಯನ್ನು ಕಳೆದುಕೊಂಡು ಮನೆತನದ ವ್ಯಾಪಾರ ವ್ಯವಹಾರಗಳನ್ನು ನೋಡಿಕೊಳ್ಳಬೇಕಾಗಿ ಬಂದಿದ್ದ ಯುವಕನೊಬ್ಬ ಅವರ ಬಳಿ ಸಲಹೆಗಾಗಿ ಬಂದಿದ್ದನು. ಸ್ವಾಮೀಜಿಯವರು ಮೃದುವಾಗಿ ಅವನಿಗೆ "ನೀನು ಎಲ್ಲರಿಗಿಂತ ಹಿರಿಯ ಮಗನಾಗಿರುವುದರಿಂದ ಈಗ ನಿಜವಾಗಿ ದೊಡ್ಡವನಾಗು ಮತ್ತು ಕುಟುಂಬದ ಹೊಣೆಗಾರಿಕೆಯನ್ನು ಹೊತ್ತುಕೋ" ಎಂದು ಹೇಳಿ ಬೇರೆಯವರ ಮೇಲೆ ಕೋಪ ಮಾಡಿಕೊಳ್ಳುವುದನ್ನು ಬಿಡು ಎಂಬುದನ್ನು "ನಿನ್ನನ್ನೇ ನಿನ್ನ ಕೋಪಕ್ಕೆ ಉಡುಗೊರೆಯನ್ನಾಗಿಸಿಕೊಳ್ಳಬೇಕು" ಎನ್ನುವ ಮಾತುಗಳ ಮೂಲಕ ಹೇಳಿದರು. ನನ್ನ ಭೇಟಿಯ ಸಂದರ್ಭದಲ್ಲಿ ನನ್ನೆದುರಿಗೆ ಅವರು ಸಮಾಧಾನ ಪಡಿಸಿದ ಇಲ್ಲವೆ ಬುದ್ಧಿವಾದ ಹೇಳಿದ ಅನೇಕ ವ್ಯಕ್ತಿಗಳಿದ್ದರು. ಜನರೊಂದಿಗೆ ಅವರು ಮಾತನಾಡುವ ರೀತಿಯೇ ಹಲವು ವಿಶಿಷ್ಟತೆಗಳಿಂದ ಕೂಡಿತ್ತು. ಪ್ರತಿಯೊಬ್ಬ ವ್ಯಕ್ತಿಯೊಂದಿಗೂ ಅವನ ನಂಬಿಕೆಯ ಚೌಕಟ್ಟು ಅಥವಾ ಸಂದರ್ಭಕ್ಕೆ ತಕ್ಕಂತೆ ಮಾತನಾಡುತ್ತಿದ್ದರು. ತಮ್ಮ ಸಂಪ್ರದಾಯ ಬೇರೆಯದಾದರೂ ಶಿವನನ್ನು ಪೂಜಿಸುತ್ತಿದ್ದ ಒಬ್ಬ ಮಹಿಳೆಗೆ ಅವರು "ಓಂ ನಮಃ ಶಿವಾಯ" ಎಂಬ ಷಡಕ್ಷರೀ ಮಂತ್ರವನ್ನು ಜಪಿಸುವಂತೆ ಹೇಳಿದರು. ತಮ್ಮಲ್ಲಿಗೆ ಬಂದ ವ್ಯಕ್ತಿಯ ಮಾತುಗಳನ್ನು ಸಾವಕಾಶವಾಗಿ ಕೇಳಿಸಿಕೊಳ್ಳುತ್ತಿದ್ದದ್ದರಿಂದ ಅವನಿಗೆ ಸಲಹೆ ನೀಡುವ ಮುಂಚೆ ಅವನ ಜೀವನ ಶೈಲಿಯನ್ನು ಗ್ರಹಿಸಲು ಅವರಿಗೆ ಸಾಧ್ಯವಾಗುತ್ತಿತ್ತು. ಮಕ್ಕಳೊಂದಿಗೆ ಅವರು ಆಟವಾಡುತ್ತಿದ್ದರು ಮತ್ತು ವಿನೋದವನ್ನೂ ಮಾಡುತ್ತಿದ್ದರು. ತಮ್ಮ ಮಾತುಗಳನ್ನು ಅರ್ಥಮಾಡಿಸಲು ಧರ್ಮಗ್ರಂಥಗಳಿಂದ ಸಂದರ್ಭಕ್ಕೆ ತಕ್ಕ ಶ್ಲೋಕಗಳನ್ನು ಅಥವಾ ಪುರಾಣಗಳಿಂದ ಕಥೆಗಳನ್ನು ಹೇಳುತ್ತಿದ್ದರು. ಫೋನ್ ನಲ್ಲಿ ಮಾತಾಡುವಾಗಲೂ ಅವರು ಇಲ್ಲೇ ತಮ್ಮೆದುರುಗಡೆಯೇ ಇದ್ದಾರೇನೋ ಎನ್ನುವ ರೀತಿಯಲ್ಲಿ ಮಾತಾಡುತ್ತಿದ್ದರು. ಹೆಚ್ಚು ಒತ್ತಾಯದ ಬೇಡಿಕೆಗಳನ್ನು ಮುಂದಿಡುತ್ತಿದ್ದ ವ್ಯಕ್ತಿಗಳನ್ನು ಹೇಗೆ ನಿಭಾಯಿಸುವುದೆಂಬುದು ಅವರಿಗೆ ಗೊತ್ತಿತ್ತು. ತನ್ನ ಚಿಕ್ಕಪ್ಪನಿಗೆ ತನ್ನ ಮೇಲೆ ಕೋಪ ಮಾಡಿಕೊಳ್ಳದಂತೆ ಬುದ್ಧಿಹೇಳಬೇಕೆಂದು ಅವರನ್ನು ಪೀಡಿಸುತ್ತಿದ್ದ ಒಬ್ಬ ಮಹಿಳೆಗೆ ಮೊದಲು ನಿನ್ನ ಕೋಪವನ್ನು ಬಿಡು ಎಂದು ಬುದ್ಧಿ ಹೇಳಿದರು. ಅನೇಕ ವೇಳೆ ಸ್ವಾಮೀಜಿ ತುಂಬ ಕಾವ್ಯಾತ್ಮಕವಾದ ರೀತಿಯಲ್ಲಿ ಸಲಹೆ- ಉಪದೇಶಗಳನ್ನು ನೀಡುತ್ತಿದ್ದರು. ಒಬ್ಬ ಭಕ್ತನಿಗೆ ಅವರು-

"ನಿನ್ನ ಕೆಲಸವೇನಿದ್ದರೂ ನಿನ್ನ ಹೃದಯದ ಕನ್ನಡಿಯಲ್ಲಿ ದೇವರ ಪ್ರತಿಬಿಂಬವನ್ನು ಹಿಡಿಯುವುದು. ಕನ್ನಡಿಯೇ ಕೊಳೆಯಾಗಿದ್ದರೆ ನಿನಗೆ ಪ್ರತಿಬಿಂಬವನ್ನು ಹಿಡಿಯಲಾಗುವುದಿಲ್ಲ. ಆದ್ದರಿಂದ ಮೊದಲು ಈ ನಿನ್ನ ಹೃದಯದ ಕನ್ನಡಿಯನ್ನು ಸ್ವಚ್ಛಗೊಳಿಸು. ಒಳ್ಳೆಯ ವಿಚಾರಗಳನ್ನು ಹೊಂದು. ಅಲ್ಲದೆ ಕನ್ನಡಿಯು ಅಲುಗಾಡುತ್ತಿದ್ದರೆ ನಿನಗೆ ಪ್ರತಿಬಿಂಬವನ್ನು ಹಿಡಿಯಲಾಗುವುದಿಲ್ಲ. ಆದ್ದರಿಂದ ನಿನ್ನ ಹೃದಯದ ಕನ್ನಡಿಯನ್ನು ಸ್ಥಿರವಾಗಿಟ್ಟುಕೋ." ಎಂದು ಹೇಳಿದರು.

ನಾನು ಅವರನ್ನು ಬೇರೆ ಕೆಲವು ಪ್ರಶ್ನೆಗಳನ್ನು ಕೇಳಿದೆ.

"ನಿಮ್ಮ ಗುರುಗಳೊಂದಿಗೆ ನಿಮ್ಮ ಸಂಬಂಧ ಯಾವ ರೀತಿಯದಾಗಿತ್ತು?"

"ತಂದೆ- ಮಗನ ಸಂಬಂಧದಂತಿತ್ತು. ಅವರು ವಾತ್ಸಲ್ಯಪೂರ್ಣರಾಗಿದ್ದರು. ಅವರು ನನ್ನನ್ನು ಆಲಿಂಗಿಸಿಕೊಂಡ ಸಂದರ್ಭಗಳಿದ್ದುವು. ನನ್ನ ವಿಷಯದಲ್ಲಿ ಬಿಗಿಯಾಗಿದ್ದ ಸಂದರ್ಭಗಳೂ ಇದ್ದುವು. ಒಂದು ಸಲ ನಾನು ಹೊತ್ತುಕೊಂಡು ಹೋಗುತ್ತಿದ್ದ ಕಲ್ಲು ಬಿದ್ದು ನನ್ನ ಹೆಬ್ಬೆರಳಿಗೆ ಗಾಯವಾಯಿತು. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂದು ಹೇಳುತ್ತ ಅಳಲಾರಂಭಿಸಿದೆ. ನನ್ನ ಗುರುಗಳು ಶಾಂತವಾಗಿ ಗಾಯದ ಮೇಲೆ ಮೂತ್ರಮಾಡಿಕೊಳ್ಳಲು ಸಲಹೆ ನೀಡಿದರು. ಮೂತ್ರವು ಕೊಳೆತವನ್ನು ತಪ್ಪಿಸುವ ಪೂತಿನಾಶಕ ಗುಣವುಳ್ಳದೆಂಬ ನಂಬಿಕೆಯಿರುವುದೇ ಅದಕ್ಕೆ ಕಾರಣ. ನಾನು ಸಿಟ್ಟಿಗೆದ್ದು 'ಮಕ್ಕಳಿಲ್ಲದ ಬಂಜೆಗೇನು ಗೊತ್ತು ಹೆರಿಗೆಯ ನೋವು' ಎಂದು ಕೂಗಾಡಿದೆ. ಅವರು ಶಾಂತವಾಗಿ ಆಶ್ರಮ ಬಿಟ್ಟುಹೋಗು ಎಂದು ಹೇಳಿದರು. ನಾನು ಹೋಗಿ ಆಶ್ರಮದ ಪರಿಧಿಯ ಹೊರಗಡೆ ಕುಳಿತುಕೊಂಡೆ. ಸಾಯಂಕಾಲ ಅವರು ಬಂದು ಇನ್ನೂ ಏಕೆ ಹೋಗಿಲ್ಲವೆಂದು ಕೇಳಿದರು?

'ನಾನು ಎಲ್ಲಿಗೆ ಹೋಗಲಿಕ್ಕಾಗುತ್ತೆ?' ಎಂದು ಕೇಳಿದೆ. ಗುರುಗಳು ನನ್ನನ್ನು ಹಿಂದಕ್ಕೆ ಕರೆದೊಯ್ದು ಸ್ವತಃ ತಮ್ಮ ಕೈಗಳಿಂದಲೇ ಉಣಬಡಿಸಿದರು."

"ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸದಾ ಸಂಚರಿಸುತ್ತಿರುವ ಸನ್ಯಾಸಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?"

"ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚಾರ ಮಾಡುವುದು ಅದರಲ್ಲೂ ಯುವಕರಾಗಿದ್ದಾಗ ಒಳ್ಳೆಯದು. ಹಣವಿಲ್ಲದೆ ಅಥವಾ ಯಾರದೇ ನೆರವಿಲ್ಲದೆ ಸಂಚರಿಸುವುದು ಒಳ್ಳೆಯದು. ಆಗ ನಿಜವಾದ ಸನ್ಯಾಸಿಯ ಹಾಗೆ ಹೇಗೆ ಇರುವುದೆಂಬುದು ಗೊತ್ತಾಗುತ್ತದೆ. ಸಂಚಾರದಲ್ಲಿ ನಿಮ್ಮ ಬಗ್ಗೆ ದಯೆ ತೋರಿಸುವವರೂ ಇರುತ್ತಾರೆ; ನಿಂದಿಸುವವರೂ ಇರುತ್ತಾರೆ. ಸಂಚಾರಿ ಸಾಧುವಾದವನು ಎರಡನ್ನೂ ನಿಭಾಯಿಸುವುದನ್ನು ಕಲಿಯುತ್ತಾನೆ. ಹಸಿವು ಮತ್ತು ಭಯವನ್ನು ನಿಭಾಯಿಸುವುದು ಹೇಗೆಂಬುದನ್ನು ಕಲಿಯುತ್ತೀರಿ. ಪಯಣ ಬೇರೆ ಬೇರೆ ಮಹಾತ್ಮರನ್ನು, ಜ್ಞಾನಿಗಳನ್ನು ಭೇಟಿಮಾಡುವ ಅವಕಾಶವನ್ನು ಸಹ ಒದಗಿಸುತ್ತದೆ. ಒಂದು ವೇಳೆ ನೀವು ಎಂದಾದರೂ ಒಂದೆಡೆ ನೆಲೆಸಬೇಕೆನಿಸಿದಾಗ ನಿಮಗೆ ಯಾವ ಜಾಗ ನಿಜಕ್ಕೂ ಸೂಕ್ತವಾಗಬಹುದೆಂಬುದನ್ನು ಕಂಡುಕೊಳ್ಳಲೂ ಅವಕಾಶವೊದಗಿಸುತ್ತದೆ. ಆದಾಗ್ಯೂ ಇದರ ಹೊರತಾಗಿ ಹೇಳಬಹುದಾದ್ದೆಂದರೆ ನಿರಂತರ ಸಂಚರಿಸುತ್ತಿರುವುದು ಮೂರ್ಖತನ. ಪ್ರತಿ ವರ್ಷ ಗಂಗೋತ್ರಿಗೋ ಬದರೀನಾಥಕ್ಕೋ ಹೋಗುವುದರಲ್ಲಿ ಏನು ಅರ್ಥವಿದೆ? ಇಲ್ಲಿ ಏನು ಸವಾಲಿದೆ? ಇದೊಂದು ವ್ಯಸನ ಅಷ್ಟೆ."

"ಮೋಕ್ಷದ ಬಗ್ಗೆ ನಿಮ್ಮ ವಿಚಾರವೇನು?"

"ತನ್ನನ್ನು ತಾನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಮತ್ತು ತನಗೆ ತಾನು ಅತ್ಯಂತ ಪ್ರಾಮಾಣಿಕನಾಗಿರುವುದನ್ನು ಕಲಿಯುವುದೇ ಮೋಕ್ಷ."

* * *

ರಾಮದೇವ ಪಾಠಿಯವರು ಅಳವಡಿಸಿಕೊಂಡಿದ್ದ ಭಕ್ತಿ ಮತ್ತು ಸೇವೆಯ ಶೈಲಿಗಿಂತ (ಈ ಅಧ್ಯಾಯದ ಮೊದಲಿನಲ್ಲಿ ತಿಳಿಸಿದ) ಎರಡನೇ ಆಶ್ರಮದ ತತ್ತ್ವ ಎದ್ದು ಕಾಣುವಂಥ ವಿಭಿನ್ನತೆ ಅಥವಾ ವೈದೃಶ್ಯವನ್ನು ಹೊಂದಿತ್ತು. ಇದು ವೇದಾಂತದ ಪರಂಪರೆಯನ್ನು ಅನುಸರಿಸುತ್ತಿತ್ತು. ನನ್ನ ಮನೆಯಿದ್ದುದು ದಕ್ಷಿಣ ಭಾರತದಲ್ಲಿ. ಹಾಗಾಗಿ ನಾನು ಈ ಆಶ್ರಮದಲ್ಲಿ ಒಂದು ವಾರ ಕಾಲ ಇರುವ ತೀರ್ಮಾನ ಕೈಕೊಂಡೆ. ಇದರ ಅಧ್ಯಕ್ಷರಾಗಿದ್ದವರು ಶಾಸ್ತ್ರಗಳಲ್ಲಿ ದೊಡ್ಡ ವಿದ್ವಾಂಸರೆನಿಸಿದ್ದ ಸನ್ಯಾಸಿಯಾಗಿದ್ದರು. ಅವರೊಬ್ಬ ದೊಡ್ಡ ಗುರುವೆಂದು ರಾಷ್ಟ್ರ ಮಟ್ಟದಲ್ಲಿ ಖ್ಯಾತರಾಗಿದ್ದರು. ಆಶ್ರಮ ಹೇಗೆ ಕಾರ್ಯ ನಿರ್ವಹಿಸುತ್ತದೆಂಬುದನ್ನು ತಿಳಿದುಕೊಳ್ಳುವುದೇ ನನ್ನ ಗುರಿಯಾಗಿತ್ತು. ನಾನು ಆಶ್ರಮದ ಅಧ್ಯಕ್ಷರಾದ ಸ್ವಾಮಿ ದಯಾನಂದರನ್ನು, ಇನ್ನಿತರೆ ಸನ್ಯಾಸಿಗಳು ಮತ್ತು ಆಧ್ಯಾತ್ಮ ಶಿಕ್ಷಣದ ಸಲುವಾಗಿ ಇಲ್ಲಿಗೆ ಬರುವ ಸಾಮಾನ್ಯ ಜನರನ್ನು ಸಂದರ್ಶಿಸಿದೆ. ಸ್ವಾಮಿ ದಯಾನಂದರು ಉಪನ್ಯಾಸ ನೀಡುವ ಸಲುವಾಗಿ ಭಾರತದ ಇತರ ಭಾಗಗಳಲ್ಲಿ ಮತ್ತು ವಿದೇಶಗಳಲ್ಲಿ ವಿಪುಲವಾಗಿ ಸಂಚರಿಸುತ್ತಾರೆ. ಅದರ ಜೊತೆಗೆ ಹೃಷೀಕೇಶದಲ್ಲಿ ಹಾಗೂ ಅಮೆರಿಕದ ಪೆನ್ಸಿಲ್ವೇನಿಯಾದ ಸೈಲೋಸ್‌ಬರ್ಗ್‌ನಲ್ಲಿರುವ ಆಶ್ರಮದ ಎರಡು ಶಾಖೆಗಳನ್ನು ನೋಡಿಕೊಂಡು ಬರಲು ಪ್ರಯಾಣ ಮಾಡುತ್ತಿರುತ್ತಾರೆ. ಸ್ವಾಮಿ ದಯಾನಂದರು ಆಶ್ರಮದಲ್ಲಿದ್ದ ಸಮಯದಲ್ಲಿ ಒಂದು ವಾರದ ನನ್ನ ಭೇಟಿಗೆ ವ್ಯವಸ್ಥೆಮಾಡಿಕೊಂಡೆ. ನನ್ನ ಅದೃಷ್ಟಕ್ಕೆ ಅದೇ ಸಮಯಕ್ಕೆ ಆಶ್ರಮವು ಅಲ್ಲೇ ಇದ್ದುಕೊಂಡು ಅಭ್ಯಾಸ ಮಾಡಬಹುದಾದ ವೇದಾಂತದ ಮೇಲಿನ ಮೂರು ತಿಂಗಳ ಪೂರ್ಣಾವಧಿಯ ಒಂದು ಕೋರ್ಸನ್ನು ನೂರು ಜನ ಅಭ್ಯಾಸಿಗಳಿಗಾಗಿ ಏರ್ಪಡಿಸಿತು. ಈ ಅಭ್ಯಾಸಿಗಳು ಭಾರತದ ಎಲ್ಲ ಭಾಗಗಳಿಂದ ಮಾತ್ರವಲ್ಲದೆ ಯೂರೋಪ್, ಉತ್ತರ ಅಮೇರಿಕಾ, ದಕ್ಷಿಣ ಅಮೆರಿಕ ಮತ್ತು ಆಫ್ರಿಕಾದಿಂದಲೂ ಬಂದವರಾಗಿದ್ದರು. ಅವರಲ್ಲಿ ಬಹಳಷ್ಟು ಜನ ಹಿಂದೂಗಳೇ ಆಗಿದ್ದರೂ ಕೆಲವು ಕ್ರಿಶ್ಚಿಯನ್ನರೂ ಇದ್ದರು. ಅವರಲ್ಲಿ ಒಬ್ಬ ದಕ್ಷಿಣ ಅಮೇರಿಕಾದ ಮಹಿಳೆ ಶ್ವೇತ ವರ್ಣೀಯಳಾದರೂ ತಾನೊಬ್ಬ ಹಿಂದೂ ಎಂದು ಹೇಳಿಕೊಳ್ಳುತ್ತಿದ್ದಳು. ಅವಳು ಸೀರೆ ಉಟ್ಟಿದ್ದು ಹಣೆಯ ಮೇಲೆ ತಿಲಕದಂಥ ಧಾರ್ಮಿಕ ಲಾಂಛನವನ್ನು ಧರಿಸುತ್ತಿದ್ದಳು. ಜೊತೆಗೆ ಸಂಸ್ಕೃತ ಶ್ಲೋಕಗಳನ್ನು ಸುಲಲಿತವಾಗಿ ಹೇಳುತ್ತಿದ್ದಳು. ಅರ್ಜೆಂಟೈನಾದಲ್ಲಿ ಅನೇಕ ಹಿಂದೂಗಳಿದ್ದಾರೆಂದು ಹೇಳಿದಳು. ದಕ್ಷಿಣ ಅಮೇರಿಕಾಕ್ಕೆ ಹಲವಾರು ವರ್ಷಗಳಿಂದ ಭೇಟಿನೀಡುತ್ತಿದ್ದ ಸ್ವಾಮಿಯೊಬ್ಬರ ಪ್ರಭಾವಕ್ಕೊಳಗಾಗಿ ಅವರೆಲ್ಲ ಹಿಂದೂಗಳಾಗಿದ್ದರು. ಅಮೆರಿಕಾದಲ್ಲಿ ನೆಲೆಸಿದ್ದು ತಮ್ಮ ಮಕ್ಕಳಿಗೆ ಹಿಂದೂ ಧರ್ಮಗ್ರಂಥಗಳನ್ನು ಮತ್ತು ಹಿಂದೂ ಆಧ್ಯಾತ್ಮಿಕ ಪರಂಪರೆಯನ್ನು ಪರಿಚಯಿಸುವ ಸಲುವಾಗಿ ಬಂದಿದ್ದ ಕೆಲ ಹಿಂದೂಗಳಿದ್ದರು. ಪಾಶ್ಚಿಮಾತ್ಯ ಜೀವನ ಶೈಲಿಯಿಂದ ಅತೃಪ್ತಿ ಹೊಂದಿದ್ದ ಅಥವಾ ಹಿಂದೂ ಧರ್ಮದ ಬಗ್ಗೆ ಕುತೂಹಲವನ್ನಷ್ಟೇ

ಹೊಂದಿದ್ದ ಕೆಲವು ಯೂರೋಪಿಯನ್ನರು ಮತ್ತು ಅಮೇರಿಕನ್ನರೂ ಇದ್ದರು. ಅವರಲ್ಲಿದ್ದ ಬಹಳಷ್ಟು ಜನರಂತೂ ಭಾರತದಿಂದ ಬಂದವರೇ ಆಗಿದ್ದರು ಮತ್ತು ತಮ್ಮ ನಿವೃತ್ತ್ಯಾನಂತರದ ಬದುಕಿನಲ್ಲಿ ಹಿಂದೂ ತಾತ್ತ್ವಿಕತೆಯ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕೆಂದು ಬಂದಿದ್ದವರು. ಸುಮಾರು ಮೂವತ್ತು ಅಥವಾ ನಲವತ್ತು ವಯಸ್ಸಿನವರಾಗಿದ್ದು, ತಂದೆತಾಯಿಗಳನ್ನು ಅವಲಂಬಿಸಿದವರೋ ಇಲ್ಲವೆ ಸ್ವತಂತ್ರ ಉದ್ಯೋಗದಲ್ಲಿದ್ದವರೋ ಆಗಿದ್ದ ಕೆಲ ಏಕಾಂಗಿ ಯುವತಿಯರೂ ಇದ್ದರು.

ಮದ್ರಾಸ್ ಮತ್ತು ಕೊಯಮತ್ತೂರಿನ ಒಂದೆರಡು ಪ್ರಸಿದ್ಧ ವ್ಯಾಪಾರೀ ಕುಟುಂಬಗಳ ನೆರವಿನಿಂದ ಹತ್ತು ವರ್ಷಗಳ ಹಿಂದೆಯೇ ಈ ಆಶ್ರಮವನ್ನು ಸ್ಥಾಪಿಸಲಾಗಿತ್ತು. ಇಪ್ಪತ್ತು ಎಕರೆಗಳಷ್ಟು ವಿಸ್ತಾರದ, ಅಲ್ಲೊಂದು ಇಲ್ಲೊಂದು ಗಿಡ ಗೆಂಟೆಗಳಿಂದ ಕೂಡಿದ್ದ ಈ ಒಣ ಭೂಮಿಯನ್ನು ತೆಂಗು ಮತ್ತಿತರ ಹಣ್ಣಿನ ಮರಗಳ ಹಸಿರು ಭೂಮಿಯನ್ನಾಗಿ ಪರಿವರ್ತಿಸಲಾಗಿದೆ. ಅದರಲ್ಲಿ ಸುಂದರ ಕಾಟೇಜ್‌ಗಳು, ವಿಸ್ತಾರವಾದ ಭೋಜನಶಾಲೆ, ಮುನ್ನೂರು ಜನ ಕುಳಿತುಕೊಳ್ಳಬಹುದಾದಷ್ಟು ವಿಸ್ತಾರವಾದ ಉಪನ್ಯಾಸಭವನ, ಒಂದು ದೇವಾಲಯ, ಗ್ರಂಥಾಲಯ ಮತ್ತು ಸುಂದರ ಹುಲ್ಲು ಹಾಸುಗಳು ಕೂಡ ಇವೆ. ಕೆಲವು ಶ್ರೀಮಂತ ಕುಟುಂಬಗಳು ಇಲ್ಲಿ ತಮ್ಮದೇ ಆದ ಸ್ವಂತ ಕಾಟೇಜ್‌ಗಳನ್ನು ಕಟ್ಟಿದ್ದಾರೆ. ಅವರುಗಳು ಉಪಯೋಗಿಸದೆ ಇದ್ದಾಗ ಬೇರೆಯವರು ಇವನ್ನು ಉಪಯೋಗಿಸಬಹುದು. ಆಶ್ರಮದಲ್ಲಿ ಮೂರು ಕೊಳವೆ ಬಾವಿಗಳು, ವಿದ್ಯುತ್ ಲೈನ್‌ಗಳು, ಜಗತ್ತಿನ ಯಾವುದೇ ಭಾಗವನ್ನು ಸಂಪರ್ಕಿಸಬಹುದಾದ ಎಸ್. ಟಿ.ಡಿ/ಐ.ಎಸ್. ಡಿ ಸೌಕರ್ಯವುಳ್ಳ ಟೆಲಿಫೋನ್ ಸೌಲಭ್ಯ ಇವೆಲ್ಲವನ್ನೂ ಆಶ್ರಮ ಹೊಂದಿದೆ. ಆಶ್ರಮದ ಕಛೇರಿ ಫ್ಯಾಕ್ಸ್ ಅನುಕೂಲವನ್ನೂ ಒಳಗೊಂಡಂತೆ ಆಧುನಿಕ ಸಲಕರಣೆಗಳನ್ನು ಹೊಂದಿದೆ. ಸ್ವಾಮಿ ದಯಾನಂದರು ಆಧ್ಯಾತ್ಮಿಕ ಪ್ರಮುಖರಾಗಿದ್ದು ಆಶ್ರಮದ ಆಡಳಿತದ ಒಟ್ಟಾರೆ ಮುಖ್ಯಸ್ಥರಾಗಿದ್ದರೆ ದಿನನಿತ್ಯದ ವ್ಯವಸ್ಥೆಯನ್ನು ಸುಮಾರು ನಲವತ್ತರ ವಯೋಮಾನದ ಶ್ರದ್ಧಾನಂದ ಎನ್ನುವವರು ಸದ್ದಿಲ್ಲದೆ ದೃಢತೆಯಿಂದ ನೋಡಿಕೊಳ್ಳುತ್ತಿದ್ದರು.

ಆಶ್ರಮದ ದೈನಂದಿನ ವೇಳಾಪಟ್ಟಿ ಈ ಕೆಳಗಿನಂತಿತ್ತು

ಬೆಳಿಗ್ಗೆ

5.00 ಭೋಜನ ಶಾಲೆಯಲ್ಲಿ ಚಹಾ

5.15–6.15 ಸುಶಿಕ್ಷಿತ ಬ್ರಹ್ಮಚಾರಿಗಳು ನಡೆಸುತ್ತಿದ್ದ ದೇವಾಲಯದಲ್ಲಿ ಆರತಿ

6.30–7.00 ಸ್ವಾಮಿ ದಯಾನಂದರ ನೇತೃತ್ವದಲ್ಲಿ ಧ್ಯಾನ

7–30–8.30 ಉಪಾಹಾರ

9.00–10.00 ವೇದಾಂತ ಕುರಿತು ಸ್ವಾಮಿ ದಯಾನಂದರಿಂದ ಉಪನ್ಯಾಸ

10.30–10.45 ಚಹಾ

11.00–12.00 ಸ್ವಾಮಿ ದಯಾನಂದರಿಂದ ಎರಡನೇ ಉಪನ್ಯಾಸ

ಮಧ್ಯಾಹ್ನ

12.30–1.00 ಮಧ್ಯಾಹ್ನದ ಭೋಜನ

3.30–5.00 ಸಂಸ್ಕೃತ ತರಗತಿಗಳು

5.00–6.00 ಭಗವದ್ಗೀತೆಯ ಮೇಲೆ ಸ್ವಾಮಿ ದಯಾನಂದರ ಉಪನ್ಯಾಸ

6.15–7.00 ದೇವಾಲಯದಲ್ಲಿ ಆರತಿ

7.30–8.00 ರಾತ್ರಿಯ ಭೋಜನ

8.00–9.00 ಸತ್ಸಂಗ; ಸ್ವಾಮಿ ದಯಾನಂದರೊಡನೆ ಅನೌಪಚಾರಿಕ ಮಾತು–ಕತೆ

ಅಲ್ಲಿ ನೀಡಲಾಗುತ್ತಿದ್ದ ಆಹಾರವು ಸರಳವಾದರೂ ಪುಷ್ಟಿಕರವಾದದ್ದಾಗಿತ್ತು. ಪ್ರತಿ ದಿನವೂ ಊಟದ ವೆಚ್ಚವನ್ನು ಮದುವೆ, ಇಲ್ಲವೆ ಮಗುವಿನ ನಾಮಕರಣದಂಥ ಸಮಾರಂಭಗಳನ್ನು ಏರ್ಪಡಿಸುತ್ತಿದ್ದ ಒಂದಲ್ಲ ಒಂದು ಕುಟುಂಬದವರು ವಹಿಸಿಕೊಳ್ಳುತ್ತಿದ್ದರು. ಕೆಲವು ಸಲ ಪೂರ್ವಜರ ನೆನಪಿನಲ್ಲೂ ಊಟವನ್ನು ಕುಟುಂಬಗಳು ನೀಡುತ್ತಿದ್ದುವು. ಸ್ವಯಂಸೇವಕರು ಊಟ ಬಡಿಸುತ್ತಿದ್ದರು. ನಾವುಗಳು ಸರತಿಯ ಸಾಲಿನಲ್ಲಿ ನಿಂತು ನಮ್ಮ ಪಾಲಿನ ಊಟವನ್ನು ತೆಗೆದುಕೊಳ್ಳುತ್ತಿದ್ದೆವು. ಊಟಮಾಡಿದ ತಟ್ಟೆಗಳನ್ನು ನಾವೇ ತೊಳೆಯುತ್ತಿದ್ದೆವು. ಊಟದ ಪಾತ್ರೆಗಳನ್ನು ತೊಳೆಯುವುದೊಂದು ಸಂಕೇತ ಮಾತ್ರವಾಗಿತ್ತು. ಆಮೇಲೆ ಆ ಕಾರ್ಯದಲ್ಲಿ ನಿಷ್ಣಾತರಾದವರು ತೊಳೆಯುತ್ತಿದ್ದರು. ನಮ್ಮ ಪಾತ್ರೆಗಳನ್ನು ನಾವೇ ತೊಳೆದುಕೊಳ್ಳುವುದು ಸರಳತೆಯ ಮತ್ತು ನಮ್ರತೆಯ ಒಂದು ಪಾಠವಾಗಿತ್ತು.

ಉಪಾಹಾರದ ನಂತರದ ಸಮಯವನ್ನು ಅಥವಾ ಬೆಳಗಿನ ಮೊದಲ ಉಪನ್ಯಾಸದ ನಂತರದ ಸಮಯವನ್ನು ಸ್ವಾಮಿ ದಯಾನಂದರು ತಮ್ಮ ಕಾಟೇಜಿನಲ್ಲಿದ್ದ ಸುಮಾರು ಇಪ್ಪತ್ತು ಜನರು ಕುಳಿತುಕೊಳ್ಳಬಹುದಾದ ಕೋಣೆಯಲ್ಲಿ ಜನರನ್ನು ಭೇಟಿಯಾಗಲು ಬಳಸುತ್ತಿದ್ದರು. ಆಶ್ರಮಕ್ಕೆ ಬಂದಿದ್ದ ಆಗಂತುಕರು ಇಲ್ಲವೆ ಅಲ್ಲಿಯ ಕೋರ್ಸುಗಳಲ್ಲಿ ಭಾಗಿಗಳಾಗಲು ಬಂದಿದ್ದವರು ಅಲ್ಲಿ ಒಟ್ಟುಗೂಡುತ್ತಿದ್ದರು. ಅಲ್ಲಿ ನಡೆಯುತ್ತಿದ್ದ ಮಾತು–ಕತೆಗಳು ವಿವಿಧ ಬಗೆಯವಾಗಿರುತ್ತಿದ್ದುವು. ಉಪನ್ಯಾಸಗಳಿಂದ ಹುಟ್ಟಿದ ಪ್ರಶ್ನೆಗಳಿಂದ ಹಿಡಿದು ಸ್ವಾಮೀಜಿಯವರ ಯಾತ್ರೆಯವರೆಗೆ ಹಗುರವಾದ ಸಂಗತಿಗಳಿಂದ ಹಿಡಿದು ಗಂಭೀರ ವಿಷಯಗಳವರೆಗೂ ಚರ್ಚೆಯ ವ್ಯಾಪ್ತಿ ಇರುತ್ತಿತ್ತು. ಒಂದು ಸಂದರ್ಭದಲ್ಲಿ ಮಕ್ಕಳಿಗೆ ಹಾಡಲು ಸೂಚಿಸಲಾಗಿತ್ತು. ಒಮ್ಮೆ ಅಲ್ಲಿಗೆ ಬಂದಿದ್ದ ಕೆಲ ಆಗಂತುಕರು ತಮ್ಮ ಪ್ರದೇಶದ ಶೈವ ಮತಾವಲಂಬಿ ಸ್ವಾಮಿಯೊಬ್ಬರು ವಿಷ್ಣು ಮತಾವಲಂಬಿಗಳ ಜೀವನವನ್ನು ದುರ್ಭರಗೊಳಿಸಿರುವ ಬಗ್ಗೆ ಹೇಳಿದರು. ಇನ್ನೊಂದು ಸಲ ಅಲ್ಲಿಗೆ ಬಂದಿದ್ದ ಸ್ವಾಮೀಜಿಗಳ ಗುಂಪೊಂದು ಕ್ರಿಶ್ಚಿಯನ್ ಪಾದ್ರಿಗಳು ಮಾಡುತ್ತಿದ್ದ ಮತಾಂತರದ ಬಗ್ಗೆ ಹೇಳಿತು. ಸ್ವಾಮಿ ದಯಾನಂದರು ಈ ದೂರುಗಳನ್ನು ಕೇಳಿ ತಮ್ಮ ಸಹಾನುಭೂತಿಯನ್ನು

ವ್ಯಕ್ತಪಡಿಸಿದರು. ಆದರೆ ಏನೂ ಕ್ರಮ ಕೈಗೊಳ್ಳಲು ಹೇಳುತ್ತಿರಲಿಲ್ಲ. ಯಾರಾದರೂ ಭೇಟಿಗೆ ಬಂದವರು ತಾವು ಸಿದ್ಧಪಡಿಸಿದ ಕ್ರಿಯಾಯೋಜನೆಯನ್ನೇನಾದರು ಹೇಳಿದರೆ ಸ್ವಾಮೀಜಿಯವರು ಅದನ್ನು ಆಲಿಸಿ ತಮ್ಮ ಮುಖಭಾವದ ಮೂಲಕ ಸಲಹೆ, ಸಮ್ಮತಿ, ಅಥವಾ ಅಸಮ್ಮತಿ ಸೂಚಿಸುತ್ತಿದ್ದರು. ಕೆಲವರನ್ನು ಬೇರೆಯಾಗಿ ಏಕಾಂತದಲ್ಲಿ ಭೇಟಿನೀಡಿ ಕೇಳಿಸಿಕೊಳ್ಳುತ್ತಿದ್ದರು. ನನಗೂ ಸಹ ಹೆಚ್ಚು ಕಡಿಮೆ ಪ್ರತಿದಿನವೂ ಪ್ರತ್ಯೇಕವಾಗಿ 15ರಿಂದ 30 ನಿಮಿಷಗಳ ತನಕ ಭೇಟಿಯ ಅವಕಾಶ ನೀಡಿ ನಾನು ಹೇಳಿದ್ದನ್ನು ಕೇಳಿಸಿಕೊಳ್ಳುತ್ತಿದ್ದರು.

ಆಶ್ಚರ್ಯದ ಮಾತೆಂದರೆ ಶಾರೀರಿಕ ವ್ಯಾಯಾಮಕ್ಕೆ ದಿನದಲ್ಲಿ ಯಾವ ಸಮಯವನ್ನೂ ನಿಗದಿಮಾಡಿರಲಿಲ್ಲ. ಸ್ವಾಮೀಜಿಯವರು ಯೋಗ-ಸಿದ್ಧಾಂತ ಅಥವಾ ವೇದಾಂತವು ಹೇಳುವ ಅಭ್ಯಾಸದ ಬಗ್ಗೆ ಹೆಚ್ಚು ಚಿಂತನೆ ಮಾಡಿರಲಿಲ್ಲ. ಅವರು ಯೋಗವನ್ನು ಮಾತ್ರ ಅಂತಿಮ ಗುರಿಸಾಧನೆಯಾದ ಜ್ಞಾನವನ್ನು ಗಳಿಸುವುದರ ಸಾಧನವೆಂದು ಪರಿಗಣಿಸಿದ್ದರು. ಆ ವೇದಾಂತಜ್ಞಾನ ಪಡೆದುಕೊಳ್ಳಲು ವ್ಯಕ್ತಿ ಅದಕ್ಕೆ ತನ್ನನ್ನು ಒಡ್ಡಿಕೊಳ್ಳಬೇಕು ಅಷ್ಟೆ ಎಂಬುದು ಅವರ ನಿಲುವು.

ಸ್ವಾಮಿ ದಯಾನಂದರು ತಮ್ಮನ್ನು ವೇದಾಂತ ಪರಂಪರೆಯ ಶಿಕ್ಷಕರೆಂದು ಕರೆದುಕೊಳ್ಳುತ್ತಾರೆ. ಅನೇಕ ಆಧುನಿಕ ಶಿಕ್ಷಕರು ವೇದಾಂತವು ಷಡ್ ದರ್ಶನಗಳಲ್ಲಿ ಒಂದೆಂದೂ ಅದರ ಜ್ಞಾನವು ದೇವನೊಂದಿಗೆ ಆತ್ಮದ ಐಕ್ಯತೆಯ ಅನುಭವಕ್ಕೆ ಕೊಂಡೊಯ್ಯುವಂಥದು (ಜೀವಾತ್ಮವು ಪರಮಾತ್ಮನೊಂದಿಗೆ ಒಂದಾಗುವುದು). ಎಂದು ಪರಿಗಣಿಸುತ್ತಾರೆ. ವೇದದ ಮೌಲ್ಯವು ಯಾವುದೋ ಅನುಭವವನ್ನು ಆಧರಿಸಿದ್ದಾಗಿರದೆ ಸಹಜವಾದದ್ದಾಗಿದ್ದು ಜ್ಞಾನದ ಸ್ವತಂತ್ರ ಸಾಧನವೆನ್ನುವ ಕಾರಣದಿಂದ ಸ್ವಾಮೀಜಿಯವರು ವೇದಗಳಿಗೆ ಸ್ಪಷ್ಟವಾಗಿ ಪ್ರಾಮುಖ್ಯ ನೀಡುತ್ತಾರೆ. ವೇದಾಂತವು ಆತ್ಮಕ್ಕೆ ಮೋಕ್ಷದ ಭರವಸೆಯನ್ನೇನೂ ಕೊಡುವುದಿಲ್ಲ. ಆತ್ಮ ಆಗಲೇ ಮುಕ್ತವಾದದ್ದಾಗಿದೆ ಮತ್ತು ಅದಕ್ಕೆ ಯಾವುದೇ ಮಿತಿಯಿಲ್ಲ. ಆತ್ಮ ಮತ್ತು ಪರಮಾತ್ಮ(ದೇವ) ಎರಡೂ ಒಂದೇ ಹೊರತು ಬೇರೆ ಬೇರೆಯಲ್ಲ ಎಂಬುದರ ಸಂವೇದನಾತ್ಮಕ ತಿಳಿವೇ ವೇದಾಂತ ಬೋಧನೆಯ ಪರಮ ಗುರಿ.

ಸ್ವಾಮೀಜಿಯವರು ತಮಿಳುನಾಡಿನ ತಂಜಾವೂರು ಜಿಲ್ಲೆಯ ಒಂದು ಸಣ್ಣ ಹಳ್ಳಿಯ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು. ಅವರ ಹೆಸರು ನಟರಾಜನ್ ಎಂದು. ಅದು ಬ್ರಾಹ್ಮಣ ವಿರೋಧಿ ಚಳುವಳಿಯು ಅತ್ಯಂತ ಪ್ರಬಲವಾಗಿದ್ದ ಕಾಲವಾಗಿದ್ದು ದ್ರಾವಿಡ ಕಳಗಂ ಸಮರ್ಥಕರು ದೇವರಿಲ್ಲ ಎಂದು ಸಾರುತ್ತ ಧಾರ್ಮಿಕ ಆಚರಣೆಗಳನ್ನು ವಿರೋಧಿಸುವುದನ್ನು ಸಾರುತ್ತಿದ್ದ ಸಮಯ. ಬಾಲ್ಯದಿಂದಲೂ ಸ್ವಾಮೀಜಿಯವರು ಬ್ರಾಹ್ಮಣ ಸಂಪ್ರದಾಯದ ಆಚಾರಗಳನ್ನು ಸಮರ್ಥಿಸುತ್ತಿದ್ದರು. ತಲೆ ಬೋಳಿಸುವ ಬದಲು ಶಿಖೆಯನ್ನು ಬಿಟ್ಟಿರುವುದಕ್ಕೆ ಇವರನ್ನು ಆಡಿಕೊಂಡು ನಗುತ್ತಿದ್ದ ಹುಡುಗರೊಂದಿಗೆ ಶಾರೀರಿಕವಾಗಿ ಕೂಡ ಹೋರಾಟ ಮಾಡುತ್ತಿದ್ದರು. ನಟರಾಜನಿಗೆ ಎಂಟು ವರ್ಷ ವಯಸ್ಸಾಗಿದ್ದಾಗ

ಅವನ ತಂದೆ ತೀರಿಕೊಂಡರು. ಆದರೆ ಅವರ ತಾತ, ಚಿಕ್ಕಪ್ಪಂದಿರು, ಚಿಕ್ಕಮ್ಮಂದಿರು ಮತ್ತು ತಾಯಿ ಇವರುಗಳೆಲ್ಲರೂ ಅವರನ್ನು ಚೆನ್ನಾಗಿ ನೋಡಿಕೊಂಡರು.

ವಿಧವೆಯಾಗಿದ್ದು ಗಂಡನ ಮನೆಯಿಂದ ತವರು ಮನೆಗೆ ವಾಪಸಾಗಿದ್ದ ಅವರ ಸೋದರತ್ತೆಯೊಬ್ಬರಿಗೆ ಅವರು ಅತ್ಯಂತ ಆಪ್ತರಾಗಿದ್ದರು.

ನಟರಾಜನ್ ಶಾಲೆಯಲ್ಲಿ ಒಳ್ಳೆ ಬುದ್ಧಿವಂತ ವಿದ್ಯಾರ್ಥಿಯಾಗಿದ್ದ. ಅವನ ಅಧ್ಯಾಪಕರು ಮತ್ತು ಹಿರಿಯರು ಆಡಿಕೊಂಡು ನಕ್ಕರೂ ನಟರಾಜನ್ ಸಂಸ್ಕೃತವನ್ನು ಒಂದು ಅಧ್ಯಯನದ ವಿಷಯವಾಗಿ ಆರಿಸಿಕೊಂಡನು. ಅವನದು ದೈತ್ಯ? ಓದು. ಕೆಲವೊಮ್ಮೆ ಬೆಳಗಿನ ನಾಲ್ಕು ಗಂಟೆಯವರೆಗೂ ಓದುತ್ತಾ ಕುಳಿತಿರುತ್ತಿದ್ದನು.

ಬಾಲ್ಯದಿಂದಲೇ ಕಾಣಿಸುತ್ತಿದ್ದ ಆತನ ಕೆಲವೊಂದು ಗುಣ ವಿಶೇಷಗಳನ್ನು ಅವರು ಮತ್ತವರ ಬಂಧುಗಳು ನೆನಪಿಟ್ಟುಕೊಂಡಿದ್ದಾರೆ. ಅಂಥ ಒಂದು ಗುಣವೆಂದರೆ ಅವನ ಉದಾರತೆ. "ನಾನು ಬೇರೆಯವರೊಂದಿಗೆ ಹಂಚಿಕೊಳ್ಳಲಾಗದೆ ಇರುವಂಥದಾವುದೂ ನನ್ನ ಜೀವನದಲ್ಲಿ ಇರಲಿಲ್ಲ" ಎಂದು ಹೇಳುತ್ತಾರೆ.

ಇದನ್ನು ಅವರ ಬಂಧುಗಳೂ ಖಚಿತಪಡಿಸಿದ್ದಾರೆ. ಹೊಲ ಗದ್ದೆಗಳಲ್ಲಿ ಬೆಳೆದ ಧಾನ್ಯಗಳನ್ನು ಆಳು ಕಾಳುಗಳಿಗೆ ಅವರಿಗೆ ಅಗತ್ಯವಿದೆಯೆಂದು ಅನ್ನಿಸಿದಾಗ ಕೊಟ್ಟುಬಿಡುತ್ತಿದ್ದನು. ಬದುಕಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವ್ಯಾವಹಾರಿಕವೂ ನಿರ್ಭಾವುಕವೂ ಆದ ದೃಷ್ಟಿಕೋಣ ಅವಡಿ ಇನ್ನೊಂದು ವಿಶೇಷತೆ. ಅವರ ತಂದೆ ತೀರಿಕೊಂಡಾಗ ಸಾವು ಜೀವನದ ಒಂದು ವಾಸ್ತವ ಎಂದು ತಿಳಿದು ಅವರು ಅಳಲಿಲ್ಲ.

ಶಾಲಾ ಶಿಕ್ಷಣ ಮುಗಿಸಿದ ನಂತರ ಕೆಲಸ ಹುಡುಕುವ ಸಲುವಾಗಿ ಮದರಾಸಿಗೆ ಹೋದರು. ಅವರಿಗೆ ಇಂಗ್ಲಿಷ್ ತಿಳಿದಿರಲಿಲ್ಲ. ಆದರೆ ಧಾರ್ಮಿಕ ಹಿಂದು ಎಂಬ ಇಂಗ್ಲಿಷ್ ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಆ ಪತ್ರಿಕೆಯ ಉದ್ದೇಶ ದ್ರಾವಿಡ ಚಳುವಳಿ ಪ್ರಸ್ತಾಪಿಸಿದ್ದ ವಿಷಯಗಳಿಗೆ ಉತ್ತರಿಸುವುದಾಗಿತ್ತು. ಇಲ್ಲಿ ಪತ್ರಿಕೆಗಳು ಮತ್ತು ಇಂಗ್ಲಿಷ್‌ನ ಪ್ರಸಿದ್ಧ ಗ್ರಂಥಗಳನ್ನೋದುವುದರ ಮೂಲಕ ಸ್ವತಂತ್ರವಾಗಿಯೇ ಇಂಗ್ಲಿಷ್ ಕಲಿತರು. ಕೆಲವು ದಿನಗಳ ನಂತರ ಭಾರತೀಯ ವಾಯು ಸೇನೆಗೆ ಸೇರಿಕೊಂಡರು. ಆದರೆ ಅದು ತೀರಾ ಕಟ್ಟುನಿಟ್ಟಿನದೆಂದು ಅನ್ನಿಸಿದ್ದರಿಂದ ಆರು ತಿಂಗಳ ನಂತರ ಅದನ್ನು ಬಿಟ್ಟರು. ಆದಾಗ್ಯೂ ಸಶಸ್ತ್ರ ಪಡೆಗಳು ಅವರಲ್ಲಿ ಮೂಡಿಸಿದ್ದ ಶಿಸ್ತನ್ನು ಮೆಚ್ಚಿಕೊಂಡು ಅದನ್ನು ತಮ್ಮ ಜೀವನದ ಒಂದು ಭಾಗವಾಗಿ ಮಾಡಿಕೊಂಡರು.

"ಬೇರೆ ಯಾರೊಬ್ಬರೂ ನನ್ನ ಜೀವನವನ್ನು ನಿಯಂತ್ರಿಸಲು ನಾನು ಅವಕಾಶ ಕೊಟ್ಟಿಲ್ಲ. ಬಹುಶಃ ಆ ಕಾರಣದಿಂದಲೇ ನಾನು ಸ್ವಾಮಿಯಾಗಿದ್ದೇನೆ. ಅಂತಃಸ್ಫುರಣೆಯಿಂದಲೇ ನಾನು ನಿಯಂತ್ರಣವನ್ನು ಸೂಕ್ಷ್ಮವಾಗಿ ಗ್ರಹಿಸಬಲ್ಲೆ. ಕೆಲವೊಮ್ಮೆ ಅದು ಅತ್ಯಂತ ಸೂಕ್ಷ್ಮವಾದದ್ದು. ನಿಯಂತ್ರಿಸುತ್ತಿರುವವರಿಗೂ ತಾವು ನಿಯಂತ್ರಿಸುತ್ತಿದ್ದೇವೆಂದು ತಿಳಿದಿರುವುದಿಲ್ಲ."

ಮುಂದೆ ಅವರು 'ಲೆನ್ಸ್' ಎಂಬ ಇನ್ನೊಂದು ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಇದು ಪ್ರಪಂಚದ ಸುದ್ದಿಗಳನ್ನು ಸಣ್ಣ ಪತ್ರಿಕೆಗಳಿಗೆ ವಿತರಿಸುವ ಒಂದು ಏಜೆನ್ಸಿಯಾಗಿತ್ತು. ಇದು ಅವರಿಗೆ ಪತ್ರಿಕೋದ್ಯಮದ ವಿಚಾರಗಳನ್ನು ಕಲಿಸಿಕೊಟ್ಟಿತು. ಇದರ ನಂತರ ಅವರು ಚುನಾವಣೆಗೆ ಸ್ಪರ್ಧಿಸಿದ್ದ ಒಬ್ಬ ಮಹಿಳಾ ರಾಜಕಾರಣಿಯ ಏಜೆಂಟ್ ಆಗಿ ಕೆಲಸ ಮಾಡಿದರು. ಈ ಉದ್ಯೋಗ ಅವರಿಗೆ ಸಾರ್ವಜನಿಕ ಭಾಷಣಗಳನ್ನು ಮಾಡುವುದನ್ನು ಮತ್ತು ಸಾಂಘಿಕ ಕಾರ್ಯವನ್ನು ಕಲಿಸಿತು.

ಇಲ್ಲಿಯವರೆಗೆ ಅವರಿಗೆ ಯಾವುದೇ ಸ್ಪಷ್ಟವಾದ ಆಧ್ಯಾತ್ಮಿಕ ಆಸಕ್ತಿಗಳಿರಲಿಲ್ಲ. ಬದಲಾವಣೆ ಇದ್ದಕ್ಕಿದ್ದಂತೆ ಬಂದುಬಿಟ್ಟಿತು. ಒಂದು ಸಂಜೆ ತನ್ನ ಚಿಕ್ಕಪ್ಪನ ಮಗನೊಂದಿಗೆ ಸ್ವಾಮಿ ಚಿನ್ಮಯಾನಂದರ ಉಪನ್ಯಾಸವನ್ನು ಕೇಳಲು ಹೋದರು. ಸ್ವಾಮೀಜಿಯವರು ಇಂಗ್ಲಿಷ್‌ನಲ್ಲಿ ಮುಂಡಕೋಪನಿಷತ್ತಿನ ಮೇಲೆ ಉಪನ್ಯಾಸ ನೀಡಿದರು. ಅವರಿಗೆ ಹೆಚ್ಚಿನ ಭಾಗ ಅರ್ಥವಾಗಲಿಲ್ಲ. ಆದರೆ ಉಪನ್ಯಾಸದಲ್ಲಿ ಬಹಳ ಮುಖ್ಯವಾದದ್ದೇನೋ ಇದೆ ಎನಿಸಿತು. ಅದರಲ್ಲೊಂದು ಸಂದೇಶವಿದೆ ಎಂದು ಗೊತ್ತಾಯಿತು ಮತ್ತು ಅದನ್ನು ತಾನು ಗ್ರಹಿಸಿದ್ದೇನೆನಿಸಿತು. ಅವರು ಉಳಿದ ತರಗತಿಗೆ ಸೇರಿಕೊಂಡರು. ಆ ನಂತರ ಮುಂದೆ ಅವರೆಂದೂ ಮೊದಲಿನ ಹಾಗೆ ಇರಲಿಲ್ಲ. ಉಪನಿಷತ್ತುಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕೆಂಬ ತೀವ್ರ ಇಚ್ಛೆ ಉಂಟಾಯಿತು. ತರಗತಿಯ ಮುಕ್ತಾಯದ ಸಮಯದಲ್ಲಿ ಒಂದು ಸಾಮೂಹಿಕ ಭೋಜನವಿತ್ತು. ಅದನ್ನು ವ್ಯವಸ್ಥೆಗೊಳಿಸಲು ನಟರಾಜನ್ ನೆರವಾದರು. ನಟರಾಜನ್ ಅವರ ಎಲ್ಲರನ್ನೂ ವಿಚಾರಿಸಿಕೊಳ್ಳುವ ಹಾಗೂ ಸಂಘಟನಾ ಸಾಮರ್ಥ್ಯ ಸ್ವಾಮೀಜಿಯನ್ನು ಪ್ರಭಾವಿತಗೊಳಿಸಿತು.

ಸ್ವಾಮಿ ಚಿನ್ಮಯಾನಂದರು ಮುಂದಿನ ವರ್ಷ ಮತ್ತೆ ಬಂದು ತೈತ್ತರೀಯ ಉಪನಿಷತ್ತನ್ನು ಬೋಧಿಸುವುದಾಗಿ ಮಾತುಕೊಟ್ಟರು. ನಟರಾಜನ್ ಸಂಸ್ಕೃತ ಭಾಷೆಯಲ್ಲಿ ಹೆಚ್ಚಿನ ಪ್ರಾವೀಣ್ಯ ಗಳಿಸಲು ಸಂಸ್ಕೃತ ತರಗತಿಗೆ ಸೇರಿಕೊಂಡರು ಮತ್ತು ವೇದಗಳನ್ನು ಸರಿಯಾಗಿ ಉಚ್ಚರಿಸುವುದನ್ನು ಕಲಿಯುವ ಸಲುವಾಗಿ ವೇದಪಾಠಶಾಲೆಗೆ ಸೇರಿಕೊಂಡರು. ಚಿನ್ಮಯಾನಂದರು ಹಿಂತಿರುಗಿ ಬಂದಾಗ ತೈತ್ತರೀಯ ಉಪನಿಷತ್ತನ್ನು ಅಧ್ಯಯನ ಮಾಡಲು ಸಿದ್ಧರಾಗಿದ್ದರು. ಸ್ವಾಮೀಜಿಯವರು ದೂರವಿದ್ದ ಒಂದು ವರ್ಷದ ಕಾಲಾವಧಿಯಲ್ಲಿ ಅವರು ಉಪನಿಷತ್ತನ್ನು ಹೇಳುವುದನ್ನು ಕಲಿತಿದ್ದರು. ಅವರೊಬ್ಬ ಉತ್ಸಾಹೀ ವಿದ್ಯಾರ್ಥಿಯಾದರು. ಒಂದು ಸಂಜೆ ತಮ್ಮ ಉಪನ್ಯಾಸವನ್ನು ಹೇಳಿ ಬರೆಯಿಸಲು ಸ್ವಾಮೀಜಿ ಕುಳಿತುಕೊಂಡಾಗ ಅವರ ಸ್ವಂತ ಶೀಘ್ರ ಲಿಪಿಕಾರ ಅಲ್ಲಿರಲಿಲ್ಲ. ಶೀಘ್ರ ಲಿಪಿಕಾರನಾಗಿದ್ದ ಹಾಗೂ ಪತ್ರಕರ್ತನಾಗಿದ್ದ ತಮ್ಮ ಹಿಂದಿನ ಅನುಭವದಿಂದ ನಟರಾಜನ್ ಈ ಕೆಲಸಕ್ಕೆ ತಾವಾಗಿಯೇ ಮುಂದೆ ಬಂದರು. ಆ ದಿನದಿಂದ ಅವರು ಸ್ವಾಮೀಜಿಗೆ ತುಂಬ ಹತ್ತಿರವಾದರು ಹಾಗೂ ತಮ್ಮ ಆಧ್ಯಾತ್ಮಿಕ ಹುಡುಕಾಟವನ್ನು ಮುಂದುವರಿಸಲು ನಿಶ್ಚಯಿಸಿದರು. ಅವರು ಇನ್ನೂ ಎಂಟು ವರ್ಷದ ಹುಡುಗನಾಗಿದ್ದಾಗಲೇ ತಂದೆ ತೀರಿಹೋಗಿದ್ದರಿಂದ ಅವರ ಮತ್ತು ಸ್ವಾಮೀಜಿಯ ನಡುವೆ ತಂದೆ ಮಗನ ಸಂಬಂಧ

ಬೆಳೆಯಿತು. ಅದು ಅವರ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿತು. ತಮ್ಮ ತಾಯಿಗೆ ತಾನು ಮದುವೆಯಾಗುವುದಿಲ್ಲವೆಂದು ತೀರ್ಮಾನಿಸಿರುವುದಾಗಿ ಹೇಳಿಬಿಟ್ಟರು. ಸ್ವಾಮಿ ಚಿನ್ಮಯಾನಂದರಿಗಾಗಿ ಪಾಕ್ಷಿಕ ಪತ್ರಿಕೆಯೊಂದನ್ನು ಸಂಪಾದಿಸಲಾರಂಭಿಸಿದರು. ಜೊತೆಗೆ ಸಂಸ್ಕೃತ ಕಲಿಕೆಯನ್ನೂ ಮುಂದುವರಿಸಿದರು. ಈ ಸಮಯದಲ್ಲಿ ಅವರು ತಮ್ಮ ಬೆಳಗಿನ ಹತ್ತು ಗಂಟೆಯಿಂದ ಸಂಜೆ ಐದರ ತನಕದ ಕೆಲಸದ ಜೊತೆಗೆ ಚಿನ್ಮಯ ಮಿಷನ್ನಿನ ಕಾರ್ಯದರ್ಶಿ, ಒಂದು ಪತ್ರಿಕೆಯ ಸಂಪಾದಕ ಹಾಗೂ ಸಂಸ್ಕೃತದ ನಿಯಮಿತ ವಿದ್ಯಾರ್ಥಿ ಹೀಗೆ ಈ ನಾಲ್ಕನ್ನೂ ಜೊತೆ ಜೊತೆಯಲ್ಲೇ ನಿಭಾಯಿಸುತ್ತಿದ್ದರು. ಹೀಗೆ ನಾಲ್ಕೈದು ವರ್ಷ ಸ್ವಾಮೀಜಿಗೆ ಅತ್ಯಂತ ನಿಕಟವಾಗಿ ಕಾರ್ಯ ನಿರ್ವಹಿಸಿದ ಮೇಲೆ ಭಗವದ್ಗೀತೆಯ ಮೇಲಿನ ಅವರ ಉಪನ್ಯಾಸದ ಹಸ್ತಪ್ರತಿಯನ್ನು ತಯಾರಿಸುವ ಸಲುವಾಗಿ ಅವರೊಂದಿಗೆ ಹಿಮಾಲಯದಲ್ಲಿರುವ ಉತ್ತರ ಕಾಶಿಗೆ ತೆರಳಿದರು. ಇಲ್ಲಿ ಅವರು ಸ್ವಾಮಿ ಚಿನ್ಮಯಾನಂದರ ಗುರುಗಳನ್ನು ಭೇಟಿಮಾಡಿದರು ಮತ್ತು ಸಾಧುವಾಗುವುದೆಂದರೆ ಏನು ಎಂಬುದನ್ನು ಪ್ರತ್ಯಕ್ಷವಾಗಿ ಕಂಡುಕೊಂಡರು. ಸಾಧುವಿನ ಜೀವನದ ನಿಯಮಗಳನ್ನು ಅನುಸರಿಸುವ ವಿಚಾರದಿಂದ ಆಕರ್ಷಿತರಾದರು. ಬದಲಿಗೆ ಚಿನ್ಮಯಾನಂದರು ಅವರನ್ನು ಬೆಂಗಳೂರಿಗೆ ಕಳಿಸಿದರು. ಅಲ್ಲಿ ಅವರು 'ತ್ಯಾಗ' ಎಂಬ ಪತ್ರಿಕೆಯನ್ನು ಮೂರು ವರ್ಷ ನಡೆಸಿದರು. ಈ ಹೊತ್ತಿಗೆ ಉಪನಿಷತ್ತುಗಳ ವ್ಯಾಪಕವಾದ ಅಧ್ಯಯನವನ್ನು ಮಾಡಿದ್ದರು. ಆದರೆ ಅವರಿಗೆ ಅನೇಕ ಸಂದೇಹಗಳಿದ್ದುವು. ಈ ಸಂದೇಹಗಳು ವೇದಾಂತವನ್ನು ಅವರು ಒಂದು ಸಿದ್ಧಾಂತವಾಗಿ ಅಧ್ಯಯನ ಮಾಡಿದ್ದರಿಂದಾಗಿ ಹುಟ್ಟಿದ್ದವು. ಆತ್ಮದ ಅನುಭವವನ್ನು ಪಡೆಯಬೇಕೆಂದರೆ ಅನುಭವವನ್ನು ಪಡೆಯುವವನು ಯಾರು? ಅವನು ಅನಾತ್ಮನೇ?– ಎಂದು ತನಗೆ ತಾನೆ ಕೇಳಿಕೊಂಡರು.

ಅವರು ಧ್ಯಾನದ ಆಧಾರವನ್ನೂ ಪ್ರಶ್ನಿಸಿದರು. ಕಾಲಬದ್ಧನಾದ 'ನಾನು' ಕಾಲಬದ್ಧವಾದ ಕರ್ಮಗಳನ್ನು ಮಾಡುತ್ತ ಕಾಲಾತೀತವಾದದ್ದನ್ನು ಹೇಗೆ ತಾನೆ ಅನುಭವಕ್ಕೆ ತಂದುಕೊಳ್ಳ ಬಲ್ಲೆ? ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯುತ್ತ ಅತಿಯಾದ ಯಾತನೆಗೊಳಗಾದರು. ಧರ್ಮ ಕುರಿತ ರಮಣ ಮಹರ್ಷಿ, ಜಿಡ್ಡು ಕೃಷ್ಣಮೂರ್ತಿ, ವಿಲಿಯಂ ಬ್ಲೇಕ್, ವಿಲಿಯಂ ಜೇಮ್ಸ್, ಔಸ್‌ಪೆನ್‌ಸ್ಕಿ, ಮೊದಲಾದ ಅನುಭಾವಿಗಳು ಮತ್ತು ಲೇಖಕರ ಬರಹಗಳನ್ನು ಓದಲಾರಂಭಿಸಿದರು. ಆದರೆ ಅವರ ಬರಹಗಳು ಎಷ್ಟೇ ರೋಚಕವಾಗಿದ್ದರೂ ಅವರ ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲ. ಇನ್ನೊಬ್ಬ ಸ್ವಾಮೀಜಿಯಾದ ಪ್ರಣವಾನಂದರ ಜೊತೆ ಕೆಲವು ಕಾಲ ಇದ್ದ ನಂತರದಲ್ಲಿ ವೇದಾಂತವು ಚಿಂತನೆಯ ಒಂದು ಪ್ರಸ್ಥಾನವಲ್ಲ; ಅದು ಜ್ಞಾನದ ನೇರವಾದ ಸಾಧನ. ವೇದಾಂತವು.. ಎಂಬ ಅಂತರ್‌ದೃಷ್ಟಿ ಅವರಲ್ಲಿ ಮೂಡಿತು. ಎಂಬ ಅಂತರ್ ದೃಷ್ಟಿ ಅವರಲ್ಲಿ ಮೂಡಿತು. ಆ ನಂತರ ಅವರು ಶಂಕರರ ಕೃತಿಗಳನ್ನೂ ಒಳಗೊಂಡಂತೆ ವೇದಾಂತ ಗ್ರಂಥಗಳನ್ನು ಮತ್ತೊಮ್ಮೆ ಓದಿದರು. ಇವು ಆಚರಣೆಗಳು, ಪೂಜೆ ಮತ್ತು ಧ್ಯಾನ ಇವೆಲ್ಲವೂ ಜ್ಞಾನದ ಸಾಧನೆಗಳೆಂಬ ವಿಚಾರವನ್ನು ಅಲ್ಲಗಳೆಯುವ ಗ್ರಂಥಗಳು. ತನ್ನ ಬೋಧನೆಗಳನ್ನು ಈ

ಒಂದು ಒಳನೋಟದ ಆಧಾರದ ಮೇಲೆ ರೂಪಿಸಿದರು ಮತ್ತು ಶ್ರೋತೃಗಳು ವೇದಾಂತದ ಸಂದೇಶವನ್ನು ನೇರವಾಗಿ ಅರ್ಥಮಾಡಿಕೊಳ್ಳಲು ಅನುವಾಗುವಂತೆ ತನ್ನದೇ ವ್ಯಕ್ತಿತ್ವವನ್ನು ಅಳಿಸಿಹಾಕಿಬಿಡಲು ಪ್ರಯತ್ನಿಸಿದರು.

1962 ರಲ್ಲಿ ತಮ್ಮಿಬ್ಬರ ಮೊದಲ ಭೇಟಿಯಾದ ಹತ್ತು ವರ್ಷಗಳ ನಂತರ ಚಿನ್ಮಯಾನಂದರು ನಟರಾಜನ್‌ಗೆ ಸನ್ಯಾಸವನ್ನು ಕೊಟ್ಟು ದಯಾನಂದನೆಂಬ ಹೆಸರಿನ ಜೊತೆಗೆ ಸಾಧು ಜೀವನದ ದೀಕ್ಷೆ ನೀಡಿದರು. ಸನ್ಯಾಸಕ್ಕೆ ಮಾನಸಿಕವಾಗಿ ಸಿದ್ಧರಾಗಿದ್ದರೂ ಆ ಸಮಯ ಬಂದಾಗ ಅದನ್ನು ನಿರೀಕ್ಷಿಸಿರಲಿಲ್ಲ. ಆ ನಂತರದಲ್ಲಿ ಸನ್ಯಾಸ ಜೀವನದ ರೀತಿಯನ್ನು ಕಲಿಯುತ್ತ ಗಂಗೋತ್ರಿಯಲ್ಲಿ ಕೆಲ ಸಮಯ ಕಳೆದರು. ಆತ್ಯಂತಿಕ ಗುರಿಯಾದ 'ಆತ್ಮ'ದ ಅನುಭವವನ್ನು ಪಡೆದುಕೊಳ್ಳುವ ಉದ್ದೇಶದಿಂದ ಒಂದಿಲ್ಲೊಂದು ಸಾಧನೆಯಲ್ಲಿ ನಿರತರಾಗಿದ್ದ ಅನೇಕ ಜನ ಸಾಧುಗಳನ್ನು ಭೇಟಿಮಾಡಿದರು. ಆತ್ಮದ 'ಅನುಭವ' ಪಡೆದುಕೊಳ್ಳುವುದು ಎಂಬುದಿಲ್ಲ; ಇರುವುದೇನಿದ್ದರೂ ಆತ್ಮನನ್ನು ಅರಿತುಕೊಳ್ಳುವುದು ಅಷ್ಟೆ ಎಂದು ಅವರಿಗೆಲ್ಲ ತಿಳಿಯ ಹೇಳಲು ಪ್ರಯತ್ನಿಸಿದರು. ಆದರೆ ಇವರು ಹೇಳಿದ್ದು ಅವರುಗಳಿಗೆ ಅರ್ಥವಾಗಲಿಲ್ಲ. ಈ ನಡುವೆ ಬ್ರಹ್ಮಸೂತ್ರಗಳನ್ನು ಕಲಿಯುವ ಉದ್ದೇಶದಿಂದ ಹೃಷೀಕೇಶಕ್ಕೆ ಬರುವ ಮುನ್ನ ಅವರು ಅನೇಕ ಸ್ಥಳಗಳಿಗೆ ಹೋದರು. ಹೃಷೀಕೇಶದಲ್ಲಿ ಅವರು ಹುಲ್ಲು ಮತ್ತು ಬಿದಿರು ಬಳಸಿ ತನ್ನದೇ ಆದ ಒಂದು ಗುಡಿಸಿಲನ್ನು ಕಟ್ಟಿಕೊಂಡು ಅಧ್ಯಯನದಲ್ಲಿ ತೊಡಗಿಸಿಕೊಂಡುಬಿಟ್ಟರು. ಅವರ ಗುರುಗಳು ಅವರನ್ನು ನಿಯಮಿತವಾಗಿ ತಪ್ಪದೆ ತರಗತಿಗಳಿಗೆ ಹಾಜರಾಗುತ್ತಿದ್ದ ಮತ್ತು ತನ್ನ ಅಧ್ಯಯನದ ವಿಷಯದ ಹೊರತಾಗಿ ಬೇರೆ ಯಾವುದೇ ಮಾತು-ಕತೆಯಲ್ಲಿ ತೊಡಗಿಸಿಕೊಳ್ಳದ ನಿಷ್ಠಾವಂತ ವಿದ್ಯಾರ್ಥಿಯ ರೂಪದಲ್ಲಿ ನೆನಪಿಸಿಕೊಳ್ಳುತ್ತಾರೆ. ಒಂದು ದಿನ ಅವರ ಗುಡಿಸಿಲಿಗೆ ಬೆಂಕಿ ಹತ್ತಿಕೊಂಡಿತು. ಅವರ ಅಕ್ಕ ಪಕ್ಕದಲ್ಲಿದ್ದ ಜೊತೆಯಗಾರ ಸಾಧುಗಳು ಸ್ವಾಮಿ ದಯಾನಂದರು ನಿಷ್ಕ್ರಿಯ ಭಾವದಿಂದ ಆ ದೃಶ್ಯವನ್ನು ವೀಕ್ಷಿಸುತ್ತಿದ್ದುದನ್ನು ಮತ್ತು ಅನಂತರದಲ್ಲಿ ತಮ್ಮೆಲ್ಲ ವಸ್ತುಗಳು ನಾಶವಾಗಿ ಹೋದರೂ ಆ ರಾತ್ರಿ ಹೊರಗಡೆ ಬಯಲಿನಲ್ಲಿ ಸುಖವಾಗಿ ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದುದನ್ನು ಕಂಡರು.

ಸ್ವಾಮೀಜಿಯವರು ಹೃಷೀಕೇಶದಲ್ಲಿ ಮೂರು ವರ್ಷಗಳ ಕಾಲ ಅಧ್ಯಯನದಲ್ಲಿ ನಿರತರಾಗಿದ್ದರು. ಆ ನಂತರ ಸ್ವಾಮಿ ಚಿನ್ಮಯಾನಂದರು ಅವರನ್ನು ಮತ್ತೆ ಕರೆಸಿಕೊಂಡರು. ಮುಂದಿನ ವರ್ಷ ಯಜ್ಞಗಳನ್ನು ಮಾಡುತ್ತ ಸಮಯ ಕಳೆದರು. ಆ ಸಮಯದಲ್ಲಿ ಅವರು ಭಗವದ್ಗೀತೆ ಮತ್ತು ಉಪನಿಷತ್ತುಗಳ ಮೇಲೆ ಉಪನ್ಯಾಸಗಳನ್ನು ನೀಡಿದರು. ನಿಧಾನವಾಗಿ ಅವರು ಸಂಘಟನೆಯ ಕೆಲಸ ಕೈಗೆತ್ತಿಕೊಂಡರು. ಇದು 1972ರ ವರೆಗೂ ಮುಂದುವರಿಯಿತು. ಆ ಮೇಲೆ ಅವರನ್ನು ಮುಂಬೈಗೆ ಕಳಿಸಲಾಯಿತು. ಅಲ್ಲಿ ಚಿನ್ಮಯಾನಂದರ ಒತ್ತಾಯದ ಮೇರೆಗೆ ಅವರು ವೇದಾಂತದ ತರಗತಿಗಳನ್ನು ನಡೆಸಿದರು. ಆ ತರುವಾಯ ಆ ತರಗತಿಗಳು ಅತ್ಯಂತ ಜನಪ್ರಿಯವಾದುವು. 1972ರಲ್ಲಿ ಭಾರತದಲ್ಲಿ ತುರ್ತು ಪರಿಸ್ಥಿತಿಯಿದ್ದಾಗ ಸ್ವಾಮಿ ಚಿನ್ಮಯಾನಂದರು ಅವರ ಪಾಸ್ ಪೋರ್ಟ್‌ನ

ಅವಧಿ ಮುಗಿದಿದ್ದರಿಂದ ಉಪನ್ಯಾಸ ಪ್ರವಾಸಕ್ಕಾಗಿ ಅಮೇರಿಕಾಕ್ಕೆ ಭೇಟಿ ನೀಡಲು ಸಾಧ್ಯವಾಗಲಿಲ್ಲ. ದಯಾನಂದರ ಪಾಸ್‌ಪೋರ್ಟ್ ಸರಿಯಾಗಿದ್ದದ್ದರಿಂದ ಚಿನ್ಮಯಾನಂದರು ಅವರಿಗೆ ತಮ್ಮ ಪರವಾಗಿ ಅಮೆರಿಕಾಕ್ಕೆ ಹೋಗಲು ಹೇಳಿದರು. ಅವರು ಅಮೆರಿಕಾಕ್ಕೆ ಹೋದರು. ಅವರದು ಅತ್ಯಂತ ಯಶಸ್ವಿ ಪ್ರವಾಸವಾಯಿತು. ಆ ಅವಧಿಯ ನಂತರದಲ್ಲಿ ಅಲ್ಲಿಯ ಇವರ ಕೆಲವು ಶಿಷ್ಯರು ಮೂರು ವರ್ಷದ ತರಗತಿಯನ್ನು ಪ್ರಾರಂಭಿಸಲು ಒತ್ತಾಯ ಮಾಡಿದರು. ಅದರ ಪರಿಣಾಮವಾಗಿ ಅಮೆರಿಕಾದ ಪೆನ್ಸಿಲ್‌ವೇನಿಯಾದಲ್ಲಿ "ಆರ್ಷವಿದ್ಯಾ ಗುರುಕುಲ" ಎಂಬ ಒಂದು ಸ್ವತಂತ್ರ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಿದರು. ಈಗ ಸ್ವಾಮಿ ದಯಾನಂದರು ಮೂರು 'ಆರ್ಷ ವಿದ್ಯಾ ಪೀಠ' ಗಳ(ಋಷಿಗಳ ಬೋಧನೆಯನ್ನು ಕಲಿಸುವ ವಿದ್ಯಾಲಯ) ಮುಖ್ಯಸ್ಥರಾಗಿದ್ದಾರೆ. ಅವು ಅಮೆರಿಕಾದ ಸೈಲೋಸ್ ಬರ್ಗ್‌ನಲ್ಲೊಂದು, ಹೃಷೀಕೇಶದಲ್ಲಿ ಮತ್ತು ದಕ್ಷಿಣ ಭಾರತದ ಕೊಯಮತ್ತೂರುಗಳಲ್ಲಿ ತಲಾ ಒಂದೊಂದು ಇವೆ. ಈ ಕೇಂದ್ರಗಳಲ್ಲಿ ಎರಡು ಬಗೆಯ ಸನಿವಾಸ ವಸತಿಗಳನ್ನು ನಡೆಸಲಾಗುತ್ತದೆ. ಮೂರು ವರ್ಷದ ಕೋರ್ಸ್ ಒಂದಾದರೆ ಇನ್ನೊಂದು ಮೂರು ತಿಂಗಳ ತರಗತಿ. ಇದರ ಜೊತೆಗೆ ವಸತಿ ರಹಿತ ಶಿಕ್ಷಣ ಕಾರ್ಯಕ್ರಮಗಳಿವೆ. ಸ್ವಾಮೀಜಿಯವರು ಭಾರತದಾದ್ಯಂತ ಹಾಗೂ ವಿದೇಶಗಳಲ್ಲಿ ಸಂಚರಿಸುತ್ತ ಉಪನ್ಯಾಸಗಳನ್ನು ನೀಡುತ್ತಾರೆ. ನೂರಕ್ಕಿಂತ ಹೆಚ್ಚು ಮಂದಿಗೆ ಸನ್ಯಾಸ ನೀಡಿದ್ದಾರೆ. ಅವರ ಅನೇಕ ಉಪನ್ಯಾಸಗಳನ್ನು ಧ್ವನಿಮುದ್ರಣ ಮಾಡಲಾಗಿದೆ, ಲಿಪಿಬದ್ಧಗೊಳಿಸಿ ಸಂಪಾದಿಸಿ ಪುಸ್ತಕಗಳ ರೂಪದಲ್ಲಿ ಪ್ರಕಟಿಸಲಾಗಿದೆ. ಧ್ವನಿ ಸುರುಳಿಗಳ ರೂಪದಲ್ಲೂ ದೊರೆಯುತ್ತವೆ. ನಾನು ಸ್ವಾಮೀಜಿಯವರೊಂದಿಗೆ ತಂಗಿದ್ದಾಗ ಅವರೊಂದಿಗೆ ಮುಖಾಮುಖಿಯಾಗಿ ಮೂರು ಅಧಿವೇಶನ ನಡೆಸಿದ್ದೇನೆ. ಇಲ್ಲಿ ಆ ಸಂದರ್ಶನಗಳನ್ನು ಇಡಿಯಾಗಿ ಪ್ರಸ್ತುತ ಪಡಿಸುತ್ತಿದ್ದೇನೆ.

"ಸ್ವಾಮೀಜಿ, ಜನ ಏಕೆ ಆಧ್ಯಾತ್ಮದ ಹಾದಿ ಹಿಡಿಯುತ್ತಾರೆ?"

"ಇಂದಿನ ಜೀವನ ಅತ್ಯಂತ ಸಂಕೀರ್ಣವಾಗಿದೆ. ಸಮಾಜವು ಈಗಂತೂ ಸುಘಟಿತವಲ್ಲ. ಮೌಲ್ಯಗಳೆಂಬುವು ಅಸ್ಪಷ್ಟವಾಗಿವೆ. ಅಂಥ ಒಂದು ವಾತಾವರಣ ಅನೇಕ ಪ್ರಶ್ನೆಗಳನ್ನು ಮುಂದೊಡ್ಡುತ್ತದೆ. ಅನೇಕ ವೇಳೆ ಅವು ನೋವುಂಟುಮಾಡುವಂಥವು. ಕೆಲವರು ಕುಸಿದುಬೀಳುತ್ತಾರೆ. ಕೆಲವರು ಮಾದಕ ವಸ್ತುಗಳ, ಹಿಂಸೆಯ ಮತ್ತು ಅಪರಾಧದ ಹಾದಿ ಹಿಡಿಯುತ್ತಾರೆ. ಇನ್ನು ಕೆಲವರು ಆಧ್ಯಾತ್ಮದ ಹಾದಿ ಹಿಡಿಯುತ್ತಾರೆ. ಒಂದೇ ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿರುವ ಕೆಲವರೇಕೆ ಆಧ್ಯಾತ್ಮದ ಹಾದಿ ಹಿಡಿಯುತ್ತಾರೆ, ಅದೇ ಇನ್ನು ಕೆಲವರು ಏಕೆ ಅಪರಾಧಿಗಳಾಗುತ್ತಾರೆ ಎನ್ನುವುದನ್ನು ಕರ್ಮದ ಆಧಾರದ ಮೇಲಿನಿಂದಲೇ ವಿವರಿಸಬೇಕಾಗುತ್ತದೆ. ಮನಶ್ಶಾಸ್ತ್ರವು ನಿಮ್ಮನ್ನು ನಿಮ್ಮ ಬಾಲ್ಯಾವಸ್ಥೆಯವರೆಗೆ ಮಾತ್ರ ಹಿಂದಕ್ಕೆ ಕೊಂಡೊಯ್ಯಬಹುದು. ಕರ್ಮವು ಈ ಹಿಂದಿನ ಜನ್ಮಗಳನ್ನು ಮತ್ತು ಹಿಂದಿನ ಜನ್ಮಗಳಲ್ಲಿ ನೀವು ಮಾಡಿರಬಹುದಾದ ಕಾರ್ಯಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಒಂದು ವೇಳೆ ಪ್ರಕ್ಷುಬ್ಧ ಬಾಲ್ಯಾವಸ್ಥೆಯ ಮನಸ್ಸಿನ ಪ್ರಭಾವವು ನಿಮ್ಮ ಅನಂತರದ

ವರ್ತನೆಯನ್ನು ನಿರ್ಧರಿಸುವಲ್ಲಿ ಪರ್ಯಾಪ್ತವಾಗಿ ಪ್ರಭಾವ ಬೀರುತ್ತದೆ ಎಂದಾದರೆ ಛಿದ್ರಗೊಂಡ ಕುಟುಂಬಗಳಿಂದ ಬಂದವರೇಕೆ ಆಧ್ಯಾತ್ಮದ ಬದುಕಿನತ್ತ ಹೊರಳುತ್ತಾರೆ? ಪೂರ್ವ ಜನ್ಮದ ಸಂಸ್ಕಾರಗಳು ಮಾತ್ರ ಅಂಥದೊಂದು ವಿದ್ಯಮಾನವನ್ನು ವಿವರಿಸ ಬಲ್ಲುದು."

"ಸ್ವಾಮೀಜಿ 'ಯೋಗದ ಮಾರ್ಗ'ಕ್ಕೂ ವೇದಾಂತದ ಶಿಕ್ಷಣಕ್ಕೂ ಇರುವ ವ್ಯತ್ಯಾಸವೇನು?"

"ಯೋಗವು ಒಳ್ಳೆಯದೇ. ನಿಮ್ಮ ದೇಹ ಮತ್ತು ಮನಸ್ಸುಗಳನ್ನು ಶಿಸ್ತಿಗೊಳಪಡಿಸಿ ಶಾಂತಗೊಳಿಸುವಂಥದು ಯಾವುದೇ ಆದರೂ ಒಳ್ಳೆಯದೇ. ಯೋಗವು ನಿಮ್ಮನ್ನು ಗುಣಪಡಿಸಲು ನೆರವಾಗಬಹುದು. ಆದರೆ ಅದು ನಿಮಗೆ ಜ್ಞಾನವನ್ನು ನೀಡಲಾರದು. ಯೋಗದ ಮೂಲಕ, ಅಷ್ಟೇಕೆ ನಿರ್ವಿಕಲ್ಪ ಸಮಾಧಿಯ ಮೂಲಕವೂ ಯಾವುದೇ ಜ್ಞಾನವನ್ನು ಸಂಪಾದಿಸಲಾಗುವುದಿಲ್ಲ. ಈ ಗಾಢವಾದ ನಿರ್ವಿಕಲ್ಪ ಸಮಾಧಿಯಲ್ಲಿ 'ಆಲೋಚನಾ ರಾಹಿತ್ಯದ' ಅನುಭವ ಮಾತ್ರ ದೊರೆಯುತ್ತದೆ. ಆದರೆ ಆಲೋಚನಾ ರಾಹಿತ್ಯವು ನಿಮಗೆ ಜ್ಞಾನವನ್ನು ಹೇಗೆ ತಾನೆ ನೀಡಲು ಸಾಧ್ಯ? ಆಲೋಚನೆ ಮಾಡುವುದರಿಂದ ಮಾತ್ರ ಜ್ಞಾನವು ದೊರೆಯುತ್ತದೆ. ಆತ್ಮಕ್ಕೂ ದೇವರಿಗೂ ಭೇದವಿಲ್ಲದಿರುವ ಬಗೆಗಿನ ಸ್ಪಷ್ಟತೆಯು ಆಲೋಚಿಸುವುದರಿಂದ ಹಾಗೂ ತಾರ್ಕಿಕವಾಗಿ ಆಲೋಚಿಸುವುದರಿಂದ ಮಾತ್ರ ಬರುತ್ತದೆ. ವೇದಾಂತವು ಈ ತೆರನ ಬೌದ್ಧಿಕ ಅರಿವನ್ನು ಗಳಿಸುವ ಗುರಿ ಹೊಂದಿದೆ."

"ಸ್ವಾಮೀಜಿ, ಹಿಮಾಲಯದಲ್ಲಿ ವಾಸಿಸುತ್ತಿರುವ ಸ್ವಾಮಿಗಳನ್ನು ನಾನು ಸಂದರ್ಶಿಸಿದ್ದೇನೆ. ಅವರ ಬಳಿಗೆ ನಾವು ಹೋದಾಗ ಅವರು ಉತ್ಸಾಹಿತರಾಗುತ್ತಾರೆ, ಉಲ್ಲಸಿತರಾಗುತ್ತಾರೆ, ಜೀವಂತಿಕೆ ತುಂಬಿಕೊಳ್ಳುತ್ತಾರೆ ಮತ್ತು ಅತಿಥಿಪರಾಯಣರಾಗುತ್ತಾರೆ. ಅವರು ಸಂತುಷ್ಟರು ಮತ್ತು ಸಹೃದಯರು ಎಂಬುದು ಸ್ಪಷ್ಟವೇ ಇದೆ. 'ನೀವೇಕೆ ಕೆಳಗಡೆ ಮೈದಾನ ಪ್ರದೇಶಕ್ಕೆ ಬಂದು ಜನ ಸಾಮಾನ್ಯರಿಗೆ ಬೋಧಿಸಬಾರದು'–ಈಗ ನೀವು ಮಾಡುತ್ತಿರುವಂತೆ–ಎಂದು ಕೇಳಿದೆ. ತಮಗೆ ಹಾಗೆ ಮಾಡಬೇಕಾದ ಅಗತ್ಯವಿಲ್ಲ ಎಂದು ಅವರು ತಿಳಿಸಿದರು. ಕಲಿಯ ಬೇಕೆಂಬ ಅಪೇಕ್ಷೆ ಉಳ್ಳವರು ಮೇಲೆ ತಮ್ಮ ಬಳಿಗೆ ಬರಬಹುದು ಎಂದರು."

"ಹಿಮಾಲಯದಲ್ಲಿ ಕುಳಿತಿರುವವರು ಶಾಸ್ತ್ರ ಪಾರಂಗತರಲ್ಲ. ಅವರು ತಂತ್ರದತ್ತ ಒಲವುಳ್ಳವರು. ವ್ಯಕ್ತಿಯನ್ನು ಬದಲಾಯಿಸಲು ತಂತ್ರವಷ್ಟೇ ಸಾಕಾಗುವುದಿಲ್ಲ. ಹಿಮಾಲಯದ ಆ ಸ್ಥಳ, ಅದರ ಶಾಂತತೆ, ಮತ್ತು ಹಿಮಾಲಯದ ಸೌಂದರ್ಯ ಇವು ಪ್ರಾರಂಭದಲ್ಲಿ ನೆರವಾಗುತ್ತವೆ. ಆ ನಂತರ ಅದು ಅವುಗಳೊಂದಿಗೆ ಹೋರಾಟವಾಗುತ್ತದೆ. ಅಲ್ಲದೆ "ಹೋರಾಟದಲ್ಲಿ ಸ್ಥಿರ"ವಾಗು ಉಳಿಯುವುದೇ ತನಗೆ ತಾನೆ ಒಂದು ಸಾಧನೆ ಎನಿಸಿಬಿಡುತ್ತದೆ. ನಿಜವಾದ ಆಧ್ಯಾತ್ಮಿಕ ಸಿದ್ಧಿ ಎಂದರೆ ಅರಿವು. ಅದು ಚಿಂತನೆ ಮತ್ತು

ವಿಚಾರಮಾಡುವುದರಿಂದ ಬರುತ್ತದೆ. ನೀವು ಎಲ್ಲೇ ಇದ್ದರೂ ಅದನ್ನು ಮಾಡಬಹುದು. ಅದಕ್ಕೆ ಹಿಮಾಲಯಕ್ಕೆ ಹೋಗಬೇಕೆಂದಿಲ್ಲ. ಹಾಗೆ ಹೇಳುವುದಾದರೆ ವಸ್ತುಗಳೊಂದಿಗೆ ಅದೇ ಹೊತ್ತಿನಲ್ಲಿ ಸಂಘರ್ಷ ಮಾಡಬೇಕಾದ ಅಗತ್ಯವಿಲ್ಲವೆಂದಾದಲ್ಲಿ ವಿಚಾರಮಾಡುವುದು ಇನ್ನೂ ಸುಲಭವಾಗುತ್ತದೆ. ಲಕ್ಷಾಂತರ ಜನರ ನಡುವಿದ್ದೂ ನೀವು ಸ್ವತಂತ್ರವಾಗಿರಬಲ್ಲಿರಿ. ಯಾವುದಕ್ಕೂ ಹೆದರದೆ ಮತ್ತು ಯಾವುದಕ್ಕೂ ಹಂಬಲಿಸದೆ ಇರುವವವನೇ ಸನ್ಯಾಸಿ. ಜನಜಂಗುಳಿಯಿಂದ ಸ್ವಲ್ಪ ಮಟ್ಟಿನ ರಕ್ಷಣೆ ಬೇಕಾಗುತ್ತದೆಂಬುದು ನಿಜ. ನಗರದಿಂದ ಸುಮಾರು ಇಪ್ಪತ್ತೈದು ಕಿಲೋಮೀಟರ್ ದೂರದಲ್ಲಿ ಈಗ ನಾನಿದ್ದೇನಲ್ಲ ಅಂಥ ಜಾಗ. ನಾನು ಪ್ರಪಂಚದಿಂದ ದೂರವಾಗಿಯೂ ಇಲ್ಲ; ಅದರೊಳಗೂ ಇಲ್ಲ."

"ಈ ಒಂದು ಮನೋಧರ್ಮವನ್ನು ಸಾಧಿಸುವ ಸಲುವಾಗಿ ನೀವು ಶ್ರಮವಹಿಸಿದ್ದೀರಾ?"

"ಹೌದು. ನಿಧಾನವಾಗಿ ನಾನು ಹೀಗೆ ಬೆಳೆದುಬಂದಿದ್ದೇನೆ."

"ನೀವು ಈ ಆಧ್ಯಾತ್ಮದ ತರಗತಿಗಳನ್ನು ನಡೆಸುತ್ತಿರುವುದು ಆಧ್ಯಾತ್ಮಿಕ ಜೀವನವನ್ನು ಬದುಕಲು ಜನರಿಗೆ ನೆರವಾಗಬೇಕೆಂಬ ಜವಾಬ್ದಾರಿಯ ಭಾವನೆ ನಿಮಗಿರುವುದರಿಂದಲೆ?"

"ಅದನ್ನು ನಾನು ಹೀಗೆ ಹೇಳುವೆ: ನಾನು ಸ್ವಾಮಿ ಚಿನ್ಮಯಾನಂದರ ಜೊತೆಯಲ್ಲಿದ್ದಾಗ ಅವರು ನಾನು ಏನನ್ನು ಮಾಡಬೇಕೆಂದು ಹೇಳಿದ್ದರೋ ಅದನ್ನೇ ಮಾಡಿದ್ದೇನೆ. ಅವರೊಬ್ಬ ನಿಜವಾದ ಮಿಷನರಿ. ನನ್ನ ಕೆಲಸ ಏನಿದ್ದರೂ ಅವರ ಸೇವೆ ಮಾಡುವುದು. ನಾನು ಮಿಷನರಿ ಅಲ್ಲ. ನನಗೆ ಗೊತ್ತಿರುವುದನ್ನು ಬೇರೆಯವರೊಂದಿಗೆ ಹಂಚಿಕೊಳ್ಳಬೇಕೆಂದು ನಂಬಿರುವವನು ನಾನು. ಸಂದರ್ಭ ಬಂದಿತೆಂದರೆ ನನ್ನಲ್ಲಿರುವುದನ್ನು ನಾನು ಬೇರೆಯವರೊಂದಿಗೆ ಹಂಚಿಕೊಳ್ಳುತ್ತೇನೆ."

"ನೀವು ಎಲ್ಲೆಡೆಯಲ್ಲೂ ಪ್ರಸಿದ್ಧರಾಗುತ್ತಿದ್ದೀರಿ. ಹೀಗೆ ಎಲ್ಲರೊಂದಿಗೂ ಹಂಚಿಕೊಳ್ಳುತ್ತಲೇ ಇರಲು ನಿಮಗೆ ಸಾಧ್ಯವಿದೆಯೆ?"

"ಖಂಡಿತವಾಗಿಯೂ ಅದು ಸಾಧ್ಯವಿದೆ. 'ನಿಮ್ಮದೇ ಆದ ಸ್ವಂತ ಸಮಯ' ಎಂಬುದರ ಅಗತ್ಯವಿಲ್ಲದಿದ್ದಾಗ ಅದು ಸಾಧ್ಯ. ನನ್ನ ಸಮಯ ಸಾರ್ವಜನಿಕರದು. ನಾನು ಏಕಾಂತದಲ್ಲಿದ್ದಾಗ ಸಂತಸದಿಂದಿರುತ್ತೇನೆ ಮತ್ತು ಜನರೊಂದಿಗಿದ್ದಾಗಲೂ ಸಂತಸದಿಂದಿರುತ್ತೇನೆ. ಬಹುಶಃ ಪ್ರಾರಂಭದಲ್ಲಿ ನನಗೆ ಸ್ವಲ್ಪ ಮಟ್ಟಿಗೆ ಸ್ವಂತ ಸಮಯದ ಅಗತ್ಯವಿತ್ತು. ಈಗ ನನಗೆ ಅದರ ಅಗತ್ಯವಿಲ್ಲ."

"ಸನ್ಯಾಸ ಸ್ವೀಕಾರ ನಿಮ್ಮಲ್ಲಿ ಯಾವ ರೀತಿಯ ಬದಲಾವಣೆ ತಂದಿತು?"

"ಅದು ನನ್ನಲ್ಲಿ ಹೆಚ್ಚಿನ ಬದಲಾವಣೆ ಉಂಟುಮಾಡಿಲ್ಲ. ಸನ್ಯಾಸದ ಮನೋಧರ್ಮ ನನ್ನಲ್ಲಿ ಎಲ್ಲ ಕಾಲದಲ್ಲೂ ಇತ್ತು ಎನಿಸುತ್ತದೆ. ಹೇಳಬೇಕೆಂದರೆ ನಾನು ಸನ್ಯಾಸ ಸ್ವೀಕರಿಸುವುದಕ್ಕೆ ಬಹಳ ಮುಂಚೆಯೇ ನನ್ನ ಗುರುವಿನ ಗುರುವನ್ನು ಭೇಟಿಯಾದಂದೇ 'ಅವನೊಬ್ಬ

ಸಾಧು' ಎಂದು ಘೋಷಿಸಿದರು. ಬೇರೆಯವರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗದ ಯಾವುದಕ್ಕೂ ಅಪೇಕ್ಷಿಸದಿರುವ, ನನ್ನ ಮೂಲಭೂತ ಸ್ವಭಾವವಾದ ಯಾವುದನ್ನೂ ಸ್ವಂತಕ್ಕೆ ಮಾಡಿಕೊಳ್ಳದಿರುವುದರಿಂದ ಇದು ಬಂದಿದೆ.

"ಸ್ವಾಮೀಜಿ, ಆಧ್ಯಾತ್ಮ ಸಾಹಿತ್ಯವನ್ನು ನನ್ನ ಹದಿನೆಂಟನೇ ವಯಸ್ಸಿನಿಂದಲೂ ಓದುತ್ತ ಬಂದಿದ್ದೇನೆ. ನಾನು ಓದಿದ್ದನ್ನು ಅರ್ಥಮಾಡಿಕೊಳ್ಳುವಷ್ಟು ಬುದ್ಧಿವಂತಿಕೆ ನನಗಿದೆ. ಇದರರ್ಥ ನಾನು ಹೆಚ್ಚು ಉತ್ತಮ ವ್ಯಕ್ತಿಯಾಗಿದ್ದೇನೆ ಎಂದಲ್ಲ. ಅದೇ ಮೊದಲಿನ ಭಯ ಮತ್ತು ಅಸೂಯೆಗಳು ಈಗಲೂ ನನ್ನಲ್ಲಿವೆ."

"ನೀವು ಯಾವುದನ್ನು 'ಅರ್ಥಮಾಡಿಕೊಳ್ಳುವುದು' ಎಂದು ಹೇಳುತ್ತೀರೋ ಅದು ನಿಜವಾದ ಅರ್ಥಮಾಡಿಕೊಳ್ಳುವುದಲ್ಲ. ಅದು ಹಾಗೆ ಅನ್ನಿಸುವುದೇಕೆಂದರೆ ನೀವು ಓದುವ ಶಬ್ದಗಳೆಲ್ಲವೂ ಸುಪರಿಚಿತವಾದಂಥವು. ಹಾಗೆ ಹೇಳಬೇಕೆಂದರೆ ಈ ರೀತಿಯ ಅರ್ಥಮಾಡಿಕೊಳ್ಳುವಿಕೆಯು ಅತ್ಯಂತ ಅಸ್ಪಷ್ಟವಾದ್ದು. ನಮ್ಮ ಮನಸ್ಸುಗಳನ್ನು ನಾವು ಮೊದಲು ಭಾವನಾತ್ಮಕ ಏಕತೆಯ ಕಡೆಗೆ ಹೊರಳಿಸಿದಾಗ ಮತ್ತು ಅರಿವಿನ ಕಡೆಗೆ ಹೊರಳಿಸಿದಾಗ ಸ್ಪಷ್ಟತೆ ಬೆಳೆಯುತ್ತ ಹೋಗುತ್ತದೆ. ಅರಿವಿನ ಏಕತೆಯತ್ತ ಹೋಗುವಾಗ ಭಾವನಾತ್ಮಕ ಏಕತೆಯನ್ನು ಅಲಕ್ಷ್ಯ ಮಾಡಬೇಕೆಂದು ಹೇಳುವವರ ಪೈಕಿ ನಾನಲ್ಲ. ಭಾವನಾತ್ಮಕವಾಗಿ ಏಕತೆಹೊಂದಿಲ್ಲದ ಮನುಷ್ಯ ಒಂದು ಮಗುವಿನಂತೆ. ಒಂದು ವೇಳೆ ಅರಿವು ಹೊಂದಿದ ಆತ್ಮವು (ನಾನು) ಸಮಸ್ಯೆಯೊಂದನ್ನು ಪರಿಹರಿಸುವಂತೆ ತೋರುತ್ತದೆಂದಾದರೆ ತನ್ನ ಕಡೆಗೆ ಲಕ್ಷ್ಯ ನೀಡದ ಕಾರಣ ಈ 'ಮಗು' ಭಯಭೀತಗೊಳ್ಳುತ್ತದೆ. ನನ್ನ ಬಳಿ ಒಬ್ಬ ವಿದ್ಯಾರ್ಥಿನಿ ಇದ್ದಳು. ಅವಳು ಬಹಳ ಪ್ರತಿಭಾವಂತಳಾಗಿದ್ದಳು. ನಾನು ಬೋಧಿಸಿದ್ದೆಲ್ಲವನ್ನೂ ಸಾದ್ಯಂತವಾಗಿ ಅರ್ಥಮಾಡಿಕೊಳ್ಳುತ್ತಿದ್ದಳು. ನನ್ನ ವಾದದ ಅಂತಿಮ ನಿರ್ಣಯದ ಹಂತಕ್ಕೆ ನಾನು ತಲುಪಿದಾಗ ಅವಳು ಅದನ್ನು ವಿರೋಧಿಸುತ್ತಿದ್ದಳು. ಅವಳ ಬಾಲ್ಯ ಬಹಳ ಕಷ್ಟದಿಂದ ಕೂಡಿತ್ತು. ಅವಳ ತಂದೆ ತಾಯಿಗಳಿಬ್ಬರೂ ಅವಳನ್ನು ತ್ಯಜಿಸಿದ್ದರು. ನಾನು ಬೋಧಿಸಿದ್ದನ್ನು ಅವಳು ಅರ್ಥಮಾಡಿಕೊಂಡುಬಿಟ್ಟರೆ ಅವಳಿಗೆ ನನ್ನ ಗಮನ(ಲಕ್ಷ್ಯ) ದೊರೆಯುತ್ತಿರಲಿಲ್ಲ. ಅವಳನ್ನು ಪರಿವರ್ತಿಸುವ ಸಲುವಾಗಿ ನಾನು 'ಮನೋಚಿಕಿತ್ಸೆ'ಯನ್ನು ಬಳಸಿದೆ. ನಾನು ಅವಳಿಗೆ ತನ್ನನ್ನೇ ಒಬ್ಬ 'ವಯಸ್ಕಳಂತೆ' ಮತ್ತು 'ಶಿಶುವಿನಂತೆ' ವಿಭಜಿಸಿಕೊಂಡು ನೋಡಲು ತಿಳಿಸಿದೆ. 'ವಯಸ್ಕ ನಾನು' 'ಮಗು ನಾನು'ವನ್ನು ನೋಡಿಕೊಳ್ಳಬೇಕು. ಹೇಳಬೇಕೆಂದರೆ ಪ್ರತಿ ಬೆಳಿಗ್ಗೆಯೂ ನಾನು ಅವಳಿಗೆ ಮಗುವಿನ ಭಯ ಮತ್ತು ಇಷ್ಟಗಳ ಕಡೆಗೆ ಅರ್ಧ ಗಂಟೆಯ ಕಾಲ ಗಮನ ನೀಡಬೇಕೆಂದು ತಿಳಿಸಿದೆ. ನಿಧಾನವಾಗಿ ಅವಳು ತನ್ನ ಸಮಸ್ಯೆಯಿಂದ ಪಾರಾದಳು. ನಾನು ಯಾವುದೇ ಆಧ್ಯಾತ್ಮಿಕ ತಂತ್ರದ ಬಳಕೆ ಮಾಡಲಿಲ್ಲ. ಅವಳ ಅಜಾಗ್ರತ ಮನಸ್ಸಿನ ತೊಂದರೆಗಳಿಗೆ ಮನಶ್ಶಾಸ್ತ್ರೀಯ ವಿಧಾನಗಳನ್ನು ಬಳಸಿದೆ."

"ಸ್ವಾಮೀಜಿ ನಿನ್ನೆಯ ದಿನ ನೀವು ಒಂದು ವೇದಾಂತ ಗ್ರಂಥವನ್ನು ನಮಗೆ ಕಲಿಸುತ್ತಿದ್ದಾಗ ಅದರಲ್ಲಿ ನನ್ನ ಮನಸ್ಸನ್ನು ತುಂಬಾ ಪ್ರಭಾವಿತಗೊಳಿಸಿದ್ದು ಲೇಖಕ ತನ್ನ ಗುರುವನ್ನು ಕುರಿತಂತೆ ವ್ಯಕ್ತಪಡಿಸಿರುವ ಅತ್ಯಂತ ಗೌರವದ ಮತ್ತು ಶ್ರದ್ಧಾ ಭಾವನೆಯ ಶ್ಲೋಕಗಳು. ಈ ಶ್ಲೋಕಗಳು ನನ್ನ ಕಣ್ಣಲ್ಲಿ ನೀರು ತರಿಸಿದವು. ಇನ್ನು ಮುಂದೆ ಸಮಾಜದಲ್ಲಿ ಇಂಥ ಗೌರವವನ್ನು ಕಾಣಲು ಸಾಧ್ಯವಿಲ್ಲ."

"ಗೌರವದಿಂದ, ಅದರಲ್ಲೂ ಪ್ರಶ್ನಾತೀತವಾದ ಗೌರವ ಭಾವನೆಯಿಂದ ನೀವು ಏನನ್ನೂ ಕಲಿಯಲಾರಿರಿ. ವರ್ಷಗಟ್ಟಲೆ ನಾನು ಚಿನ್ಮಯಾನಂದರ ಸೇವೆ ಮಾಡಿದೆ. ಅವರು ಹೇಳಿದ್ದು ತಪ್ಪೆಂದು ತೋರುತ್ತಿದ್ದರೂ ಅವರು ಹೇಳಿದ್ದೆಲ್ಲವನ್ನೂ ನಾನು ಮಾಡಿದೆ. ಇದು ಹೇಗಿತ್ತೆಂದರೆ ನನಗೆ ನನ್ನದೇ ಆದಂಥ ಇಚ್ಛೆಯೇ (ಮನಸ್ಸೇ) ಇಲ್ಲವೇನೋ ಎನ್ನುವಂತೆ. ನಿಜವಾದ 'ಇಚ್ಛೆ', ಇಚ್ಛೆಯನ್ನು ಬಿಟ್ಟುಕೊಟ್ಟ ಬಳಿಕ ಉದಿಸುತ್ತದೆ."

"ಇದು ಹಿಮಾಲಯದ ಒಬ್ಬ ಸ್ವಾಮಿಯಿಂದ ನಾನು ಏನನ್ನು ಕಲಿತೆನೋ ಅದನ್ನು ನೆನಪಿಗೆ ತರುತ್ತದೆ. ಅದೆಂದರೆ "ಭಿಕ್ಷೆ ಬೇಡಲು ತೆರಳುವುದು" ಸನ್ಯಾಸ ತರಬೇತಿಯ ಒಂದು ಬಹು ಮುಖ್ಯ ಭಾಗ ಎಂದು ಅವರು ಹೇಳಿದ್ದರು. ಅದರಿಂದ ನಾವು ವಿನಯವಂತರಾಗುವುದನ್ನು ಕಲಿಯುತ್ತೇವೆ. ನೀವು ಏನು ಹೇಳುತ್ತೀರಿ ಸ್ವಾಮೀಜಿ?"

"ಅವರು ಹೇಳಿದ್ದು ಸರಿ ಅನ್ನಿಸುತ್ತೆ. ಪ್ರತಿ ದಿನವೂ ಭಿಕ್ಷೆ ಬೇಡಿ ತರುವುದು ಬಹಳ ಮುಖ್ಯವಾದ ಭಾಗ ಎನ್ನುವಂಥ ಜೀವನವನ್ನು ಅನೇಕ ವರ್ಷ ನಡೆಸಿದ್ದೇನೆ. ಒಂದು ಸಲ ಊಟಕ್ಕೋಸ್ಕರವೇ ಬಂದಂಥವರೊಂದಿಗೆ ನಾನು ಸರತಿಯ ಸಾಲಿನಲ್ಲಿ ನಿಂತಿದ್ದೆ. ಅವರೆಲ್ಲ ಭಿಕ್ಷುಕರು; ಸನ್ಯಾಸಿಗಳಲ್ಲ. ಆದರೂ ನಾನು ಅನೇಕ ದಿನಗಳ ಕಾಲ ನಿಲ್ಲುತ್ತಿದ್ದೆ. ನನ್ನ ಶಿಷ್ಯರೆಲ್ಲರಿಗೆ ಈ ಭಿಕ್ಷಾಟನೆಯ ಪ್ರಕ್ರಿಯೆಯ ಮೂಲಕ ಹಾದುಬರಬೇಕೆಂದು ಹೇಳುತ್ತೇನೆ. ನನ್ನ ಆಶ್ರಮಕ್ಕೆ ಬೇಕಾದ ವಸ್ತುಗಳನ್ನು ಕೇಳುವುದನ್ನು ಕಲಿಸಿದೆ. ಇರುವಂಥ ಶ್ರೀಮಂತರಿಂದ ವಸ್ತುಗಳನ್ನು ಕೇಳಲು ನನಗೇನೂ ಹಿಂಜರಿಕೆಯಾಗುವುದಿಲ್ಲ. ಹೇಗೂ ಅದು ನನಗಾಗಿ ಅಲ್ಲವಲ್ಲ ! ಕ್ಯಾಲಿಫೋರ್ನಿಯಾದ ಪ್ರಾಧ್ಯಾಪಕರೊಬ್ಬರು ಬರೆದಿರುವ ಪುಸ್ತಕದಲ್ಲಿ ಸನ್ಯಾಸಿಯ ಬದುಕೆಂದರೆ ಅತ್ಯಂತ ವಿವೇಕಯುತವಾದ ಬದುಕೆಂದು ಹೇಳಲಾಗಿದೆ."

"ಏಕೆ?"

"ಏಕೆಂದರೆ ಮುಂದಿನ ಊಟ ಎಲ್ಲಿಂದ ಬರುತ್ತದೆಂಬುದರ ಅರಿವಿಲ್ಲದೆ ಅಂದಂದಿನ ಜೀವನವನ್ನು ನಡೆಸುವುದನ್ನು ಸನ್ಯಾಸಿಗಳು ಕಲಿಯುತ್ತಾರೆ. ಅವರು ಜೀವನದ ಯೋಜನೆ ಮಾಡಿಕೊಂಡಿರುವುದಿಲ್ಲ."

"ಸ್ವಾಮೀಜಿ ತಮ್ಮ ಬಗ್ಗೆ ಹೇಗೆ-ತಾವು ಯೋಜನೆ ಹಾಕಿಳ್ಳುವುದಿಲ್ಲವೆ?"

"ಎಂದೂ ಇಲ್ಲ. ಈಗ ಆಗಿರುವ ಆಶ್ರಮಗಳು ಏನಿವೆ ಅವೆಲ್ಲವೂ ಏಕೆ ಆದುವು ಎಂದರೆ ಆದುವು ಅಷ್ಟೆ. ನಾನು ಯಾವತ್ತೂ ಅವುಗಳ ಯೋಜನೆ ಹಾಕಿದವನಲ್ಲ. ನಿಜ, ಅವುಗಳ ಕೆಲಸ ಪ್ರಾರಂಭವಾದಾಗ ನಾನು ಮಾರ್ಗದರ್ಶನ ಮಾಡಿದೆ. ಆದರೆ ಅದರಲ್ಲಿ ಯಾವುದೊಂದೂ ನನ್ನ ಪ್ರಯತ್ನ ಅಥವಾ ಯೋಜನೆಯಿಂದ ಆದವಲ್ಲ."

"ಸ್ವಾಮೀಜಿ ತಮ್ಮ ಹತ್ತಿರ ಜನಗಳು ಏತಕ್ಕೆ ಬರುತ್ತಾರೆ ಅಂತ ತಮ್ಮ ಆಲೋಚನೆ?"

"ಹಾಗೆ ಜನ ಬರುವುದಕ್ಕೆ ಹಲವಾರು ಕಾರಣಗಳಿವೆ. ಕೆಲವರು ಪ್ರಾಪಂಚಿಕವಾಗಿ ಮುಂದುವರಿದಿರುತ್ತಾರೆ. ಅಂಥವರು ತಮ್ಮ ಮಕ್ಕಳು ಕೆಲವೊಂದು ಪಾರಂಪರಿಕ ಮೌಲ್ಯಗಳನ್ನು ತಿಳಿದುಕೊಳ್ಳಲೆಂದು ಬಯಸುತ್ತಾರೆ.

"ಇನ್ನು ಕೆಲವರು ಮಾನಸಿಕ ನೆಮ್ಮದಿಗಾಗಿ ಬರುತ್ತಾರೆ. ನನಗೇನು ಮಾಡಲು ಸಾಧ್ಯವೋ ಅದನ್ನು ನಾನು ಮಾಡುತ್ತೇನೆ. ಆದರೆ ನಾನು ಆಗಲೇ ಹೇಳಿದಂತೆ ಭಾವನಾತ್ಮಕ ಬದುಕನ್ನು ದಾಟಿಕೊಂಡು ಆಧ್ಯಾತ್ಮಿಕ ಬದುಕನ್ನು ಸಾಧಿಸಲು ಸಾಧ್ಯ ಎಂದು ನನಗನ್ನಿಸುವುದಿಲ್ಲ. ಅವರಿಗೊಂದು ವೇಳೆ ಮನೋಚಿಕಿತ್ಸೆ ಅಗತ್ಯವೆಂದೆನಿಸಿದರೆ ಅವರಿಗೆ ಸರಿಯಾದ ಕಡೆ ಹೋಗಲು ಸಲಹೆ ನೀಡುತ್ತೇನೆ. ಅಮೆರಿಕನ್ನರು ಇಲ್ಲಿಗೆ ಏಕೆ ಬರುತ್ತಾರೆಂದರೆ ಅವರು ಧರ್ಮವನ್ನು ಕಳೆದುಕೊಂಡುಬಿಟ್ಟಿದ್ದಾರೆ ಮತ್ತು 'ಹೊಸ ಅಲೆಯ' ಪುಸ್ತಕಗಳು ಅವರಿಗೆ ಪೂರ್ವದ ಚಿಂತನೆಯ ಬಗ್ಗೆ ತಿಳಿಸುತ್ತವೆ. ನಾನು ಅವರಿಗೆ ಸರಿಯಾದ ಪ್ರಶ್ನೆ ಕೇಳುವುದನ್ನು ಹೇಳಿಕೊಡುತ್ತೇನೆ."

ಸಂದರ್ಶನದ ಕೊನೆಗೆ ನನ್ನ ಪ್ರತಿಕ್ರಿಯೆಗಳ ಮೌಲ್ಯಮಾಪನ ಮಾಡಲು ಪ್ರಯತ್ನಿಸಿದೆ. ಸ್ವಾಮಿ ದಯಾನಂದರು ಅತ್ಯಂತ ತೀಕ್ಷ್ಣ ಬುದ್ಧಿವಂತರೆಂದು, ಭಾವನಾತ್ಮಕವಾಗಿ ಅತ್ಯಂತ ಸ್ಥಿರವಾದವರು ಹಾಗೂ ವ್ಯಾವಹಾರಿಕ ವ್ಯಕ್ತಿ ಎಂದು ಕಂಡುಕೊಂಡೆ. ಅವರು ವೇದಾಂತಿಯ ಬದುಕಿಗೆ ಪರಿಪಕ್ವರಾಗಿದ್ದರು ಎಂದು ಅವರ ಆರಂಭಿಕ ಜೀವನ ಹೇಳುತ್ತದೆ. ಅಷ್ಟೊಂದು ಸ್ಪಷ್ಟವಾಗಿ ನಿರರ್ಗಳವಾಗಿ ಬೋಧಿಸಬಲ್ಲ ಅವರ ಸಾಮರ್ಥ್ಯ ಅವರಿಗಿರುವ ಒಂದು ಹೆಚ್ಚಿನ ಅನುಕೂಲ. ಅದು ಅನ್ವೇಷಕರನ್ನು ಅವರತ್ತ ಸೆಳೆಯುತ್ತದೆ. ವೇದಾಂತ ಹೇಳುವ ಸತ್ಯವೊಂದೇ ಸತ್ಯ ಮತ್ತು ಅರಿವಿನ ಶೋಧವೊಂದೇ ಅದನ್ನು ತಲುಪಲು ಇರುವ ಮಾರ್ಗ ಎಂಬುದನ್ನು ಒಪ್ಪಲು ನನಗೆ ಸ್ವಲ್ಪ ಕಷ್ಟ. ಬುದ್ಧಿಯ ಬದಲು ಹೃದಯದ ಮೂಲಕ ಸತ್ಯವನ್ನು ಅರಸಿಕೊಂಡು ಹೋಗಬೇಕೆಂದು ಕೆಲವೊಂದು ಜನರ ಸ್ವಭಾವ ಅವರನ್ನು ಒತ್ತಾಯಿಸುತ್ತದೆ ಎಂದು ನನ್ನ ನಂಬಿಕೆ. ರಾಜಯೋಗದ ವಿಧಾನಗಳು ಅವರಿಗೆ ಅನುಕೂಲಕರವಾಗಬಹುದು ಅಥವಾ ಭಕ್ತಿಯ ಮಾರ್ಗವೂ ಅನುಕೂಲಕರವಾಗ ಬಹುದು. ಸ್ವಾಮಿ ದಯಾನಂದರು ಮನೋದೈಹಿಕ ಯೋಗದ ವಿಧಾನಗಳಿಗೆ ಮತ್ತು ಭಕ್ತಿಯೊಂದಿಗೆ ಸೇರಿರುವ ಭಕ್ತಿಭಾವನೆಗಳಿಗೆ ಸ್ಥಾನ ನೀಡುತ್ತಾರೆ. ಆದರೆ ವ್ಯಕ್ತಿಯೊಬ್ಬನು ವೇದಾಂತದ ಜ್ಞಾನವನ್ನು ತೀವ್ರವಾಗಿ ಇಚ್ಛಿಸಿದರೆ ಈ ವಿಧಾನಗಳ ಅಗತ್ಯ ಬೀಳುವುದಿಲ್ಲ ಎನ್ನುವುದು ಅವರ ಆಲೋಚನೆ.

ಏನೇ ಆದರೂ ಅವರೊಬ್ಬ ಮಹಾನ್ ಗುರು. ನಾನು ಭೇಟಿಮಾಡಿದ ಬೇರೆ ಯಾವುದೇ ಸ್ವಾಮೀಜಿಗಿಂತ ಅವರ ಸಹವಾಸ ನನ್ನ ಬೌದ್ಧಿಕ ಹಸಿವನ್ನು ಚೆನ್ನಾಗಿ ತಣಿಸಿತು. ಅವರಿಗೆ ಉನ್ನತವಾದ ಬೌದ್ಧಿಕ ಸ್ಪಷ್ಟತೆ ಇದ್ದುದು ಕೂಡ ಅವರನ್ನು ನಂಬಲು ನನಗೆ ಸಾಧ್ಯವಾಯಿತು.

ದಯಾನಂದರು ಅನೇಕ ಸುಶಿಕ್ಷಿತ ಬುದ್ಧಿಜೀವಿಗಳನ್ನು ಆಕರ್ಷಿಸಿದ್ದರಲ್ಲೇನೂ ಆಶ್ಚರ್ಯವಿಲ್ಲ. ಇಂಥ ಅನೇಕರನ್ನು ನಾನು ಸಂದರ್ಶಿಸಿದೆ. ಅವರೆಲ್ಲರೂ ವಿಭಿನ್ನ ರೀತಿಯವರೆಂಬುದು ನಿಜ. ಇಲ್ಲಿ ನಾನು ಅವರಲ್ಲಿ ಒಬ್ಬರ ಬಗ್ಗೆ ಮಾತ್ರ ಹೇಳುತ್ತೇನೆ. ಸ್ವಾಮಿ ಶಾಶ್ವತಾನಂದರು ಶಾಸ್ತ್ರಗಳ ಬಗೆಗಿನ ಶಂಕರಾಚಾರ್ಯರ ಭಾಷ್ಯಗಳಂಥ ಕ್ಲಿಷ್ಟಕರವಾದ ಗ್ರಂಥಗಳನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಸಂಸ್ಕೃತ ಅಧ್ಯಯನದ ಮೇಲೆ ತಮ್ಮ ಗಮನವನ್ನು ಹೆಚ್ಚು ಕೇಂದ್ರೀಕರಿಸುವ ಉದ್ದೇಶದಿಂದ ತಮ್ಮ ಹಿಂದಿನ ಗುರುವನ್ನು ಬಿಟ್ಟುಹೊರಟರು. ಅವರು ತಮ್ಮ ಮಧ್ಯ ವಯಸ್ಸಿನಲ್ಲಿ ಸಂಸ್ಕೃತದ ವಿದ್ಯಾರ್ಥಿಯಾಗಿದ್ದರು. ಈಗ ವ್ಯಾಖ್ಯಾನಗಳನ್ನು ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು. ಅವರು ಹೇಳಿದ್ದು– "ಸನ್ಯಾಸಿಗಳಲ್ಲಿ ಎರಡು ರೀತಿಯವರಿರುತ್ತಾರೆ. ಒಬ್ಬರು ವಿದ್ವತ್ತುಳ್ಳವರು–ಇವರು ಜ್ಞಾನವುಳ್ಳವರು. ತಾನು ಹಾವೆಂದು ತಿಳಿದದ್ದು ವಾಸ್ತವವಾಗಿ ಹಗ್ಗ ಎಂದು ಗೊತ್ತಾದವನು ಹಾವಿನ ವಿಷಯಕ್ಕೆ ಸನ್ಯಾಸಿ. ಬೇರೆ ಬೇರೆ ರೀತಿಯವಾಗಿ ಕಾಣುವ ಆಭರಣಗಳೆಲ್ಲವೂ ಚಿನ್ನದ್ದು ಎಂದು ತಿಳಿದುಕೊಂಡಾಗ ಅವನು ಆ ಆಭರಣಗಳ ವಿಷಯಕ್ಕೆ ಸನ್ಯಾಸಿ. ಇವುಗಳ ಸತ್ಯ ಅವನಿಗೆ ತಿಳಿದಿದೆ. ಇನ್ನೊಂದು ಬಗೆಯ ಸಂನ್ಯಾಸಿಗಳು 'ವಿವಿದಿಶಾ' ಸನ್ಯಾಸಿಗಳು. ಅವರಿಗೆ ಬ್ರಹ್ಮನ್ ಎಂದರೆ ಗೊತ್ತಿಲ್ಲ. ಆದರೆ ಅದನ್ನು ತಿಳಿದುಕೊಳ್ಳಬೇಕೆಂಬ ಬಲವಾದ ಆಸೆಯಿದೆ. ನಾನಿನ್ನೂ ಆ ಹಂತದಲ್ಲಿದ್ದೇನೆ. ಸನ್ಯಾಸಿಯಾಗಬೇಕೆಂಬುದು ನನ್ನದೇ ಆಯ್ಕೆ. ಯಾರೇ ಆದರೂ ಗೃಹಸ್ಥನೂ ಆಗಿದ್ದು ಸತ್ಯ ಅಥವಾ ಬ್ರಹ್ಮದ ಅನ್ವೇಶಿಯೂ ಆಗುವುದು ಸಾಧ್ಯವಿಲ್ಲದ್ದು. ಏಕ ಕಾಲದಲ್ಲಿ ಎರಡು ದೋಣಿಗಳಲ್ಲಿ ಕಾಲಿಡಲು ಸಾಧ್ಯವಿಲ್ಲ. ನಾನು ಪ್ರಜ್ಞಾ ಪೂರ್ವಕವಾಗಿ ಒಂದೇ ದೋಣಿಯಲ್ಲಿ ಚಲಿಸುವುದನ್ನು ಆಯ್ಕೆಮಾಡಿಕೊಂಡಿದ್ದೇನೆ."

"ತಮ್ಮ ದೋಣಿಗಳನ್ನು ಸುಡುವುದು" ಎಂಬ ನುಡಿಗಟ್ಟಿಗೆ ಕಾರಣವಾದ ಕಥೆ ನಿಮಗೆ ಗೊತ್ತೆ?. ಕಾಡುಪ್ರಾಣಿಗಳಿಂದ ತುಂಬಿದ ಒಂದು ಕಾಡಿತ್ತು. ಒಂದು ವೇಳೆ ಅದರಲ್ಲಿ ಪಯಣಿಸುವ ಧೈರ್ಯ ನಿಮಗಿದ್ದರೆ ನಿಮ್ಮ ಪಯಣ ಒಂದು ಉತ್ಕೃಷ್ಟ ಸುಖಸಮೃದ್ಧಿಗಳಿಂದ ತುಂಬಿದ ಸಾಮ್ರಾಜ್ಯದಲ್ಲಿ ಕೊನೆಗೊಳ್ಳುತ್ತಿತ್ತು. ಜನರು ನದಿಯನ್ನು ದೋಣಿಯಲ್ಲಿ ದಾಟಿ ಅದನ್ನು ದಡಕ್ಕೆ ಕಟ್ಟಿ ಆ ನಂತರ ಕಾಡಿನಲ್ಲಿ ನಡೆದು ಹೋಗಲಾರಂಭಿಸುತ್ತಿದ್ದರು. ಅದರಲ್ಲಿ ಮುಂದುವರಿಯುವುದು ತುಂಬಾ ಭಯ ಹುಟ್ಟಿಸುತ್ತಿತ್ತಾದರೆ ತಮ್ಮ ದೋಣಿಯಿದ್ದಲ್ಲಿಗೆ ಹಿಂತಿರುಗಿ ತಾವು ಪ್ರಯಾಣ ಪ್ರಾರಂಭಿಸಿದ್ದ

ದಡಕ್ಕೆ ಹೋಗುತ್ತಿದ್ದರು. ಇನ್ನು ಕೆಲವರು ಕಾಡಿನ ಸಮೀಪದ ದಡ ಮುಟ್ಟುತ್ತಿದ್ದಂತೆ ದೋಣಿಯನ್ನು ಸುಟ್ಟುಬಿಡುತ್ತಿದ್ದರು. ಆಗ ಅವರಿಗೆ ಭಯಾನಕವಾದ ಕಾಡಿನಲ್ಲಿ ಪಯಣ ಮುಂದುವರಿಸುವುದು ಬಿಟ್ಟು ಬೇರೆ ಮಾರ್ಗವಿರುತ್ತಿರಲಿಲ್ಲ. ಪರಿಣಾಮ ಅವರು ಸುಖ ಸಮೃದ್ಧಿಯ ಸಾಮ್ರಾಜ್ಯವನ್ನು ತಲುಪುತ್ತಿದ್ದರು."

ಇಷ್ಟು ಹೇಳಿ ಅವರು ನಿಲ್ಲಿಸಿದರು.

"ನೀವು ನಿಮ್ಮ ದೋಣಿಯನ್ನು ಸುಟ್ಟುಹಾಕಿದ್ದೀರಾ?" ಎಂದು ನಾನು ಕೇಳಿದೆ.

ಅದರ ಉತ್ತರವನ್ನು ಸ್ವಾಮೀಜಿ ಒಂದು ನೀತಿಕಥೆಯ ಮೂಲಕ ಹೇಳಿದರು. "ಸನ್ಯಾಸಿಯೊಬ್ಬನು ತನ್ನ ಜ್ಞಾನೇಂದ್ರಿಯಗಳ ಮೇಲೆ ಗೆಲುವು ಸಾಧಿಸುವ ಪ್ರಯತ್ನದಲ್ಲಿ ಜೀವನವೆಲ್ಲಾ ಕಳೆದ. ನೀವು ವಿಜಯ ಸಾಧಿಸಿದಿರಾ ಎಂದು ಕೇಳಿದಾಗ ಅವನು ಸುಮ್ಮನಿದ್ದ. ಇನ್ನೇನು ಸಾಯುವ ಮುನ್ನ ಅವನು – "ಹೌದು ನಾನು ನನ್ನ ಇಂದ್ರಿಯಗಳ ಮೇಲೆ ಗೆಲುವು ಸಾಧಿಸಿದ್ದೀನಿ" – ಎಂದು ಹೇಳಿದ. ತಾನು ಎಲ್ಲಿಗೆ ತಲುಪಿದ್ದೇನೆಂದು ಸಾರ್ವಜನಿಕವಾಗಿ ಹೇಳಬೇಕಾದ ಅಗತ್ಯವಿಲ್ಲ."

ಅವರು ಸಂದರ್ಶನವನ್ನು ಒಂದು ರಹಸ್ಯಾತ್ಮಕವಾದ ಹೇಳಿಕೆಯ ಮೂಲಕ ಕೊನೆಗೊಳಿಸಿದರು.:

"ಒಬ್ಬನಿಗೆ ಸತ್ಯ ಗೊತ್ತಾಯಿತೆಂದರೆ ಸತ್ಯ ಗೊತ್ತಿಲ್ಲದ ಮನುಷ್ಯ ಯಾರೂ ಇರುವುದಿಲ್ಲ. ವಾಸ್ತವ ಜೀವನ ಒಂದು ಕನಸು. ನೀವು ನಿದ್ದೆಯಿಂದ ಎಚ್ಚೆತ್ತಾಗ ಕನಸಿನಲ್ಲಿ ನೀವು ನಿಮ್ಮೊಡನೆ ಮಾತಾಡುತ್ತಿದ್ದವರನ್ನು ಎಬ್ಬಿಸಬೇಕಾಗಿಲ್ಲ. ನಿಮ್ಮ ಮೇಲೆ ನಾನೊಂದು ಬಾಂಬ್ ಅನ್ನು ಸಿಡಿಸಿದ್ದೇನೆಂದು ನನಗೆ ಗೊತ್ತು. ಆದರೆ ನೀವು ಈ ಹೇಳಿಕೆಯನ್ನು ಗ್ರಹಿಸುವುದು ಬಹಳ ಮುಖ್ಯ. ಅದಕ್ಕೆ ನಿಮಗೆ ಸ್ವಲ್ಪ ಕಾಲಹಿಡಿಯುತ್ತದೆ."

ಈ ಹೇಳಿಕೆಯ ಬಗ್ಗೆ ವಿಚಾರ ಮಾಡಿದ ಮೇಲೆ ನಾನು ಮತ್ತೆ ನಿಮ್ಮಲ್ಲಿಗೆ ಬರುತ್ತೇನೆಂದು ಅವರಿಗೆ ಹೇಳಿದೆ.

ಅವರಿಗೆ ನನ್ನ ಅಂತಿಮ ಪ್ರಶ್ನೆ ಸಿದ್ಧವಾಗಿತ್ತು– "ಮೋಕ್ಷ ಎಂದರೇನು ಸ್ವಾಮೀಜಿ?"

"ಮೋಕ್ಷವೆಂದರೆ ಮಿತಿಗಳನ್ನು ಮೀರಿಹೋಗುವುದು–ಅರ್ಥಾತ್ ಕಾಲ, ವಸ್ತು ಮತ್ತು ಸ್ಥಳಗಳ ಮಿತಿಯನ್ನು ದಾಟಿಹೋಗುವುದು. ಈ ಲೌಕಿಕ ಪ್ರಪಂಚ ಅರಿವಿನ ಮೇಲೆ ಮಾಡಿದ ಅಧ್ಯಾರೋಪಣೆ. ಈ ಅಧ್ಯಾರೋಪದ ನಿವಾರಣೆಯೇ ಮೋಕ್ಷ." ಅವರು ಉಪನಿಷತ್ತಿನಿಂದ ಉದ್ಧರಿಸುತ್ತಿದ್ದರು. ಇದನ್ನು ತಾವೇ ಎಷ್ಟರ ಮಟ್ಟಿಗೆ ಅರ್ಥಮಾಡಿಕೊಂಡಿದ್ದರೋ ನನಗೆ ಗೊತ್ತಿಲ್ಲ. ಅವರು ಈ ಮೊದಲು ಹೇಳಿದಂತೆ ವಿದ್ವತ್ ಆಗಿರಲಿಲ್ಲ; ಇನ್ನೂ ವಿವಿದಿಶಾ ಸನ್ಯಾಸಿಯೇ ಆಗಿದ್ದರು.

* * *

ನಾನು ಹೃಷೀಕೇಶದ ಆಶ್ರಮದಲ್ಲಿದ್ದಾಗ ಇನ್ನೊಬ್ಬ ಸಾಧುವನ್ನು ಭೇಟಿಮಾಡಿದೆ. ಅವರು ಆಕರ್ಷಕವಾದ ಚಿತ್ರಕ್ಕೆ ಬಣ್ಣ ತುಂಬುತ್ತಿದ್ದರು. ಮಠಕ್ಕೆ ನಾನು ಆಗಮಿಸಿದ ಕೂಡಲೇ ತಮಿಳು ನಾಡಿನ ಒಂದು ಮಠದ ಮುಖ್ಯಸ್ಥರಾಗಿದ್ದ ಸ್ವಾಮಿ. ಎನ್ ಅವರೊಂದಿಗೆ ಮಾತನಾಡಲು ಹೇಳಲಾಯಿತು. ದಕ್ಷಿಣ ಭಾರತದಲ್ಲಿ ಕಟ್ಟಡದಲ್ಲಿ ವಾಸಮಾಡಿಕೊಂಡಿರುವ ಧಾರ್ಮಿಕ ಸಮುದಾಯವನ್ನು ಅನೇಕ ವೇಳೆ ಆಶ್ರಮ ಎಂದು ಕರೆಯದೆ ಮಠ ಎಂದು ಕರೆಯಲಾಗುತ್ತದೆ. "ಅವರು ಇಲ್ಲಿ ಮೂರು ದಿನಗಳ ಕಾಲ ಮಾತ್ರ ಇರುತ್ತಾರೆ. ಈ ಅವಕಾಶವನ್ನು ಕಳೆದುಕೊಳ್ಳಬೇಡಿ. ಕೋಟ್ಯಾಧಿಪತಿಯಾಗಿದ್ದ ಅವರು ಸನ್ಯಾಸಿಯಾಗುವ ಸಲುವಾಗಿ ಎಲ್ಲವನ್ನೂ ತ್ಯಜಿಸಿದರು" ಎಂದು ನನಗೆ ತಿಳಿಸಲಾಯಿತು.

ಈ ಹಿಂದಿನ ಸಂದರ್ಶನಗಳಲ್ಲಿ ನಾನು ಭೇಟಿಯಾಗಿದ್ದ ಯಾವುದೇ ವ್ಯಕ್ತಿಗಿಂತ ಇವರು ವಿಭಿನ್ನವಾಗಿದ್ದರು. ಅವರು ತಮ್ಮ ಕುಟೀರಕ್ಕೆ ನನ್ನನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಕಪ್ಪನೆಯ ಸ್ಥೂಲ ದೇಹಿಯಾಗಿದ್ದ ಅವರು ಹಾಸಿಗೆಯ ಮೇಲೆ ಮಲಗಿದ್ದವರು ನನ್ನನ್ನು ನೋಡಿದ ಕೂಡಲೇ ತಮ್ಮ ಎಪ್ಪತ್ತೇಳು ವರ್ಷ ವಯಸ್ಸನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ದಡಾರನೆ ಹಾಸಿಗೆಯಿಂದ ಮೇಲಕ್ಕೆ ನೆಗೆದು ಒಂದು ಕುರ್ಚಿಯ ಮೇಲೆ ಹೋಗಿ ಕುಳಿತುಕೊಂಡು ನನಗೆ ನೆಲದ ಮೇಲೆ ಹಾಸಿದ್ದ ಚಾಪೆಯ ಮೇಲೆ ಕುಳಿತುಕೊಳ್ಳಲು ಸೂಚಿಸಿದರು. ನನ್ನ ಗುರುತು, ವೃತ್ತಿ, ಮತ್ತು ನನ್ನ ಭೇಟಿಯ ಉದ್ದೇಶದ ಬಗ್ಗೆ ಹೇಳಿದಾಗ ಅವರು ತುಂಟನಗೆ ನಕ್ಕರು.

"ಹಾಗಾದರೆ ನೀವು ನನ್ನ ಮನೋವಿಶ್ಲೇಷಣೆ ಮಾಡಬಯಸುತ್ತೀರಿ. ಮಾಡಿ, ಮಾಡಿ. ಎಪ್ಪತ್ತೇಳು ವರ್ಷದ ಮುದುಕನಿಗೆ ಬಚ್ಚಿಡುವುದೇನಿರುತ್ತೆ? ನಿಮಗೆ ಗೊತ್ತೇನು ನಾನೊಬ್ಬ ಯಶಸ್ವೀ ಕಲಾವಿದನಾಗಿದ್ದೆ. ಶ್ರೀಮಂತನಾಗಿದ್ದೆ. ನನ್ನ ವೃತ್ತಿಯಲ್ಲಿ ತುಂಬ ಖ್ಯಾತಿ ಇತ್ತು. ಆದರೆ ಎಲ್ಲವನ್ನೂ ರಾತ್ರೋರಾತ್ರಿ ಬಿಟ್ಟುಕೊಟ್ಟುಬಿಟ್ಟೆ."

"ಹೇಗಾಯಿತು ಅದೆಲ್ಲ?"

ನೋಡಿ ನಾನೊಬ್ಬ ಹೆಸರಾಂತ ಛಾಯಾಚಿತ್ರಗ್ರಾಹಕ. ಹೆಸರಾಂತ ಕಲಾವಿದರು ರಚಿಸಿದ ಕಲಾಕೃತಿಗಳು, ಶಿಲ್ಪಗಳು ಇತ್ಯಾದಿಗಳ ಫೋಟೋಗಳನ್ನು ಮುದ್ರಿಸುತ್ತಿದ್ದೆ. ಅವರ ಕೃತಿಗಳ ಪರಿಮಿತ ಮುದ್ರಣಗಳನ್ನು, ಕೆಲವೊಮ್ಮೆ ಒಂದೊಂದೇ ಪ್ರತಿಯನ್ನು ನೀಡುತ್ತಿದ್ದೆ. ನನ್ನ ಕೆಲಸ ಈ ಫೋಟೋಗಳನ್ನು ಉತ್ಕೃಷ್ಟ ರೂಪದಲ್ಲಿ ಪುನರ್ನಿರ್ಮಿಸುವುದಾಗಿತ್ತು. ನಾನು ತುಂಬ ಹಣ ಸಂಪಾದಿಸಿದೆ, ನನ್ನ ಸ್ಟುಡಿಯೋ ನ್ಯೂಯಾರ್ಕ್‌ನಲ್ಲಿತ್ತು. ಐದು ವರ್ಷಗಳ ಹಿಂದೆ ಎಲ್ಲವನ್ನೂ ಬಿಟ್ಟುಬಿಟ್ಟೆ."

"ಹೀಗೆ ಇದನ್ನು ನಿಮ್ಮಿಂದ ಮಾಡಿಸಿದ್ದು ಯಾವುದು?"

"ಒಂದು ರೀತಿಯಲ್ಲಿ ಹೇಳಬೇಕೆಂದರೆ ಹೀಗೆ ನಾನು ಮಾಡಲೇಬೇಕಾಗಿ ಬಂತು. ನನ್ನ ಪೂರ್ವಜರಿಗೆ ಈ ಮಠದೊಂದಿಗೆ ಸಂಬಂಧವಿತ್ತು. ಆರು ತಲೆಮಾರುಗಳ ಹಿಂದೆ

ನನ್ನ ತಾತ ಈ ಮಠದ ಮುಖ್ಯಸ್ಥರಾಗಿದ್ದರು. ಅನಂತರದ ತಲೆಮಾರಿನವರು ತಪ್ಪು ಹಾದಿಗಿಳಿದರು. ಕೊನೆಯ ಮುಖ್ಯಸ್ಥರು ವಿಲ್ ನಲ್ಲಿ ತಮ್ಮ ಮಠವನ್ನು ನನ್ನ ಹೆಸರಿಗೆ ಬರೆದರು.

"ನಾನು ಭಾರತಕ್ಕೆ ಬಂದಾಗಲೆಲ್ಲ ಮಠಕ್ಕೆ ಭೇಟಿನೀಡುತ್ತಿದ್ದೆ ಮತ್ತು ಮಠದ ಮುಖ್ಯಸ್ಥರನ್ನು ಚೆನ್ನಾಗಿ ತಿಳಿದಿದ್ದೆ. ಒಂದು ದಿನ ಅವರು ಮಠವನ್ನು ನನಗೆ ವಹಿಸಿಕೊಡಬೇಕೆಂಬ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಹೀಗಾಗಿ ನಾನು ನನ್ನ ಪೂರ್ವಜರ ವೃತ್ತಿಗೆ ಮರಳಿದೆ." – ಹೀಗೆ ಹೇಳುತ್ತ ನಕ್ಕರು.

"ಅದು ಕಷ್ಟಕರವಾದ ನಿರ್ಧಾರವಾಗಿತ್ತೆ?" –ನಾನು ಕೇಳಿದೆ.

"ಹೌದು ಮತ್ತು ಇಲ್ಲ. ಮೊದಲಿಗೆ ಇದನ್ನು ನಾನು ಗಂಭಿರವಾಗಿ ತೆಗೆದುಕೊಂಡಿರಲಿಲ್ಲ. ಮಠದ ಮುಖ್ಯಸ್ಥರು ಮಠವನ್ನು ನನ್ನ ಹೆಸರಿಗೆ ವಿಲ್ ಮಾಡಲಾಗಿದೆ ಎಂದು ಹೇಳಿದಾಗಲೂ ಆ ಮಾತಿನ ಅರ್ಥ, ಅಂದರೆ ಅದರ ಜವಾಬ್ದಾರಿ ನನಗೆ ಹೊಳೆಯಲಿಲ್ಲ. ಆಮೇಲೆ ನನಗೆ ನಾನೇ ಹೇಳಿಕೊಂಡೆ: "ಮಠದ ಮುಖ್ಯಸ್ಥರು ಇನ್ನೂ ಹಲವಾರು ವರ್ಷ ಬದುಕಿರುತ್ತಾರೆ. ಇದೆಲ್ಲದರ ಬಗ್ಗೆ ನಾನು ಈಗೇಕೆ ತಲೆಕೆಡಿಸಿಕೊಳ್ಳುವುದು". ಆದರೆ ಅವರು ಇದ್ದಕ್ಕಿದ್ದಂತೆ ಹೋಗಿಬಿಟ್ಟರು.. ಪರಿಣಾಮ ಮಠದ ಹೊಣೆಗಾರಿಕೆ ವಹಿಸಿಕೊಳ್ಳುವ ಸಲುವಾಗಿ ನಾನು ರಾತ್ರೋ ರಾತ್ರಿ ಸಂನ್ಯಾಸ ತೆಗೆದುಕೊಳ್ಳಬೇಕಾಯಿತು."

"ಒಂದು ವೇಳೆ ನೀವು ಜವಾಬ್ದಾರಿ ವಹಿಸಿಕೊಳ್ಳದಿದ್ದರೇನಾಗುತ್ತಿತ್ತು?"

"ನಾನೊಂದು ವೇಳೆ ಅದರ ಜವಾಬ್ದಾರಿ ವಹಿಸಿಕೊಳ್ಳದಿದ್ದರೆ ಯಾರಿಗೆ ವಹಿಸಿಕೊಡಬೇಕೆಂಬುದರ ತೀರ್ಮಾನವನ್ನೂ ನಾನೇ ತೆಗೆದುಕೊಳ್ಳಬೇಕೆಂದೂ ವಿಲ್‌ನಲ್ಲೇ ತಿಳಿಸಲಾಗಿತ್ತು. ಆದರೆ ಕಾಲ ಕಳೆದಂತೆಲ್ಲ ಮಠಕ್ಕೆ ಲಗತ್ತಾದ ಸ್ವಾಮಿಗಳು ನಿಷ್ಪ್ರಯೋಜಕರಾಗಿ ಬಿಟ್ಟಿದ್ದರೆಂಬುದು ಸ್ಪಷ್ಟವಾಗಿತ್ತು. ಮಠವನ್ನು ಅದು ಹೋದ ದಾರಿಗೇ ಬಿಟ್ಟುಬಿಟ್ಟರೆ ಮಠ ಸೊರಗಿಯೇ ಹೋಗುತ್ತದೆಂದು ಅವರುಗಳು ಅರ್ಥಮಾಡಿಕೊಳ್ಳಲಿಲ್ಲ. ಹಾಗಾಗಿ ಮೊದಲಿನ ಮುಖ್ಯಸ್ಥರು ನಿಧನರಾದಾಗ ನನಗೆ ನಿಜಕ್ಕೂ ಬೇರೆ ಆಯ್ಕೆಯೇ ಇರಲಿಲ್ಲ. ಆದ್ದರಿಂದ ಸನ್ಯಾಸ ತೆಗೆದುಕೊಳ್ಳಲೇಬೇಕಾಗಿತ್ತು ಮತ್ತು ಈ ಹಡಗನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಬೇಕಾಗಿತ್ತು. ಹೇಗೂ ನನಗೆ ಎಪ್ಪತ್ತೆರಡು ವರ್ಷ ವಯಸ್ಸಾಗಿತ್ತು. ಇಡೀ ಜೀವಮಾನವೆಲ್ಲ ಶ್ರಮವಹಿಸಿ ಕೆಲಸ ಮಾಡಿದ್ದೆ. ಅಪಾರವಾಗಿ ಹಣ ಸಂಪಾದಿಸಿದ್ದೆ. ಮತ್ತು ಇದನ್ನು ಒಪ್ಪಿಸಿಕೊಡಲು ನನಗೆ ಕುಟುಂಬವಿರಲಿಲ್ಲ. ಹಾಗಾಗಿ ಇಲ್ಲಿ ನನಗೆ ಮಾಡುವಂಥದೇನೋ ಒಂದು ಇತ್ತು ಹಾಗೂ ನನ್ನ ಉಳಿದ ಜೀವನವನ್ನು ಸಾರ್ಥಕಪಡಿಸಿ ಕೊಳ್ಳಬಹುದಾದ ಅವಕಾಶವಿತ್ತು. ಅದರ ಜೊತೆಗೆ ಮಠವನ್ನು ವಹಿಸಿಕೊಳ್ಳುವುದರಿಂದ ನನ್ನ ಕನಸನ್ನು ಸಾಕಾರಗೊಳಿಸಲು ಸಹಾಯಕವಾಗುತ್ತದೆ." –ಎಂದರು.

"ಯಾವ ಕನಸು?"

"ಅದನ್ನು ಹೇಳಬೇಕೆಂದರೆ ನಾನು ಹಿಂದಕ್ಕೆ ಹೋಗಿ ನಿಮಗೆ ನನ್ನ ಜೀವನದ ಕಥೆಯನ್ನು ಹೇಳಬೇಕಾಗುತ್ತದೆ. ಹೇಗೂ ಅದೇ ತಾನೆ ನೀವು ತಿಳಿದು ಕೊಳ್ಳಬೇಕೆಂದಿರುವುದು?"

'ಹೌದು' ಎಂದು ಹೇಳಲು ಅವರು ತನ್ನ ಕಥೆಯನ್ನು ಹೇಳಲಾರಂಭಿಸಿದರು.

"ನಾನು ಒಡೆದ ಕುಟುಂಬದಿಂದ ಬಂದವನು. ನನಗೆ ಐದು ವರ್ಷ ವಯಸ್ಸಾಗಿದ್ದಾಗ ನನ್ನ ತಾಯಿ ತೀರಿಕೊಂಡರು. ನನಗೆ ಆಕೆಯ ನೆನಪೇ ಇಲ್ಲ. ನಮ್ಮ ತಂದೆಯದೊಂದು ಸಣ್ಣ ವ್ಯಾಪಾರವಿತ್ತು. ಅವರೊಬ್ಬ ಸ್ತ್ರೀಲೋಲ, ಕುಡುಕ. ಹಾಗಾಗಿ ಅವರೊಂದಿಗಿನ ನನ್ನ ಬದುಕು ಸಹಿಸಲಸಾಧ್ಯವಾದುದಾಗಿತ್ತು. ನನಗೆ ಹತ್ತು ವರ್ಷ ವಯಸ್ಸಾಗಿದ್ದಾಗ ಅವರು ನನ್ನನ್ನು ಥಿಯಸಾಫಿಕಲ್ ಸೊಸೈಟಿಗೆ ಲಗತ್ತಾಗಿದ್ದ ಒಂದು ಮಾಂಟೆಸ್ಸೊರಿ ಶಾಲೆಗೆ ಸೇರಿಸಿದರು. ಸ್ವತಃ ಮರಿಯಾ ಮಾಂಟೆಸರಿ ಸ್ಥಾಪಿಸಿದ್ದ ಶಾಲೆ ಅದಾಗಿತ್ತು. ಪ್ರಾಚೀನ ಕಲಾಪ್ರಕಾರಗಳನ್ನು ಕಲಿಸುತ್ತಿದ್ದ, ಹೆಸರಾಂತ ಕಲಾಕ್ಷೇತ್ರದ ಶಾಲೆಯನ್ನು ಸ್ಥಾಪಿಸಿದ್ದ ರುಕ್ಮೀಣೀದೇವಿ ಅರುಂಡೇಲ ಅವರು ಅದನ್ನು ನಡೆಸುತ್ತಿದ್ದರು. ನಮ್ಮ ತಂದೆ ನನಗಾಗಿ ಮಾಡಿದ ಒಂದೇ ಒಂದು ಒಳ್ಳೆಯ ಕೆಲಸವೆಂದರೆ ಅಂಥದೊಂದು ಶಾಲೆಗೆ ನನ್ನನ್ನು ಸೇರಿಸಿದ್ದು. ಅದಕ್ಕಾಗಿ ನಾನು ನಮ್ಮ ತಂದೆಗೆ ನಿಜಕ್ಕೂ ಕೃತಜ್ಞ.

"ಹಳ್ಳಿಯ ಬಡಹುಡುಗನಾದ ನನಗೆ ಈ ಶಾಲೆ ಸ್ವರ್ಗವಾಗಿತ್ತು. ವಿಶಾಲವಾದ ಪ್ರಾಂಗಣ, ಹಸಿರಾದ ಗಿಡ ಮರಗಳು ಉಚ್ಚಮಟ್ಟದ ಶಿಕ್ಷಣ, ಪ್ರಪಂಚದ ಎಲ್ಲ ಪ್ರಮುಖ ವ್ಯಕ್ತಿಗಳೊಂದಿಗೆ ಸಂಪರ್ಕ. ನಾನೇನೂ ಪ್ರತಿಭಾವಂತ ವಿದ್ಯಾರ್ಥಿಯಾಗಿರಲಿಲ್ಲ, ಒಬ್ಬ ಸಾಧಾರಣ ಮಟ್ಟದ ವಿದ್ಯಾರ್ಥಿ. ಆದರೆ ಕರಕುಶಲ ಕಲೆಗಳು, ವಸ್ತುಗಳನ್ನು ಮಾಡುವುದು, ಚಿತ್ರ ಬರೆಯುವುದು, ಕೈಯಿಂದ ಮರದ ಶಿಲ್ಪಗಳನ್ನು ಮಾಡುವುದು ಇಂಥವನ್ನೆಲ್ಲ ನಾನು ತುಂಬ ಆನಂದಿಸಿದೆ. ನನ್ನ ಈ ಸಾಮರ್ಥ್ಯವನ್ನು ಗಮನಕ್ಕೆ ತೆಗೆದುಕೊಳ್ಳಲಾಯಿತು. ಶಾಲಾ ಮುಖ್ಯೋಪಾಧ್ಯಾಯರ ಕುಟುಂಬ ಒಂದು ರೀತಿಯಲ್ಲಿ ನನ್ನನ್ನು ದತ್ತು ತೆಗೆದುಕೊಂಡಿತು. ಹಲವಾರು ಸಲ ನಾನು ಅವರ ಮನೆಗೆ ಹೋಗುತ್ತಿದ್ದೆ ಮತ್ತು ಮನೆಯಲ್ಲಿ ಮಾಡಿದ ಊಟ ನನಗೆ ದೊರೆಯುತ್ತಿತ್ತು. ಅವರು ಮತ್ತು ಅವರ ಕುಟುಂಬ ನನಗೆ ಬಹಳಷ್ಟನ್ನು ನೀಡಿತು. ಅವರಿಗೆ ಮಗನ ಹಾಗಿದ್ದೆ. ಅವರು ನನಗೆ ಮಾಡಿದ ಒಳಿತನ್ನು ನಾನು ಎಂದೂ ಮರೆಯಲಿಲ್ಲ. ಒಂದು ರೀತಿಯಲ್ಲಿ ನಾನು ಅವರ ಋಣ ತೀರಿಸುತ್ತ ಇದ್ದೇನೆ. ಅವರ ಮಕ್ಕಳು ಮೊಮ್ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ , ಕೆಲಸ ಕೊಡಿಸಲಿಕ್ಕೆ ಹೀಗೆ ಹಲವು ರೀತಿಯಲ್ಲಿ ಸಹಾಯ ಮಾಡಿದ್ದೇನೆ. ಈಗ ಅವರಲ್ಲಿ ಅನೇಕರು ವಿದೇಶಗಳಲ್ಲಿ ನೆಲೆಸಿದ್ದಾರೆ.

"ನನ್ನ ಬಗ್ಗೆ ವೈಯಕ್ತಿಕ ಆಸಕ್ತಿ ತೋರಿಸಿದ ಇನ್ನೊಬ್ಬ ವ್ಯಕ್ತಿ ಎಂದರೆ ಸ್ವಯಂ ರುಕ್ಮಿಣೀದೇವಿಯವರು. ಶಾಲೆಗೆ ಸೇರಿಸಿದ ಒಂದೆರಡು ವರ್ಷಗಳ ನಂತರ ನನ್ನ ತಂದೆ ನನಗೆ ಖರ್ಚಿಗೆ ಹಣ ಕೊಡುವುದನ್ನು ನಿಲ್ಲಿಸಿದರು. ನನಗೇ ಗೊತ್ತಿಲ್ಲದ ಹಾಗೆ ನನ್ನ

ಪೋಷಣೆಯ ಸಲುವಾಗಿ ಉಳಿದ ನನ್ನ ಶಾಲಾ ಜೀವನದ ಅವಧಿ ಪರ್ಯಂತವೂ ರುಕ್ಮಿಣೀ ದೇವಿಯವರು ಖರ್ಚಿನ ಹಣ ನೀಡುತ್ತಿದ್ದರು. ಶಾಲಾಶಿಕ್ಷಣ ಮುಕ್ತಾಯವಾದ ಮೇಲೆ ರುಕ್ಮಿಣೀ ದೇವಿಯವರ ಬಳಿಗೆ ಹೋಗಿ ನಾನೀಗ ನನ್ನ ಓದು ನಿಲ್ಲಿಸಿ ಯಾವುದಾದರೂ ಕೆಲಸ ಹುಡುಕಬೇಕಾಗಿದೆಯೆಂದು ಹೇಳಿದೆ. ಆಗಲೇ ಅವರು ನನ್ನ ವಿದ್ಯಾಭ್ಯಾಸದ ಸಲುವಾಗಿ ಮತ್ತು ಖರ್ಚಿನ ಸಲುವಾಗಿ ಹಣ ನೀಡುತ್ತಿದ್ದುದರ ಬಗ್ಗೆ ತಿಳಿಸಿದ್ದು. ಕೃತಜ್ಞತೆಯಿಂದ ನನ್ನ ಕಣ್ಣಿನಿಂದ ನೀರು ಸುರಿಯತೊಡಗಿತು. ಅವರು ಯಾವ ರೀತಿಯಲ್ಲಿ ನನ್ನ ಸೇವೆ ಬಯಸಿದರೂ ಮಾಡುವುದಾಗಿ ಪ್ರತಿಜ್ಞೆಮಾಡಿದೆ. ಅವರು ನನ್ನ ಜವಾಬ್ದಾರಿ ಹೊತ್ತುಕೊಂಡರು. ಸುಪ್ರಸಿದ್ಧ ಡಚ್ ಕಲಾವಿದರೊಬ್ಬರ ಮಾರ್ಗದರ್ಶನದಲ್ಲಿ ನನ್ನನ್ನು ಇರಿಸಿದರು. ಆ ಕಲಾವಿದರಿಂದ ನಾನು ನನ್ನ ಹದಿನೈದನೇ ವಯಸ್ಸಿನಿಂದಲೇ ಛಾಯಾಗ್ರಹಣ, ಚಿತ್ರ ರಚನೆ, ಮತ್ತು ಪೀಠೋಪಕರಣಗಳನ್ನು ವಿನ್ಯಾಸಗೊಳಿಸುವುದನ್ನು ಕಲಿತೆ. ಆಮೇಲೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ನ್ಯೂಯಾರ್ಕ್‌ಗೆ ಕಳಿಸಲಾಯಿತು. ನನ್ನ ಬೆಳವಣಿಗೆಯನ್ನು ನೋಡಿ ನಾನು ಅತ್ಯಂತ ಶ್ರೇಷ್ಠರಿಂದ ಕಲಿಯಬೇಕೆಂದು ಆಶಿಸಿದರು. ನ್ಯೂಯಾರ್ಕಿನಲ್ಲಿ ವರ್ಣಚಿತ್ರ ಛಾಯಾಗ್ರಹಣದಲ್ಲಿ ಕಲರ್ ಪ್ರೊಸೆಸಿಂಗ್ ನಲ್ಲಿ ತರಬೇತಿ ಪಡೆದೆ. ಜರ್ಮನ್ ವಿಶೇಷ ಪರಿಣತರಿಂದ ಲೋಹದ ಮೇಲೆ ಕೆತ್ತನೆ ಮಾಡುವುದನ್ನು ಕಲಿತೆ. ರಂಗದ ಮೇಲಿನ ಬೆಳಕಿನ ವ್ಯವಸ್ಥೆಯ ಬಗ್ಗೆ ತಿಳಿದುಕೊಂಡೆ. ಪ್ರಾಸಂಗಿಕವಾಗಿ ಮದ್ರಾಸಿನಲ್ಲಿ ವರ್ಣಛಾಯಾಚಿತ್ರವನ್ನು ಪ್ರೊಸೆಸ್ ಮಾಡುವುದನ್ನು ಪ್ರಾರಂಭಿಸಿದ ಮೊದಲ ವ್ಯಕ್ತಿ ನಾನೇ. ಭಾರತದಲ್ಲಿ ಮತ್ತು ಜಗತ್ತಿನಾದ್ಯಂತ ಏರ್ಪಡಿಸಲಾಗಿದ್ದ ಕಲಾಕ್ಷೇತ್ರದ ಎಲ್ಲ ನೃತ್ಯ ಮತ್ತು ನಾಟಕದ ಕಾರ್ಯಕ್ರಮಗಳಲ್ಲಿ ಬೆಳಕಿನ ವ್ಯವಸ್ಥೆಯ ಹೊಣೆಗಾರಿಕೆ ನನ್ನದೇ ಆಗಿತ್ತು. ಅಮೆರಿಕಾದಲ್ಲಿ ಕಲಾವಿದರು ತಮ್ಮ ಕೃತಿಗಳ ವಿಶೇಷ ಮುದ್ರಣ ಮಾಡಿಕೊಡಬೇಕೆಂದು ನನ್ನನ್ನು ಕೇಳಿದಾಗ ಅದನ್ನು ಮಾಡಿಕೊಟ್ಟು ಹೆಸರಾದವನು ನಾನೇ. ಈ ಅವಧಿಯಲ್ಲೇ ನ್ಯೂಯಾರ್ಕ್‌ನಲ್ಲಿ ನನ್ನದೇ ಅದ ಸ್ಟುಡಿಯೋ ಸ್ಥಾಪಿಸಿದೆ. ಕಲಾವಿದರೊಂದಿಗೆ ನಾನು ಗ್ರೀನ್‌ವಿಚ್ ಗ್ರಾಮದಲ್ಲಿ ವಾಸಮಾಡಿದೆ. ಪ್ರಸಿದ್ಧ ವ್ಯಕ್ತಿಗಳಿಗೆ ಪುಸ್ತಕಗಳ ವಿನ್ಯಾಸ ರಚಿಸಿಕೊಟ್ಟೆ.

"ನಾನು ಎಂದೂ ಮದುವೆಯಾಗಲಿಲ್ಲ. ಯುವಕನಾಗಿದ್ದಾಗ ಒಂದು ಹುಡುಗಿಯನ್ನು ಪ್ರೀತಿಸಿದೆ. ಹುಡುಗಿ ಬ್ರಾಹ್ಮಣಳಾಗಿದ್ದು ನಾನು ಬ್ರಾಹ್ಮಣೇತರನಾಗಿದ್ದರಿಂದ ಅವಳನ್ನು ಮದುವೆಯಾಗಲು ಸಾಧ್ಯವಾಗಲಿಲ್ಲ. ಅದರರ್ಥ ನಾನು ಲೈಂಗಿಕ ಜೀವನದಿಂದ ವಿಮುಖನಾಗಿದ್ದೆ ಎಂದಲ್ಲ. ಕಲಾವಿದನಿಗೆ ಕಾಮಾಪೇಕ್ಷೆ ಅಗತ್ಯ. ನಾನು ಸಾಕಷ್ಟು ಸಂಬಂಧಗಳನ್ನು ಹೊಂದಿದ್ದೆ. ಮದ್ಯಪಾನ ಮತ್ತು ಧೂಮಪಾನದಿಂದ ದೂರವಿದ್ದೆ. ನ್ಯೂಯಾರ್ಕ್‌ನಲ್ಲಿ ನನ್ನ ಕನಸು ಬೆಳೆಯತೊಡಗಿತು.

"ದಕ್ಷಿಣ ಭಾರತದಲ್ಲಿ 35000ಕ್ಕೂ ಹೆಚ್ಚು ದೇವಾಲಯಗಳಿವೆ. ಇವುಗಳಲ್ಲಿ ಕಡೇ ಪಕ್ಷ 5000 ದೇವಾಲಯಗಳಂತೂ ಪ್ರಸಿದ್ಧವಾದವು. ಈ ದೇವಾಲಯಗಳಲ್ಲಿ ವಿಶೇಷ ಆಚರಣೆಗಳನ್ನು ನಡೆಸಲಾಗುತ್ತದೆ. ಅವಕ್ಕೆ ಜ್ಞಾನ ಮತ್ತು ಕಲಾಕುಶಲತೆ ಬೇಕಾಗುತ್ತದೆ.

ಪ್ರತಿ ದೇವಸ್ಥಾನಕ್ಕೂ ನಾದಸ್ವರ ಸಂಗೀತದಲ್ಲಿ, ಹಾಡುಗಾರಿಕೆಯಲ್ಲಿ, ಆಧ್ಯಾತ್ಮ ಸಂಗೀತದಲ್ಲಿ ಪರಿಣತರಾದವರು, ದೇವರ ಮೂರ್ತಿಗಳನ್ನು ಮಾಡಬಲ್ಲ ಶಿಲ್ಪಿಗಳು, ಮೂರ್ತಿಗಳಿಗೆ ಅಗತ್ಯವಾದ ಒಡವೆಗಳನ್ನು ಮಾಡಬಲ್ಲವರು, ಹಬ್ಬ ಹರಿದಿನಗಳಂದು ದೇವರ ಮೂರ್ತಿಗಳನ್ನು ಊರಿನಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯಲು ಬೇಕಾದ ರಥಗಳನ್ನು ಮಾಡುವವರು, ಮಂತ್ರಗಳನ್ನು ಹೇಳುವವರು ಇವರೆಲ್ಲ ಬೇಕಾಗುತ್ತಾರೆ. ಈ ಕಲೆಗಳು ಮತ್ತು ಕುಶಲ ಕೆಲಸಗಳಲ್ಲಿ ಪರಿಣತರಾದವರು ಬರುಬರುತ್ತಾ ವೃದ್ಧರಾಗುತ್ತಿದ್ದಾರೆ ಮತ್ತು ತಮ್ಮ ಕಲಾ ಕೌಶಲಗಳನ್ನು ಮುಂದಿನ ತಲೆಮಾರಿನವರಿಗೆ ತಟಾಯಿಸದೆಯೆ ನಿಧನರಾಗುತ್ತಿದ್ದಾರೆ. ಕಂಡಹಾಗೆಯೇ ಈ ಕುಶಲಕಲೆಗಳಿಗೆ ಮುಂದೇನೂ ಭವಿಷ್ಯವಿಲ್ಲವೆಂದು ತಿಳಿದು ತಮ್ಮ ಕುಟುಂಬದ ಕಿರಿಯರಿಗೆ ಇವನ್ನು ಹೇಳಿಕೊಡುತ್ತಿಲ್ಲ. ಮುಂದಿನ ತಲೆಮಾರಿನಲ್ಲೂ ಈ ಕಲೆಗಳು ಮತ್ತು ಕುಶಲ ಕೆಲಸಗಳನ್ನು ಜೀವಂತವಾಗಿ ಉಳಿಸದೆ ಹೋದರೆ ಇವು ಸಾಯುತ್ತವೆ ಮತ್ತು ದೇವಸ್ಥಾನದಲ್ಲಿ ಈ ಆಚರಣೆಗಳನ್ನು ನಡೆಸುವವರೇ ಇರುವುದಿಲ್ಲ. ಹಾಗಾದಲ್ಲಿ ದೇವಾಲಯಗಳೂ ಮೃತಿಹೊಂದುತ್ತವೆ. ನಮ್ಮ ಸಾಂಸ್ಕೃತಿಕ ಪರಂಪರೆಯ ಜೀವಂತ ವಾಹಕಗಳಾಗಿ ಉಳಿಯುವ ಬದಲು ಈ ದೇವಾಲಯಗಳು ಪುರಾತತ್ತ್ವದ ಮಾದರಿಗಳಾಗಿಬಿಡುತ್ತವೆ.

"ದೇವಾಲಯಗಳಿಗೆ ಸಂಬಂಧಿಸಿದ ಎಲ್ಲ ಕಲಾ ಪ್ರಕಾರಗಳನ್ನೂ ಪುನರುಜ್ಜೀವನಗೊಳಿಸಬೇಕೆಂಬುದು ನನ್ನ ಕನಸು. ನಮ್ಮ ಆಧ್ಯಾತ್ಮಿಕ ಸಂಪ್ರದಾಯಗಳಲ್ಲಿ ಅದರಲ್ಲೂ ವಿಶೇಷವಾಗಿ ವೇದಾಂತದಲ್ಲಿ ಅಭಿರುಚಿಯನ್ನು ಪುನರುಜ್ಜೀವನಗೊಳಿಸಬೇಕೆಂದೂ ನನ್ನ ಕನಸು. ಅದರಿಂದ ಪ್ರಪಂಚದಾದ್ಯಂತ ಹರಡಿರುವ ಹಿಂದೂಗಳು ತಮ್ಮ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳೊಂದಿಗೆ ಸಂಪರ್ಕವಿಟ್ಟುಕೊಳ್ಳಲು ಸಾಧ್ಯವಾಗುತ್ತದೆ.

"ಈ ಎಲ್ಲ ಕಲಾಪ್ರಕಾರಗಳನ್ನು ಮತ್ತು ವೇದಾಂತವನ್ನು ಕಲಿಸುವ ವಿಶ್ವವಿದ್ಯಾಲಯವೊಂದನ್ನು ಪ್ರಾರಂಭಿಸಬೇಕೆಂದಿದ್ದೇನೆ. ಮಠದೊಂದಿಗೆ ಸಂಬಂಧವಿದ್ದಿತಾದರೆ ಜೀವನದಲ್ಲಿ ನನಗೊಂದು ನೆಲೆ ಸಿಕ್ಕಂತಾಗಿ ಅಲ್ಲಿಂದ ಆ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ.

ಇದನ್ನೆಲ್ಲ ಹೇಳುತ್ತ ಹೋದಂತೆ ಅವರ ದನಿ ತಾರಕಕ್ಕೇರಿತು, ಅವರ ಮುಖ ಕೆಂಪಾಯಿತು ಮತ್ತು ಅವರ ಕಣ್ಣುಗಳಿಂದ ಅಶ್ರುಧಾರೆ ಹರಿಯತೊಡಗಿತು. ಆಗ ಅವರೂ ಎಪ್ಪತ್ತೇಳು ವರ್ಷ ವಯಸ್ಸಾದವರಂತೆ ಕಾಣದೆ ಹದಿನೇಳು ವರ್ಷದವರಂತೆ ಕಾಣುತ್ತಿದ್ದರು!

ಅವರು ತಮ್ಮ ಮಾತಿನಂತೆ ನಡೆದುಕೊಂಡರು. ಮೊದಲಿಗೆ ಮಠದ ಆಡಳಿತ ವ್ಯವಸ್ಥೆಗೆ ಸರಿಯಾದ ತಳಹದಿ ಹಾಕಿದರು. ದೇವಾಲಯಕ್ಕೆ ಸಂಬಂಧಿಸಿದ ಎಲ್ಲ ಕಲಾ ಪ್ರಕಾರಗಳಲ್ಲಿ ನಾಲ್ಕು ವರ್ಷಗಳ ತರಗತಿ ಪ್ರಾರಂಭಿಸಿದ್ದಾರೆ. ಪ್ರತಿ ವರ್ಷ ಪ್ರತಿ ವರ್ಗದಲ್ಲಿ ಐವತ್ತು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಾರೆ. ಅತ್ಯುತ್ತಮ ಕಲಾವಿದರನ್ನು ಅಧ್ಯಾಪಕರನ್ನಾಗಿ

ನೇಮಿಸಿಕೊಂಡು ಅತಿಹೆಚ್ಚಿನ ವೇತನ ನೀಡುತ್ತಿದ್ದಾರೆ. ದೇವಾಲಯಗಳೊಂದಿಗೆ ಯಾವುದಾರೊಂದು ರೀತಿಯ ಸಂಬಂಧ ಹೊಂದಿರುವವರ ಮಕ್ಕಳಿಗೆ ಆದ್ಯತೆಯನ್ನು ನೀಡಲಾಗುತ್ತದೆ. ಹೀಗೆ ಈ ವಿದ್ಯಾಲಯ ಅಭಿವೃದ್ಧಿ ಹೊಂದುತ್ತಿದೆ.

ಇದೀಗ ಅವರದು ಇನ್ನೊಂದು ಕನಸಿದೆ. ಅವರು ಹೇಳಿದರು–

"ಭಾರತದ ಹೊರಗೆ ವಾಸಿಸುತ್ತಿರುವ ಹಿಂದುಗಳು ನಮ್ಮ ದೇವಾಲಯ ಸಂಪ್ರದಾಯಗಳಿಂದ ಅದೆಷ್ಟು ಸಂಪರ್ಕ ಕಳೆದುಕೊಂಡಿದ್ದಾರೆಂಬುದು ನಿಮಗೆ ಗೊತ್ತೆ? ಅಮೆರಿಕಾವೊಂದರಲ್ಲೇ 37000 ದೇವಾಲಯಗಳನ್ನು ಕಟ್ಟಿದ್ದಾರೆ.. ಆದರೆ ದೇವಾಲಯದ ಆಚರಣೆಗಳನ್ನು ನಡೆಸಬಲ್ಲ ಕಲಾವಿದರೆಲ್ಲಿದ್ದಾರೆ? ಅಮೆರಿಕಾದಲ್ಲಿ ನಾನು ಇಂಥದೊಂದು ಶಾಲೆಯನ್ನು ತೆರೆಯಬೇಕೆಂದಿದ್ದೇನೆ. ನ್ಯೂಯಾರ್ಕ್‌ನಲ್ಲಿ ನಾನು ಐವತ್ತು ಎಕರೆ ಭೂಮಿಯನ್ನು ಖರೀದಿಸಿದ್ದೇನೆ. ಅಲ್ಲಿ ನಾನು ಭಾರತೀಯ ವಾಸ್ತುಶಿಲ್ಪ ಮತ್ತು ಕಲೆಗಳ ಶಾಲೆಯೊಂದನ್ನು ತೆರೆಯಬೇಕೆಂದಿದ್ದೇನೆ. ವಿದೇಶಗಳಲ್ಲಿ ನೆಲೆಸಿರುವ ಅನೇಕ ಹಿಂದೂಗಳು ಇಲ್ಲಿಗೆ ಸೇರಿಕೊಳ್ಳುತ್ತಾರೆಂಬ ನಂಬಿಕೆ ನನಗಿದೆ. ಅಷ್ಟೇ ಅಲ್ಲ, ಅನೇಕ ಬಿಳಿಯ ಅಮೆರಿಕನ್ನರೂ ಸೇರಿಕೊಳ್ಳುತ್ತಾರೆ. ಕಾರಣ ಹೊಸ ವಿಷಯಗಳನ್ನು ಕಲಿಯಲು ಅವರು ಯಾವಾಗಲೂ ಉತ್ಸುಕರಾಗಿರುತ್ತಾರೆ. ಜೊತೆಗೆ ಅವರು ಹಣ ನೀಡುತ್ತಾರೆ. ! ಆ ಹಣವನ್ನು ನಾನು ಭಾರತದಲ್ಲಿನ ನನ್ನ ವಿದ್ಯಾಲಯವನ್ನು ಅಭಿವೃದ್ಧಿಪಡಿಸಲು ಬಳಸುತ್ತೇನೆ."

ಸ್ವಾಮೀಜಿಯವರು ಮಾತನಾಡುತ್ತಿರುವಾಗ ವೈರಾಗ್ಯದ ಇಲ್ಲವೆ ಅನಾಸಕ್ತಿಯ ಕುರುಹುಗಳನ್ನೇನೂ ತೋರಲಿಲ್ಲ. ಅವರು ಆವೇಶಭರಿತರಾಗಿದ್ದರು. ಎಪ್ಪತ್ತೇಳು ವರ್ಷದ ಈ ಯುವಕ ಹೊಸ ಹೊಸದನ್ನು ಮಾಡುವ ಉತ್ಸಾಹದಲ್ಲಿದ್ದರು. ಅವರ ಅಂತರಂಗದಲ್ಲಿ ಕರ್ತವ್ಯದ ಅಗ್ನಿ ಪ್ರಜ್ವಲಿಸುತ್ತಿತ್ತು.

ನಾನು ವಿಸ್ತಾರವಾಗಿ ಸಂದರ್ಶನ ಮಾಡಿದ ಮೂರೂ ಜನ ಆಶ್ರಮ ಪ್ರಮುಖರು ಅಂಥ ವ್ಯಕ್ತಿಗಳ ಬಗ್ಗೆ ಯಾವುದೇ ಸಾಮಾನ್ಯೀಕೃತವಾದ ಅಭಿಪ್ರಾಯಗಳನ್ನು ಮಾಡಲಾಗುವುದಿಲ್ಲವೆಂಬ ನನ್ನ ನಂಬಿಕೆಯನ್ನು ದೃಢೀಕರಿಸಿದರು. ಅಪರಿಮಿತವಾದ ಔದಾರ್ಯದ ಕಥಾವಾಚಕ ರಾಮದೇವ ಪಾಠಿ, ಧೀಮಂತ ವಿದ್ವಾಂಸ ಸ್ವಾಮಿ ದಯಾನಂದರು ಮತ್ತು ಕನಸು ಕಾಣುವ ಕಲಾವಿದ ಮತ್ತು ಶಿಕ್ಷಣತಜ್ಞ ಸ್ವಾಮಿ. ಎನ್. ಇವರೆಲ್ಲರೂ ಒಂದೊಂದು ಬಗೆ ; ಎಲ್ಲರೂ ಹಿಂದೂ ಸಂಪ್ರದಾಯ ಮತ್ತು ಪರಂಪರೆಗಳ ವಕ್ತಾರರು.

□□

ಸಾಧುಗಳು: ಮನೋವೈಜ್ಞಾನಿಕ ಸಂಗತಿಗಳು ಮತ್ತು ಸಾಮಾಜಿಕ ಮನೋಭಾವಗಳು

ನನ್ನದು ವೈದ್ಯವೃತ್ತಿಯಾಗಿದ್ದು ನಾನೊಬ್ಬ ಮನೋಚಿಕಿತ್ಸಕನಾದ್ದರಿಂದ ಜನರ ಕುಟುಂಬದ ಇತಿಹಾಸ ಮತ್ತು ಸಂಬಂಧಗಳು ಹಾಗೂ ಮನೋವಿಕಾಸಕ್ಕೆ ಸಂಬಂಧಿಸಿದ ಸಂಗತಿಗಳ ಬಗ್ಗೆ ವಿಚಾರಿಸುವುದು ನನಗೆ ರೂಢಿಯಾಗಿತ್ತು.

ಈ ಕ್ಷೇತ್ರದಲ್ಲಿನ ನನ್ನ ಆಸಕ್ತಿಗಳಲ್ಲಿ ಒಂದು ಮನೋವೈಜ್ಞಾನಿಕ ಆಸಕ್ತಿಯೇ ಆಗಿದೆ. ಕುಟುಂಬ, ಉದ್ಯೋಗ ಮತ್ತು ಸಾಮಾಜಿಕ ಸಂಬಂಧಗಳ ವಿಷಯದಲ್ಲಿ ಹೆಚ್ಚು ರೂಢಿಯಲ್ಲಿ ಕಂಡುಬರುವಂಥ ಮಾದರಿಗಳನ್ನು ಕೆಲವು ಮಂದಿ ತಿರಸ್ಕರಿಸುವಂತೆ ಮಾಡುವಂಥದು ಯಾವುದು ಎಂಬುದನ್ನು ತಿಳಿದುಕೊಳ್ಳಬೇಕೆಂದು ನಾನು ಬಯಸಿದೆ. ಕೆನಡಾದ ಇಬ್ಬರು ಸಹೋದ್ಯೋಗಿಗಳನ್ನು ನಾನು ಸಂಧಿಸಿದಾಗ ನನ್ನ ಈ ವಿಚಾರಕ್ಕೆ ಇನ್ನಷ್ಟು ಬಲ ಬಂದಿತು. ಮನೋವಿಕಾರದ ಅಪಾಯಕ್ಕೆ ಸಿಲುಕಿರುವ ವ್ಯಕ್ತಿಗಳು ಸಾಮಾಜಿಕ ಸಮ್ಮತಿ ಸಿಗಬಹುದಾದಂಥ ಸಾಧುವಿನ ಭೂಮಿಕೆ ನಿಭಾಯಿಸುವವರಾಗುತ್ತಾರೆಯೋ ಹೇಗೆ ಎಂಬುದನ್ನು ಕಂಡುಕೊಳ್ಳಲು ಅವರು ಆಸಕ್ತರಾಗಿದ್ದರು. ಕೆಲವು ಸೂಕ್ಷ್ಮಮನಸ್ಸಿನ ವ್ಯಕ್ತಿಗಳ ಪಾಲಿಗೆ ಪ್ರಪಂಚದಿಂದ ವಿಮುಖವಾಗುವುದು ಸಕಾರಾತ್ಮಕವೂ ರಕ್ಷಣಾತ್ಮಕವೂ ಆಗಿಬಿಡಬಹುದೆ?

ನಾವು ಈ ಮುಂಚೆ ಕಂಡುಕೊಂಡಂತೆ ಬಹಳಷ್ಟು ಜನ ಸಾಧುಗಳ ಬಾಲ್ಯ ಎಲ್ಲರಿಗೂ ಇರುವಂತೆ ಸಾಮಾನ್ಯ ರೀತಿಯದಾಗಿದ್ದು ಅವರ ಆಸಕ್ತಿಗಳು ಮತ್ತು ಶೈಕ್ಷಣಿಕ ಸಾಮರ್ಥ್ಯಗಳು ಕೂಡ ವಾಡಿಕೆಯದಾಗಿರುತ್ತಿದ್ದವು. ಮಾನಸಿಕ ರೋಗಗಳ ಬಗೆಗಿನ ಅವರ ತಿಳಿವಿನ ಬಗ್ಗೆ ಪ್ರಶ್ನಿಸಿದಾಗ ಮಾನಸಿಕ ರೋಗಿಗಳನ್ನು ತಾವು ಶಿಷ್ಯರನ್ನಾಗಿ ಅಂಗೀಕರಿಸುವುದಿಲ್ಲವೆಂದು ಅವರುಗಳು ಸ್ಪಷ್ಟವಾಗಿ ತಿಳಿಸಿದರು. ಅಸ್ಥಿರ ಮನಸ್ಸಿನ ವ್ಯಕ್ತಿಗಳು ಸಂನ್ಯಾಸಿಗಳು ಅನುಸರಿಸಬೇಕಾದ ಕಠೋರ ಶಿಸ್ತಿನ ಜೀವನವನ್ನು ಆಯ್ಕೆ ಮಾಡಿಕೊಳ್ಳುವುದನ್ನು ತಡೆಯುವಂಥ ಕಠಿಣ ಪ್ರಕ್ರಿಯೆಯೇ ಇದೆ. ಕಾಯಿಲೆ ಕಂಡುಬಂದರೆ ಸಂತೋಷದಿಂದಲೇ ಅದರ ಚಿಕಿತ್ಸೆಗೆ ವ್ಯವಸ್ಥೆ ಮಾಡುತ್ತಾರೆ. ಸ್ವಾಮಿ ರಾಮದೇವ ಅವರನ್ನು ನಾನು ಮೊದಲು ಭೇಟಿಯಾದ ಸಂದರ್ಭದಲ್ಲಿ ಅತ್ಯಂತ ಆತಂಕಕ್ಕೊಳಗಾಗಿದ್ದ ವ್ಯಕ್ತಿಯೊಬ್ಬನಿಗೆ ಔಷಧಿ ಬರೆದುಕೊಟ್ಟ ಬಗ್ಗೆ ವಿವರಿಸಿದ್ದೇನೆ. ಮಾನಸಿಕವಾಗಿ ಅಸ್ವಸ್ಥನೆಂದು ನಾನು

ಪರಿಗಣಿಸಿದ ವ್ಯಕ್ತಿಯೊಬ್ಬನನ್ನು ಅವನ ಸುತ್ತಮುತ್ತ ಇದ್ದವರು ಬೇರೆ ರೀತಿಯಲ್ಲೇ ನೋಡುತ್ತಿದ್ದುದನ್ನು ನಾನು ಗಮನಿಸಿದೆ.

* * *

ಸ್ವಾಮಿ ರಾಮದೇವ ಅವರ ಆಶ್ರಮದಲ್ಲಿ ನಾನು ತಂಗಿದ್ದಾಗ ಒಂದು ದಿನ ನಿಜವಾದ ಸಂತನ ಗುಣಗಳೇನೆಂಬುದನ್ನು ವಿವರಿಸಿದರು.

"ಸದಾ ಕಾಲವೂ ಅನುಭಾವಿಕ ಪ್ರಜ್ಞೆಯ ಸ್ಥಿತಿಯಲ್ಲಿರುವ ಆ ಒಂದು ಸ್ಥಿತಿಯೇ ಅಂತಿಮ ಹಂತ. ಅದನ್ನು ತಲುಪುವುದು ಅತ್ಯಂತ ಕಷ್ಟ. ಈ ಸ್ಥಿತಿಯಲ್ಲಿ ವ್ಯಕ್ತಿಯು ತನ್ನಲ್ಲಿಯೇ ಕಳೆದುಹೋಗಿಬಿಟ್ಟಿರುತ್ತಾನೆ. ಅವನ 'ಸ್ವ' ಅಥವಾ ಆತ್ಮವು ವಿಶ್ವದ 'ಸ್ವ' ಅಥವಾ ವಿಶ್ವಾತ್ಮದಲ್ಲಿ ಕಳೆದುಹೋಗಿ(=ಮುಳುಗಿಹೋಗಿ)ಬಿಟ್ಟಿರುತ್ತದೆ. ಒಮ್ಮೆ ಈ ಸ್ಥಿತಿಯನ್ನು ವ್ಯಕ್ತಿ ತಲುಪಿದನೆಂದಾದರೆ ಆಗ ಏನನ್ನೂ ಮಾಡುವ ಇಲ್ಲವೆ ಯಾರೊಂದಿಗಾದರೂ ಮಾತು-ಕತೆಯಾಡುವ ಅಗತ್ಯವೇ ಇರುವುದಿಲ್ಲ."

ಆಗ ನಾನು 'ಇಂಥ ಸ್ಥಿತಿಯಲ್ಲಿರುವ ಯಾರನ್ನಾದರೂ ನೀವು ಕಂಡಿದ್ದೀರಾ?' ಎಂದು ಕೇಳಿದೆ. ಬಹುಶಃ ಒಬ್ಬರೋ ಇಬ್ಬರನ್ನೋ ಕಂಡಿರುವುದಾಗಿಯೂ ಅವರಲ್ಲಿ ಒಬ್ಬರು ಇದೇ ಆಶ್ರಮದಲ್ಲಿದ್ದಾರೆಂದು ಹೇಳಿದರು.

ನೂರು ಗಜ ದೂರದಲ್ಲಿದ್ದ ಒಬ್ಬ ವ್ಯಕ್ತಿಯ ಕಡೆ ಬೆರಳು ಮಾಡಿ ತೋರಿಸಿದರು. ಆ ವ್ಯಕ್ತಿ ತನ್ನಲ್ಲೇ ಮುದುಡಿಕೊಂಡು, ಅಸ್ತವ್ಯಸ್ತವಾದ, ಒಗೆಯದ, ಕೊಳಕು ಕೊಳಕಾದ ಬಟ್ಟೆಗಳನ್ನು ಧರಿಸಿದ, ಕೆದರಿದ ಕೂದಲುಗಳಿಂದ ಕೂಡಿದ ಗಡ್ಡ ಬೆಳೆದ ವ್ಯಕ್ತಿಯಾಗಿದ್ದರು.

"ಅವರು ಈ ಥರದ ಸಂತರು" ಎಂದು ಅವರತ್ತ ಬೆರಳುಮಾಡಿ ತೋರಿ ಅತ್ಯಂತ ಗಂಭೀರವಾಗಿ ಮತ್ತು ಅಪಾರ ಗೌರವ ಭಾವದಿಂದ ಹೇಳಿದರು.

ಅವರು ಸ್ವಾಮಿ ರಾಮಾನಂದರು ಮತ್ತು ಉದಾಸಿ ಪಂಥಕ್ಕೆ ಸೇರಿದವರು ಎಂದರು. ಅವರು ಶ್ರೀಮಂತ ಕುಟುಂಬದಿಂದ ಬಂದವರು. ಒಂದು ಅತ್ಯಂತ ಪ್ರತಿಷ್ಠಿತ ಶಾಲೆಯನ್ನು ಸೇರಿದರು ಅನಂತರ ಸೈನ್ಯಕ್ಕೆ ಸೇರಿಕೊಂಡರು. ಅವರು ಕ್ಯಾಪ್ಟನ್ ಆಗಿದ್ದಾಗ ಸೇನೆಯನ್ನು ಬಿಟ್ಟು ಈ ಪ್ರದೇಶಕ್ಕೆ ಬಂದರು. ಉದಾಸಿ ಪಂಥಕ್ಕೆ ಸೇರಿದ ಗುರುವೊಬ್ಬರಿಂದ ದೀಕ್ಷೆ ತೆಗೆದುಕೊಂಡು ಸಾಧುವಿನ ಹಾಗೆ ಇರತೊಡಗಿದರು. ಮೂವತ್ತು ವರ್ಷಗಳ ಹಿಂದೆ ಇಲ್ಲಿಗೆ ಬಂದು ಇಲ್ಲಿ ತಂಗಿರಬಹುದೆ ಎಂದು ನನ್ನ ಗುರುಗಳನ್ನು ಕೇಳಿದರು. ನನ್ನ ಗುರುಗಳು ಅನುಮತಿ ಕೊಟ್ಟರು. ರಾಮಾನಂದರು ಎಲ್ಲರಿಗೂ ಸುಲಭ ಲಭ್ಯರಾಗಿದ್ದರು. ಎಲ್ಲರೊಂದಿಗೂ ಸೌಜನ್ಯದಿಂದ ನಡೆದುಕೊಳ್ಳುತ್ತಿದ್ದರು. ನಿಯಮಿತವಾಗಿ ತಮ್ಮ ಸಾಧನೆಯನ್ನು ಮಾಡುತ್ತಿದ್ದುದಲ್ಲದೆ ಅಡುಗೆ ಮನೆಯಲ್ಲಿ ಅಡುಗೆ ಮಾಡಲು ನೆರವಾಗುತ್ತಿದ್ದರು. ಅತ್ಯಂತ ರುಚಿಕರವಾದ ಊಟ ತಯಾರಿಸುತ್ತಿದ್ದರು ಮತ್ತು ಎಲ್ಲರ ಊಟದ ಪಾತ್ರೆಗಳನ್ನು ತಾನೇ ತೊಳೆಯುವುದಾಗಿ ಹೇಳಿ ಹಠಕ್ಕೆ ಬೀಳುತ್ತಿದ್ದರು. ಹಸುಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು.

ಚೆನ್ನಾಗಿ ಹಾಡುತ್ತಿದ್ದರು. ಸಂಜೆಯ ಹೊತ್ತು ಭಜನೆಗಳನ್ನು ಹಾಡುತ್ತಿದ್ದರು. ಬರು ಬರುತ್ತಾ ಹಿಂದೆ ಸರಿಯುತ್ತ ಪ್ರತ್ಯೇಕವಾಗಿ ಇರತೊಡಗಿದರು. ಅವರು ಸಾಧನೆಯಲ್ಲಿ ಅತ್ಯಂತ ಆಳಕ್ಕೆ ಹೋಗುತ್ತಿದ್ದಾರೆಂದು ನಾವೆಲ್ಲ ಭಾವಿಸಿದೆವು. ಕ್ರಮೇಣ ಅಡುಗೆ ಮಾಡುವುದರಲ್ಲಿ ಮತ್ತು ಪಾತ್ರೆ ತೊಳೆಯುವುದರಲ್ಲಿ ಆಸಕ್ತಿ ಕಳೆದುಕೊಂಡರು. ಆದರೆ ಸೌಜನ್ಯದಿಂದಿರುತ್ತಿದ್ದರು. ಒಂದು ದಿನ ಜನರ ಗುಂಪೊಂದು ನನ್ನ ಗುರುಗಳನ್ನು ನೋಡಲು ಬಂದಿತು. ಅದರಲ್ಲಿ ಕೆಲವು ಮಹಿಳೆಯರೂ ಇದ್ದರು. ರಾಮಾನಂದರು ಇದ್ದಕ್ಕಿದ್ದಂತೆ – "ಈ ಸೂಳೆಯರೆಲ್ಲ ನಮ್ಮ ಆಶ್ರಮವನ್ನು ಹಾಳುಮಾಡಕ್ಕೆ ಯಾಕೆ ಬರುತ್ತಾರೆ?" ಎಂದು ಕಿರುಚಿದರು." ನನ್ನ ಗುರುಗಳಿಗೆ ತುಂಬ ಕೋಪ ಬಂದು ಒಂದು ಕೋಲಿನಿಂದ ಅವರನ್ನು ಹೊಡೆದರು. ಆಮೇಲೆ ರಾಮಾನಂದರು "ಗುರುಗಳು ಈ ದೇಹಕ್ಕೆ ಹೊಡೆದಿದ್ದಾರೆ. ನಾನು ಈ ದೇಹವಲ್ಲ. ನಾನು ಪರಿಶುದ್ಧ ಆತ್ಮ. ಅವರು ನನ್ನನ್ನು ಹೊಡೆದಿಲ್ಲ"– ಎಂದು ಸುತ್ತೆಲ್ಲಾ ಹೇಳಿಕೊಂಡು ತಿರುಗಾಡಿದರು.

"ಒಂದು ದಿನ ಒಬ್ಬ ಸ್ವಾಮಿ ಕ್ಷಯರೋಗದಿಂದ ತೀರಿಕೊಂಡರು. ಶವದ ಮೈಮೇಲಿಂದ ರಾಮಾನಂದರು ಬಟ್ಟೆಗಳನ್ನೆಲ್ಲ ಕಳಚಿ ತಾವೇ ತೊಟ್ಟುಕೊಂಡರು. ಒಮ್ಮೆಯೂ ಒಗೆಯದೆ ಇದೇ ಬಟ್ಟೆಗಳನ್ನು ಧರಿಸಿಕೊಂಡು ತಿಂಗಳುಗಟ್ಟಲೆ ಇದ್ದರು. ಕೊನೆಗೆ ಯಾರೋ ಒಬ್ಬರು ಬಂದು ಬಲವಂತವಾಗಿ ಆ ಬಟ್ಟೆಗಳನ್ನು ಅವರ ದೇಹದಿಂದ ಕತ್ತರಿಸಿ ತೆಗೆದು ಸ್ನಾನ ಮಾಡಿಸಬೇಕಾಯಿತು. ಎರಡನೇ ಬಾರಿಯೂ ತಿಂಗಳುಗಟ್ಟಲೆ ಧರಿಸಿಯೇ ಇದ್ದ ಬಟ್ಟೆಗಳನ್ನು ಬಲವಂತವಾಗಿ ಕತ್ತರಿಸಿ ತೆಗೆಯಬೇಕಾಯಿತು. ಈಗ ಅದೊಂದು ರೂಡಿಯೇ ಆಗಿಬಿಟ್ಟಿದೆ. ಪ್ರತಿ ಆರು ತಿಂಗಳಿಗೊಮ್ಮೆ ಒಬ್ಬಾನೊಬ್ಬ ಭಕ್ತ ಹೊಸ ಬಟ್ಟೆಗಳೊಂದಿಗೆ ಬಂದು ಸ್ನಾನ ಮಾಡಿಸಿದ ಮೇಲೆ ಅವುಗಳನ್ನು ತೊಟ್ಟುಕೊಳ್ಳಲೇಬೇಕೆಂದು ಬಲವಂತ ಮಾಡಿ ತೊಡಿಸುತ್ತಾರೆ. ರಾಮಾನಂದರು ಹೆಚ್ಚು ಪ್ರತಿರೋಧ ತೋರದೆ ಈ ಇಡೀ ಪ್ರಕ್ರಿಯೆಯನ್ನು ಕಷ್ಟದಿಂದ ಪಾಲಿಸುತ್ತಾರೆ. ಒಂದು ದಿನ ಅವರು ಇದ್ದಿಲಿನಿಂದ ತಮ್ಮ ಮುಖವನ್ನು ಕಪ್ಪಗೆ ಮಾಡಿಕೊಂಡು– "ನಿಮ್ಮ ಆಲೋಚನೆಗಳು ಕಪ್ಪಾಗಿದ್ದರೆ ನಿಮ್ಮ ಮುಖವೂ ಏಕೆ ಹಾಗೆಯೇ ಇರಬಾರದು" ಎಂದು ಹೇಳಿಕೊಂಡು ತಿರುಗಾಡಿದರು.

"ನಾವು ಅವರೊಂದಿಗೆ ಹೆಚ್ಚು ಮಾತಾಡಲ್ಲ. ಕಾರಣ ನಾವು ಮಾತಾಡಿದರೆ ಅವರು ಬಯ್ಯುವುದಕ್ಕೆ ಪ್ರಾರಂಭಿಸಿಬಿಡುತ್ತಾರೆ. ಅವರು ಮಹಡಿಯ ಮೇಲಿನ ನೀರಿನ ಟ್ಯಾಂಕಿನ ಕೆಳಗಡೆ ಇರುತ್ತಾರೆ. ಅವರಿಗೆ ಕಾಯಿಲೆಯಾಗಿದ್ದಾಗಲೂ ಯಾರಿಗೂ ಸಹಾಯ ಮಾಡಲು ಬಿಡುವುದಿಲ್ಲ. ರಾತ್ರಿಹೊತ್ತು ಕಾಂಪೌಂಡ್ ಸುತ್ತ ತಿರುಗಾಡುತ್ತಿರುತ್ತಾರೆ. ಅವರು ಖಂಡಿತವಾಗಿಯೂ ನಮ್ಮೆಲ್ಲರಿಗಿಂತಲೂ ಜ್ಞಾನದ ಉಚ್ಚ ಸ್ಥಿತಿಯನ್ನು ಮುಟ್ಟಿದ್ದಾರೆ."

ರಾಮಾನಂದರ ಬಗೆಗಿನ ಈ ವಿವರಣೆ ಕೇಳಿ ನನಗೆ ತೀವ್ರ ಕುತೂಹಲ ಉಂಟಾಯಿತು. ಅವರನ್ನು ಗಮನಿಸತೊಡಗಿದೆ. ಅವರು ತಮಗೆ ತಾವೇ

ಮಾತನಾಡಿಕೊಳ್ಳುತ್ತಿದ್ದುದನ್ನು ಮತ್ತು ಕಾರಣವಿಲ್ಲದೆ ನಗುತ್ತಿದ್ದುದನ್ನು ಗಮನಿಸಿದೆ. ಅವರು ದೀರ್ಘಕಾಲದ ಸ್ಕಿಜೋಫ್ರೇನಿಯಾದಿಂದ ಬಳಲುತ್ತಿದ್ದಾರೆಂದು ನನಗೆ ಖಚಿತವಾಯಿತು.

ಈ ವಿಷಯದ ಬಗ್ಗೆ ನನ್ನ ಹೆಂಡತಿಯೊಂದಿಗೆ ಚರ್ಚಿಸಿದೆ. ಈ ಮನುಷ್ಯನಿಗೆ ಕಾಯಿಲೆಯಾಗಿದೆ ಎಂದು ಹೇಳಲೆ? ಆಕೆ ನಾನು ಹೇಳಲೇಬೇಕೆಂದು ಹೇಳಿದಳು. ಇದರಿಂದ ಏನು ಪ್ರಯೋಜನವಾದೀತು ಎಂದು ಯೋಚಿಸಿದೆ. ಅವರು ತೀವ್ರ ಉಲ್ಬಣಾವಸ್ಥೆಯ ಹಂತದಲ್ಲಿರುವಂತೆ ಕಂಡರು. ನಾನೊಂದು ವೇಳೆ ರೋಗ ನಿದಾನ ಮಾಡಿದರೂ ರೋಗದ ಉಪಚಾರದ ಬಗ್ಗೆ ಹೆಚ್ಚೇನೂ ಮಾಡಲು ಸಾಧ್ಯವಿಲ್ಲ. ಹೀಗೆ ತೀವ್ರ ಉಲ್ಬಣಾವಸ್ಥೆಯ ಹಂತದಲ್ಲಿರುವ ರೋಗಿಗಳಿಗೆ ಪ್ರಮುಖ ಶಮನಕಾರಿ ಔಷಧಿಗಳಿಂದ ಹೆಚ್ಚು ಅನುಕೂಲವಾಗುವುದಿಲ್ಲ. ಇಂಥ ಸಂದರ್ಭದಲ್ಲಿ ನನ್ನ ಕರ್ತವ್ಯ ಏನು ಎಂದು ಇಡೀ ಒಂದು ರಾತ್ರಿಯೆಲ್ಲಾ ತಲೆಕೆಡಿಸಿಕೊಂಡೆ. ಮರುದಿನ ಸ್ವಾಮಿ ರಾಮದೇವ ಅವರನ್ನು ಭೇಟಿಯಾದಾಗ –"ಸ್ವಾಮೀಜಿ ರಾಮಾನಂದರು ಮಾನಸಿಕರೋಗಿ ಮತ್ತು ಅವರಿಗೆ ಇದರ ಚಿಕಿತ್ಸೆಯ ಅಗತ್ಯವಿದೆಯೆಂದು ನನಗನಿಸುತ್ತದೆ" ಎಂದು ಥಟ್ಟನೆ ಹೇಳದೆ ಇರಲಾಗಲಿಲ್ಲ.

ಸ್ವಾಮಿ ರಾಮದೇವ ಅವರಿಗೆ ಕಿಂಚಿತ್ ಅಸಮಾಧಾನವೆನಿಸಿತು. ರಾಮಾನಂದರನ್ನು ಸಮರ್ಥಿಸಿಕೊಂಡರು–

"ಅವರು ಒಂದು ವೇಳೆ ರೋಗಿ ಎಂದಾದರೆ ನಾವೆಲ್ಲರೂ ರೋಗಿಗಳೇ. ಮಾನಸಿಕವಾಗಿ ಆರೋಗ್ಯದಿಂದಿರುವವನು ಕಾವಿ ಬಟ್ಟೆಗಳನ್ನು ಧರಿಸುತ್ತಾನೆ, ಕೌಟುಂಬಿಕ ಸಂಬಂಧಗಳನ್ನು ತ್ಯಜಿಸುತ್ತಾನೆ ಮತ್ತು ಸಾಧುವಾಗುತ್ತಾನೆಂದು ನೀವು ತಿಳಿದಿರುವಿರಾ?"

ನಾನು ಅವರೊಂದಿಗೆ ವಾದಿಸಲು ಪ್ರಯತ್ನಿಸಿದೆ. ಆದರೆ ನಿಷ್ಪ್ರಯೋಜಕವಾಯಿತು.

"ರಾಮಾನಂದರು ವಿಶೇಷ ಶಕ್ತಿಗಳನ್ನು ಹೊಂದಿದ್ದಾರೆಂಬುದು ನಿಮಗೆ ಗೊತ್ತೆ?"– ಎಂದು ಸ್ವಾಮಿ ರಾಮದೇವ ಪ್ರಶ್ನಿಸಿದರು.

ಅನಂತರ ಅವರು ರಾಮಾನಂದರಿಗಿರುವ ವಿಶೇಷ ಶಕ್ತಿಗಳ ಬಗ್ಗೆ ಕೆಲವು ಪ್ರಸಂಗಗಳನ್ನು ಹೇಳಿದರು.

"ಒಂದು ದಿನ ಸೇನೆಯು ನಮ್ಮ ಆಶ್ರಮದ ಎದುರುಗಡೆ ಗಂಗಾನದಿಗೆ ಒಂದು ಪಾಂಟೂನ್ ಸೇತುವೆ ನಿರ್ಮಿಸುವ ಪ್ರಯತ್ನ ಮಾಡುತ್ತಿತ್ತು. ರಾಮಾನಂದರು ಗಟ್ಟಿಯಾಗಿ ಕಿರುಚಿದರು– 'ಈ ಸೇತುವೆ ಕಟ್ಟುವುದರಲ್ಲಿ ಏನೂ ಅರ್ಥವಿಲ್ಲ. ಈ ಸೈನ್ಯದ ಸೂಳೆಮಕ್ಕಳು ಹೆಂಡ ಕುಡೀತಾರೆ, ಮಾಂಸ ತಿನ್ನುತ್ತಾರೆ. ಈ ಸೇತುವೆ ಕೊಚ್ಚಿಕೊಂಡುಹೋಗುತ್ತೆ'.

ಮರುದಿನ ಹಿಮಾಲಯದಲ್ಲಿ ಭಾರೀ ಮಳೆಯಾದ್ದರಿಂದ ಗಂಗಾ ನದಿ ಅತ್ಯಂತ ವೇಗವಾಗಿ ಉಕ್ಕಿ ಹರಿದು ಸೇತುವೆ ಕೊಚ್ಚಿಹೋಯಿತು.

"ಇನ್ನೊಂದು ಸಲ ಕುಂಭಮೇಳ ಇತ್ತು. ಹರಿದ್ವಾರದಲ್ಲಿ ಸಹಸ್ರಾರು ಜನ ಸೇರಿದ್ದರು. ರಾಮಾನಂದರು– 'ಈ ಪಾಪಿಗಳೆಲ್ಲ ಇಲ್ಲಿಗೆ ಯಾಕೆ ಬಂದಿದ್ದಾರೆ?. ಅವರು ನಮ್ಮ

ಗಂಗೆಯನ್ನು ಮಲಿನಗೊಳಿಸುತ್ತಾರೆ' ಎಂದು ಬಿಟ್ಟರು. ಮರುದಿನ ಹರಿದ್ವಾರದಲ್ಲಿ ಗಂಗಾ ನದಿಗೆ ನಿರ್ಮಿಸಿದ್ದ ಸೇತುವೆ ಕುಸಿದುಬಿದ್ದು ಸಹಸ್ರಾರು ಜನ ಮೃತ್ಯುವಶರಾದರು."

ಇನ್ನೊಮ್ಮೆ ಸಿಲ್ಕ್ ಉಡುಪು ಧರಿಸಿ, ಸೂಟ್ ಕೇಸ್ ಹಿಡಿದ ಸ್ವಾಮಿಯೊಬ್ಬರು ಆಶ್ರಮಕ್ಕೆ ಬಂದರು. ಎಲ್ಲರನ್ನೂ ಸ್ವಾಗತಿಸುವಂತೆ ಸ್ವಾಮಿ ರಾಮದೇವ ಅವರು ಅವರನ್ನೂ ಸ್ವಾಗತಿಸಿದರು. ಈ ಹೊಸದಾಗಿ ಬಂದಿದ್ದ ಸ್ವಾಮಿ ಶೌಚಕ್ಕೆ ಹೋಗಿದ್ದಾಗ ರಾಮಾನಂದರು– "ಅವನು ಸ್ವಾಮಿ ಅಲ್ಲ, ಕಳ್ಳ. ಅವನ ಸೂಟ್ ಕೇಸ್ ತಲಾಶ್ ಮಾಡಿ" ಎಂದು ಜೋರಾಗಿ ಅರಚಿದರು. ರಾಮಾನಂದರ ಶಕ್ತಿ ಗೊತ್ತಿದ್ದ ರಾಮದೇವರು ಅವನ ಸೂಟ್ ಕೇಸ್ ತೆರೆದರು. ಅದರ ತುಂಬ ಯಾವ ಸಾಧುವೂ ಇಟ್ಟುಕೊಳ್ಳದಂಥ ಅತ್ಯಂತ ದುಬಾರಿ ವಸ್ತುಗಳಿದ್ದವು. ಆಗಂತುಕ ಸ್ವಾಮಿ ಟಾಯ್ಲೆಟ್‌ನಿಂದ ಹೊರಬಂದಾಗ ಜನರೆಲ್ಲಾ ಅವನನ್ನು ಪ್ರಶ್ನಿಸುತ್ತಿದ್ದಂತೆ ಅವನು ಅವಸರವಸರವಾಗಿ ಕಾಂಪೌಂಡಿನಿಂದ ಓಡಿಹೋದ. "ಹಾಗಾಗಿ ಅವರು ಸಾಮಾನ್ಯ ಮನುಷ್ಯ ಅಲ್ಲ" ಎಂದರು.

ಸ್ವಾಮಿ ರಾಮದೇವ ಅವರು ರಾಮಾನಂದರ ಕಾಯಿಲೆಯ ಬಗ್ಗೆ ನಾನು ಹೆಚ್ಚೇನನ್ನೂ ಹೇಳದಂತೆ ತಡೆದರು.

ತನಗೆ ಯಾತನೆಯನ್ನುಂಟುಮಾಡುವುದಷ್ಟೇ ಅಲ್ಲದೆ ಬೇರೆಯವರಿಗೂ ಯುಕ್ತವೆನಿಸದ ಒಂದು ಮನಸ್ಥಿತಿಯೆಂದೇ ನಾವು ಮಾನಸಿಕ ರೋಗವನ್ನು ವ್ಯಾಖ್ಯಾನಿಸುವುದು. ಆದರೆ ಯಾತನೆಯ ಯಾವ ಚಿಹ್ನೆಯನ್ನೂ ತೋರಿಸದ ವ್ಯಕ್ತಿಯೊಬ್ಬರು ಇಲ್ಲಿದ್ದರು. ಇನ್ನು ಅವರ ಅವರ ವರ್ತನೆ ಅಯುಕ್ತವೆಂದು ಅವರ ಸುತ್ತುಮುತ್ತಿನವರು ಯಾರೂ ನಂಬುತ್ತಿರಲಿಲ್ಲ. ಬದಲಿಗೆ ಅವರನ್ನು ಅತ್ಯಂತ ಗೌರವಾದರಗಳಿಂದಲೇ ಕಾಣುತ್ತಿದ್ದರು. ಅವರು ಮಾನಸಿಕ ರೋಗಿಯಾಗಿದ್ದರೆ?

ರಾಮದೇವ ಅವರ ಹತ್ತಿರ ಕೊನೆಯ ಬಾರಿಗೆ ಈ ವಿಷಯವನ್ನು ಪ್ರಸ್ತಾಪಿಸಲು ಪ್ರಯತ್ನಿಸಿದೆ. ಅವರ ಬೈಗುಳಗಳ ಬಗ್ಗೆ ಏನು ಹೇಳುತ್ತೀರಿ? ಸಾಧುಗಳಾದವರು ಬೈಗುಳದ ಮಾತುಗಳನ್ನಾಡುವುದು ಸರಿಯೆ? ರಾಮದೇವರು ಈ ಬಗ್ಗೆ ಯೋಚಿಸುತ್ತಿದ್ದು ನಂತರ ಹೇಳಿದರು: "ಕೆಲವೊಮ್ಮೆ ಉನ್ನತ ಹಂತ ತಲುಪಿರುವ ಸಾಧುಗಳು ತಮ್ಮ ಸಾಧನೆಗೆ ಯಾವುದೇ ಬಗೆಯ ವಿಘ್ನವಾಗದಿರಲೆಂದು, ಬೇರೆಯವರನ್ನು ತಮ್ಮಿಂದ ದೂರ ಇಡುವ ಸಲುವಾಗಿ ಬೇಕೆಂದೇ ಹೀಗೆ ಮಾಡುತ್ತಾರೆ. ರಾಮಕೃಷ್ಣರಿಗೆ ದೀಕ್ಷೆ ಕೊಟ್ಟ ತೋತಾಪುರಿಯ ಬಗ್ಗೆ ನೀವು ಕೇಳಿಲ್ಲವೇನು? ಅವನು ಒಂದು ವೃತ್ತದ ಸುತ್ತಲೂ ಮಲವಿಸರ್ಜನೆ ಮಾಡಿ ಆ ವೃತ್ತದ ಮಧ್ಯೆ ಕುಳಿತುಕೊಳ್ಳುತ್ತಿದ್ದನು. ಜನರು ತನಗೆ ತೊಂದರೆ ಕೊಡದಿರಲಿ ಎನ್ನುವುದಷ್ಟೇ ಉದ್ದೇಶ. ನಿಮಗೆ ಈ ವಿಷಯ ಗೊತ್ತಿತ್ತೇನು?" –ಎಂದು ಕೇಳಿದರು.

ಹೌದು ನಾನು ಇದರ ಬಗ್ಗೆ ಓದಿದ್ದೆ. ನಾನು ಏನು ತಾನೆ ಹೇಳಲಿ?

ರಾಮಾನಂದರು ಉನ್ನತ ಹಂತವನ್ನು ಮುಟ್ಟಿದ, ವಿಕಾಸಗೊಂಡ ಆತ್ಮ ಎಂದು ಪರಿಗಣಿಸುವಲ್ಲಿ ಅವರು ತಪ್ಪುಮಾಡಿದ್ದರೆ? ಆ ಆವರಣದ ಸುತ್ತ– ಹೊರಗೆ ಮತ್ತು

ಒಳಗೆ – ಈ ಬಗ್ಗೆ ಬೇರೆಯವರನ್ನು ಕೇಳುತ್ತ ಹೋದೆ. ರಾಮಾನಂದರು ಯಾವತ್ತೂ ಹೊರಗೆ ಹೋಗದ ಕಾರಣ ಹೊರಗಿನವರು ಅವರ ಬಗ್ಗೆ ಕೇಳಿಯೇ ಇರಲಿಲ್ಲ. ಒಳಗಿದ್ದವರು ಅವರ ಬಗ್ಗೆ ಅತೀವ ಗೌರವ ಹೊಂದಿದ್ದರು. ಬಹುಶಃ ಯಾರಾದರೂ ಒಮ್ಮೆ ಸನ್ಯಾಸಿಯಾಗಿಬಿಟ್ಟರೆಂದರೆ ಮಾನಸಿಕ ಅಸ್ವಸ್ಥತೆ ಕುರಿತಂತೆ ಸಾಮಾನ್ಯವಾಗಿ ಅಂಗೀಕೃತವಾದ ಮಾನದಂಡಗಳು ಅವರಿಗೆ ಅನ್ವಯವಾಗುವುದಿಲ್ಲ.

ಈ ಮುಖಾಮುಖಿಯ ನಂತರ ನಾನು ಹೆಚ್ಚು ಜಾಗರೂಕನಾದೆ. ಹೃಷೀಕೇಶದಲ್ಲಿ ಇನ್ನಿತರೆ ಸ್ಕಿಜೋಫ್ರೇನಿಕ್ಸ್ ರೋಗಿಗಳಿಗಾಗಿ ಹುಡುಕಾಟ ನಡೆಸಿದೆ. ನನಗೆ ಇಂಥವರು ಬಹಳ ಜನ ಸಿಕ್ಕಿದರು. ಅವರಲ್ಲಿ ಬಹಳಷ್ಟು ಮಂದಿ ಜನರ ಕಣ್ಣಿನಿಂದ ಮರೆಯಾಗಿರುತ್ತಿದ್ದರು. ಸಣ್ಣ ಸೇತುವೆಗಳ ಮೇಲೋ ಇಲ್ಲವೆ ಗಂಗಾ ನದಿಗೆ ಹೋಗುವ ಮೆಟ್ಟಿಲುಗಳ ಮೇಲೋ ಕುಳಿತಿರುತ್ತಿದ್ದರು. ಒಂದೇ ದಿನದಲ್ಲಿ ಅಂಥ ಹನ್ನೆರಡು ಜನರನ್ನು ನೋಡಿದೆ. ಅವರೊಂದಿಗೆ ಮಾತಾಡಲು ಯತ್ನಿಸಿದೆ. ಆದರೆ ಅವರು ನನ್ನನ್ನು ಓಡಿಸಿಬಿಟ್ಟರು. ಅವರಿಗೆ ದುಡ್ಡು ಕೊಡಲು ಹೋದಾಗ ಒಂದೇ ಒಂದು ಧನ್ಯವಾದದ ಮಾತೂ ಆಡದೆ ತೆಗೆದುಕೊಂಡರು. ಹಣದಿಂದಲೂ ಅವರನ್ನು ಮಾತಾಡಿಸಲಾಗಲಿಲ್ಲ.

ಅದೆಷ್ಟು ಜನ ಸುಪ್ತ ಸ್ಕಿಜೋಫ್ರೇನಿಕ್ ರೋಗಿಗಳು ಸಾಧುಗಳಾಗುತ್ತಾರೋ ನನಗೆ ಖಚಿತವಿಲ್ಲ. ಆದರೆ ದೀರ್ಘಕಾಲಿಕ ರೋಗಿಗಳಾದ ಅನೇಕರು ಇಲ್ಲಿ ನೆಲೆಸಲು ಬರುತ್ತಾರೆ. ಅವರು ಉನ್ನತ ಹಂತವನ್ನು ತಲುಪಿದ ಆತ್ಮಗಳೆಂದು ತಿಳಿಯುವ ಕಾರಣ ಅವರನ್ನು ಯಾರೂ ಹೊಡೆಯುವುದಿಲ್ಲ. ಅವರಿಗೆ ಮಾತನಾಡಲು ಇಷ್ಟವಿಲ್ಲದಿದ್ದರೆ ಯಾರೂ ಅವರನ್ನು ಪೀಡಿಸುವುದೂ ಇಲ್ಲ. ಸಿದ್ಧಿಯನ್ನು ಪಡೆದುಕೊಂಡ ಆತ್ಮಗಳಿಗೆ ತೊಂದರೆ ಕೊಡುವಂತಿಲ್ಲ. ಅವರಿಗೆ ಉಚಿತವಾಗಿ ಊಟ ಸಿಗುತ್ತದೆ. ಮಾನಸಿಕ ರೋಗಿಗಳ ಆಸ್ಪತ್ರೆಯ ನಾಲ್ಕು ಗೋಡೆಗಳ ಮಧ್ಯೆ ಯಾರೂ ಕೂಡಿಹಾಕುವುದಿಲ್ಲ. ದೈಹಿಕವಾಗಿ ಅವರು ಆರೋಗ್ಯವಂತರಂತೆ ಕಾಣುತ್ತಾರೆ. ಆಸ್ಪತ್ರೆಯಲ್ಲಿರುವ ರೋಗಿಗಳಲ್ಲಿ ಕಂಡುಬರುವಂತೆ ಎರಡನೇ ಬಗೆಯ ಲಕ್ಷಣಗಳಾದ ಹಿಂದೆ–ಮುಂದೆ ಓಡುವುದು ಮುಂತಾದುವು ಇವರುಗಳಲ್ಲಿ ಕಂಡುಬರುವುದಿಲ್ಲ. ಹಾಗಿದ್ದ ಮೇಲೆ ಅವರು ಚೆನ್ನಾಗಿಯೇ ಇರಬೇಕಲ್ಲವೆ?

* * *

ವಿಭಿನ್ನ ಲೋಕದೃಷ್ಟಿಗಳು ಕೆಲವೊಂದು ವರ್ತನೆಗಳಿಗೆ ಹೇಗೆ ಬೇರೆಯದೇ ಆದ ಅರ್ಥವನ್ನು ಕೊಡಬಹುದೆಂಬುದಕ್ಕೆ ರಾಮಾನಂದರ ಕಥೆ ಒಂದು ನಿದರ್ಶನ. ಸಂಸ್ಕೃತಿಯೊಂದು ಕೆಲವೊಂದು ಸಂಗತಿಗಳನ್ನು ಅವು ಹಾಗೆಯೇ ಎಂದು ಭಾವಿಸಿಕೊಂಡು ಬಿಡುತ್ತದೆ. ಬಹಳಷ್ಟು ಪೂರ್ವ ದೇಶಗಳಲ್ಲಿರುವಂತೆ ಭಾರತದಲ್ಲೂ ಪುನರ್ಜನ್ಮ ಅಥವಾ ಅವತಾರ ಒಂದು ನಿಸ್ಸಂದಿಗ್ಧ ಸಂಗತಿಯೆಂದು ತಿಳಿಯಲಾಗುತ್ತದೆ. ವ್ಯಕ್ತಿಯೊಬ್ಬನು ಅದನ್ನು ಹೇಗೆ ಅರ್ಥೈಸುತ್ತಾನೆ ಅಥವಾ ಅದರ ಸತ್ಯತೆಯ ಬಗ್ಗೆ ಅವನಿಗೆಷ್ಟು ಅನಿಶ್ಚಿತತೆ ಇದೆ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳದ ಜನ್ಮಾಂತರಗಳ ಪರಿಕಲ್ಪನೆ ನಮಗೆಲ್ಲಾ

ಸುಪರಿಚಿತವಾಗಿರುವಂಥದೇ. ಕ್ರಿಶ್ಚಿಯನ್ ಅಥವಾ ಇಸ್ಲಾಂನ ಸಾಂಪ್ರದಾಯಿಕ ದೃಷ್ಟಿಕೋನವಾದ ಒಂದೇ ಜನ್ಮ ಹಾಗೂ ಅದರ ನಂತರ ಸ್ವರ್ಗ ಇಲ್ಲವೆ ನರಕ ಎಂಬದಕ್ಕಿಂತ ಇದು ಸ್ಪಷ್ಟವಾಗಿಯೇ ವಿಭಿನ್ನವಾದ್ದು. ಒಂದೇ ಕುಟುಂಬದ ಸೋದರ ಸೋದರಿಯರಲ್ಲಿ ಕಂಡುಬರುವ ವೈಯಕ್ತಿಕ ವ್ಯತ್ಯಾಸ ಅಥವಾ ವ್ಯಕ್ತಿಗತ ವ್ಯತ್ಯಾಸಕ್ಕೆ ವಿವರಣೆಯ ರೂಪದಲ್ಲಿ ಪ್ರಾರಬ್ಧ ಅಥವಾ ಪೂರ್ವ ಜನ್ಮವನ್ನು ಹೇಳಲಾಗುತ್ತದೆ ಮತ್ತು ಸನ್ಯಾಸ ಸ್ವೀಕರಿಸುವುದಕ್ಕೆ ಮುಖ್ಯ ಪ್ರೇರಕ ಶಕ್ತಿಯಾಗಿ ಹೇಳಲಾಗುತ್ತದೆ. ದಯಾನಂದರು ಹೇಳಿದಂತೆ ಬಾಲ್ಯಾವಸ್ಥೆಯ ಮೊದಲಿನ ಅನುಭವಗಳು ಭವಿಷ್ಯದ ನಡವಳಿಕೆಯನ್ನು ವಿವರಿಸಲು ಪರ್ಯಾಪ್ತವಾಗಿವೆ ಎನ್ನುವುದಾದರೆ ಒಂದೇ ಬಗೆಯ ಹಿನ್ನೆಲೆಯಿಂದ ಬಂದ ವ್ಯಕ್ತಿಗಳು ಅಪರಾಧಿಗಳು ಹಾಗೂ ಸಾಧುಗಳು ಎರಡೂ ಆಗುತ್ತಾರಲ್ಲ ಏಕೆ? ಪ್ರಾರಬ್ಧದ ದರ್ಶನವು ತಾಳ್ಮೆಯನ್ನು ಪ್ರೋತ್ಸಾಹಿಸಬಹುದು. ಯಾವುದೇ ಒಂದು ಬಗೆಯ ಜೀವನ ವಿಧಾನವು ಇನ್ನೊಂದಕ್ಕಿಂತ ಉತ್ತಮವಾಗಿರಲೇಬೇಕೆಂದಿಲ್ಲ. ಅದೇನಿದ್ದರೂ ಸಂಚಿತ ಪೂರ್ವಾನುಭವಗಳು ಸಕ್ರಿಯವಾಗುವ ರೀತಿ. ಎಲ್ಲವೂ ವಿಸ್ತಾರವಾದ ಒಂದು ಚಿತ್ರದ ಭಾಗ. ವ್ಯಕ್ತಿಯೊಬ್ಬನಿಗೆ ಮುಂದಿನ ಜನ್ಮದ ಬದುಕು ಚೆನ್ನಾಗಬಹುದೆಂಬ ಭರವಸೆಯಲ್ಲಿ ಚೆನ್ನಾಗಿ ನಡೆದುಕೊಳ್ಳಲು ಅದು ಉತ್ತೇಜನ ನೀಡುತ್ತದೆ. ಸಾಧುಗಳೊಂದಿಗೆ ಮಾತನಾಡುವಾಗಲೆಲ್ಲ ಪ್ರಾರಬ್ಧದ ವಿಷಯ ಪ್ರಸ್ತಾಪವಾಗುತ್ತಲೇ ಇತ್ತು. ಸಂನ್ಯಾಸ ತೆಗೆದುಕೊಳ್ಳಬೇಕೆಂಬ ತಮ್ಮ ನಿರ್ಧಾರಕ್ಕೆ ಅವರಿಗೆ ಸಮರ್ಥನೆ ನೀಡಬೇಕಾದ ಅಗತ್ಯವಿರಲಿಲ್ಲ. ಅವರುಗಳು ತಮ್ಮ ಆನುವಂಶಿಕತೆ ಮತ್ತು ಸಂಸ್ಕೃತಿಗೆ ತಕ್ಕಂತೆ ನಡೆದುಕೊಳ್ಳುತ್ತಿದ್ದರು.

ಧಾರ್ಮಿಕ ಆಚರಣೆಯ ಮತ್ತೊಂದು ಸರ್ವಸ್ವೀಕೃತ ಅಂಶವೆಂದರೆ ವಿಶೇಷ ಶಕ್ತಿಗಳು ಅಥವಾ ಸಿದ್ಧಿಗಳ ಪ್ರಾಪ್ತಿ. ಈ ಬಗ್ಗೆ ಮಾತಾಡಿದಾಗ ಕೆಲವು ಸಾಧುಗಳು ತಮಾಷೆಮಾಡಿ ನಕ್ಕುಬಿಡುತ್ತಿದ್ದರು. ನನ್ನ ಇಪ್ಪತ್ತು ವರ್ಷಗಳ ಅನ್ವೇಷಣೆಯಲ್ಲಿ ವಿಜ್ಞಾನದ ನಿಯಮಗಳನ್ನು ಮೀರುವಂಥ ಯಾವುದೇ ಶಕ್ತಿಯನ್ನು ಪ್ರದರ್ಶಿಸಿದ ಯಾವೊಬ್ಬ ವ್ಯಕ್ತಿಯನ್ನೂ ಸಂಧಿಸಲಿಲ್ಲ. ಅಂಥ ಶಕ್ತಿಗಳನ್ನು ಹೊಂದಿರುವಂಥ ಬೇರೆಯವರನ್ನು ತಾವು ಬಲ್ಲೆವು ಎನ್ನುವವರು ಸಿಕ್ಕಿದ್ದರು. ಬಹಳಷ್ಟು ಜನಪದ ಕಥೆಗಳಲ್ಲಿ ಕಂಡುಬರುವಂಥ ಚಮತ್ಕಾರ ಇಲ್ಲವೆ ಪವಾಡದ ಆಲೋಚನೆ ಸಾಮನ್ಯವಾಗಿತ್ತು. ಇಂಥ ಕಥೆಗಳೇನೋ ಅಪಾರವಾಗಿದ್ದುವು. ಅವುಗಳನ್ನು ಸಮರ್ಥಿಸಬೇಕಾದ ಅಗತ್ಯವೇನಿರಲಿಲ್ಲ. ಅನೇಕರಿಗೆ ತಮಗಿಂತ ತಮ್ಮ ಗುರುಗಳಿಗೆ ಹೆಚ್ಚಿನ ಶಕ್ತಿಗಳಿದ್ದುವು ಎಂಬ ನಂಬಿಕೆ ಇತ್ತು. ಉದಾಹರಣೆಗೆ ತಮಗೆ ಬೇಕಾದಾಗ ಅದೃಶ್ಯವಾಗುವಂಥ ಶಕ್ತಿ. ಪ್ರದೀಪ್ ದಾಸರಿಗೆ ತಮಗೆ ದುಷ್ಟ/ಕೆಟ್ಟ ಪ್ರಭಾವಗಳನ್ನು ಹೋಗಲಾಡಿಸುವ ಮತ್ತು ಸಂತಾನಹೀನತೆಯನ್ನು ಹೋಗಲಾಡಿಸುವ ಪರಿಹಾರೋಪಾಯಗಳು ಗೊತ್ತಿದೆಯೆಂಬ ನಂಬಿಕೆಯಿತ್ತು. ಸಿದ್ಧಿಗಳೆಂದರೆ ಏನೆಂದು ತಿಳಿದಿರುವಿರಿ ಎಂದು ಅವರನ್ನು ಕೇಳಿದಾಗ– "ಮನಸ್ಸಿನ ಗಾಢವಾದ ಏಕಾಗ್ರತೆಯಿಂದ ಪಡೆಯಲಾಗುವ ಆತ್ಮಶಕ್ತಿಯ ಹೆಚ್ಚಳವಲ್ಲದೆ ಬೇರೆಯಲ್ಲ ಎಂಬ ಉತ್ತರ ಕೊಟ್ಟರು."

ಓಂ ನಾಥ್

ಓಂ ನಾಥ್ ಒಬ್ಬ ಸಾಧು. ಅವರ ಅಭ್ಯಾಸ ಕೆಲವರಿಗೆ ಅಪ್ರಿಯವೆನಿಸುವಂತಿತ್ತು. ಬದರೀನಾಥದ ಬೀದಿಗಳಲ್ಲಿ ನಾವು ಓಡಾಡುತ್ತಿದ್ದಾಗ ನಮ್ಮ ಹತ್ತಿರ ಬಂದು ಒಂದು ಜೊತೆ ಚಪ್ಪಲಿ ಕೊಡಿಸಿಕೊಡಬೇಕೆಂದು ಕೇಳಿದರು. ಅವರು ಅಡಿಯಿಂದ ಮುಡಿಯವರೆಗೆ ಕಪ್ಪು ಬಣ್ಣದ ವಸ್ತ್ರ ಧರಿಸಿದ್ದರು. ನೋಡಿದರೆ ಕಾಳಿ ಮಾತೆಯನ್ನು ಆರಾಧಿಸುವ ಪಂಥಕ್ಕೆ ಸೇರಿದವರಂತೆ ಕಾಣುತ್ತಿದ್ದರು. ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ನೀಡಲು ಸ್ವಲ್ಪ ಹೊತ್ತು ಕುಳಿತುಕೊಳ್ಳುವುದಾದರೆ ನಾನು ಚಪ್ಪಲಿಗಳನ್ನು ಕೊಡಿಸುವುದಾಗಿ ಹೇಳಿದೆ. ಅವರು ಕೂಡಲೇ ಒಪ್ಪಿಕೊಂಡರು ಮತ್ತು ನಾವುಗಳು ಒಂದು ಚಹಾ ಅಂಗಡಿಯ ಹೊರಗಡೆ ಕುಳಿತುಕೊಂಡೆವು. ಹಣ ಕೇಳಿಕೊಂಡು ನಮ್ಮ ಸುತ್ತ ಅಸಂಖ್ಯಾತ ಭಿಕ್ಷುಕರು ಗುಂಪುಗೂಡಿದ್ದರಿಂದ ನಮ್ಮ ಮಾತುಕತೆಗೆ ಅಡ್ಡಿ ಉಂಟಾಗಿ ಅವರನ್ನು ಸಂದರ್ಶಿಸುವುದು ಕಷ್ಟವಾಯಿತು.

ನನ್ನ ಮಾಮೂಲಿ ರೀತಿಯಂತೆ ಅವರ ಹೆಸರು, ಎಷ್ಟು ವರ್ಷಗಳಿಂದ ಸಾಧುವಾಗಿರುವುದು ಎಂಬ ಪ್ರಶ್ನೆಗಳಿಂದ ಮಾತು–ಕತೆ ಆರಂಭಿಸಿದೆ. ಚಿಕ್ಕಂದಿನಲ್ಲೇ ಅನಾಥರಾಗಿದ್ದ ಅವರು ಅಘೋರಿ ಪಂಥದ ಸಾಧುವೊಬ್ಬರ ಸೂಚನೆಯ ಮೇರೆಗೆ ಅಘೋರಿ ಪಂಥವನ್ನು ಸೇರಿದರು. ಈಗ ತನ್ನ ಗುರುಭಾಯಿಗಳೊಂದಿಗೆ ಪವಿತ್ರ ಸ್ಥಳಗಳಿಗೆ ಯಾತ್ರೆ ಹೊರಟಿದ್ದು ಅನಂತರ ಅವರೆಲ್ಲರೂ ಹಿಮಾಚಲಕ್ಕೆ ಹಿಂತಿರುಗುವುದಾಗಿ ತಿಳಿಸಿದರು.

"ಹಿಮಾಚಲದಲ್ಲಿ ಎಲ್ಲಿ ಇರುತ್ತೀರಿ?"

"ಅಘೋರಿಗಳ ಪದ್ಧತಿಯಂತೆ ಶ್ಮಶಾನದಲ್ಲಿ ವಾಸಿಸುತ್ತೇನೆ."

"ಅಲ್ಲೇನು ಮಾಡುತ್ತೀರಿ?"

"ಶವ ದಹನದ ಸಲುವಾಗಿ ಕಟ್ಟಿಗೆ ತಂದು ದಹನ ಸಂಸ್ಕಾರದಲ್ಲಿ ನೆರವು ನೀಡುತ್ತೇನೆ."

"ಮತ್ತೇನು ಮಾಡುತ್ತೀರಿ?"

"ಮಂತ್ರೋಚ್ಚಾರಣೆಯಲ್ಲಿ ಮತ್ತು ನಮ್ಮ ಪಂಥಕ್ಕೇ ವಿಶಿಷ್ಟವಾಗಿರುವ ಆಚರಣೆಗಳಲ್ಲಿ ಸಮಯ ಕಳೆಯುತ್ತೇನೆ"

"ನಿಮ್ಮ ಸಂಪ್ರದಾಯದಲ್ಲಿ ಸಾಧುಗಳು ಹೆಣದ ಮಾಂಸವನ್ನು ತಿನ್ನುತ್ತಾರೆಂದು ನನ್ನ ತಿಳುವಳಿಕೆ. ನೀವು ಎಂದಾದರೂ ಹೆಣದ ಮಾಂಸ ತಿಂದಿದ್ದೀರಾ?"

"ಹೌದು. ಹಲವು ಬಾರಿ ತಿಂದಿದ್ದೇನೆ. ನಾನು ಎಲ್ಲವನ್ನೂ ತಿನ್ನುತ್ತೇನೆ. ಮತ್ತು 'ಭೈರವನ ಬಟ್ಟಲನ್ನೂ(ಹೆಂಡವನ್ನು) ಕುಡಿಯುತ್ತೇನೆ."

"ನಿಮ್ಮ ಪಂಥದವರು ಭೂತಗಳನ್ನು ಮತ್ತು ದುಷ್ಟ ಪ್ರೇತಗಳನ್ನು ನಿಯಂತ್ರಿಸುವ ಸಾಮರ್ಥ್ಯವುಳ್ಳವರು ಎಂದು ಕೇಳಿದ್ದೇನೆ. ನಿಮಗೆ ಅದು ಸಾಧ್ಯವೆ?"

"ಇಲ್ಲ, ಇಲ್ಲ! ಭೂತ ಪ್ರೇತಗಳಾವೂ ಇಲ್ಲ."

ಆದಾಗ್ಯೂ ಮಾತು-ಕತೆ ಮುಂದುವರಿದಂತೆ ದುಷ್ಟ ಪ್ರೇತಗಳಿವೆ ಎಂಬುದನ್ನು ಒಪ್ಪಿಕೊಂಡರು. ಆದರೆ ಅವರಿಗೆ ವಿಶೇಷ ಶಕ್ತಿಗಳು ಪ್ರಾಪ್ತವಾಗಿರುವುದರಿಂದ ಈ ಪ್ರೇತಗಳು ಅವರನ್ನೇನೂ ಮಾಡಲಾರವು ಎಂದರು.

"ಈ ಶಕ್ತಿಗಳನ್ನು ನೀವು ಹೇಗೆ ಪಡೆದುಕೊಂಡಿರಿ?"

"ಕೆಲವೊಂದು ಆಚರಣೆಗಳನ್ನು ಮಾಡಿದ್ದರಿಂದ. ಹೆಣಗಳ ಮಾಂಸ ತಿನ್ನುವುದರಿಂದಲೂ ಈ ಶಕ್ತಿ ಪ್ರಾಪ್ತವಾಗುತ್ತದೆ. ಸತ್ತವರ ಬಗೆಗಿನ ಭೀತಿ ನೀಗಿಕೊಂಡರೆ ದೆವ್ವ ಪಿಶಾಚಿಗಳ ಭಯವಿರುವುದಿಲ್ಲ."

"ಇತರೆ ಪಂಥಗಳ ಸಾಧುಗಳು ನಿಮ್ಮ ಗುಂಪಿನೊಂದಿಗೆ ಸೇರುತ್ತಾರೆಯೆ?

"ಹೌದು ಸೇರುತ್ತಾರೆ. ಯಾವುದೇ ಸಮಸ್ಯೆ ಇಲ್ಲ."

"ಈ ಜೀವನದಿಂದ ನೀವು ಸುಖವಾಗಿದ್ದೀರಾ? ನಿಮ್ಮ ವಿಚಿತ್ರ ಆಚರಣೆಗಳಿಂದಾಗಿ ಜನರು ನಿಮ್ಮ ಬಗ್ಗೆ ಭಯದ ಪ್ರತಿಕ್ರಿಯೆ ತೋರುತ್ತಾರಲ್ಲವೆ?"

"ಇಲ್ಲ. ನೋಡಿ, ನಾನು ಮಾಟ ಮಂತ್ರ ಮಾಡಲ್ಲ."

ಕೆಲವೊಂದು ಸಂಪ್ರದಾಯಗಳಲ್ಲಿ ಚರಸ್ ಸೇವನೆಗೊಂದು ಸುದೀರ್ಘ ಇತಿಹಾಸವೇ ಇದೆ ಮತ್ತು ಅದನ್ನು ಅಂಗೀಕರಿಸಲಾಗಿದೆ. ಶೈವ ಸಂಪ್ರದಾಯದಲ್ಲಿ ಒಂದು ದರ್ಶನದ(ಕಾಣ್ಕೆ) ಸಲುವಾಗಿ ಚರಸ್ ಸೇವಿಸಲು ಪ್ರೋತ್ಸಾಹಿಸಲಾಗುತ್ತದೆ. ಕೆಲವೊಮ್ಮೆ ಮಾದಕ ವಸ್ತುಗಳು ಇಲ್ಲವೆ ಹೆಂಡವನ್ನು ಹೆಚ್ಚಾಗಿ ಸೇವಿಸುವ ವ್ಯಕ್ತಿಗಳೂ ಇದ್ದಾರೆ. ಇಂಥ ಕೆಲವು ನಿದರ್ಶನಗಳು ನಮಗೆ ದೊರಕಿದವು.

ಒರಿಸ್ಸಾದ ಒಬ್ಬ ಸಾಧುವನ್ನು ಆತ ಗಾಂಜಾ ಸೇದುತ್ತಾನೋ ಹೇಗೆ ಎಂದು ಕೇಳಿದೆ?

"ಖಂಡಿತವಾಗಿಯೂ. ಗಾಂಜಾ ಸೇವಿಸುವುದರಿಂದ ಪೂರ್ಣ ಶಾಂತಿ ಸಿಗುತ್ತದೆ. ಚಳಿಯಾಗುವುದಿಲ್ಲ. ಇಲ್ಲೆಲ್ಲಾ ಅದನ್ನು ಬೆಳೆಯುತ್ತಾರೆ."

"ಹಾಗಾದರೆ ನಿಮಗೆ ಹಶೀಶ್ ಸುಲಭವಾಗಿ ಸಿಗುತ್ತೆ?"

"ಹೌದು. ಅದಕ್ಕೆ ಇದು ಒಳ್ಳೆ ಸೀಸನ್. ಈಗ ಹಶೀಶ್ ಎಲೆಗಳನ್ನು ಒಣಗಿಸುತ್ತಿರುತ್ತಾರೆ. ಆದರೆ ಹುಶಾರ್. ಅದು ಕಾನೂನಿಗೆ ವಿರುದ್ಧವಾದ್ದರಿಂದ ಸಿಕ್ಕಿಹಾಕಿಕೊಂಡರೆ ಜೈಲಿಗೆ

ಹೋಗಬೇಕಾಗುತ್ತೆ. ಹಶೀಶ್ ಕಾನೂನಿಗೆ ವಿರುದ್ಧವಾದ್ದು; ಅದೇ ಅದಕ್ಕಿಂತ ಕೆಟ್ಟದಾದ ಮದ್ಯ ಕಾನೂನು ವಿರುದ್ಧವಲ್ಲ; ಎಷ್ಟೊಂದು ಹಾಸ್ಯಾಸ್ಪದ ನೋಡಿ"

"ನಾನೊಬ್ಬ ಮನೋವೈದ್ಯ. ಹಶೀಶ್ ಸೇವಿಸಿದ್ದರಿಂದ ಮಾನಸಿಕ ಸಮತೋಲನವನ್ನು ಕಳೆದುಕೊಂಡವರನ್ನು ನೋಡುತ್ತಿರುತ್ತೇನೆ"

"ಅವರುಗಳು ಬರಿಹೊಟ್ಟೆಯಲ್ಲಿ ಹಶೀಶ್ ಸೇವಿಸುವುದರಿಂದಲೇ ಹೀಗೆ ಆಗಿರಬೇಕು. ಮುಂದೆ ಇಂಥ ರೋಗಿಗಳು ನಿಮ್ಮ ಹತ್ತಿರ ಬಂದರೆ ಅವರಿಗೆ ಬೇರೆ ಏನೂ ಔಷಧಿ ಕೊಡಬೇಡಿ. ಸ್ವಲ್ಪ ಶುದ್ಧ ಹಸುವಿನ ತುಪ್ಪವನ್ನು ಮೂಗಿನ ಹೊಳ್ಳೆಗಳೊಳಕ್ಕೆ ಸೇದಿಕೊಳ್ಳುವಂತೆ ಹೇಳಿ. ಕೂಡಲೇ ತುಪ್ಪವು ಹಶೀಶ್‌ನ ಒಣ ಹೊಗೆಯೊಂದಿಗೆ ಮಿಶ್ರವಾಗಿ ಅದನ್ನು ಚೆನ್ನಾಗಿ ಸವರಿದಂತಾಗುತ್ತದೆ. ಇದನ್ನು ಹದಿನೈದು ದಿವಸ ಮಾಡಿದರೆ ಅವನು ಸರಿಹೋಗುತ್ತಾನೆ. ನನಗೆ ಒಂದು ಸಲ ಹೀಗಾಗಿತ್ತು. ನಾನು ಒಂದು ಹಳ್ಳಿಗೆ ಹೋಗಿದ್ದೆ. ಅಲ್ಲಿಯ ಜನರೆಲ್ಲ ನನ್ನ ಸುತ್ತ ಮುತ್ತಿಕೊಂಡು ಹೆಚ್ಚು ಕಡಿಮೆ ಹೊಡೆಯಲು ಸಿದ್ಧರಾಗಿಬಿಟ್ಟರು. ನಾನು ಯಾಕೆ ಹೀಗೆ ಮಾಡುತ್ತಿದ್ದೀರಿ ಅಂತ ಕೇಳಿದೆ. ನನ್ನಂಥ ಒಬ್ಬ ಬಾಬಾ ಹೇಳಿದ್ದರಿಂದ ಹಳ್ಳಿಯ ಒಬ್ಬ ಯುವಕ ಹಶೀಶ್ ತೆಗೆದುಕೊಳ್ಳುತ್ತಾ ಇದ್ದು ಈಗ ಹುಚ್ಚನಾಗಿಬಿಟ್ಟಿದ್ದಾನೆ ಎಂದು ಹೇಳಿದರು. ನಾವು ಕೆಟ್ಟ ಪ್ರಭಾವ ಬೀರುತ್ತೇವೆ ಎಂದು ಅವರ ಯೋಚನೆ. ನಾನು ಆ ಯುವಕನನ್ನು ಕರೆದು ಹದಿನೈದು ದಿನ ನನ್ನ ಜೊತೆ ಇಟ್ಟುಕೊಂಡು ಅವನಿಗೆ ಈ ತುಪ್ಪದ ಔಷಧೋಪಚಾರ ಮಾಡಿದೆ. ಅವನು ಮೊದಲಿನ ಹಾಗೆ ಸರಿಹೋಗಿಬಿಟ್ಟ."

ಎಲ್ಲ ಸಾಧುಗಳೂ ಸಂನ್ಯಾಸ ಜೀವನವನ್ನು ಪಾಲಿಸುವುದರಲ್ಲಿ ಸಫಲರಾಗುವುದಿಲ್ಲ. ನಾನು ತಂಗಿದ್ದ ಆಶ್ರಮಕ್ಕೆ ಒಂದು ಸುಡುಬಿಸಿಲ ಮಧ್ಯಾಹ್ನದಲ್ಲಿ ನಡೆದುಹೋಗುತ್ತಿರುವಾಗ ರಮೇಶ್ ಗಿರಿಯನ್ನು ಭೇಟಿಮಾಡಿದೆ. ನನ್ನ ಬೆನ್ನ ಹಿಂದಿನಿಂದ ಒಂದು ಅತಿ ಕರ್ಕಶ ದನಿ ಕೇಳಿಬಂತು.

"ಐದು ರೂಪಾಯಿ ಕೊಡಿ"

ನಾನು ಹಿಂತಿರುಗಿ ನೋಡಿದರೆ ಕಪ್ಪನೆಯ, ಎತ್ತರದ ಉದ್ದುದ್ದನೆಯ ಗುಂಗುರು ಕೂದಲಿನ, ಕೆಂಪು ಬಣ್ಣದ ಕಮೀಜ್ ಮತ್ತು ಕೊಳಕು ಚಡ್ಡಿಗಳನ್ನು ಧರಿಸಿದ್ದ, ಹೇಗೆಹೇಗೋ ಸುತ್ತಿಕೊಂಡಿದ್ದ ಪೇಟದೊಂದಿಗೆ ಒಬ್ಬ ಯುವಕ ಕಣ್ಣಿಗೆ ಬಿದ್ದ.

ಅವನ ಕೈಯಲ್ಲೊಂದು ದೊಣ್ಣೆ ಇತ್ತು. ಇನ್ನೊಂದು ಕೈಯಲ್ಲಿ ಬಟ್ಟೆಗಳ ಗಂಟು ಮತ್ತು ಹೆಗಲ ಮೇಲೊಂದು ಹರಿದ ಕಂಬಳಿ ಇತ್ತು. ಅವನ ಕಣ್ಣುಗಳು ಹೊಳೆಯುತ್ತಿದ್ದವು ಮತ್ತು ನೋಡಲು ಭಯಂಕರವಾಗಿದ್ದನು.

"ಐದು ರೂಪಾಯಿ ಕೊಡಿ" ಅವನು ಮತ್ತೆ ಕೇಳಿದ. "ನಾನು ಬದರೀನಾಥಕ್ಕೆ ಹೋಗಬೇಕು."

ಹಣ ಕೇಳುವ ರೀತಿಯಲ್ಲಿ ಅವನಿಗಿದ್ದ ಭರವಸೆ ನನ್ನಲ್ಲಿ ಆಸಕ್ತಿ ಮೂಡಿಸಿತು. ನಾನು ಅವನನ್ನು ಸಮೀಪಿಸಿದೆ. ಅಗ್ಗದ ಹೆಂಡದ ವಾಸನೆ ಮೂಗಿಗೆ ಹೊಡೆಯಿತು. ಅವನು ಮಾತಾಡುವಾಗ ತಡವರಿಸುತ್ತಿದ್ದುದು ಮತ್ತು ಕಾಲುಗಳು ಕಂಪಿಸುತ್ತಿದ್ದುದು ಕಂಡುಬಂತು.

"ಆಯಿತು ಕೊಡುತ್ತೇನೆ. ನನ್ನ ಜೊತೆ ಮಾತಾಡಿದರೆ ನಿನಗೆ ಬದರೀನಾಥಕ್ಕೆ ಹೋಗಲು ಬೇಕಾಗುವಷ್ಟು ಹಣ ಕೊಡುತ್ತೇನೆ" ಎಂದೆ.

ಕುಳಿತುಕೊಳ್ಳಲು ಎಲ್ಲಾದರೂ ಜಾಗವಿದೆಯೋ ಹೇಗೆ ಎಂದು ಸುತ್ತ ನೋಡಿದೆ. ಭಯಂಕರ ಸೆಕೆ ಇತ್ತು. ಕೂರಲು ಎಲ್ಲೂ ಜಾಗವಿರಲಿಲ್ಲ. ಆಶ್ರಮದ ನೌಕರನೊಬ್ಬ ಅಲ್ಲೇ ಹತ್ತಿರದಲ್ಲಿರುತ್ತಿದ್ದ. ಅವನ ಮನೆಯ ಬಾಗಿಲು ತಟ್ಟುವುದಕ್ಕೆ ಮುನ್ನವೇ ಅವನೇ ನನ್ನ ಕಡೆಗೆ ನಡೆದು ಬರುತ್ತಿದ್ದುದನ್ನು ನೋಡಿದೆ. ಅವನು ನನಗೆ 'ನಮಸ್ಕಾರ' ಎಂದು ಹೇಳಿ ತನ್ನ ಮನೆಗೆ ಆಹ್ವಾನಿಸಿದ.

"ಈ ಬಾಬಾನನ್ನು ನಾನು ಕರೆತರಬಹುದೆ" ಎಂದು ಕೇಳಿದೆ.

ಅವನು ಹಿಂದೆಮುಂದೆ ನೋಡದೆ, ಬಾಬಾನ ವಿಚಿತ್ರ ವೇಷ ಭೂಷಣದತ್ತ ಗಮನ ಕೊಡದೆ "ಓಹೋ ಅದಕ್ಕೇನಂತೆ" ಎಂದನು. ನನ್ನ ಜೊತೆ ಇದ್ದವನು ಹೇಳಿಕೇಳಿ ಗೌರವಾರ್ಹನಾದ ಸನ್ಯಾಸಿ, ಮತ್ತು ನನಗೆ ಗೊತ್ತಿದ್ದ ಮನುಷ್ಯ. ಇದಿಷ್ಟು ಅವನಿಗೆ ನಮ್ಮನ್ನು ಒಳಗೆ ಕರೆಯಲು ಸಾಕಾಗಿತ್ತು.

ನಾವೆಲ್ಲರೂ ಒಟ್ಟಿಗೇ ಮನೆಯೊಳಗೆ ಪ್ರವೇಶಿಸಿದೆವು. ನನ್ನ ಪರಿಚಯದ ವ್ಯಕ್ತಿಯ ಯುವ ಪತ್ನಿಯಾಗಲಿ ಅವನ ಚಿಕ್ಕ ಮಕ್ಕಳಾಗಲಿ ನಾವು ಮನೆಯೊಳಗೆ ಹೋದದ್ದರಿಂದ ಯವುದೇ ಕಸಿವಿಸಿ ತೋರಲಿಲ್ಲ. ಭಾರತೀಯನೊಬ್ಬನ ಮನೆಗೆ ಒಬ್ಬ ಅತಿಥಿ ಮತ್ತು ಸಂನ್ಯಾಸಿಗೆ ಸದಾ ಸ್ವಾಗತವಿರುತ್ತದೆ.

ಆ ಕುಟುಂಬದವರು ನಮಗೆ ಆ ಕೊಠಡಿಯಲ್ಲಿದ್ದ ಏಕೈಕ ಪೀಠೋಪಕರಣವಾದ ಹಾಸಿಗೆಯ ಮೇಲೆ ಕುಳಿತುಕೊಳ್ಳಲು ಹೇಳಿದರು. ನಾನು ಅದನ್ನೊಪ್ಪಿ ಕುಳಿತೆ. ಆದರೆ ಸಾಧುವು ನೆಲದ ಮೆಲೆ ಕೂರಲು ಬಯಸಿದ.

"ನಿಮ್ಮ ಬಗ್ಗೆ ಹೇಳಿ" ಎಂದು ಕೇಳಿದೆ. ಅವನು ಉತ್ತರಿಸುವ ಮುನ್ನ ನಾನಾರು ಮತ್ತು ಅವನ ಬಗ್ಗೆ ತಿಳಿಯಲು ನನಗೇಕೆ ಆಸಕ್ತಿ ಎಂಬ ಬಗ್ಗೆ ಹೇಳಿದೆ.

"ನೀವು ನನಗಿಂತ ವಯಸ್ಸಿನಲ್ಲಿ ಹಿರಿಯರು, ಬಹುಶಃ ನನ್ನ ತಂದೆಗಿತ ಹಿರಿಯರು" ಎಂದನು. ಅದರರ್ಥ ದೊಡ್ಡವರು ಏನು ಕೇಳಿದರೂ ಹೇಳಬೇಕು ಎನ್ನುವ ಇಂಗಿತವಿದ್ದಂತಿತ್ತು.

"ನಾನು ಹಿರಿಯನೆನ್ನುವುದಾದರೆ ನೀವು ಇಷ್ಟೊಂದು ಏಕೆ ಕುಡಿದಿದ್ದೀರಿ ಅಂತ ಕೇಳಬಹುದೆ?"

ಆ ಮನುಷ್ಯ ಮೊದಲಿಗೆ ಕುಡಿದಿಲ್ಲ ಎಂದು ಹೇಳಲು ಯತ್ನಿಸಿದ. ಆದರೆ ಆಮೇಲೆ ನಾಚಿಕೆಯಿಂದ "ಹೌದು, ಅದೊಂದು ದುರಭ್ಯಾಸ" ಎಂದು ಒಪ್ಪಿಕೊಂಡ.

ಆ ನಂತರ ತನ್ನ ಬಗ್ಗೆಯೇ ಹೇಳತೊಡಗಿದನು. ಅವನಿಗೀಗ ಮೂವತ್ತೈದು ವರ್ಷ. ಹದಿನೈದು ವರ್ಷಗಳ ಹಿಂದೆ ಮನೆಬಿಟ್ಟಿದ್ದನು. ಕಾರಣವೇನು ಎಂದು ಕೇಳಿದಾಗ ಅವನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು ಮತ್ತು ಕಂಠ ಗದ್ಗದಿತವಾವಾಯಿತು.

"ನನ್ನ ತಂದೆ ತಾಯಿಗಳು ಮುದುಕರಾಗಿದ್ದರು. ಅಮ್ಮನಿಗೆ ಅಡುಗೆ ಮಾಡಲಾಗುತ್ತಿರಲಿಲ್ಲ. ನನ್ನ ಅತ್ತಿಗೆ ಅಡುಗೆ ಮನೆಯ ಯಜಮಾನತಿ ಆಗಿದ್ದರು. ನಾನು ಯಾವಾಗ ಊಟಮಾಡಲು ಅಡುಗೆಮನೆಗೆ ಹೋದರೂ ಯಾವುದಕ್ಕೂ ಕೆಲಸಕ್ಕೆ ಬರದವನು ಎಂದು ಅತ್ತಿಗೆ ಮೂದಲಿಸುತ್ತಿದ್ದಳು. ಕಾರಣವಿಲ್ಲದೆ ನನ್ನನ್ನು ಬೈಯುತ್ತಿದ್ದಳು. ನನ್ನ ಬಡಪಾಯಿ ತಾಯಿಗೇನೋ ನನ್ನ ಬಗ್ಗೆ ಸಹಾನುಭೂತಿ ಇತ್ತು. ಆದರೆ ಅತ್ತಿಗೆ ನನ್ನ ವಿರುದ್ಧ ನಿಲ್ಲಲು ನಮ್ಮ ತಂದೆಯ ಬೆಂಬಲ ಸಂಪಾದಿಸಿದ್ದಳು. ಒಂದು ದಿನ ಇನ್ನು ಹೆಚ್ಚು ಸಹಿಸಲು ಸಾಧ್ಯವಾಗದೆ ಸನ್ಯಾಸಿಯಾಗಲು ಮನೆಬಿಟ್ಟು ಹೊರಟೆ."

"ನೀವು ಎಲ್ಲಿಗೆ ಹೋದಿರಿ?"

ಆತ ವೃಂದಾವನಕ್ಕೆ ಹೋದನು. ಆದರೆ ಅಲ್ಲಿ ಕೇವಲ ಒಂದು ತಿಂಗಳು ಇದ್ದನು. ಅವನು ಗುರುವನ್ನು ಹುಡುಕಿಕೊಂಡು ಹೋಗಲಿಲ್ಲ.(ಬಹುಶಃ ಯಾವ ಗುರುವೂ ಅವನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಲು ಸಿದ್ಧನಿರಲಿಲ್ಲ.)

ಅಲ್ಲಿ ಭಿಕ್ಷೆ ಬೇಡಿಕೊಂಡು ಜೀವನ ಸಾಗಿಸುತ್ತಿದ್ದನು.

"ಆಗ ಇತರೆ ಭಿಕ್ಷುಕರಿಗೆ ನನ್ನ ಬಗ್ಗೆ ಅಸೂಯೆ ಉಂಟಾಯಿತು." ಎಂದನು

"ಏಕೆ?"

ಅವನ ಮುಖದ ಮೇಲೊಂದು ಮುಗುಳು ನಗೆ ಸುಳಿಯಿತು. ಸ್ವಲ್ಪ ಗರ್ವದಿಂದ– "ಏಕೆಂದರೆ ಭಿಕ್ಷೆ ಬೇಡುವ ಕಲೆಯಲ್ಲಿ ನಾನು ನಿಪುಣನಾಗಿದ್ದೆ. ನಾನು ಎಲ್ಲ ಯಾತ್ರಿಕರ ಸಹಾನುಭೂತಿಯನ್ನು ಸಂಪಾದಿಸಿಬಿಡುವೆನೆನ್ನುವ ಕಾರಣಕ್ಕೆ ಅವರ ಜೊತೆ ನಾನು ಭಿಕ್ಷೆಗೆ ಹೋಗಲು ಬಿಡುತ್ತಿರಲಿಲ್ಲ. ಬೇಗನೆ ಅವರು ನನ್ನನ್ನು ಹೆದರಿಸುವುದು–ಬೆದರಿಸುವುದು ಮಾಡತೊಡಗಿದರು. ಹಾಗಾಗಿ ಆ ಜಾಗ ಬಿಡಬೇಕಾಯಿತು."

ಇದರ ನಂತರ ಆ ವ್ಯಕ್ತಿ ಹರಿದ್ವಾರಕ್ಕೆ ಬಂದು ಭಿಕ್ಷೆ ಬೇಡುವ ಮೂಲಕ ಹೊಟ್ಟೆಹೊರೆಯುತ್ತ ಅಲ್ಲಿ ಇಲ್ಲಿ ಸುತ್ತಾಡತೊಡಗಿದನು.

"ನಿಮಗೆ ಅಲ್ಲಿ ಗುರು ಸಿಕ್ಕಿದರೆ?"

"ಹೌದು, ಸಿಕ್ಕಿದರು. ಆದರೆ ಅವರು ಸರಿ ಇರಲಿಲ್ಲ. ಅವರೇ ಒಬ್ಬ ಕುಡುಕ ಮತ್ತು ವ್ಯಭಿಚಾರಿ. ಅವರು ನನ್ನಿಂದ ಮತ್ತು ಮತ್ತು ನನ್ನ ಜೊತೆಯಿದ್ದ ಗುರುಭಾಯಿಯ ಕಡೆಯಿಂದ ಸಾಮಾನುಗಳನ್ನು ಕದಿಯುತ್ತಿದ್ದರು. ನನಗೆ ಮದ್ಯದಿಂದ ಕೂಡಿದ ಪಾನೀಯ ಕೊಟ್ಟರು. ಅದಾದ ಮೇಲೆ ನಾನು ಕುಡಿತ ಶುರು ಮಾಡಿದೆ." ನಾನು ಅರ್ಥಮಾಡಿ ಕೊಳ್ಳಬಹುದೆಂದು ಭಾವಿಸಿ ಹೇಳಿದನು.

ನಾನು ಸಹಾನುಭೂತಿ ತೋರಿಸದೆ ಇದ್ದಾಗ "ಅದೆಲ್ಲ ಕೆಟ್ಟ ವ್ಯವಹಾರ" ಎಂದು ತಪ್ಪಿತಸ್ಥ ಭಾವನೆಯಿಂದ ಹೇಳಿದ.

"ಹಾಗಾದರೆ ನೀವು ಕಾಲ ಹೇಗೆ ಕಳೆಯುತ್ತೀರಿ? ಊಟಕ್ಕೇನು ಮಾಡುತ್ತೀರಿ?"– ಎಂದು ಕೇಳಿದೆ.

ಅವನು ಎದೆ ತಟ್ಟಿಕೊಂಡು "ಇಲ್ಲಿ ಅನೇಕ ಅನ್ನಕ್ಷೇತ್ರಗಳಿವೆ. ಅವುಗಳನ್ನು ನೀವೂ ನೋಡಿರಬಹುದು. ನಾನು ಅಲ್ಲೆಲ್ಲೂ ಊಟಮಾಡಲ್ಲ. ನನ್ನ ಸಂಪಾದನೆಯಿಂದಲೇ ನಾನು ತಿನ್ನುತ್ತೇನೆ. ಹಗಲು ಹೊತ್ತಿನಲ್ಲಿ ನಾನು ಭಿಕ್ಷೆ ಬೇಡುತ್ತೇನೆ. ರಾತ್ರಿ ಅಡುಗೆ ನಾನೇ ಮಾಡಿಕೊಳ್ಳುತ್ತೇನೆ."

ನಾನು ವಿಷಯಾಂತರ ಮಾಡಿ – "ನೀವು ಎಲ್ಲೆಲ್ಲಿ ಸಂಚಾರ ಮಾಡಿದ್ದೀರಿ?" ಎಂದು ಕೇಳಿದೆ.

"ನಾನು ಎಲ್ಲ ನಾಲ್ಕೂ ಧಾಮಗಳಿಗೆ ಹಲವಾರು ಸಲ ಹೋಗಿದ್ದೇನೆ." ಎಂದನು.

"ಅದು ಯಾಕೆ ಅಷ್ಟೊಂದು ಸಲ ಹೋದಿರಿ?" ಎಂದೆ

"ನೀವು ನಿಜಕ್ಕೂ ತುಂಬ ತಮಾಷೆ ವ್ಯಕ್ತಿ. ಎಂಥಾ ವಿಚಿತ್ರ ಪ್ರಶ್ನೆ ಕೇಳುತ್ತಿದ್ದೀರಿ" ಎಂದು ನಕ್ಕ.

ಉತ್ತರ ಕೊಡಬೇಕು ಎಂದು ನಾನು ಒತ್ತಾಯಿಸಿದಾಗ ಒಂದು ಬೀಡಿ ಸೇದಿದ ಮೇಲೆ ಉತ್ತರ ಕೊಡುವುದಾಗಿ ಹೇಳಿದ. ನನಗೂ ಒಂದು ಬೀಡಿ ಮುಂದೆ ಚಾಚಿದ. ನಾನು ತಿರಸ್ಕರಿಸಿದಾಗ ಅವನು "ನೀವು ನನಗಿಂತ ಹಿರಿಯರು. ನನ್ನ ಜೊತೆ ಬೀಡಿ ಸೇದಿ ಎಂದು ನಾನು ಕೇಳಬಾರದು." ಎಂದು ಹೇಳಿ ಕ್ಷಮೆಕೇಳಿದ.

ಅವನು ಕುಡಿದಿದ್ದ. ಆದರೆ ಸಾಮಾಜಿಕ ಶಿಷ್ಟಾಚಾರಗಳ ಬಗ್ಗೆ ಚೆನ್ನಾಗಿ ತಿಳಿದಿದ್ದನು. ಆಮೇಲೆ ನನ್ನ ಪ್ರಶ್ನೆಗೆ ಉತ್ತರಿಸಿದನು.

"ಒಂದೇ ಜಾಗದಲ್ಲಿ ನೀವು ನೆಲೆ ನಿಂತರೆ ಜನರಿಗೆ ಕ್ರಮೇಣ ನಿಮ್ಮ ಬಗ್ಗೆ ಬೇಸರ ಹುಟ್ಟುತ್ತದೆ. 'ಈ ಮೂರ್ಖ ಇಲ್ಲೇ ಯಾಕೆ ತಾರಾಡುತ್ತಾ ಇದ್ದಾನೆ' ಅಂತ ಕೇಳುತ್ತಾರೆ. ನೋಡಿ, ನಾನು ಒಳ್ಳೆಯ ಮನುಷ್ಯ. ಆದರೆ ನನಗೆ ನನ್ನದೇ ಆದ ದೌರ್ಬಲ್ಯಗಳಿವೆ. ನೀವು ನನ್ನನ್ನು ಹೊಡೆಯಬಹುದು ಎನ್ನುವ ಕಾರಣಕ್ಕೆ ನನ್ನ ದೌರ್ಬಲ್ಯಗಳನ್ನೆಲ್ಲಾ

ನಿಮಗೆ ಹೇಳಲ್ಲ. ಆದರೆ ಒಂದು ತಿಳಿದುಕೊಳ್ಳಿ, ಒಂದೇ ಜಾಗದಲ್ಲಿ ಬಹಳ ಕಾಲದವರೆಗೂ ತಂಗುವುದು ಬುದ್ಧಿವಂತಿಕೆಯಲ್ಲ."

ಸದಾ ಸಂಚಾರಿ ಸಾಧು ಆಗುವುದಕ್ಕೆ ಇಲ್ಲೊಂದು ಹೊಸ ವಿವರಣೆ ಸಿಕ್ಕಿತು!

ಅವನು ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆ ಹೇಳಲು ಶುರು ಮಾಡಿದ–" ನಾನು ಬರೀ ಚರಸ್ ಸೇದುತ್ತಿದ್ದೆ. ಆದರೆ ಈ ಗುರುಭಾಯಿಗಳು ಕುಡಿಯುವುದನ್ನು ಕಲಿಸಿದರು".

ಒಂದು ಪ್ಲಾಸ್ಟಿಕ್ ಬ್ಯಾಗ್ ತೆಗೆದು ಚರಸ್ ಅಂದರೆ ಹೇಗಿರುತ್ತೆ ಅಂತ ತೋರಿಸಿದ.

"ಆದರೆ ತಿರುಗಾಡೋದೂ ಒಂದು ಥರಕ್ಕೆ ಒಳ್ಳೆಯದೇ". ಮುಂದುವರೆಸುತ್ತ – "ದಾರಿಯಲ್ಲಿ ಬೇಕಾದಷ್ಟು ಜನ ಸಿಕ್ಕುತ್ತಾರೆ. ನಾನು ನಾಲ್ಕೂ ಧಾಮಗಳಿಗೆ ಐದು ಸಲ ಹೋಗಿದ್ದೀನಿ" ಎಂದನು.

ಅವನಿಗೆ ಇನ್ನು ಹೆಚ್ಚು ಮಾತನಾಡುವುದು ಬೇಕಿರಲಿಲ್ಲ. ಮನೆಯಾಕೆ ತಂದುಕೊಟ್ಟ ಚಹಾ ಹೀರಲು ಪ್ರಾರಂಭಿಸಿದ. ಈ ಕುಡುಕನಿಗೆ ಆಕೆ ಚಹಾ ಕೊಡುತ್ತಿದ್ದುದು ಆಶ್ಚರ್ಯವುಂಟುಮಾಡಿತು. ಅದನ್ನೂ ಅತ್ಯಂತ ಗೌರವದಿಂದ ಮಾಡಿದಳು.

ಎಷ್ಟೇ ಆದರೂ ಅವನೊಬ್ಬ ಸನ್ಯಾಸಿ ತಾನೆ !

ನಾನು ಮನೆಯ ಮಕ್ಕಳ ಜೊತೆ ಮಾತಾಡಲಾರಂಭಿಸಿದೆ. ಅವರ ಫೋಟೋ ತೆಗೆದುಕೊಳ್ಳಲಿಚ್ಛಿಸಿದೆ. ಆಗ ಈ ಸಾಧು ತನ್ನ ಫೋಟೋ ಕೂಡ ತೆಗೆಯಿರಿ ಎಂದು ಅಂಗಲಾಚಿದ. ನಾನು ಆಯಿತು ಅಂತ ಒಪ್ಪಿಕೊಂಡೆ. ಆದರೆ ಫೋಟೋ ಹೇಗೆ ಕಳಿಸಲಿ ಅಂತ ಕೇಳಿದೆ.

"ಅದನ್ನು ನಮ್ಮ ಮನೆ ಅಡ್ರೆಸ್ಸಿಗೆ ಕಳಿಸಿಬಿಡಿ" ಎಂದು ಉತ್ಸಾಹದಿಂದ ಹೇಳಿದ.

"ಆದರೆ ನೀವು ಮನೆ ಬಿಟ್ಟುಬಿಟ್ಟಿದ್ದೀರಲ್ಲಾ" ಎಂದೆ.

"ಇಲ್ಲ, ನಾನು ರಾಖಿ ಕಟ್ಟಿಸಿಕೊಳ್ಳಲು ವರ್ಷಕ್ಕೊಂದು ಸಲ ಅಲ್ಲಿಗೆ ಹೋಗುತ್ತೀನಿ"

ಸೋದರಿಯಾದವಳು ತನ್ನ ಸೋದರನ ಮಣಿಕಟ್ಟಿಗೆ ಒಂದು ಪವಿತ್ರ ದಾರ ಕಟ್ಟುವ ಹಬ್ಬ ರಾಖಿ. ಅದಕ್ಕೆ ಪ್ರತಿಯಾಗಿ ಸೋದರನು ಸೋದರಿಗೆ ಒಂದು ಉಡುಗೊರೆ ನೀಡುತ್ತಾನೆ ಮತ್ತು ಸದಾ ಸೋದರಿಯ ಮರ್ಯಾದೆ ಕಾಪಾಡುವುದಾಗಿ ಮಾತು ಕೊಡುತ್ತಾನೆ. ಬಹುಶಃ ತನ್ನ ಸೋದರಿಯರನ್ನು ನೆನಪಿಸಿಕೊಂಡೋ ಏನೋ ಆ ಸಾಧು ಅಳಲಾರಂಭಿಸಿದ. ಅಳು ನಿಲ್ಲಿಸಿದ ಮೇಲೆ – "ನಾನು ಕುಡಿಯುವುದನ್ನು ಬಿಟ್ಟುಬಿಡಬೇಕು. ನನಗೊಂದು ಸಹಾಯ ಮಾಡುತ್ತೀರಾ? ನೀವು ನನ್ನ ಹಿರಿಯರು. ನನ್ನ ತಲೆ ಮೇಲೆ ನಿಮ್ಮ ಕೈ ಇಡಿ" ಎಂದ. ಅವನ ತಲೆಯ ಮೇಲೆ ನಾನು ಕೈ ಇಟ್ಟ ಮೇಲೆ, ಅವನು ನಾಟಕೀಯವಾಗಿ– "ನೋಡಿ ನಾನು ಮಾತು ಕೊಡುತ್ತಾ ಇದ್ದೀನಿ; ಇನ್ನೆಂದೂ ನಾನು ಕುಡಿಯಲ್ಲ." ಎಂದು ಹೇಳಿದ.

ಅವನಿಗೆ ಬದರೀನಾಥಕ್ಕೆ ಹೋಗಲು ಅನುಕೂಲವಾಗಲಿ ಎಂದು ಮೂವತ್ತು ರೂಪಾಯಿ ಕೊಟ್ಟೆ. ಮರು ದಿನ ಇನ್ನೊಬ್ಬ ಸಾಧುವಿನ ಜೊತೆಯಲ್ಲಿ, ಗಂಗೆಯ ದಡದಲ್ಲಿ ಬಹಳ ಉತ್ಸಾಹದಿಂದ ಓಡಾಡ್ತಾ ಇದ್ದ. ಅವನು ಮತ್ತೆ ಕುಡಿದಿದ್ದಂತೆ ಕಾಣುತ್ತಿದ್ದ. ನಾನು ಕೊಟ್ಟಿದ್ದ ಮೂವತ್ತು ರೂಪಾಯಿ ಕುಡಿಯಲು ಉಪಯೊಗಕ್ಕೆ ಬಂದಿದ್ದಿರಬೇಕು!

* * *

ಬ್ರಹ್ಮಚರ್ಯವು ಸನ್ಯಾಸಿಯೊಬ್ಬ ಪಾಲಿಸಲೇಬೇಕಾದ ವೈರಾಗ್ಯದ ಒಂದು ಭಾಗ. ಲೈಂಗಿಕ ಅಗತ್ಯಗಳನ್ನು ಹೇಗೆ ನಿಭಾಯಿಸುತ್ತೀರೆಂದು ನಾನು ಸಾಧುಗಳನ್ನು ಪ್ರಶ್ನಿಸಿದಾಗ ಬಹಳಷ್ಟು ಜನರು "ಭಗವಂತನ ನೆರವಿನಿಂದ" ಎಂದು ಉತ್ತರಿಸಿದರು.

ಮೋಹನ ದಾಸರು– "ನಮಗೆ ಸಹಾಯಕವಾಗುವ ಮೂರು ಅಂಶಗಳಿವೆ. ದೇವರ ಪೂಜೆ, ಗುರುವಿನ ಬೆಂಬಲ ಮತ್ತು ಸಜ್ಜನರ ಸಹವಾಸ. ನಾನು ನನ್ನ ಗುರುವನ್ನು ಹೃದಯದಲ್ಲಿ ನೆಲೆಗೊಳಿಸಿಕೊಳ್ಳುತ್ತೇನೆ. ದಿನವೂ ದೇವರನ್ನು ಪೂಜಿಸುತ್ತೇನೆ ಮತ್ತು ಸತತವಾಗಿ ಸಜ್ಜನರ ಸಹವಾಸದ ನಿರೀಕ್ಷೆಯಲ್ಲಿರುತ್ತೇನೆ" ಎಂದು ಅದನ್ನು ವಿವರವಾಗಿ ತಿಳಿಸಿದರು.

ಇನ್ನೊಬ್ಬರು–"ನಾನು ಮದುವೆಯಾಗಬಾರದು ಎಂದು ನಿರ್ಧರಿಸಿದ್ದೆ. ಜೀವನವೆಂದರೇನು ಎಂಬ ಬಗ್ಗೆ ನನಗೇ ಇಷ್ಟೊಂದು ಅಜ್ಞಾನವಿರುವಾಗ ಅದೇ ರೀತಿಯ ಪ್ರಶ್ನೆಗಳನ್ನು ಹೊಂದಿರುವ ಇತರ ಜೀವಗಳನ್ನು ನಾನು ಹೇಗೆ ತಾನೆ ಈ ಜಗತ್ತಿಗೆ ತರಲಿ?" ಎಂದರು.

"ಆದರೆ ಲೈಂಗಿಕತೆಯು ಒಂದು ಜೈವಿಕ ಅಗತ್ಯ. ಅದನ್ನು ಪಡೆಯಲು ನೀವು ಮದುವೆಯಾಗಬೇಕೆಂದಿಲ್ಲ" –ನಾನು ಒತ್ತುಕೊಟ್ಟು ಹೇಳಿದೆ.

"ನಮ್ಮ ವರ್ತನೆ ನಮ್ಮ ಆಲೋಚನೆಯನ್ನವಲಂಬಿಸಿರುತ್ತದೆ. ಒಂದೆರಡು ಸಲ ನಾನು ಕಾಫಿ ತೆಗೆದುಕೊಂಡರೆ ನನ್ನ ಮನಸ್ಸಿಗೆ ಅದೊಂದು ಅಭ್ಯಾಸವಾಗಿಬಿಡುವವರೆಗೆ ಮತ್ತೆ ಮತ್ತೆ ತೆಗೆದುಕೊಳ್ಳಬೇಕೆನಿಸುತ್ತದೆ. ಲೈಂಗಿಕತೆಯನ್ನು ತಣಿಸುತ್ತ ಹೋಗುವುದರಿಂದ ಅದು ಹೆಚ್ಚು ಹೆಚ್ಚು ಬೇಕೆಂಬ ಬಯಕೆಯ ಬೀಜಗಳನ್ನು ಬಿತ್ತುತ್ತ ಹೋಗುತ್ತೀರಿ. ಓದುವುದೇ ಮುಂತಾದುವುಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ನಾನು ಇದನ್ನು ಉದಾತ್ತೀರಿಸಬೇಕೆಂದು ತೀರ್ಮಾನಿಸಿದೆ. ಮೊದಮೊದಲಲ್ಲಿ ನನಗೆ ಅದು ತುಂಬ ಕಷ್ಟಕೊಟ್ಟಿತು. ಆದರೆ ಈಗ ಅದು ನನ್ನನ್ನು ಕಾಡುವುದಿಲ್ಲ. ಅದು ಗಾಳಿಯಂತೆ. ಹೀಗೆ ಸುಳಿದು ಹಾಗೆ ಹೋಗುವ ಸುಳಿಗಾಳಿ."

ವೇದಾಂತದ ಅನುಯಾಯಿಯೊಬ್ಬನಿಗೆ ಲೈಂಗಿಕ ಬಯಕೆಗಳನ್ನು ಹತೋಟಿಯಲ್ಲಿಡಲು ಬೌದ್ಧಿಕ ಮಾರ್ಗವಷ್ಟೇ ಸಾಕಾಗುತ್ತದೆಯೆ ಎಂಬ ಪ್ರಶ್ನೆಯನ್ನು ಕೇಳಲಾಯಿತು. ಅದಕ್ಕೆ ಅವರು– "ಇದು ಕೆಲವರಿಗೆ ಬೇರೆಯವರಿಗಿಂತ ಕಷ್ಟ. ನನ್ನ ವಿಷಯಕ್ಕೆ ಬಂದರೆ

ಅದೆಂದೂ ಕಷ್ಟವಾಗಿರಲಿಲ್ಲ. ವಿರುದ್ಧಲಿಂಗಿಗಳು ಅರ್ಥಾತ್ ಸ್ತ್ರೀಯರೊಂದಿಗಿನ ಸಂಬಂಧಗಳನ್ನು ಕಠೋರವಾಗಿ ನಿಯಂತ್ರಿಸುವಂಥ ಸಂಸ್ಕೃತಿಯಲ್ಲಿ ನಾನು ಬೆಳೆದುಬಂದೆ. ಅಮೆರಿಕಾದಲ್ಲಿ ನಾನೊಬ್ಬನೇ ಇದ್ದೆ. ಯಾರೊಂದಿಗೂ ನನಗೆ ಲೈಂಗಿಕ ಸಂಬಂಧವಿರಲಿಲ್ಲ. ಎಂದೂ ಮುಷ್ಟಿಮೈಥುನ ಕೂಡ ಮಾಡಿಕೊಳ್ಳಲಿಲ್ಲ. ಕಡಿಮೆ ಲೈಂಗಿಕ ಅಗತ್ಯವೆಂಬುದು ಬಹುಶಃ ನನ್ನ ಹಿಂದಿನ ಜನ್ಮಗಳಲ್ಲಿ ನಾನು ಪಡೆದುಕೊಂಡದ್ದಿರಬೇಕು. ಆದರೆ ಇದರ ವಿಷಯದಲ್ಲಿ ಕಷ್ಟ ವಿರುವಂಥವರನ್ನು ನಾನು ನೋಡಿದ್ದೇನೆ. ಅವರೇನು ಮಾಡುತ್ತಾರೆ? ನಿಜ, ಅವರು ಪ್ರಾರ್ಥನೆ ಮಾಡುತ್ತಾರೆ. ಲೈಂಗಿಕ ಪ್ರವೃತ್ತಿಗಳನ್ನು ನಿಯಂತ್ರಿಸಲಾಗದಿದ್ದರೆ ಸನ್ಯಾಸವನ್ನು ತೊರೆಯಬೇಕು? ಹೌದಲ್ಲವೆ? ಕೆಲವರು ಹಾಗೂ ಮಾಡುತ್ತಾರೆ." ಎಂದು ಹೇಳಿದರು.

ನಾಗಾ ಸಂಪ್ರದಾಯದ ಸಾಧುಗಳು ಲೈಂಗಿಕ ಬಯಕೆಯ ನಿಯಂತ್ರಣವನ್ನು ಬಹಳ ಮುಖ್ಯವಾದ್ದೆಂದು ಪರಿಗಣಿಸಿದರು. ಅವರ ದೀಕ್ಷಾಪದ್ಧತಿಯ ವಿವರಣೆ ಈ ಮುಂಚೆ ಬಂದಿದೆ. ನಾಗಾ ಸಂಪ್ರದಾಯ ವಿಧಿಸುವ ನಿಯಂತ್ರಣದ ಸಲುವಾಗಿಯೇ ಆ ಪಂಥವನ್ನು ತಾನು ಆಯ್ಕೆಮಾಡಿಕೊಂಡದ್ದಾಗಿ ಒಬ್ಬ ನಾಗಾ ಸಾಧು ತಿಳಿಸಿದನು.

"ಲೈಂಗಿಕ ಬಯಕೆಗಳಿಂದ ದೂರ ಉಳಿಯಬೇಕೆಂಬುದು ನನ್ನ ಆಸೆ ಎಂದು ತಿಳಿದಿದ್ದೆ. ನಾಗಾ ಸಾಧು ಆಗುವುದರಿಂದ ಲೈಂಗಿಕ ಅಂಗಗಳು ನಿಸ್ಸತ್ವಗೊಳ್ಳುವುದರಿಂದ ಮನಸ್ಸಿನಲ್ಲಿ ಲೈಂಗಿಕ ಬಯಕೆಗಳು ತುಂಬಿದ್ದರೂ ಲೈಂಗಿಕ ಕ್ರಿಯೆಯನ್ನು ನಡೆಸಲಾಗುವುದಿಲ್ಲ. ಬ್ರಾಹ್ಮಣರ ಕೋರಿಕೆಯ ಮೇರೆಗೆ ಶಂಕರಾಚಾರ್ಯರು ನಾಗಾ ಸಂಪ್ರದಾಯವನ್ನು ಸ್ಥಾಪಿಸಿದರೆಂಬುದು ನಿಮಗೆ ಗೊತ್ತೆ? ಅವರು ನಾಲ್ವರಿಗೆ ದೀಕ್ಷೆಕೊಟ್ಟರು. ಈ ಸಾಧುಗಳ ಲೈಂಗಿಕ ಅಂಗಗಳಿಗೆ ನೀಡುವ ಥಟ್ಟನೆಯ ಒಂದು ಎಳೆತದಿಂದ (jerk) ಅವರು ಲೈಂಗಿಕ ಕ್ರಿಯೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು. ನಗ್ನವಾಗಿರುವಂತೆ ಅವರು ಈ ಸಾಧುಗಳಿಗೆ ಸಲಹೆ ಕೂಡ ನೀಡಿದರು."

ಒರಿಸ್ಸಾದ ನಾಗಾ ಸಾಧುವೊಬ್ಬನು– "ನಾನು ಪ್ರತಿಯೊಬ್ಬ ಸ್ತ್ರೀಯನ್ನೂ ತಾಯಿಯೆಂದು– ಗರ್ಭಿಣಿಯಾದ ಹೆಣ್ಣೆಂದು ಭಾವಿಸುತ್ತೇನೆ. ಒಂದು ಹೆಣ್ಣಿನೊಂದಿಗೆ ಮಲಗಿದರೂ ಅದು ನನ್ನನ್ನು ವಿಚಲಿತಗೊಳಿಸುವುದಿಲ್ಲ. ತಾಯಿಯೊಂದಿಗೆ ಮಲಗಿದಾಗ ಲೈಂಗಿಕ ಭಾವನೆಗಳ ಉದ್ರೇಕವುಂಟಾಗುವುದಿಲ್ಲ ಅಲ್ಲವೆ?" – ಎಂದನು.

ಈ ಮನುಷ್ಯನ ದೃಷ್ಟಿಯಲ್ಲಿ ಜೀವನದ ಅತ್ಯಂತ ದೊಡ್ಡ ಸಾಧನೆಯೆಂದರೆ– "ಲೈಂಗಿಕ ಅಗತ್ಯದಿಂದ ಮುಕ್ತನಾಗುವುದು. ಉನ್ನತವಾದ ಶಕ್ತಿ ಸಂಚಯ ಮತ್ತು ಕಾಯಿಲೆಗಳಿಂದ ಮುಕ್ತನಾಗಿರುವುದು. ನಾನೆಂದೂ ಕಾಯಿಲೆ ಬಿದ್ದಿಲ್ಲ. ಸೊಳ್ಳೆಗಳು ಕಚ್ಚಿದಾಗಲೂ ಜ್ವರದಿಂದ ನಾನು ಬಾಧಿತನಾಗಿಲ್ಲ."

* * *

ಸಾಧುವಾಗುವುದರಿಂದ ಬೇರೆಯವರ ಬಗೆಗಿನ ಹೊಣೆಗಾರಿಕೆಯ ಪರಿಕಲ್ಪನೆ ಇಲ್ಲವಾಗುವುದಿಲ್ಲ. ಕೆಲವೊಂದು ಸಂಪ್ರದಾಯಗಳಲ್ಲಿ ಸೇವೆಯು ಅವರ ಸಾಧನೆಯ ಬಹುಮುಖ್ಯ ಭಾಗವಾಗಿರುತ್ತದೆ. ಅದು ಗುರುವಿನ ಇಲ್ಲವೆ ಆಶ್ರಮದ ಅಥವಾ ದೇವಸ್ಥಾನದ ವಿಷಯಕ್ಕೆ ಅವರು ಮಾಡುವ ಸೇವೆಯಾಗಬಹುದು. ಆ ಸೇವೆ ಅವರ ಜೊತೆಯ ಸಾಧುಗಳು, ಆಶ್ರಮಕ್ಕೆ ಭೇಟಿಕೊಡುವವರು, ಮತ್ತು ವಿಸ್ತೃತವಾದ ಸಮಾಜ ಈ ಯಾವುದಕ್ಕೆ ಸಲ್ಲಿಸುವಂಥದಾದರೂ ಆಗಬಹುದು. ಸುಶಿಕ್ಷಿತ ಸಂಚಾರೀ ಸಾಧುವಾದ ಅಭಿನವ್ ಬೇರೆಯವರಿಗೆ ಸಹಾಯ ಮಾಡುವುದೆಂದರೆ ತಮಗೆಷ್ಟು ಇಷ್ಟ ಎಂಬುದನ್ನು ಹೇಳಿದರು. "ಎಲ್ಲಕ್ಕಿಂತ ಹೆಚ್ಚಾಗಿ ಭಾರತಕ್ಕೆ ತೀರ ಅಗತ್ಯವಿರುವ– ಬಡವರನ್ನು ಮೇಲೆತ್ತುವುದು ನನ್ನ ಉದ್ದೇಶ. ಬಹುಶಃ ನನ್ನ ಮುಂದಿನ ಭೇಟಿ ಅಸ್ಸಾಂ ಪ್ರದೇಶಕ್ಕೆ. ಆರ್ಥಿಕತೆಯಲ್ಲಿ ಒಂದು ಬದಲಾವಣೆಯನ್ನು ತರಬೇಕೆಂಬುದು ನನ್ನ ಆಸೆ. ಗ್ರಾಮೀಣ ಉದ್ಯೋಗಗಳಿಲ್ಲ. ಸ್ವಯಂ ಉದ್ಯೋಗವನ್ನು ಸೃಷ್ಟಿಸಬೇಕಾಗುತ್ತದೆ. ಯೋಗದಿಂದುಂಟಾಗುವ ಆನಂದವೊಂದೇ ಗುರಿಯಲ್ಲ. ನಾವು ಜನರ ಮನಸ್ಸುಗಳಿಗೆ ಚಿಕಿತ್ಸೆ ನೀಡಿ ಗುಣಪಡಿಸಬೇಕಾಗುತ್ತದೆ. ನಾನು ಅನೇಕ ಹಳ್ಳಿಗಳಿಗೆ ಹೋದೆ, ಜನರನ್ನು ಭೇಟಿಮಾಡಿದೆ, ನನ್ನ ಅನುಭವ ಹೆಚ್ಚಿಸಿಕೊಳ್ಳುವ ಸಲುವಾಗಿ ಮತ್ತು ಅವರ ಅನುಭವದಿಂದ ಕಲಿಯುವ ಸಲುವಾಗಿಯೂ ಅವರಿಗೆ ಶಿಕ್ಷಣ ನೀಡುವ ಪ್ರಯತ್ನಮಾಡಿದೆ. ಅಗತ್ಯ ಕಂಡುಬಂದಲ್ಲಿ ಒಂದು ವಾರಕಾಲ ಅಲ್ಲೇ ತಂಗುತ್ತಿದ್ದೆ. ಮುಂದಿನ ಕೆಲವು ವರ್ಷಗಳಲ್ಲಿ ಒಂದು ಗುರುಕುಲವನ್ನು ಪ್ರಾರಂಭಿಸಿ ಅಲ್ಲಿ ಯೋಗ ಶಿಕ್ಷಣದ ಜೊತೆಗೆ ಇತರೆ ಆಧ್ಯಾತ್ಮಿಕ ವಿಷಯಗಳನ್ನು ಬೋಧಿಸಬೇಕೆಂದಿದ್ದೇನೆ. ನಮ್ಮ ಪ್ರಾಚೀನ ಪರಂಪರೆಯನ್ನು ನಾವು ಮತ್ತೆ ಪರಿಚಯಿಸಿಕೊಡಬೇಕಾಗಿದೆ. ಜನರ ಮನಸ್ಸಿನಲ್ಲಿರುವ ನೋವುಗಳನ್ನು ಹೋಗಲಾಡಿಸಬೇಕೆಂದಿದ್ದೇನೆ. ಜನಸಮುದಾಯಕ್ಕೆ ಏನಾದರೂ ಮಾಡಬೇಕೆಂದಿದ್ದೇನೆ."

ಸನ್ಯಾಸದ ಸಾಂಪ್ರದಾಯಿಕ ಗುರಿಯಾದ ಮೋಕ್ಷದ ಬಗ್ಗೆ ಕೇಳಿದಾಗ ಈ ಮನುಷ್ಯ ಹೇಳಿದ್ದು:

"ಮೋಕ್ಷದ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಜನರಿಗೆ ಏನನ್ನಾದರೂ ಮಾಡುವ ಸಲುವಾಗಿ ಮತ್ತೊಮ್ಮೆ ಹುಟ್ಟಿಬರಲಿಚ್ಛಿಸುತ್ತೇನೆ. ಮೋಕ್ಷದ ಬಗ್ಗೆ ನನಗೆ ಆಕರ್ಷಣೆಯಿಲ್ಲ."

ಸಾಧುವಾಗುವುದೇ ಒಂದು ರೀತಿಯ ಸೇವಾ ವಿಧಾನವಿರಬಹುದು. ಒರಿಸ್ಸಾದ ಈ ಸಾಧು "ಜೀವನ ಕನಸಲ್ಲ.. ಅದು ಕಣ್ಣಿಗೆ ಕಟ್ಟುವಷ್ಟು ಸ್ಪಷ್ಟವಾಗಿದೆ. ಯಾವ ಯಾವುದನ್ನು ಸೂರ್ಯನು ಬೆಳಗುತ್ತಾನೋ ಅದೆಲ್ಲವೂ ವಾಸ್ತವ. ಸಾಧು ಕೂಡ ಸೂರ್ಯನಂತೆ. ಒಬ್ಬ ಸಾಧು ನೂರು ಜನರ ಪಾಲಿಗೆ ಒಬ್ಬ ಸೂರ್ಯನಂತೆ. ಅವನು ಅವರಿಗೆ ಬದುಕಿನ ಮಾರ್ಗವನ್ನು ತೋರಿಸುತ್ತಾನೆ; ಅವರ ಪಾಪಗಳ ಬಗ್ಗೆ ನಿಗಾ ವಹಿಸುತ್ತಾನೆ." ಎಂದು ಹೇಳಿದರು.

ಮುಕ್ತಾನಂದರಿಗೆ ತಾವು ಮಾಡಬೇಕಾದ ಕರ್ತವ್ಯದ ಬಗ್ಗೆ ನಿರ್ದಿಷ್ಟತೆ ಇತ್ತು.

'ನಿಜ, ಸಮಾಜದ ವಿಷಯಕ್ಕೆ ಸಾಧುಗಳಿಗೆ ಒಂದು ಕರ್ತವ್ಯವಿದೆ. ಸಮಾಜ ನಮ್ಮನ್ನು ಪೋಷಿಸುತ್ತದೆ. ಹೆಚ್ಚಿಗೆ ಕೊಡಲು ಸಾಧ್ಯವಿಲ್ಲದಿದ್ದರೂ ಸಮಾಜದಿಂದ ನಾವು ಪಡೆದಿರುವಷ್ಟನ್ನಾದರೂ ವಾಪಸ್ ಕೊಡಲೇಬೇಕು. ನಮ್ಮ ಆಶ್ರಮದ ಸುತ್ತಮುತ್ತ ಇರುವ ಶಾಲೆಗಳಿಗೆ- ಕಡೇ ಪಕ್ಷ ತಿಂಗಳಿಗೊಮ್ಮೆ ಪ್ರತಿಯೊಂದು ಶಾಲೆಗೆ-ಹೋಗುವ ಅಭ್ಯಾಸವಿಟ್ಟುಕೊಂಡಿದ್ದೇನೆ. ಅಲ್ಲಿ ಅವರಿಗೆ ಕತೆಗಳನ್ನು ಉದಾಹರಿಸುವ ಮೂಲಕ ನಮ್ಮ ಸನಾತನ ಧರ್ಮದ ಮೇರೆಗೆ ನೀತಿಯ ತತ್ತ್ವಗಳನ್ನು ಬೋಧಿಸುತ್ತೇನೆ. ಮಾದಕ ಪಾನೀಯ ಸೇವಿಸುವ ಯುವಕರು ಮತ್ತು ಮಾದಕ ವಸ್ತು ವ್ಯಸನಿಗಳೊಂದಿಗೂ ಕೆಲಸ ಮಾಡುತ್ತಿದ್ದೇನೆ. ಅನೇಕರು ತಮ್ಮ ದುರಭ್ಯಾಸಗಳನ್ನು ಬಿಟ್ಟಿದ್ದಾರೆ ಮತ್ತು ಆಶ್ರಮದಲ್ಲಿ ನನ್ನೊಂದಿಗೆ ಕೆಲಸಮಾಡುತ್ತಿದ್ದಾರೆ ಇಲ್ಲವೆ ನಾನೆಲ್ಲಿ ಕೆಲಸ ಮಾಡಲು ಹೋಗುತ್ತೇನೋ ಅಲ್ಲಿಗೆ ಬರುತ್ತಾರೆ. ನಾನು ಪ್ರಾಣಿಗಳನ್ನು ಪ್ರೀತಿಸುತ್ತೇನೆ ಹಾಗೂ ಅವುಗಳನ್ನು ಸಂರಕ್ಷಿಸಲು ಯತ್ನಿಸುತ್ತೇನೆ. ನಿಜ, ಎಲ್ಲಕ್ಕಿಂತ ಮುಖ್ಯವಾದ್ದು ಹಸು. ಶ್ರೀಮಂತ ಭಕ್ತರ ದೇಣಿಗೆಗಳ ನೆರವಿನಿಂದ ಮುದಿಯಾದ ಹಾಗೂ ದುರ್ಬಲವಾದ ಹಸುಗಳಿಗಾಗಿ ನಾನು ಗೋಶಾಲೆಗಳನ್ನು ತೆರೆದಿದ್ದೇನೆ. ನನ್ನ ಆಶ್ರಮದಲ್ಲಿ ರೋಗಪೀಡಿತ ಪ್ರಾಣಿಗಳಿಗೆ ಒಂದು ಜಾಗ ಮಾಡಿಕೊಟ್ಟಿದ್ದೇನೆ. ನಮ್ಮಲ್ಲಿ ಒಂದು ನವಿಲು ಮತ್ತು ಒಂದು ಜಿಂಕೆ ಇವೆ. ಅವೆರಡಕ್ಕೂ ಬೇಟೆಗಾರರು ಗುಂಡಿಟ್ಟಿದ್ದರು. ನಾನು ಅವುಗಳನ್ನು ಕಾಪಾಡಿ ಅವುಗಳ ಗಾಯ ವಾಸಿಯಾಗುವಂತೆ ಮಾಡಿದೆ. ಈಗ ಅವು ನನ್ನ ಮಕ್ಕಳಂತಿವೆ."

ನಾಗಾಸಾಧುಗಳೆಂದರೆ ಜಗಳಗಂಟರು ಮತ್ತು ಭಯಂಕರ ವ್ಯಕ್ತಿಗಳೆಂಬ ಪ್ರಚಲಿತ ನಂಬಿಕೆಗಳಿಗೆ ತದ್ವಿರುದ್ಧವಾಗಿ ಮುಕ್ತಾನಂದರು ಬಹಳ ಕರುಣಾ ಹೃದಯಿಗಳಾಗಿದ್ದರು.

"ಹಣೆಚೀಟಿಗಳಿಂದೇನು? ನಾನೊಬ್ಬ ನಾಗಾ ಸಾಧು. ಆದರೆ ನಾಗಾಗಳ ಯಾವುದೇ ಅಭ್ಯಾಸ ನನಗಿಲ್ಲ. ನಾನು ಸಂತೃಪ್ತ"-ಎಂದರು.

ನಾನು ಭೇಟಿಮಾಡಿದ ಸಾಧುಗಳಲ್ಲಿ ಉನ್ನತವಾದ ಶಕ್ತಿ, ಉತ್ಸಾಹ ಮತ್ತು ಸಾರ್ವಜನಿಕ ಸೇವಾ ಪ್ರಜ್ಞೆ ತುಂಬಿರುವುದು ಕಂಡುಬಂತು. ಇತರರ ವಿಷಯಕ್ಕೆ ಇಂಥ ಸಂತಸ, ಶಕ್ತಿ ಮತ್ತು ಪ್ರೀತಿ ಇವರಿಗೆ ಎಲ್ಲಿಂದ ಬರುತ್ತದೆ ಎಂದು ನನ್ನನ್ನು ನಾನೇ ಕೇಳಿಕೊಳ್ಳುತ್ತೇನೆ. ಎಲ್ಲ ಅರ್ಥದಲ್ಲಿ ಮುಕ್ತನಾಗಿರುವ ಭಾವನೆಯಿಂದ ಇದು ಬರುತ್ತದೆಂದು ನನ್ನ ನಂಬಿಕೆ. ತಮ್ಮದೇ ಆದ ಯಾವುದೇ ವಸ್ತುಗಳಿಲ್ಲ, ಆಹಾರವನ್ನು ಸಂಪಾದಿಸಿಕೊಳ್ಳುವ ಬಗ್ಗೆ ನಿಶ್ಚಿಂತರು ಹಾಗೂ ಎಲ್ಲಕ್ಕಿಂತ ಮುಖ್ಯವಾದ್ದು 'ಪ್ರತ್ಯೇಕವಾದ ಆತ್ಮ ಪ್ರಜ್ಞೆ' ಇಲ್ಲದಿರುವುದು. ಅವರಲ್ಲಿ ಮೇಲಿಂದ ಮೇಲೆ ಕಂಡುಬರುವ ಅಸೀಮವಾದ ಶಕ್ತಿ ಮತ್ತು ಮಗುವಿನಂಥ ನಗೆಯ ಮೂಲ ಇದೇ ಎಂದು ನನ್ನ ಅಭಿಪ್ರಾಯ.

ಸಾಧುಗಳ ವಿಷಯಕ್ಕೆ ನನಗಿರುವ ಆಸಕ್ತಿಗಿದ್ದ ಒಂದು ಕಾರಣ ಮನೋಚಿಕಿತ್ಸಕನಾಗಿದ್ದ ನನ್ನ ವೃತ್ತಿಗೆ ಸಂಬಂಧಿಸಿದ್ದು.

ಹಾಗಾಗಿ ನಾನು ಆಯುರ್ವೇದ ವೈದ್ಯರೂ ಉದಾಸೀ ಪಂಥದ ಸದಸ್ಯರೂ ಆಗಿದ್ದ ಬಾಬಾ ಶ್ಯಾಮ ಸುಂದರ್ ದಾಸ್ ಅವರನ್ನು ಭೇಟಿ ಮಾಡಲು ಉತ್ಸುಕನಾಗಿದ್ದೆ.

ಸಿಖ್ ಧರ್ಮದ ಸಂಸ್ಥಾಪಕರಾಗಿದ್ದ ಗುರು ನಾನಕ್ ದೇವ್ ಅವರ ಹಿರಿಯ ಪುತ್ರ ಶ್ರೀಚಂದ್ ಅವರಿಂದ ಈ ಪಂಥ ಪ್ರಾರಂಭವಾಗಿತ್ತು. ಉದಾಸೀ ಪಂಥದವರು 'ಮಾತಾ ಭಗವತಿ'ಯ ಉಪಾಸಕರು. ಆದರೆ ಶ್ರೀ ಚಂದ್ ಅವರನ್ನು ಶಿವನ ಅವತಾರವೆಂದು ಭಾವಿಸಲಾಗಿದ್ದರಿಂದ ಅವರುಗಳು ಶಿವನನ್ನೂ ಪೂಜಿಸುತ್ತಿದ್ದರು. ಪಂಜಾಬ್‌ನಲ್ಲಿ ಇದು ಅತ್ಯಂತ ಜನಪ್ರಿಯವಾದ ಪಂಥ. ಹಾಗಾಗಿ ಪಂಜಾಬ್‌ನಲ್ಲಿ ಉದಾಸೀ 'ಡೇರಾ' ಗಳು ಎಲ್ಲೆಡೆ ಕಂಡುಬರುತ್ತವೆ. ಉದಾಸಿಗಳು ನುರಿತ ಆಯುರ್ವೇದ ವೈದ್ಯರೂ ಹೌದು. ಸುಮಾರು ಶೇಕಡಾ ಎಂಬತ್ತರಷ್ಟು ಉದಾಸೀ ಸಾಧುಗಳು ಆಯುರ್ವೇದ ವೈದ್ಯರು ಎಂದು ಬಾಬಾ ನನಗೆ ತಿಳಿಸಿದರು.

ರಾಮದೇವ ಪಾಠಿ ಅವರ ಆಶ್ರಮದಲ್ಲಿ ತಂಗಿದ್ದ ಭಕ್ತನೊಬ್ಬ ನನ್ನ ಬಳಿಗೆ ಬಂದು ಅತ್ಯಂತ ಆಸಕ್ತಿ ಹುಟ್ಟಿಸುವಂಥ ರೋಗಿಯೊಬ್ಬನನ್ನು ನೀವು ನೋಡಲಿಚ್ಛಿಸುತ್ತೀರಾ ಎಂದು ಕೇಳಿದಾಗ ನಾನು ಅವರನ್ನು ಮೊದಲು ಭೇಟಿಮಾಡಿದ್ದು.

ಈ ಮನುಷ್ಯನು ಬಾಬಾಜಿಯನ್ನು ನೋಡಲು ಬಂದಿದ್ದನು. ರೋಗಿಯ ಚಿಕಿತ್ಸೆಯಲ್ಲಿ ನನ್ನನ್ನೂ ಒಳಗುಮಾಡುವುದಕ್ಕೆ ಬಾಬಾಜಿಯವರಿಗೆ ಸಂತಸವೆನಿಸುತ್ತಿತ್ತು. ರೋಗಿ ಒಬ್ಬ ಯುವಕ. ಅವನು ನಿದ್ರೆ ಮಾಡುತ್ತಿದ್ದಾಗ ಅವನ ಆತ್ಮವು ಅವನನ್ನು ಬಿಟ್ಟು ಹೋಯಿತೆಂದೂ ಈಗ ಅವನ ಆತ್ಮವು ನಿದ್ರಿಸುತ್ತಿರುವ ದೇಹವನ್ನು ನೋಡುತ್ತಿದೆಯೆಂದೂ ವಾದಿಸುತ್ತಿದ್ದ. ಹುಡುಗನಿಗಿದ್ದ ಹೆದರಿಕೆಯೆಂದರೆ ಒಂದು ವೇಳೆ ಆತ್ಮ ಹೊರಗಿದ್ದಾಗ ಯಾರಾದರೂ ನಿದ್ರಿಸುತ್ತಿರುವ ದೇಹವನ್ನು ಎಚ್ಚರಿಸಿಬಿಟ್ಟರೆ ಆಗ ಅದು ದೇಹದೊಳಕ್ಕೆ ಮತ್ತೆನ್ನೆಂದೂ ಬಂದು ಸೇರಿಕೊಳ್ಳಲಾಗುವುದಿಲ್ಲ ಎಂಬುದು.

ಹುಡುಗನು ಮನಸ್ಸನ್ನು ನಿರಂತರ ಗೀಳಾಗಿ ಕಾಡುವ ರೋಗದಿಂದ (obsessive- compulsive dis-order) ಪೀಡಿತನಾಗಿದ್ದಾನೆಂದು ಕಂಡುಕೊಂಡೆ. ಅವನು ದೇಹದ ಹೊರಗಿನ ಅನುಭವಗಳನ್ನು ಅನುಭವಿಸುತ್ತಿದನು. ಅದಕ್ಕೆ ಅನುಸಾರವಾಗಿಯೇ ಅಗತ್ಯ ಸಲಹೆ ನೀಡಿದೆ.

ಆ ನಂತರದಲ್ಲಿ ನಾನು ಬಾಬಾ ಶ್ಯಾಮ ಸುಂದರದಾಸ್ ಅವರ ಸ್ವಂತ ಕಥೆ ಕೇಳಿದೆ. ಅವರು ಅವರ ತಂದೆಯ ಎಂಟು ಮಕ್ಕಳಲ್ಲಿ–ಏಳು ಜನ ಸೋದರರು ಮತ್ತು ಒಬ್ಬ ಸೋದರಿ–ಎರಡನೆಯವರು. ಅವರ ತಂದೆ ಸೈನ್ಯದಲ್ಲಿ ಸಾರ್ಜೆಂಟ್ ಆಗಿದ್ದವರು. ಬಾಲ್ಯದಿಂದಲೇ ಬಾಬಾಜಿಯವರು ಅವರ ತಂದೆ ತಾಯಿಗಳ ಮನೆಯಿಂದ ನಲವತ್ತು ಮೈಲಿಗಳ ದೂರದಲ್ಲಿ ವಾಸಮಾಡುತ್ತಿದ್ದ ಅವರ ಅಜ್ಜಿ–ತಾತನ ಜೊತೆ ಇದ್ದರು. ಅದರ ಪರಿಣಾಮವಾಗಿ ಅವರಿಗೆ ತಮ್ಮ ತಂದೆ ತಾಯಿಗಳು ಮತ್ತು ಸೋದರ ಸೋದರಿಯರೊಂದಿಗೆ ಭಾವನಾತ್ಮಕವಾದ ನಿಕಟತೆ ಇರಲಿಲ್ಲ.

ಅವರು ಯಾವಾಗಲೂ ಒಂಟಿಯಾಗಿದ್ದು ಮನೆಯಿಂದ ಹೊರಗೆ ಇರುತ್ತಿದ್ದರು ಮತ್ತು ಊಟ ತಿಂಡಿ ಮಾಡುವುದಕ್ಕಷ್ಟೇ ಮನೆಗೆ ಬರುತ್ತಿದ್ದರು. ಹಳ್ಳಿಯ ಬಾವಿಯ ಹತ್ತಿರ ಕುಳಿತುಕೊಂಡು ಪ್ರಕೃತಿಯೊಂದಿಗೆ ಸಂವಾದ ನಡೆಸುತ್ತಿದ್ದರು. ಯಾರೊಂದಿಗಾದರೂ ಆತ್ಮೀಯ ಗೆಳೆತನ ಮಾಡಿಕೊಂಡ ಅಥವಾ ಆಟವಾಡಿದ ನೆನಪು ಅವರಿಗಿಲ್ಲ. ಎಂಟನೇ ತರಗತಿಯವರೆಗೆ ಓದಿದರು ಮತ್ತು ಅವರೊಬ್ಬ ಸಾಮಾನ್ಯ ವಿದ್ಯಾರ್ಥಿಯಾಗಿದ್ದರು.

ಅವರ ಅಜ್ಜಿ ಮತ್ತು ತಾತ ಅತ್ಯಂತ ಧಾರ್ಮಿಕ ಮನೋಭಾವದವರು ಮತ್ತು ಅವರ ಊರಿನಿಂದ ಕೆಲವು ಮೈಲಿಗಳ ದೂರದಲ್ಲಿದ್ದ ಮಹಾತ್ಮಾ ಗೋವಿಂದ ದಾಸರ ಭಕ್ತರಾಗಿದ್ದರು. ವಾರಕ್ಕೊಮ್ಮೆ ಅವರು ಮಹಾತ್ಮಾಜಿಯವರಲ್ಲಿಗೆ ಹೋಗುತ್ತಿದ್ದರು. ಆಗ ವಿಜಯ್ ಎಂದು ಕರೆಯಲಾಗುತ್ತಿದ್ದ ಬಾಬಾಜಿ ಅವರ ಜೊತೆ ಹೋಗುತ್ತಿದ್ದರು. ಕ್ರಮೇಣ ವಿಜಯ್ ಮಹಾತ್ಮರೊಂದಿಗೆ ಹೆಚ್ಚು ಸಮಯ ಕಳೆಯಲಿಷ್ಟಪಡುತ್ತಿದ್ದರು. ಇದು ಅವರ ಅಜ್ಜಿ ತಾತಂದಿರನ್ನು ಚಿಂತೆಗೀಡುಮಾಡಿತು. ಒಂದು ದಿನ ವಿಜಯ್‌ಗೆ ಹೇಳದೆ ಅವರೇ ಮಹಾತ್ಮರಲ್ಲಿಗೆ ಹೋದರು. ತನಗೆ ಹೇಳದೆ ಹೋಗಿದ್ದಾರೆಂದು ಗೊತ್ತಾದ ಕೂಡಲೇ ವಿಜಯನೂ ಅವರ ಹಿಂದೆಯೇ ಓಡಿದನು. ಮಾರ್ಗಮಧ್ಯದಲ್ಲಿ ಕೆಲವರು ಅವನನ್ನು ನಿಲ್ಲಿಸಲು ಯತ್ನಿಸಿದರು. ಆದರೆ ಅವರು ನೇರವಾಗಿ ಮಹಾತ್ಮರ ಬಳಿಗೆ ಓಡಿಬಿಟ್ಟನು. ಹುಡುಗನ ಅಂಥ ಭಕ್ತಿಯನ್ನು ನೋಡಿ ಅವನನ್ನು ತಮ್ಮ ಬಳಿಯಲ್ಲೇ ಇರಲು ಬಿಡಬೇಕೆಂದು ಮಹಾತ್ಮರು ಸೂಚಿಸಿದರು. ಅಜ್ಜಿ-ತಾತ ಅದರ ಬಗ್ಗೆ ತಮ್ಮಲ್ಲೇ ಆಲೋಚಿಸಿದರು, ವಿಜಯನ ತಂದೆತಾಯಿಗಳೊಂದಿಗೆ ಸಮಾಲೋಚಿಸಿ ಅಂತಿಮ ನಿರ್ಣಯವನ್ನು ವಿಜಯನಿಗೇ ಬಿಟ್ಟರು. ಸರಿ ಅವನಂತೂ ಮಹಾತ್ಮರೊಂದಿಗೆ ಉಳಿಯಲು ಸಿದ್ಧನಿದ್ದ.

ಅಜ್ಜಿ-ತಾತನ ಮನೆಯಲ್ಲಿ ಬೆಳೆಯುತ್ತಿದ್ದಾಗ ಆಯುರ್ವೇದ ವೈದ್ಯರಾಗಿದ್ದ ತನ್ನ ಮುತ್ತಾತನ ಮನೆಗೂ ಹೋಗುತ್ತಿದ್ದನು.

ರೋಗಿಗಳನ್ನು ನೋಡಿದಾಗ ಹುಡುಗ ವಿಜಯ್ ಮುತ್ತಾತನೊಂದಿಗೆ ಕುಳಿತಿದ್ದು ರೋಗಿಗಳು ಹೇಳುತ್ತಿದ್ದ ಅವರ ರೋಗದ ತೊಂದರೆಗಳನ್ನೂ ಮತ್ತು ಅವುಗಳ ಚಿಕಿತ್ಸೆಗೆ ಅಗತ್ಯವಿದ್ದ ಔಷಧವನ್ನು ನೆನಪಿಟ್ಟುಕೊಳ್ಳುತ್ತಿದ್ದನು. ಅವನಿಗೆ ಹನ್ನೊಂದು ವರ್ಷ ವಯಸ್ಸಾಗಿದ್ದಾಗ ಅವರ ಮುತ್ತಾತ ಮನೆಯಲ್ಲಿ ಇಲ್ಲದೆ ಇದ್ದಾಗ ಒಬ್ಬ ರೋಗಿ ಔಷಧಾಲಯಕ್ಕೆ ಬಂದನು. ಹುಡುಗ ತಾನೇ ಸ್ವಾತಂತ್ರ್ಯ ವಹಿಸಿ ರೋಗಿಗೆ ಔಷಧ ನೀಡಿದನು. ತಾವು ಇಲ್ಲದಿದ್ದಾಗ ಏನಾಯಿತೆಂದು ತಿಳಿದು ಮುತ್ತಾತ ಕೋಪಗೊಂಡರು. ಆದರೆ ಹುಡುಗನ ತಿಳಿವಳಿಕೆಯನ್ನು ಪರೀಕ್ಷೆಮಾಡಿ ನೋಡಿದಾಗ ಕೇವಲ ಔಷಧಿ ಕೊಡುವುದನ್ನು ನೋಡಿಯೇ ಹುಡುಗನು ಕಲಿತಿರುವುದನ್ನು ತಿಳಿದು ಅವರು ತುಂಬ ಪ್ರಭಾವಿತರಾದರು.

ಆದ್ದರಿಂದ ಅವರ ಮುತ್ತಾತ ಹುಡುಗನಿಗೆ ಔಪಚಾರಿಕ ಶಿಕ್ಷಣ ನೀಡಲು ಪ್ರಾರಂಭಿಸಿದರು. ಹೀಗಾಗಿ ಮುತ್ತಾತನೇ ವಿಜಯನ ಮೊದಲ ಆಯುರ್ವೇದ ಶಿಕ್ಷಕರಾದರು.

ಆನಂತರ ಅವರು ಮಹಾತ್ಮರ ಜೊತೆ ಸೇರಿದ ಮೇಲೆ ಮಹಾತ್ಮರೂ ಆಯುರ್ವೇದ ವೈದ್ಯರಾಗಿದ್ದ ಕಾರಣ ಆಯುರ್ವೇದದ ಕಲಿಕೆ ಮುಂದುವರಿಸಿದರು. ಆಶ್ರಮಕ್ಕೆ ಬರುತ್ತಿದ್ದ ಇತರೆ ಸನ್ಯಾಸಿಗಳಿಂದಲೂ ಕಲಿತರು. ಆಗಿನ ಅತ್ಯಂತ ಪ್ರಸಿದ್ಧ ವೈದ್ಯರಾಗಿದ್ದ ಸ್ವಾಮಿ ಕೃಷ್ಣಾನಂದರಿಂದ ವೈದ್ಯ ತರಬೇತಿ ಪಡೆದರು. ಬಾಬಾಜಿಯವರು ತಮ್ಮ ಈ ಅಧ್ಯಾಪಕರ ಬಗ್ಗೆ ನನ್ನೊಂದಿಗೆ ಅಪಾರವಾದ ಪ್ರೀತಿಯಿಂದ ವಿಸ್ತಾರವಾಗಿ ಮತನಾಡಿದರು. ಈ ಮನುಷ್ಯ ರೋಗಿಗಳಿಂದ ಔಷದಕ್ಕೆ ಎಂದೂ ಹಣ ತೆಗೆದುಕೊಳ್ಳುತ್ತಿರಲಿಲ್ಲ. ಒಂದು ವೇಳೆ ಯಾರಾದರೂ ಹಣ ಕೊಡಬೇಕೆಂದು ಬಯಸಿದರೆ ಅವರನ್ನು ಬೈಯುತ್ತಿದ್ದರು. ಹೆಚ್ಚು ಬೆಲೆಯ ಔಷಧಕ್ಕೆ ಯಾರಾದರೂ ಸ್ವಲ್ಪ ಹಣ ನೀಡಲು ಬಯಸಿದರೆ– "ನಿಮಗೆ ಕೊಡಬೇಕೆಂದೆನಿಸಿದರೆ ಹಣ ತೆಗೆದುಕೊಳ್ಳುವವರು ಮತ್ತು ಹಣ ಕೊಡುವವರು ಇಬ್ಬರೂ ಜ್ಞಾಪಕವಿಟ್ಟುಕೊಳ್ಳುವಷ್ಟು ಹಣ ನೀಡಿ" ಎಂದು ಗದರಿಸುತ್ತಿದ್ದರು. ಕೃಷ್ಣಾನಂದಜಿಯವರು ಅನೇಕ ಯುವಕರಿಗೆ ಶಿಕ್ಷಣಕ್ಕೆ ನೆರವು ನೀಡಿದ್ದರು. ಅವರಲ್ಲಿ ಅನೇಕರು ಈಗ ವಿದೇಶಗಳಲ್ಲಿ ನೆಲೆಸಿದ್ದಾರೆ. ತಮ್ಮ ರೋಗಿಗಳಿಗೆ ಅವರು ಕೊಡುವ ಔಷಧಕ್ಕೆ ಬೇಕಾಗುವ ಹಣವನ್ನು ಅವರೆಲ್ಲರೂ ಕಳಿಸುತ್ತಿದ್ದರು.

ಕೆಲವು ವರ್ಷಗಳ ಹಿಂದೆ ಅವರು ತೀರಿಕೊಂಡಿದ್ದರು.

ವಿಜಯ್ ಅವರು ತಮ್ಮ ಇಪ್ಪತ್ತೆಂಟನೇ ವಯಸ್ಸಿನಲ್ಲಿ ತಮ್ಮ ಗುರುಗಳ ಜೊತೆ ಸೇರಿಕೊಂಡರು. ಮೂವತ್ತನೇ ವಯಸ್ಸಿನಲ್ಲಿ ದೀಕ್ಷೆಯನ್ನು ಸ್ವೀಕರಿಸಿ ಬಾಬಾ ಶ್ಯಾಮಸುಂದರ ದಾಸ್ ಎಂಬ ಈಗಿನ ಹೆಸರನ್ನು ಪಡೆದುಕೊಂಡರು.

ತಮಗೆ ಕಠಿಣ ಧಾರ್ಮಿಕ ಅಭ್ಯಾಸದ ಶಿಕ್ಷಣ ನೀಡಿದ ಗುರುಗಳನ್ನು ಬಹಳ ಪ್ರೀತಿ ಅಭಿಮಾನಗಳಿಂದ ನೆನೆಸಿಕೊಳ್ಳುತ್ತಾರೆ. ಹಲವು ವರ್ಷಗಳ ಕಾಲ ಚಳಿಗಾಲದಲ್ಲಿ ಜಲತಪಸ್ಯೆಯನ್ನೂ ಬೇಸಿಗೆಯಲ್ಲಿ ಅಗ್ನಿ ತಪಸ್ಯೆಯನ್ನೂ ಮಾಡುತ್ತಿದ್ದರು. ಜಲ ತಪಸ್ಯೆಯು ವಾತಾವರಣದ ಉಷ್ಣತೆ ಸುಮಾರು ಸೊನ್ನೆ ಡಿಗ್ರಿ ಇದ್ದಾಗ ಬೆಳಗಿನ ಜಾವ ಮೂರು ಗಂಟೆಯ ಸಮಯದಲ್ಲಿ 225 ಭರ್ತಿ ಹೂಜಿಗಳಷ್ಟು ನೀರಿನಿಂದ ಸ್ನಾನ ಮಾಡುವುದನ್ನು ಒಳಗೊಂಡಿರುತ್ತಿತ್ತು. ಅಗ್ನಿ ತಪಸ್ಯೆಯಲ್ಲಿ ಬೇಸಗೆಯಲ್ಲಿ ಹೊರಗಿನ ಉಷ್ಣತೆಯು ಸುಮಾರು 45 ಡಿಗ್ರಿ ಇದ್ದಾಗ ವೃತ್ತದ ಐದು ಕಡೆ ಬೆಂಕಿ ಹೊತ್ತಿಸಿ ವೃತ್ತದ ಮಧ್ಯೆ ಮಧ್ಯಾಹ್ನ 12 ಗಂಟೆಯಿಂದ 1 ಗಂಟೆಯ ತನಕ ಕುಳಿತುಕೊಂಡಿರುತ್ತಿದ್ದರು. ಈ ತಪಸ್ಸುಗಳನ್ನು ನೋಡಲು ಜನರು ದೂರ ದೂರದಿಂದ ಪ್ರಯಾಣ ಮಾಡಿ ಬರುತ್ತಿದ್ದರು.

ವೈದ್ಯರಾಗಿ ಬಾಬಾಜಿಯವರ ಖ್ಯಾತಿಯು ಹಬ್ಬಿತು. ಈ ವೈದ್ಯಕೀಯ ಕರ್ತವ್ಯಗಳು ಅತಿಯಾಗಿ ಅವರಿಗೆ ತಮ್ಮ ಸ್ವಂತದ ಸಾಧನೆ ಮಾಡಲು ಸಮಯವೇ ಸಿಗುತ್ತಿರಲಿಲ್ಲ. ಈ ಬಗ್ಗೆ ಒಂದು ದಿನ ಗುರುಗಳಿಗೆ ದೂರು ನೀಡಿದರು. ಅವರ ಅನುಮತಿಯಿಂದ ಹರಿದ್ವಾರದ ಬಳಿಯ ಆಶ್ರಮದಲ್ಲಿ ನೆಲೆಸುವ ಸಲುವಾಗಿ ಹೊರಟುಬಿಟ್ಟರು. ಇಲ್ಲಿ ತಮ್ಮ ಧಾರ್ಮಿಕ ಅನುಷ್ಠಾನಗಳನ್ನು ಮಾಡುತ್ತ ಕಾಲ ಕಳೆದರು. ಆಗ ಉಪ್ಪು, ಅನ್ನವಿಲ್ಲದೆ

ಕೇವಲ ಹಾಲು ಮತ್ತು ಹಣ್ಣುಗಳನ್ನು ಸೇವಿಸಿಕೊಂಡು ಇರಬೇಕಾಗಿತ್ತು. ಅವರ ಗುರುಭಾಯಿಗಳು ಬಂದು ಮತ್ತೆ ಉಪ್ಪು ಸೇವಿಸುವಂತೆ ಒತ್ತಾಯ ಮಾಡುವವರೆಗೂ ಎಂಟು ವರ್ಷಗಳವರೆಗೆ, ಈ ಸಾಧನೆಯನ್ನು ಮುಂದುವರಿಸಿದರು.

ಹೊಸ ಆಶ್ರಮದಲ್ಲಿ ಆರು ವರ್ಷಗಳನ್ನು ಕಳೆದ ಮೇಲೆ ಅವರು ಮತ್ತೆ ಔಷಧಿ ಕೊಡಲು ಪ್ರಾರಂಭಿಸಿದರು. ಅದಕ್ಕೆ ಕಾರಣ ಹದಿನೆಂಟು ವರ್ಷಗಳ ಹಿಂದೆ ಪಾರ್ಶ್ವ ವಾಯು ತೊಂದರೆಗೆ ಇವರಿಂದ ಚಿಕಿತ್ಸೆಮಾಡಿಸಿಕೊಂಡಿದ್ದ ರೋಗಿಗೆ ಮತ್ತೆ ಪಾರ್ಶ್ವವಾಯು ಮರುಕಳಿಸಿದ್ದರಿಂದ ಅವನು ಇವರನ್ನು ಹುಡುಕಿಕೊಂಡು ಬಂದಿದ್ದನು. ಬಾಬಾಜಿಯವರು ತಾನೀಗ ವೈದ್ಯಕೀಯವನ್ನು ನಡೆಸುತ್ತಿಲ್ಲ ಎಂದಾಗ ಆ ರೋಗಿಯು– "ಹಾಸಿಗೆಯಲ್ಲೇ ಮಲ ಮೂತ್ರ ಮಾಡಿಕೊಂಡು ಹಾಸಿಗೆ ಹಿಡಿದಿದ್ದ ರೋಗಿಯು ತಮ್ಮ ಚಿಕಿತ್ಸೆಯ ನೆರವಿನಿಂದ ಎದ್ದು ಕುಳಿತುಕೊಳ್ಳುತ್ತಾನೆ ಮತ್ತು ನಡೆಯುತ್ತಾನೆ ಎಂದಾದರೆ ಇದು ಇನ್ನೊಂದು ರೀತಿಯ ಭಕ್ತಿ ಅಥವಾ ಪೂಜೆಯಲ್ಲವೆ?" – ಎಂದು ಒತ್ತಡ ಹಾಕಿದನು.

ಬಾಬಾಜಿಗೆ ಅದು ಮನವರಿಕೆಯಾಗಿ ಅವರು ಮತ್ತೆ ಔಷಧಿ ಕೊಡುವುದ ನ್ನಾರಂಭಿಸಿದರು. ಅವರ ಈ ಹೊಸ ಆಶ್ರಮದಲ್ಲಿ ರೋಗಿಗಳು ಮತ್ತೆ ಸಾಲುಗಟ್ಟಿ ನಿಲ್ಲಲಾರಂಭಿಸಿದರು. ಅದು ಒಂದು ದೊಡ್ಡ ಮತ್ತು ವಿಖ್ಯಾತ ಸಂಸ್ಥೆಯಾಯಿತು. ನಮ್ಮ ಭೇಟಿಯ ಆರು ವರ್ಷಗಳಿಗೆ ಮೊದಲು ಆ ಪ್ರದೇಶದಲ್ಲಿ ಭಾರಿ ಪ್ರವಾಹವುಂಟಾಗಿ ಇಡೀ ಆಶ್ರಮವೇ ಕೊಚ್ಚಿಹೋಯಿತು. ವರ್ಷಗಳಿಂದ ಅವರ ಚಿಕಿತ್ಸೆಯ ನೆರವು ಪಡೆದಿದ್ದವರೆಲ್ಲರೂ ಯಾವುದೇ ನೆರವು ನೀಡದೆ ಸುಮ್ಮನೆ ನೋಡುತ್ತಿದ್ದರು. ಸ್ವಾಮಿ ರಾಮದೇವ ಒಬ್ಬರೇ ನೆರವಿಗೆ ಬಂದರು. ಏನಾಗಿದೆ ಎಂಬುದು ಗೊತ್ತಾದ ಕೂಡಲೆ ಬಂದು ಬಾಬಾಜಿಯವರನ್ನು ತಮ್ಮ ಆಶ್ರಮದಲ್ಲಿರಲು ಕರೆದುಕೊಂಡು ಹೋದರು. ಅವರಿಗೊಂದು ಪ್ರತ್ಯೇಕ ಕೊಠಡಿ ನೀಡಲಾಯಿತು. ಅಲ್ಲೇ ಅವರು ಚಿಕಿತ್ಸೆ ಮುಂದುವರಿಸಿದ್ದಾರೆ.

ಬಾಬಾ ಅವರ ದಿನಚರಿ ನಿಗದಿತವಾಗಿಬಿಟ್ಟಿದೆ. ಅವರು ನಿತ್ಯವೂ ಬೆಳಿಗ್ಗೆ ಮೂರು ಗಂಟೆಗೆಲ್ಲಾ ಎದ್ದು ಏಳು ಗಂಟೆಯ ತನಕ ಪೂಜೆಯಲ್ಲಿ ನಿರತರಾಗಿರುತ್ತಾರೆ. ರೋಗಿಗಳ ಚಿಕಿತ್ಸೆಯಲ್ಲಿ ವ್ಯಸ್ತರಾಗದಿದ್ದಾಗ ಓದಿನಲ್ಲಿ ತೊಡಗಿಕೊಳ್ಳುತ್ತಾರೆ. "ನಿಮ್ಮ ಆಶ್ರಮವನ್ನು ನೆನಪುಮಾಡಿಕೊಳ್ಳುತ್ತೀರಾ?" ಎಂದು ಅವರನ್ನು ಕೇಳಿದೆ.

"ಇಲ್ಲ, ಇಲ್ಲವೇ ಇಲ್ಲ."

"ಕುಟುಂಬ ನೆನಪಾಗುತ್ತದೆಯೆ?"

"ಇಲ್ಲ. ಯಾವಾಗಲಾದರೂ ಕುಟುಂಬದ ಬಂಧುಗಳು ಭೇಟಿಯಾಗಲು ಬರುತ್ತಾರೆ. ಆದರೆ ಈಚೆಗೆ ಪ್ರತಿಯೊಬ್ಬರೂ ವ್ಯಸ್ತರಾಗಿಬಿಟ್ಟಿರುತ್ತಾರೆ."

ಬಾಬಾಜಿಯವರು ತಮ್ಮ ಧಾರ್ಮಿಕ ಅನುಷ್ಠಾನಗಳನ್ನು ಮುಂದುವರಿಸಿದ್ದಾರೆ ಮತ್ತು ತಮ್ಮ ಶಕ್ತಿಯನ್ನು ನವೀಕರಿಸಿಕೊಳ್ಳಲು ಆ ಪ್ರದೇಶದಲ್ಲಿರುವ ದೇವೀ ಮಂದಿರಗಳಿಗೆ ಹೋಗುತ್ತಾರೆ.

ನನಗೆ ಅವರೊಬ್ಬ ಅತ್ಯಂತ ಸೌಜನ್ಯದ ಹಾಗೂ ಪ್ರೇಮಲ ಸ್ವಭಾವದ ವ್ಯಕ್ತಿಯೆಂದು ಕಂಡಿತು. ನಾನು ಯಾವಾಗ ಅವರನ್ನು ಭೇಟಿಮಾಡಲು ಹೋದರೂ ಒಬ್ಬ ಹಿರಿಯ ವೈದ್ಯನಿಗೆ ಕೊಡಬೇಕಾದ ಗೌರವವನ್ನು ಸಲ್ಲಿಸುವ ಸಲುವಾಗಿ ಎದ್ದುನಿಲ್ಲುತ್ತಾರೆ. ನನ್ನ ಬೆನ್ನು ನೋವಿಗೆ ಔಷಧವನ್ನೂ ಕೊಟ್ಟರು. ಅವುಗಳಿಂದೇನಷ್ಟು ಉಪಯೋಗವಾದಂತೆ ಕಾಣಲಿಲ್ಲ. ನನಗೆ ನಂಬಿಕೆಯ ಕೊರತೆ ಇದೆ ಎಂದು ನನ್ನ ಪತ್ನಿಯ ಅಭಿಪ್ರಾಯ. ಬಹುಶಃ ಆಕೆ ಹೇಳುವುದು ಸರಿ.

ಈ ಅಧ್ಯಾಯವು ಸಾಧುವಿನ ಜೀವನದ ವಿಭಿನ್ನ ಅಂಶಗಳನ್ನು ವಿವರಿಸಿದೆ. ನಾನು ಈ ಅಧ್ಯಾಯವನ್ನು ಸ್ವಾಮಿ. ಪಿ. ಅವರ ಸಂದರ್ಶನದೊಂದಿಗೆ ಪರಿಸಮಾಪ್ತಿಗೊಳಿಸುತ್ತಿದ್ದೇನೆ. ಈ ಸಂದರ್ಶನವು ಒಬ್ಬ ಸನ್ಯಾಸಿಯ ಬದುಕಿನ ವಿವಿಧ ಮಗ್ಗುಲುಗಳನ್ನು ವಿಶದಪಡಿಸುತ್ತದೆ. ಲೋಕ ವ್ಯವಹಾರಗಳೊಂದಿಗೆ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವುದು ಗಂಭೀರ ಚಿಂತನೆ, ಪುನರಾಲೋಚನೆಗಳು ಮತ್ತು ಕಠಿಣ ಅಭ್ಯಾಸಗಳಿಗೆ ತಡೆ ಒಡ್ಡುವುದಿಲ್ಲ.

ಹೃಷೀಕೇಶದಲ್ಲಿನ ಆಶ್ರಮದ ಸ್ವಾಮಿಯೊಬ್ಬರು ಗಂಗೋತ್ರಿಯ ನಮ್ಮ ಪಯಣದ ಮಧ್ಯೆ ಉತ್ತರ ಕಾಶಿಯಲ್ಲಿನ ಭಗೀರಥ ಆಶ್ರಮದಲ್ಲಿ ನಾವು ಸ್ವಲ್ಪ ಕಾಲ ನಿಂತು ಹೋಗಬೇಕೆಂದು ಸೂಚಿಸಿದರು.

"ಅಲ್ಲಿಯ ಸ್ವಾಮಿ ಬಹಳ ಆಸಕ್ತಿ ಹುಟ್ಟಿಸುವಂಥ ವ್ಯಕ್ತಿ. ಆ ಜಾಗವೂ ತುಂಬ ಸುಂದರವಾಗಿದೆ" ಎಂದರು.

ಭಗೀರಥ ಆಶ್ರಮದಲ್ಲಿ ನಾವು ಮೂರುದಿನಗಳ ತನಕ ತಂಗುವುದೆಂದು ನಿಶ್ಚಯಿಸಿದೆವು.

ಅಲ್ಲಿಗೆ ಹೋದ ಮೇಲೆ ಆ ಜಾಗ ನಿಜಕ್ಕೂ ಅತ್ಯಂತ ಸುಂದರವಾಗಿದೆಯೆಂದು ಅನಿಸಿತು. ಅಲ್ಲಿನ ಆಶ್ರಮ ಎಲ್ಲ ಅನುಕೂಲಗಳನ್ನು ಹೊಂದಿರುವ ಒಂದು ಆಧುನಿಕ ಕಟ್ಟಡವಾಗಿದ್ದರೂ ಇನ್ನೊಂದು ಆಶ್ರಮದ ಹಿಂಬದಿಗೆ ಇದ್ದುದರಿಂದ ರಸ್ತೆಯಿಂದ ಕಾಣುತ್ತಿರಲಿಲ್ಲ. ಗಂಗಾನದಿಯ ದಡದ ಮೇಲೆ ಇತ್ತು. ನದಿಯ ಇನ್ನೊಂದು ಕಡೆ ದೇವದಾರು ವೃಕ್ಷಗಳಿಂದ ತುಂಬಿದ ಪರ್ವತಗಳಿದ್ದುವು. ಸಾಲಾಗಿ ಬೆಳೆದಿದ್ದ ದೇವದಾರು ವೃಕ್ಷಗಳನ್ನು ನೋಡಿದಾಗ ಅರಣ್ಯ ಇಲಾಖೆಯು ಕಾಡು ಬೆಳೆಸುವಲ್ಲಿ ಎಷ್ಟೊಂದು ಸಕ್ರಿಯವಾಗಿದೆ ಎಂಬುದು ತಿಳಿದುಬಂತು. ಈ ಮುಂಚೆ ಅಲ್ಲಿಗೆ ಹೋಗಿದ್ದಾಗ ಪರ್ವತಗಳು ಬೋಳು ಬೋಳಾಗಿದ್ದುವು.

ತನ್ನ ಮೂರು ಜನ ಕೆಲಸಗಾರರ ಜೊತೆ ಸ್ವಾಮಿ. ಪಿ. ಅವರು ಆಶ್ರಮದ ಗೇಟಿನ ಬಳಿ ನಿಂತಿದ್ದು ನಮ್ಮನ್ನು ಸ್ವಾಗತಿಸಿದರು. ಕುಳ್ಳನೆಯ ಕನ್ನಡಕಧಾರಿ ಸ್ವಾಮಿ ಒಳ್ಳೆ ಇಂಗ್ಲಿಷ್

ಮಾತಾಡುತ್ತಿದ್ದರು. ಅವರ ಆಕಾರ ದಕ್ಷಿಣ ಭಾರತೀಯರು ಎಂಬುದನ್ನು ಸೂಚಿಸುತ್ತಿದ್ದರೂ ಹಿಂದಿ ಭಾಷೆಯಲ್ಲಿ ಅವರು ನಿಷ್ಣಾತರಿದ್ದರು.

ಅವರು ಆಂಧ್ರ ಪ್ರದೇಶದ ಒಂದು ಶ್ರೀಮಂತ ಕೃಷಿಕ ಕುಟುಂಬದಲ್ಲಿ ಹುಟ್ಟಿದವರೆಂದು ಆ ಮೇಲೆ ತಿಳಿದುಬಂತು. ಬಾಲ್ಯದಲ್ಲಿ ಅವರು ಪ್ರಕೃತಿಯಲ್ಲಿ ತುಂಬ ಆಸಕ್ತಿ ಹೊಂದಿದವರಾಗಿದ್ದು ಗಂಟೆಗಟ್ಟಲೆಕಾಲ ಕಾಡಿನಲ್ಲಿ ಕಣ್ಮರೆಯಾಗಿಬಿಡುತ್ತಿದ್ದರಂತೆ.

"ನಿಸರ್ಗದಲ್ಲಿನ ನನ್ನ ಆಸಕ್ತಿಯೇ ನನ್ನನ್ನು ಹಿಮಾಲಯಕ್ಕೆ ಎಳೆತಂದಿತು."

"ಆದರೆ ಆಧ್ಯಾತ್ಮದಲ್ಲಿನ ನಿಮ್ಮ ಆಸಕ್ತಿಯ ಕತೆಯೇನು?" ಎಂದು ಕೇಳಿದೆ.

"ಎರಡೂ ಜೊತೆ ಜೊತೆಗೇ ಸಾಗುತ್ತಿವೆ. ಅಂತಿಮವಾಗಿ ಆಧ್ಯಾತ್ಮ ಎಂದರೇನು? ಆತ್ಮ ಮತ್ತು ನಮ್ಮ ಸುತ್ತಣ ಪ್ರಕೃತಿಯ ನಡುವಣ ಸಂಬಂಧದ ಶೋಧವೇ ಅದಲ್ಲವೆ?

"ನಾನು ಇಪ್ಪತ್ತು ವರ್ಷದವನಿದ್ದಾಗ ಮನೆಬಿಟ್ಟು ಹೊರಟೆ. ಓದುವಾಗ ತರಗತಿಯಲ್ಲಿ ಯಾವಾಗಲೂ ಮೊದಲ ಸ್ಥಾನದಲ್ಲಿರುತ್ತಿದ್ದೆ. ನನ್ನ ವಿದ್ಯಾಭ್ಯಾಸ ಮುಗಿದಿತ್ತು. ನನ್ನ ನಿಜವಾದ ಗಂತವ್ಯವನ್ನು ಶೋಧಿಸಬೇಕೆಂದಿದ್ದೆ. ಮೊದಲ ಸಲ ಮನೆಬಿಟ್ಟುಹೊರಟಾಗ ಮತ್ತೆ ಮನೆಗೆ ಹಿಂತಿರುಗಬೇಕೆಂದು ನನ್ನ ಮೇಲೆ ಪ್ರಭಾವಬೀರಲಾಯಿತು. ಮನೆಯಲ್ಲಿ ನಾಲ್ಕು ತಿಂಗಳು ಇದ್ದೆ. ಆನಂತರ ಶಾಶ್ವತವಾಗಿ ಮನೆಬಿಟ್ಟೆ. ಕಳೆದ ಇಪ್ಪತ್ತೈದು ವರ್ಷಗಳಿಂದ ಮನಗೆ ಹೋಗಿಲ್ಲ. ಮನೆಯಲ್ಲೇನೂ ಜಗಳ – ಗಿಗಳ ನಡೆದಿರಲಿಲ್ಲ ಎಂದು ನೀವು ತಿಳಿದಿರಬೇಕು. ನನ್ನ ಕುಟುಂಬದ ಜೊತೆ ನನಗಾವುದೇ ಸಮಸ್ಯೆಯಿರಲಿಲ್ಲ. ಆದರೆ ಬಾಲ್ಯದಿಂದಲೂ ಸಂನ್ಯಾಸಿಯಾಗಬೇಕೆಂಬುದೇ ನನ್ನ ವಿಧಿಯಾಗಿತ್ತೆಂದು ನಾನು ತಿಳಿದಿದ್ದೆ."

ಪ್ರಾರಂಭದಲ್ಲಿ ಸ್ವಾಮಿ ಅವರು ಹೃಷೀಕೇಶದಲ್ಲಿದ್ದಾಗ ಸಂಸ್ಕೃತ ಮತ್ತು ಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ಸನ್ಯಾಸ ತೆಗೆದುಕೊಳ್ಳುವುದಕ್ಕೆ ಮುಂಚೆ ಹದಿನಾಲ್ಕು ವರ್ಷಗಳ ಕಾಲ ಬ್ರಹ್ಮಚಾರಿ ವಿದ್ಯಾರ್ಥಿಯಾಗಿದ್ದರು.

"ಇದಕ್ಕೂ ಮೊದಲೇ ನಾನು ಸನ್ಯಾಸಿಯಾಗಬಹುದಿತ್ತು. ಆದರೆ ನಾನು ವಿಶಿಷ್ಟ ಗುರುವೊಬ್ಬರಿಂದ ಸನ್ಯಾಸ ತೆಗೆದುಕೊಳ್ಳಬೇಕೆಂದಿದ್ದೆ. ಅದು ಈ ಮುಂಚೆ ಸಾಧ್ಯವಾಗಿರಲಿಲ್ಲ."

ಸ್ವಾಮಿ ಅವರು ಈಗ ವರ್ಷದಲ್ಲಿ ಏಳು ತಿಂಗಳು ದೆಹಲಿಯಲ್ಲಿ ಕಳೆಯುತ್ತಾರೆ. ಅಲ್ಲಿ ಗೃಹಸ್ಥರಿಗೆ ವೇದಾಂತವನ್ನು ಬೋಧಿಸುತ್ತಾರೆ. ಬಾಕಿ ಐದು ತಿಂಗಳು ಉತ್ತರಕಾಶಿಯಲ್ಲಿ ಕಳೆಯುತ್ತಾರೆ.

"ನೋಡಿ ಇಲ್ಲಿ ನಾನೊಂದು ಸಣ್ಣ ಗುಡಿಸಿಲಿನಲ್ಲಿರುತ್ತಿದ್ದೆ. ಅದು ಪ್ರವಾಹದಲ್ಲಿ ಹಾಳಾಯಿತು. ಆ ಮೇಲೆ ದೊಡ್ಡದಾಗಿ ಕಟ್ಟಿಕೊಂಡೆ. ಅದು ಭೂಕಂಪದಲ್ಲಿ ನಾಶವಾಯಿತು. ಈಗ ನನ್ನ ಕೆಲವು ವಿದ್ಯಾರ್ಥಿಗಳು ನನಗಾಗಿ ಈ ಜಾಗ ಕಟ್ಟಿಕೊಟ್ಟಿದ್ದಾರೆ."

ಅವರು ಹೇಳಿದ – ಈ 'ಜಾಗ' ಮೂರು ಕೊಠಡಿಗಳ ಸುಂದರವಾದ ಆಧುನಿಕ

ಗೃಹವಾಗಿತ್ತು. ಇದರಲ್ಲಿ ಒಂದು ವಿಶಾಲವಾದ ಮುಕ್ತ ಸ್ಥಳಾವಕಾಶ ಮತ್ತು ಗಂಗೆಯ ದಿಕ್ಕಿಗೆ ತೆರೆದುಕೊಂಡ ಅಂಗಳವಿದೆ.

"ನೀವು ಸಮಯವನ್ನು ಹೇಗೆ ಕಳೆಯುತ್ತೀರಿ?"– ನಾನು ಕೇಳಿದೆ.

"ಓದು, ಓದಿಸು ಮತ್ತು ಮಲಗಿ ಆರಾಮವಾಗಿರು (ಪಢೋ, ಪಢಾವೋ, ಪಡೇ ರಹೋ) – ಇದು ನನ್ನ ಸಿದ್ಧಾಂತ"

"ಹಣ ಸಂಪಾದಿಸುವುದು ಅನೇಕರ ಮಹತ್ವಾಕಾಂಕ್ಷೆಯಾಗಿರುತ್ತದೆ. ಹಣ ಸಂಪಾದಿಸುವುದು ಏತಕ್ಕಾಗಿ? ಅಂತಿಮವಾಗಿ ಹಣ ನಮಗೆ ಹೆಚ್ಚಿನ ಬಿಡುವು ತಂದುಕೊಡುತ್ತದೆ. ಚಿಂತನ ಮತ್ತು ಮನನಗಳಿಗೆ ಈ ಬಿಡುವು ಅತ್ಯಂತ ಅಗತ್ಯ. ಚಿಂತನ ಮನನಗಳಿಲ್ಲದೆ ನೀವು ಆಧ್ಯಾತ್ಮಿಕತೆಯನ್ನು ಸಾಧಿಸಲಾರಿರಿ. ನಮ್ಮ ಅಪಾರವಾದ ಪ್ರಾಕೃತಿಕ ಸಂಪತ್ತು ಮತ್ತು ಸಂಪನ್ಮೂಲಗಳು ಇದನ್ನು ಸಾಧ್ಯಮಾಡಿವೆ."

ಅವರು ಈ ಮಾತುಗಳನ್ನು ಹೇಳುವಾಗ ಗಂಭೀರವಾಗಿದ್ದರು. ತಮಾಷೆ ಮಾಡುತ್ತಿರಲಿಲ್ಲ.

ಸ್ವಾಮಿ ಅವರು ಅತ್ಯಂತ ಒಳ್ಳೆಯ ಆತಿಥೇಯರೆಂಬುದನ್ನು ಸಿದ್ಧಮಾಡಿದರು. ಮೊದಲ ದಿನದ ಊಟಕ್ಕೆ ಪನೀರ ಮತ್ತು ಚೀಸ್ ವ್ಯವಸ್ಥೆಯನ್ನೂ ಮಾಡಿದ್ದರು.

"ನಿಮ್ಮ ಹೆಸರು ಕೇಳಿ ನೀವು ಪಂಜಾಬಿ ಎಂದು ಗೊತ್ತಾಗಿ ಪನೀರ್ ಅನ್ನು ನೀವು ಇಷ್ಟಪಡುತ್ತೀರೆಂದು ಗೊತ್ತಿತ್ತು."

ಇದರ ಜೊತೆಗೆ ದಕ್ಷಿಣ ಭಾರತದ ಸಾಗು(ತೊವ್ವೆ), ಬಾಸ್ಮತಿ ಅಕ್ಕಿಯ ಅನ್ನ ಹಾಗೂ ಆಶ್ರಮದ ತೋಟದಲ್ಲಿ ಬೆಳೆದ ತರಕಾರಿಗಳ ಪಲ್ಲೆ ಬಡಿಸಲಾಯಿತು. ನಮಗೆ ಊಟ ಬಡಿಸುತ್ತಿದ್ದ ಮೂರೂ ಜನ ಸೇವಕರಿಗೆ ಸ್ವಾಮಿ ಅವರು ಅತಿಥಿಗಳನ್ನು ಹೇಗೆ ಸತ್ಕರಿಸಬೇಕೆಂದು ಒಂದೇ ಸಮನೆ ಹೇಳಿಕೊಡುತ್ತಲೇ ಇದ್ದರು. ನಮಗೆ ರಾಜಾತಿಥ್ಯ ನೀಡುತ್ತಿದ್ದಾಗ ನಾನು ಕಡೆಗಣ್ಣಿನಿಂದ ನೋಡಿದಾಗ ಸ್ವಯಂ ಸ್ವಾಮಿ ತುಂಬ ಮಿತಾಹಾರಿ ಆಗಿದ್ದರು.

ಮೂರು ಜನ ಸೇವಕರ ಕಥೆ ರೋಚಕವಾದ್ದು. ಅವರಲ್ಲಿ ಇಬ್ಬರು ಸೋದರರಾಗಿದ್ದರು. ತುಂಬಾ ಬಡವರು ಮತ್ತು ತಮ್ಮ ಕುಟುಂಬಗಳನ್ನು ಸಾಕಲು ಜಮೀನು–ಸಮೀನು ಏನೂ ಇಲ್ಲದ ಕಾರಣ ಕೆಲವು ವರ್ಷಗಳ ಹಿಂದೆ ಕೆಲಸ ಕೇಳಿಕೊಂಡು ಸ್ವಾಮಿಯವರಲ್ಲಿಗೆ ಬಂದಿದ್ದರು. ಊರಿನಲ್ಲಿ ಸ್ವಲ್ಪ ಜಮೀನು ಕೊಳ್ಳಲು ಮತ್ತು ಮನೆ ಕಟ್ಟಿಕೊಳ್ಳಲು ಸ್ವಾಮಿ ಅವರು ಅವರಿಗೆ ವ್ಯವಸ್ಥೆ ಮಾಡಿದ್ದರು. ಬೇರಿನ್ನೆಲ್ಲೋ ಕೆಲಸ ಮಾಡಿಕೊಂಡಿದ್ದ ಅವರ ಉಳಿದಿಬ್ಬರು ಸೋದರರಿಗೂ ಇದೇ ಬಗೆಯ ವ್ಯವಸ್ಥೆ ಮಾಡಿದ್ದರು. ಪರಸ್ಪರ ಅಸೂಯೆ ಉಂಟಾಗದಿರಲೆಂಬ ಕಾರಣಕ್ಕೆ ಅದೇ ಕಟ್ಟಡದಲ್ಲಿ ಅವರೆಲ್ಲರೂ ಪ್ರತ್ಯೇಕವಾಗಿ ಸಂಸಾರ ಮಾಡಿಕೊಂಡಿದ್ದಾರೆ.

ಮೂರನೆಯ ಸೇವಕನೊಬ್ಬ ಅನಾಥ. ಅವನಿನ್ನೂ ಮಗುವಾಗಿದ್ದಾಗ ಸ್ವಾಮಿಯವರ ಕಟ್ಟಡದ ಮೆಟ್ಟಿಲಮೇಲೆ ಬಿಟ್ಟುಹೋಗಿದ್ದರು. ಹತ್ತನೇ ತರಗತಿಯವರೆಗೆ ಅವನಿಗೆ ಶಿಕ್ಷಣ ಕೊಡಿಸಿ ಗಂಗೆಯ ದಡದಲ್ಲೇ ಅವನಿಗೂ ಒಂದು ಮನೆ ಕಟ್ಟಿಸಿಕೊಟ್ಟಿದ್ದಾರೆ.

"ಇಷ್ಟರಲ್ಲೇ ಅವನಿಗೆ ಮದುವೆ ಮಾಡಿಸಲಾಗುವುದು"–ಎಂದರು ಸ್ವಾಮಿ ತೃಪ್ತಿಯಿಂದ.

ನಾವು ಅಲ್ಲಿ ತಂಗಿದ್ದ ಎರಡನೇ ದಿನ ಮೊದಲ ಇಬ್ಬರು ಸೇವಕರ ಊರಿಗೆ ನಮ್ಮನ್ನು ಕರೆದೊಯ್ಯಲಾಯಿತು. ಅಲ್ಲೊಂದು ನಾಲ್ಕು ಮನೆಗಳನ್ನೊಳಗೊಂಡ ಕಟ್ಟಡವಿತ್ತು. ಅದರಲ್ಲಿ ಅವರ ಎಲ್ಲ ಮಕ್ಕಳು ಆಡಲನುಕೂಲವಿರುವ ಅಂಗಳವಿತ್ತು. ಪ್ರತಿ ಸೋದರನಿಗೂ ಪರಸ್ಪರರಲ್ಲಿ ಜಗಳಕ್ಕೆ ಅವಕಾಶವಿಲ್ಲದಂತೆ ಅವನದೇ ಆದ ವ್ಯವಸಾಯದ ಜಮೀನು ಇತ್ತು. ನಮಗೆ ಆ ಜಮೀನು ತೋರಿಸುತ್ತಿದ್ದಾಗ ಸ್ವಾಮಿ ತೋಟಗಾರಿಕೆ ಮತ್ತು ಕೃಷಿಯ ಬಗ್ಗೆ ತಿಳಿಸಿಕೊಟ್ಟರು.

"ಬೇರೆ ಜಮೀನುಗಳನ್ನು ನೋಡಿ– ಹೇಗೆ ಬಂಜರಾಗಿವೆ. ಊರಿನ ಜನರಿಗೆ ವ್ಯವಸಾಯ ಮಾಡುವುದನ್ನು ಹೇಳಿಕೊಡಬೇಕು."–ಅವರು ವಿಷಾದದಿಂದ ಹೇಳಿದರು.

ಮನೆಯೆಲ್ಲ ಶಾಲೆಯಿಂದ ಹಿಂತಿರುಗಿದ ಮಕ್ಕಳ ಗದ್ದಲದಿಂದ ತುಂಬಿಹೋಯಿತು. ಪ್ರತಿಯೊದು ಮಗುವೂ ಸ್ವಾಮಿಯವರ ಪಾದಗಳನ್ನು (ನಮ್ಮ ಪಾದಗಳನ್ನೂ ಸಹ) ಸ್ಪರ್ಶಿಸಿತು. ನಮಗೆ ಊಟ ಬಡಿಸಲು ಅವರಲ್ಲಿ ನಾನು ತಾನು ಎಂಬ ಸ್ಪರ್ಧೆ ಏರ್ಪಟ್ಟಿತು. ಸ್ವಾಮಿ ಅವರು ಎಲ್ಲರನ್ನೂ ಅವರ ಓದಿನ ಬಗ್ಗೆ ವಿಚಾರಿಸಿಕೊಂಡರು. ಒಬ್ಬ ತುಂಟ ಬಾಲಕನಿಗೂ ನೆರೆಯ ಬಾಲಕನಿಗೂ ಆ ಹುಡುಗ ಸ್ವಾಮಿಯ ಬಗ್ಗೆ ಬೈಗುಳದ ಭಾಷೆ ಬಳಸಿದನೆಂಬ ಕಾರಣಕ್ಕೆ, ಜಗಳವಾಗಿತ್ತು.

"ಅಸೂಯೆ" ಎಂದು ಅವರು ತಿಳಿಸಿದರು.

ಆದರೆ ಪುಟ್ಟ ಹುಡುಗನು ಸ್ವಾಮೀಜಿಯವರನ್ನು ವಹಿಸಿಕೊಂಡು ದೊಣ್ಣೆ ಕೈಗೆತ್ತಿಕೊಂಡದ್ದು ಸೋಜಿಗವೆನಿಸಿತು. ನಮ್ಮ ಮಧ್ಯಾಹ್ನದ ಊಟದ ನಂತರ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ನಮಗೆ ಒಂದು ವಿಷಯ ಸ್ಪಷ್ಟವಾಯಿತು. ಅದೆಂದರೆ ಸ್ವಾಮಿ ತಮ್ಮ ಕುಟುಂಬದೊಂದಿಗೆ ಸಂಬಂಧ ಕಡಿದುಕೊಂಡಿದ್ದರೂ ಇನ್ನೊಂದು ಕುಟುಂಬವನ್ನು ತನ್ನದಾಗಿಸಿಕೊಂಡಿದ್ದರು ಮತ್ತು ಅದರ ಯೋಗಕ್ಷೇಮದ ವಿಷಯ ಅವರ ಮನಸ್ಸಿನಲ್ಲಿ ತುಂಬಿತ್ತು. ಮಧ್ಯಾಹ್ನದ ನಿದ್ರೆಯ ನಂತರ ಮಕ್ಕಳ ಭವಿಷ್ಯದ ಬಗ್ಗೆ ತಾವು ಮಾಡಿರುವ ಯೋಜನೆಗಳ ಬಗ್ಗೆ ನಮಗೆ ಹೇಳಿದರು.

"ಅವರುಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗಬೇಕು" ಎಂದರು.

ಬೇರೆಯವರಿಗೆ ತಾವು ಮಾಡುತ್ತಿರುವುದಕ್ಕೆ ಪ್ರತಿಯಾಗಿ ಸ್ವಾಮಿ ಅವರು ಏನನ್ನೂ ನಿರೀಕ್ಷಿಸುತ್ತಿಲ್ಲವೆಂಬುದೂ ಬೇಗನೆ ಸ್ಪಷ್ಟವಾಯಿತು. ನಾವು ಅಲ್ಲಿದ್ದ ಮೂರು ದಿನಗಳಲ್ಲಿ ಒಮ್ಮೆಯೂ ನಮ್ಮ ಬಗ್ಗೆಯಾಗಲಿ, ನಮ್ಮ ವೃತ್ತಿಯ ಬಗ್ಗೆಯಾಗಲಿ ನಮ್ಮ ಕುಟುಂಬದ

ಬಗ್ಗೆಯಾಗಲಿ ಯಾವ ಕುತೂಹಲವನ್ನೂ ತೋರಲಿಲ್ಲ. ನಾವು ಅವರನ್ನು ಏಕೆ ಸಂದರ್ಶಿಸುತ್ತಿದ್ದೇವೆಂದು ನಾವಾಗಿ ನಾವು ಹೇಳಿದಾಗಲೇ ಅವರಿಗೆ ಗೊತ್ತಾದದ್ದು. ನಮ್ಮನ್ನು ಏನೂ ಪ್ರಶ್ನಿಸಲಿಲ್ಲ. ನಮ್ಮ ವಾಸ್ತವ್ಯದ ಕಡೆಯಲ್ಲಿ ನಮ್ಮ ಕಡೆಯಿಂದ ಸ್ವಲ್ಪ ದೇಣಿಗೆ ನೀಡಲು ಹೋದಾಗ ಅವರು–" ಬೇಡ, ಬೇಡ, ನೀವು ಸಂಬಳದಿಂದ ಜೀವಿಸುವವರು. ಯಾರಿಗೆ ಬೇಕಾದಷ್ಟು ಇದೆಯೋ ಅವರು ಕೊಡಲಿ. ನೀವುಗಳು ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ"– ಎಂದರು.

"ಅದರೆ ಸ್ವಾಮಿಯವರೆ ನಾವು ಮತ್ತೊಮ್ಮೆ ಬರಲಿಚ್ಛಿಸುತ್ತೇವೆ" ಎಂದೆವು.

"ನಿಮ್ಮನ್ನು ಎಂದು, ಯಾರು ತಡೆದಿದ್ದಾರೆ?"– ಅವರೆಂದರು.

ನಮ್ಮ ಪ್ರಯಾಣದ ಮಧ್ಯೆ ಸಮುದಾಯದಲ್ಲಿ ಸ್ವಾಮಿಯವರು ವಹಿಸುತ್ತಿರುವ ಪಾತ್ರದ ಬಗ್ಗೆ ತಿಳಿದುಕೊಂಡೆವು. ಗಂಗೆಯ ಆ ಕಡೆ ಇದ್ದ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳಬೇಕೆಂದು ಇನ್ನೊಬ್ಬ ಸ್ವಾಮಿ ಅನೇಕ ವರ್ಷಗಳಿಂದ ಪ್ರಯತ್ನಿಸುತ್ತಿದ್ದರು. ಮೊದಲಿಗೆ ಅವರು ಹಳ್ಳಿಯ ಮಕ್ಕಳಿಗೆ ಅಲ್ಲೊಂದು ಕ್ರಿಕೆಟ್ ಆಟದ ಮೈದಾನವನ್ನು ಸ್ಥಾಪಿಸಿದರು.

ಆ ಜಾಗ ಈಗ ತುಂಬ ಗದ್ದಲದಿಂದ ಕೂಡಿರುವುದರಿಂದ ಧ್ಯಾನ ಮಾಡಲು ಪ್ರಶಸ್ತವಲ್ಲವೆಂಬ ಸ್ವಾಮಿ.ಪಿ. ಅವರ ದೂರನ್ನು ಕಡೆಗಣಿಸಲಾಯಿತು. ಆಟದ ಮೈದಾನವನ್ನು ಬೇರೆಲ್ಲಾದರೂ ಏರ್ಪಡಿಸಿ ಈ ಜಾಗದಲ್ಲಿ ಮರಗಳನ್ನು ನೆಡಲು ಅರಣ್ಯ ಇಲಾಖೆಯನ್ನು ಪ್ರೋತ್ಸಾಹಿಸಿ ಎಂದು ಜಿಲ್ಲೆಯ ಅಧಿಕಾರಿಗಳನ್ನು ಒತ್ತಾಯಿಸಿದರು. ನಾವು ಅಲ್ಲಿಗೆ ಹೋದಾಗ ಆ ಇನ್ನೊಬ್ಬ ಸ್ವಾಮಿ ಬಂದು ಸಸಿಗಳನ್ನು ಕಿತ್ತೆಸೆಯುವುದಾಗಿ ಬೆದರಿಕೆ ಹಾಕಿದರು. ನಾವು ಮತ್ತೆ ಹಿಂತಿರುಗಿದಾಗ ವಾತಾವರಣವೆಲ್ಲ ಸಂಚು ಪಿತೂರಿಗಳಿಂದ ದಟ್ಟೈಸಿತ್ತು. ಸ್ವಾಮಿ ಅವರು ಜಿಲ್ಲಾ ಆಡಳಿತಕ್ಕೆ ಈ ಹಗರಣವನ್ನು ಶಾಶ್ವತವಾಗಿ ಕೊನೆಗೊಳಿಸಬೇಕೆಂದು ಫೋನ್ ಮಾಡುವುದರಲ್ಲೇ ಹಲವಾರು ಗಂಟೆಗಳನ್ನು ಕಳೆದರು. ನಾವು ನಿದ್ದೆಮಾಡುತ್ತಿದ್ದಾಗ ತೃಪ್ತಿಕರವಾದ ಪರಿಹಾರವನ್ನು ಕಂಡುಕೊಳ್ಳಲಾಯಿತಂತೆ.

ಆಧ್ಯಾತ್ಮ ಜೀವನದ ಬಗೆಗೆ ಸ್ವಾಮಿ. ಪಿ ತಮ್ಮ ವಿಚಾರಗಳನ್ನು ಭೋಜನ ಮತ್ತು ಪಿಕ್ನಿಕ್ ಸೆಷನ್ನುಗಳ ನಡುವಿನ ಅವಧಿಯಲ್ಲಿ ತುಣುಕುಗಳಲ್ಲಿ ಹೇಳುತ್ತಾ ಹೋದರು. ಹಾಯಾಗಿರುವ ಸ್ವಾಮಿ ಎಂದು ಹೇಳಿಕೊಳ್ಳುವ ಸದಾ ವ್ಯಸ್ತರಾದ 'ಸ್ವಾಮಿ'ಯವರ ಜೊತೆ ನಾನು ಕೂಡ ಕೆಲವೊಂದು ಸಂದರ್ಶನಗಳನ್ನು ಸಾಧ್ಯವಾಗಿಸಿಕೊಂಡೆ.

ಅನೇಕ ಮಹತ್ವದ ವಿಚಾರಗಳಿಗೆ ಸಂಬಂಧಿಸಿದಂತೆ ಅವರ ಉತ್ತರಗಳು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾದವು.

"ವೇದಾಂತದ ಪರಿಕಲ್ಪನೆಗಳ ತಿಳಿವು ಮನುಷ್ಯನ ನಡವಳಿಕೆಯನ್ನು ಯಾವ ರೀತಿಯಲ್ಲಾದರೂ ಬದಲಾಯಿಸುತ್ತದೆಯೆ?"– ನಾನು ಕೇಳಿದೆ

"ಮನುಷ್ಯನ ನಡವಳಿಕೆಯನ್ನು ಬದಲಾಯಿಸಲು ವೇದಾಂತದ ಜ್ಞಾನವನ್ನು ಬಳಸುವುದೆಂದರೆ ಇರುವೆಯನ್ನು ಕೊಲ್ಲಲು ಅಣ್ವಸ್ತ್ರಗಳನ್ನು ಬಳಸಿದಂತೆ! ಆದಾಗ್ಯೂ ವೇದಾಂತದ ಜೀವನದ ಕಡೆಗಿನ ಅವನ ಹೆಜ್ಜೆಗಳೇ ಮನುಷ್ಯನ ನಡವಳಿಕೆಯ ನಿಗಾ ವಹಿಸುತ್ತವೆ. ಆತ್ಮವು ನಿರಪೇಕ್ಷ ಶಾಂತಿ ಎಂದು ಶಾಸ್ತ್ರಗಳು ಹೇಳುತ್ತವೆ. ಸಾಪೇಕ್ಷ ಶಾಂತಿಯಿದ್ದಾಗ ಮಾತ್ರ ಯಾರೇ ಆದರೂ ನಿರಪೇಕ್ಷ ಶಾಂತಿಯ ಕಡೆಗೆ ಸಾಗುವ ಬಗ್ಗೆ ವಿಚಾರಮಾಡಬಹುದು. ಸಾಪೇಕ್ಷ ಶಾಂತಿಯನ್ನು ಸಾಧಿಸಲು ಸಿದ್ಧತೆಯ ಸೋಪಾನಗಳು ಅತ್ಯಂತ ಅಗತ್ಯ."

"ಸಾಪೇಕ್ಷ ಶಾಂತಿಯನ್ನು ಸಾಧಿಸಲು ಏನು ಮಾಡಬೇಕು? ಸಿದ್ಧತೆಯ ಹೆಜ್ಜೆಗಳು ಯಾವು?"

"ಯುಕ್ತವಾದ ಅಥವಾ ನ್ಯಾಯವಾದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಜೀವನದ ಉದ್ದೇಶ ಭೌತಿಕ ಸಂಪತ್ತಾದರೆ ಮೌಲ್ಯಗಳು ಹಿಂದೆ ಸರಿಯುತ್ತವೆ. ಭೌತಿಕ ಸಂಪತ್ತೇನಿದ್ದರೂ ಜೀವನ ನಡೆಸಲು ಅಗತ್ಯವಾದ ಸಾಧನ ಮಾತ್ರ, ಅದೇ ಜೀವನದ ಉದ್ದೇಶವಲ್ಲ ಎಂದು ಅರ್ಥಮಾಡಿಕೊಂಡರೆ ಆಗ ಮುಂದುವರಿಯಬಹುದು."

"ಕೆಲವೊಮ್ಮೆ ಯುಕ್ತವಾದ ಅಥವಾ ನ್ಯಾಯವಾದ ಮೌಲ್ಯಗಳು ಯಾವುವೆಂದು ಗೊತ್ತಿದ್ದರೂ ಅವನ್ನು ಅಳವಡಿಸಿಕೊಳ್ಳುವಷ್ಟು ಸಾಮರ್ಥ್ಯವಿರದ ದುರ್ಬಲನಾಗಿರುತ್ತಾನೆ. ಆಗ ಏನು ಮಾಡಬೇಕು?"

"ಯುಕ್ತವಾದ ಮೌಲ್ಯಗಳು ಯಾವುವೆಂಬುದು ತಮಗೆ ತಿಳಿದಿದೆ ಎನ್ನುವವರಿಗೆ ವಾಸ್ತವವಾಗಿ ಅವು ತಿಳಿದಿರುತ್ತವೆ ಎಂದು ಹೇಳುವುದು ತಪ್ಪಾಗುತ್ತದೆ. ಅವರು ತೀರಾ ಅಸ್ಪಷ್ಟವಾಗಿ ಅವನ್ನು ತಿಳಿದುಕೊಂಡಿರುತ್ತಾರೆ. ಈ ಮೌಲ್ಯಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಮೊದಲ ಹೆಜ್ಜೆ. ಆಮೇಲೆ ಅವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಸಂಪತ್ಸಮೃದ್ಧಿಗಳ ನಡುವೆ ಸಾಪೇಕ್ಷ ಶಾಂತಿಯನ್ನು ಗಳಿಸಿಕೊಳ್ಳುವುದೇ ಒಂದು ಗಣನೀಯ ಸಾಧನೆ."

"ಯುಕ್ತವಲ್ಲದ ಮೌಲ್ಯಗಳು ಮತ್ತು ಅಡ್ಡಿಗಳು ಪರಸ್ಪರ ಒಂದಕ್ಕೊಂದು ನಿಕಟವಾಗಿ ಜೊತೆಗೂಡಿರುತ್ತವೆ. ಅದೇ ರೀತಿ ಯುಕ್ತ ಅಥವಾ ಸರಿಯಾದ ಮೌಲ್ಯಗಳು ಮತ್ತು ಸಾಪೇಕ್ಷ ಶಾಂತಿಗಳು ಜೊತೆಗೂಡಿರುತ್ತವೆ. ನೀವು ವಿಚಾರ ಮಾಡತೊಡಗಿದಂತೆ ಇದು ಹೆಚ್ಚು ಸ್ಪಷ್ಟವಾಗುತ್ತದೆ."

"ಸನ್ಯಾಸ ತೆಗೆದುಕೊಳ್ಳುವ ಅಗತ್ಯವಿದೆಯೆ? ಗೃಹಸ್ಥ ಜೀವನ ನಡೆಸುತ್ತಲೇ ವೇದಾಂತವನ್ನು ಪಾಲಿಸಲು ಸಾಧ್ಯವಿಲ್ಲವೆ?"– ನಾನು ಕೇಳಿದೆ.

"ಸನ್ಯಾಸ ಕೇವಲ ಒಂದು ತಾಂತ್ರಿಕ ವಿಷಯ. ಮನುಷ್ಯನು ಕ್ರಿಯೆಯ ಮೂಲಕ ಸಾಧಿಸಲು ಯತ್ನಿಸುತ್ತಾನೆ. ಆದರೆ ಕ್ರಿಯೆಯಿಂದ ಕೇವಲ ಭೌತಿಕ ಫಲಗಳಷ್ಟೇ ಲಭಿಸುತ್ತವೆ.

ಅದು ಶಾಂತಿಯತ್ತ ಕೊಂಡೊಯ್ಯಲಾರದು. ಕ್ರಿಯೆಯು ಅಸ್ತಿತ್ವಮುಖಿ ಯಾಗಿರುತ್ತದೆಯೇ ಹೊರತು ಅದು ಶಾಂತಿಮುಖಿಯಲ್ಲ ಎಂದು ವೇದಾಂತ ಹೇಳುತ್ತದೆ.

"ಈ ವಿಕೃತಿಯನ್ನು(=ತಿರಿಚುವಿಕೆಯನ್ನು) ಸರಿಪಡಿಸುವ ಅಗತ್ಯವಿದೆ. ಮನುಷ್ಯನು ಇಚ್ಛೆ-ಕ್ರಿಯೆ-ಫಲ-ಸುಖಾನುಭವದ ಚಕ್ರಕ್ಕೆ ಅಭ್ಯಸ್ಥನಾಗಿಬಿಟ್ಟಿದ್ದಾನೆ. ಈ ಚಕ್ರವನ್ನು ಭೇದಿಸಿಕೊಂಡು ಹೊರಬರಲು ನಾವು ಕ್ರಿಯೆಯ ತ್ಯಾಗವನ್ನು ರೂಪಿಸುತ್ತೇವೆ. ಜೀವನದ ಸಾರ್ಥಕ್ಯವಿರುವುದು ಕ್ರಿಯೆಯಲ್ಲಲ್ಲ, ಆತ್ಮದ ಹುಡುಕಾಟದಲ್ಲಿ(=ಆತ್ಮಜ್ಞಾನ) ಎಂದು ಅರಿತುಕೊಂಡರೆ ಔಪಚಾರಿಕ ದೀಕ್ಷೆಯಿಲ್ಲದೆಯೂ ಸಂನ್ಯಾಸಿಯೇ. ಕ್ರಿಯೆಯಂತೂ ಮುಂದುವರಿಯುತ್ತದೆ. ಆದರೆ ಅದೇನಿದ್ದರೂ ಅಸ್ತಿತ್ವಕ್ಕಾಗಿ ಅಷ್ಟೆ. ಆದರೆ ಅಸ್ತಿತ್ವ ಮತ್ತು ಸಾರ್ಥಕ್ಯ ಎರಡೂ ಬೇರೆ ಬೇರೆ. ಸಾರ್ಥಕ್ಯ ಆತ್ಮಜ್ಞಾನದಿಂದ ಬರುತ್ತದೆ. ಕ್ರಿಯೆಯ ಬಗೆಗಿನ ವಾಸ್ತವ ಸಂಗತಿಯೆಂದರೆ ಅದು ತೀರಾ ಸೀಮಿತ ಫಲಿತಾಂಶಗಳನ್ನು ತಂದುಕೊಡುತ್ತದೆ. ನನ್ನ ಶೋಧದ ನಿಜ ಸಂಗತಿಯೆಂದರೆ ನನಗೆ ಬೇಕಾಗಿರುವುದು ಪೂರ್ಣತೆ, ಸಮೃದ್ಧಿ ಮತ್ತು ಬಿಡುಗಡೆ; ಮೃತ್ಯುಭಯದಿಂದಲೂ ಬಿಡುಗಡೆ. ನಾನೇನು ಎಂಬುದನ್ನು ನಾನು ತಿಳಿಯಬೇಕೆಂದು ಬಯಸುತ್ತೇನೆ."

"ಅಂದರೆ ನೀವು ಹೇಳುವುದು ಸನ್ಯಾಸಿ ಅಸ್ತಿತ್ವಕ್ಕಾಗಿ ಮಾತ್ರ ಕ್ರಿಯೆಯನ್ನು ನಡೆಸುತ್ತಾನೆಂದೆ? ಇತರೆ ಜನಗಳ ಯೋಗಕ್ಷೇಮಕ್ಕಾಗಿ ಮಾಡುವ ಕಾರ್ಯಗಳ ಬಗ್ಗೆ ಏನು ಹೇಳುತ್ತೀರಿ?"

"ಅದು ಒಳ್ಳೆಯದೇ. ಅದು ಲೋಕ ಸಂಗ್ರಹ. ಅದನ್ನು ಬೇರೆಯವರಿಗಾಗಿ ಮಾಡುತ್ತಿದ್ದಾನೆ, ಸ್ವಂತ ಸಾರ್ಥಕ್ಯಕ್ಕಲ್ಲ."

"ತನ್ನ ಸಾರ್ಥಕ್ಯಕ್ಕಾಗಿ ಮಾಡಿದ ಕಾರ್ಯಗಳು ಮತ್ತು ಬೇರೆಯವರಿಗಾಗಿ ಔದಾರ್ಯದಿಂದ ಮಾಡಿದ ಕಾರ್ಯಗಳ ನಡುವೆ ಬೌದ್ಧಿಕವಾಗಿ ವ್ಯತ್ಯಾಸವನ್ನು ಮಾಡಲು ಸಾಧ್ಯವೆ?"

"ಹೌದು ಸಾಧ್ಯ. ಹೇಗೆಂದು ಹೇಳುತ್ತೇನೆ. ಉದಾಹರಣೆಗೆ ನಾನು ಯಾರದೋ ಒಳಿತಿಗೆ ಏನೋ ಒಂದು ಮಾಡುತ್ತೇನೆ. ಅವನು ಅದಕ್ಕೆ ಪ್ರತಿಯಾಗಿ ಏನೂ ಮಾಡುವುದಿಲ್ಲ. ನನಗೆ ಹತಾಶೆಯಾಗುತ್ತದೆ. ಇದು ತನ್ನ ಸಾರ್ಥಕ್ಯಕ್ಕಾಗಿ ಮಾಡಿದ ಕಾರ್ಯ. ಇದರಲ್ಲಿ ತನ್ನಿಂದ ನೆರವು ಪಡೆದವನು ತನಗೆ ಪ್ರತಿಯಾಗಿ ಮಾಡಲೆಂಬ, ಇಲ್ಲವೆ ಕೃತಜ್ಞತೆ ಹೇಳಲೆಂಬ ನಿರೀಕ್ಷೆ ಇರುತ್ತದೆ. ಒಂದು ವೇಳೆ ವ್ಯಕ್ತಿಯಾದವನು ಧಾರ್ಮಿಕ ವ್ಯಕ್ತಿಯಾಗಿದ್ದರೆ ಅವನಿಗೆ ಔದಾರ್ಯವೆಂಬುದು ಸಲೀಸಾಗಿ ಬರುತ್ತದೆ. ಉಪಕೃತನಾದವನು ಪ್ರತಿಯಾಗಿ ಏನೂ ನೀಡದಿದ್ದರೂ ಅಥವಾ ಕೃತಜ್ಞತೆ ಹೇಳದಿದ್ದರೂ ಅವನೇನೂ ಹತಾಶೆಗೊಳ್ಳದಿರಬಹುದು. ಆದರೆ ಆತ್ಮ ಜ್ಞಾನವು ಔದಾರ್ಯದ ಗುಣವನ್ನು ತರುತ್ತದೆಂದೇನಿಲ್ಲ. ಆತ್ಮ ಜ್ಞಾನಿಯಾದ ವ್ಯಕ್ತಿ ಪ್ರಪಂಚಕ್ಕೇನನ್ನಾದರೂ ಅಥವಾ ಪ್ರಪಂಚದಲ್ಲೇನನ್ನಾದರೂ ಮಾಡಲೇಬೇಕೆಂದಿಲ್ಲ."

“ಆದರೆ ಆತ್ಮಜ್ಞಾನವು ಕರುಣೆಯನ್ನು ಕೂಡ ಉಂಟುಮಾಡುವುದಿಲ್ಲವೆ? ಆತ ಬೇರೆಯವರ ವಿಷಯಕ್ಕೆ ಸಂವೇದನಾಶೀಲನಾಗುವುದಿಲ್ಲವೆ?”

“ನಿಜ, ಆಗುತ್ತಾನೆ. ಅಂಥ ವ್ಯಕ್ತಿ ಖಂಡಿತವಾಗಿಯೂ ಹೆಚ್ಚು ಸಂವೇದನಾಶೀಲನೂ ವಿಚಾರಪರನೂ ಆಗುತ್ತಾನೆ. ಜನರು ಹಾಗೇಕೆ ವರ್ತಿಸುತ್ತಾರೆಂದು ವಿಸ್ಮಿತನಾಗುತ್ತಾನೆ. ಅನ್ಯರ ನೋವಿಗೆ ಸಂವೇದನಾಶೀಲನಾಗುವ ಗುಣ ಹೆಚ್ಚಾಗುತ್ತದೆ.”

“ತಮಗೆ ಹಾಗೆ ಆಯಿತೆ?”

“ನನ್ನ ವಿಷಯದಲ್ಲಿ ಹೀಗಾಗುವುದು ಅಗತ್ಯವಿರಲಿಲ್ಲ. ಏಕೆಂದರೆ ನಾನು ಸನ್ಯಾಸ ತೆಗೆದುಕೊಳ್ಳುವುದಕ್ಕೆ ಮುಂಚೆಯೂ ನನ್ನಲ್ಲಿ ಕರುಣೆ ಇತ್ತು. ಆತ್ಮ ಜ್ಞಾನವು ನನ್ನ ವರ್ತನೆಯಲ್ಲಿ ಯಾವ ವ್ಯತ್ಯಾಸವನ್ನೂ ತಂದಿಲ್ಲ.”

“ಭಯದ ಬಗ್ಗೆ ಏನು ಹೇಳುತ್ತೀರಿ?”

“ನಿಜ. ಅಸುರಕ್ಷತೆಯ ಭಯ ಹೋಗುತ್ತದೆ.”

“ಅದು ಹೇಗೆ? ಹಾಗೆ ನೋಡಿದರೆ ಸನ್ಯಾಸ ತೆಗೆದುಕೊಳ್ಳುವ ಮೂಲಕ ನಿಮ್ಮನ್ನು ನೀವು ಅಭದ್ರ ಮಾಡಿಕೊಳ್ಳುತ್ತಿಲ್ಲವೆ?”

“ಸನ್ಯಾಸಿಯಾದವನಿಗೆ ಆಹಾರ ಹೇಗೋ ಬಂದುಬಿಡುತ್ತದೆ. ಅದು ಬರದೆ ಹೋದರೆ ನಾನು ಭಿಕ್ಷೆ ಎತ್ತಬಹುದು ಅಥವಾ ನನ್ನ ಹೊಟ್ಟೆ ತುಂಬಿಸಿಕೊಳ್ಳಲು ಕೆಲಸ ಕೂಡ ಮಾಡಬಹುದು. ನಾನು ಹೇಳುತ್ತಾ ಇರುವ ಅಭದ್ರತೆ ಭವಿಷ್ಯದ ಬಗೆಗಿನ ಅಭದ್ರತೆ”

“ಭಿಕ್ಷೆ ಬೇಡುವುದರಲ್ಲಿರುವ ಸಂಕೋಚದ ಬಗ್ಗೆ ಏನು ಹೇಳುತ್ತೀರಿ?”

“ಸಂಕೋಚ ಏಕಾಗಬೇಕು? ಭಿಕ್ಷೆ ಸ್ವೀಕರಿಸುವುದು ಹೆಮ್ಮೆಯ ವಿಷಯ. ಅದು ಅದ್ಭುತ. ಅದು ನಮ್ಮ ಸನ್ಯಾಸ ಸಂಪ್ರದಾಯದ ಒಂದು ಭಾಗ. ಭಿಕ್ಷೆ ಬೇಡಲು ಸಂಕೋಚಪಡುವಂಥವನಿದ್ದರೆ ಅವನಿನ್ನೂ ಸನ್ಯಾಸಕ್ಕೆ ಅರ್ಹನಲ್ಲ.”

“ಸನ್ಯಾಸ ನೀಡುವ ಮುಂಚೆ ಗುರುವಾದವರು ಇಂಥದಕ್ಕೆಲ್ಲ ವ್ಯಕ್ತಿ ಸಿದ್ಧನಿದ್ದಾನೆಯೋ ಇಲ್ಲವೋ ಎಂಬೆಲ್ಲ ಸಂಗತಿಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆಯೆ?”

“ಗುರುವಾದವರು ಕೂಡ ಇವನ್ನೆಲ್ಲ ಕಂಡುಕೊಳ್ಳಲಾಗುವುದಿಲ್ಲ. ನಿಮಗೆ ಹಸಿವಾಗಿದೆಯೆ ಇಲ್ಲವೆ ಎಂದು ನೀವು ಮಾತ್ರ ಕಂಡುಕೊಳ್ಳಬಲ್ಲಿರಿ. ಅದೇ ರೀತಿ ಸನ್ಯಾಸ ಸ್ವೀಕರಿಸುವಷ್ಟು ಪಕ್ವತೆ ನಿಮಗೆ ಬಂದಿದೆಯೆ ಇಲ್ಲವೆ ಎಂಬುದನ್ನು ನೀವು ಕಂಡುಕೊಳ್ಳಬಲ್ಲಿರಿ. ಕೆಲವರಿಗೆ ಸನ್ಯಾಸ ತೆಗೆದುಕೊಳ್ಳುವ ಮುನ್ನವೆ ಪಕ್ವತೆ ಬಂದಿರುತ್ತದೆ. ಇನ್ನು ಕೆಲವರು ಸನ್ಯಾಸ ತೆಗೆದುಕೊಂಡ ನಂತರದಲ್ಲಿ ಪಕ್ವ ಹೊಂದುತ್ತಾರೆ. ಅವರು ಪಕ್ವರಾಗದಿದ್ದಲ್ಲಿ ಸನ್ಯಾಸ ಬಿಟ್ಟುಹೋಗುತ್ತಾರೆ ಅಥವಾ ಒದ್ದಾಡುತ್ತಾರೆ.”

"ತಾವು ಸನ್ಯಾಸ ತೆಗೆದುಕೊಳ್ಳಲು ಬಂದಾಗ ನಾನು ಮುಂದೆ ಕಲಿತುಕೊಳ್ಳುವಂಥದು ಇದೆ ಎಂದು ತಮಗೆ ಗೊತ್ತಿತ್ತೆ?"

"ಹೌದು, ಎಲ್ಲ ವಿವರಗಳೂ ನನಗೆ ಗೊತ್ತಿಲ್ಲದೆ ಇದ್ದರೂ ಸಾಮಾನ್ಯವಾಗಿ ವೇದಾಂತವು ಅಸ್ತಿತ್ವದ ಅರ್ಥವನ್ನು ತಿಳಿಸಿಕೊಡುತ್ತದೆಂದು ನನಗೆ ಗೊತ್ತಿತ್ತು. ನೋಡಿ ನಾನು ಬಂದಾಗ ಮೊದಲಿಗೆ ಶಿವಾನಂದ ಆಶ್ರಮವನ್ನು ಪ್ರವೇಶಿಸಿದೆ. ನನ್ನ ಇಂಗ್ಲಿಷ್ ಚೆನ್ನಾಗಿದ್ದುದರಿಂದ ನನ್ನನ್ನು ಗ್ರಂಥ ಸಂಪಾದನೆ, ಪ್ರಕಟಣೆಯ ಕೆಲಸಕ್ಕೆ ಹಾಕಿದರು. ನಾನು ವೇದಾಂತವನ್ನು ಕಲಿಯಲು ಬಂದಿದ್ದೇನೆ ಗ್ರಂಥ ಸಂಪಾದನೆಗಲ್ಲ ಎಂದು ಹೇಳಿದಾಗ ನನಗೆ ಇನ್ನೂ ಉನ್ನತ ಬಡ್ತಿಗಳನ್ನು ನೀಡಿ ಅಲ್ಲಿಯೇ ಇಟ್ಟುಕೊಳ್ಳಲು ನೋಡಿದರು. ಆದರೆ ನಾನು ಈ ಪುಡಿಗಾಸಿಗಾಗಿ ಬಂದವನಲ್ಲ. ಹಾಗಾಗಿ ನಾನು ಆ ಆಶ್ರಮ ಬಿಟ್ಟೆ."

"ಸನ್ಯಾಸ ತೆಗೆದುಕೊಳ್ಳುವ ಮುನ್ನ ನೀವು ಅಷ್ಟೊಂದು ದೀರ್ಘ ಕಾಲ ಕಾದಿರಿ. ನನಗೆ ತಿಳಿದಿರುವಂತೆ ನೀವು ಹತ್ತು ವರ್ಷಕ್ಕಿಂತಲೂ ಹೆಚ್ಚು ಕಾಲ ಬ್ರಹ್ಮಚಾರಿಯಾಗಿದ್ದಿರಿ. ಈ ಮುಂಚೆ ನೀವು ಯಾರೋ ಒಬ್ಬ ಗೊತ್ತಾದ ವ್ಯಕ್ತಿಯ ಕಡೆಯಿಂದ ಸನ್ಯಾಸ ತೆಗೆದುಕೊಳ್ಳಬೇಕೆಂದಿದ್ದಿರಿ ಎಂದು ಹೇಳಿದ್ದಿರಿ. ಯಾರಿಂದ ಸನ್ಯಾಸ ತೆಗೆದುಕೊಳ್ಳುತ್ತೇವೆ ಎನ್ನುವುದು ಅಷ್ಟೊಂದು ಮುಖ್ಯವೆ?"

"ಇದೊಂದು ಭಾವನಾತ್ಮಕವಾದ ವಿಷಯ. ಅದರ ಬಗ್ಗೆ ಯಾವುದೇ ನಿಯಮಗಳಿಲ್ಲ."

ಸ್ವಾಮೀಜಿ, ನಾವು ಇಲ್ಲಿ ನೋಡುವ ಅನೇಕ ಸಾಧುಗಳು ವಿದ್ಯಾವಂತರಲ್ಲ, ಅಕ್ಷರಸ್ಥರಲ್ಲದವರೂ ಇದ್ದಾರೆ. ಅವರು ಸನ್ಯಾಸವನ್ನು ತೆಗೆದುಕೊಳ್ಳುವುದು ಯಾರೋ ಒಬ್ಬ ದೇವನನ್ನು ಕಾಣಬೇಕೆಂಬ ಭಾವನಾತ್ಮಕ ಅಗತ್ಯಕ್ಕಾಗಿ ಎಂದು ಕೇಳಿದ್ದೇನೆ. ಆ ಬಗ್ಗೆ ತಾವೇನು ಹೇಳುತ್ತೀರಿ?"

"ಭಾವನಾತ್ಮಕತೆ ನಿಮ್ಮನ್ನು ಕಷ್ಟಕ್ಕೆ ಸಿಲುಕಿಸಬಹುದು. ಭಾವನಾತ್ಮಕತೆಯ ಕಾರಣದಿಂದಾಗಿ ಸನ್ಯಾಸ ತೆಗೆದುಕೊಂಡವರು ಸ್ವಲ್ಪ ಸಮಯದ ನಂತರ ಸನ್ಯಾಸವನ್ನು ತ್ಯಜಿಸುತ್ತಾರೆ. ಆದಾಗ್ಯೂ ತ್ಯಾಗ, ಸರಳತೆ, ಧ್ಯಾನ ಭಕ್ತಿ ಹಾಗೂ ಪ್ರಾರ್ಥನೆಗಳಿಂದ ಕೂಡಿದ ಜೀವನ ಸಾಗಿಸುವಂಥ ಒಳ್ಳೆಯ ಜನರೂ ಇದ್ದಾರೆ. ಅವರು ತಮ್ಮಲ್ಲಿ ತಾವೇ ಸುಖಿಗಳು. ಅವರು ಯಾರೊಂದಿಗೂ ಸ್ಪರ್ಧಿಸುವುದಿಲ್ಲ. ಆದರೆ ಆತ್ಮಜ್ಞಾನಕ್ಕೆ ಇದಿಷ್ಟೇ ಸಾಕಾಗುವುದಿಲ್ಲ. ಆತ್ಮ ಜ್ಞಾನ ಪಡೆಯುವುದಕ್ಕೆ ಇದು ಪೂರ್ವಭಾವಿ ಸಿದ್ಧತೆಯಾಗಬಹುದು. ಅವರು ಇದನ್ನೇ ಮಾಡಿಕೊಂಡು ಇಡೀ ಜೀವನ ಕಳೆದುಬಿಡಬಹುದು. ಅಷ್ಟೇ ಅಲ್ಲ ಕೆಲವು ಜನ್ಮಗಳನ್ನೂ. ಆದರೆ ಅಂತಿಮವಾಗಿ ಇರುವುದು ಒಂದೇ ಮಾರ್ಗ."

"ಇರುವುದು ಒಂದೇ ಜ್ಞಾನ; ಆ ಜ್ಞಾನಕ್ಕೆ ಇರುವುದು ಒಂದೇ ದಾರಿ ಎಂದು ಹೇಳುತ್ತಿದ್ದೀರಾ?"

"ಖಚಿತವಾಗಿಯೂ ಹೌದು. ಪೂರ್ಣತೆ ಭಾವುಕತೆಯಿಂದ ಬರುವುದಿಲ್ಲ. ಅದು ಭಾವುಕತೆಯಾದರೆ ಪೂರ್ಣತೆಯ ಪ್ರಜ್ಞೆ ಹೋಗಿಬಿಡಬಹುದು. ಭಾವನೆಗಳು ಕಾಲಾಂತರದಲ್ಲಿ ಮಸುಳುತ್ತವೆ. ಒಂದು ವೇಳೆ ಅದು ತಥ್ಯವಾದರೆ ಆ ತಥ್ಯವನ್ನು ಕಣ್ಣಿಂದ ನೋಡಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದನ್ನು ಸೃಜಿಸುವುದೂ ಸಾಧ್ಯವಿಲ್ಲ. ಪೂರ್ಣತೆ ಮತ್ತು ಸೃಷ್ಟಿ ಎರಡೂ ಪರಸ್ಪರ ವಿರುದ್ಧವಾದವು."

"ವೇದಾಂತ ಒಂದು ಸಂಕೀರ್ಣವಾದ ದರ್ಶನ. ಅಕ್ಷರಸ್ಥರಲ್ಲದವರ ಬಗ್ಗೆ ನೀವು ಏನು ಹೇಳುತ್ತೀರಿ? ಆತ್ಮಜ್ಞಾನಹೊಂದಬೇಕೆಂದರೆ ಅಕ್ಷರಸ್ಥರಾಗಿರಬೇಕೆಂಬುದು ಒಂದು ಪೂರ್ವ ಷರತ್ತೆ? ರಮಣಮಹರ್ಷಿಗಳ ಬಗ್ಗೆ ಏನು ಹೇಳುತ್ತೀರಿ? ಅವರು ಅಕ್ಷರಸ್ಥರಲ್ಲ ಎಂದು ಕೇಳಿದ್ದೇವೆ.* ಅವರಿಗೆ ಆತ್ಮಜ್ಞಾನವಿರಲಿಲ್ಲವೆಂದು ನೀವು ಹೇಳುತ್ತೀರಾ?"

"ಇಲ್ಲ, ಇಲ್ಲ. ಅವರು ವೇದಾಂತದ ಶಿಕ್ಷಕರನ್ನು ಭೇಟಿಮಾಡಿದ್ದರು."

"ಒಂದು ಪ್ರೇರಣೆ, ಒಂದು ಅಂತಃಪ್ರಜ್ಞೆ, ಪೂರ್ಣತೆಯ ಅರಿವಿನ ಕಡೆಗೆ ಕೊಂಡೊಯ್ಯಲು ಸಾಧ್ಯವಿಲ್ಲವೆ? ಶಬ್ದಗಳು ಅಗತ್ಯವೆ?"

"ಪ್ರೇರಣೆ ಮತ್ತು ಅಂತಃಪ್ರಜ್ಞೆಗಳಿಂದ ನೀವು ವೈದ್ಯರಾಗಿಬಿಡಲು ಸಾಧ್ಯವೆ? ಪ್ರೇರಣೆ ಅಥವಾ ಸ್ಫೂರ್ತಿ, ಅಂತಃಪ್ರಜ್ಞೆ, ಭಕ್ತಿ ಇವೆಲ್ಲವೂ ವೇದಾಂತದ ಕಲಿಕೆಗೆ ನಿಮ್ಮನ್ನು ಸಿದ್ಧಪಡಿಸಬಹುದು. ಅಂತಿಮವಾಗಿ ಅದು ಶಬ್ದ ಪ್ರಮಾಣ. ಅಂತಃ ಪ್ರಜ್ಞೆಯಿಂದ ತಪ್ಪುಗಳನ್ನು ನಿವಾರಿಸಲಾಗುವುದಿಲ್ಲ."

"ನಂಬಿಕೆ ಮತ್ತು ಅಪನಂಬಿಕೆಗಳು ಇರುವುದು, ನಿಚ್ಚಳವಲ್ಲದ್ದರ ಅಥವಾ ಅವ್ಯಕ್ತದ ಬಗ್ಗೆ ಎಂದು ವೇದಾಂತಕ್ಕೆ ತಿಳಿದಿದೆ. ವೇದಾಂತವು ವಿಜ್ಞಾನದಂತೆಯೇ ನಿಚ್ಚಳವಾದದ್ದರ, ಕಣ್ಣಿಗೆ ಕಾಣುತ್ತಿರುವುದರ(ಪ್ರತ್ಯಕ್ಷ) ಬಗ್ಗೆ ವಿಚಾರ ಮಾಡುತ್ತದೆ. ವಿಶ್ವವು ಪ್ರತ್ಯಕ್ಷ ಅಥವಾ ನಿಚ್ಚಳವೆನ್ನುವುದಾದರೆ ವಿಶ್ವವನ್ನು ನೋಡುತ್ತಿರುವನೂ ನಿಚ್ಚಳ ಅಥವಾ ಸುವ್ಯಕ್ತನೇ. ವಿಶ್ವದ ಅನುಭವವು ಪ್ರತ್ಯಕ್ಷ, ನಿಚ್ಚಳ ಅಥವಾ ಸುವ್ಯಕ್ತವೆನ್ನುವುದಾದರೆ ಅದರ ಅನುಭವವನ್ನು ಪಡೆಯುವವನೂ ಸುವ್ಯಕ್ತನೇ, ನಿಚ್ಚಳನೇ. ವೇದಾಂತವು ಅತ್ಯಂತ ನಿಚ್ಚಳ ಅಥವಾ ಸುವ್ಯಕ್ತನಾದ ಅನುಭವಿಸುವವನ ಬಗ್ಗೆ ಮಾತಾಡುತ್ತದೆ! ಅತ್ಯಂತ ಸುವ್ಯಕ್ತ ಅಥವಾ ಅತ್ಯಂತ ನಿಚ್ಚಳವಾಗಿರುವ ತನ್ನನ್ನು ಕುರಿತಂತೆ ಪೂರ್ವಭಾವಿಯಾಗಿ ಅಂಗೀಕರಿಸದ ಹೊರತು ನಿಚ್ಚಳವಲ್ಲದ್ದರ ಅಥವಾ ಅವ್ಯಕ್ತದ ಬಗೆಗೆ ಅನುಪಸ್ಥಿತಿಯನ್ನು ಉಲ್ಲೇಖಿಸುವ ಪ್ರಶ್ನೆ ಬರುವುದಿಲ್ಲ. 'ನಾನು' ಇಲ್ಲದಿರುವಾಗ ನನ್ನ ಬಗ್ಗೆ ಮಾತನಾಡಲು ಸಾಧ್ಯವಿಲ್ಲ. ಆತ್ಮದ ಇಲ್ಲದಿರುವಿಕೆಯ ಬಗೆಗೆ ಭಾವಿಸಿಕೊಂಡುಬಿಡುವುದು ಸಾಧ್ಯವಿಲ್ಲ. ವ್ಯಕ್ತತೆ ಮತ್ತು ಅವ್ಯಕ್ತತೆಯ ಇಡೀ ಪರಿಭಾಷೆಯ ಬೇರು ವೀಕ್ಷಕನ, ಅರ್ಥಾತ್ ಸಾಕ್ಷಿಯ ಸಾಕ್ಷ್ಯದಲ್ಲಿ ಇದೆ. ಸಾಕ್ಷಿಯು ವೇದಾಂತದ ವಿಷಯ."

"ಕರ್ಮ ಸಿದ್ಧಾಂತದ ಬಗ್ಗೆ ಏನು ಹೇಳುತ್ತೀರಿ? ವೇದಾಂತಕ್ಕೆ ಇದು ಆವಶ್ಯಕವೆ?"

"ಹೌದು. ನೀವು ನಿದ್ರೆಮಾಡುತ್ತಿರುವಾಗ ಆಲೋಚನೆಗಳಿಂದ ಮುಕ್ತರಾಗಿರುತ್ತೀರಿ. ಆದರೆ ಎಚ್ಚರಗೊಂಡಾಗ ನೀವು ಅಲ್ಲಿ ಇರುತ್ತೀರಿ. ನಿಮ್ಮ ವೈಯಕ್ತಿಕತೆ ಮತ್ತೆ ಪ್ರಾರಂಭವಾಗುತ್ತದೆ. ಸಾವಿನ ಬಗೆಗೂ ಅದೇ ಮಾತನ್ನು ಹೇಳಬಹುದು. ಸಾವಿನ ನಂತರ ವ್ಯಕ್ತಿತ್ವದ ಪುನರಾರಂಭದ ಎಲ್ಲ ಸಾಧ್ಯತೆ ಇದೆ. ಆಗ ಸಾವಿಗೆ ಮುನ್ನ ನೀವು ಬಿಟ್ಟುಹೋಗಿರುವ ನಿಮ್ಮ ಕರ್ಮದೊಂದಿಗೆ ವ್ಯವಹರಿಸಬೇಕಾಗುತ್ತದೆ. ಹೌದು, ಈ ವೈಯಕ್ತಿಕತೆಯು ಆತ್ಮದ ಅಜ್ಞಾನ ಪ್ರಪಂಚದಲ್ಲಿದೆ. ಕರ್ಮಸಿದ್ಧಾಂತ ಕಾರ್ಯ ನಿರ್ವಹಿಸುವುದೇ ಈ ಅತ್ಮದ ಅಜ್ಞಾನ ಪ್ರಪಂಚದಲ್ಲಿ. ವಾಸ್ತವ ಸಂಗತಿಯೆಂದರೆ ಸಾವಿನ ಕಲ್ಪನೆಯೇ ಆತ್ಮದ ಅಜ್ಞಾನ."

* * *

ಸ್ವಾಮೀಜಿಯವರು ಬಾಲ್ಯದಿಂದಲೇ ಸನ್ಯಾಸ ಜೀವನಕ್ಕೆ ಸಿದ್ಧರಾಗಿದ್ದರು ಎಂಬುದು ಸ್ಪಷ್ಟವೇ ಇದೆ. ಅವರು ಪ್ರಕೃತಿಯನ್ನು ಪ್ರೀತಿಸುತ್ತಿದ್ದರು ಮತ್ತು ಏಕಾಂತ ಜೀವನಕ್ಕಾಶಿಸಿದ್ದರು. ಅವರಿಗೆ ಜನರ ಅಗತ್ಯವಿರದಿದ್ದರೂ ಅವರೊಂದಿಗೆ ತೊಡಗಿಕೊಳ್ಳದೆಯೆ ಅವರಿಗಾಗಿ ಕಾಳಜಿವಹಿಸುತ್ತಿದ್ದರು. ತಮ್ಮ ನೌಕರರ ಕಲ್ಯಾಣದ ವಿಷಯದಲ್ಲಿ ಅವರ ಆಸಕ್ತಿ ಹೆಚ್ಚು ನಿಷ್ಕೃಷ್ಟ ಮತ್ತು ಸ್ಪಷ್ಟವಾಗಿತ್ತು. ಶಬ್ದಗಳಿಗಿಂತ ಹೆಚ್ಚಾಗಿ ಅದು ಕಾರ್ಯದಲ್ಲಿ ಪ್ರಕಟವಾಗುತ್ತಿತ್ತು.

ಇತರರೊಡನೆ ಬೆರೆಯದ ಬಾಹ್ಯದ ಹಿಂದೆ ತನ್ನ ಸುತ್ತ-ಮುತ್ತ ಏನಾಗುತ್ತಿದೆ ಎಂಬುದರ ಬಗ್ಗೆ ಗಾಢ ಪರಿಜ್ಞಾನವಿದ್ದ ಮನಸ್ಸೊಂದು ಇತ್ತು. ಬದ್ಧತೆ ಮತ್ತು ಎಚ್ಚರಗಳಿಂದ ಸಂದರ್ಭಗಳಿಗೆ ಅವರು ಪ್ರತಿಕ್ರಿಯೆ ತೋರುತ್ತಿದರು. ತಮ್ಮ ಅತಿಥಿಗಳು ಜೊತೆಯಲ್ಲಿದ್ದಾಗ ಅವರನ್ನು ನೋಡಿಕೊಳ್ಳುವ ವಿಷಯಕ್ಕೆ ಅವರು ಸಂಪೂರ್ಣವಾಗಿ ಬದ್ಧರಾಗಿರುತ್ತಿದ್ದರು. ಪ್ರತಿದಿನ ಬೆಳಗಿನ ಹೊತ್ತು ಆಹಾರ ಸಿದ್ಧಪಡಿಸಲು ತಮ್ಮ ನೌಕರರೊಂದಿಗೆ ಕುಳಿತುಬಿಡುತ್ತಿದ್ದರು. ತಮಗೆ ಪ್ರಿಯವಾದ ಅನೇಕ ತಿನಿಸುಗಳನ್ನು ಸ್ವತಃ ತಾವು ತಿನ್ನದಿದ್ದರೂ ನಮಗಾಗಿ ಅವರು ಸಿದ್ಧಪಡಿಸುತ್ತಿದ್ದರು. ಭೂಮಿಯ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಬ್ಬ ಸ್ವಾಮಿಯ ಕುತಂತ್ರಗಳ ವಿಚಾರದಲ್ಲಿ ಅವರು ವ್ಯವಹರಿಸಿದ ರೀತಿ ಅವರು ಎಷ್ಟು ಸತರ್ಕರಾಗಿದ್ದರು ಎಂಬುದರ ದ್ಯೋತಕ,


ಜ್ಞಾನಕ್ಕಿರುವುದು ಒಂದೇ ಮಾರ್ಗ ಎಂಬ ಅವರ ತಿಳಿವಳಿಕೆಯು ಕಿಂಚಿತ್ ಅಹಂಕಾರದಿಂದ ಕೂಡಿತ್ತು ಎಂದು ನನಗನ್ನಿಸಿತು. ಭಕ್ತಿ ಜೀವನವನ್ನು ನಡೆಸುತಿದ್ದ ಸರಳ ಸ್ವಾಮೀಜಿಗಳ ಬಗೆಗೆ ಅಪಾರವಾದ ಸಹಾನುಭೂತಿ ಹೊಂದಿದ್ದರು,

ಸ್ವಾಮೀಜಿಯವರೊಂದಿಗೆ ಕೆಲವು ದಿನಗಳನ್ನು ಕಳೆದ ಬಗ್ಗೆ ನನಗೆ ಸಂತೋಷವಾಗಿತ್ತು. ಅಲ್ಲದೆ ತಮ್ಮ ದಿನನಿತ್ಯದ ಜೀವನದ ವಿಚಾರದಲ್ಲಿ ಅನೇಕ ಒಳನೋಟಗಳನ್ನು ನೀಡಿದ್ದಕ್ಕಾಗಿ ನಾನು ಅವರಿಗೆ ಕೃತಜ್ಞ

□□



ರಾಮದೇವರ ಜೊತೆ ರವಿಯವರು



ಸಂದರ್ಶನದಲ್ಲಿ ರವಿಯವರು ಸಾಧುಗಳೊಂದಿಗೆ



ತನ್ನ ದತ್ತು ಪುತ್ರಿಯರ ಜೊತೆ ಮಹಿಳಾ ಸಾಧು



ಸ್ವಾಮಿ ದಯಾನಂದರು



ರವಿ, ಸಾಧುಗಳು ಮತ್ತು ಗಿಲ್ಲೇಸ್



ಮೂರು ಜನ ಸಾಧುಗಳು




ಆನಂದವಾಗಿರುವ ಸಾಧು



ಎಲ್ಲೆನ್ ಮತ್ತು ರವಿಯವರು ಸಾಧುಗಳೊಂದಿಗೆ




ಸಂದರ್ಶನದಲ್ಲಿ ರವಿಯವರು ಸಾಧುಗಳೊಂದಿಗೆ



ಅನಾಮಿಕ ಸಾಧು



ಮಠವೊಂದರಲ್ಲಿ ಅನ್ನದಾನ



ಗಡ್ಡದಾರಿ ಸಾಧು



'ಚಿತ್ರಕಲಾವಿದ ಸ್ವಾಮಿ' - ಸ್ವಾಮಿ ಮುಕ್ತಾನಂದ



ರಾಮದೇವ್ ಪತಿಯವರು ತಮ್ಮ ಆಶ್ರಮದಲ್ಲಿ ಅಡಿಗೆಗೆ ಸಹಾಯ
ಮಾಡುತ್ತಿರುವುದು



ಕುಂಭಮೇಳದಲ್ಲಿ ಲೇಖಕರು



ಶಿಮ್ಲಾ ಬಾಬಾ (ಎಡ) ಮತ್ತು ಫಲಾಹರಿ ಬಾಬಾ(ಬಲ) ಇವರು ಬ್ರಹ್ಮರಾಕ್ಷಸರನ್ನು ವಶಮಾಡಿಕೊಳ್ಳುವ ಮಂತ್ರವನ್ನು ಜಪಿಸುವುದಾಗಿ ಹೇಳಿದವರು.

ಭಾಗ–3
ಮರುಚಿಂತನೆಗಳು

ಭಾರತೀಯ ಆಧ್ಯಾತ್ಮ ಮತ್ತು ಮಾನಸಿಕ ಆರೋಗ್ಯ

ಸತ್ಯಕ್ಕೆ ಹೊರತಾದ ಬೇರೆ ದೇವರು ಇಲ್ಲ ಎಂದು ನನ್ನ ಒಂದೇ ವಿಧವಾದ ಅನುಭವವು ನನಗೆ ಮನವರಿಕೆ ಮಾಡಿದೆ,

– ಗಾಂಧಿ, 1925, ಭಾರತ, 2006ರಲ್ಲಿ ಉದ್ಧೃತ

ಈ ಪುಸ್ತಕದ ಮೊದಲಿನ ಅಧ್ಯಾಯಗಳಲ್ಲಿ ಯೋಗ ಕ್ಷೇತ್ರದಲ್ಲಿ ನಾನು ಕೈಗೊಂಡ ಯಾತ್ರೆಯನ್ನು ಹಾಗೂ ನಾನು ಭೇಟಿಮಾಡಿ ಸಂದರ್ಶಿಸಿದ ಸಾಧುಗಳ ಆಧ್ಯಾತ್ಮ ಯಾತ್ರೆಯನ್ನು ವಿಸ್ತಾರವಾಗಿ ತಿಳಿಸಿದ್ದೇನೆ. ಈ ವಿವರಗಳು ನನ್ನ ವೃತ್ತಿಯಾದ ಮನೋವೈದ್ಯಕೀಯದಲ್ಲಿನ ನನ್ನ ದೀರ್ಘಕಾಲೀನ ಆಸಕ್ತಿಯ ಕಡೆಗೆ ಕೊಂಡೊಯ್ಯುತ್ತವೆ. ಅಷ್ಟೇ ಅಲ್ಲ, ನಾನೇನೂ ಸಂಪ್ರದಾಯನಿಷ್ಠ ಭಕ್ತನಲ್ಲದಿದ್ದರೂ ನನ್ನನ್ನು ಯಾವತ್ತೂ ಗಾಢವಾಗಿ ಆಕರ್ಷಿಸುತ್ತಿರುವ ಭಾರತೀಯ ಆಧ್ಯಾತ್ಮದಲ್ಲಿನ ನನ್ನ ವ್ಯಾಪಕ ಆಸಕ್ತಿಯತ್ತಲೂ ಸೆಳೆದೊಯ್ಯುತ್ತವೆ. ನಾನು ಎಲ್ಲವನ್ನೂ ಶೋಧಿಸಬೇಕೆಂಬ ಉತ್ಸಾಹದಿಂದ ಪ್ರೇರಿತನಾದವನು ಮತ್ತು ಸತ್ಯವನ್ನು ತಿಳಿಯುವ ಬಯಕೆ ಉಳ್ಳವನು.

ವಿಜ್ಞಾನಿ, ಮನೋವೈದ್ಯ ಮತ್ತು ಆಧ್ಯಾತ್ಮ ಸಾಧಕ ಈ ಮೂರೂ ಜನ ಸತ್ಯಕ್ಕೆ ಬೆಲೆ ಕೊಡುವಂಥವರು. ಸತ್ಯಕ್ಕೆ ಹಲವು ಮುಖಗಳಿವೆ. ಪ್ರತಿಯೊಬ್ಬ ಅನ್ವೇಷಕ ಅದಕ್ಕೆ ಆರೋಪಿಸುವ ಅರ್ಥ ಬೇರೆ ಬೇರೆ ಇರಲು ಸಾಧ್ಯ. ಮನೋವೈದ್ಯ ಅದರಲ್ಲೂ ಸಂಶೋಧನೆಯಲ್ಲಿ ನಿರತನಾಗಿರುವ ಮನೋವೈದ್ಯ ವೈಜ್ಞಾನಿಕ ದೃಷ್ಟಿಕೋನದಿಂದ ಜನರನ್ನು ಅರ್ಥಮಾಡಿಕೊಳ್ಳಲಿಚ್ಛಿಸುತ್ತಾನೆ. ಅವನಿಗೆ ಸಾಮಾನ್ಯ ನಿಯಮಗಳಲ್ಲಿ ಹೇಗೋ ಹಾಗೆಯೇ ವ್ಯಕ್ತಿಗತ ಭಿನ್ನತೆಗಳಲ್ಲಿ ಆಸಕ್ತಿ. ಮನುಷ್ಯನ ಮೆದುಳು ಅವನ ವರ್ತನೆಯನ್ನು ಹೇಗೆ ಪ್ರಭಾವಿಸುತ್ತದೆ; ಜನರು ಮಾನವ ಜಾತಿಯ ಸದಸ್ಯರ ರೀತಿಯಲ್ಲಿ ಏಕೆ ಯೋಚಿಸುತ್ತಾರೆ ಮತ್ತು ಭಾವಿಸುತ್ತಾರೆ ಎಂದು ತಿಳಿಯ ಬಯಸುತ್ತಾನೆ. ಒಬ್ಬ ವೈದ್ಯನಾಗಿ ವ್ಯಕ್ತಿಗಳ ಯಾತನೆಯನ್ನು ತಾನು ಹೇಗೆ ಕಡಿಮೆ ಮಾಡಬಹುದೆಂದು ತಿಳಿಯಲಿಚ್ಛಿಸುತ್ತಾನೆ. ಮಾನವ ಜನಾಂಗದ ಒಬ್ಬ ಸದಸ್ಯನಾಗಿ ಆಧ್ಯಾತ್ಮ ಯಾತ್ರೆಯ ಒಂದು ಅಂಶವಾದ ಅರ್ಥದ ಹುಡುಕಾಟದಲ್ಲಿ ಅವನು ಭಾಗಿಯಾಗುತ್ತಾನೆ.

ಮನೋವೈದ್ಯನಿಗೂ ಆಧ್ಯಾತ್ಮ ಶೋಧಕನಿಗೂ ಇರುವ ಒಂದು ಸಮಾನತೆಯ ಕ್ಷೇತ್ರವೆಂದರೆ ವ್ಯಕ್ತಿಯಲ್ಲಿ ಅವರಿಬ್ಬರಿಗೂ ಇರುವ ಆಸಕ್ತಿ; ಅದು ರೋಗಿಯ

ರೂಪದಲ್ಲಾಗಬಹುದು, ಗ್ರಾಹಕ ಇಲ್ಲವೆ ಭಕ್ತನ ರೂಪದಲ್ಲಾಗಬಹುದು. ಈ ವಿಷಯದಲ್ಲಿ ಅವರುಗಳು, ವ್ಯಕ್ತಿಯ ಯೋಗಕ್ಷೇಮ ಗೌಣವಾಗಿ ಸಾಮಾಜಿಕ ವ್ಯವಸ್ಥೆಗಳ ಮೇಲೆ ತಮ್ಮ ಗಮನ ಕೇಂದ್ರೀಕರಿಸುವ ರಾಜನೀತಿಜ್ಞರು ಅಥವಾ ಸಮಾಜಶಾಸ್ತ್ರಜ್ಞರಿಗಿಂತ ಭಿನ್ನರೆನಿಸುತ್ತಾರೆ.

ಇಬ್ಬರೂ ಸಮಾನವಾಗಿ ಭಾಗಿಗಳಾಗುವ ಇನ್ನೊಂದು ಕಾಳಜಿಯ ಸಂಗತಿಯೆಂದರೆ ಯಾತನೆಯ ಪರಿಕಲ್ಪನೆ. ಜನರು ಜಗತ್ತಿನಲ್ಲಿ ಯಾವ ರೀತಿ ಬದುಕು ಸಾಗಿಸಬೇಕೆಂಬ ವಿಷಯದಲ್ಲಿ ಮತ್ತು ಅವರ ಯಾತನೆಯನ್ನು ಹೇಗೆ ಪರಿಹರಿಸ ಬಹುದೆಂಬ ವಿಷಯದಲ್ಲಿ ಅವರಿಬ್ಬರಿಗೂ ಆಸಕ್ತಿ. ಮನೋವೈದ್ಯಕೀಯವು ಎಲ್ಲ ತರಹದ ಮಾನಸಿಕ ವ್ಯಥೆಗಳಿಗೆ ಚಿಕಿತ್ಸೆ ನೀಡುವ ಬಗ್ಗೆ ಕಾಳಜಿ ಹೊಂದಿದೆ. ಪ್ರಸ್ತುತ ಸಂದರ್ಭದಲ್ಲಿ ಯಾತನೆ ಅಥವಾ ನೋವಿನ ವ್ಯಕ್ತರೂಪವಾದ ಮಾನಸಿಕ ಲಕ್ಷಣಗಳ ವಿಷಯಕ್ಕೆ ನನ್ನ ಆಸಕ್ತಿ ಇದೆ. ಎಲ್ಲ ರೀತಿಯ ಮಾನಸಿಕ ರೋಗಗಳು ಅವನ್ನು ಅನುಭವಿಸುತ್ತಿರುವ ವ್ಯಕ್ತಿಗೆ ಮತ್ತು ಅನೇಕ ವೇಳೆ ಅವನ ಕುಟುಂಬಕ್ಕೆ ಹಾಗೂ ಅವನ ಸ್ನೇಹಿತರಿಗೆ ಭಾರೀ ಯಾತನೆ ಅಥವಾ ಬೇಗುದಿಯನ್ನುಂಟುಮಾಡುತ್ತವೆ. ಭಾರತದಲ್ಲಿ ಬಹಳಷ್ಟು ಜನ ಸಹಾಯ ಮತ್ತು ಸಲಹೆಗೆ ಮಾನಸಿಕ ಆರೋಗ್ಯ ತಜ್ಞರ ಬಳಿಗೆ ಹೋಗುವುದಕ್ಕಿಂತ ಹೆಚ್ಚಾಗಿ ಸಾಧು ಸಂತರನ್ನು ಆಶ್ರಯಿಸುತ್ತಾರೆಂದು ನನಗೆ ಬಹಳ ಕಾಲದಿಂದ ತಿಳಿದಿದೆ.

ಈ ಸಮಾನತೆಗಳು ದೃಷ್ಟಿಕೋಣದ ಮೂಲಭೂತ ವ್ಯತ್ಯಾಸಗಳನ್ನು ಮರೆಮಾಡಬಹುದು. ಬನ್ನಿ ಮೊದಲಿಗೆ ಯಾತನೆ ಅಥವಾ ನೋವಿನ ವಿಷಯವನ್ನು ಗಮನಿಸೋಣ.

* * *

ನಾವೇಕೆ ಯಾತನೆಯನ್ನನುಭವಿಸುತ್ತೇವೆ? ಈ ಪ್ರಶ್ನೆಯ ಸರಳವಾದ ಉತ್ತರವೆಂದರೆ ನಮಗೆ ಬೇಕಾದದ್ದು ಸಿಗದಿರುವುದು ಅಥವಾ ನಮಗೆ ಇಷ್ಟವಿಲ್ಲದಿರುವ ಪರಿಸ್ಥಿತಿಗೆ ನಾವು ಬಲವಂತವಾಗಿ ದೂಡಲ್ಪಟ್ಟಿರುತ್ತೇವೆ. ನಮ್ಮ ಬಯಕೆ ಕೈಗೂಡಿದರೆ ಇಲ್ಲವೆ ಯಾತನೆಯ ಪರಿಸ್ಥಿತಿಯಿಂದ ಬಿಡುಗಡೆ ಸಿಕ್ಕಿದ್ದೇ ಆದರೆ ಪರಿಹಾರ ದೊರೆಯಬಹುದು.

ನಮ್ಮಲ್ಲಿ ಬಹುತೇಕ ಮಂದಿ ಅನುಸರಿಸುವ ಈ ಒರಟು ಮಾದರಿಯಲ್ಲಿ ಹಲವಾರು ನ್ಯೂನತೆಗಳಿವೆ. ಒತ್ತಡಗಳಿಗೆ ತೋರುವ ಪ್ರತಿಕ್ರಿಯೆಗಳು ವಿಭಿನ್ನವಾದವು. ಒತ್ತಡದ ಹೊರತಾಗಿಯೂ ಕೆಲವರು ತಮ್ಮ ಕೆಲಸಗಳನ್ನು ನಿಭಾಯಿಸುತ್ತಿರುತ್ತಾರೆ. ಇನ್ನು ಕೆಲವರಿಗೆ ಒತ್ತಡಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಕಷ್ಟವೆನಿಸಿ ಸಿಟ್ಟು, ಹತಾಶೆ, ಆತ್ಮ ಮರುಕ, ಹಿಂಜರಿಕೆ, ಸಂದೇಹ ಮತ್ತಿತರೆ ನಕಾರಾತ್ಮಕ ಪ್ರತಿಕ್ರಿಯೆಗಳನ್ನು ತೋರುತ್ತ ಕುಸಿಯುತ್ತಾರೆ.

ಇನ್ನು ಕೆಲವರು ಒತ್ತಡವನ್ನು ಒಂದು ಸವಾಲು ಎಂದು ಪರಿಗಣಿಸುತ್ತಾರೆ. ತಮ್ಮ ಗಮನವನ್ನು ಕೇಂದ್ರೀಕರಿಸಲು ನೆರವಾಗುವುದಲ್ಲದೆ ತಮ್ಮ ಕೆಲಸಗಳನ್ನು ಇನ್ನಷ್ಟು ಶಕ್ತಿಯುತವಾಗಿ ಮುಂದುವರಿಸಲು ಅನುವಾಗುತ್ತದೆಂದು ನಂಬುತ್ತಾರೆ.

ಈ ಮಾದರಿಯಲ್ಲಿ ಇರುವ ಇನ್ನೊಂದು ಸಮಸ್ಯೆಯೆಂದರೆ ವ್ಯಕ್ತಿಗೆ ಬೇಕಾದದ್ದು ದೊರೆತಾಗ ಅನೇಕ ವೇಳೆ ಅತೃಪಿಯು ನಿರ್ಮೂಲವಾಗುವುದಿಲ್ಲ. ಒಂದು ಇಚ್ಛೆ ನೆರವೇರಿತೆಂದಾದರೆ ಇನ್ನೊಂದು ಇಚ್ಛೆ ಅದರ ಜಾಗವನ್ನು ಆಕ್ರಮಿಸುತ್ತದೆ. ಆಗ ಮೊದಲಿನ ಇಚ್ಛೆಯೇ ನಿಜಕ್ಕೂ ಸಮಸ್ಯೆಯಾಗಿತ್ತೆ ಎಂದು ವಿಸ್ಮಿತನಾಗುತ್ತಾನೆ.

ಭಾರತದಲ್ಲಿನ ಮನೋವೈದ್ಯತತ್ತ್ವ ಮತ್ತು ಪ್ರಯೋಗವು ಇತರೆ ಹಲವು ಪೂರ್ವ ದೇಶಗಳಲ್ಲಿರುವಂತೆ ಹೆಚ್ಚಿನ ಮಟ್ಟಿಗೆ ಪಶ್ಚಿಮದ ಚಿಂತನೆಗೆ ನಿಕಟವಾಗಿದೆ. ಪಶ್ಚಿಮದ ಚಿಂತನೆಯ ಒಂದು ಎಳೆ; ಮುಖ್ಯವಾಗಿ ಧಾರ್ಮಿಕ ಎಳೆ ಯಾತನೆಯನ್ನು ಇನ್ನೊಂದು ಜನ್ಮದಲ್ಲಿ ಬಹುಶಃ ಬಳುವಳಿಯಾಗಿ ಬಂದ ಉದಾತ್ತ ಕೊಡುಗೆಯೆಂದು ಪರಿಗಣಿಸುತ್ತದೆ. ಇಂದಿನ ವಿಜ್ಞಾನದ ವಲಯದಲ್ಲಿ ಇದಕ್ಕೆ ಕಿಂಚಿತ್ತೂ ಬೆಲೆ ಇಲ್ಲ. ಪಾಶ್ಚಾತ್ಯ ವೈಚಾರಿಕ ಪರಂಪರೆಯು ಯಾತನೆ ಅಥವಾ ನೋವನ್ನು ಅದುಮಿಡಬೇಕಾದ ಒಂದು ಬವಣೆಯೆಂದೇ ಪರಿಗಣಿಸುತ್ತದೆ.

ಇದಕ್ಕೆ ವಿರುದ್ಧವಾಗಿ ಪೂರ್ವದೇಶದ ಪರಂಪರೆಗಳು ಯಾತನೆಯನ್ನು ಬದುಕಿನ ಒಂದು ಅನಿವಾರ್ಯ ಪರಿಣಾಮವೆಂದು ಪರಿಗಣಿಸುತ್ತವೆ. ಧರ್ಮದ ಉದ್ದೇಶ ಯಾತನೆಯಿಂದ(ನೋವಿನಿಂದ) ದೂರವಾದ ಸುಖದ ಕಡೆಗೆ ಕೊಂಡೊಯ್ಯುವ ಮಾರ್ಗವನ್ನು ಕಲ್ಪಿಸುವುದು. ಸಾವಿರಾರು ವರ್ಷಗಳವರೆಗೆ ಭಾರತೀಯ ದರ್ಶನವು (ತತ್ತ್ವಶಾಸ್ತ್ರವು) ಜನರು ಹೇಗೆ ಬದುಕಬೇಕೆಂಬ ಬಗೆಗೆ ಮತ್ತು ತಮ್ಮ ಸಮಸ್ಯೆಗಳೊಂದಿಗೆ ಹೇಗೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬ ಬಗೆಗೆ ಸಿದ್ಧಾಂತಗಳನ್ನು ಅಭಿವೃದ್ಧಿಪಡಿಸಿದೆ. ಪಶ್ಚಿಮದ ಮತ್ತು ಪೂರ್ವದ ಪರಂಪರೆಗಳು ಪರಸ್ಪರರಿಗೆ ಏನನ್ನಾದರೂ ಕೊಡುವ ಸ್ಥಿತಿಯಲ್ಲಿವೆಯೆ ಎಂದು ಭಾರತೀಯ ಮನೋವೈದ್ಯನು ನ್ಯಾಯಬದ್ಧ ರೀತಿಯಲ್ಲಿ ಕೇಳಬಲ್ಲ. ವ್ಯಕ್ತಿಯಾಗಿ ಇಲ್ಲವೆ ಒಬ್ಬ ಚಿಕಿತ್ಸಕನಾಗಿ ಭಾರತೀಯ ದರ್ಶನದಿಂದ ಕಲಿಯಬೇಕಾದ ಪಾಠಗಳಿವೆಯೆ?

* * *

ವೇದಗಳ ಕಾಲದಿಂದಲೂ ದುಃಖದತ್ತ ನಮ್ಮನ್ನು ದೂಡುವ ಭಾವಗಳ ವ್ಯಾಪ್ತಿಯನ್ನು ಭಾರತೀಯ ಧರ್ಮಗ್ರಂಥಗಳು ಪರಿಶೋಧಿಸಿವೆ. ನೋವಿನಿಂದ ಬಿಡುಗಡೆ ಪಡೆಯಬೇಕೆನ್ನುವವರಿಗಷ್ಟೇ ಅಲ್ಲ, ಸುಖಮಯ ಜೀವನ ನಡೆಸಬೇಕೆನ್ನುವವರಿಗೂ ಅನ್ವಯವಾಗಬಹುದಾದಂಥ ಸಾರ ರೂಪವಾದ ಪಾಠಗಳನ್ನು ಈ ಧರ್ಮಗ್ರಂಥಗಳನ್ನು ಭಟ್ಟಿಯಿಳಿಸಿ ತೆಗೆಯುಲು ಪ್ರಯತ್ನಿಸಿದ್ದೇನೆ.

ಯುದ್ಧ ರಂಗದ ಮೇಲೆ ಅರ್ಜುನನಿಗೆ ಉಪದೇಶಿಸುವ ಸಂದರ್ಭದಲ್ಲಿ ಭಗವಾನ್ ಕೃಷ್ಣನು ವಿನಾಶಾತ್ಮಕವಾದ ಭಾವನೆಗಳ ಒಂದು ಸರಣಿಯನ್ನೇ ಹೀಗೆ ವಿವರಿಸಿದ್ದಾನೆ:

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।
ಸಂಗಾತ್ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ॥62॥

ಕ್ರೋಧಾತ್ ಭವತಿ ಸಂಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ।
ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥63॥

– ಭಗವದ್ಗೀತಾ, 2. (62–63)

ಮನುಷ್ಯನು ಇಂದ್ರಿಯ ಸುಖಗಳನ್ನು(ವಿಷಯಸುಖಗಳು) ಕುರಿತು ಚಿಂತಿಸತೊಡಗಿದಾಗ ಅವುಗಳ ಬಗ್ಗೆ ಅವನಿಗೆ ಆಕರ್ಷಣೆ (ಆಸಕ್ತಿ) ಉಂಟಾಗುತ್ತದೆ. ಆಕರ್ಷಣೆಯಿಂದ ಬಯಕೆ ಅಥವಾ ಅವುಗಳನ್ನು ಹೊಂದಬೇಕೆಂಬ ಕಾಮ ಉಂಟಾಗುತ್ತದೆ. ಕಾಮದಿಂದ ಕ್ರೋಧ ಉಂಟಾಗುತ್ತದೆ. ಕ್ರೋಧದಿಂದ ಸಂಮೋಹವುಂಟಾಗುತ್ತದೆ. ಸಂಮೋಹದಿಂದ ಸ್ಮೃತಿನಾಶವುಂಟಾಗುತ್ತದೆ; ಅರ್ಥಾತ್ ಕರ್ತವ್ಯದ ಮರೆವು. ಈ ಸ್ಮೃತಿನಾಶದಿಂದ ಬುದ್ಧಿ(ವಿವೇಕ)ನಾಶವಾಗುತ್ತದೆ. ವಿವೇಕನಾಶವು ಮನುಷ್ಯನ ನಾಶಕ್ಕೆ ಕಾರಣವಾಗುತ್ತದೆ.

ಭಾರತದ ಸುಪ್ರಸಿದ್ಧ ಮಹಾಕಾವ್ಯಗಳಲ್ಲೊಂದಾದ ಮಹಾಭಾರತವು ಎರಡು ದಾಯಾದಿ ವರ್ಗಗಳ ಕಥೆಯನ್ನು ನಮ್ಮ ಮುಂದೆ ಪ್ರಸ್ತುತ ಪಡಿಸುತ್ತದೆ. ಅದರಲ್ಲಿ ಒಂದು ವರ್ಗ(ಕೌರವರು) ಇನ್ನೊಂದು ವರ್ಗಕ್ಕೆ(ಪಾಂಡವರು) ನ್ಯಾಯವಾಗಿ ಸಲ್ಲಬೇಕಾದ ಭೂಮಿಯ ಭಾಗವನ್ನು ಕೊಡದೆ ಇಡೀ ಸಾಮ್ರಾಜ್ಯವನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುತ್ತದೆ.

ಇದರಿಂದ ಯುದ್ಧಕ್ಕಾಸ್ಪದವಾಗುತ್ತದೆ. ಆದರೆ ಯುದ್ಧದಲ್ಲಿ ಜಯಶಾಲಿಯಾದ ಪಾಂಡವರ ವರ್ಗವು ತನ್ನ ಸೇನೆಯ ಬಹುಭಾಗವನ್ನಷ್ಟೇ ಅಲ್ಲದೆ ಅನೇಕ ಬಂಧು-ಬಾಂಧವರನ್ನು ನೀಗಿಕೊಂಡು ಆಳಲು ಯಾರೂ ಉಳಿದಿರದ ಪರಿಸ್ಥಿತಿ ಉಂಟಾಗುತ್ತದೆ. ಉಳಿದ ಕೆಲವರೂ ಬರಿಗೈಯಾಗಿದ್ದಾರೆ ಮತ್ತು ಶೂನ್ಯ ಮನಸ್ಕರಾಗಿದ್ದಾರೆ. ಕೃಷ್ಣನು ಗುರುತಿಸಿದ ಮಾರಕ ಶಕ್ತಿಗಳು ಯುದ್ಧದಲ್ಲಿ ಪ್ರಕಟವಾದುವು. ಈ ಕಥೆಯ ರೋಚಕ ಅಂಶಗಳಲ್ಲೊಂದೆಂದರೆ ಅತ್ಯುತ್ತಮ ವ್ಯಕ್ತಿಗಳೆನ್ನುವವರಲ್ಲೂ ಕೆಲವು ದೋಷಗಳಿವೆ ಮತ್ತು ನೀಚ ವ್ಯಕ್ತಿಗಳೆನ್ನುವವರಲ್ಲೂ ಕೆಲವೊಂದು ಒಳ್ಳೆಯ ಅಂಶಗಳಿವೆ ಎನ್ನುವುದು.

ಭಾರತೀಯ ತತ್ತ್ವಶಾಸ್ತ್ರ ಪರಂಪರೆಯಲ್ಲಿ ಕಂಡು ಬರುವ ಹಾಗೂ ಧರ್ಮಗ್ರಂಥಗಳಲ್ಲಿ, ಯೋಗಸೂತ್ರಗಳಲ್ಲಿ ಮತ್ತು ಭಕ್ತಿಕಾವ್ಯದಲ್ಲಿ ಮತ್ತೆ ಮತ್ತೆ ಪುನರಾವೃತ್ತವಾಗುವ ಮೊಟ್ಟಮೊದಲ ಸಾರಭೂತವಾದ ಉಪದೇಶವೆಂದರೆ ಆಸಕ್ತಿ, ಮಮತೆ, ಆಕರ್ಷಣೆ ಮತ್ತು ವಾಸನೆ(ಇಚ್ಛೆ)ಗಳು ಎಲ್ಲ ಭಾವನಾತ್ಮಕ ಯಾತನೆಯ(ನೋವಿನ) ಮೂಲ ಎನ್ನುವುದು. ಅನಾಸಕ್ತಿ ಮತ್ತು ಸನ್ಯಾಸವೇ ಅದಕ್ಕಿರುವ ಪರಿಹಾರ. ಯೋಗಸೂತ್ರಗಳಲ್ಲಿ ಕ್ಲೇಶಗಳ ವಿಚಾರ ಬರುತ್ತದೆ. ಈ ಕ್ಲೇಶಗಳೆಂದರೆ ಅಹಂಕಾರ, ಆಕರ್ಷಣೆ(ವಾಸನೆ?), ವಿಕರ್ಷಣೆ ಮತ್ತು ಮರಣದ ಭಯ. ಇವೇ ಭಾವನಾತ್ಮಕ ಸಂಕಷ್ಟಗಳ ಮೂಲ.

ಶಾಂತಿಯುತವಾದ ಮತ್ತು ಸಂತೋಷಮಯವಾದ ಜೀವನವನ್ನು ನಾವು ಬಯಸುವುದಾದಲ್ಲಿ ಕಾಮ, ಕ್ರೋಧ, ಮದ, ಲೋಭ ಮತ್ತು ಮೋಹಗಳನ್ನು ತ್ಯಜಿಸಬೇಕೆಂದು ಭಾರತೀಯ ಭಕ್ತಿಕಾವ್ಯ ಹೇಳುತ್ತದೆ.

ಆಸಕ್ತಿ ಮತ್ತು ಸನ್ಯಾಸಗಳ ಬಗ್ಗೆ ತಪ್ಪು ತಿಳಿವಳಿಕೆ ಇದೆ. ಉಪನಿಷತ್ಕಾಲದ ನಂತರದಲ್ಲಿ ಸುಮಾರು ಇನ್ನೂರು ಮುನ್ನೂರು ವರ್ಷಗಳ ವರೆಗೆ ಶ್ರಮಣರೆಂಬ ಆಧ್ಯಾತ್ಮ ಸಾಧಕರು ತ್ಯಾಗ ವೈರಾಗ್ಯವನ್ನು ಅಸಂಗತವೆನಿಸುವ ಹಂತಕ್ಕೆ ಕೊಂಡೊಯ್ದರು. ಅವರ ಅನುಷ್ಠಾನಗಳು ಅತ್ಯಂತ ಕಠೋರವಾಗಿದ್ದವು. ಬೋಧಿ ಅಥವಾ ಕೇವಲ ಜ್ಞಾನ ಪಡೆಯಲು ಆಹಾರ, ವಸ್ತ್ರ, ಮತ್ತು ಲೈಂಗಿಕ ಕಾಮವನ್ನು ತ್ಯಜಿಸಿ ನಿಶ್ಚಲವಾಗಿ ಕುಳಿತು ಶ್ವಾಸ ಸ್ಥಂಭನದವರೆಗೂ ಹೋಗಬೇಕಾಗಿತ್ತು. ಗೌತಮ ಬುದ್ಧನು ಈ ಎಲ್ಲ ವಿಧಾನಗಳನ್ನು ಪ್ರಯತ್ನಿಸಿ ಬೋಧಿ ಜ್ಞಾನ ಪ್ರಾಪ್ತಿಗೆ ಅವುಗಳು ಯಾವೂ ಅಗತ್ಯವಿಲ್ಲವೆಂದು ತಿರಸ್ಕರಿಸಿದ. ಅಷ್ಟೇ ಅಲ್ಲ, ಮಧ್ಯಮ ಮಾರ್ಗ ಎಂದು ಕರೆದ ಬೋಧಿಜ್ಞಾನ ಪಡೆಯಲು ಹೆಚ್ಚು ಯುಕ್ತವಾದ ಮಾರ್ಗವನ್ನು ಅನುಸರಿಸಿದನು.

ಅದನ್ನು ಅನಾಸಕ್ತಿ ಮತ್ತು ತ್ಯಾಗದ(ಸನ್ಯಾಸ) ಪರಿಕಲ್ಪನೆಯನ್ನು, ತನ್ನ ಕ್ರಿಯೆಗಳ ಫಲದ ನಿರೀಕ್ಷೆಯಿಂದ ತನ್ನನ್ನು ಮುಕ್ತವಾಗಿಸಿಕೊಳ್ಳುವ ರೂಪದಲ್ಲಿ ಅರ್ಥೈಸಿಕೊಳ್ಳಬೇಕು. ವ್ಯಕ್ತಿಯು ಕರ್ಮಮಾಡುವುದನ್ನು ನಿಲ್ಲಿಸುವುದಿಲ್ಲ. ಶಕ್ತಿಗಳ ನಿರಂತರವಾದ ಪರಸ್ಪರ ವಿನಿಮಯವೇ ಜೀವನದ ನಿಯಮ. ಗಾಳಿಯನ್ನು ಒಳಕ್ಕೆ ತೆಗೆದುಕೊಂಡ ಮೇಲೆ ಕೆಲವು ಕ್ಷಣಗಳ ನಂತರ ಅದನ್ನು ಹೊರಗೆ ಬಿಡದಿದ್ದರೆ ಸಾಯುತ್ತೀರಿ. ಆಹಾರವನ್ನು ಸೇವಿಸಿದ ಮೇಲೆ ಅದನ್ನು ಹೊರಗೆ ವಿಸರ್ಜಿಸದಿದ್ದರೆ ಕೆಲವೇ ವಾರಗಳಲ್ಲಿ ಸಾಯುತ್ತೀರಿ. ಎಲ್ಲವನ್ನೂ ಬಾಚಿಹಾಕಿಕೊಂಡು ಏನನ್ನೂ ಹಿಂತಿರುಗಿಸದಿದ್ದರೆ ನೀವು ಸತ್ತಂತೆಯೇ. ನೀವು ಪ್ರೀತಿಯನ್ನು ಪಡೆದುಕೊಂಡು ಅದನ್ನು ಹಿಂತಿರುಗಿಸದಿದ್ದರೆ ಆಗಲೂ ನೀವು ಸತ್ತಂತೆಯೇ.

ಯಾರೂ ಯಾವುದನ್ನೂ ತ್ಯಜಿಸುವುದಿಲ್ಲ. ಕಾರಣ ಯಾವುದೂ ನಮ್ಮದಲ್ಲ.

ತಾನು ಮಾಡಿದ ಕರ್ಮದ ಫಲ ತನ್ನ ಇಷ್ಟಕ್ಕೆ ತಕ್ಕಂತೆ ಇಲ್ಲದೆ ಇದ್ದಾಗ ಹತಾಶೆ ಮತ್ತು ನಿರಾಶೆಗಳ ಆಘಾತದಿಂದ ನಮ್ಮ ದೃಷ್ಟಿ ಸಾಮರ್ಥ್ಯ (ನಮ್ಮ ಕಾಣ್ಕೆ) ಮಸುಕಾಗದಂತೆ ರಕ್ಷಿಸುವುದೇ ಅನಾಸಕ್ತಿಯ ನಿಜವಾದ ಉದ್ದೇಶ. ರಣಭೂಮಿಯಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶದ ಸಾರ ಇದೇ ಆಗಿದೆ. ತಾನು ಮಾಡಿದ ಕರ್ಮದ ಫಲದ ನಿರೀಕ್ಷೆಯಿಂದ ತನ್ನನ್ನು ನಿರ್ಲಿಪ್ತ ಮಾಡಿಕೊಳ್ಳಲು ಮನುಷ್ಯನು ಸಮರ್ಥನಾದರೆ ಆಗ ಅವನ ಕರ್ಮವು ಅತ್ಯಂತ ಯುಕ್ತವಾಗಿರುವ ಸಾಧ್ಯತೆ ಹೆಚ್ಚಿರುತ್ತದೆ ಎಂದೂ ಅವನು ಬೋಧಿಸಿದನು. ಪ್ರತಿಯೊಬ್ಬ ಯೋಧನೂ ತನ್ನ ಅನುಭವದಿಂದ ಇದನ್ನು ಅರಿತಿರುತ್ತಾನೆ. ಜ್ಞಾನಿಯನ್ನು(ವಿವೇಕಿ) ಕೃಷ್ಣನು ಹೀಗೆ ವರ್ಣಿಸುತ್ತಾನೆ:

ನ ಕರ್ಮಣಾಮನಾರಂಭಾತ್ ನೈಷ್ಕರ್ಮ್ಯಂ ಪುರುಷೋಽಶ್ನುತೇ ॥
ನ ಚ ಸನ್ಯಾಸನಾದೇವ ಸಿದ್ಧಿಂ ಸಮಧಿಗಚ್ಛತಿ ॥4॥

ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ॥
ಕಾರ್ಯತೇ ಹಿ ಅವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈ ॥5॥

ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾ ಸ್ಮರನ್ ॥
ಇಂದ್ರಿಯಾರ್ಥಾನ್ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ॥6॥

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನಾ ॥
ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ ॥7॥

ನಿಯತಂ ಕುರುಕರ್ಮತ್ವಂ ಕರ್ಮಜ್ಯಾಯೋಹ್ಯಕರ್ಮಣಃ ।
ಶರೀರ ಯಾತ್ರಾಪಿ ಚ ತೇನ ಪ್ರಸಿದ್ಧ್ಯೇದಕರ್ಮಣಃ ॥8॥

ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ॥
ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ ॥9॥

– ಭಗವದ್ಗೀತಾ, 3. (4–9)

ಕರ್ಮಗಳನ್ನು ಕೇವಲ ತ್ಯಜಿಸುವುದರಿಂದ ಯಾರೇ ಆದರೂ ಕರ್ಮಗಳಿಂದ ಬಿಡುಗಡೆ ಪಡೆದುಕೊಳ್ಳಲು ಸಾಧ್ಯವಿಲ್ಲ. ಅಥವಾ ಕೇವಲ ಸನ್ಯಾಸದಿಂದಲೂ ಅವನು ಸಿದ್ಧಿಯನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ. ಕರ್ಮ ಮಾಡದೆ ಒಂದು ಕ್ಷಣವಾದರೂ ಅವನು ಸುಮ್ಮನಿರಲು ಸಾಧ್ಯವಿಲ್ಲ. ಆದ್ದರಿಂದ ಎಲ್ಲ ಮಾನವರೂ ಪ್ರಕೃತಿ ಸಹಜವಾದ ಗುಣಗಳಿಂದ ಕರ್ಮ ಮಾಡದೆ ವಿಧಿಯಿಲ್ಲ.

ಯಾವನು ಕರ್ಮ ಮಾಡದೆ ಕರ್ಮೇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು ಮನಸ್ಸಿನಲ್ಲಿ ಅವುಗಳನ್ನು ಕುರಿತೇ ಚಿಂತಿಸುತ್ತಿರುತ್ತಾನೋ ಅವನು ಭ್ರಮೆಯಲ್ಲಿ ಸಿಲುಕಿದವನಾಗಿ ಮಿಥ್ಯಾಚಾರಿ ಎನಿಸಿಕೊಳ್ಳುತ್ತಾನೆ. ಅದೇ ಇಂದ್ರಿಯಗಳನ್ನು ಮನಸ್ಸಿನಿಂದ ನಿಯಂತ್ರಿಸುತ್ತ ಅನಾಸಕ್ತನಾಗಿ ಕರ್ಮೇಂದ್ರಿಯಗಳಿಂದ ಕರ್ಮಯೋಗದಲ್ಲಿ ತೊಡಗಿಕೊಳ್ಳುತ್ತಾನೋ ಅವನು ನಿಜಕ್ಕೂ ವಿಶಿಷ್ಟನಾದವನು.

ಕರ್ಮ ಮಾಡದೆ ಇರುವುದಕ್ಕಿಂತ ಕರ್ಮ ಮಾಡುವುದು ಹೆಚ್ಚು ಶ್ರೇಯಸ್ಕರವಾದ್ದು. ಆದ್ದರಿಂದ ನಿನಗೆ ಗೊತ್ತು ಪಡಿಸಿರುವ ಕರ್ತವ್ಯ ಕರ್ಮಗಳನ್ನು ಮಾಡು. ಕರ್ಮರಹಿತನಾಗಿದ್ದರೆ ಈ ಭೌತಿಕ ಶರೀರವನ್ನೂ ಉಳಿಸಿಕೊಳ್ಳಲಾಗುವುದಿಲ್ಲ. ಯಜ್ಞದ ಸಲುವಾಗಿ ಮಾಡಬೇಕಾದ ಕರ್ಮವನ್ನು ಮಾಡಲೇ ಬೇಕು. ಇಡೀ ಲೋಕವೆಲ್ಲವೂ ಕರ್ಮದ ಬಂಧನದಲ್ಲಿದೆ. ಆದ್ದರಿಂದ ಹೇ ಕುಂತೀ ಪುತ್ರನೇ ಯಾವುದೇ ಫಲಾಪೇಕ್ಷೆಯ ಬಂಧನವಿಲ್ಲದೆ ನಿನ್ನ ಕರ್ತವ್ಯ ಕರ್ಮವನ್ನು ಮಾಡು.

ಇದು ನಾನು ನಮ್ಮ ಆರ್ಷ ಧರ್ಮ ಗ್ರಂಥಗಳಿಂದ ಕಲಿತ ಎರಡನೆಯ ಪಾಠ. ಯಾರೂ ಕರ್ಮ ಮಾಡುವುದನ್ನು ನಿಲ್ಲಿಸಕೂಡದು. ಕರ್ಮದ ಫಲಗಳ ನಿರೀಕ್ಷೆಯಿಂದ ತನ್ನನ್ನು ದೂರ ಇಟ್ಟುಕೊಳ್ಳಲಷ್ಟೇ ಯತ್ನಿಸಬೇಕು. ಇದರಿಂದ ಸಮಚಿತ್ತತೆ ಲಭಿಸುತ್ತದೆ.

ಇನ್ನೊಂದು ಗೊಂದಲವಿದೆ. ಸಮಚಿತ್ತತೆ ಎಂದದರೇನು? ಈ ಪರಿಕಲ್ಪನೆಯನ್ನು ವಿವರಿಸಲು ನನ್ನ ಗುರುಗಳು ಬೈಸಿಕಲ್ ಮಾದರಿಯನ್ನು ಬಳಸುತ್ತಿದ್ದರು. ಮೊತ್ತಮೊದಲ ಬಾರಿಗೆ ಸೈಕಲ್ ಸವಾರಿ ಮಾಡಲು ಪ್ರಯತ್ನಿಸುತ್ತಿರುವ ವ್ಯಕ್ತಿಯನ್ನು ಗಮನಿಸಿ. ಮೊದಲ ದಿನ ಅವನು ಸಮತೋಲನ ಕಳೆದುಕೊಳ್ಳುತ್ತಾನೆ ಮತ್ತು ಮೊದಲ ದಿನ ಅವನು ಮಾಡುವ ಪ್ರತಿಯೊಂದು ಪ್ರಯತ್ನವೂ ಈ ಸಮತೋಲನದ ಅಭಾವವನ್ನು ಹೆಚ್ಚುಮಾಡುವಂತೆ ತೋರುತ್ತದೆ. ಎರಡನೇ ದಿನವೂ ಅವನು ತನ್ನ ತಪ್ಪನ್ನು ತಿದ್ದಿಕೊಳ್ಳಲು ತುಂಬ ಪ್ರಯತ್ನಿಸುವ ಕಾರಣದಿಂದಾಗಿ ಸಮತೋಲನವನ್ನು ಕಳೆದುಕೊಳ್ಳುತ್ತಾನೆ. ಸಮತೋಲನ ಕಳೆದುಕೊಳ್ಳುವುದು ಮತ್ತು ಅದನ್ನು ಮತ್ತೆ ಗಳಿಸಿಕೊಳ್ಳುವುದರ ನಡುವೆ ಒಂದು ಅಂತರವಿರುವ ಕಾರಣದಿಂದಾಗಿ ಮತ್ತೆ ಕೆಳಗೆ ಬೀಳುತ್ತಾನೆ. ಮೂರನೇ ದಿನ ಆ ವ್ಯಕ್ತಿ ಸರಿಯಾಗಿ ಸವಾರಿ ಮಾಡುತ್ತಾನೆ. ಸಮತೋಲನ ಕಳೆದುಕೊಳ್ಳುವ ಮತ್ತು ಸಮತೋಲನ ಪಡೆದುಕೊಳ್ಳುವುದರ ನಡುವಿನ ಸಮಯ ಎಷ್ಟೊಂದು ಕಡಿಮೆಯಾಗಿಬಿಟ್ಟಿರುತ್ತದೆಂದರೆ ಅವನು ಸರಿಯಾಗಿ ಸವಾರಿ ಮಾಡುತ್ತಿರುವಂತೆ ಕಾಣುತ್ತದೆ. ವಾಸ್ತವವಾಗಿ ಅವನು ನಿರಂತರವಾಗಿ ಸಮತೋಲನ ಕಳೆದುಕೊಳ್ಳುತ್ತಿರುತ್ತಾನೆ ಮತ್ತು ತನಗೇ ಅರಿವಿಲ್ಲದಂತೆ (ಅಪ್ರಜ್ಞಾ ಪೂರ್ವಕವಾಗಿ) ತನ್ನನ್ನು ಸರಿಪಡಿಸಿಕೊಳ್ಳುತ್ತಿರುತ್ತಾನೆ.

ಅದೇ ರೀತಿ ಸಮಚಿತ್ತಸ್ಥಿತಿ ಸ್ಥಿರವಾಗಿರುವಂತೆ ತೋರುತ್ತದೆ. ವ್ಯಕ್ತಿ ಸತ್ತಿಲ್ಲ. ವಾಸ್ತವವಾಗಿ ಅವನು ಅತ್ಯಂತ ಸೂಕ್ಷ್ಮವಾಗಿದ್ದಾನೆ. ಹಾಗಾಗಿಯೇ ಬಹು ಸುಲಭವಾಗಿ ಅವನು ಕ್ಷೋಭೆಗೊಳಗಾಗಬಹುದು. ಆದರೆ ಜೀವನದ ದಾರಿಗುಂಟ ಸಾಗುತ್ತಿದ್ದಂತೆ ನಿರಂತರವಾಗಿ ತನ್ನನ್ನು ಸರಿಪಡಿಸಿಕೊಳ್ಳಲು ಕಲಿತಿದ್ದಾನೆ. ಸಮಚಿತ್ತದ ವ್ಯಕ್ತಿಯ ಚರ್ಯೆಯಲ್ಲಿ ಕಂಡುಬರುವ ಮೇಲು ತೋರಿಕೆಯ ಸ್ಥಿರತೆಯು ತಿರುಗುತ್ತಿರುವ ಬುಗುರಿಯಲ್ಲಿ ಮೇಲು ನೋಟಕ್ಕೆ ಕಂಡುಬರುವ ಸ್ಥಿರತೆಯಂತೆ ಎಂದು ಕಳೆದ ಶತಮಾನದ ಸಂತರಾದ ರಮಣಮಹರ್ಷಿಗಳು ಹೇಳುತ್ತಿದ್ದರು.

ನಮ್ಮ ಆಧ್ಯಾತ್ಮಿಕ ಗುರುಗಳಿಂದ ನಾನು ಕಲಿತ ಮೂರನೆಯ ಪಾಠವೆಂದರೆ ಚಿತ್ತದ ಸಮತೆಯು ಸಾಧಿತವಾಗುವುದು ನಿರಂತರ ಚೈತನ್ಯಶೀಲತೆಯಿಂದ ಎಂದು.

ನಾಲ್ಕನೆಯ ಪಾಠ ರೋಗಿ ಮತ್ತು ಚಿಕಿತ್ಸಕನ ನಡುವಣ ಸಂಬಂಧಕ್ಕೆ ಸಂಬಂಧಿಸಿದ್ದಾಗಿದೆ. ಸಾಂಸ್ಕೃತಿಕ ವ್ಯತ್ಯಾಸಗಳು ಸಂವಹನವನ್ನು ತುಂಬಾ ಕ್ಲಿಷ್ಟವಾಗಿಸಿಬಿಡುತ್ತವೆ ಎಂದು ಕೆಲವು ಚಿಕಿತ್ಸಕರು ತಿಳಿಯುತ್ತಾರೆ. ಅವರು ತೀರಾ ಉತ್ಪ್ರೇಕ್ಷೆಮಾಡಿ ಹೇಳುತ್ತಾರೆಂದು ನನಗನಿಸುತ್ತದೆ. ನಾನು ಭಾರತ, ಬ್ರಿಟನ್ ಮತ್ತು ಆಫ್ರಿಕಾಗಳಲ್ಲಿ ಕೆಲಸ ಮಾಡಿದ್ದೇನೆ. ವಿಭಿನ್ನ ಸಂಸ್ಕೃತಿಗಳಿಗೆ ಸೇರಿದ ಜನರಲ್ಲೂ ಅದೇ ಮೂಲ ಭಾವನೆಗಳನ್ನು ಕಂಡಿದ್ದೇನೆ. ಬಿಳಿಯ, ಕಂದು ಅಥವಾ ಕಪ್ಪು ಜನ; ಬುರ್ಕಾ, ಸೀರೆ ಅಥವಾ ಸ್ಕರ್ಟ್ ಧಾರಿಗಳು– ಹೀಗೆ ಯಾವುದೇ ಸಂಸ್ಕೃತಿಗೆ ಸೇರಿದವರು ರೋಗಿಗಳಾಗಿದ್ದರೂ ಅವರೆಲ್ಲರೂ ಅದೇ ಭಾವನೆಗಳ ವರ್ತುಲದಲ್ಲೇ ಬಂಧಿತರಾಗಿದ್ದಾರೆ. ಒಮ್ಮೆಗೆ ನೀವು ನಿಮ್ಮ ರೋಗಿಗಳೊಂದಿಗೆ

ಆಸಕ್ತಿ, ಸಹಾನುಭೂತಿ ಮತ್ತು ಉಚಿತ ಜಾಣ್ಮೆಯಿಂದ ವ್ಯವಹರಿಸಿದ್ದೇ ಆದರೆ ನಿಮ್ಮ ರೋಗಿಯು ತನ್ನ ಯಾತನೆಯ ಆಂತರಿಕ ಪ್ರಪಂಚಕ್ಕೆ ನಿಮ್ಮನ್ನು ಬಿಟ್ಟುಕೊಳ್ಳಲು ಅತ್ಯಂತ ಆಸಕ್ತಿ ತೋರುತ್ತಾನೆ. ಮತ್ತು ಆ ಪ್ರಪಂಚ ಅತ್ಯಂತ ಚಿರಪರಿಚಿತವಾದ ಕ್ಷೇತ್ರ. ನೀವು ನೋವನ್ನು ಅರ್ಥಮಾಡಿಕೊಳ್ಳಬಲ್ಲಿರಿ. ಪ್ರಾಣಿಗಳು ತಮ್ಮದೇ ಜಾತಿಯ ಇತರೆ ಪ್ರಾಣಿಗಳ ವಿಶ್ವಾಸವನ್ನು ಗೆದ್ದುಕೊಳ್ಳುವಂಥ ಆಚರಣೆಗಳು ಮತ್ತು ಭಾವಾಭಿನಯಗಳನ್ನು ಹೊಂದಿರುತ್ತವೆ ಎಂಬುದನ್ನು ಶೀಲ ಸ್ವಭಾವಶಾಸ್ತ್ರಜ್ಞರು ತೋರಿಸಿಕೊಟ್ಟಿದ್ದಾರೆ. ಅದೇ ಮಾನವ ಜಾತಿಗೂ ಅನ್ವಯಿಸುತ್ತದೆ. ಅನುಭೂತಿಶಕ್ತಿಯೆಂದರೆ ಒಬ್ಬರ ವ್ಯಕ್ತಿತ್ವವನ್ನು ಇನ್ನೊಬ್ಬರತ್ತ ಚಾಚುವ ಮೂಲಕ ಇನ್ನೊಬ್ಬರ ಸಂವೇದನೆಗಳನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು ಎಂದು ವ್ಯಾಖ್ಯಾನಿಸಲಾಗುತ್ತದೆ. ಸಹಾನುಭೂತಿಯ ಮೂಲಕ ನಿಮ್ಮ ರೋಗಿಯ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ನಿಮ್ಮ ನಿಜವಾದ ಭಾವನೆಗಳನ್ನು ರೋಗಿಗೆ ಅರ್ಥಮಾಡಿಕೊಳ್ಳಲು ಬಿಡಬೇಕು. ರೋಗಿಯ ಎದುರುಗಡೆ ಇದ್ದಾಗ ನಿಮ್ಮ ಆಂತರ್ಯದ ಭಾವನೆಗಳು ಅವನ ವಿಷಯಕ್ಕೆ ಕಾಳಜಿಯದಾಗಿದ್ದರೆ, ಆರೈಕೆಮಾಡುವಂಥದಾಗಿದ್ದರೆ, ಗೌರವ ಹೊಂದಿರುವಂಥದಾಗಿದ್ದರೆ ಹಾಗೂ ನಿಮ್ಮ ಮುಖವು ಈ ಭಾವನೆಗಳನ್ನು ಅಭಿವ್ಯಕ್ತಿಸುತ್ತಿದ್ದರೆ, ನಿಮ್ಮ ರೋಗಿಯು ಅವುಗಳನ್ನು ಗ್ರಹಿಸಿ ಶಾಂತ ಹಾಗೂ ತೆರೆದ ಮನಸ್ಸಿನಿಂದ ಪ್ರತಿಕ್ರಿಯೆ ತೋರುತ್ತಾನೆ. ಏನೇ ಆದರೂ ಅವನ/ಅವಳ ಅರ್ಥ ಪ್ರಪಂಚವು ನಿಮಗೆ ಪರಕೀಯವಾದ ಬೇರೊಂದು ಸಂಸ್ಕೃತಿಗೆ ಸೇರಿದುದು ಎಂಬ ಭಾವನೆಯಿಂದ ನೀವು ಆ ವ್ಯಕ್ತಿಯನ್ನು ಯಾವಾಗಲೂ ನೋಡುತ್ತೀರಾದರೆ ಆ ವ್ಯಕ್ತಿ ಕೂಡ ಒಳಸರಿಯುತ್ತಾನೆ/ತ್ತಾಳೆ. ನಿಮ್ಮ ಭಾಷೆ ಕೂಡ ಬಹು ಮುಖ್ಯ. ಇನ್ನೊಬ್ಬರ ಮನಸ್ಸನ್ನು ಹೊಕ್ಕು ನೋಡಲು ನಾವು ಬಳಸುವ ಉಪಕರಣಗಳೇ ಶಬ್ದಗಳು. ನಮ್ಮ ಭಾಷೆಯು ಕುತೂಹಲವನ್ನು ಪ್ರಚೋದಿಸುವ ಗುಣಗಳಿಂದ ಮುಕ್ತವಾಗಿದ್ದು ವಾಸ್ತವಿಕವೂ ನಮ್ಮ ಅಂತರಾತ್ಮಕ್ಕೆ ನಿಷ್ಠವೆನಿಸುವಂಥದೂ ಆಗಿರಬೇಕೆಂದು ಭಗವಾನ್ ಶ್ರೀ ಕೃಷ್ಣನು ಹೇಳಿದ್ದಾನೆ. ಮನೋಚಿಕಿತ್ಸಕನಿಗೆ ಇದು ಎಲ್ಲಕ್ಕಿಂತ ಬಹಳ ಮುಖ್ಯವಾದ್ದು. ಅನುಭೂತಿ ಶಕ್ತಿಯ ವರ್ತನೆ ಮತ್ತು ಭಾಷೆಯ ಮೂಲಕ ವ್ಯಾಕುಲಗೊಂಡ ಭಕ್ತನನ್ನು ಶಾಂತಗೊಳಿಸಲು ಸನ್ಯಾಸಿಗಳು ನೆರವಾದದ್ದನ್ನು ನಾನು ನೋಡಿದ್ದೇನೆ. ಅದಕ್ಕಿಂತಲೂ ಹೆಚ್ಚು ಪ್ರಭಾವಶಾಲಿಯಾದದ್ದೆಂದರೆ ಭಕ್ತರ ಮುಖವನ್ನು ಕೇವಲ ನೋಡುವ ಮಾತ್ರದಿಂದಲೇ ಭಕ್ತರಲ್ಲಿ ಶಕ್ತಿ ಸಂಚಾರವಾಗುವಂತೆ ಮಾಡುವ ಮೌನವ್ರತಧಾರಿಗಳಾದ ಮೌನಿಬಾಬಾಗಳು.

ಅವರ ಮುಖಗಳು ಅವರ ಆತ್ಮದಲ್ಲಿ ನೆಲೆಸಿರುವ ಶಾಂತತೆ ಮತ್ತು ಮನಸ್ಸಮಾಧಾನವನ್ನು ಪೂರ್ಣ ರೀತಿಯಲ್ಲಿ ವ್ಯಕ್ತಪಡಿಸುತ್ತವೆ.

ನಿಮ್ಮೊಳಗೆ ನೀವು ಶಾಂತರೂ ಸಮಚಿತ್ತರೂ ಆಗಿದ್ದಲ್ಲಿ ನಿಮ್ಮ ರೋಗಿ ಯಾವುದೇ ಸಂಸ್ಕೃತಿಗೆ ಸೇರಿದವನಾಗಿದ್ದರೂ ಅವನ ವಿಶ್ವಾಸವನ್ನು ನೀವು ಗಳಿಸಬಲ್ಲಿರಿ. ಇದಕ್ಕೆ ಅಗತ್ಯವಾದ್ದು ಚಿಕಿತ್ಸಕನು ತನ್ನ ಅಂತರ್ನಿರೀಕ್ಷಣೆ ಮಾಡಿಕೊಳ್ಳುವುದರ ಜೊತೆಗೆ ತನ್ನ ಭಾವನೆಗಳ ಬಗೆಗೆ ಹೆಚ್ಚಿನ ಅರಿವು ಹೊಂದಿರುವುದು.

ಮಾನಸಿಕ ರೋಗಿಗಳಿಗೆ ಕಥೆಗಳ ಮೂಲಕ ನೆರವು ನೀಡಬಹುದಾದ್ದು ಭಾರತೀಯ ಆಧ್ಯಾತ್ಮಿಕ ಪರಂಪರೆಯಿಂದ ನಾನು ಕಲಿತ ಐದನೆಯ ಪಾಠ. ಒಮ್ಮೆ ನಾನು ಆಶ್ರಮದಲ್ಲಿ ತಂಗಿದ್ದಾಗ ಮೂವತ್ತು ವರ್ಷ ವಯಸ್ಸಿನ ಒಬ್ಬ ವ್ಯಕ್ತಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಸ್ವಾಮಿಯನ್ನು ನೋಡಲು ಬಂದ. ತನ್ನ ಹೆಂಡತಿಯು ಮಕ್ಕಳನ್ನು ಕರೆದುಕೊಂಡು ತನ್ನನ್ನು ತೊರೆದುಹೋಗಿದ್ದಾಳೆ, ಜಮೀನು ವಿವಾದದಲ್ಲಿದೆ; ಕೈಯಲ್ಲಿ ಕಾಸಿಲ್ಲ. ಹಾಗಾಗಿ ತಾನು ಆತ್ಮಹತ್ಯೆಮಾಡಿಕೊಳ್ಳಬೇಕೆಂದಿರುವುದಾಗಿ ತಿಳಿಸಿದ. ಸ್ವಾಮೀಜಿ ಅವನು ಹೇಳಿದ್ದೆಲ್ಲವನ್ನೂ ಕೇಳಿಸಿಕೊಂಡರು. ಆದರೆ ಹೆಂಡತಿ ತೊರೆದುಹೋಗುವಂಥ ಪರಿಸ್ಥಿತಿ ಬರಲೇನು ಕಾರಣ ಎಂದು ಕೇಳಲಿಲ್ಲ. ಬದಲಿಗೆ ಆ ಮನುಷ್ಯನಿಗೆ ತಮ್ಮೊಂದಿಗೆ ಕೆಲವು ದಿನ ಇರುವಂತೆ ಸೂಚಿಸಿದರು. ಆಶ್ರಮಕ್ಕೆ ಅನುಕೂಲವಾಗಬಹುದಾದ ವೃತ್ತಿ ಕೌಶಲಗಳೇನಾದರೂ ಅವನಿಗೆ ತಿಳಿದಿದೆಯೆ ಎಂದು ಕೇಳಿಕೊಂಡರು. ಆ ಮನುಷ್ಯನಿಗೆ ಹಸುಗಳನ್ನು ನೋಡಿಕೊಳ್ಳುವುದು ಹೇಗೆ ಎಂಬುದು ಗೊತ್ತಿದೆ ಎಂದು ತಿಳಿದು ಬಂತು. ಸ್ವಾಮಿಯವರು ಅವನಿಗೆ ಆಶ್ರಮದ ಹಸುಗಳನ್ನು ನೋಡಿಕೊಳ್ಳುವ ಕೆಲಸ ಕೊಟ್ಟರು. ಒಂದೆರಡು ದಿನಗಳ ನಂತರ ಹಸುಗಳ ಮೇವು ತರುವ, ತಿನ್ನಿಸುವ, ಹಸುಗಳ ಮೈತೊಳೆಯುವ ಮತ್ತು ಹಾಲುಕರೆಯುವ ಸಂಪೂರ್ಣ ಜವಾಬ್ದಾರಿಯನ್ನು ಅವನಿಗೆ ವಹಿಸಿದರು. ಕೆಲವು ದಿನಗಳ ನಂತರ ಸ್ವಾಮಿ ಅವರು ಅವನು ಹಸುಗಳನ್ನು ಯಶಸ್ವಿಯಾಗಿ ಮತ್ತು ಪ್ರೀತಿಯಿಂದ ನೋಡಿಕೊಳ್ಳುತ್ತಿರುವ ಬಗ್ಗೆ ತಿಳಿಸಿ ಅವನನ್ನು ಆಶ್ರಮದ ಇತರ ಭಕ್ತರಿಗೆ ಪರಿಚಯಿಸಿದರು. ಒಂದು ದಿನ ನಾನು ಅವನ ಹೆಂಡತಿ ಅವನನ್ನು ಏಕೆ ಬಿಟ್ಟುಹೋದಳು, ಅವನ ಹೊಲ ಏಕೆ ವಿವಾದದಲ್ಲಿ ಸಿಲುಕಿದೆ ಎಂಬ ಬಗ್ಗೆ ಅವನ ಹಿಂದಿನ ಸಂಗತಿಗಳನ್ನು ಪತ್ತೆಮಾಡುವುದು ಒಳ್ಳೆಯದಲ್ಲವೆ ಎಂದು ಸ್ವಾಮೀಜಿಯನ್ನು ಪ್ರಶ್ನಿಸಿದೆ. ಸ್ವಾಮೀಜಿ ನನ್ನ ಮಾತನ್ನು ಕಡೆಗಣಿಸಿದರು. ಇನ್ನೊಂದೆರಡು ದಿನಗಳ ನಂತರ ಪ್ರಾರ್ಥನಾ ಸಮಯದಲ್ಲಿ ಆ ಮನುಷ್ಯನು ಅಳಲಾರಂಭಿಸಿ ತಾನು ತನ್ನ ಹೆಂಡತಿಯನ್ನು ಹೇಗೆ ಕ್ರೌರ್ಯದಿಂದ ನಡೆಸಿಕೊಂಡೆ ಮತ್ತು ಹಾಗೆ ನಡೆಸಿಕೊಂಡದ್ದೇ ಕಾರಣವಾಗಿ ಅವಳು ಬಿಟ್ಟು ಹೋದಳು ಎಂಬ ಬಗ್ಗೆ ಹೇಳಿದನು. ತಾನು ನೋಡಿಕೊಳ್ಳುತ್ತಿರುವ ಹಸುಗಳ ಕಣ್ಣಿನಲ್ಲಿ ಕೃತಜ್ಞತೆಯನ್ನು ಕಂಡಾಗ ಮುಂದೆ ತನ್ನ ಹೆಂಡತಿಯನ್ನೂ ತಾನು ಬೇರೆ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಅರ್ಥಮಾಡಿಕೊಂಡಿರುವುದಾಗಿ ಹೇಳಿದನು. ಅಲ್ಲದೆ ಈಗ ತನ್ನ ಮನೆಗೆ ಹೋಗಲು ಸಿದ್ಧನಿರುವುದಾಗಿ ತಿಳಿಸಿದನು.

ಅಂಥ ಅನೇಕ ಉದಾಹರಣೆಗಳನ್ನು ನಾನು ನೀಡಬಲ್ಲೆ. ಒಂದು ದಿನ ಸ್ವಾಮಿಯವರು ಧರ್ಮಗ್ರಂಥವೊಂದರಿಂದ ಮಂತ್ರವೊಂದನ್ನು ಓದಿ ಹೇಳಿದರು:

"ಏನಾದರೂ ಏಕೆ ಆಗುತ್ತದೆ ಎನ್ನುವುದಕ್ಕೆ ಕಾರಣಗಳ ಪರಂಪರೆಯೇ ಇರುತ್ತದೆ. ಕಾರಣಗಳ ಸರಪಳಿಗೆ ಕೊನೆಯೆಂಬುದೇ ಇರುವುದಿಲ್ಲ. ನೀವು ಎಷ್ಟು ಹಿಂದಕ್ಕೆ ಹೋಗಲು ಸಾಧ್ಯ? ನೀವು ಸೇರಿಕೊಳ್ಳಬಹುದಾದ ಬಿಂದುವಿನಲ್ಲಿ ಕಾರಣಗಳ ಸರಪಳಿಯನ್ನು ಕತ್ತರಿಸಿ."

ಬುದ್ಧನು ತನ್ನ ಪ್ರಖ್ಯಾತವಾದ "ಬಾಣದ ನೀತಿ ಕಥೆ" ಯಲ್ಲಿ ಇದನ್ನೇ ಹೇಳಿದ್ದಾನೆ.

"ಇದ್ದಕ್ಕಿದ್ದಂತೆ ಒಂದು ವಿಷಪೂರಿತ ಬಾಣ ಬಂದು ನಿಮ್ಮ ಎದೆಯನ್ನು ಭೇದಿಸಿದರೆ ಯಾವ ದಿಕ್ಕಿನಿಂದ ಬಾಣ ಬಂದಿತು, ಬಾಣ ಬಿಟ್ಟವರಾರು, ಬಾಣವು ಬಿದಿರಿನದೋ ಕಬ್ಬಿಣದ್ದೋ ಅದನ್ನು ಯಾವ ಬಗೆಯ ಬಿಲ್ಲಿನಿಂದ ಬಿಡಲಾಯಿತು ಎಂಬುದನ್ನೆಲ್ಲ ಪತ್ತೆಹಚ್ಚಲು ಕಾಯುತ್ತ ಕೂರುವುದಿಲ್ಲ. ಇದನ್ನೆಲ್ಲ ಮಾಡುವುದಕ್ಕೆ ಮೊದಲು ನೀವು ನಿಮ್ಮ ಎದೆಯಿಂದ ಬಾಣವನ್ನು ಕಿತ್ತೆಸೆಯುವಿರಿ."

ಕೆಲವೊಮ್ಮೆ ಕಾರಣದ ಬಗ್ಗೆ ವಿಪರೀತ ಗಮನ ನೀಡಲಾಗುತ್ತದೆಂದು ಐದನೆಯ ಪಾಠ ನನಗೆ ಕಲಿಸಿತು. ಕಾರಣವನ್ನು ತಿಳಿಯದೆಯೇ ಅನೇಕ ವೇಳೆ ಯಾತನೆಯನ್ನು ಪರಿಹರಿಸಬಹುದು ಮತ್ತು ಕಾರಣ ಗೊತ್ತಾದಾಕ್ಷಣಕ್ಕೇ ಯಾತನೆಯನ್ನು ಪರಿಹರಿಸಬಹುದೆಂದು ಅರ್ಥವಲ್ಲ.

* * *

ಭಾರತೀಯ ತತ್ತ್ವಶಾಸ್ತ್ರದಿಂದ ನಾನು ಕಲಿತ ಮಹತ್ವದ ಪಾಠಗಳು ಇವು. ಅನಾಸಕ್ತಿ ಅಥವಾ ಕಾರ್ಯದ ಫಲದ ನಿರೀಕ್ಷೆಯಿಂದ ನಮ್ಮನ್ನು ಪ್ರತ್ಯೇಕಿಸಿಕೊಳ್ಳುವುದರ ಮೌಲ್ಯವನ್ನು ತಿಳಿದಿದ್ದೇನೆ. ಚಿತ್ತದ ಸಮತೆಯು ಕಾರ್ಯವನ್ನು ನಿವಾರಿಸಿಕೊಳ್ಳುವುದರಿಂದ ಬರುವುದಿಲ್ಲ; ಆದರೆ ಸಮತೋಲನದಿಂದ ಬರುತ್ತದೆ ಎಂಬುದನ್ನು ತಿಳಿದೆ. ಮಾನವ ಸಹಾನುಭೂತಿ ಸಂಸ್ಕೃತಿಯ ಎಲ್ಲೆಕಟ್ಟುಗಳನ್ನು ಮೀರುತ್ತದೆಂಬುದನ್ನು ಒಬ್ಬ ಚಿಕಿತ್ಸಕನಾಗಿ ಗಮನಿಸಿದ್ದೇನೆ. ಯಾರೇ ಆದರೂ ಕಾರಣಗಳ ಬಗ್ಗೆ ಅತಿಯಾದ ಒತ್ತು ಹಾಕಬಾರದೆಂದು ಕೂಡ ಗಮನಿಸಿದ್ದೇನೆ. ಈಗಿನ ಇನ್ನೊಂದು ಪ್ರಶ್ನೆಯೆಂದರೆ ಮನೋರೋಗಶಾಸ್ತ್ರ ಮತ್ತು ಮಾನಸಿಕ ಚಿಕಿತ್ಸೆಯಲ್ಲಿ ಯೋಗ ಮತ್ತು ಧ್ಯಾನಕ್ಕೆ ಸ್ಥಾನವಿದೆಯೆ? ಎಂದು. ಇದೊಂದು ಜಟಿಲ ಪ್ರಶ್ನೆ ಮತ್ತು ಇದರಲ್ಲಿ ಮೇಲೆ ಹೇಳಿದ ಎರಡೂ ಲೋಕದೃಷ್ಟಿಗಳನ್ನು ಪರೀಕ್ಷಿಸುವ ಅಗತ್ಯವಿದೆ.

ಸಂಸ್ಕೃತಿಗಳ ನಡುವೆ ಸಂಪರ್ಕ ಹೆಚ್ಚುತ್ತಿದ್ದಂತೆ ಮಾನಸಿಕ ಯಾತನೆಗಳಿಗೆ ಪರಿಹಾರವನ್ನು ತಿಳಿಸುವಂಥ ನೀತಿಬೋಧೆಗಳು ಭಾರತೀಯ ಧರ್ಮಗ್ರಂಥಗಳಲ್ಲೇನಾದರೂ ಇವೆಯೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನಗಳು ನಡೆದಿವೆ. ಅಂತರ್ ಜಾಲದಲ್ಲಿ ಹುಡುಕಿ ನೋಡಿದಾಗ ಮನೋಚಿಕಿತ್ಸೆಯನ್ನು ಭಗವದ್ಗೀತೆ, ಯೋಗ ಇಲ್ಲವೆ ಬೌದ್ಧ ಧರ್ಮದೊಂದಿಗೆ ಜೋಡಿಸುವ 2500ಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳ ಉಲ್ಲೇಖಗಳು ದೊರೆಯುತ್ತವೆ. ಆರ್. ಆರ್ ವಾಲ್ಷ್ ಮತ್ತು ಎಫ್. ವಾಘನ್ ವರ್ಣಿಸಿರುವ ಪರಾವ್ಯಕ್ತಿ ಮನೋಚಿಕಿತ್ಸೆಯ (transpersonal psycho therapy) ಪೂರಾ ವಿನೂತನ ಶಾಖೆಯು ಭಾರತೀಯ ಪರಿಕಲ್ಪನೆಯಾದ ಅತೀಂದ್ರಿಯತೆಯನ್ನಾಧರಿಸಿದೆ. ಹಾಗೂ ಅದು ಬುದ್ಧನ ಉಪದೇಶವನ್ನು ನೆನಪಿಸುವಂಥ ಅಭ್ಯಾಸಗಳನ್ನು (ಅನುಷ್ಠಾನ) ಶಿಫಾರಸು ಮಾಡುತ್ತದೆ. ಆದಾಗ್ಯೂ ಈ ಬೆಳವಣಿಗೆಗಳ ಪ್ರಭಾವಕ್ಕೆ ಮರುಳಾಗುವ ಮುಂಚೆ ಪಾಶ್ಚಾತ್ಯ

ಮನೋಚಿಕಿತ್ಸೆಯ ಮತ್ತು ಭಾರತೀಯ ಆಧ್ಯಾತ್ಮ ಸಂಪ್ರದಾಯಗಳ ಲೋಕ ದೃಷ್ಟಿಗಳು ಎಷ್ಟರ ಮಟ್ಟಿಗೆ ಪರಸ್ಪರ ಹೊಂದಿಕೊಳ್ಳಬಲ್ಲವು ಎಂಬುದನ್ನಷ್ಟು ಪರೀಕ್ಷಿಸಿ ನೋಡುವುದು ವಿವೇಕಯುತವಾಗಬಹುದು.

ನೋವು ಮತ್ತು ಅದರ ಕಾರಣಗಳನ್ನು ಅವು ವ್ಯಾಖ್ಯಾನಿಸುವ ರೀತಿ, ಪರಿಹಾರ ಬಯಸುವ ವ್ಯಕ್ತಿಗೆ ಅವು ನಿಗದಿಪಡಿಸುವ ಗುರಿಗಳು, ಮತ್ತು ಪರಿಹಾರವನ್ನು ಪಡೆಯಲು ಅವುಗಳು ಕೊಡಮಾಡುವ ವಿಧಾನಗಳು ಒಂದೇ ಆಗಿವೆಯೆ? ಈ ಎರಡೂ ಅಧ್ಯಯನ ಶಿಸ್ತುಗಳ ಪರೀಕ್ಷೆಯು ಕೆಲವೊಂದು ಉತ್ತರಗಳನ್ನು ಒದಗಿಸುತ್ತದೆ.

* * *

ಮಾಮೂಲಿ ರೀತಿಯಲ್ಲಿ ಕಾರ್ಯನಿರ್ವಹಿಸುವ ತಮ್ಮ ಸಾಮರ್ಥ್ಯಕ್ಕೆ ಅಡಚಣೆ ಉಂಟಾಗುವ ಮಟ್ಟಿಗೆ ಭಾವನಾತ್ಮಕವಾಗಿ ವಿಚಲಿತರಾದ ಜನರಿಗೆ ಮನೋಚಿಕಿತ್ಸೆಯು ಅಗತ್ಯ ನೆರವು ನೀಡುತ್ತದೆ. ಅದರ ಬೇರುಗಳು ಪಾಶ್ಚಾತ್ಯ ಮನೋವೈಜ್ಞಾನಿಕ ಪರಂಪರೆಗಳಲ್ಲಿದೆ. ಮನೋಚಿಕಿತ್ಸೆಯ ವಿಭಿನ್ನ ಮಾದರಿಗಳಿವೆ. ಆದರೆ ಅವುಗಳ ಆಧಾರಭೂತ ತತ್ವಕ್ಕೆ ಕೆಲವು ಸಮಾನ ವಿಷಯಗಳಿವೆ. ಅದರಿಂದಾಗಿ ಅವುಗಳನ್ನು ಒಟ್ಟಾಗಿ ಸೇರಿಸಿ ಒಂದು ಗುಂಪಾಗಿ ಮಾಡಬಹುದು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅಗತ್ಯಗಳು ಮತ್ತು ಇಚ್ಛೆಗಳು ಈಡೇರದಿರುವುದೇ ಎಲ್ಲ ನೋವಿಗೆ ಕಾರಣ. ಇವು ಪ್ರಜ್ಞೆಯಲ್ಲಿರಬಹುದು ಇಲ್ಲವೆ ಅಪ್ರಜ್ಞಾ ವಲಯದಲ್ಲಿರಬಹುದು. ಅವುಗಳು ಈಡೇರದಿರುವುದಕ್ಕೆ ಪರಸ್ಪರ ಸಂಘರ್ಷ ಕಾರಣವಾಗಿರಬಹುದು ಅಥವಾ ಸಮಾಜವು ಅವರ ಮೇಲೆ ಹೇರಿದ ಹಕ್ಕೊತ್ತಾಯಗಳು, ನಿಯಮಗಳು ಮತ್ತು ನಿರ್ದೇಶನಗಳಾಗಬಹುದು.

ಮನೋಚಿಕಿತ್ಸೆಯ ಕೇಂದ್ರ ಸಾಮಾಜಿಕ ಸಂದರ್ಭದಲ್ಲಿ ವ್ಯಕ್ತಿಯ 'ಸ್ವ' (self) ಆಗಿರುತ್ತದೆ. ಪಾಶ್ಚಾತ್ಯ ಪರಂಪರೆಯಲ್ಲಿ 'ಸ್ವ' ವನ್ನು ಅರ್ಥಮಾಡಿಕೊಳ್ಳಲು ಎರಡು ದಾರಿಗಳಿರುವಂತೆ ಕಾಣುತ್ತದೆ. ಮೊದಲನೆಯದು ಗ್ರೀಕ್ ಮಾರ್ಗ. ಇದರಲ್ಲಿ ಸಾಮಾಜಿಕ ಪರಿಸರದಲ್ಲಿ ಪರಸ್ಪರ ಸಂವಹನ ಮಾಡುವಾಗ 'ಸ್ವ' ಕ್ಕೆ ಒಂದು ಸ್ವತಂತ್ರ ಅಸ್ತಿತ್ವವಿದೆಯೆಂದು ಪರಿಗಣಿಸಲಾಗುತ್ತದೆ. ಈ 'ಸ್ವ'ದ ಪ್ರಾಥಮಿಕ ಕಾಳಜಿ ಇರುವುದು ತನ್ನ ಅಸ್ತಿತ್ವದ ಕುರಿತಂತೆ. ಇನ್ನೊಂದು ಮಾರ್ಗ ಯಹೂದಿ ಪರಂಪರೆಯದು. ಇಮ್ಯಾನ್ಯುಯಲ್ ಲೆವಿನಾಸ್, 'ಸ್ವ'ವನ್ನು ಅನ್ಯದೊಂದಿಗೆ ನೈತಿಕ ಸಂಬಂಧ ಹೊಂದಿದ್ದು ಅನ್ಯಕ್ಕೆ ಹೊಣೆಗಾರಿಕೆ ಹೊಂದಿರುವಂಥದು, ಆದರೆ ಅನ್ಯವನ್ನು ಅದರ ಅನ್ಯತೆಗಾಗಿ ಗೌರವಿಸುವಂಥದು ಎಂದು ಅದರ ಲಕ್ಷಣವನ್ನು ನಿರೂಪಿಸುತ್ತಾನೆ. ವಿವಿಧ ಮನೋಚಿಕಿತ್ಸಾ ವಿಧಾನಗಳು ಈ ಕೆಳಗೆ ನೋಡುವಂತೆ 'ಸ್ವ' ದ ಯಾವುದಾದರೊಂದು ಲಕ್ಷಣ ಅಥವಾ ಸೂತ್ರದ ಪರ ಇರುವಂತೆ ತೋರುತ್ತವೆ.

ಆವಶ್ಯಕತೆಗಳು ಮತ್ತು ಆಸೆಗಳನ್ನು ಬೇರೆ ಬೇರೆ ಮನೋಚಿಕಿತ್ಸೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ವಿವರಿಸಲಾಗಿದೆ. ಫ್ರಾಯ್ಡ್‌ಗೆ ಈ ಆವಶ್ಯಕತೆಗಳು ಜೈವಿಕ ಆಧಾರವನ್ನು

ಹೊಂದಿವೆಯೆಂದು ಕಂಡಿದೆ ಮತ್ತು ಅವು ಸಂಖ್ಯೆಯಲ್ಲಿ ಎರಡು. ಮೊದಲನೆಯದು ಜೀವನದ ಸಹಜ ಪ್ರವೃತ್ತಿ. ಇದು ನಮ್ಮ ಪಂಗಡದ ಸಂರಕ್ಷಣೆ ಮತ್ತು ಪ್ರಸರಣದ ಕಡೆಗೆ ನಮ್ಮನ್ನು ಪ್ರೇರಿಸುತ್ತದೆ. ಹಸಿವು ಮತ್ತು ಕಾಮಗಳು ಅತ್ಯಂತ ಪ್ರಮುಖವಾದ ಅಂಶಗಳು. ಆದರೆ ವ್ಯಕ್ತಿಯ ಮತ್ತು ಅವನು ಸದಸ್ಯನಾಗಿರುವ ಸಂಸ್ಕೃತಿಯ ಬೆಳವಣಿಗೆಗಳು ಈ ಜೀವನ ಪ್ರವೃತ್ತಿಯಿಂದ ಹೊಮ್ಮಿರುವಂಥವಾಗಿವೆ. ಎರಡನೆಯದು ಮರಣದ ಮೂಲ ಪ್ರವೃತ್ತಿ. ನಮ್ಮ ವರ್ಗವನ್ನು ಪ್ರಸಾರ ಮಾಡಬೇಕೆಂಬ ಇಚ್ಛೆಯ ಜೊತೆಯಲ್ಲಿ ನಾಶ ಮಾಡಬೇಕೆಂಬ ಮತ್ತು ಸಾಯಬೇಕೆಂಬ ಇಚ್ಛೆ ಸೇರಿರುತ್ತದೆ. ತನ್ನ ಸ್ಥಿರ ಅಸ್ತಿತ್ವದ ಸ್ಥಿತಿಯಿಂದ ಪಲ್ಲಟಕ್ಕೊಳಗಾದ ಜೈವಿಕ ಪದಾರ್ಥವು ತನ್ನ ಮೊದಲಿನ ಶಾಂತ ಸ್ಥಿತಿಗೆ ಮರಳಲು ಸೆಣಸುತ್ತದೆ. ಸ್ಪರ್ಧೆ, ಟೀಕೆ ಮತ್ತು ಯುದ್ಧವೇ ಮೊದಲಾದ ಎಲ್ಲ ಆಕ್ರಮಣಕಾರಿ ನಡವಳಿಕೆಗಳ ತಳಹದಿ ಮರಣ ಪ್ರವೃತ್ತಿಯಾಗಿರುತ್ತದೆ. 'ಇಡ್' ನಿಂದ(ಸಹಜ ಪ್ರವೃತ್ತಿಗಳು) ಹೊಮ್ಮಿದ ಈ ಎಲ್ಲ ಮೂಲಭೂತ ಆವಶ್ಯಕತೆಗಳು ಮತ್ತು ಇಚ್ಛೆಗಳಲ್ಲಿ ತಮ್ಮ ತಮ್ಮಲ್ಲೇ ಸಂಘರ್ಷಗಳುಂಟಾದಾಗ ಅಥವಾ 'ಪರಾ ಅಹಂ'ನಲ್ಲಿ (ಸೂಪರ್ ಇಗೋದಲ್ಲಿ) ಇರುವ, ಸಮಾಜವು ಅಂತರ್ಗತಗೊಳಿಸಿಕೊಂಡ ನೀತಿ ಸಂಹಿತೆಗಳೊಂದಿಗೆ ಸಂಘರ್ಷಗಳುಂಟಾದಾಗ ಯಾತನೆ ಉಂಟಾಗುತ್ತದೆ. ನೆನಪಿನ ವಾಹಿನಿಗಳನ್ನು ತೆರೆಯುವ ಮೂಲಕ ಜನರಿಗೆ ಅವರ ಅಜ್ಞಾತ ಆಸೆಗಳೊಂದಿಗೆ ಮತ್ತೆ ಸಂಪರ್ಕವೇರ್ಪಡಿಸುವುದು, 'ಆಸೆ' ಅಥವಾ ಇಚ್ಛೆಗಳಲ್ಲಿ ಹೊಂದಾಣಿಕೆಗಳನ್ನು ಉಂಟುಮಾಡುವುದು, ಪರಾ-ಅಹಂನ(ಸೂಪರ್ ಈಗೋ) ಗಡಸುತನವನ್ನು ಮತ್ತು ದಂಡನೆಯ ಶಕ್ತಿಯನ್ನು ಕಡಿಮೆ ಮಾಡುವುದು ಮತ್ತು ಅಹಂ ಅನ್ನು ಅದರ ಸಂಧಾನಾತ್ಮಕ ಶಕ್ತಿಯ ಸಮೇತವಾಗಿ ಬಲಪಡಿಸುವುದೇ ಮೊದಲಾದುವು ಉಪಚಾರ ಅಥವಾ ಗುಣಪಡಿಸುವ ಪ್ರಕ್ರಿಯೆಯಲ್ಲಿ ಸೇರುತ್ತವೆ.

ಆಲ್ ಫ್ರೆಡ್ ಆಡ್ಲರ್ ಎನ್ನುವವನು 'ಅಧೀನ ಪಡಿಸಿಕೊಳ್ಳುವ ಅಥವಾ ಪ್ರಭುತ್ವದ ಇಚ್ಛೆ' ಅಥವಾ 'ಶಕ್ತಿ'ಯನ್ನು ಈ ಪಟ್ಟಿಗೆ ಸೇರಿಸಿದನು. ಈ ಅಗತ್ಯವನ್ನು ಭಂಗಗೊಳಿಸಿದ್ದೇ ಆದರೆ ಮನುಷ್ಯನು ಯಾತನೆ ಪಡಬೇಕಾದೀತೆಂದು ಹೇಳಿದ. ಅಬ್ರಹಾಂ ಮಾಸ್ಲೋ ಮೊದಲಾದ ಮಾನವವಾದಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆವಶ್ಯಕತೆಗಳ ಒಂದು ಕ್ರಮಬದ್ಧ ಶ್ರೇಣಿಯನ್ನು ಪಟ್ಟಿಮಾಡಿದ್ದಾರೆ. ಆಹಾರ ಮತ್ತು ಲೈಂಗಿಕತೆ ಅಥವಾ ಶಕ್ತಿಯ ಆವಶ್ಯಕತೆಗಳ ಜೊತೆಗೆ ಆತ್ಮಗೌರವ, ಪ್ರೀತಿ, ಲಕ್ಷ್ಯ, ಮತ್ತು ಅಂತಿಮವಾಗಿ ವ್ಯಕ್ತಿಯ ಸಂಪೂರ್ಣ ಸಾಮರ್ಥ್ಯದ ಸಾರ್ಥಕತೆ ಎಂದು ಹೇಳಲಾದ ಸ್ವ-ಕಾರ್ಯಸಾಧನೆಯ ಅಗತ್ಯ ಕೂಡ ಇದೆ. ಮಾನವವಾದಿಗಳ ನಂತರ ಅಸ್ತಿತ್ವವಾದಿಗಳು ಬರುತ್ತಾರೆ. ಅವರಲ್ಲಿ ವಿಕ್ಟರ್ ಫ್ರಾಂಕಲ್ ಪ್ರಮುಖನಾದವನು. ಅವನ ಪ್ರಕಾರ ಇತರೆ ಎಲ್ಲ ಆವಶ್ಯಕತೆಗಳ ಜೊತೆಗೆ 'ಅರ್ಥ'ದ ಅಗತ್ಯವಿದೆ; ಹಾಗೂ ನಿಮ್ಮ ಸ್ವಂತ ಅಗತ್ಯಗಳನ್ನೂ ಮೀರಿ ಹೋಗಿ ಬೇರೆಯವರಿಗೆ ಏನನ್ನಾದರೂ ಮಾಡಿದಾಗ ಮಾತ್ರ ಅರ್ಥ ಪ್ರಾಪ್ತವಾಗುತ್ತದೆ. ಮನೋಚಿಕಿತ್ಸೆಯ ಇನ್ನೆರಡು ಪ್ರಸ್ಥಾನಗಳಾದ-ಮೆಡಾರ್ಡ್ ಬಾಸ್‌ನ ಡಾಸಿಯನ್ ವಿಶ್ಲೇಷಣಾತ್ಮಕ ಪ್ರಸ್ಥಾನ ಮತ್ತು ಜಾಕ್ಸ್ ಲಕಾನ್‌ನ ಪ್ರಸ್ಥಾನ- 'ಸ್ವ' ದ 'ಅನ್ಯ'ವನ್ನು

ಅರ್ಥೈಸಿಕೊಳ್ಳುವುದರ ಪಕ್ಷ ವಹಿಸಿವೆ. ಈಗ ಮೇಲೆ ಹೆಸರಿಸಲಾದ ಪ್ರಸ್ಥಾನಗಳು 'ಸ್ವ' ದ ಯಹೂದಿ ಅರ್ಥದ ಕಡೆಗೆ ಒಲವು ತಳೆದಿದ್ದರೆ ಹಿಂದೆ ಹೆಸರಿಸಲಾದ ಚಿಂತಕರು ಗ್ರೀಕ್ ಮಾರ್ಗದ ಕಡೆಗೆ ಒಲವು ಹೊಂದಿದ್ದಾರೆ.

ಈ ಮನೋ ಚಿಕಿತ್ಸೆಗಳು ವ್ಯಕ್ತಿಯ ಅಪ್ರಜ್ಞಾವಸ್ಥೆಯತ್ತ ಹೆಚ್ಚು ಗಮನ ಕೊಡುತ್ತವೆ. ಅವರೆಲ್ಲರೂ ಅಪ್ರಜ್ಞಾವಲಯದತ್ತ ದೂಡಲಾದ ಅಥವಾ ಯಾವತ್ತೂ ಪ್ರಜ್ಞಾವಸ್ಥೆಗೆ ತಂದುಕೊಳ್ಳದಿರುವ ಸಂಘರ್ಷಗಳನ್ನು ಪರೀಕ್ಷಿಸಿ ನೋಡುವ ಗುರಿಹೊಂದಿರುತ್ತಾರೆ. 'ಯೂಂಗ್' ಅಪ್ರಜ್ಞಾವಸ್ಥೆಯು ವ್ಯಕ್ತಿಗೆ ಮಾತ್ರ ಸೀಮಿತವಾಗಿರುತ್ತದೆಂದು ತಿಳಿದಿರಲಿಲ್ಲ. ಅವನು ಅದನ್ನು ಇಡೀ ಮಾನವ ವಿಕಾಸದಲ್ಲಿ ಒಟ್ಟುಗೂಡಿದ ಜ್ಞಾನದ ಭಂಡಾರವೆಂದು ನೋಡುತ್ತಾನೆ. 'ಸ್ವ' ವು ತನ್ನ ಅಪ್ರಜ್ಞಾವಸ್ಥೆಯನ್ನು ವಿಶ್ಲೇಷಣೆಗೊಳಪಡಿಸುವ ಮೂಲಕ ಹಾಗೂ ಸಂಘರ್ಷಗಳನ್ನು ಪರಿಹರಿಸಲು ನೆರವಾಗಬಹುದಾದ ಸುಪ್ತ ಶಕ್ತಿಗಳನ್ನು ಕಂಡುಕೊಳ್ಳುವ ಮೂಲಕ ಚೈತನ್ಯವನ್ನು ಪಡೆದುಕೊಂಡು ಯಾತನೆಯನ್ನು ನಿವಾರಿಸಿಕೊಳ್ಳಬಹುದು ಎಂದು ಭಾವಿಸುತ್ತಾನೆ.

ಇನ್ನೂ ಕೆಲವು ಮನೋಚಿಕಿತ್ಸೆಗಳಿವೆ. ಆದರೆ ಅವು ಭಾವನೆಗಳ ಮೇಲೆ ಹೆಚ್ಚು ಗಮನವಹಿಸುವುದಿಲ್ಲ. ಮತ್ತು ಅಪ್ರಜ್ಞೆಯ ಉಲ್ಲೇಖ ಮಾಡುವುದಿಲ್ಲ. ಇವು ಗ್ರಹಿಕೆಯ ವರ್ತನೆಗೆ ಸಂಬಂಧಿಸಿದ ಚಿಕಿತ್ಸೆಗಳು, ವಾಸ್ತವಿಕ ಜಗತ್ತಿನ ವಿಕೃತ ಚಿತ್ರವನ್ನು ಮನಸ್ಸಿನಲ್ಲಿಟ್ಟುಕೊಂಡಿರುವ ವ್ಯಕ್ತಿ ಅಥವಾ ವರ್ತನೆಯ ನಮೂನೆಗಳಿಗೆ ಕಾರಣವಾದ ತಪ್ಪು ಕಲಿಕೆ ದುಃಖವನ್ನುಂಟುಮಾಡುತ್ತವೆ; ಯಾತನೆಗೆ (ನೋವಿಗೆ) ಇವೇ ಮೂಲವೆಂದು ಅವುಗಳು ಅಭಿಪ್ರಾಯಿಸುತ್ತವೆ. ಹೆಚ್ಚು ತೃಪ್ತಿಕರವಾದ ಚಿಂತನಾ ಶೈಲಿ ಮತ್ತು ವರ್ತನೆಯ ಕಲಿಕೆಯನ್ನು ಚಿಕಿತ್ಸೆ ಒಳಗೊಳ್ಳುತ್ತದೆ. ಎಲ್ಲ ಮನೋ ಚಿಕಿತ್ಸೆಗಳಲ್ಲಿ ಚಿಕಿತ್ಸಕನ ಪಾತ್ರ ಬಹಳ ಮುಖ್ಯವಾದದ್ದು. ಅವನು ಅಥವಾ ಆಕೆ ಮನುಷ್ಯ ಸಂಬಂಧಗಳ ವಿಷಯದಲ್ಲಿ ಮತ್ತು ತಾವು ಪ್ರಯೋಗಿಸುತ್ತಿರುವ ಚಿಕಿತ್ಸಾ ಪದ್ಧತಿಯ ಸಿದ್ಧಾಂತ ವಿಷಯದಲ್ಲಿ ಅತ್ಯಂತ ನುರಿತವರಾಗಿರುತ್ತಾರೆ. ರೋಗಿಗಳೊಂದಿಗೆ ಅವರ ಸಂವಾದ ಶೈಲಿ ವಿಭಿನ್ನವಾಗಿರುತ್ತದೆ. ಫ್ರಾಯ್ಡ್‌ವಾದಿ ಮನೋಚಿಕಿತ್ಸಕನು ರೋಗಿಗೆ/ಕಕ್ಷಿದಾರನಿಗೆ ತನ್ನ ಸಂಘರ್ಷಗಳನ್ನು ತಾನೇ ಸ್ವತಃ ಗಮನಿಸಲು ಬಿಡುವ ಮೂಲಕ ತಾನು ವೇಗವರ್ಧಕವಾಗಿ ಮಾತ್ರ ಕೆಲಸ ಮಾಡುತ್ತಾನೆ. ಯೂಂಗ್ ಅಥವಾ ಮಾನವವಾದಿ ಚಿಕಿತ್ಸಕನು ಕಷ್ಟದ ಪರಿಹಾರ ಪ್ರಕ್ರಿಯೆಯನ್ನು ತ್ವರೆಪಡಿಸುವ ಸಲುವಾಗಿ ತನ್ನ ವ್ಯಕ್ತಿತ್ವವನ್ನು ಅತ್ಯಂತ ವಿವೇಚನಾಯುತವಾಗಿ ಬಳಸಿಕೊಳ್ಳುತ್ತ ರೋಗಿಯೊಂದಿಗೆ ತರ್ಕಕ್ಕೆ ತೊಡಗಿಕೊಳ್ಳುತ್ತಾನೆ. ಗ್ರಹಿಕೆಯ(ಕಾಗ್ನಿಟಿವ್) ವರ್ತನ ಚಿಕಿತ್ಸಕನು ಹೆಚ್ಚಾಗಿ ನಿರ್ದೇಶನ ನೀಡುವ ಅಧ್ಯಾಪಕನಾಗಿ ಕೆಲಸ ಮಾಡುತ್ತಾನೆ. ಅಧ್ಯಾಪಕನ ಮಾರ್ಗದರ್ಶನದಲ್ಲಿ ಸರಿಯಾದ ರೀತಿಯಲ್ಲಿ ಚಿಂತನೆಮಾಡುವುದನ್ನು ಮತ್ತು ವರ್ತನಾತ್ಮಕ ನಮೂನೆಗಳನ್ನು ಕಲಿಯಲಾಗುತ್ತದೆ.

ಯಾವುದೇ ಮಾದರಿ ಅಥವಾ ನಮೂನೆಗಳಲ್ಲಿ ವರ್ಗಾವಣೆ ಮತ್ತು ಪ್ರತಿ-ವರ್ಗಾವಣೆಗಳನ್ನು ಅನುಭವಕ್ಕೆ ತಂದುಕೊಳ್ಳಬಹುದು. ವರ್ಗಾವಣೆಯಲ್ಲಿ ರೋಗಿಯು ತನ್ನ ಸ್ವಂತ ಬದುಕಿನಿಂದ ಪಾತ್ರಗಳನ್ನು (ವ್ಯಕ್ತಿಗಳನ್ನು) ಮುಂದೆಮಾಡುತ್ತಿರುತ್ತಾನೆ. ಉದಾಹರಣೆಗೆ ತಂದೆ/ತಾಯಿ, ಮಗು, ಅಥವಾ ಒಬ್ಬ ಪ್ರೇಮಿಯನ್ನು ಚಿಕಿತ್ಸಕನ ಮುಂದೆ ತರುತ್ತಿರುತ್ತಾನೆ. ಅದೇ ಪ್ರತಿ ವರ್ಗಾವಣೆಯಲ್ಲಿ ಚಿಕಿತ್ಸಕನು ರೋಗಿಗೆ ಇದೇ ರೀತಿ ಮಾಡುತ್ತಿರುತ್ತಾನೆ. ಇವನ್ನು ಸೂಕ್ತವಾಗಿ ನಿಭಾಯಿಸದಿದ್ದಲ್ಲಿ, ಚಿಕಿತ್ಸೆಯ ಪ್ರಗತಿ ಸಾಧ್ಯವಾಗುವುದಿಲ್ಲ.

ಸಂಕ್ಷೇಪದಲ್ಲಿ ಹೇಳಬೇಕೆಂದರೆ ಮನೋಚಿಕಿತ್ಸೆಯು ಭಾವನಾತ್ಮಕವಾಗಿ ವಿಚಲಿತರಾದ ಜನರ ಯಾತನೆಯನ್ನು ತಡೆಯುವ ಒಂದು ವಿಧಾನ. ಈಡೇರದ ಆವಶ್ಯಕತೆಗಳು ಮತ್ತು ಆಸೆಗಳೇ ಯಾತನೆ ಅಥವಾ ನೋವಿಗೆ ಕಾರಣ. ಆಶೆಗಳು ಮತ್ತು ಆವಶ್ಯಕತೆಗಳು ಈಡೇರದಿರುವುದಕ್ಕೆ ಕಾರಣ ಅವುಗಳಲ್ಲಿಯ ಪರಸ್ಪರ ಸಂಘರ್ಷ ಅಥವಾ ವ್ಯಕ್ತಿ ಬಾಳುತ್ತಿರುವ ಸಮಾಜದ ಹಕ್ಕೊತ್ತಾಯಗಳು.

ಪ್ರಜ್ಞೆಯಲ್ಲಿ ಇಲ್ಲವೆ ಅಪ್ರಜ್ಞೆಯಲ್ಲಿರುವ ಸಂಘರ್ಷಗಳನ್ನು ಅನಾವರಣಗೊಳಿಸುವ ಮೂಲಕ ಅಥವಾ ಎದುರಿನಲ್ಲಿ ತರುವುದರ ಮೂಲಕ ಚಿಕಿತ್ಸೆ ಪ್ರಾರಂಭವಾಗುತ್ತದೆ. ಚಿಕಿತ್ಸೆಯ ಗುರಿ ಆವಶ್ಯಕತೆಗಳು ಮತ್ತು ಸಾಮಾಜಿಕ ಸಂದರ್ಭಗಳ ನಡುವೆ ಒಂದು ಸಮತೋಲನವನ್ನು ಕಂಡುಕೊಳ್ಳುವುದು.

ಅಹಂ(ಸ್ವ)ನ ಸಾಮರ್ಥ್ಯವನ್ನು ಕಂಡುಕೊಂಡು ಅದನ್ನು ಬಲಪಡಿಸುವ ಮೂಲಕ ಸಮತೋಲನವನ್ನು ಸಾಧಿಸಲಾಗುವುದು. ವ್ಯಕ್ತಿಯು ಅರ್ಥಪೂರ್ಣವಾದ ಆಯ್ಕೆಗಳನ್ನು ಮಾಡಲು ಶಕ್ತನಾಗಲೆಂಬುದು ಇದರ ಉದ್ದೇಶ. ವ್ಯಕ್ತಿಯು ತನ್ನ ಸಾಮಾಜಿಕ ಸಂದರ್ಭದಲ್ಲಿ ಲಭ್ಯವಿರುವ ಸಾಧ್ಯತೆಗಳಿಗೆ ಹೊಂದಿಕೆಯಾಗಬಲ್ಲ ಅರ್ಥಪೂರ್ಣವಾದ ಗುರಿಗಳನ್ನು ಅನುಸರಿಸಿದಾಗ ಯಾತನೆಯಿಂದ ಬಿಡುಗಡೆ ದೊರೆಯುತ್ತದೆ.

* * *

ಭಾರತೀಯ ದೃಷ್ಟಿಕೋನದ ವಿಚಾರದಲ್ಲಿ ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದ ಸಂಗತಿಯೆಂದರೆ ಭಾರತೀಯ ಆಧ್ಯಾತ್ಮಿಕತೆಯ ಒಳನೋಟಗಳು ಮತ್ತು ಅಭ್ಯಾಸಗಳು ಇರುವುದು ಮಾನಸಿಕವಾಗಿ ಅಸ್ವಸ್ಥರಾದ ವ್ಯಕ್ತಿಗಳಿಗೆ ಪರಿಹಾರ ದೊರಕಿಸಿಕೊಡುವುದಕ್ಕಲ್ಲ. ಬದಲಿಗೆ ಪಾಶ್ಚಾತ್ಯ ಮಾನದಂಡಗಳ ಪ್ರಕಾರ ಸಾಮಾನ್ಯ ಆರೋಗ್ಯಸ್ಥಿತಿಯಲ್ಲಿರುವಂಥ ಮತ್ತು ಇಂದ್ರಿಯ ಗೋಚರವಾದ ಈ ಲೌಕಿಕ ಜಗತ್ತಿನಿಂದ ಬಿಡುಗಡೆ ಅಥವಾ ಮೋಕ್ಷವನ್ನರಸುತ್ತಹೊರಟಿರುವ ವ್ಯಕ್ತಿಗೆ ನೆರವು ನೀಡುವುದಾಗಿದೆ. ಮೋಕ್ಷವೇ ಎಲ್ಲ ಭಾರತೀಯ ಆಧ್ಯಾತ್ಮಿಕ ಅನ್ವೇಷಣೆಗಳ ಆತ್ಯಂತಿಕ ಗುರಿ. ಉದಾಹರಣೆಗೆ ರೋಗಪೀಡಿತರಿಗೆ, ಮಂದ, ನಿರ್ಲಕ್ಷ, ಸೋಂಬೇರಿ ಅಥವಾ ಮಾನಸಿಕವಾಗಿ ಅಸ್ಥಿರರಾದವರಿಗೆ ಮತ್ತು

ಸಿಟ್ಟು, ಹತಾಶೆ, ಅಧೈರ್ಯ ಹಾಗೂ ಉಸಿರಾಟದ ತೊಂದರೆ ಇರುವವರಿಗೆ ಪತಂಜಲಿಯು ಆಧ್ಯಾತ್ಮಿಕ ಅಭ್ಯಾಸಗಳನ್ನು ಮಾಡಲು ಹೇಳುವುದಿಲ್ಲ.

ಈಡೇರಲಾರದ ಆಸೆಗಳು ಮತ್ತು ಆವಶ್ಯಕತೆಗಳಿಂದ ಯಾತನೆ ಉಂಟಾಗುತ್ತದೆಂಬ ಪಾಶ್ಚಾತ್ಯರ ಅಭಿಪ್ರಾಯದೊಂದಿಗೆ ಭಾರತೀಯ ಮನೋವಿಜ್ಞಾನಗಳು ಸಹಮತ ಹೊಂದಿವೆ. ಆದರೆ ಅವಕ್ಕೆ ತೋರುವ ಪ್ರತಿಕ್ರಿಯೆಯಲ್ಲಿ ಅವುಗಳಲ್ಲಿ ಮತಭೇದವಿದೆ. ಪಶ್ಚಿಮವು ಈ ಆವಶ್ಯಕತೆಗಳನ್ನು ಈಡೇರಿಸುವ ಮಾರ್ಗಗಳನ್ನು ಹುಡುಕುತ್ತದೆ. ಭಾರತೀಯ ಆಧ್ಯಾತ್ಮಿಕ ಗ್ರಂಥಗಳು ಎದ್ದುಕಾಣುವಂಥ ಮತ್ತು ಅದಕ್ಕೆ ತದ್ವಿರುದ್ಧವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತವೆ. ಆವಶ್ಯಕತೆಗಳು ಮತ್ತು ಆಸೆಗಳ ಈಡೇರಿಕೆ ಎಂದಿಗೂ ನೆಮ್ಮದಿಯನ್ನು ತರುವುದಿಲ್ಲ. ಆಸೆಗಳನ್ನು ಎಂದಿಗೂ ತಣಿಸಲಾಗುವುದಿಲ್ಲ. ಒಂದು ಆಸೆಯನ್ನು ಪೂರೈಸುವುದೆಂದರೆ ಪ್ರಾಣಿಗಳ ಹಿಂಡಿಗೆ ಆಹಾರ ನೀಡಿದಂತೆ. ಒಂದು ಪ್ರಾಣಿಗೆ ನೀವು ಆಹಾರ ನೀಡಿದರೆ ಉಳಿದವು ನನಗೆ ತನಗೆ ಎಂದು ನಿಮ್ಮತ್ತ ಹಾರುತ್ತವೆ. ಆಸೆಗಳು ನಾವು ಊಹಿಸುವುದಕ್ಕಿಂತಲೂ ಅಸಂಖ್ಯಾತ. ಈ ಮುಂಚೆ ಪರಿಗಣಿಸಲಾದ ಆಸೆಗಳ ಜೊತೆಗೆ ಪ್ರಶಂಸೆಯ ಆಸೆ, ಎಲ್ಲರಿಗಿಂತ ಶ್ರೇಷ್ಠನೆನಿಸುವ ಆಸೆ, ತನ್ನನ್ನು ಪ್ರೀತಿಸಬೇಕೆಂಬ ಆಸೆ, ಮತ್ತು ಎಲ್ಲವನ್ನೂ ನಿಯಂತ್ರಣದಲ್ಲಿಟ್ಟುಕೊಳ್ಳಬೇಕೆಂಬ ಆಸೆಗಳು ಶುರುವಾಗುತ್ತವೆ. ಎಲ್ಲದಕ್ಕಿಂತ ಅಪಾಯಕಾರಿಯಾದ ಆಸೆಯೆಂದರೆ ತನ್ನದೊಂದು ವಿಶಿಷ್ಟ ಬಿಂಬವನ್ನು ಇರಿಸಿಕೊಳ್ಳಬೇಕೆಂಬ ಆಸೆ.

ಭಾರತೀಯ ಮನೋವಿಜ್ಞಾನ ಮತ್ತು ಭಾರತೀಯ ತತ್ತ್ವಶಾಸ್ತ್ರದ(ದರ್ಶನ) ಗುರಿ ಈ ಎಲ್ಲ ಆಸೆಗಳನ್ನು ಮೀರಬೇಕು ಮತ್ತು ಜಗತ್ತನ್ನು ಅದು ವಾಸ್ತವವಾಗಿ ಇರುವಂತೆಯೇ ಅರ್ಥೈಸಿಕೊಳ್ಳಬೇಕೆಂಬುದು.

ಹಾಗಿದ್ದರೆ ಜಗತ್ತು ವಾಸ್ತವದಲ್ಲಿ ಹೇಗಿದೆ? ವೇದಾಂತದ ಪ್ರಕಾರ ಬ್ರಹ್ಮವೇ ಯಥಾರ್ಥ ಅಥವಾ ಸತ್ಯವಾದದ್ದು, ಅದೇ ಪರಿಶುದ್ಧ ಪ್ರಜ್ಞೆ ಅಥವಾ ಅರಿವು. ಅದು ಅನಂತವಾದ್ದು ಮತ್ತು ಎಲ್ಲ ವ್ಯಾಖ್ಯಾನಗಳನ್ನೂ ಮೀರಿದ್ದು. ಅದು ಯಾವುದು ಅಲ್ಲ ಎಂದು ಮಾತ್ರ ಹೇಳಬಹುದು; ನೇತಿ, ನೇತಿ ಅದಲ್ಲ, ಅದಲ್ಲ ಹೀಗೆ. ಮನುಷ್ಯನ ಅಂತಃಸತ್ವವೇನಿದೆ ಅದು ಆತ್ಮ. ಅದು ಪರಿಶುದ್ಧ ಪ್ರಜ್ಞೆಯ ಅಥವಾ ಅರಿವಿನ ಒಂದು ಅಂಶ. ಅದನ್ನು ಆವರಿಸಿರುವ ಮಿಥ್ಯಾಜ್ಞಾನದ ಆವರಣದಿಂದಾಗಿ ಬ್ರಹ್ಮದ ಜೊತೆಗಿನ ಅದರ ಸಂಬಂಧವನ್ನು ನಾವು ಮರೆಯುತ್ತೇವೆ. ಈ ಮಿಥ್ಯಾ ಜ್ಞಾನವು ಇಂದ್ರಿಯಗೋಚರವಾದ ಈ ಲೌಕಿಕ ಜಗತ್ತಿಗೆ ಅಂಟಿರುವ ಮಾಯೆ ಅಥವಾ ಭ್ರಮೆ. ಈ ಇಂದ್ರಿಯಜಗತ್ತಿಗೆ ಅಂಟಿರುವ ಮಾಯೆ ಅಥವಾ ಮೋಹವೇ ನಮ್ಮೆಲ್ಲ ಯಾತನೆಗೆ ಕಾರಣವಾದದ್ದು. ಆಧ್ಯಾತ್ಮ ಸಾಧನೆಯ ಮಾರ್ಗದಲ್ಲಿರುವ ಸಾಧಕನು ಈ ಮಿಥ್ಯಾಜ್ಞಾನದ ಆವರಣವನ್ನು ಕಳಚಿಹಾಕಿ ಆತ್ಮ ಮತ್ತು ಬ್ರಹ್ಮ ಎರಡೂ ಒಂದೇ, ಅದೇ ಶುದ್ಧ ಪ್ರಜ್ಞೆ ಅಥವಾ ಜ್ಞಾನ ಎಂಬ ಸತ್ಯವನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾನೆ.

ಬೌದ್ಧ ಧರ್ಮವು ಆತ್ಯಂತಿಕ ಸತ್ಯ ಅಥವಾ ಆತ್ಮದ ಬಗೆಗೆ ಏನನ್ನೂ ಹೇಳಲು ನಿರಾಕರಿಸುತ್ತದೆ. ಆದರೆ ವೇದಾಂತಿಗಳು ಹೇಳುವ 'ಮಿಥ್ಯಾ ಜ್ಞಾನ'ದ ಬಗೆಗೆ ಅತ್ಯಂತ ವಿಸ್ತಾರವಾಗಿ ನಿರೂಪಿಸುತ್ತದೆ. ಬೌದ್ಧರು ಇದನ್ನು ಸಂಕುಚಿತ ಜ್ಞಾನ ಅಥವಾ ಪ್ರಜ್ಞೆ ಎನ್ನುತ್ತಾರೆ. ಈ ಸಂಕುಚಿತ ಜ್ಞಾನವು; ನಮ್ಮ ಗ್ರಹಿಕೆ, ಅರಿವು, ಮತ್ತು ವರ್ತನೆಗಳನ್ನು ಪ್ರಬಲವಾಗಿ ಪ್ರಭಾವಿಸಿ ವಿರೂಪಗೊಳಿಸಿಬಿಡುವಂಥ; ನಮ್ಮ ನಿಯಂತ್ರಣಕ್ಕೆ ಸಿಗದ ಆಲೋಚನೆಗಳು ಮತ್ತು ಭ್ರಮೆಗಳಿಂದ ತುಂಬಿರುತ್ತದೆ. ಬೌದ್ಧ ಧರ್ಮದ ಗುರಿಯೆಂದರೆ ಈ ಸಂಕುಚಿತ ಪ್ರಜ್ಞೆಯನ್ನು ಸಡಿಲಗೊಳಿಸಿ ಎಲ್ಲ ಬಗೆಯ ಆಲೋಚನೆಗಳು, ಆಸೆಗಳು, ನಂಬಿಕೆಗಳು ಮತ್ತು ಸ್ವ–ಬಿಂಬ ಗಳಿಂದ ಅದನ್ನು ಬೇರ್ಪಡಿಸಬೇಕೆಂಬುದು. ಹೀಗೆ ಬೇರ್ಪಟ್ಟ ಅರಿವು (=ತಿಳಿವು) ಹೆಚ್ಚು ನಿಷ್ಕೃಷ್ಟವಾದದ್ದಾಗಿರುತ್ತದಷ್ಟೇ ಅಲ್ಲ, ಕಾಲ, ದೇಶ ಮತ್ತು ವ್ಯಕ್ತಿಗಳಿಂದ ಅತೀತವಾಗಿರುತ್ತದೆ.

ಈ ಮುಂಚೆಯೇ ಹೇಳಿರುವಂತೆ ಸಾಂಖ್ಯ ದರ್ಶನದ ಪ್ರಕಾರ ವಾಸ್ತವವು, ಎರಡು ಪರಸ್ಪರ ವಿರುದ್ಧವಾದ ಆದರೆ ಸಮಾನವಾದ ತತ್ತ್ವಗಳಿಂದ ಕೂಡಿದೆ. ಅವುಗಳೆಂದರೆ ನಿರ್ಗುಣ ಅರಿವಾದ 'ಪುರುಷ' ಮತ್ತು ಭೌತ ವಸ್ತುವಾದ 'ಪ್ರಕೃತಿ'.

ಸಾಮಾನ್ಯ ಅಸ್ತಿತ್ವದಲ್ಲಿ 'ಪುರುಷನು' 'ಪ್ರಕೃತಿಯಿಂದ' ಕಳಂಕಿತಗೊಂಡಿರುತ್ತಾನೆ. ಯಾವ ರೀತಿಯಲ್ಲಿ ಎಂದರೆ ಮನಸ್ಸು ತಾನು ಪುರುಷನ ಒಂದು ಭಾಗವೆಂದು ತಪ್ಪಾಗಿ ನಂಬಿಬಿಟ್ಟಿರುತ್ತದೆ. ಈ ಅಜ್ಞಾನವೇ ಎಲ್ಲ ಆಸಕ್ತಿ ಅಥವಾ ಮೋಹಗಳಿಗೆ ಕಾರಣವಾದ್ದು. ಪ್ರಾಕೃತಿಕ ಶಕ್ತಿಗಳನ್ನು ಒಂದು ಸಮತೋಲನಕ್ಕೆ ತಂದು ಆ ಮೂಲಕ ಪುರುಷನು ಪ್ರಕೃತಿಯಿಂದ ಕಳಂಕಿತಗೊಳ್ಳದೆ ಅಬಾಧಿತವಾಗಿ, ಮುಕ್ತವಾಗಿ ನಿಲ್ಲಲು ಅನುವು ಮಾಡಿಕೊಡುವುದೇ ಗುರಿಯಾಗಬೇಕು.

ಈ ನನ್ನ ಒಟ್ಟಾರೆ ಅನಿಸಿಕೆ ಭಾರತೀಯ ಮನೋವಿಜ್ಞಾನಗಳ ಸಂಕೀರ್ಣತೆ ಮತ್ತು ಸೂಕ್ಷ್ಮತೆಗಳಿಗೆ ನ್ಯಾಯಸಲ್ಲಿಸಲಾರದಾದರೂ ವೇದಾಂತ, ಸಾಂಖ್ಯ ಮತ್ತು ಬೌದ್ಧ ಈ ಮೂರೂ ದರ್ಶನಗಳ ಮುಖ್ಯ ಗುರಿ ಮನುಷ್ಯನು ಇಂದ್ರಿಯ ಗೋಚರವಾದ ಈ ಲೌಕಿಕ ಜಗತ್ತಿನ ಬಗೆಗಿನ ನಂಟು ಅಥವಾ ಮೋಹದಿಂದ ತನ್ನನ್ನು ಮುಕ್ತಗೊಳಿಸಿಕೊಳ್ಳುವುದು ಮತ್ತು ಶುದ್ಧ ಪ್ರಜ್ಞೆ ಅಥವಾ ಜ್ಞಾನದೊಂದಿಗೆ ಒಂದಾಗುವುದು(ಐಕ್ಯವಾಗುವುದು) ಎಂಬುದಂತೂ ಸ್ಪಷ್ಟ.

ಇದನ್ನು ಆಗುಮಾಡುವುದು ಹೇಗೆ? ಭಾರತೀಯ ಮನೋವಿಜ್ಞಾನಗಳು ವಿಶ್ವ ವ್ಯವಸ್ಥೆಯ ಪರಿಕಲ್ಪನೆಯನ್ನಾಧರಿಸಿವೆ. ಅಭ್ಯಾಸಿಯನ್ನು ಈ ವ್ಯವಸ್ಥೆಯನ್ನು ಅರ್ಥೈಸಿಕೊಳ್ಳುವ ಸಮೀಪಕ್ಕೆ ತರಲು ಅನುವಾಗುವಂತೆ ಯೋಗದ ವಿವಿಧ ಬಗೆಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ಮುಂಚೆಯೇ ಗಮನಕ್ಕೆ ತಂದುಕೊಂಡಂತೆ ಹಿಂದಿನ ಆಧ್ಯಾತ್ಮ ಗ್ರಂಥಗಳು ಜ್ಞಾನಯೋಗ, ರಾಜಯೋಗ, ಭಕ್ತಿಯೋಗ ಮತ್ತು ಕರ್ಮಯೋಗ ವೆಂಬ ನಾಲ್ಕು ಬಗೆಯ ಬೇರೆ ಬೇರೆ

ಯೋಗದ ಪ್ರಕಾರಗಳನ್ನು ವಿವರಿಸುತ್ತವೆ. ಇವುಗಳಲ್ಲಿ ಒಂದೊಂದನ್ನೂ ಬೇರೆ ಬೇರೆ ವ್ಯಕ್ತಿತ್ವಗಳಿಗೆ ಹೊಂದುವ ರೀತಿಯಲ್ಲಿ ರೂಪಿಸಲಾಗಿದೆ.

ಈ ಸಾಮಾನ್ಯವಾದ ಇಂದ್ರಿಯ ಗೋಚರವಾದ ಲೌಕಿಕ ಜಗತ್ತಿನಲ್ಲಿ ಯಾತನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ಒಮ್ಮೆ ಅರಿವಿಗೆ ಬಂದಿತಾದರೆ ಯಾತನೆಯಿಂದ ಬಿಡುಗಡೆ ದೊರೆಯುತ್ತದೆ ಎಂದು ಬೌದ್ಧ ಧರ್ಮ ಹೇಳುತ್ತದೆ. ಬೇರೆಯವರ ಬಗ್ಗೆ ದಯೆ, ಅತಿಗಳನ್ನು ನಿವಾರಿಸಿಕೊಳ್ಳುವುದು, ಆಲೋಚನೆಗಳು, ಭ್ರಮೆಗಳು ಮತ್ತು ಅಂತಿಮವಾಗಿ 'ಸ್ವ' ದ (ಅಹಂ ನ) ಶಾಶ್ವತತೆಯ ವಿಚಾರದಿಂದ ಬಿಡಿಸಿಕೊಳ್ಳಲು ನೆರವಾಗುವಂಥ ಧ್ಯಾನದ ಅಭ್ಯಾಸಗಳು ಯಾತನೆಯನ್ನು ಮೀರಲು ನಿಮಗೆ ನೆರವಾಗುತ್ತವೆ.

ವ್ಯಕ್ತಿಯೊಬ್ಬನು ಆಯ್ಕೆಮಾಡಿಕೊಳ್ಳುವ ಮಾರ್ಗವು ಸಾಮಾನ್ಯವಾಗಿ ಗುರುವಿನ ಆಯ್ಕೆಯನ್ನು ಅವಲಂಬಿಸಿರುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಗುರುವಿನ ಮಹತ್ವವನ್ನು ಒತ್ತಿಹೇಳಬೇಕಾದ್ದಿಲ್ಲ. ಗುರುವಿಗೆ ವಿಶಿಷ್ಟ ಸ್ಥಾನವಿದೆ ಮತ್ತು ಗುರುವಿನ ನೆರವಿಲ್ಲದೆ ಯಾತನೆಯಿಂದ ಬಿಡುಗಡೆ ಎಂಬುದಿಲ್ಲ. ಡಾ. ಹೋಖ್ ಅವರ ಮಾತುಗಳಲ್ಲಿ ಹೇಳಬೇಕೆಂದರೆ ಗುರುವೇ ತಂದೆ, ತಾಯಿ, ಗೆಳೆಯ, ಮಗು ಕೂಡ. ಆದರೆ ಅಂತಿಮವಾಗಿ ಒಬ್ಬ ಸಂರಕ್ಷಕ; ಶಿಷ್ಯನ ಪ್ರಪಂಚವೇ ಅವನು ಮತ್ತು ಶಿಷ್ಯನ ದೈವ. ಗುರುವಿಗೆ ತನ್ನ ಸ್ಥಾನಾಂತರದ ಬಗ್ಗೆ ಚಿಂತೆಯಿಲ್ಲ. ಆದರೆ ಶಿಷ್ಯನು ಸಾಧನೆಯ ಹಾದಿಯಲ್ಲಿ ಎಷ್ಟು ದೂರ ಸಾಗಿದ್ದಾನೆಂಬುದರ ಮೇಲೆ ಅವನ ಅಗತ್ಯಕ್ಕೆ ತಕ್ಕಂತೆ ಉಪಯೋಗಕ್ಕೆ ಸಿದ್ಧನಿರುತ್ತಾನೆ. ತನ್ನ ಶಿಷ್ಯನು ಯಾವ ಹಂತವನ್ನು ತಲುಪಿದ್ದಾನೆಂಬುದರ ಹಾಗೂ ಮುಂದೆ ಸಾಗಲು ಅವನಿಗೆ ಇನ್ನೇನು ಅಗತ್ಯವಿದೆ ಎಂಬುದರ ಅಂತರ್ಬೋಧೆ ನಿಜವಾದ ಗುರುವಿಗೆ ಇರುತ್ತದೆ.

ಗುರುವಾದವನು ಶಿಷ್ಯನಿಗೆ ತನ್ನ ಸಾಮಾಜಿಕ ವರ್ಗದ ಪದ್ಧತಿಗಳನ್ನು ಅನುಸರಿಸಲು ಪ್ರೋತ್ಸಾಹಿಸುವುದಾಗಲಿ ಅವುಗಳ ವಿರುದ್ಧವಾಗಿ ಹೋಗಬೇಕೆಂದು ಒತ್ತಾಯ ಮಾಡುವುದಾಗಲಿ ಮಾಡುವುದಿಲ್ಲ. ಒಬ್ಬ ಗುರುವಾದವನದು ವಿರೋಧಾಭಾಸದ ಸ್ಥಿತಿ. ಅವನು ಸಮಾಜದ ಬಂಧನಗಳಿಂದ ತನ್ನನ್ನು ಮುಕ್ತಗೊಳಿಸಿಕೊಂಡಿದ್ದಾನೆ ಮತ್ತು ತನ್ನ ಮೇಲಿನ ಅದರ ಹಿಡಿತವನ್ನು ಮಾನ್ಯಮಾಡುವುದಿಲ್ಲ. ಆದಾಗ್ಯೂ ಅವನು ಸಾಮಾನ್ಯ ಜೀವನದ ನಿಯಮಗಳನ್ನು ತಿರಸ್ಕರಿಸದೆ ಇರುವುದು ಬೇರೆಯರ ಸಲುವಾಗಿ ಬದುಕುವುದಕ್ಕೋಸ್ಕರವೇ ಹೊರತು ತನ್ನ ಅನುಕೂಲಕ್ಕಾಗಿ ಅಲ್ಲ. ಸಮಾಜಕ್ಕೆ ಅವನ ಮೇಲೆ ಯಾವುದೇ ಅಧಿಕಾರವಿಲ್ಲದಿದ್ದಾಗ್ಯೂ ತಪ್ಪದೆ ಅವನು ಸಂಸ್ಕೃತಿಯ ಸಂಪೂರ್ಣ ಪ್ರಾಧಿಕಾರವನ್ನು ಪ್ರತಿನಿಧಿಸುತ್ತಾನೆ. ನನ್ನ ಇನ್ನೊಬ್ಬ ಗುರುಗಳು ಹೇಳಿದಂತೆ ಅವನು ಜಗತ್ತಿನಲ್ಲೇ ಇದ್ದರೂ ಜಗತ್ತಿಗೆ ಸೇರಿದವನಲ್ಲ.

ಭಾರತೀಯ ಆಧ್ಯಾತ್ಮಿಕತೆಯು ಲೌಕಿಕ ಹೊಣೆಗಾರಿಕೆಗಳಿಂದ ನಿಮ್ಮನ್ನು ದೂರಮಾಡುತ್ತದೆ ಎಂಬ ಸಾಮಾನ್ಯವಾದೊಂದು ತಪ್ಪು ಗ್ರಹಿಕೆ ಇದೆ. ಆಧ್ಯಾತ್ಮಿಕ

ಅಭ್ಯಾಸಗಳನ್ನು ಅನುಸರಿಸುವ ಸಾಧಕನು ಸಾಮಾನ್ಯವಾದ ಈ ಜಗತ್ತನ್ನು ಮೀರಿಹೋಗಬೇಕೆಂಬ ಗುರಿಹೊಂದಿರುತ್ತಾನಾದರೂ ಅವನು ಸಮಾಜದ ಸಂಪರ್ಕವನ್ನು ನಿವಾರಿಸಿಕೊಳ್ಳಬೇಕೆಂದಿಲ್ಲ. ಸಾಧಕನ ಅತ್ಯುತ್ತಮ ವರ್ಣನೆ ಭಗವದ್ಗೀತೆಯಲ್ಲಿ ದೊರೆಯುತ್ತದೆ ಎಂದು ಸ್ವರೂಪಾನಂದರು ಹೇಳುತ್ತಾರೆ. ಸಾಧಕನು ಸತ್ಯದ ಅಥವಾ ವಾಸ್ತವದ ವಿವೇಚನಾಶೀಲ ಜ್ಞಾನಿಯಾಗಿರುತ್ತಾನೆ. ಅವನ ಬಗ್ಗೆ ಬಳಸುವ ಶಬ್ದವೆಂದರೆ ಸ್ಥಿತಪ್ರಜ್ಞ. ನನ್ನ ಗುರುವಾದ ಸೂರ್ಯ ಅವರು ಸಾಧಕನ(ಸ್ಥಿತಪ್ರಜ್ಞನ) ವಿಶೇಷ ಲಕ್ಷಣಗಳನ್ನು ಹೀಗೆ ವರ್ಣಿಸುತ್ತಾರೆ:

ಸ್ಥಿತಪ್ರಜ್ಞನು ಯಾವತ್ತೂ ಕರ್ಮದಿಂದ(ಕ್ರಿಯೆ) ಹಿಂದೆ ಸರಿಯುವುದಿಲ್ಲ. ಕಾರಣ ಕರ್ಮವನ್ನು ತಡೆಯುವುದು ಅಸಾಧ್ಯ ಎಂಬುದು ಅವನಿಗೆ ಗೊತ್ತಿದೆ. ಅವನು ತನ್ನ ಕರ್ತವ್ಯ ಕರ್ಮಗಳನ್ನು ಅತ್ಯಂತ ಕೌಶಲ್ಯಪೂರ್ಣವಾಗಿ ಮಾಡುತ್ತಾನೆ. ಈ ಕೌಶಲ ತಾನಾಗಿಯೇ ಪ್ರಕಟವಾಗಲು ಅನುವಾಗುವಂತೆ ಅವನು ಯಾವುದೇ ನಿರೀಕ್ಷೆಯನ್ನಿಟ್ಟುಕೊಳ್ಳದೆ ಕಾರ್ಯ ನಿರ್ವಹಿಸುತ್ತಾನೆ. ನಿರೀಕ್ಷೆ ಎಂದರೆ ಫಲಿತಾಂಶಗಳು ತನಗೆ ಅನುಕೂಲಕರವಾಗಿದ್ದಲ್ಲಿ ಸುಖದ ನಿರೀಕ್ಷೆ ಅಥವಾ ಫಲಿತಾಂಶಗಳು ಅನನುಕೂಲಕರವಾಗಿದ್ದಲ್ಲಿ ವ್ಯಥೆಯ ನಿರೀಕ್ಷೆ. ಕಾರಣ ನಿರೀಕ್ಷೆಯು ನಮ್ಮ ಕ್ರಿಯೆಯನ್ನು ವಿಕೃತಗೊಳಿಸುತ್ತದೆಂದು ನಮಗೆ ತಿಳಿದಿದೆ. ವಿಶ್ವದೊಂದಿಗೆ ಸ್ಪಂದಿಸಬಲ್ಲ ಅವನ ಅನುಕಂಪವೇ ಅವನ ಕ್ರಿಯೆಯ ಮಾರ್ಗದರ್ಶಕ. ಅನುಕಂಪವು ಪ್ರಜ್ಞಾಜೀವಿಯ ನಿಯಮವೇ ಆಗಿದೆ. ನಿಮ್ಮೊಂದಿಗೆ ಸಾಂಗತ್ಯ ಹೊಂದಿಲ್ಲದುದರ ಕುರಿತಾದ ಅರಿವು (ಪ್ರಜ್ಞೆ) ನಿಮಗಿರಲು ಸಾಧ್ಯವಿಲ್ಲ. ಈ ಅನುಕಂಪದ ಮೂಲಕವೇ ಅವನು ಸ್ವಧರ್ಮವನ್ನಾಚರಿಸುತ್ತಾನೆ. ಸ್ವಧರ್ಮವೆಂದರೆ ಅವನದೇ ಆದ ಆಚಾರ ಸಂಹಿತೆ. ಅವನು ವಿಶ್ವದ ಸಕಲ ವಸ್ತುಗಳೊಂದಿಗೆ ಸಾಂಗತ್ಯವನ್ನು ಹೊಂದಿರುವ ಕಾರಣದಿಂದ ಅವನ ಕಾರ್ಯಗಳು ವಿಶ್ವೇಚ್ಛೆಯೊಂದಿಗೆ ಸಾಮರಸ್ಯ ಹೊಂದಿರುತ್ತವೆ. ಹೀಗೆ ಏಕಕಾಲದಲ್ಲಿ ಅವನು ಪೂರ್ಣ ರೀತಿಯಲ್ಲಿ ಸ್ವಾಯತ್ತನಾಗಿದ್ದು ಲೋಕದೊಂದಿಗೆ ಸಾಮರಸ್ಯ ಹೊಂದಿರುತ್ತಾನೆ.

ಭಾರತೀಯ ಮನೋಚಿಕಿತ್ಸೆ ಮತ್ತು ಭಾರತೀಯ ಆಧ್ಯಾತ್ಮ ಪರಂಪರೆಗಳನ್ನು ಕುರಿತಾದ ಈ ಒಟ್ಟಾರೆ ವಿಚಾರಸರಣಿ ಅತ್ಯಂತ ಸಂಕ್ಷಿಪ್ತಗೊಂಡಿದೆ. ಆದಾಗ್ಯೂ ಅವುಗಳಲ್ಲಿ ಪ್ರಮುಖ ವ್ಯತ್ಯಾಸಗಳಿವೆ ಎಂದು ತೋರಿಸಲು ಇಷ್ಟು ಸಾಕಾಗುತ್ತದೆ.

ಎರಡೂ ಯಾತನೆಯಿಂದ ಬಿಡುಗಡೆ ಹೊಂದುವ ಬಗ್ಗೆ ಮಾತಾಡುತ್ತವೆ. ಆದರೆ ಗುರಿಗಳು ಮತ್ತು ಅದನ್ನು ಸಾಧಿಸುವ ವಿಧಾನಗಳು ಬೇರೆ ಬೇರೆ. ಮನೋಚಿಕಿತ್ಸೆಯು ಈ ದಿನಿತ್ಯದ ಸಾಮಾನ್ಯ ಪ್ರಪಂಚದಲ್ಲಿ ಶಾಂತಿ ಮತ್ತು ಸಾರ್ಥಕ್ಯವನ್ನು ತರುವ ಗುರಿ ಹೊಂದಿದೆಯಾದರೆ ಭಾರತೀಯ ಆಧ್ಯಾತ್ಮಿಕ ಸಂಪ್ರದಾಯಗಳು ಈ ಸಾಮಾನ್ಯ ಜಗತ್ತನ್ನೇ ಮೀರಿಹೋಗಬೇಕೆಂದು ಹೇಳುತ್ತವೆ. ಮನೋಚಿಕಿತ್ಸೆಯು ಅಹಂ ಅನ್ನು ಬಲಪಡಿಸುವ ಗುರಿಹೊಂದಿದೆಯಾದರೆ ಭಾರತೀಯ ಆಧ್ಯಾತ್ಮಿಕತೆಯು 'ಅಹಂ' ನಿಂದ ಬೇರ್ಪಡಬೇಕೆಂದು ಹೇಳುತ್ತವೆ. ಮನೋಚಿಕಿತ್ಸೆಯು ಭಾವನಾತ್ಮಕವಾಗಿ ವಿಚಲಿತಗೊಂಡವರ ಸಲುವಾಗಿ ಇದೆಯಾದರೆ ಅದೇ ಸಮಯಕ್ಕೆ ಭಾರತೀಯ ಆಧ್ಯಾತ್ಮಿಕತೆಯು ಮಾನಸಿಕವಾಗಿ

ಅಸ್ಥಿರರಾದವರ ಬಗ್ಗೆ ಎಚ್ಚರದಿಂದಿರಬೇಕೆಂದು ಸೂಚಿಸುತ್ತದೆ. ಮನೋಚಿಕಿತ್ಸಕನ ಪಾತ್ರ ಮತ್ತು ಆಧ್ಯಾತ್ಮಿಕ ಗುರುವಿನ ಪಾತ್ರ ಕೂಡ ತೀರಾ ವಿಭಿನ್ನವಾದವು. ಮೊದಲನೆಯವನು (ಮನೋಚಿಕಿತ್ಸಕ) ರೋಗಿಯ ಜೀವನದೊಂದಿಗೆ ವೈಯಕ್ತಿಕವಾಗಿ ತೊಡಗಿಸಿಕೊಳ್ಳಲು ಬಯಸುವುದಿಲ್ಲವಾದರೆ ಎರಡನೆಯವನು (ಆಧ್ಯಾತ್ಮಿಕ ಗುರು) ಶಿಷ್ಯರು ತನ್ನನ್ನು ಬಳಸಿಕೊಳ್ಳಬೇಕೆಂದು ಬಯಸುತ್ತಾನೆ. ಮೊದಲನೆಯವನು ಸ್ಥಾನಾಂತರದ ಸಂಗತಿಯನ್ನು ಅದು ಉಂಟಾದಾಗ ವ್ಯಾಖ್ಯಾನಿಸುತ್ತಾನಾದರೆ ಎರಡನೆಯವನು ಶಿಷ್ಯನ ಅಪಕ್ವ ಮನಸ್ಸಿಗೆ ಅಗತ್ಯವೆನಿಸಿದರೆ ತಂದೆ-ತಾಯಿ, ಸೋದರ, ಅಥವಾ ಮಗು ಯಾವುದು ಬೇಕಾದರೂ ಆಗಲಿಚ್ಛಿಸುತ್ತಾನೆ.

ಆಧ್ಯಾತ್ಮಿಕ ಮಾರ್ಗವು ಎಲ್ಲರಿಗೂ ಅಲ್ಲ ಎಂದೇ ಧರ್ಮಗ್ರಂಥಗಳು ಮತ್ತೆ ಮತ್ತೆ ದೃಢವಾಗಿ ಹೇಳುತ್ತವೆ. ಭಗವಾನ್ ಕೃಷ್ಣನು ಹೇಳುತ್ತಾನೆ: ಸಹಸ್ರಾರು ಜನರಲ್ಲಿ ಒಬ್ಬ ಮಾತ್ರ ಪರಿಪೂರ್ಣತೆಗಾಗಿ ಸೆಣಸುತ್ತಾನೆ; ಹಾಗೆ ಸೆಣಸುವ ಸಹಸ್ರಾರು ಮಂದಿಯಲ್ಲಿ ಬಹುಶಃ ಒಬ್ಬನು ನನ್ನನ್ನು ಸರಿಯಾಗಿ ತಿಳಿಯುತ್ತಾನೆ.

ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗುವ ಮತ್ತು ಈ ಹಾದಿಯಲ್ಲಿ ಸಾಗಬೇಕೆಂಬ ಇಚ್ಛೆ ಹುಟ್ಟುವುದು ಕೂಡ ವ್ಯಕ್ತಿಯೊಬ್ಬನು ತನ್ನ ಹಿಂದಿನ ಹಲವಾರು ಜನ್ಮಗಳ ಯಾತ್ರೆಯಲ್ಲಿ ಸಂಚಯಿಸಿಕೊಂಡು ಬಂದಿರುವ ಆಧ್ಯಾತ್ಮಿಕ ಬಂಡವಾಳವನ್ನವಲಂಬಿಸಿದೆ ಎಂದು ಹೇಳಲಾಗುತ್ತದೆ.

ಯೋಗ ಮತ್ತು ಧ್ಯಾನದ ತಂತ್ರಗಳು ಮನಸ್ಸಿಗೆ ಶಾಂತಿಯನ್ನು ತಂದು ಕೊಡುತ್ತವೆಂಬುದನ್ನು ಗಮನಿಸಿರುವ ಜನರು ಮನೋಚಿಕಿತ್ಸೆಯಲ್ಲಿ ಅವನ್ನು ಬಳಸಬಹುದೆ ಎಂದು ಕೆಲವೊಮ್ಮೆ ಕೇಳುತ್ತಾರೆ. ಇದಕ್ಕೆ ಹಲವಾರು ಉತ್ತರಗಳಿವೆ.

ಮನಸ್ಸನ್ನು ಶಾಂತಗೊಳಿಸಲು ಭಾರತೀಯ ಆಧ್ಯಾತ್ಮಿಕ ಪರಂಪರೆಗಳಲ್ಲಿ ನಿಜಕ್ಕೂ ಚೆನ್ನಾಗಿ ಅಭಿವೃದ್ಧಿಪಡಿಸಿದ ತಂತ್ರಗಳನ್ನು ವರ್ಣಿಸಲಾಗಿದೆ. ಈ ವಿಚಾರದಲ್ಲಿ ಈಗಾಗಲೇ ಲಭ್ಯವಿರುವ ಅರಿವಿನ ಮತ್ತು ವರ್ತನೆಯ ತಂತ್ರಗಳಿಗಿಂತ ಅವು ಉತ್ತಮವೂ ಅಲ್ಲ, ಕೀಳೂ ಅಲ್ಲ. ಯೋಗದಲ್ಲಿ ಹೇಳಲಾದ ಶವಾಸನವು ಜಾಕೊಬ್ಸನ್ ಅವರ ವಿಶ್ರಾಂತಿ ತಂತ್ರಕ್ಕಿಂತ ಹೆಚ್ಚಿನ ಶಾಂತತೆಯನ್ನು ತಂದುಕೊಡುತ್ತದೆಂಬುದಕ್ಕಾಗಲಿ, ಅಥವಾ ಏಕಾಗ್ರತೆಯನ್ನು ಹೆಚ್ಚಿಸುವಲ್ಲಿ ಅಥವಾ ಅನಗತ್ಯ ಆಲೋಚನೆಗಳು ಬರುವುದನ್ನು ತಡೆಯುವಲ್ಲಿ ಯೋಗದ 'ಧ್ಯಾನ'ವು ಸಹಜವಾಗಿಯೇ ಶ್ರೇಷ್ಠವೆಂದು ಹೇಳುವುದಕ್ಕಾಗಲಿ ಮನವರಿಕೆ ಮಾಡಿಕೊಡುವಂಥ ಸಾಕ್ಷ್ಯವಿಲ್ಲ.

ಯೋಗದ ಉಪಯೋಗವನ್ನು ಮೂರು ಹಂತಗಳಲ್ಲಿ ಮಾಡಿಕೊಳ್ಳಬಹುದೆಂದು ನನ್ನ ಸಲಹೆ. ಈ ಪುಸ್ತಕದ ಪ್ರಾರಂಭದ ಭಾಗದಲ್ಲಿ ವಿವರಿಸಿರುವಂತೆ ನನ್ನ ಮೇಲೆ ನಾನು ಮಾಡಿಕೊಂಡ ಪ್ರಯೋಗದಲ್ಲಿ ವೈದ್ಯಕೀಯ ಚಿಕಿತ್ಸೆಯಲ್ಲಿ ಸೇರ್ಪಡೆ ಮಾಡಿಕೊಳ್ಳಬಹುದಾದ ಸೂಚನೆಗಳು ಸಿಕ್ಕಿದ್ದವು. ನನ್ನ ನಿರ್ಣಯಗಳು ಆಗ್ಗೆ

ಸಕಾರಾತ್ಮಕವಾಗಿಯೇ ಇದ್ದವು. ಯೋಗವು ನಮ್ಮಲ್ಲಿ ಮೂಡಿಸುವ ಆರೋಗ್ಯ ಪೂರ್ಣವಾಗಿದ್ದೇನೆಂಬ ಅತಿಹೆಚ್ಚಾದ ಭಾವನೆ, ಸಾಮರ್ಥ್ಯ(=ಚೈತನ್ಯ), ಮತ್ತು ಅನುಕಂಪಗಳು ಒಳ್ಳೆಯ ಮಾನಸಿಕ ಆರೋಗ್ಯದ ಲಕ್ಷಣಗಳು. ಆದ್ದರಿಂದ ಯೋಗದ ಅಭ್ಯಾಸಗಳನ್ನು ಕೆಲ ಸಮಯ ಮನೋಚಿಕಿತ್ಸೆಯನ್ನು ನಿಗದಿಪಡಿಸುವಾಗ ಸೇರಿಸಬಹುದೆಂಬ ಸಲಹೆ ಸಕಾರಣವಾದುದೆಂದು ನನಗೆ ತೋರುತ್ತದೆ. ಯೋಗದ ತಂತ್ರದಲ್ಲಿ ಯಾವುದು ಅತ್ಯಂತ ಸೂಕ್ತವಾದದ್ದು ಎಂಬ ವಿಚಾರದಲ್ಲಿ ಜನರ ಅಭಿಪ್ರಾಯಗಳು ವಿಭಿನ್ನವಾಗಿವೆ ಎಂದು ನನ್ನ ಸಂದೇಹ. ಕೆಲವೊಂದು ಮನೋಸಮಸ್ಯೆಗಳಿಗೆ ಕೆಲವು ವಿಶಿಷ್ಟ ಯೋಗ ತಂತ್ರಗಳು ನೆರವಾಗುತ್ತವೆ ಎಂಬ ನಿರ್ಣಯಕ್ಕೂ ನಾನು ಬಂದಿದ್ದೆ.

ಭಾರತೀಯ ಸಂಪ್ರದಾಯವು ಮನೋಚಿಕಿತ್ಸೆಯ ಸಂಬಂಧದಲ್ಲಿ ನೀಡಬಹುದಾದ್ದು ಸ್ವಲ್ಪಮಟ್ಟಿಗೆ ಇದ್ದೇ ಇದೆ ಎಂಬುದು ನನ್ನ ಖಚಿತವಾದ ಅನಿಸಿಕೆ. ಯೋಗದ ತಂತ್ರಗಳು ವಿಶ್ರಾಂತಿ ಮತ್ತು ಏಕಾಗ್ರತೆಯನ್ನು ಹೆಚ್ಚಿಸಬಲ್ಲುವು ಹಾಗೂ ಆತಂಕ ಮತ್ತು ಖಿನ್ನತೆಯನ್ನು ಕಡಿಮೆಮಾಡುವ ಸಾಮರ್ಥ್ಯಹೊಂದಿವೆ. ಈ ಮೊದಲ ಹಂತದಲ್ಲಿ ಅವು ವರ್ತನೆಯ ಮಾರ್ಪಾಟು ಮತ್ತು ಜೈವಿಕ–ಮರುಮಾಹಿತಿ (bio-feedback) ವಿಜ್ಞಾನಗಳ ಪ್ರಸ್ತುತ ಬೆಳವಣಿಗೆಗಳಿಗೆ ಅನುರೂಪವಾಗಿವೆ. ಜಗತ್ತನ್ನು ಶಾಂತಿಯುತವಾಗಿ ಮುನ್ನಡೆಸುವಲ್ಲಿ ನಮಗೆ ನೆರವಾಗಬಹುದಾದ ದೃಷ್ಟಾಂತಗಳನ್ನು ಮಹಾಕಾವ್ಯಗಳು, ಪೌರಾಣಿಕ ಕಥೆಗಳು ಮತ್ತಿತರೆ ಶಾಸ್ತ್ರಗಳಿಂದ ಭಾರತೀಯ ಚಿಕಿತ್ಸಕರು ಆಯ್ದುಕೊಂಡು ಬಳಸಬಹುದು. ಆದರೆ ಈ ವಿಧಾನಗಳನ್ನು 'ಆಧ್ಯಾತ್ಮಿಕ' ಎಂದು ಕರೆಯುವುದು ಬೇಡ.

ಎರಡನೇ ಹಂತದಲ್ಲಿ ಯೋಗದ ಅಭ್ಯಾಸಗಳು ಒಳನೋಟವನ್ನು ಪಡೆದುಕೊಳ್ಳುವ ಒಂದು ವಿಧಾನ. ಈ ವಿಷಯದಲ್ಲಿ ಅವು ಪಾಶ್ಚಾತ್ಯ ಸಂಪ್ರದಾಯದ ಒಳನೋಟ ಚಿಕಿತ್ಸೆಯನ್ನು ಹೋಲುತ್ತವೆ. ಏನೇ ಆದರೂ ಈಗಾಗಲೇ ಗಮನಿಸಿರುವಂತೆ ಯೋಗಕ್ಕೂ ಮನೋಚಿಕಿತ್ಸೆಗೂ ಗಣನೀಯ ವ್ಯತ್ಯಾಸಗಳಿವೆ. ಒಳನೋಟ ಚಿಕಿತ್ಸೆಯಲ್ಲಿ (Insight therapy) ವಿವೇಚನಾ ಶಕ್ತಿ ಅಥವಾ ತಾರ್ಕಿಕತೆಯ ಅಳವಡಿಕೆಯ ಮೂಲಕ ಅರಿವನ್ನು ಮೂಡಿಸಲಾಗುತ್ತದೆ. ಅದೇ ಯೋಗದಲ್ಲಿ ಅತಾರ್ಕಿಕವಾದ ಅಂತಃಸ್ಫುರಣೆಯ ಮೂಲಕ ಸೂಕ್ಷ್ಮ ಪರಿಜ್ಞಾನ(ಒಳನೋಟ)ಬರುತ್ತದೆ.

ಮೂರನೇ ಹಂತದಲ್ಲಿ ಯೋಗವು ಮೋಕ್ಷಕ್ಕೆ ದಾರಿ. ಯೋಗದ ಗುರಿ ಆಧ್ಯಾತ್ಮಿಕ ಅನುಭವವನ್ನು ಪಡೆಯುವುದೇ ಹೊರತು ಚಿಕಿತ್ಸೆಯಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಋಷಿಗಳಿಗೆ ಕೂಡ ಇದನ್ನು ಮಾತಿನಲ್ಲಿ ಅಭಿವ್ಯಕ್ತಿಸುವುದು ಅಸಾಧ್ಯವೆನಿಸುತ್ತದೆ. ಈ ಬಿಂದುವಿನಲ್ಲಿ ಆಧ್ಯಾತ್ಮ ಎಂದರೇನು ಎಂಬುದನ್ನು ವ್ಯಾಖ್ಯಾನಿಸುವುದು ಸೂಕ್ತವೆನಿಸುತ್ತದೆ.

ವಿಶಿಷ್ಟ ಧರ್ಮಗಳು ವಿಧಿಸಿರುವ ಬಾಹ್ಯ ನಿಯಮಗಳು ಮತ್ತು ಆಚರಣೆಗಳಿಗೆ ವಿರುದ್ಧವಾಗಿ ಮನುಷ್ಯನ ಆಂತರಿಕ ಆಕಾಂಕ್ಷೆಗಳನ್ನು ವ್ಯಾಖ್ಯಾನಿಸಲು ಕೆಲವು ಲೇಖಕರು

ಆಧ್ಯಾತ್ಮ ಎಂಬ ಶಬ್ದವನ್ನು ಬಳಸುತ್ತಾರೆ. ಅದೊಂದು ವ್ಯಾಖ್ಯಾನಿಸಲು ಅತ್ಯಂತ ಕಷ್ಟವಾದ ಶಬ್ದವಾದರೂ ಅನೇಕ ಜನರ ಬದುಕಿನಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸುವಂಥ ಶಬ್ದ. ನನ್ನ ದೃಷ್ಟಿಯಲ್ಲಿ ಆಧ್ಯಾತ್ಮವೆಂದರೆ ಜೀವನದ ಅರ್ಥ, ರೋಗ ಮತ್ತು ಸಾವು ಇವುಗಳ ಬಗೆಗಿನ ಅಸ್ತಿತ್ವವಾದಿ ಪ್ರಶ್ನೆಗಳಿಗೆ ಉತ್ತರ ರೂಪದ ಒಂದು ಮಾನಸಿಕ ಸ್ಥಿತಿ.

ಈ ಪ್ರಶ್ನೆಗಳು ಆಧ್ಯಾತ್ಮಿಕತೆಗೆ ಒಂದು ದಾರಿಯನ್ನು ತೆರೆಯುತ್ತವೆ. ಮಾನವ ಮನಸ್ಸಿಗೆ ಈ ಪ್ರಶ್ನೆಗಳನ್ನು ಕೇಳದೆ ಇರಲು ಮತ್ತು ಉತ್ತರಗಳನ್ನು ಕಂಡುಕೊಳ್ಳದೆ ಇರಲು ಸಾಧ್ಯವಿಲ್ಲ. ನ್ಯೂಬರ್ಗ್ ಮತ್ತು ಆತನ ಸಹೋದ್ಯೋಗಿಗಳು ಮಿದುಳಿನ ಕಾರ್ಯನಿರ್ವಹಣೆಯನ್ನು ಹೊಸ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವ ಬಗೆಗೆ ಬರೆದಿದ್ದಾರೆ. ಗ್ರಹಿಕೆಯ ಕಾರ್ಯ ನಿರ್ವಾಹಕಗಳೆಂದು ಕರೆಯಲಾಗುವ ಕೆಲವೊಂದು ಸಮಷ್ಟಿ ಕಾರ್ಯಗಳ ಮೂಲಕ ಮಿದುಳು ಸುತ್ತಣ ಪರಿಸರವನ್ನು ಅರ್ಥಮಾಡಿಕೊಳ್ಳುತ್ತದೆಂದು ಇದೀಗ ನಂಬಲಾಗಿದೆ. ಇವುಗಳಲ್ಲಿ ಒಂದು ಕಾರಣಾತ್ಮಕ ಸಂಚಾಲಕ (causal operator). ಅದು ಎಲ್ಲ ವಾಸ್ತವತೆಯನ್ನೂ ವಿಶಿಷ್ಟ ಕಾರಣಗಳು ಮತ್ತು ಪರಿಣಾಮಗಳ ಶೃಂಖಲೆ (cause & effect sequence ಒಂದರ ನಂತರ ಮತ್ತೊಂದು ಬರುವುದು) ಎಂದು ಅರ್ಥೈಸಲು ನೆರವಾಗುತ್ತದೆ. ಹೇಗೆ ಮತ್ತು ಏಕೆ ಎಂಬ ಎಂಬ ಪ್ರಶ್ನೆಗಳ ಆಧಾರವೇ ಇದು.

ಕಾರಣಾತ್ಮಕ ಸಂಚಾಲಕವು ಘಟನೆಗಳಲ್ಲಿ ಅರ್ಥವನ್ನು ಕಂಡುಕೊಳ್ಳಲು ನಮಗೆ ನೆರವಾಗುತ್ತದೆ. ಅರ್ಥವನ್ನು ಕಂಡುಕೊಳ್ಳುವುದು ಬಹಳ ಮುಖ್ಯವಾದ್ದು ಮತ್ತು ಅದು ಬದುಕಲು ನೆರವಾಗುತ್ತದೆ. ಉದಾಹರಣೆಗೆ ಕಾಡಿನಲ್ಲಿ ಎಲೆಗಳ ಮರ್ಮರ ಶಬ್ದವು ಹೆದರಿದ ಬೇಟೆಗಾರನಿಗೆ ಹುಲಿಯ ಬೆದರಿಕೆ ಇರುವ ಸಾಧ್ಯತೆಯನ್ನು ಸೂಚಿಸಿ ಎಚ್ಚರಿಸುತ್ತದೆ. ಹುಲಿಯನ್ನು ಕಣ್ಣಿಂದ ನೋಡಲು ಸಾಧ್ಯವಾಗದಿದ್ದರೂ ಅದು ಇರಲೇಬೇಕೆಂದು ನಂಬಿ ಎಚ್ಚರಿಕೆಯನ್ನು ವಹಿಸಿ ಆ ಜಾಗದಿಂದ ಓಡಿಹೋಗುತ್ತಾನೆ. ಅಸ್ತಿತ್ವದ ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಮಟ್ಟಿಗೆ ಮಿದುಳು ವಿನ್ಯಾಸಗೊಂಡಿಲ್ಲ. ಹಾಗಾಗಿ ತಕ್ಕ ತಿಳಿವಿನ ಗೈರುಹಾಜರಿಯಲ್ಲಿ ಊಹೆಗಳನ್ನು ಮಾಡುತ್ತದೆ.

ಅತ್ಯಂತ ಪ್ರಾಚೀನ ಕಾಲದಿಂದಲೂ ಸಾವಿನ ನಂತರ ಏನಾಗುತ್ತದೆಂಬ ಬಗ್ಗೆ ಮಾನವನು ಗ್ರಹಿಕೆಗಳನ್ನು ಮಾಡಿದ್ದನೆಂಬುದಕ್ಕೆ ಪುರಾನ ತತ್ತ್ವಶಾಸ್ತ್ರದಲ್ಲಿ ಆಧಾರ ಸಿಗುತ್ತದೆ. ದೇವರನ್ನು ಏಕೆ ನಂಬುತ್ತೀರೆಂದು ಜನರನ್ನು ಪ್ರಶ್ನಿಸಿದಾಗ ಸಿಗುವ ವಾಡಿಕೆಯ ಉತ್ತರವೆಂದರೆ, ವಿಶ್ವದಲ್ಲಿ ಒಂದು ವಿನ್ಯಾಸವಿರುವಂತೆ ತೋರುತ್ತದೆ; ವಿನ್ಯಾಸವಿದ್ದ ಮೇಲೆ ಅದನ್ನು ವಿನ್ಯಾಸಗೊಳಿಸಿದವನೂ ಇರಲೇ ಬೇಕು ಎಂಬುದು. ಇಲ್ಲಿ ಕ್ರಿಯಾಶೀಲವಾಗಿರುವುದು ಗ್ರಹಿಕೆಯ ವಿಧಿ ರೂಪ.

ಆಧ್ಯಾತ್ಮಿಕತೆಯ ಎರಡನೇ ಮಾರ್ಗವೆಂದರೆ ಅನುಭಾವದ(ರಹಸ್ಯವಾದ) ಮಾರ್ಗ. ನಮ್ಮೆಲ್ಲರಿಗೂ ಅನುಭಾವವನ್ನು ಅನುಭವಕ್ಕೆ ತಂದುಕೊಳ್ಳುವ ಸಾಮರ್ಥ್ಯವಿದೆ. ವೇದಗಳು ಕಾವ್ಯಾತ್ಮಕ ರೀತಿಯಲ್ಲಿ ಅನುಭಾವದ (ರಹಸ್ಯಾತ್ಮಕ) ಅನುಭವವನ್ನು ವರ್ಣಿಸಿವೆ. ಆ ಅನುಭವವಾದಾಗ ವ್ಯಕ್ತಿಯು 'ಅಹಂ' ('ಸ್ವ' ದ) ನ ಪ್ರಜ್ಞೆಯನ್ನು ನೀಗಿಕೊಳ್ಳುತ್ತಾನೆ ಹಾಗೂ ತನ್ನ ಸುತ್ತಲಿನ ಎಲ್ಲದರೊಂದಿಗೆ ತಾನು ಒಂದಾದ ಅನುಭವವನ್ನು ಹೊಂದುತ್ತಾನೆ. ಆನುಭಾವಿಕ ಅನುಭವದೊಂದಿಗಿನ ಆನಂದಾತಿರೇಕದ ಬಗ್ಗೆ ಕವಿಗಳು ಬರೆಯುತ್ತಲೇ ಬಂದಿದ್ದಾರೆ. ಪ್ರಕೃತಿ, ಸಂಗೀತ, ಮತ್ತು ಕಲೆಗಳು ಕೆಲವರಲ್ಲಿ ಆನಂದಾತಿರೇಕದ ಭಾವವನ್ನು ಪ್ರೇರಿಸುತ್ತವೆ.

ಬದುಕಿಗೆ ಆನುಭಾವಿಕ ಅನುಭವದ ಮೌಲ್ಯವೇನು? ನಾವು ಏಕಾಂಗಿಗಳಲ್ಲ; ಕಾಲ ದೇಶಗಳಲ್ಲಿ ಆದಿಯೂ ಇಲ್ಲದ ಅಂತ್ಯವೂ ಇಲ್ಲದ ಅತ್ಯಂತ ಬೃಹತ್ತಾದ್ದೊಂದರ ಭಾಗ ನಾವು ಎಂಬುದನ್ನು ಅರಿಯುವುದರಲ್ಲಿ ಇರುವ ಸಂತಸದ ಭಾವ ಅದು ಎಂದು ನನ್ನ ಅನಿಸಿಕೆ. ಇದು ಮೃತ್ಯುವಿನ ಭಯವನ್ನು ಎದುರಿಸಿ ನಿಲ್ಲುತ್ತದೆ. ಕೆಲವು ಸಂಶೋಧಕರ ಪ್ರಕಾರ ಮಕ್ಕಳು ಸಹಜವಾಗಿಯೇ ಆಧ್ಯಾತ್ಮಿಕರಾಗಿರುತ್ತಾರೆ. ಅವರಲ್ಲಿ, ಭಯಭಕ್ತಿ, ಆಶ್ಚರ್ಯ ಮತ್ತು ಅರಿವನ್ನು ಮೀರಿದಂತೆ ಎಲ್ಲ ವಸ್ತುಗಳನ್ನೂ ಅಂಗೀಕರಿಸುವ ಭಾವ ಅಂತರ್ಗತವಾಗಿರುತ್ತದೆ. ಅದಾಗ್ಯೂ ಅವರು ಬೆಳೆಯುತ್ತ ಹೋದಂತೆ ಮತ್ತು ಶಾಲಾ ಶಿಕ್ಷಣದ ವಿವೇಚನಾ ಪೂರ್ಣವಾದ ಮತ್ತು ತರ್ಕಸಮ್ಮತವಾದ ಹಕ್ಕೊತ್ತಾಯಗಳಿಗೆ ತೆರೆದುಕೊಳ್ಳುತ್ತ ಹೋದಂತೆ ಈ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾರೆ.

ಆಧ್ಯಾತ್ಮಿಕತೆಯ ಮೂರನೇ ಮಾರ್ಗ ಸಹಾಯ ಮತ್ತು ಬೆಂಬಲದ ಅಗತ್ಯ. ಫ್ರಾಯ್ಡ್ ಧರ್ಮವೆಂದರೆ ಜೀವನದ ಸಂಕಷ್ಟಗಳನ್ನು ಎದುರಿಸುವ ಒಂದು ವಿಧಾನ ಎನ್ನುತ್ತಾನೆ. ಅದು ಹೇಗೆ ಎಂದರೆ ನಮ್ಮ ಬಗ್ಗೆ ಕಾಳಜಿ ವಹಿಸುವ ಹಾಗೂ ಯಾರ ತೋಳುಗಳಲ್ಲಿ ನಮ್ಮೆಲ್ಲ ಸಂಕಷ್ಟಗಳು ಮತ್ತು ಭಯಗಳು ಶಮನಗೊಳ್ಳುತ್ತವೋ ಅಂಥ ಸರ್ವಶಕ್ತಿ ಸಂಪನ್ನರಾದ ತಂದೆ ಅಥವ ತಾಯಿಯನ್ನು ಕಂಡುಕೊಳ್ಳುವ ಮೂಲಕ. ನಮ್ಮ ಬಗೆಗಿನ ಪಾಲನೆಯ ಅಗತ್ಯ ನಮ್ಮನ್ನು ಪ್ರೀತಿಸುವ ಮತ್ತು ಪೋಷಿಸುವ ಉನ್ನತ ಅಸ್ತಿತ್ವದಲ್ಲಿ ನಂಬಿಕೆಯನ್ನು ಉತ್ತೇಜಿಸುತ್ತದೆ.

ಜಗತ್ತಿನ ಪ್ರಮುಖ ಧರ್ಮಗಳು ವಿವಿಧ ಅಭಿಪ್ರಾಯಗಳನ್ನು ಅಳವಡಿಸಿಕೊಂಡಿವೆ. ಜೂಡೋ, ಕ್ರಿಶ್ಚಿಯನ್ ಮತ್ತು ಇಸ್ಲಾಮಿಕ್ ಧರ್ಮಗಳು ಸೃಷ್ಟಿಕರ್ತನಾದ ದೇವನನ್ನು ಭಯಕಾರಕ ಮತ್ತು ಪ್ರೀತಿಸುವವನಾಗಿ ಮತ್ತು ಅವನ ಆಜ್ಞೆಗಳನ್ನು ಪಾಲಿಸಿದರೆ ಸಂರಕ್ಷಕನಾಗಿ ಕಂಡುಕೊಂಡಿವೆ. ಪೂರ್ವದ ಧರ್ಮಗಳು ನಾವೆಲ್ಲರೂ ಅದರ ಭಾಗವೇ ಆಗಿರುವ ಬ್ರಹ್ಮನ ಅಥವಾ ಶೂನ್ಯತೆಯ ಮಹಾನ್ ಏಕತ್ವದ ಮೇಲೆ ಹೆಚ್ಚು ಒತ್ತು ನೀಡುತ್ತವೆ. ಒಬ್ಬ ವ್ಯಕ್ತಿಯ ಹಿನ್ನೆಲೆ ಮತ್ತು ಅವನು ಯಾವ ವಿಚಾರಗಳೊಂದಿಗೆ ಬೆಳೆದು ಬರುತ್ತಾನೋ

ಅವು ಅವನ ನಿರ್ಣಯಗಳನ್ನು ಪ್ರಭಾವಿತಗೊಳಿಸುವಂತೆ ತೋರುತ್ತದೆ. ಅವನ ಹುಟ್ಟು ಮತ್ತು ಬೆಳವಣಿಗೆಯ ಹಂತದಿಂದಲೇ ಅವನಿಗಾಗಿ ಕೆಲವೊಂದು ಉತ್ತರಗಳನ್ನು ಸಿದ್ಧಪಡಿಸಲಾಗಿದೆ.

ಯೋಗದ ಮೂರನೇ ಹಂತವು ಆಧ್ಯಾತ್ಮಿಕತೆಯ ಬಗೆಗಿನದು. ಅದರ ಧ್ಯೇಯವೇ ಪಾರಮಾರ್ಥಿಕತೆ. ಅದನ್ನು ಅಭ್ಯಾಸಮಾಡುವ ಸಂದರ್ಭದ ಕಾರಣವಾಗಿ ಮೊದಲೆರಡು ಹಂತಗಳಿಗಿಂತ ಭಿನ್ನವಾದ್ದು. ಅಮೆರಿಕಾದ ವಿಶ್ವ ವಿದ್ಯಾಲಯವೊಂದರಲ್ಲಿ ಯೋಗಸೂತ್ರಗಳ ಮೇಲೆ ಒಂದು ಸರಣಿ ಉಪನ್ಯಾಸ ನೀಡಿದ ಸಂದರ್ಭದಲ್ಲಿ ನನ್ನ ಗಮನಕ್ಕೆ ಬಂದಿತು. ಒಬ್ಬ ಯುವಕನು ತಾನು ಯೋಗವನ್ನು ಕಲಿಯಬೇಕೆಂದಿದ್ದೇನೆ ಎಂದು ಹೇಳಿದನು. ಏಕೆ ಕಲಿಯಬೇಕೆಂದಿದ್ದೀಯೆ ಎಂದು ನಾನು ಕೇಳಿದೆ. ತಾನು ಆರೋಗ್ಯವಂತನಾಗಬೇಕು, ಸಂತಸ ಹೊಂದಬೇಕು ಮತ್ತು ತನ್ನ ಕೆಲಸದಲ್ಲಿ ಚುರುಕಾಗಬೇಕು ಎಂದನು. ತನ್ನ ಮೌಲ್ಯ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆಂಬ ವಿಶೇಷವಾದ ಆಸ್ಥೆಯೇನೂ ಅವನಿಗಿರಲಿಲ್ಲ. ಇಂದ್ರಿಯ ಗೋಚರವಾದ ಲೌಕಿಕ ಜಗತ್ತಿನಲ್ಲಿ ಹೆಚ್ಚು ಸಮರ್ಥವಾದ ರೀತಿಯಲ್ಲಿ ಇರಬೇಕೆಂಬ ಇಚ್ಛೆ ಉಳ್ಳವನಾಗಿದ್ದ. ಇದು ಯೋಗದ ಮೂಲ ಉದ್ದೇಶವಲ್ಲ ಎಂಬುದು ಪತಂಜಲಿಯ ಯೋಗಸೂತ್ರವನ್ನೋದಿದರೆ ಸ್ಪಷ್ಟವಾಗುತ್ತದೆ.

ಯಮ ನಿಯಮಗಳ ನೈತಿಕ ಕಟ್ಟುಪಾಡುಗಳೊಂದಿಗೆ ಸೇರಿದಾಗ ಯೋಗಾಸನಗಳು ಶಾಸ್ತ್ರಗಳಿಗೆ ಮಾತ್ರ ನಿಷ್ಠವಾಗಿರುತ್ತವೆ. ಆಧ್ಯಾತ್ಮಿಕ ಸಂಪ್ರದಾಯದಲ್ಲಿ ಮುಂದೆ ಸಾಗಬೇಕೆಂದರೆ ಪ್ರಾಣಾಯಾಮವನ್ನು ಅಭ್ಯಾಸ ಮಾಡುವುದು ಎಷ್ಟು ಮುಖ್ಯವೋ ಅಹಿಂಸೆ ಮತ್ತು ಸತ್ಯವನ್ನು ಪಾಲಿಸುವುದು ಕೂಡ ಅಷ್ಟೇ ಮುಖ್ಯ. ಯಮ ನಿಯಮಗಳ ವಿಧಿ ನಿಷೇಧಗಳನ್ನು ಅಳವಡಿಸಿಕೊಳ್ಳದ ಪ್ರಾಣಾಯಾಮದ ಅಭ್ಯಾಸಗಳು ವರ್ತನಾಚಿಕಿತ್ಸೆಯ ಒಂದು ಭಾಗವೇ ಆಗಿಬಿಟ್ಟಿರುವ ಜೈವಿಕ ಮರುಮಾಹಿತಿ(bio-feed back)ಗಿಂತ ಉತ್ತಮವೇನಲ್ಲ.

ನನ್ನ ಅಭಿಪ್ರಾಯದಲ್ಲಿ ಆಧ್ಯಾತ್ಮಿಕ ಅನುಭವವೆನ್ನುವುದು ಅರಿವಿನ ಅಥವಾ ಗ್ರಹಿಕೆಯ ನಂಬಿಕೆ ಎನ್ನುವುದಕ್ಕಿಂತ ಹೆಚ್ಚಾಗಿ ಅದೊಂದು ಭಾವನಾತ್ಮಕ ಸ್ಥಿತಿ. ಈ ಭಾವನೆ ಅನಿರೀಕ್ಷಿತವಾಗಿ ಯಾವುದೋ ಕ್ಷಣದಲ್ಲಿ ಉದಿಸಿ ನೂತನ ಅರ್ಥಗಳನ್ನು ತರುತ್ತದೆ. ಅವು ಅಸ್ಪಷ್ಟ ಆತಂಕವಾಗಿ ಪ್ರಾರಂಭವಾಗಿ ಅನಂತರದಲ್ಲಿ ಸ್ಪಷ್ಟವಾಗುತ್ತವೆ. ನಿಮ್ಮನ್ನೇ ನೀವು ಮೀರಿ ಹೋಗಲು ಅವು ನೆರವಾಗುತ್ತವೆ.

ಹಾಗಾದರೆ ಎಲ್ಲವನ್ನೂ ಮೀರುವುದು ಅಥವಾ ಪಾರಮಾರ್ಥಿಕತೆ ಎಂದರೇನು? ವಿಶಾಲವಾದ ಭಿತ್ತಿಗೆ, ಎಲ್ಲವನ್ನೂ ಒಳಗೊಳ್ಳಬಹುದಾದ ಪರಿಪ್ರೇಕ್ಷ್ಯಕ್ಕೆ ನಿಮ್ಮನ್ನೇ ನೀವು ವಿಸ್ತರಿಸಿಕೊಳ್ಳುವುದು. ನಿಮ್ಮ ಪ್ರೇಮಿಯನ್ನು ನಿಮ್ಮಷ್ಟೇ ಮುಖ್ಯ ಎಂದು ಪರಿಗಣಿಸುವ ಹಂತದಿಂದಾರಂಭಿಸಿ, ಅಮೇಲೆ ನಿಮ್ಮ ಸ್ನೇಹಿತರು, ನಿಮ್ಮ ಸಮುದಾಯ, ನಿಮ್ಮ ದೇಶ, ಇಡೀ ಮಾನವ ಕುಲ, ಎಲ್ಲ ಜೀವಿಗಳು ಮತ್ತು ಅಂತಿಮವಾಗಿ ಸಕಲವನ್ನೂ ಅದೇ ರೀತಿ ಪರಿಗಣಿಸುವುದು. ಆತ್ಮ ಮತ್ತು ಬ್ರಹ್ಮ ಎರಡೂ ಒಂದೇ ಎಂದು ವೇದಾಂತವು

ಹೇಳುವುದರ ಅರ್ಥ ಇದೇ ಎಂದು ನನ್ನ ಭಾವನೆ. ಸಾಮಾನ್ಯವಾಗಿ ಇದು ಇದ್ದಕ್ಕಿದ್ದಂತೆ ಬಂದ ಅರಿವಲ್ಲ. ಎಲ್ಲೋ ಕೆಲವು ಅದೃಷ್ಟವಂತರಿಗೆ ಇದ್ದಕ್ಕಿದ್ದಂತೆ ಇಂಥ ಜ್ಞಾನೋದಯವಾಗುತ್ತದೆ. ನನ್ನಂಥ ಸಾಮಾನ್ಯ ವ್ಯಕ್ತಿಗಳಿಗೆ ಅದೊಂದು ನಿರಂತರ ಎಚ್ಚರದ ಪ್ರಕ್ರಿಯೆ. ಈ ಮಾರ್ಗದಲ್ಲಿ ನಿಮ್ಮ ಇಚ್ಛೆ ಮತ್ತು ಪ್ರಯತ್ನಗಳು ಕ್ರಿಯಾಶೀಲವಾಗಿದ್ದಲ್ಲಿ ಅದು ಮತ್ತೆ ಮರುಕ್ಕೊಳಿಸುತ್ತದೆ. ಒಬ್ಬ ಮನೋಚಿಕಿತ್ಸಕನಿಗೆ ತನ್ನ ರೋಗಿಗಳು ಮತ್ತು ಗ್ರಾಹಕರನ್ನು ಈ ಮಾರ್ಗದಲ್ಲಿ ಕೊಂಡೊಯ್ಯುವುದು ಸಾಧ್ಯ. ಆದರೆ ನೀವು ಅವರನ್ನು ನಿಮ್ಮ ಸಹಯಾತ್ರಿಗಳಾಗಿಯೇ ಕೊಂಡೊಯ್ಯ ಬೇಕು ಮತ್ತು ಎಂದಿಗೂ ತಾನು ಎಲ್ಲವನ್ನೂ ಬಲ್ಲ ಶ್ರೇಷ್ಠನೆಂಬ ಮನೋಧರ್ಮವನ್ನಳವಡಿಸಿಕೊಳ್ಳಕೂಡದು. ಪ್ರತಿಯೊಬ್ಬರೂ ಈ ಹಾದಿಯಲ್ಲಿ ಸಾಗಬಯಸುವುದಿಲ್ಲ ಎಂಬುದನ್ನು ಕೂಡ ಒಬ್ಬ ಚಿಕಿತ್ಸಕನಾಗಿ ನೀವು ಅರಿತಿರಬೇಕು. ಆಧ್ಯಾತ್ಮದ ಹಾದಿಯಲ್ಲಿ ಸಾಗುತ್ತಿರುವವರು ತೃಪ್ತರೆಂಬಂತೆ, ಸುಖಿಗಳೆಂಬಂತೆ ಹಾಗೂ ಹಗುರ ಮನಸ್ಸಿನವರೆಂಬಂತೆ ಕಾಣುತ್ತಾರೆಂಬುದು ನಿಜ. ಆದರೆ ಆ ಮಾನಸಿಕ ಸ್ಥಿತಿಗಳು ಈ ಲೌಕಿಕ ಪ್ರಪಂಚದ ಬಗೆಗಿನ ಅನಾಸಕ್ತಿ ಅಥವಾ ನಿರ್ಲಿಪ್ತತೆಯಿಂದ ಉದಿಸಿದ ಆನಂದಾತಿರೇಕದ ಉಪ ಉತ್ಪನ್ನಗಳು. ನಮ್ಮಲ್ಲಿ ಎಷ್ಟು ಜನ ನಿಜಕ್ಕೂ ಅನಾಸಕ್ತರಾಗಿರಲು ಅಥವಾ ನಿರ್ಲಿಪ್ತರಾಗಿರಲು ಬಯಸುತ್ತಾರೆ? ಆಧ್ಯಾತ್ಮದ ಹಾದಿಯಲ್ಲಿನ ಪ್ರತಿಫಲಕ್ಕೆ ಒಂದು ಮನೋವೃತ್ತಿಯ ಅಗತ್ಯವಿದೆ. ಆದರೆ ಆ ಮನೋವೃತ್ತಿಯನ್ನು ಬಹಳಷ್ಟು ಜನ ಅಳವಡಿಸಿಕೊಳ್ಳಬಯಸುವುದಿಲ್ಲ. ಆ ಪ್ರತಿಫಲವನ್ನು ನೀಡುವುದು ಬಹಳಷ್ಟು ಜನರು ಇಷ್ಟಪಡದ ನಾಣ್ಯದ ರೂಪದಲ್ಲಿ.

* * *

ಇಪ್ಪತ್ತೈದು ವರ್ಷಗಳ ಕಾಲಾವಧಿಯಲ್ಲಿ ನಾನು ಅಧ್ಯಯನ ಮಾಡಿದ ಭಾರತೀಯ ಸಂನ್ಯಾಸಿಗಳು ಯೋಗದ ಮೂರನೇ ಹಂತವನ್ನು ತಲುಪಲು ಗಂಭೀರ ಪ್ರಯತ್ನಮಾಡಿದ ಜನರ ನಿದರ್ಶನಗಳು. ನಾನು ಭೇಟಿಮಾಡಿದ ಸಾಧುಗಳು ಅದಕ್ಕೆ ಚೆನ್ನಾಗಿ ಹೊಂದಿಕೊಂಡಿದ್ದವರು ಮತ್ತು ಮಾನಸಿಕವಾಗಿ ಆರೋಗ್ಯವಂತರಾಗಿದ್ದವರು ಎಂದು ಹೇಳಬಲ್ಲೆ. ಅವರಲ್ಲಿ ಉನ್ನತ ಚೈತನ್ಯ (ಸಾಮರ್ಥ್ಯ), ಉತ್ಸಾಹ ಮತ್ತು ಸಾರ್ವಜನಿಕ ಸೇವಾ ಪ್ರಜ್ಞೆ ಕಂಡುಬರುತ್ತಿತ್ತು. ಈ ಸಂತೋಷ, ಚೈತನ್ಯ, ಮತ್ತು ಇತರರ ವಿಷಯಕ್ಕೆ ಪ್ರೀತಿ ಇವರಿಗೆ ಎಲ್ಲಿಂದ ಬಂತೆಂದು ನನ್ನನ್ನು ನಾನೇ ಕೇಳಿಕೊಂಡೆ. ಅಸಾಧಾರಣವಾದ ಸ್ವಾತಂತ್ರ್ಯವನ್ನು ಸಾಧಿಸಿಕೊಂಡಿದ್ದಾರೆಂದು ನನ್ನ ನಂಬಿಕೆ. ಯಾವ ಆಸ್ತಿಗಳೂ ಇಲ್ಲ, ಊಟದ ಚಿಂತೆಯಿಲ್ಲ, ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಪ್ರತ್ಯೇಕ 'ಸ್ವ'ದ ಪ್ರಜ್ಞೆ ಇಲ್ಲ ನನ್ನ ಅಭಿಪ್ರಾಯದಲ್ಲಿ ಅವರ ಅಪರಿಮಿತ ಚೈತನ್ಯದ ಮತ್ತು ಮಗುವಿನ ಮುಗ್ಧ ನಗೆಯ ಮೂಲ ಆಕರ ಅವರನ್ನು ಸಂಧಿಸುವ ಪ್ರತಿಯೊಬ್ಬ ಆಗಂತುಕನಿಗೂ ಮತ್ತೆ ಮತ್ತೆ ಅನುಭವಕ್ಕೆ ಬರುತ್ತದೆ. ಅಂಥದೊಂದು ಕಷ್ಟಕರವಾದ ಮತ್ತು ವಿಭಿನ್ನವಾದ ಜೀವನ

ಶೈಲಿಯನ್ನು ಸ್ವೀಕರಿಸಿದ್ದೇ ಒಂದು ಮಾನಸಿಕ ಅವ್ಯವಸ್ಥೆಯ ಕುರುಹೋ ಹೇಗೆಂದು ಅನೇಕ ವೇಳೆ ಹೊರಗಿನ ಜನರು (ವಿದೇಶೀಯರು) ಆಶ್ಚರ್ಯಚಕಿತರಾಗಿದ್ದಾರೆ. ನನಗೆ ಹಾಗೆ ಕಂಡಿಲ್ಲ. ಈ ಬಗೆಯ ಜೀವನಕ್ಕೆ ಚೆನ್ನಾಗಿ ಹೊಂದಿಕೊಂಡಿದ್ದವರೆಂದರೆ ಈ ಬಗೆಯ ಜೀವನವೇ ತಮ್ಮ ವಿಧಿ ಎಂದು ತಿಳಿದಿದ್ದವರು. ಅವರು ಸಾಮಾನ್ಯ ವಿದ್ಯಾರ್ಥಿಗಳು ಇಲ್ಲವೆ ಸಾಮಾನ್ಯಕ್ಕಿಂತ ಉತ್ತಮ ವಿದ್ಯಾರ್ಥಿಗಳಾಗಿದ್ದು ಮನೆಯಲ್ಲಿ ಸುಖವಾಗಿದ್ದರೂ ಆಧ್ಯಾತ್ಮದ ಹಾದಿಯನ್ನು ಅನುಸರಿಸುವ ಇಚ್ಛೆ ತಮಗಿದೆ ಎಂದು ಬಾಲ್ಯದಿಂದಲೇ ತಿಳಿದಿದ್ದರು. ಧಾರ್ಮಿಕ ವಿಷಯಗಳಲ್ಲಿ ತಮ್ಮ ಸೋದರ ಸೋದರಿಯರಿಗಿಂತ ಹೆಚ್ಚಿನ ಆಸಕ್ತಿ ಹೊಂದಿದ್ದರು. ಹಳೆಯ ಸಾಂಪ್ರದಾಯಿಕ ಭಾಷೆಯಲ್ಲಿ ಹೇಳಬೇಕೆಂದರೆ ಅವರಿಗೊಂದು ದೈವ ಪ್ರೇರಣೆ ಇತ್ತು.

ಕೆಲವು ಮಕ್ಕಳು ಮತ್ತು ಯುವಕರು ಜೀವನದ ಆರಂಭಾವಸ್ಥೆಯಲ್ಲೇ ಧರ್ಮದ ಕಡೆಗೆ ಆಕರ್ಷಿತರಾಗುತ್ತಾರೆನ್ನುವ ಒಂದು ಅಭಿಪ್ರಾಯ ಭಾರತೀಯ ಸಮಾಜಕ್ಕೇ ಸೀಮಿತವೇನಲ್ಲ. ಕ್ರೈಸ್ತ ಮತ ಸಂಪ್ರದಾಯವನ್ನು ಕುರಿತ ತನ್ನ ಅಧ್ಯಯನದಲ್ಲಿ ಧಾರ್ಮಿಕ ಜೀವನದ ಬಗ್ಗೆ ಪ್ರಾರಂಭದಲ್ಲೇ ಆಸಕ್ತಿ ಶುರುವಾದ ಯುವಕರ ಉದಾಹರಣೆಗಳನ್ನು ಜೆಫ್ರಿ ಮೂರ್ ಹೌಸ್ ಕಂಡುಕೊಂಡಿದ್ದಾನೆ. ಅವನ ವಿವರಗಳಲ್ಲಿ ದೇವರು ಅವರುಗಳನ್ನು ಆಯ್ಕೆ ಮಾಡಿಕೊಂಡ ವಿಚಾರಕ್ಕೆ ಹೆಚ್ಚು ಒತ್ತೇನೋ ಇದೆ. ಇದು ಬೇರೆಬೇರೆ ವಯಸ್ಸಿನಲ್ಲಿ ಸಂಭವಿಸಬಹುದು. ಕೆಲವು ಸಂತರು ತಾವು ದೇವರಿಂದಲೇ ನೇರವಾಗಿ ಆದೇಶಿತರಾಗಿದ್ದಾಗಿ ಭಾವಿಸಿದ್ದರು.

ಡಯೂನ್ ಪೆರ್ರಿ ಎಂಬ ಆಂಗ್ಲ ಬಾಲೆಯದು ಅತ್ಯಂತ ಆಶ್ಚರ್ಯಕರವಾದ ಕಥೆ. ಪೂರ್ವ ದೇಶಗಳ ಧರ್ಮದೊಂದಿಗೆ ಯಾವ ವಿಧವಾದ ಸಂಬಂಧವೂ ಇಲ್ಲದೆ ಹೋದರೂ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಬೌದ್ಧ ಧರ್ಮದ ಕಡೆಗೆ ಆಕರ್ಷಿತಳಾಗಿ ಬೌದ್ಧ ಭಿಕ್ಷುಣಿಯಾಗಲು ಹೊರಟಳು. ತೆನ್ಜಿನ್ ಪಾಮೋ ಎಂಬ ಹೆಸರನ್ನು ಸ್ವೀಕರಿಸಿ ಹಿಮಾಲಯದ ಮೂಲೆಯಲ್ಲಿರುವ ಗುಹೆಯೊಂದರಲ್ಲಿ ಇಪ್ಪತ್ತು ವರ್ಷ ಧ್ಯಾನದಲ್ಲಿ ಕಳೆದಳು.

ವಿಜ್ಞಾನಿಗಳಿಗೆ ಈ ಒಂದು ಹಠಾತ್ ಪ್ರವೃತ್ತಿಯನ್ನು ಅರ್ಥೈಸುವುದು ಕಷ್ಟಕರವೆನಿಸಿದೆ. ಧಾರ್ಮಿಕ ಪ್ರವೃತ್ತಿಗಳು ಕೆಲವರಲ್ಲಿ ಹೆಚ್ಚು ತೀವ್ರವಾಗಿದ್ದು ಜನ್ಮಜಾತವಾಗಿಯೇ ಇರುತ್ತವೆಯೆ? ಸಂಗೀತ ಪ್ರತಿಭೆ ಸಾಮಾನ್ಯವಾಗಿ ಅತ್ಯಂತ ಎಳೆಯ ಪ್ರಾಯದಲ್ಲೇ ಕಾಣಿಸಿಕೊಳ್ಳುತ್ತದೆಂಬುದು ಸುವಿದಿತ. ಮಹಾನ್ ಸಂಗೀತ ಪ್ರತಿಭೆಗಳಿಗೆ ಅವರು ಸಾರ್ವಜನಿಕವಾಗಿ ಹಾಡುವುದು ಮತ್ತು ಗೀತೆಗಳನ್ನು ರಚಿಸುವುದನ್ನು ಪ್ರಾರಂಭಿಸುವ ಮುಂಚೆ ಅತಿ ಕಡಿಮೆ ಶಿಕ್ಷಣ ಸಾಕಾಗುತ್ತದೆ. ಅವರದೇ ಸಂಸ್ಕೃತಿಯ ಸಂಗೀತಕ್ಕೆ ಅವರು ಸ್ವಲ್ಪ ಮಟ್ಟಿಗೆ ತೆರೆದುಕೊಳ್ಳುವ ಅಗತ್ಯವಿರುತ್ತದೆ. ಕಾರಣ ಅವರ ಸಂಗೀತ ಸಾಧನೆ ಎಷ್ಟೇ ನವೀನವಾದರೂ ಅವರು ಹುಟ್ಟಿಬಂದ ಪರಂಪರೆಯೊಂದಿಗೆ ಸಂಬಂಧ ಹೊಂದಿರುತ್ತದೆ. ಆಧ್ಯಾತ್ಮಿಕ ಜೀವನದ ಬಗೆಗಿನ ಸಂವೇದನಾಶೀಲತೆ ಎಂಬ ಗುಣ ಕೆಲವರಲ್ಲಿ ಅಧಿಕ ಪ್ರಮಾಣದಲ್ಲಿ

ಕಂಡುಬರುವಂಥದೆ? ಈ ಪ್ರವೃತ್ತಿಯ ಅನುಭವ ಇರುವಂಥ ವ್ಯಕ್ತಿಗಳಿಗೆ ಯಾವ ವಿವರಣೆಯ ಅಗತ್ಯವೂ ಇರುವುದಿಲ್ಲ. ಭಾರತೀಯರಿಗಾದರೆ ಇದು ಹಿಂದಿನ ಜನ್ಮಗಳ ಪ್ರಭಾವದ ಪರಿಣಾಮವಾದ ಪ್ರಾರಬ್ಧ. ಇತರೆ ಪರಂಪರೆಗಳಲ್ಲಿ ಹುಟ್ಟಿದವರಿಗೆ ಅದು ದೈವಪ್ರೇರಣೆ, ದೇವರ ಕರೆ.

ವೈಯಕ್ತಿಕ ಸಮಸ್ಯೆಗಳಿಂದಾಗಿ ಅಥವಾ ಕುಟುಂಬದಲ್ಲಿನ ಸಂಬಂಧಗಳಲ್ಲಿ ಉಂಟಾದ ತೊಡಕಿನಿಂದಾಗಿ ಸಂನ್ಯಾಸ ಜೀವನವನ್ನು ಸ್ವೀಕರಿಸಿದ ಇತರೆ ಸಾಧುಗಳನ್ನು ನಾನು ಭೇಟಿಮಾಡಿದ್ದೇನೆ. ಹಿಂದಿನ ನಿರಾಶೆಗಳನ್ನು ತಮ್ಮ ಜೊತೆಯಲ್ಲೇ ಹೊತ್ತು ಕೊಂಡುಬಂದ ಕಾರಣದಿಂದ ಈ ಗುಂಪಿನ ಜನರಿಗೆ ತಮ್ಮಲ್ಲೇ ಮಾನಸಿಕ ಶಾಂತಿ ಕಡಿಮೆ ಇತ್ತು.

ಸನ್ಯಾಸವೆಂಬುದು ಸಾಮಾನ್ಯ ಜೀವನದಿಂದ ಪಲಾಯನ ಮಾಡುವುದು; ಹಾಗಾಗಿಯೇ ಮಾನಸಿಕ ಅಸ್ವಸ್ಥತೆಯುಳ್ಳ ಜನರಿಗೆ ಅದು ಆಕರ್ಷಣೀಯವಾದ್ದು ಎಂಬ ವಿಚಾರವು ಸರಿಯಲ್ಲ. ಮಾನಸಿಕ ಅಸ್ವಸ್ಥತೆಯಿಂದಿರುವ ಜನರನ್ನು ತಾವು ಶಿಷ್ಯರನ್ನಾಗಿ ಸ್ವೀಕರಿಸುವುದಿಲ್ಲವೆಂದು ಸನ್ಯಾಸಿಗಳು ಅಂಗೀಕರಿಸುತ್ತಾರೆ. ಸನ್ಯಾಸದ ದಾರಿಯು ಅತ್ಯಂತ ಕಷ್ಟಕರವಾದುದು ಮತ್ತು ಅದು ಹೆಚ್ಚಿನ ದೃಢತೆ, ಕೆಚ್ಚು, ಮತ್ತು ಸಾಮರ್ಥ್ಯವನ್ನಪೇಕ್ಷಿಸುತ್ತದೆ. ಮಾನಸಿಕ ರೋಗಿಗಳು ತಮ್ಮ ಈಗಿನ ಬದುಕಿನಲ್ಲಿ ಯೋಗಮಾರ್ಗವನ್ನನುಸರಿಸ ಕೂಡದೆಂದು ಪತಂಜಲಿ ಮಹರ್ಷಿ ಕೂಡ ಎಚ್ಚರಿಸಿದ್ದಾನೆ. ಇಷ್ಟಾಗಿಯೂ ಮಾನಸಿಕ ರೋಗಿಗಳಾದ ಕೆಲವರು ಪವಿತ್ರ ಕ್ಷೇತ್ರಗಳ ಪರಿಸರದಲ್ಲಿ ಆಶ್ರಯ ಪಡೆದುಕೊಂಡಿರುವುದನ್ನು ಹೃಷೀಕೇಶದಲ್ಲಿ ನಾನು ಗಮನಿಸಿದೆ. ಅವರ ವೈಚಿತ್ರ್ಯಗಳು ಹೆಚ್ಚು ಗಮನಕ್ಕೆ ಬರುತ್ತಿರಲಿಲ್ಲವಾಗಿ ಅವರುಗಳು ಜೀವನಯಾಪನೆಯ ಸಾಧನವನ್ನು ಕಂಡುಕೊಳ್ಳಲು ಸಾಧ್ಯವಾಗಿತ್ತು.

ಕೊನೆಯ ಟಿಪ್ಪಣಿ

ಈ ಮರುಚಿಂತನೆಗಳು ಗ್ರಂಥ ಕರ್ತೃವಿನ ಮುಕ್ತಾಯದ ಟಿಪ್ಪಣಿಗಳಿಲ್ಲದೆ ಕೊನೆಗೊಳ್ಳುತ್ತಿರುವುದು ನಿಜಕ್ಕೂ ಅತ್ಯಂತ ನೋವಿನ ಸಂಗತಿ. ಈ ಪುಸ್ತಕವನ್ನು ಬರೆದು ಮುಗಿಸಲು ಇಟಲಿಯ ಬೆಲ್ಲಾಜಿಯೋಗೆ ತೆರಳಿದ್ದ ರವಿ ಅವರು ಅಲ್ಲಿಗೆ ಹೋದ ಕೆಲವೇ ದಿನಗಳ ಬಳಿಕ 2006ರ ನವೆಂಬರ್ 24 ರಂದು ಹೃದಯಾಘಾತದಿಂದ ನಿಧನ ಹೊಂದಿದರು. ಅವರು ಮತ್ತು ಮಾಲವಿಕಾರವರು ತಂಗಿದ್ದ ಅಕಾದೆಮಿಕ್ ಕೇಂದ್ರದ ಸಹೋದ್ಯೋಗಿಗಳೆದುರು ಇದರ ರೂಪುರೇಷೆಯನ್ನು ಪ್ರಸ್ತುತ ಪಡಿಸಿ ಆಗಿತ್ತು. ಅದನ್ನು ಅವರೆಲ್ಲರೂ ತುಂಬ ಮೆಚ್ಚಿಕೊಂಡಿದ್ದರು. ಪುಸ್ತಕದ ಸಂಪಾದಕರಾಗಿ ರವಿ ಅವರ ವೈಯಕ್ತಿಕ ಪರಿಚಯವಿಲ್ಲದಿರುವ ಬಹಳಷ್ಟು ಓದುಗರಿಗೂ ಇದು ತಲುಪುವ ರೀತಿಯಲ್ಲಿ ರವಿ ಅವರ ಬರಹವನ್ನು ರೂಪಿಸುವ ಸಮಸ್ಯೆ ನಮ್ಮ ಮುಂದಿತ್ತು. ರವಿ ಅವರು ಈ ಪುಸ್ತಕವನ್ನು ಹೇಗೆ ಮುಗಿಸುತ್ತಿದ್ದರು ಎಂಬುದು ನಮಗೆ ಗೊತ್ತಿಲ್ಲ. ಇಲ್ಲಿಯವರೆಗೂ ಇದನ್ನು ಓದಿರುವವರು ವಿಜ್ಞಾನದ ಒಬ್ಬ ವ್ಯಕ್ತಿಗೂ ಆಧ್ಯಾತ್ಮಿಕ ಅನ್ವೇಷಕನಿಗೂ ಇರುವ ಮೂಲಭೂತ ಆತಂಕವನ್ನು– ಆಧುನಿಕ ಜಗತ್ತಿನ ಬಹಳಷ್ಟು ಜನರ ಅನುಭವಕ್ಕೆ ಬಂದಿರುವಂಥ ಆತಂಕವನ್ನು– ಗಮನಿಸಿರಬಹುದು.

ಸಾಧುಗಳ ಬಗೆಗೆ ರವಿ ಅವರು ಅಷ್ಟೊಂದು ಆಕರ್ಷಿತರಾಗಿದ್ದಕ್ಕೆ ಒಂದು ಕಾರಣ ತನ್ನಲ್ಲಿ ಇಲ್ಲದಿರುವಂಥ ಏನೋ ಒಂದು ಅವರಲ್ಲಿ ಇದೆ ಎಂದು ಭಾವಿಸಿದ್ದೇ ಆಗಿತ್ತು. ಅವರು ಸಾಧುಗಳ ಜೀವನಶೈಲಿಯನ್ನು ನೋಡಿದರು. ಈ ಸ್ಪರ್ಧಾತ್ಮಕ ಜಗತ್ತಿನ ದೈನಂದಿನ ಬದುಕಿನ ಮೌಲ್ಯಗಳಿಗಿಂತ ಅವರ ಜೀವನ ಮೌಲ್ಯಗಳು ತೀರ ಬೇರೆಯೇ ಅಗಿರುವುದನ್ನು ಕಂಡುಕೊಂಡರು. ಅವರುಗಳ ಅನುಭವ ಪ್ರಪಂಚಕ್ಕೆ ಪ್ರವೇಶಿಸಿ ತಾನೂ ಆ ಅನುಭವ ಪಡೆದುಕೊಳ್ಳ ಬಯಸಿದರು. ವೈಜ್ಞಾನಿಕ ಸಂಶೋಧನೆಗಳು ಮತ್ತು ವೈಚಾರಿಕ ಉಪನ್ಯಾಸಗಳ ವಿಷಯಕ್ಕೆ ಎಷ್ಟರ ಮಟ್ಟಿಗೆ ಪರವಶಗೊಳ್ಳುತ್ತಿದ್ದರೋ ಸಂನ್ಯಾಸದ ಬಗ್ಗೆ ಕೂಡ ಅಷ್ಟೇ ಮಟ್ಟಿಗೆ ಅವರು ಆಕರ್ಷಿತರಾಗಿದ್ದರು. ಅವರಿಗಿಂತ ಮುಂಚಿನವರಂತೆಯೇ ಬಹುಶಃ ಅವರು ಕೂಡ, ಸತ್ಯಕ್ಕೆ ಹಲವು ಮುಖಗಳು; ಯಾವೊಬ್ಬ ವ್ಯಕ್ತಿಯೂ ಪೂರ್ಣ ಸ್ವರೂಪದಲ್ಲಿ ಅದನ್ನು ನೋಡಲಾರ ಎಂಬ ನಿರ್ಣಯಕ್ಕೆ ಬರುತ್ತಿದ್ದರು. ಅವರು ಅಭಿವೃದ್ಧಿ ಪಡಿಸಬಹುದಾಗಿದ್ದ ಆಸಕ್ತಿಯ ಒಂದು ಎಳೆ ಬಹುಶಃ ಮಕ್ಕಳ ಧಾರ್ಮಿಕ ಅನುಭವಕ್ಕೆ ಸಂಬಂಧಿಸಿದಂತೆ ಆಗಿರುತ್ತಿತ್ತು. ಕೆಲವು ಸಾಧುಗಳು ಚಿಕ್ಕ ವಯಸ್ಸಿನಿಂದಲೇ ನಿರ್ದಿಷ್ಟ ಧಾರ್ಮಿಕ ಮಹತ್ವಾಕಾಂಕ್ಷೆ ಹೊಂದಿದ್ದರು. ಅವರ ಉಳಿದ ಸೋದರ ಸೋದರಿಯರಿಗಿಂತ ಇದು ಅವರುಗಳನ್ನು ವಿಭಿನ್ನವೆನಿಸಿತ್ತು. ಬಹುಶಃ ಕೆಲವು ಮಕ್ಕಳಿಗೆ ಇದೊಂದು ತಾತ್ಕಾಲಿಕ(ಅಸ್ಥಿರ) ಹಂತ. ಆದರೆ ಬೇರೆಯವರು ಇದು ತಮ್ಮ ಧಾರ್ಮಿಕ ವಿಧಿ ಎಂದು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದರು. ಮನುಷ್ಯನ ಸ್ಥಿತಿಗತಿಗಳನ್ನು ಕುರಿತಂತೆ ಇದು ನಮಗೆ ಏನನ್ನು ಹೇಳುತ್ತದೆ? ಸಂಗೀತ ಅಥವಾ ಕಲಾ ವಿಷಯದ ಬಗೆಗಿನ ಪ್ರವೃತಿಯ

ಹಾಗೆಯೇ– ಅಂದರೆ ಕೆಲವರು ಸ್ಪಷ್ಟವಾಗಿ ಕಾಣುವಂತೆ ಬೇರೆಯವರಿಗಿಂತ ಹೆಚ್ಚು ಸಹಜ ಸಾಮರ್ಥ್ಯದಿಂದ ಕೂಡಿರುವಂತೆ– ಧಾರ್ಮಿಕ ಪ್ರವೃತ್ತಿಯೂ ಇರುತ್ತದೆಯೆ? ಬೇರೆ ಸಾಮರ್ಥ್ಯಗಳ ಹಾಗೆಯೇ ಜನಸ್ತೋಮದಲ್ಲಿ ಎಲ್ಲರಲ್ಲೂ ಸಮಾನ ರೂಪದಲ್ಲಿ ಹಂಚಿಕೆಯಾಗಿರದ ವಿಜ್ಞಾನ ಸಾಮರ್ಥ್ಯವನ್ನು ಈ ಇತರೆ ಗುಣವಿಶೇಷಗಳ ಬಗೆಗೂ ಹೇಗೆ ಅನ್ವಯಿಸಬಹುದು?

ಜೀಲ್ ಬಿಜೋ 'International journal of Cultural Psychiatry' ಎಂಬ ಪತ್ರಿಕೆಗೆ ಬರೆದ 'ಸಾವಿನ ಸಂಸ್ಮರಣೆ'ಯಲ್ಲಿ ಹಿಮಾಲಯದ ಸಂನ್ಯಾಸಿಯೊಬ್ಬ ರವಿಯನ್ನು ಅವರಿಗೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಇದೆಯೆ ಎಂದು ಪ್ರಶ್ನಿಸಿದ ಬಗ್ಗೆ ಬರೆದಿದ್ದಾರೆ. ರವಿ ತನಗೆ ನಂಬಿಕೆಯಿದೆಯೆಂದು ಉತ್ತರಿಸಿದರು. ಈ ಸಂಭಾಷಣೆಯ ಬಗ್ಗೆ ಚರ್ಚಿಸುತ್ತ ಅನಂತರ ಜೀಲ್ ಹೀಗೆ ವ್ಯಾಖ್ಯಾನಿಸುತ್ತಾರೆ:

ಈ ಪ್ರದೇಶಗಳಲ್ಲಿ ಸುತ್ತಾಡುವ ಸಂದರ್ಭದಲ್ಲಿ ದೇವರಲ್ಲಿ ಬಲವಾದ ನಂಬಿಕೆಯುಳ್ಳ ಈ ಸರಳ ಜನರನ್ನು ಭೇಟಿಮಾಡಿದಾಗ ನಾನೂ ದೇವರನ್ನು ನಂಬತೊಡಗುತ್ತೇನೆ. ಆದರೆ ನಾನು ಮತ್ತೆ ನಾಗರಿಕ ಪ್ರಪಂಚಕ್ಕೆ ಮರಳಿದಾಗ ನಿಧಾನವಾಗಿ ಆದರೆ ನಿಶ್ಚಿತವಾಗಿ ನಂಬಿಕೆಯು ಮಾಸಿಹೋಗಿ ಅದರ ಜಾಗವನ್ನು ಸಂದೇಹ ಆವರಿಸಿಕೊಳ್ಳುತ್ತದೆ.

ಅದೇ ಸಮಯದಲ್ಲಿ ಅವರು 'ದೇವರ ಕಲ್ಪನೆ' ಎಂಬ ಸಂಶೋಧನ ಪ್ರಬಂಧವನ್ನು ಬರೆದರು. ಅದರಲ್ಲಿ ಅವರು 'ಧಾರ್ಮಿಕತೆಯ ಜೀನ್'(ಧಾರ್ಮಿಕತೆಯ ವಂಶವಾಹಿ) ಅನ್ನು ಹೊಂದಿಲ್ಲದಿರುವ ಬಗ್ಗೆ ಮನಶ್ಶಾಸ್ತ್ರಜ್ಞರೊಬ್ಬರು ಕ್ಷಮೆ ಯಾಚಿಸಿರುವುದನ್ನು ಉಲ್ಲೇಖಿಸಿದ್ದರು. ರವಿ ಹೇಳಿದರು:

"ನನಗೂ ಹಾಗೆಯೇ ಅನಿಸುತ್ತದೆ. 'ನನಗೆ ಗೊತ್ತಿಲ್ಲ' ಎಂದು ಹೇಳಲು ನನಗೆ ಕಷ್ಟವಾಗುವುದಿಲ್ಲ. ಅಸ್ತಿತ್ವದ ಪ್ರಶ್ನೆಗಳು ನನ್ನನ್ನು ಬಾಧಿಸುವುದಿಲ್ಲ ಎಂದಲ್ಲ. ಬೇರೆಯವರನ್ನು ಕಾಡಿದಂತೆ ನನ್ನನ್ನೂ ಕಾಡುತ್ತವೆ; ಬಹುಶಃ ಇನ್ನೂ ಹೆಚ್ಚಾಗಿ ಕಾಡುತ್ತವೆ. ನಾನು ಅವರುಗಳ (......ನಾನು ಇಪ್ಪತ್ತು ವರ್ಷಗಳ ಕಾಲ ಅಧ್ಯಯನ ಮಾಡಿದ ಸನ್ಯಾಸಿಗಳ) ಬದ್ಧತೆಯನ್ನು ಮೆಚ್ಚುತ್ತೇನೆ. ಆದರೆ ಅವರುಗಳ ನಂಬಿಕೆಯನ್ನು ಹಂಚಿಕೊಳ್ಳಲಾರೆ. 'ನನಗೆ ಗೊತ್ತಿಲ್ಲ' ಎಂದು ಹೇಳುವ ನನ್ನ ಸಾಮರ್ಥ್ಯ ನನಗೆ 'ಸ್ವಾತಂತ್ರ್ಯವನ್ನು' ನೀಡುತ್ತದೆ; ಸ್ವತಂತ್ರವಾಗಿ ಯೋಚಿಸುವ ಮತ್ತು ನನ್ನ ಕ್ರಿಯೆಗಳ ಬಗೆಗಿನ ಜವಾಬ್ದಾರಿಯನ್ನು ಹೊರುವ ಸ್ವಾತಂತ್ರ್ಯವನ್ನು.

ಬಹುಶಃ ಆಲೋಚನಾ ಸ್ವಾತಂತ್ರ್ಯವೇ ಆತ್ಯಂತಿಕ ಮಾನವ ಮೌಲ್ಯ

□□

ಪರಸ್ಪರ ಪ್ರಕಾಶನದ ಪ್ರಕಟಣೆಗಳು

ಪರಸ್ಪರ ಪರಿಕಲ್ಪನಾ ಮಾಲೆ

- ಜಾತಿ ಕೆಲವು ಟಿಪ್ಪಣಿಗಳು*
  ಮೂಲ: ಸಿವರಾಮ ಕೃಷ್ಣನ್
  ಕನ್ನಡಕ್ಕೆ: ಡಾ. ಮಹೇಶ್‌ಕುಮಾರ್ ಸಿ.ಎಸ್

ಸಂಶೋಧನೆ ಮತ್ತು ಮಾನವಿಕ

- ಚೆಲುವತರು:
  ಮೂಲ: ಧರ್ಮಪಾಲ್
  18ನೇ ಶತಮಾನದಲ್ಲಿದ ಭಾರತದಲ್ಲಿ ದೇಸಿ ಶಿಕ್ಷಣ (ದಿ ಬ್ಯೂಟಿಫುಲ್‌ಟ್ರೀ)
  ಕನ್ನಡಕ್ಕೆ: ಡಾ. ಮಾಧವ ಪೆರಾಜೆ
  ಪುಟ: xxvi+486, ಬೆಲೆ: 320
- ಟಿಪ್ಪು ಸುಲ್ತಾನನ ಹಕೀಕತ್:
  ಹಿಂದೂತ್ವ, ಸೆಕ್ಯುಲರಿಸಂ ಮತ್ತುಇಸ್ಲಾಮಿನ ಕ್ರಿಯಾಶೀಲತೆ (ಸಮಾಜಶಾಸ್ತ್ರ, ಇತಿಹಾಸ)ಡಾ. ಮಹೇಶ್‌ಕುಮಾರ್ ಸಿ.ಎಸ್
  ಪುಟ: xxvii+123, ಬೆಲೆ: 120
- ಬದುಕಿನಇನ್ನೊಂದು ಹಾದಿ:
  ಮೂಲ: ಎಲ್. ಎನ್‌ಕಪೂರ್
  ಭಾರತೀಯ ಸಾಧುಗಳು, ಯೋಗ ಮತ್ತು ಮನೋಚಿಕಿತ್ಸೆ
  ಕನ್ನಡಕ್ಕೆ: ಡಾ. ಆರ್. ಲಕ್ಷೀನಾರಾಯಣ
  ಪುಟ: , ಬೆಲೆ:
- ಇತಿಹಾಸ ಪ್ರದೀಪ #
  ಮೂಲ: ಜಿ.ಎನ್‌ಚಕ್ರವರ್ತಿ
  ಕನ್ನಡಕ್ಕೆ: ಮಾ. ವರದರಾಜು

ಜೀವನಚರಿತ್ರೆ ಮತ್ತು ಅಭಿನಂಧನಾ

- ಸಂಪ್ರೀತಿ: ಡಾ. ಆರ್. ಲಕ್ಷೀನಾರಾಯಣ್ ಅಭಿನಂಧನಾ ಗ್ರಂಥ

* ಸಂ. ಡಾ. ಎನ್. ಆರ್ ಲಲಿತಾಂಬ

- ಹೊನ್ನ ಪರ್ವತ ಹೊನ್ನಪ್ಪ ಭಾಗವತರ್
  ಪುಟ: 148+8, ಬೆಲೆ: 135ಎನ್. ಎಸ್. ಶ್ರೀಧರ ಮೂರ್ತಿ


ಸೃಜನಶೀಲ

- ಅಮೆರಿಕನ್ ಮನೆ (ಕಥಾ ಸಂಕಲನ)
  ಕೆ ಸತ್ಯನಾರಾಯಣ
  ಪುಟ: 192, ಬೆಲೆ: 175
- ಬೆಂಕಿ ಬಿದ್ದ ಬಯಲು ಮತ್ತು ಪೆದ್ರೊ ಪರಾಮೊ:
  ಮೂಲ: ಹ್ವಾನ್‌ರುಲ್ಫೋ
  ಹ್ವಾನ್‌ರುಲ್ಫೋನ ಸಮಗ್ರ ಸಾಹಿತ್ಯಕನ್ನಡಕ್ಕೆ: ಓ.ಎಲ್ ನಾಗಭೂಷಣ್ ಸ್ವಾಮಿ
  ಪುಟ: 304, ಬೆಲೆ: 285

ಪರಸ್ಪರಚಿಂತನಾ ಮಾಲೆ

ಮಿಶೆಲ್ ಫುಕೋ: ಸತ್ಯ, ಅಧೀಕಾರ ಮತ್ತು ಮುಕ್ತ ಮಾತುಕತೆ
ಮೂಲ: ಮಿಶೆಲ್ ಫುಕೋ
ಪುಟ:204, ಬೆಲೆ: 185
ಸಂಪಾದನೆ ಮತ್ತು ಪ್ರವೇಶಿಕೆ ಎ.ಪಿ ಅಶ್ವಿನ್ ಕುಮಾರ್
ಜಾರ್ಜ್‌ಆರ್ವೆಲ್ ಪ್ರಾತಿನಿಧಿಕ ಬರಹಗಳು#

* ಪ್ರತಿ ಮುಗಿದೆ ಇವೆ. # ಪ್ರಕಟಣೆಯಲ್ಲಿವೆ



ಡಾ. ಆರ್. ಲಕ್ಷ್ಮೀನಾರಾಯಣ

ಡಾ. ಆರ್. ಲಕ್ಷ್ಮೀನಾರಾಯಣ ಅವರು 1949ರಲ್ಲಿ ತುಮಕೂರಿನಲ್ಲಿ ಜನಿಸಿದರು. 1971 ರಿಂದ 2006ರವರೆಗೆ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ, ಪ್ರಾಧ್ಯಾಪಕ ಮತ್ತು ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ, 2006 ಮೇ ಯಿಂದ 2007ರ ಡಿಸೆಂಬರ್ ವರೆಗೆ ಧಾರವಾಡದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಬರಹಗಾರರಾಗಿರುವ ಇವರ ಸ್ವತಂತ್ರ ಕೃತಿಗಳಲ್ಲಿ, ಚೆಲುವಿನ ನೆಲೆಗಳ ಹಾದಿಯಲ್ಲಿ, ವಕ್ರೋಕ್ತಿ ಜೀವಿತ–ಒಂದು ಅಧ್ಯಯನ; ಉರಿಲಿಂಗ ಪೆದ್ದಿ, ಇತ್ಯಾದಿ ಮುಖ್ಯವಾದವುಗಳು.

ಸ್ವತಂತ್ರ ಕೃತಿಗಳ ಜೊತೆಗೆ ಇಂಗ್ಲಿಷ್ ಮತ್ತು ಹಿಂದಿಯಿಂದ ಅನುವಾದ ಮಾಡುವುದರಲ್ಲಿ ನಿರತರು.

ಕನ್ನಡ ವಕ್ರೋಕ್ತಿ ಜೀವಿತ ಕೃತಿಗೆ 2007ರ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ, ಅದೇಕೃತಿಗೆ 2004ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಬೇಗುದಿ' ಕೃತಿಗೆ 2013ರ ಕರ್ನಾಟಕ ಸಾಹಿತ್ಯ ಅಕಡೆಮಿ ಪ್ರಶಸ್ತಿ. ಆಹ್ಲಾದ ಕೃತಿಗೆ ಗೊರೂರು ಸಾಹಿತ್ಯ ಪ್ರಶಸ್ತಿ ಪಡೆದಿದ್ದಾರೆ.



ಬದುಕಿನ ಇನ್ನೊಂದು ಹಾದಿ



ರವಿ ಅವರ ಸೃಜನಾತ್ಮಕ ತಳಮಳ ನಮ್ಮ ಪಾಲಿನ ಲಾಭವೇ ಸರಿ. ಇಂದು ಜಗತ್ತಿನೆಲ್ಲೆಡೆ ಹೆಚ್ಚು ಹೆಚ್ಚು ಜನರು ಭಾವನಾತ್ಮಕ ಬೇಗುದಿಯಿಲ್ಲದಿರುವ ಸ್ಥಿತಿಯ ಕಡೆಗೆ ನೋಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ರವಿ ಅವರು, ಸುದೀರ್ಘ ಕಾಲದಿಂದಲೂ 'ಕ್ಷೇಮದ' ಅಷ್ಟೇ ಏಕೆ 'ಆನಂದದ' ಸ್ಥಿತಿಯ ಭರವಸೆಯನ್ನು ಜನತೆಗೆ ನೀಡುತ್ತ ಬಂದಿರುವ ನಮ್ಮದೇ ಆದ ಭಾರತೀಯ ಪರಂಪರೆಗಳತ್ತ ದೃಷ್ಟಿ ಹಾಯಿಸುವ ಕೆಚ್ಚು ಮತ್ತು ಕಾಣ್ಕೆಯನ್ನು ತೋರಿದರು.

ರವಿ ಅವರ ಈ ಕೃತಿ ವಿಶಿಷ್ಟವೆನಿಸುವುದು ಶೈಕ್ಷಣಿಕ ಅರ್ಥದಲ್ಲಿ ಇದು ಸಂಶೋಧನೆಯ ಫಲಶ್ರುತಿಯಾಗಿ ಬಂದದ್ದು ಎಂಬ ಕಾರಣಕ್ಕಲ್ಲ; ಬದಲಿಗೆ ಅದು ರವಿ ಅವರ ವೈಯಕ್ತಿಕ ಅನುಭವ ಮತ್ತು ಬದ್ಧತೆಗಳ ಜೀವಂತಿಕೆಯಿಂದ ಕೂಡಿದ ಸಂಶೋಧನ ಕೃತಿ ಎಂಬ ಕಾರಣಕ್ಕೆ ಹಾಗೂ ಅದು ಅವರ ಹಲವಾರು ವರ್ಷಗಳ ಯೋಗಾಭ್ಯಾಸ ಮತ್ತು ಹಿಮಾಲಯದ ಸಾಧುಗಳೊಂದಿಗಿನ ನೂರಾರು ಚರ್ಚೆಗಳ ಫಲಿತವೆಂಬ ಕಾರಣಕ್ಕೆ. ಅದರಿಂದಾಗಿಯೇ ಅದು ಎಲ್ಲರನ್ನೂ ಪ್ರಭಾವಿತಗೊಳಿಸುವ ಕಥನದ ರೂಪವನ್ನು ಪಡೆದುಕೊಂಡಿದೆ.

ಸುಧೀರ್ ಕಾಕರ್

ಪರಸ್ಪರ